ಆಡಳಿತದಲ್ಲಿ ಕನ್ನಡ ಬಳಕೆ : ಸಮಸ್ಯೆ ಮತ್ತು ಸವಾಲುಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.)
ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಸುರೇಂದ್ರ ಸ್ವಾಮಿ

ಮಾರ್ಗದರ್ಶಕರು
ಡಾ. ಅಶೋಕಕುಮಾರ ರಂಜೇರೆ
ಪ್ರಾಧ್ಯಾಪಕರು

ಭಾಷಾ ನಿಕಾಯ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬-೨೦೧೭

ಆಡಳಿತದಲ್ಲಿ ಕನ್ನಡ ಬಳಕೆ : ಸಮಸ್ಯೆ ಮತ್ತು ಸವಾಲುಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.)
ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಸುರೇಂದ್ರ ಸ್ವಾಮಿ

ಮಾರ್ಗದರ್ಶಕರು

ಡಾ. ಅಶೋಕಕುಮಾರ ರಂಜೇರೆ

ಪ್ರಾಧ್ಯಾಪಕರು

ಭಾಷಾ ನಿಕಾಯ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೬-೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಸುರೇಂದ್ರ ಸ್ವಾಮಿ ಅವರು **ಆಡಳಿತದಲ್ಲಿ ಕನ್ನಡ ಬಳಕೆ : ಸಮಸ್ಯೆ ಮತ್ತು ಸವಾಲುಗಳು** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವ ಪದವಿಗೂ ಸಲ್ಲಿಸಲ್ಪಟ್ಟಿಲ್ಲವೆಂದು ದೃಢೀಕರಿಸುತ್ತೇನೆ.

10/07/12

(ಡಾ. ಅಶೋಕಕುಮಾರ ರಂಜೇರೆ)
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಸ್ಥಳ: ವಿದ್ಯಾರಣ್ಯ
ದಿನಾಂಕ: 10-07-2012

ಪ್ರಮಾಣ ಪತ್ರ

ಆಡಳಿತದಲ್ಲಿ ಕನ್ನಡ ಬಳಕೆ : ಸಮಸ್ಯೆ ಮತ್ತು ಸವಾಲುಗಳು ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ **ಡಾ. ಅಶೋಕಕುಮಾರ ರಂಜೇರೆ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

10.02.2017

(ಸುರೇಂದ್ರ ಸ್ವಾಮಿ)
ಸಂಶೋಧನ ವಿದ್ಯಾರ್ಥಿ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸ್ಥಳ: ವಿದ್ಯಾರಣ್ಯ
ದಿನಾಂಕ: ೧೦-೦೨-೨೦೧೭.

ಪರಿವಿಡಿ

****

ಪ್ರಸ್ತಾವನೆ

೧. ಪ್ರಾಸ್ತಾವಿಕ ಮಾತು

೨. ಆಡಳಿತ ಭಾಷೆಯಾಗಿ ಕನ್ನಡ : ನಡೆದು ಬಂದ ದಾರಿ

೨.೧. ಆಡಳಿತ ಭಾಷೆಯಾಗಿ ಕನ್ನಡದ ಇತಿಹಾಸ (ಕ್ರಿ.ಪೂ ಪ್ರಾರಂಭದಿಂದ ಬ್ರಿಟೀಷರ ಆಗಮನದ ವರೆಗೆ)

೨.೨. ಬ್ರಿಟೀಷರ ಆಡಳಿತದ ಕಾಲದಲ್ಲಿ ಆಡಳಿತ ಭಾಷೆಯಾಗಿ ಕನ್ನಡದ ಇತಿಹಾಸ

೨.೩. ಆಡಳಿತ ಭಾಷೆಯಾಗಿ ಕನ್ನಡದ ಸ್ವಾತಂತ್ರ್ಯ ನಂತರದ ಇತಿಹಾಸ

೩. ಆಡಳಿತ ಕನ್ನಡದ ಮೇಲೆ ವಿವಿಧ ಭಾಷೆಗಳ ಪ್ರಭಾವ

೪. ಆಡಳಿತ ಕನ್ನಡದ ಹಂತಗಳು

ಪ್ರಸ್ತಾವನೆ

ಪ್ರಾಸ್ತಾವಿಕ ಮಾತು

ಕನ್ನಡ ನಾಡು ನುಡಿಗೆ ಸುಮಾರು ಎರಡು ಸಾವಿರ ವರ್ಷಗಳಷ್ಟು ಸುಧೀರ್ಘವಾದ ಇತಿಹಾಸವಿದೆ. ಕ್ರಿ.ಶ ಪೂರ್ವದಿಂದಲೇ ಕನ್ನಡ ಭಾಷೆ ಇತ್ತೆಂಬುದಕ್ಕೆ ಆಧಾರಗಳಿವೆ. ಕನ್ನಡ ನಾಡು ಮತ್ತು ನುಡಿಯನ್ನು ಹೆಸರಿಸುವ ಹಲವು ಆಧಾರಗಳು ಸಂಸ್ಕೃತ ಮತ್ತು ಪ್ರಾಕೃತ ಕಾವ್ಯಗಳಲ್ಲಿ ದೊರೆಯುತ್ತವೆ. ಮಹಾಭಾರತ, ರಾಮಾಯಣ, ವೇದಗಳು ಕೂಡ ಕನ್ನಡ ಭಾಷೆಯ ಪ್ರಾಚೀನತೆಗೆ ಪುರಾವೆಗಳನ್ನು ಒದಗಿಸುತ್ತವೆ. 'ಕನ್ನಡ' ಮಾತು 'ನಾಡು' ಮತ್ತು 'ನುಡಿ' ಎರಡಕ್ಕೂ ಅನ್ವಯಿಸಿದಂತೆ ಬಳಕೆಯಾಗುತ್ತಿದ್ದುದನ್ನು 'ಕವಿರಾಜಮಾರ್ಗ'ವೇ ಸೂಚಿಸುತ್ತದೆ. ಕನ್ನಡದ ಉಪಲಬ್ಧ ಮೊದಲ ಗ್ರಂಥದಲ್ಲಿ ಉಲ್ಲೇಖವಾಗಿರುವ ಕೃತಿಗಳೂ, ಕೃತಿಕಾರರೂ ಕನ್ನಡದ ಪ್ರಾಚೀನತೆಯೆಡೆಗೆ ಬೆರಳು ತೋರಿಸುತ್ತಿರುವುದು ಸ್ಪಷ್ಟವೇ ಇದೆ. ಕನ್ನಡಿಗರ ಸಾಹಸವನ್ನೂ ಉದಾರ ಮನಸ್ಸನ್ನೂ ಕಾವ್ಯ ಕಟ್ಟುವ ಕಲೆಯನ್ನೂ ಪ್ರಾಚೀನ ಕಾಲದಿಂದಲೂ ಕಾವ್ಯಗಳು ವರ್ಣಿಸುತ್ತಲೇ ಬಂದಿವೆ.

ಕನ್ನಡ ಭಾಷೆ ಬಹಳ ಪ್ರಾಚೀನವೆಂಬುದು ಸ್ಪಷ್ಟ. ಆದರೆ ಎಷ್ಟು ಪ್ರಾಚೀನವೆಂದು ಹೇಳುವುದು ಮಾತ್ರ ಕಷ್ಟವಾಗಿದೆ. ಆದರೆ ಬರವಣಿಗೆಗೆ ಬರುವ ಮುನ್ನ ಬಹಳ ಕಾಲದವರೆಗೆ ಆಡುಭಾಷೆಯಾಗಿ ಕನ್ನಡ ಬಳಕೆಯಾಗಿದ್ದಿರಬೇಕು ಎಂಬ ವಿಚಾರ ಸ್ಪಷ್ಟ. ಕನ್ನಡ ಪ್ರಾಚೀನತೆಗೆ ಸಂಬಂಧಿಸಿದಂತೆ ಹಲವಾರು ಉಲ್ಲೇಖಗಳು ಭಾರತೀಯ ಪ್ರಾಚೀನ ಗ್ರಂಥಗಳಲ್ಲಿ ದೊರೆಯುತ್ತವೆ. ಕನ್ನಡ ಭಾಷೆ ಎಷ್ಟು ಪ್ರಾಚೀನವಾದದ್ದೆಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆಯಾದರೂ ಕ್ರಿ.ಶ ಆರಂಭದಲ್ಲಿ ಕನ್ನಡ ಜನಭಾಷೆಯಾಗಿತ್ತೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳೇನು ಇಲ್ಲ.

ಕ್ರಿ.ಶ ಸುಮಾರು ೪೫೦ರ ಕನ್ನಡದ ಪ್ರಥಮ ಉಪಲಬ್ಧ 'ಹಲ್ಮಿಡಿ ಶಾಸನ'ದಲ್ಲಿ ಕನ್ನಡ ಬರವಣಿಗೆಯ ಬಗೆಗೆ ಪ್ರಥಮ ದಾಖಲೆ ದೊರೆಯುತ್ತದೆ. ಪೂರ್ವದ ಹಳೆಗನ್ನಡ ಗದ್ಯಶೈಲಿಯಲ್ಲಿರುವ ಈ ಶಾಸನವನ್ನು ನೋಡಿದರೆ, ಕನ್ನಡ ಭಾಷೆ ಆ ಕಾಲಕ್ಕಾಗಲೇ ಬರವಣಿಗೆಗೆ ಪಳಗುತ್ತಿರುವ ಅವಸ್ಥೆಯಲ್ಲಿದ್ದದ್ದೂ, ಸಂಸ್ಕೃತದ ದಟ್ಟವಾದ ಪ್ರಭಾವಕ್ಕೆ ಒಳಗಾಗಿದ್ದೂ ಕಂಡುಬರುತ್ತದೆ. ಈ ಶಾಸನ

ಕ್ರಿ.ಶ. ನಾನೂರ ಮೂವತ್ತು-ನಾನೂರ ಐವತ್ತಕ್ಕೆ (೪೩೦-೪೫೦) ಸೇರಿದ್ದೆಂದು ವಿದ್ವಾಂಸರ ಅಭಿಪ್ರಾಯ. ಹಾಗೆಂದ ಮಾತ್ರಕ್ಕೆ ಕನ್ನಡ ಐದನೇ ಶತಮಾನದಿಂದಲೇ ಉಗಮವಾಯಿತು ಎಂದು ನಿರ್ಧಾರವಾಗಿ ಹೇಳಿದಂತಾಗಲಿಲ್ಲ. ಸಾಮಾನ್ಯವಾಗಿ ಯಾವುದೇ ಭಾಷೆ ಬರಹಕ್ಕಿಳಿದು ಸಾಹಿತ್ಯ ಶಿಷ್ಟತೆಯನ್ನು ಪಡೆದು ಶಾಸನ ಇಲ್ಲವೇ ಕೃತಿಗಳಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತಾಗಬೇಕಾದರೆ ಆ ಭಾಷೆ ಎಷ್ಟೋ ವರ್ಷಗಳ ಕಾಲ ಆ ನಾಡಿನ ಜನಸಮೂಹದ ನಿತ್ಯ ಬದುಕಿನಲ್ಲಿ, ವ್ಯವಹಾರದ ಭಾಷೆಯಾಗಿ ಹಾಸುಹೊಕ್ಕಾಗಿರಬೇಕು. ಭಾಷೆ ಪ್ರಬುದ್ಧಾವಸ್ಥೆಗೆ ತಲುಪದೇ ಬರಹಕ್ಕಿಳಿಯದು. ಆದಕಾರಣ ಕನ್ನಡ ಭಾಷೆ ಐದನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ಅಸ್ಥಿತ್ವದಲ್ಲಿತ್ತು ಎಂಬುವಲ್ಲಿ ಯಾವ ಆಕ್ಷೇಪಣೆ ಹಾಗೂ ಅನುಮಾನಗಳೂ ಇಲ್ಲ.

ಕನ್ನಡದ ಪ್ರಾಚೀನತೆಗೆ ಸಂಬಂಧಿಸಿದಂತೆ ಹಲವಾರು ಉಲ್ಲೇಖಗಳು ಭಾರತೀಯ ಪ್ರಾಚೀನ ಭಾಷೆಗಳ ಗ್ರಂಥಗಳಲ್ಲಿ ದೊರೆಯುತ್ತವೆ. ಛಾಂದೋಗ್ಯ ಉಪನಿಷತ್ತಿನಲ್ಲಿ 'ಮಟಚಿ' ಎಂಬ ಪದವಿದೆ, ಇದು ಕನ್ನಡದ ಮಿಡತೆಯೇ ಆಗಿದೆ ಎಂಬುದು ವಿದ್ವಾಂಸರ ಅಭಿಮತ. ನಮಗೆ ದೊರೆತಿರುವ ಪ್ರಾಚೀನ ಪದಗಳಲ್ಲಿ ಇದೂ ಒಂದು. ವರಹಾಮಿಹಿರನ 'ಬೃಹತ್‌ಸಂಹಿತೆ' ಮತ್ತು ರಾಜಶೇಖರನ 'ಕಾವ್ಯಮೀಮಾಂಸೆ' ಗ್ರಂಥಗಳಲ್ಲಿ ಕರ್ನಾಟಕದ ಉಲ್ಲೇಖವಿದೆ. ಕ್ರಿಶ ಒಂದನೆಯ ಶತಮಾನದ ಹಾಲನ 'ಗಥಾಸಪ್ತಸತಿ'ಯಲ್ಲಿ ಕನ್ನಡದ ಮಾತುಗಳಿವೆ. ಮಹಾವಂಶದಲ್ಲಿ 'ವನವಾಸಿ' ಪದ ಪ್ರಯೋಗವಿದೆ.

ಕ್ರಿಶ ಎರಡನೆಯ ಶತಮಾನದ ತಮಿಳಿನ 'ಶಿಲಪ್ಪದಿಕಾರಂ' ನಲ್ಲಿ 'ಕರುನಾಡಗರ್' ಎಂಬ ಪದ ಕಾಣಿಸಿಕೊಂಡಿದೆ. ಮರಾಠಿಯ ಹಳೆಯ ಕೃತಿಯಾದ ಜ್ಞಾನೇಶ್ವರದಲ್ಲಿ ಕನ್ನಡದ ಪ್ರಸ್ತಾಪವಿದೆ. ಪದ್ಮ ಹಾಗೂ ಮಾರ್ಕಂಡೇಯ ಪುರಾಣಗಳಲ್ಲಿ ಕರ್ನಾಟಕದ ಪ್ರಸ್ತಾಪವಿದೆ. ಕ್ರಿಶ ಎರಡನೆಯ ಶತಮಾನದ್ದೆನ್ನಲಾದ ಗ್ರೀಕ್ ಪ್ರಹಸನವೊಂದರಲ್ಲಿ ಕನ್ನಡದ ಮಾತುಗಳಿರುವುದನ್ನು ಕಂಡು ಕ್ರಿಶ ಎರಡನೆಯ ಶತಮಾನಕ್ಕಿಂತ ಮುಂಚಿತವಾಗಿಯೇ ದಕ್ಷಿಣ ಕನ್ನಡದ ಸಮುದ್ರತೀರದಲ್ಲಿ ಕನ್ನಡ ವ್ಯವಹಾರದಲ್ಲಿತ್ತು ಎಂಬುದನ್ನು ಗೋವಿಂದ ಪೈ ಹಾಗೂ ಮುಂತಾದ ವಿದ್ವಾಂಸರು ಸಾಧಿಸಿದ್ದಾರೆ. ಈ ಎಲ್ಲಾ ಕಾರಣಗಳಿಂದ ಕ್ರಿಶ ಪೂರ್ವದಿಂದಲೇ ಕನ್ನಡ ಮಾತಿನ ಬಳಕೆಯಾಗಿರಬೇಕೆಂದು ಹೇಳಲಾಗಿದೆ ಹಾಗೂ ಕ್ರಿಶ ಆರಂಭಕ್ಕಿಂತ ಮುಂಚೆಯೇ ಕನ್ನಡ ಭಾಷೆ ಈ ಪ್ರಾಂತ್ಯದ ಜನರ ನುಡಿಯಾಗಿತ್ತೆಂದು ಊಹಿಸಬಹುದಾಗಿದೆ.

ಭಾರತದಲ್ಲಿರುವ ಭಾಷೆಗಳಲ್ಲಿ ಪ್ರಾಚೀನತೆ ಮತ್ತು ವಿಪುಲ ಸಾಹಿತ್ಯವಿರುವ ಸಂಸ್ಕೃತ ಮೊದಲ ಸ್ಥಾನವನ್ನೂ, ತಮಿಳು ಎರಡನೆಯ ಸ್ಥಾನವನ್ನು, ಕನ್ನಡ ಮೂರನೆಯ ಸ್ಥಾನವನ್ನೂ ಪಡೆದುಕೊಂಡಿದೆ. ಪ್ರಾಚೀನತೆ ಹಾಗೂ ಚಾರಿತ್ರಿಕ ದೃಷ್ಟಿಯಿಂದ ಕನ್ನಡ ದ್ರಾವಿಡ ಭಾಷಾವರ್ಗದಲ್ಲಿ ಎರಡನೆಯ ಸ್ಥಾನವನ್ನು ಪಡೆದುಕೊಂಡಿದೆ. ಕನ್ನಡ ಭಾಷೆ ಭಾರತ ಸರ್ಕಾರದ ಸಂವಿಧಾನದಲ್ಲಿ ಮಾನ್ಯತೆ ಪಡೆದ ೨೫ ರಾಜ್ಯಭಾಷೆಗಳಲ್ಲಿ ಒಂದು. ಈ ಭಾಷೆ ಜನಾಂಗವೊಂದರ ಆಡುನುಡಿಯಾಗಿ

ಸಾಹಿತ್ಯ ರಚನೆಗೆ ಮಾಧ್ಯಮವಾಗಿಯೂ ವಿಕಾಸಗೊಂಡು ವಿಶ್ವ ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಯನ್ನು ಕೊಟ್ಟಿದೆ.

೨೦೦೧ರ ಜನಗಣತಿಯ ಪ್ರಕಾರ ಭಾರತದ ೩,೭೭,೪೨,೨೬೨ ಜನರಿಗೆ ಕನ್ನಡ ಮಾತೃಭಾಷೆ. ಹಲವಾರು ಭಾಷಾವಾರು ಪ್ರಾಂತ್ಯವಿಂಗಡಣೆಯ ಫಲವಾಗಿ ಹಾಗೂ ೧೯೫೬ ರಲ್ಲಿ ರಚಿತವಾದ ಹೊಸ ಮೈಸೂರು ರಾಜ್ಯದಲ್ಲಿಯೂ, ಮಿಕ್ಕವರು ಮೈಸೂರು ರಾಜ್ಯದ ಗಡಿಯಿಂದಾಚೆಗಿರುವ ಕಾಸರಗೋಡು, ಮಂಜೇಶ್ವರ, ಸೊಲ್ಲಾಪುರ, ಅಕ್ಕಲಕೋಟೆ, ಹೊಸುರು, ತಾಳವಾಡಿ, ಆದೋನಿ ಮುಂತಾದ ಪ್ರದೇಶಗಳಲ್ಲಿಯೂ, ಬೊಂಬಾಯಿ, ಕಲ್ಕತ್ತ, ಮದ್ರಾಸು, ದೆಹಲಿ, ಹೈದ್ರಾಬಾದ್ ಮುಂತಾದ ಪಟ್ಟಣಗಳಲ್ಲಿಯೂ ನೆಲೆಸಿದ್ದಾರೆ. ಇದಲ್ಲದೇ ಇತರೆ ಭಾಷೆಗಳನ್ನಾಡುವ ಜನರಲ್ಲಿ ತೊಂಬತ್ತು ಲಕ್ಷ ಜನ ಕನ್ನಡವನ್ನು ಎರಡನೆಯ ಭಾಷೆಯನ್ನಾಗಿ ಮಾತನಾಡುತ್ತಾರೆಂದೂ ಜನಗಣತಿಯ ಅಂಕಿ ಅಂಶದಿಂದ ´ತಿಳಿದುಬಂದಿದೆ.

ಕನ್ನಡದ ಪದ ಭಾಷೆಯ ಹೆಸರನ್ನು ಸೂಚಿಸುವಂತೆ ಭಾಷೆಯನ್ನಾಡುವ ಜನ ವಾಸಿಸುವ ಪ್ರದೇಶವನ್ನು ಸೂಚಿಸುತ್ತವೆಂದು ಪ್ರಾಚೀನ ಗ್ರಂಥಗಳಿಂದ ತಿಳಿದುಬರುತ್ತದೆ. ಕವಿರಾಜಮಾರ್ಗದಲ್ಲಿ "ಕಾವೇರಿಯಿಂದಮಾ ಗೋದಾವರಿ ವರಮಿರ್ದನಾಡದಾ ಕನ್ನಡದೊಳ್" ಎಂದು 'ಕಬ್ಬಿಗರ ಕಾವ'ದಲ್ಲಿ ಕನ್ನಡವನಿಪ್ಪನಾಡು ಎಂದು ಉಕ್ತವಾಗಿದೆ. ಕವಿರಾಜಮಾರ್ಗದಲ್ಲಿ ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತರಿಸಿತ್ತು ಎನ್ನಲಾದ ಪ್ರದೇಶ ಈಗಿನ ಬೆಳಗಾವಿ–ಬೀದರ್ ಪ್ರದೇಶದಿಂದ ಕೊಡಗು–ಮೈಸೂರಿನವರೆಗೂ, ಅರಬ್ಬೀ ಸಮುದ್ರದ ತೀರದಿಂದ ಕೋಲಾರ–ಬಳ್ಳಾರಿಯವರೆಗೂ ಸೀಮಿತವಾಗಿದೆ. ಇಷ್ಟು ವಿಸ್ತಾರವಾಗಿ ನೆಲೆನಿಂತಿರುವ ಕರ್ನಾಟಕಕ್ಕೆ ಆಡಳಿತದ ದೃಷ್ಟಿಯಿಂದ ಒಂದು ಆಡಳಿತ ಭಾಷೆ ಇರಲೇಬೇಕು. ಹಾಗಾಗಿ ಭಾಷೆ ಮತ್ತು ಆಡಳಿತ ಭಾಷೆ ಇವೆರಡಕ್ಕೂ ವ್ಯತ್ಯಾಸವಿದೆ.

ಭಾಷೆ – "ಒಂದು ನಿರ್ಧಿಷ್ಟ ಭಾಷಿಕ ಸಮುದಾಯದ ಸಂವಹನಕ್ಕಾಗಿ ಬಳಸುವ ಯಾದೃಚ್ಛಿಕ ಧ್ವನಿಯ ಸಂಕೇತ ವ್ಯವಸ್ಥೆ". ಮನುಷ್ಯ ತನ್ನ ಅನಿಸಿಕೆಗಳನ್ನು ಬೇರೊಬ್ಬರಿಗೆ ತಿಳಿಸುವ ಒಂದು ಸಾಧನ.

ಆಡಳಿತ ಭಾಷೆ–"ಒಂದು ಪ್ರದೇಶದ ಆಡಳಿತಕ್ಕಾಗಿ ಬಳಸುವ ಭಾಷೆಯೇ ಆಡಳಿತ ಭಾಷೆ" ಅಥವಾ "ಒಂದು ರಾಜ್ಯದ ಆಡಳಿತಕ್ಕಾಗಿ ಬಳಸುವ ಭಾಷೆಯೇ ಆಡಳಿತ ಭಾಷೆ". ಆಡಳಿತ ಭಾಷೆಯು ರಾಜ್ಯದ ಹೆಚ್ಚು ಜನರು ಬಳಸುವ ಭಾಷೆಯಾಗಿರುತ್ತದೆ. ಈ ಭಾಷೆಯ ಮುಖಾಂತರ ರಾಜ್ಯದ ಆಡಳಿತ ಪರಿಣಾಮಕಾರಿಯಾಗಿಯೂ ಆಗುತ್ತದೆಂಬುದು ವಿದ್ವಾಂಸರ ಅಭಿಪ್ರಾಯ.

ಒಂದು ಪ್ರದೇಶದ ಆಡಳಿತಗಾರರು, ರಾಜ್ಯದ ಆಡಳಿತಕ್ಕೆ ಸಂಬಂಧಪಟ್ಟಂತೆ ನೀತಿ ನಿಯಮಗಳನ್ನು ರಚಿಸುವವರು, ನ್ಯಾಯಪರಿಪಾಲನೆ ಮಾಡುವವರು, ಪ್ರಜೆಗಳು ಇವರೆಲ್ಲಾ ಆಡಳಿತಕ್ಕೆ ಸಂಬಂಧಪಟ್ಟಂತೆ ಒಂದೇ ಭಾಷೆಯ ಅಡಿಯಲ್ಲಿ ಬಂದವರಾದರೆ ಆ ಪ್ರದೇಶದ ಆಡಳಿತ ಪರಿಣಾಮಕಾರಿಯಾಗುತ್ತದೆ ಎಂಬುದು ಒಪ್ಪುವ ಮಾತು. ಒಂದು ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ವ್ಯವಹಾರಗಳನ್ನು ನಡೆಸುವ ಭಾಷೆಯೇ ಆಡಳಿತ ಭಾಷೆ.

ಒಂದು ಭಾಷೆಯನ್ನು ಧಾರ್ಮಿಕ ವಿಚಾರಗಳಿಗೆ, ವಿಜ್ಞಾನ ವಿಷಯಗಳಿಗೆ, ವ್ಯವಹಾರದ ಮತ್ತು ಇನ್ನಿತರ ವಿಷಯಗಳಿಗೆ ಬಳಸಿದಾಗ ಅದರ ಸ್ವರೂಪ ಬೇರೆಯಾಗಿರುತ್ತದೆ. ಸಾಮಾನ್ಯವಾಗಿ ಈ ಸಂದರ್ಭಗಳಲ್ಲಿ ಬಳಕೆಯಾಗುವ ಪದಗಳು ಬೇರೆ ಎನಿಸುತ್ತವೆ. ಆದರೆ ಆಡಳಿತದ ವಲಯದಲ್ಲಿ ಸರ್ಕಾರ ಬಳಸುವ ಭಾಷೆ ಅದರ ಅವಶ್ಯಕತೆಯನ್ನು ಪೂರೈಸುವಂತಿರಬೇಕು. ಜನಸಾಮಾನ್ಯರನ್ನು ನಿಲುಕಬೇಕಾದರೆ ಅವರಿಗೆ ಅರ್ಥವಾಗುವ, ಅವರು ಸಾಮಾನ್ಯವಾಗಿ ಬಳಸುವ ಪದಗಳನ್ನು ಅಂದರೆ ಖಚಿತತೆ, ಸ್ಪಷ್ಟತೆಗಳಿಗೆ ಭಂಗಬಾರದಂತೆ ಮತ್ತು ಸಾರ್ವತ್ರಿಕವಾಗಿ ಏಕರೂಪತೆ ಹೊಂದಿರುವಂತೆ ವಾಕ್ಯ ರಚಿಸಬೇಕು. ಸುತ್ತಿಬಳಸಿಯಾಗಲಿ, ಅಲಂಕಾರಯುತ ವಾಕ್ಯಕ್ಕಾಗಲಿ ಇಲ್ಲಿ ಅವಕಾಶವಿರುವುದಿಲ್ಲ. ಅಂದರೆ ಆಡಳಿತ ಭಾಷೆ ಸರಳವಾಗಿರಬೇಕು, ಸ್ಪಷ್ಟವಾಗಿರಬೇಕು. ಸರ್ಕಾರದಲ್ಲಿ ಹೊರಡಿಸುವ ವಿಚಾರಗಳು ಜನಸಾಮಾನ್ಯರಿಗೆ ಅರ್ಥವಾಗುವಂತಿರಬೇಕು. ವಾಕ್ಯದಲ್ಲಿ ಅಲಂಕಾರ, ಧ್ವನಿ, ದ್ವಂದ್ವಾರ್ಥ, ಉತ್ಪ್ರೇಕ್ಷೇ ಮುಂತಾದ ಮೀಮಾಂಸೆಯ ಪದಗಳ ಬಳಕೆ ಮಾಡಕೂಡದು. ವಿಡಂಬನೆ, ಸಂದಿಗ್ಧತೆ, ಪ್ರಶಂಸೆ ಮುಂತಾದ ಅನಗತ್ಯ ವಿಚಾರಗಳನ್ನು ವಾಕ್ಯದಲ್ಲಿ ಬಳಕೆಯಾಗದಂತೆ ನೋಡಿಕೊಳ್ಳಬೇಕು. ಹೇಳುವ ವಿಚಾರಗಳನ್ನು ನೇರವಾಗಿ ಹೇಳುವಂತಿರಬೇಕು. ಈರೀತಿಯ ಸ್ವರೂಪವನ್ನು ಆಡಳಿತ ಭಾಷೆ ಹೊಂದಿದೆ.

ಸಂವಿಧಾನದ ಭಾಗ ೧೭ ಅನುಚ್ಛೇದ ೩೪೩-೩೪೭ರವರೆಗೆ ಅಧಿಕೃತ ಭಾಷೆಗಳ ಬಗೆಗೆ ವಿವರಣೆಯನ್ನು ನೀಡುತ್ತದೆ. ಇದರಲ್ಲಿ ಅನುಚ್ಛೇದ ೩೪೫ ರಾಜ್ಯದ ಅಧಿಕೃತ ಭಾಷೆಗಳ ಬಗ್ಗೆ ವಿವರಿಸುತ್ತದೆ. ಇದರಂತೆ "ರಾಜ್ಯದ ವಿಧಾನ ಮಂಡಲವು ಕಾನೂನು ಮೂಲಕ ಆ ರಾಜ್ಯದಲ್ಲಿ ಉಪಯೋಗದಲ್ಲಿರುವ ಯಾವುದಾದರೂ ಒಂದು ಅಥವಾ ಹಿಂದಿ ಭಾಷೆಯನ್ನು ಆ ರಾಜ್ಯದ ಎಲ್ಲಾ ಸರ್ಕಾರಿ ಉದ್ದೇಶಗಳಿಗೆ ಅಥವಾ ಯಾವುದಾರೂ ಸರ್ಕಾರಿ ಉದ್ದೇಶಕ್ಕಾಗಿ ಉಪಯೋಗಿಸತಕ್ಕ ಭಾಷೆಯಾಗಿ ಅಂಗೀಕರಿಸಬಹುದಾಗಿದೆ" ಎಂದು ಮೊದಲ ಖಂಡಿಕೆಯಲ್ಲಿ ವಿವರಿಸಿದೆ. ಅದರಂತೆ ಕರ್ನಾಟಕದಲ್ಲಿ ಹೆಚ್ಚು ಕನ್ನಡ ಬಲ್ಲವರಿರುವುದರಿಂದ ಕನ್ನಡವನ್ನೇ ಆಡಳಿತ ಭಾಷೆಯಾಗಿ ಅಂಗೀಕರಿಸಲಾಗಿದೆ. ಇದಲ್ಲದೇ ಸಂವಿಧಾನದ ೩೪೬-೩೪೭-೩೪೮ ಅನುಚ್ಛೇದಗಳು ಒಂದು ರಾಜ್ಯವು ಇನ್ನೊಂದು ರಾಜ್ಯದೊಂದಿಗೆ ಅಥವಾ ರಾಜ್ಯ ಮತ್ತು ಕೇಂದ್ರದೊಂದಿಗೆ ವ್ಯವಹರಿಸುವ ಅಧಿಕೃತ ಭಾಷೆಯನ್ನು ಮತ್ತು ರಾಜ್ಯದ ಒಂದು ಭಾಷೆಯನ್ನು ಮಾತನಾಡುವ ಬಹುಭಾಗದ ಜನತೆಗಾಗಿ ವ್ಯವಹರಣೆ ಕುರಿತು ವಿವರಿಸಿದೆ. ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯಗಳಲ್ಲಿ ಮತ್ತು ವಿಧೇಯಕಗಳಲ್ಲಿ ಉಪಯೋಗಿಸಬಹುದಾದ ಭಾಷೆ ಎಲ್ಲವೂ ಇಂಗ್ಲೀಷ್ ಭಾಷೆಯಲ್ಲಿರತಕ್ಕದ್ದೆಂದು ವಿವರಿಸಲಾಗಿದೆ. ಆದರೆ ಇದೊಂದು ರಾಜ್ಯವು ಅಂಗೀಕರಿಸಲಾದ ಆಡಳಿತ ಭಾಷೆಯ ಮುನ್ನಡಿಗೆ ಒಂದು ರೀತಿಯಲ್ಲಿ ಪರೋಕ್ಷವಾಗಿ ಹಿನ್ನಡೆಗೆ ಕಾರಣವಾಗಿದೆ ಎನ್ನಬಹುದು.

೨. ಆಡಳಿತ ಭಾಷೆಯಾಗಿ ಕನ್ನಡ ನಡೆದು ಬಂದ ದಾರಿ

ಸಂವಿಧಾನದ ಭಾಗ ೧೭ ಅನುಚ್ಛೇದ ೩೪೫ರ ಪ್ರಕಾರ ಕರ್ನಾಟಕದಲ್ಲಿ ಕನ್ನಡವನ್ನು ಅಧಿಕೃತವಾಗಿ ಹಾಗೂ ೧೯೬೩ ರಲ್ಲಿ ಕನ್ನಡವನ್ನು 'ಆಡಳಿತ ಭಾಷೆ' ಎಂದು ಅಂಗೀಕರಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಆಡಳಿತ ಕನ್ನಡ ಚಾರಿತ್ರಿಕವಾಗಿ ಯಾವಾಗ ಆರಂಭವಾಯಿತು ಎಂಬುದನ್ನು ತಿಳಿಯುವುದು ಅವಶ್ಯವಾಗಿದೆ. ಲಭ್ಯವಿರುವ ದಾಖಲೆಗಳಲ್ಲಿ ಆಡಳಿತ ಕನ್ನಡದ ಸ್ವರೂಪದ ಬಗೆಗೆ ಉಲ್ಲೇಖಗಳಿವೆ. ಸುಮಾರು ಐದನೆಯ ಶತಮಾನದಲ್ಲಿ ಕನ್ನಡ ಆಡಳಿತ ಭಾಷೆಯಾಗಿತ್ತು ಎಂಬುದಕ್ಕೆ ಪುರಾವೆಗಳಿವೆ. ಶ್ರೀವಿಜಯನು ತನ್ನ ಕವಿರಾಜಮಾರ್ಗ ಕೃತಿಯಲ್ಲಿ ಕನ್ನಡನಾಡು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತು ಎಂದು ಹೇಳಿದ್ದಾನೆ. ಕನ್ನಡ ಭಾಷೆಗೂ ಒಂದು ಇತಿಹಾಸವಿರುವ ಹಾಗೆ ಆಡಳಿತ ಕನ್ನಡಕ್ಕೂ ಒಂದು ಇತಿಹಾಸವಿದೆ.

ಇತಿಹಾಸದ ಪುಟಗಳನ್ನು ಅವಲೋಕಿಸಿದಾಗ, ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಆರಂಭಗೊಂಡಿದ್ದು ಯಾವಾಗ ಮತ್ತು ಎಲ್ಲಿಂದ ಎಂಬುದನ್ನು ಹೇಳುವುದು ಕಷ್ಟದಾಯಕವಾದದ್ದು. ಒಂದು ಇತಿಹಾಸ ಸೃಷ್ಟಿಯಾಗಿದೆ ಎಂದ ಮೇಲೆ ಅಲ್ಲಿನ ಸಮುದಾಯಗಳು ನೆಲೆಯೂರಿರಲೇಬೇಕಲ್ಲವೇ? ಅಥವಾ ಆ ಸಮುದಾಯದ ಸುವ್ಯವಸ್ಥೆಯ ಸಾಧನೆಗಾಗಿ ಆಡಳಿತ ಎನ್ನುವ ವ್ಯವಸ್ಥೆಯೊಂದು ಇರಲೇಬೇಕಲ್ಲವೇ? ಅಲ್ಲದೇ ಆಡಳಿತ ನಿರ್ವಹಣೆಗಾಗಿ ನೆಲೆಸಿರುವ ಸಮುದಾಯವು ಭಾಷೆಯೊಂದನ್ನು ಬಳಸಬೇಕಲ್ಲವೇ? ಅಥವಾ ಬಳಸಿರಲೇಬೇಕು ಎಂಬುದು ಸ್ಪಷ್ಟ.

ಪ್ರಾರಂಭದಲ್ಲಿ ಚಿಕ್ಕದಾಗಿ ಕಾಣಿಸಿಕೊಂಡ ಸಮುದಾಯದ ಆಡಳಿತ ವ್ಯವಸ್ಥೆ ಮತ್ತು ವ್ಯಾಪ್ತಿ ಬೆಳೆಯತೊಡಗಿದಂತೆಲ್ಲಾ, ಆಡಳಿತದ ವ್ಯವಸ್ಥೆ ಮತ್ತು ವ್ಯಾಪ್ತಿಯು ವಿಶಾಲವಾಗುತ್ತಾ ಹೋಯಿತು. ಅದರೊಂದಿಗೆ ಸಮುದಾಯದ ಆಡಳಿತ ಭಾಷೆಯ ಪ್ರಭಾವವೂ ಹೆಚ್ಚುತ್ತಾ, ವಿಸ್ತರಿಸುತ್ತಾ ಹೋಯಿತು, ಎಲ್ಲಾ ಸಮುದಾಯದ ಜನರ ಮತ್ತು ಅವರವರ ನಾಗರಿಕತೆಯ ಹಾಗೂ ಆಯಾ ಪ್ರದೇಶಗಳಲ್ಲಿ ಆಡುವ ಜನರ ಭಾಷೆಯೇ ಅವರ ಎಲ್ಲಾ ದೈನಂದಿನ ವ್ಯವಹಾರದಲ್ಲೂ, ಆಡಳಿತದಲ್ಲೂ, ಬಳಕೆಯಾಗುತ್ತಿತ್ತು ಎನ್ನುವುದು ಸಹಜ ಮಾತು.

ಕನ್ನಡವು ಒಂದು ಸಮುದಾಯದ ಭಾಷೆಯಾಗಿ ಬೆಳೆದು ಬಂದು ಕಾಲಾನಂತರದಲ್ಲಿ ಆಡಳಿತ ಭಾಷೆಯಾಯಿತು ಎನ್ನುವ ವಿಷಯ ಹಾಗೂ ವಿಚಾರಗಳು ನಮಗೆ ಇತಿಹಾಸದುದ್ದಕ್ಕೂ ದೊರೆಯುತ್ತವೆ. ಪ್ರಸ್ತುತ ಆಡಳಿತ ಕನ್ನಡ ನಡೆದು ಬಂದ ದಾರಿಯನ್ನು ಅಧ್ಯಯನದ ದೃಷ್ಟಿಯಿಂದ ಮೂರು ವಿಭಾಗಗಳಲ್ಲಿ ವಿಂಗಡಿಸಲಾಗಿದೆ.

೧. ಆಡಳಿತ ಭಾಷೆಯಾಗಿ ಕನ್ನಡದ ಇತಿಹಾಸ (ಕ್ರಿಪೂ ಪ್ರಾರಂಭದಿಂದ ಬ್ರಿಟೀಷರ ಆಗಮನದವರೆಗೆ)

೨. ಬ್ರಿಟೀಷರ ಆಡಳಿತ ಕಾಲದಲ್ಲಿ ಆಡಳಿತ ಭಾಷೆಯಾಗಿ ಕನ್ನಡದ ಬಳಕೆ.

೩. ಸ್ವಾತಂತ್ರ್ಯ ನಂತರದ ಕಾಲದಿಂದ ಇಲ್ಲಿಯವರೆಗಿನ ಕಾಲದ ಆಡಳಿತದಲ್ಲಿ ಕನ್ನಡದ ಬಳಕೆ.

೨.೧. ಆಡಳಿತ ಭಾಷೆಯಾಗಿ ಕನ್ನಡದ ಇತಿಹಾಸ (ಕ್ರಿಪೂ ಪ್ರಾರಂಭದಿಂದ ಬ್ರಿಟೀಷರ ಆಗಮನದವರೆಗೆ)

ಪ್ರಾಚೀನ ಕರ್ನಾಟಕ ಭಾಗದ ಆಡಳಿತ ಕನ್ನಡದ ಸ್ವರೂಪ ನಮಗೆ ದೊರಕುವುದು ಬಹುತೇಕ ಆಗಿನ ಕಾಲದ ಶಾಸನಗಳಿಂದ. ಸ್ವಾತಂತ್ರ್ಯ ಪೂರ್ವದಲ್ಲಿ ಅಥವಾ ರಾಜರುಗಳ

ಆಳ್ವಿಕೆಯ ಕಾಲದಲ್ಲಿ ಕರ್ನಾಟಕ ವಿಶಾಲವಾದ ಭೂಪ್ರದೇಶವನ್ನು ಹೊಂದಿತ್ತು. ಈ ವಿಶಾಲವಾದ ಭೂಪ್ರದೇಶವನ್ನು ಕನ್ನಡ ಮತ್ತು ಕನ್ನಡೇತರ ರಾಜಮನೆತನಗಳು ಆಳಿವೆ. ಈ ಕನ್ನಡ ಮತ್ತು ಕನ್ನಡೇತರ ರಾಜಮನೆತನಗಳು ಕನ್ನಡವನ್ನೇ ಆಡಳಿತ ಭಾಷೆಯಾಗಿ ಬಳಸಿರುವುದಕ್ಕೆ ಪುರಾವೆಗಳಿವೆ. (ರಾಜಪ್ಪ ದಳವಾಯಿ 'ಕನ್ನಡ ಸಾಹಿತ್ಯ ಕೋಶ' ಪುಟ ಸಂ-೨೮೨) ಕನ್ನಡ ಮತ್ತು ಕನ್ನಡೇತರ ರಾಜಮನೆತನಗಳು ತಮ್ಮ ಪ್ರದೇಶದಲ್ಲಿನ ಜನಸಾಮಾನ್ಯರು ಆಡುವ ಭಾಷೆಯಲ್ಲಿಯೇ ಆಡಳಿತ ಮಾಡಿದರೆ ಪರಿಣಾಮಕಾರಿಯಾಗಿ ಇರುತ್ತದೆ ಎಂದು ನಂಬಿದ್ದರು.

ಪ್ರಾಚೀನ ಕಾಲದಿಂದಲೂ ಶಾಸನಗಳಲ್ಲಿ ಕನ್ನಡ ಬಳಕೆಯಾಗುತ್ತಿರುವುದು ಸತ್ಯ. ರಾಜರು ತಮ್ಮ ರಾಜ್ಯದ ಆಡಳಿತಕ್ಕೆ ಸಂಬಂಧಿಸಿದಂತೆ ರಾಜ್ಯದ ವಿಸ್ತರಣೆ, ಪರಾಕ್ರಮ, ಪ್ರಶಸ್ತಿ, ಯುದ್ಧಗಳ ವರ್ಣನೆ, ಯುದ್ಧದಲ್ಲಿನ ಜಯ, ದಾನ, ದತ್ತಿ, ರಾಜಾಜ್ಞೆ ಆಡಳಿಕ್ಕೆ ಸಂಬಂಧಪಟ್ಟ ಮುಂತಾದ ವಿಷಯಗಳನ್ನು ವಿವರವಾಗಿ ದಾಖಲಿಸಿರುವುದು ಇತಿಹಾಸ ತಜ್ಞರಿಂದ ಹಾಗೂ ಕರ್ನಾಟಕದಲ್ಲಿ ದೊರೆತಿರುವ ಕನ್ನಡ ಶಾಸನಗಳಿಂದ ದೃಢಪಟ್ಟಿದೆ.

ಕ್ರಿಸ್ತ ಪೂರ್ವದಿಂದಲೇ ಕರ್ನಾಟಕದಲ್ಲಿ ಕನ್ನಡ ಭಾಷೆ ಇತ್ತೆಂಬುದಕ್ಕೆ ಕೆಲವು ಪುರಾವೆಗಳು ದೊರೆತಿದ್ದು ಆಡಳಿತದಲ್ಲಿಯೂ ಕನ್ನಡ ಬಳಕೆಯಲ್ಲಿತ್ತು ಎಂಬುದಕ್ಕೆ ಇದರಲ್ಲಿನ ಕೆಲವೊಂದು ಶಾಸನಗಳು ಪುಷ್ಟಿ ನೀಡುತ್ತವೆ.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಬ್ರಹ್ಮಗಿರಿಯಲ್ಲಿ ದೊರೆತ 'ಅಶೋಕನ ಬ್ರಹ್ಮಗಿರಿ ಶಾಸನ'. ಈ ಶಾಸನವು ಮೌರ್ಯ ವಂಶದ ದೊರೆಯಾದ ಅಶೋಕನು ಕ್ರಿಪೂ. ೨೫೨ ರಲ್ಲಿ ಬರೆಸಿದನೆಂದು ತಿಳಿದುಬರುತ್ತದೆ. ಈ ಶಾಸನದ ಭಾಷೆ ಪ್ರಾಕೃತವಾಗಿದ್ದು ಬ್ರಾಹ್ಮಿಲಿಪಿಯಲ್ಲಿದೆ. ಪ್ರಸ್ತುತ ಶಾಸನದಲ್ಲಿ ಒಂದು ವಾಕ್ಯ ಈ ರೀತಿಯಾಗಿ ಬರೆಯಲ್ಪಟ್ಟಿದೆ. "ಸುವಂಣಗಿರೀತೇ ಅಯಪುತಸ ಮಹಾಮಾತಾಣಂಚ ವಚನೇನ ಇಸಿಲಸಿ ಮಹಾಮಾತಾ....(ಆರ್ಯಪುತ್ರ ಮತ್ತು ಸುವರ್ಣಗಿರಿಯ ಮಹಾಮಾತ್ರರ ಆದೇಶದ ಮೇಲೆ ಇಸಿಲದ ಮಾಹಾಮಾತ್ರನಿಗೆ...) ಈ ಶಾಸನದಲ್ಲಿ 'ಇಸಿಲ' ಶಬ್ದವು ಕನ್ನಡದ ಸ್ಥಳನಾಮವಾಗಿದ್ದು ಇದು ಸದ್ಯಕ್ಕೆ ತಿಳಿದಿರುವ ಮೊದಲ ಕನ್ನಡ ಪದವೆಂದು ಇತಿಹಾಸಕಾರರು ವಿವರಿಸಿದ್ದಾರೆ. 'ಇಸಿಲ್' ಎಂಬ ದ್ರಾವಿಡ ಪದಮೂಲದಿಂದ 'ಇಸಿಲ' ನಿಷ್ಪತ್ತಿಯಾಗಿದೆ. ಇಸಿಲ್ ಎಂದರೆ ಕೋಟೆ ; ಕೋಟೆ ಇದ್ದ ನಾಡು ಎನ್ನುತ್ತಾರೆ. ಇಸಿಲ ಇದು ಕನ್ನಡದ ಮೊದಲ ಪದವಾಗಿದ್ದರೂ, ಸ್ಥಳನಾಮವನ್ನು ಸೂಚಿಸುತ್ತಿದ್ದರೂ, ಅಶೋಕನು ಕ್ರಿಪೂ. ೨೫೨ರಲ್ಲಿಯೇ ಈ ಪದವನ್ನು ತನ್ನ ಆಡಳಿತದ ಶಾಸನದಲ್ಲಿ ಬರೆಸಿರುವುದು ಕಂಡುಬಂದಿದ್ದು ಆಗಿನ ಕಾಲದಲ್ಲಿಯೂ ಕನ್ನಡ ಬಳಕೆಯಲ್ಲಿತ್ತು ಕನ್ನಡದ ಕೆಲವು ಪದಗಳನ್ನು ಬೇರೆ ಭಾಷೆಯೊಂದಿಗೆ ಆಡಳಿತದಲ್ಲಿ ಬಳಸುತ್ತಿದ್ದರು ಎನ್ನುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಬನವಾಸಿ ಗ್ರಾಮದಲ್ಲಿ ದೊರೆತ 'ಬನವಾಸಿ ನಾಗಪ್ರತಿಮಾ ಶಾಸನ' ವು ಪ್ರಾಕೃತ ಭಾಷೆ ಬಾಹ್ಮಿಲಿಪಿಯಲ್ಲಿದ್ದು ಕ್ರಿಶ ಎರಡನೆಯ ಶತಮಾನದ್ದೆನ್ನಲಾದ ಈ ಶಾಸನವು ಬನವಾಸಿ ಕದಂಬ ಅರಸರ ರಾಜಧಾನಿಯಾದ ಬನವಾಸಿಯದು. ಇವರಿಗೂ

ಮುನ್ನ ಶಾತಕರ್ಣಿಗಳು ಸದರಿ ಪ್ರದೇಶವನ್ನು ಆಳುತ್ತಿದ್ದರು. ಸಾತಕರ್ಣೀ ರಾಜ ವಿಣ್ಹುಖಡ ಚುಡುಕುಲಾನಂದನ ಕಾಲದಲ್ಲಿ ಯುವರಾಜಮಾತೆ ಸಿವಖಡ(ಶಿವಸ್ಕಂಧ) ನಾಗಶ್ರೀಯು ನಾಗಪ್ರತಿಮೆ, ಕೆರೆ ಮತ್ತು ವಿಹಾರವನ್ನು ಮಾಡಿಸಿದ ವಿಷಯ ಶಾಸನಗಳಲ್ಲಿ ದಾಖಲಾಗಿದೆ. ಈ ಪ್ರತಿಮೆಯನ್ನು ಬನವಾಸಿಯ ಣಟಕ (ನರ್ತಕ) ಮಾಡಿದ್ದಾನೆಂದು ಶಾಸನಗಳಲ್ಲಿ ಉಲ್ಲೇಖವಿದೆ.

ಚಿತ್ರದುರ್ಗ ಜಿಲ್ಲೆ ಮತ್ತು ಚಿತ್ರದುರ್ಗ ತಾಲೂಕಿನ ಚಂದ್ರವಳ್ಳಿಯಲ್ಲಿ ದೊರೆತ 'ಮಯೂರವರ್ಮನ ಚಂದ್ರವಳ್ಳಿ ಶಾಸನ' ಇದು ಸಂಸ್ಕೃತ ಭಾಷೆ ಬ್ರಾಹ್ಮಿ ಲಿಪಿಯಲ್ಲಿದ್ದು ಕ್ರಿ.ಶ ಸುಮಾರು ೨೫೮ರ ಕಾಲದ್ದೆನ್ನಲಾಗಿದೆ. ಈ ಶಾಸನವು ಕದಂಬ ವಂಶದ ಮಯೂರವರ್ಮನು ಕರೆಯ ದುರಸ್ತಿ ಮಾಡಿಸಿ ಅದಕ್ಕೆ ಸುಂದರ ರೂಪ ನೀಡಿದ ದಾಖಲೆ ಇದರಿಂದ ತಿಳಿದುಬರುತ್ತದೆ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ತಾಗರ್ತಿ ಗ್ರಾಮದಲ್ಲಿ ದೊರೆತ 'ತಾಗರ್ತಿ ತಾಮ್ರ ಶಾಸನ' ಇದು ಸಂಸ್ಕೃತ ಭಾಷೆಯಲ್ಲಿದ್ದು ಪೂರ್ವ ಹಳೆಗನ್ನಡ ಲಿಪಿಯನ್ನು ಒಳಗೊಂಡಿದ್ದಾಗಿದೆ. ಈ ಶಾಸನವು ಗಂಗರ ರಾಚಮಲ್ಲನ ಹೆಸರನ್ನು ಉಲ್ಲೇಖಿಸುವಂತದ್ದಾಗಿದ್ದು ಈ ತಾಮ್ರಶಾಸನವು ರಾಚಮಲ್ಲನ ರಾಣಿ ಮತ್ತು ಅವಳ ಅಂಗರಕ್ಷಕರನ್ನು ರಕ್ಷಿಸಲು ಹೋರಾಡಿದ ಯದು ಕುಲದ ಮಾದಿಗವುಡನ ಮಗ ರಾಮದೇವನಿಗೆ ನೀಡಿದ ಭೂಮಿ ದಾನವನ್ನು ದಾಖಲಿಸಿದೆ.

ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹಲ್ಮಿಡಿ ಗ್ರಾಮದಲ್ಲಿ ದೊರೆತ 'ಹಲ್ಮಿಡಿ ಶಾಸನ' ಭಾಷೆಯಿಂದ ಕನ್ನಡ ಹಾಗೂ ಲಿಪಿಯೂ ಕನ್ನಡವಾಗಿದ್ದು ಕ್ರಿ.ಶ. ೪೫೦ರ ಕಾಲದ್ದೆನ್ನಲಾಗಿದೆ. ಈ ಶಾಸನವು ಪ್ರಸ್ತುತ ಮೊದಲ ಕನ್ನಡ ಶಾಸನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕ್ರಿ.ಶ. ೪೫೦ ರ ಕಾಲದ ಈ ಶಾಸನದ ಭಾಷೆ ಪೂರ್ವದ ಹಳೆಗನ್ನಡವೆಂದು ಇತಿಹಾಸ ತಜ್ಞರು ಗುರುತಿಸಿದ್ದಾರೆ ಹಾಗೂ ಇದು ಕವಿರಾಜ ಮಾರ್ಗಕ್ಕಿಂತ ಹಿಂದಿನದು ಎಂದು ವಿವರಿಸಿದ್ದಾರೆ. ನರಿದಾವಿಳೆ ನಾಡನ್ನು ಆಳುತ್ತಿದ್ದ ಮೃಗೇಶ ಮತ್ತು ನಾಗೇಂದ್ರ ಎನ್ನುವವರು ಕೇಕೆಯ ಮತ್ತು ಪಲ್ಲವರ ಮೇಲೆ ಹೋರಾಡಿ ಜಯಗಳಿಸಿದಕ್ಕಾಗಿ ವಿಜಯ ಎನ್ನುವ ಅರಸನಿಗೆ ಪಲ್ಮಿಡಿ ಮತ್ತು ಮೂಳವಳ್ಳಿ ಎಂಬ ಗ್ರಾಮಗಳನ್ನು ಕೊಟ್ಟ ವಿಷಯ ಈ ಶಾಸನ ಹೇಳುತ್ತದೆ. ಹೀಗಾಗಿ ಈ ಶಾಸನ ಆಡಳಿತದ ಒಂದು ಭಾಗವೇ ಸರಿ. ಕಾರಣವೇನೆಂದರೆ ಆಡಳಿತಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಪ್ರಸ್ತುತ ಶಾಸನವು ಸಾರಿ ಹೇಳುತ್ತದೆ.

ಮೇಲಿನ ಶಾಸನಗಳನ್ನು ನೋಡಲಾಗಿ ಕೆಲವೊಂದು ಅಂಶಗಳು ಬೆಳಕಿಗೆ ಬರುತ್ತವೆ. ಕ್ರಿಸ್ತ ಪೂರ್ವ ಎರಡನೆಯ ಶತಮಾನದಿಂದ ಕ್ರಿಶ ಎರಡು ಮತ್ತು ಮೂರನೆಯ ಶತಮಾನದ ಪ್ರಾರಂಭದವರೆಗೆ ಪ್ರಾಕೃತ ಭಾಷೆ ಬ್ರಾಹ್ಮಿ ಲಿಪಿ ಬಳಕೆಯಲ್ಲಿತ್ತು. ಕ್ರಿಶ ಮೂರರ ಪ್ರಾರಂಭದ ಸಂದರ್ಭಗಳಲ್ಲಿ ಸಂಸ್ಕೃತ ಭಾಷೆ ಬ್ರಾಹ್ಮಿ ಲಿಪಿ ಬಳಕೆಗೆ ಬಂತು. ಮುಂದುವರೆದಂತೆ ಕ್ರಿಶ ನಾಲ್ಕನೆಯ ಶತಮಾನದ ಪ್ರಾರಂಭದಲ್ಲಿ ಸಂಸ್ಕೃತ ಭಾಷೆ ಕನ್ನಡ ಲಿಪಿ ಬರವಣಿಗೆ ಜಾರಿಗೆ ಬಂದಿತು. ತದನಂತರದಲ್ಲಿ ಕ್ರಿಶ ನಾಲ್ಕನೆಯ ಶತಮಾನದ ಕೊನೆಯಲ್ಲಿ ಕನ್ನಡ ಭಾಷೆ ಮತ್ತು ಕನ್ನಡ ಲಿಪಿ ಪೂರ್ಣವಾಗಿ ಜಾರಿಗೆ ಬಂದಿರುವುದು ದೊರೆತಿರುವ ಶಾಸನಗಳಿಂದ ತಿಳಿದುಬರುತ್ತದೆ.

ನಂತರದಲ್ಲಿ ದೊರೆತ ಶಾಸನಗಳಾದ ಚಿತ್ರದುರ್ಗ ಜಿಲ್ಲೆಯ 'ತಮಟಕಲ್ಲು ಶಾಸನ'ದ ಭಾಷೆ ಕನ್ನಡ ಮತ್ತು ಲಿಪಿ ಕನ್ನಡವಾಗಿದೆ. ಕಾಲ ಕ್ರಿ.ಶ ೫೦೦. ಇದು ಒಂದು ವೀರಗಲ್ಲು ಶಾಸನವಾಗಿದೆ. ಒಂದೇ ಸ್ಥಳದಲ್ಲಿ ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಎರಡೂ ಶಾಸನಗಳನ್ನು ಇಲ್ಲಿ ಒಂದರ ಪಕ್ಕದಲ್ಲೊಂದರಂತೆ ಸ್ಥಾಪಿಸಲಾಗಿದೆ. ಆಡಳಿತದಲ್ಲಿ ಜನರಿಗೆ ವಿಷಯವನ್ನು ತಿಳಿಸಲು ಎರಡೂ ಭಾಷೆಗಳನ್ನು ಬಳಸುತ್ತಿದ್ದ ಪದ್ಧತಿ ಆಗಿನ ಕಾಲದಲ್ಲಿ ಪ್ರಜಾಆಡಳಿತಕ್ಕೆ ಹಿಡಿದ ಕೈಗನ್ನಡಿಯಂತೆ ಕಂಡುಬರುತ್ತದೆ. ಶಿವಮೊಗ್ಗ ಜಿಲ್ಲೆ ಸೊರಬ ತಾಲೂಕಿನ 'ಕೆಲಗುಂದ್ಲಿ ಶಾಸನ'ದ ಭಾಷೆ ಕನ್ನಡ ಮತ್ತು ಲಿಪಿ ಕನ್ನಡವಾಗಿದೆ. ಕಾಲ ಕ್ರಿ.ಶ ೫ ನೇ ಶತಮಾನದ್ದೆನ್ನಲಾಗುವ ಈ ಶಾಸನ ರವಿವರ್ಮನ ಆಳ್ವಿಕೆಯ ಕಾಲದಲ್ಲಿ ಮಲ್ಲಿಗೆ ಅರಸನ ಹಿರಿಯ ರಾಣಿಯಾದ ಕಳಿಗುಜ್ಜನಿಯ ಸ್ಮಾರಕವಾಗಿ ಪಡುಗಲ್ ನೆಟ್ಟ ವಿಷಯವನ್ನು ಶಾಸನ ತಿಳಿಸುತ್ತದೆ.

ಬಾಗಲಕೋಟೆ ಜಿಲ್ಲೆ ಬಾದಾಮಿಯಲ್ಲಿ ದೊರೆತ 'ಬಾದಾಮಿ ಬಂಡೆಗಲ್ಲು ಶಾಸನ' ಭಾಷೆಯಿಂದ ಸಂಸ್ಕೃತವಾಗಿದ್ದು ಲಿಪಿ ಹಳೆಗನ್ನಡದಲ್ಲಿದೆ. ಅಲ್ಲಿಯೇ ದೊರೆತ 'ಮಂಗಳೇಶನ ಶಾಸನ' ಭಾಷೆ ಮತ್ತು ಲಿಪಿಯೂ ಕನ್ನಡದಲ್ಲಿದೆ. ಬಾಗಲಕೋಟೆ ಜಿಲ್ಲೆಯ ಹುನುಗುಂದ ತಾಲೂಕಿನ ಐಹೊಳೆಯಲ್ಲಿ ದೊರೆತ 'ಐಹೊಳೆ ಪ್ರಶಸ್ತಿ ಶಾಸನ' ಭಾಷೆಯಿಂದ ಸಂಸ್ಕೃತವಾಗಿದ್ದು ಲಿಪಿ ಕನ್ನಡದ್ದಾಗಿದೆ. ಕಾಲ ಕ್ರಿ.ಶ ಏಳನೆಯ ಶತಮಾನದ್ದಾಗಿದ್ದು ರವಿಕೀರ್ತಿ ಇದನ್ನು ರಚಿಸಿದನೆನ್ನಲಾಗಿದೆ. ಈ ಶಾಸನದಲ್ಲಿ ಇಮ್ಮಡಿ ಪುಲಕೇಶಿಯ ಯುದ್ಧಗಳು ಮತ್ತು ಗೆಲುವುಗಳು ಹಾಗೂ ಈ ಶಾಸನದಿಂದ ಕರ್ನಾಟಕದ ಭೌಗೋಳಿಕ ಸೀಮೆಯ ಪರಿಚಯವಾಗುತ್ತದೆ ಎಂದು ಇತಿಹಾಸ ತಜ್ಞರು ಅಭಿಪ್ರಾಯ ಪಡುತ್ತಾರೆ.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಹಾಗೂ ಅನಂತಪುರ ತಾಲೂಕಿನ ಪೆದ್ದವಡಗೂರು ಗ್ರಾಮದಲ್ಲಿ ದೊರೆತ 'ಪುಲಕೇಶಿಯ ಪೆದ್ದವಡಗೂರು ಶಾಸನ' ಭಾಷೆ ಕನ್ನಡ ಮತ್ತು ಲಿಪಿ ಹಳಗನ್ನಡದಲ್ಲಿರುವ ಈ ಶಾಸನ ಕ್ರಿ.ಶ ಏಳನೆಯ ಶತಮಾನದ್ದೆನ್ನಲಾಗಿದೆ. ಈ ಶಾಸನದಲ್ಲಿ ಎರಡನೆಯ ಪುಲಕೇಶಿಯು ತಮ್ಮ ಚಿಕ್ಕಪ್ಪ ಮಂಗಳೇಶನನ್ನು ನಾದನೂರು ಸಮೀಪದ ಸಿಂಬಿಗೆ ಎಂಬಲ್ಲಿ ಸೋಲಿಸಿ ಕೊಂದ ಘಟನೆಯನ್ನು ಈ ಶಾಸನ ವಿವರಿಸುತ್ತಾ ನಾದನೂರಿನ ಮಹಾಜನಗಳ ಕೋರಿಕೆಯಂತೆ ಗ್ರಾಮವನ್ನು ತೆರಿಗೆಗಳಿಂದ ಮುಕ್ತ ಮಾಡಿದ್ದಾಗಿ ತಿಳಿಸುತ್ತದೆ.

ತುಮಕೂರು ಜಿಲ್ಲೆಯ ಹೊನ್ನುಡಿಕೆ ಸಮೀಪ ಜಲಗಾರದಿಬ್ಬ ಗ್ರಾಮದಲ್ಲಿ ದೊರೆತ 'ಜಲಗಾರದಿಬ್ಬ ಶಾಸನ' ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯದ್ದಾಗಿದೆ. ಹಾಸನ ಜಿಲ್ಲೆ ಚನ್ನರಾಯ ಪಟ್ಟಣ ತಾಲೂಕಿನ ಶ್ರವಣಬೆಳಗೊಳದಲ್ಲಿ ದೊರೆತ 'ಶ್ರವಣಬೆಳಗೊಳದ ಶಾಸನ' ಇಲ್ಲಿ ಒಟ್ಟು ಎರಡು ಶಾಸನಗಳು ದೊರೆತಿದ್ದು ಅದರಲ್ಲಿ ಮೊದಲನೆಯ ಶಾಸನ ಸಂಸ್ಕೃತ ಲಿಪಿ ಕನ್ನಡ ಭಾಷೆಯಾಗಿದ್ದು, ಇನ್ನೊಂದು ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯದ್ದಾಗಿದೆ. ಈ ಶಾಸನದಲ್ಲಿ ಭದ್ರಬಾಹು ಮುನಿಗಳು ದಕ್ಷಿಣಾಪಥಕ್ಕೆ ಬಂದರೆಂಬ ಉಲ್ಲೇಖವಿದೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನಲ್ಲಿ ದೊರೆತ 'ಕಪ್ಪೆ ಅರಭಟ್ಟನ ಶಾಸನ' ಭಾಷೆ ಸಂಸ್ಕೃತ ಮತ್ತು ಕನ್ನಡದಿಂದ ಕೂಡಿದ್ದು ಲಿಪಿ ಕನ್ನಡದ್ದಾಗಿದೆ. ಕಾಲ ಕ್ರಿ.ಶ ಸುಮಾರು

ಏಳನೆಯ ಶತಮಾನದ್ದೆನ್ನಲಾಗಿದೆ. ಈ ಶಾಸನದಲ್ಲಿ ಕನ್ನಡದ ಆಂಶ ತ್ರಿಪದಿಯ ಮೊದಲ ಉದಾಹರಣೆಗಳನ್ನು ಕಾಣಬಹುದಾಗಿದೆ. ಈ ಶಾಸನವು ಆಗಿನ ಕಾಲದಲ್ಲಿ ಪ್ರಸಿದ್ಧನಾಗಿದ್ದ ಕಪ್ಪೆ ಅರಭಟ್ಟನೆಂಬ ವ್ಯಕ್ತಿಯನ್ನು ಕುರಿತಾಗಿ ಪ್ರಶಂಸಿಸುತ್ತದೆ. ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕಿನ ತಲಕಾಡು ಗ್ರಾಮದಲ್ಲಿ ದೊರೆತ 'ಶ್ರೀಪುರುಷನ ತಲಕಾಡು ಶಾಸನ'ದ ಭಾಷೆ ಮತ್ತು ಲಿಪಿ ಎರಡೂ ಕನ್ನಡದಲ್ಲಿದ್ದು ಕಾಲ ಕ್ರಿ.ಶ ೭೭೬ದ್ದಾಗಿದೆ. ಈ ಶಾಸನದಲ್ಲಿ ಶ್ರೀಪುರುಷನ ಆಳ್ವಿಕೆಯಲ್ಲಿ ಸಿನ್ದರಸ ಮತ್ತು ದೇವಸತ್ತಿ ಅರಸರು ಬಿನ್ನಹ ಮಾಡಿಕೊಂಡ ಪ್ರಕಾರ ಅರಕೇಸಿಗಳು ಅರಸರ ಆದೇಶದ ಮೇರೆಗೆ ಸುಂಕಗಳಿಗೆ ವಿನಾಯಿತಿ ನೀಡಿದರು. ಇದಕ್ಕೆ ೯೬೦೦೦ ಜನರೆಲ್ಲರೂ ಸಾಕ್ಷಿ ಎಂದು ಶಾಸನ ವಿವರಿಸುತ್ತದೆ.

ತಮಿಳುನಾಡು ರಾಜ್ಯದ ಕಾಂಚೀಪುರಂನಲ್ಲಿ ದೊರೆತ 'ಎರಡನೇ ವಿಕ್ರಮಾದಿತ್ಯನ ಕಂಚಿಯ ಶಾಸನ' ಈ ಶಾಸನವು ತಮಿಳುನಾಡಿನಲ್ಲಿ ದೊರೆತರೂ ಕನ್ನಡ ಲಿಪಿ ಮತ್ತು ಕನ್ನಡ ಭಾಷೆಯಲ್ಲಿದ್ದು ಕಾಲ ಕ್ರಿ.ಶ ಎಂಟನೆಯ ಶತಮಾನದ್ದೆನ್ನಲಾಗಿದೆ. ಈ ಶಾಸನದಲ್ಲಿ ವಿಕ್ರಮಾದಿತ್ಯನು ಕಂಚಿಯನ್ನು ಗೆದ್ದು ಅಲ್ಲಿಯ ರಾಜಸಿಂಹೇಶ್ವರ ದೇವಾಲಯದ ಐಶ್ವರ್ಯವನ್ನು ನೋಡಿ ಪುನಃ ಅದನ್ನು ದೇವರಿಗೆ ಬಿಟ್ಟದ್ದನ್ನು ಶಾಸನದಲ್ಲಿ ದಾಖಲಿಸಿದೆ. ರಾಷ್ಟ್ರಕೂಟರ ಆಳ್ವಿಕೆಯ ಕಾಲದ ಮೊದಲ ಶಾಸನವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಹಾವೇರಿ ಜಿಲ್ಲೆಯ ಹತ್ತಿಮತ್ತೂರು ಗ್ರಾಮದಲ್ಲಿ ದೊರೆತ ಒಂದನೆಯ ಕೃಷ್ಣನ 'ಹತ್ತಿಮತ್ತೂರು ಶಾಸನ'ವು ಕನ್ನಡ ಲಿಪಿ ಮತ್ತು ಕನ್ನಡ ಭಾಷೆಯಲ್ಲಿದೆ.

ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಕುರಿಕ್ಯಾಲ ತಾಲೂಕಿನ 'ಜೀನವಲ್ಲಭನ ಕುರಿಕ್ಯಾಲಂ ಶಾಸನ' ಕ್ರಿ.ಶ. ೯೫೦ರ ಕಾಲದ್ದೆನ್ನಲಾಗುವ ಈ ಶಾಸನ ಕನ್ನಡ ಲಿಪಿ ಹಾಗೂ ಕನ್ನಡ ಭಾಷೆಯಲ್ಲಿದೆ. ಈ ಶಾಸನವು ಅರಿಕೇಸರಿಯು ಪಂಪನಿಗೆ ನೀಡಿದ್ದ ಅಗ್ರಹಾರ ಮತ್ತು ಜೀನವಲ್ಲಭನು ಕಟ್ಟಿಸಿದ ಕೆರೆ, ಮಾಡಿಸಿದ್ದ ಬಸದಿ ಮತ್ತು ವನದ ಬಗ್ಗೆ ಮಹತ್ವದ ಮಾಹಿತಿ ನಿಡುತ್ತದೆ. ಮಧ್ಯಪ್ರದೇಶ ರಾಜ್ಯದ ಜುರಾ ಎಂಬಲ್ಲಿ ದೊರೆತ ರಾಷ್ಟ್ರಕೂಟರ ಮೂರನೆಯ ಕೃಷ್ಣನ 'ಜುರ ಶಾಸನ' ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿದ್ದು ಕಾಲ ಕ್ರಿ.ಶ ಹತ್ತನೆಯ ಶತಮಾನದ್ದಾಗಿದೆ. ಈ ಶಾಸನದಲ್ಲಿ ಕಂಚಿಯನ್ನು ಗೆದ್ದ ಕನ್ನಡ ದೇವನನ್ನು ವರ್ಣಿಸುವ ವಿವರಣೆ ಕಂಡುಬರುತ್ತದೆ.

ಈ ಒಂದು ಘಟ್ಟ ದಾಟಿದ ನಂತರದಲ್ಲಿ ಬಂದ ಹೊಯ್ಸಳರು ಹಾಗೂ ವಿಜಯನಗರ ಅರಸರ ಆಳ್ವಿಕೆಯ ಅವಧಿಯಲ್ಲಿ ಕಂಡುಬರುವ ಸುಮಾರು ಶಾಸನಗಳು ಸಹಜವಾಗಿ ಭಾಷೆಯಿಂದಲೂ ಮತ್ತು ಲಿಪಿಯಿಂದಲೂ ಕನ್ನಡದ್ದವೇ ಆಗಿದೆ. ಅಲ್ಲದೇ ಹೈದಾರಾಲಿ ಮತ್ತು ಟಿಪ್ಪು ಮೈಸೂರಿನ ಶ್ರೀರಂಗಪಟ್ಟಣಗಳಲ್ಲಿ ನಡೆಸಿರುವ ಆಡಳಿತವು ಕನ್ನಡದ್ದಾಗಿತ್ತು ಎನ್ನುವುದನ್ನು ಆಗಿನ ಸಂದರ್ಭದಲ್ಲಿ ಅವರು ಜಾರಿಗೆ ತಂದ ಕಂದಾಯಕ್ಕೆ ಸಂಬಂಧಪಟ್ಟ ವಿಚಾರ, ಲೆಕ್ಕಪತ್ರ, ಆದೇಶಗಳಿಂದ ಸಾಬೀತುಪಡಿಸುತ್ತದೆ. ಅಲ್ಲದೇ ಇವೆಲ್ಲವುದಕ್ಕೆ ಪುಷ್ಟಿ ಎಂಬಂತೆ ಶಿವಾಜಿಯ ಆಡಳಿತಾವಧಿಯಲ್ಲಿ ಬರೆಸಲಾದ ಬೆಂಗಳೂರಿನ ಕಾಡುಮಲ್ಲೇಶ್ವರಂನ ದೇವಸ್ಥಾನದ ಹತ್ತಿರ ಇರುವ ಶಾಸನ ಕನ್ನಡದಲ್ಲಿದೆ. ಮೈಸೂರಿನ ಒಡೆಯರ ಕಾಲದಲ್ಲಿ ಸಂಪೂರ್ಣವಾಗಿ ಕನ್ನಡ ಆಡಳಿತ ಭಾಷೆಯಾಗಿತ್ತು ಎಂಬುದಕ್ಕೆ ಹಲವಾರು ಪುರಾವೆಗಳಿವೆ.

ಪ್ರಾಚೀನ ಕಾಲದ ಶಾಸನಗಳು ಸಂಸ್ಕೃತ ಭಾಷೆಯಲ್ಲಿವೆ. ಜನಸಾಮಾನ್ಯರಿಗೆ ತಿಳುವಳಿಕೆ ನೀಡುವ ಭಾಗಗಳು ಕನ್ನಡದಲ್ಲಿವೆ. ಕರ್ನಾಟಕದಲ್ಲಿ ದೊರೆತಿರುವ ಸುಮಾರು ಇಪ್ಪತ್ತೈದು ಸಾವಿರ ಶಾಸನಗಳಲ್ಲಿ ಶೇಕಡಾ ಎಂಬತ್ತಕ್ಕೂ ಹೆಚ್ಚು ಶಾಸನಗಳು ಕನ್ನಡ ಭಾಷೆಯಲ್ಲಿವೆ ಎಂದು ಅಭಿಪ್ರಾಯಪಡುತ್ತಾರೆ. ವಿಜಯನಗರ ಸಾಮ್ರಾಜ್ಯದ ಚರಿತ್ರೆಗೆ ಸಂಬಂಧಿಸಿದ ೫೦೦೦ ಕ್ಕೂ ಹೆಚ್ಚು ಶಾಸನಗಳಲ್ಲಿ ೨೫೦೦ ಸಾವಿರ ಶಾಸನಗಳು ಕನ್ನಡ ಭಾಷೆಯಲ್ಲಿವೆ. ವಿಜಯನಗರ ಪತನದ ನಂತರ ಕನ್ನಡ ಪ್ರದೇಶ ಮುಸ್ಲಿಂರ ಪ್ರಭಾವಕ್ಕೆ ಒಳಗಾಯಿತು. ಇಲ್ಲಿ ಪರ್ಶಿಯನ್ ಮತ್ತು ಅರಬ್ಬಿ ಪದಗಳು ಆಡಳಿತದಲ್ಲಿ ಸೇರಿಕೊಂಡವು. ಆದರೆ ಬಹುಮನಿ ಸುಲ್ತಾನರ ಆಳ್ವಿಕೆಗೆ ಒಳಪಟ್ಟಿದ್ದ ಪ್ರದೇಶಗಳಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿತ್ತು. ಇದರ ಜೊತೆಯಲ್ಲಿ ಪಾರಸಿ ಮತ್ತು ಮರಾಠಿ ಭಾಷೆಗಳು ಕೂಡ ಕನ್ನಡದ ಜೊತೆಯಲ್ಲಿಯೇ ಆಡಳಿತ ಭಾಷೆಯಾಗಿದ್ದವು. ಗೋವೆಯಲ್ಲಿ ಕಂದಂಬ ಮನೆತನದ ಆಡಳಿತದ ಸಮಯದಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿತ್ತು. ಕಾಲಕ್ರಮೇಣ ಅದು ಕೊಂಕಣಿ, ಮರಾಠಿ ಮತ್ತು ಪೋರ್ಚುಗೀಸ್ ಭಾಷೆಗಳ ಪ್ರಭಾವದ ಕಾರಣ ಆಡಳಿತ ಭಾಷೆಯಿಂದ ದೂರಸರಿಯಿತು. ಆದರೆ ೧೯ನೇ ಶತಮಾನದ ಕೊನೆಯವರೆಗೂ ಗೋವೆಯಲ್ಲಿ ಕನ್ನಡದ ಲಿಪಿ ಬಳಕೆಯಲ್ಲಿರುವುದನ್ನು ಕಾಣಬಹುದಾಗಿದೆ ಎಂದು ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡ ಆಡಳಿತ ಕನ್ನಡ ಕೃತಿಯ ಪುಟ ಸಂಖ್ಯೆ ೧೦ರಲ್ಲಿ ವಿವರಿಸಲಾಗಿದೆ.

ಕಾಲಕ್ಕೆ ತಕ್ಕಂತೆ ಆಯಾ ಕಾಲದಲ್ಲಿ ಆದ ಕನ್ನಡ ಭಾಷೆ ಸುಧಾರಣೆ, ಬಳಕೆಯಾಗುತ್ತಿದ್ದ ಕನ್ನಡ ಭಾಷಿಕ ರೂಪಗಳು ಮತ್ತು ಹೊರಡಿಸುತ್ತಿದ್ದ ಸುತ್ತೋಲೆಗಳು ಕನ್ನಡ ಭಾಷೆಯಲ್ಲೇ ಇದ್ದವು ಎನ್ನುವುದು ಸಹ ಶಾಸನಗಳಿಂದ ತಿಳಿದುಬರುತ್ತದೆ. ಇಷ್ಟೇ ಅಲ್ಲದೇ ಆಡಳಿತೇತರ ವಿಚಾರಗಳಾದ ರಾಜವಂಶರ ವಿವರಗಳು, ಸಾಮಂತರು, ಡಂಡನಾಯಕರು, ಆಡಳಿತ ನಡೆಸುತ್ತಿದ್ದ ಪ್ರಾಂತಾಧಿಕಾರಿಗಳು, ಯುದ್ಧ ಸಂದರ್ಭದಲ್ಲಿ ಮಡಿದ ರಾಜರು ಮುಂತಾದ ವಿಚಾರಗಳನ್ನು ಈ ಶಾಸನಗಳು ಪರಿಚಯಿಸುತ್ತವೆ.

ಸ್ವತಂತ್ರ್ಯಪೂರ್ವದಲ್ಲಿ ರಾಜನ ಆಡಳಿತದಲ್ಲಿ ಬಳಕೆಯಾಗುತ್ತಿದ್ದ ಆಡಳಿತ ಮಾದರಿಗಳ ವಿವರ, ಪ್ರವಾಸಿಗರಿಗೆ ವಿಶೇಷವಾದ ಸೌಲಭ್ಯ, ಸಾಮಾಜಿಕ ಕೆಲಸಕಾರ್ಯಗಳಾದ ಕೆರೆಕಟ್ಟಿಸುವುದು, ರಸ್ತೆಗಳ ರಿಪೇರಿ, ಗ್ರಾಮಗಳ ಗಡಿ ಗುರುತಿಸುವಿಕೆ, ದೇಗುಲ, ತೋಟ, ಮರಗಿಡಗಳು ಮುಂತಾದ ವಿವರಗಳು ಕನ್ನಡ ಭಾಷೆಯಲ್ಲಿಯೇ ದಾಖಲೆಯಾಗಿವೆ. ಇದರ ಜೊತೆಯಲ್ಲಿಯೇ ಕನ್ನಡ ಅಂದಿನ ಜನಸಾಮಾನ್ಯರ ಭಾಷೆ ಮತ್ತು ಆಡಳಿತ ಭಾಷೆಯಾಗಿತ್ತೆಂದು ಶಾಸನದಿಂದ ಲಭ್ಯವಾಗುತ್ತದೆ. ಕರ್ನಾಟಕದಲ್ಲಿ ರಾಜಮನೆತನವನ್ನು ಸ್ಥಾಪಿಸಿ ಅಧಿಕಾರದಲ್ಲಿದ್ದು ಆಳಿದ ಸಂದರ್ಭಲ್ಲಿ ಕನ್ನಡ ಆಡಳಿತ ಭಾಷೆಯಾಗಿತ್ತೆಂಬುದು ಇಂತಹ ಹಲವಾರು ವಿಷಯಗಳಿಂದ ದೃಢಪಡುತ್ತದೆ.

ಆಗಿನ ಆಡಳಿತದಲ್ಲಿ ಬಳಸುತ್ತಿದ್ದ ಶಬ್ದಗಳು, ಅರಸರ ಆದೇಶಗಳು, ಗಡಿಗಳ ವಿಸ್ತರಣೆ, ಗಡಿಗಳ ವಿವರಣೆ, ದೇವಸ್ಥಾನಗಳ ವ್ಯವಸ್ಥೆ, ದಾನ-ದತ್ತಿಗಳ ಸಲ್ಲಿಕೆ, ಕೆರೆಕಟ್ಟೆಗಳ ನಿರ್ಮಾಣ, ಇವೆಲ್ಲವುಗಳನ್ನು ಪರಿಶೀಲಿಸಿ ಒಂದು ರೀತಿಯಲ್ಲಿ ಹೇಳುವುದಾದರೆ ಶಾಸನಗಳು ಆಕಾಲದ ಸಮಾಜ ವ್ಯವಸ್ಥೆ, ಆಡಳಿತದ ಸ್ವರೂಪವನ್ನು ಮತ್ತು ಅಲ್ಲಿನ ಭಾಷೆಯ ಬಗ್ಗೆ ಪರಿಚಯಿಸುತ್ತವೆ, ಈಗಿನ ಆಡಳಿತ ವ್ಯವಸ್ಥೆ ಅದೇ ಮಾದರಿಯಲ್ಲಿ ಹೊಸ ರೂಪವನ್ನು ಪಡೆದುಕೊಂಡಿದೆ ಎನ್ನಬಹುದು.

ಆಡಳಿತದ ಸಂದರ್ಭದಲ್ಲಿ ಅರಸರು ತಮ್ಮ ಪ್ರಜೆಗಳಿಗೆ ವಿಧಿಸಲಾದ ತೆರಿಗೆಗಳ ಬಗ್ಗೆ ನಮಗೆ ಶಾಸನ ಮತ್ತು ಇನ್ನಿತರ ದಾಖಲೆಗಳಿಂದ ತಿಳಿದುಬರುತ್ತದೆ.

ತೆರಿಗೆಯನ್ನು ಸೂಚಿಸುವ ಕನ್ನಡ ಪದಗಳು

ಪನ್ನಾಯ, ಭಿತ್ತಾಯ, ದಂಡಾಯ, ಧನಿಸಂಧ, ಕುಳಿಯ ಸುಂಕ, ದವೆಸಾಯಿ, ನೀರುಣಿ ಸುಂಕ, ತಿಪ್ಪೆಸುಂಕ, ಪೆರ್ಜಿಂಕ, ಮದುವೆಸುಂಕ, ಅರುವಣ, ಮನ್ನೆವಣ, ವೇಳಣ, ಮನೆವಣ, ಸೂಳೆವಳಪಣ, ಸಂತೆವಣ, ಹಂದರಿವಂ, ಕನ್ನಡಿವಣ, ತಳಾರ ಗೂಲಿ, ವಡ್, ರಾವುಳ, ತಿರುದೆರೆ, ಡೊಂಬದೆರೆ, ಗಾಣದೆರೆ, ಅಗಸದೆಲೆ, ಕುಂಬಾರದೆರೆ, ಬಡ್ಡತೆರೆ, ಅಡುವಣಿ, ಕುರಿದೆರೆ, ಮಗ್ಗದೆರೆ, ಬಂಡಿದೆರೆ, ಆದೇಶ, ಪರಿಹಾರ, ದಾನ, ಅಧಿಕೃತ ಜ್ಞಾಪನ, ಎಂಬ ಪದಗಳ ಉಲ್ಲೇಖವಿರುವ ಶಾಸನಗಳನ್ನು ಕಾಣಬಹುದು. ಇದಲ್ಲದೇ ಕರ್ನಾಟಕದಲ್ಲೇ ಅಷ್ಟೆ ಅಲ್ಲ ಹೊರ ರಾಜ್ಯಗಳಲ್ಲಿಯೂ ವಿಜಯನಗರದ ಆಳ್ವಿಕೆಯ ಸಂದರ್ಭದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಬಳಕೆಯಾದ ಶಾಸನಗಳು ದೊರೆತಿರುವುದು ಇನ್ನೂ ವಿಶೇಷವಾಗಿದೆ.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕನ್ನಡ ಸಂಪೂರ್ಣವಾಗಿ ಆಡಳಿತ ಭಾಷೆಯಾಗಿದ್ದ ಇತಿಹಾಸ ಲಭ್ಯವಿದೆ. ಅನೇಕ ಶಾಸನಗಳು ಕನ್ನಡದಲ್ಲಿ ದೊರೆತಿವೆ. ವಿಜಯನಗರದ ಅರಸರ ಕಾಲದ ಅನೇಕ ಶಾಸನಗಳು ವಿಜಯನಗರದ ಅರಸರು ಆಡಳಿತದಲ್ಲಿ ಕನ್ನಡವನ್ನು ಬಳಸುತ್ತಿದ್ದರು ಎನ್ನುವುದನ್ನು ಸಾರಿ ಸಾರಿ ಹೇಳುತ್ತಿವೆ. ಈ ಸಾಮ್ರಾಜ್ಯ ಅವನತಿ ಹೊಂದಿ ಬಹುಮನಿ ಸುಲ್ತಾನರ ರಾಜ್ಯದಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿತ್ತು. ಬಿಜಾಪುರದ ಸುಲ್ತಾನರ ಅನೇಕ ಶಾಸನಗಳು ಕನ್ನಡದಲ್ಲಿರುವುದನ್ನು ಕಾಣುತ್ತೇವೆ. ಅಲ್ಲಿಗೆ ಆಡಳಿತದಲ್ಲಿ ಮರಾಠಿ ಮತ್ತು ಪಾರಸಿ ಭಾಷೆಗಳು ಸೇರಿಕೊಂಡುವು. ಆದಿಲ್ ಶಾಹಿಯ ಕಾಲದಲ್ಲಿ ಪಾರಸಿ, ಅರಬ್ಬಿ, ಮರಾಠಿ ಮತ್ತು ಕನ್ನಡ ಭಾಷೆಗಳು ಕೂಡಿಕೊಂಡು ಹೊಸ ಭಾಷೆಗೆ ನಾಂದಿಹಾಡಿತು (ರೇಖ್ತಾ) ಇದೇ ಮುಂದೆ ಉರ್ದುವಾಗಿ ಉಗಮಗೊಂಡಿದ್ದನ್ನು ಭಾಷಾತಜ್ಞರು ದೃಢಪಡಿಸಿದ್ದಾರೆ. ಈ ಭಾಷೆಯಿಂದಲೂ ನಾವು ಅನೇಕ ಪದಗಳನ್ನು ನಮ್ಮ ಆಡಳಿತದಲ್ಲಿ ಎರವಲಾಗಿ ಪಡೆದುಕೊಂಡು ಇಂದಿಗೂ ಕಾರ್ಯನಿರ್ವಹಿಸುತ್ತಿದ್ದೇವೆ. ಅದರ ವಿಸ್ತಾರವಾದ ಅಧ್ಯಯನ ಮುಂದಿನ ಅಧ್ಯಾಯಗಳಲ್ಲಿ ಮಾಡಲಾಗಿದೆ.

ಮೈಸೂರಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ಚಿಕ್ಕದೇವರಾಜ ಒಡೆಯರ ಇತಿಹಾಸವನ್ನು ಒಮ್ಮೆ ಅವಲೋಕಿಸಿದಾಗ ಆಡಳಿತದಲ್ಲಿ ಕನ್ನಡ ಮತ್ತು ಮರಾಠಿ ಭಾಷೆ ವಿಶಿಷ್ಟವಾಗಿರುದನ್ನು ನೋಡಬಹುದು. ೧೮ ಇಲಾಖೆಗಳನ್ನು ರಚಿಸಿ 'ಅಠಾರಾ ಕಚೇರಿ' ಎಂದು ನಾಮಕರಣ ಮಾಡಿದರು. ಆ ಅಠಾರಾ ಕಚೇರಿಗಳ ಮುಖಾಂತರ ಕಾರ್ಯನಿರ್ವಹಿಸಿ ಆಡಳಿತದಲ್ಲಿ ಬಹು ಮುಖ್ಯವಾದ ಬದಲಾವಣೆಗಳನ್ನು ತರುವಲ್ಲಿ ಶ್ರಮಿಸಿದರು. ಆಗಿನ ಸಂದರ್ಭದಲ್ಲಿನ ಮೈಸೂರು ಹುಲಿ ಟಿಪ್ಪುವು ಕಂದಾಯ ವ್ಯವಸ್ಥೆಯನ್ನು ಪರಿಷ್ಕರಿಸಿ ಅಮಲ್ದಾರ, ಶಿರಸ್ತೆದಾರ, ಗುಮಾಸ್ತರೆಂದು ನೇಮಕಮಾಡಿದನು. ಇದೇ ರೀತಿ ಆ ಕಾಲದಲ್ಲಿ ೨೩ ತುಕಡಿಗಳನ್ನು ರಚಿಸಿ ಅವರವರ ಆಡಳಿತ ವ್ಯವಸ್ಥೆಯನ್ನು ನೋಡಿಕೊಂಡು ಹೋಗಲು ಆದೇಶಿಸಿದನು. ಜೊತೆಗೆ ಅವರ ಎಲ್ಲಾ ಕಂದಾಯ ವಿವಿರಣೆಗಳು ಕನ್ನಡದಲ್ಲಿರುತ್ತಿದ್ದು

ಕಂಡುಬರುತ್ತದೆ. ಆಗಿನ ಕಾಲದ ನಾಣ್ಯಗಳು ಅಲ್ಲಿನ ರಾಜರ ಆಡಳಿತದಲ್ಲಿನ ಆರ್ಥಿಕ ವ್ಯವಸ್ಥೆಯನ್ನು ಸೂಚಿಸುವ ಕೇಂದ್ರ ಬಿಂದುಗಳಾಗಿದ್ದವು. ನಾಣ್ಯಗಳಲ್ಲಿಯೂ ಸಹ ಕನ್ನಡದ ಕುರುಹುಗಳಿರುವುದು ಇತಿಹಾಸದ ಅಧ್ಯಯನದಿಂದ ದೃಢಪಟ್ಟಿರುತ್ತದೆ.

ಪ್ರಧಾನ, ಸಂಧಿವಿಗ್ರಹಿ, ಮಹಾ ಪ್ರದಾನ, ಗೂಡಾಚಾರಿ, ತಳಾರ, ಗಾವುಂಡ, ಪಟ್ಟಣ ಶೆಟ್ಟಿ, ಸುಂಗವೆರ್ಗಡೆ, ಇತರೆ ಅಧಿಕಾರಿಗಳ ಹೆಸರುಗಳನ್ನು ಸೂಚಿಸುವ ಪದಗಳ ಹೆಸರುಗಳನ್ನು ಬಳಸಿರುವುದು ಆಡಳಿತದಲ್ಲಿ ಗೋಚರಿಸುತ್ತವೆ. ಸಾಹಿತ್ಯಿಕ ವರ್ಗದಲ್ಲೂ ಅನೇಕ ಕನ್ನಡ ಕೃತಿಗಳು ಆಗಿನ ಸಂದರ್ಭದಲ್ಲಿ ರಚನೆಯಾಗಿದ್ದವು ಎನ್ನುವುದಕ್ಕೆ ಕನ್ನಡ ಸಾಹಿತ್ಯದ ಅಧ್ಯಯನದಿಂದ ತಿಳಿದುಬರುತ್ತದೆ.

ಉದಾಹರಣೆಗಾಗಿ:– ಶ್ರೀವಿಜಯನ - ಕವಿರಾಜ ಮಾರ್ಗ – ಮೊದಲ ಕನ್ನಡ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಆಡಳಿತದ ದೃಷ್ಟಿಯಿಂದ ಈ ಕೃತಿಯನ್ನು ವಿವರಿಸುವುದಾದರೆ ಕನ್ನಡ ನಾಡಿನ ಎಲ್ಲೆಯನ್ನು ವಿವರಿಸುವ ಕೃತಿ ಇದಾಗಿದೆ ಎನ್ನುವಲ್ಲಿ ಸಂಶಯವಿಲ್ಲ.

೨.೨. ಬ್ರಿಟೀಷರ ಆಡಳಿತ ಕಾಲದಲ್ಲಿ ಆಡಳಿತ ಭಾಷೆಯಾಗಿ ಕನ್ನಡದ ಇತಿಹಾಸ

ವ್ಯಾಪಾರಕ್ಕೆಂದು ಬಂದ ಆಂಗ್ಲರು ಕ್ರಮೇಣ ತಾವೇ ಆಡಳಿತದ ಚುಕ್ಕಾಣಿಯ ಸೂತ್ರವನ್ನು ಹಿಡಿದರು. ಆಂಗ್ಲೋ–ಮೈಸೂರು ಯುದ್ಧದೊಂದಿಗೆ ಟಿಪ್ಪುವಿನ ಅವನತಿಯಾಯಿತು. ಟಿಪ್ಪುವಿನ ಅವನತಿಯೊಂದಿಗೆ ಕರ್ನಾಟಕದಲ್ಲಿ ಬ್ರಿಟೀಷರ ಪ್ರಭುತ್ವ ಸ್ಥಾಪನೆಯಾಯಿತು. ಮೈಸೂರು ರಾಜ್ಯವನ್ನು ಮೂರು ಭಾಗಗಳಾಗಿ ಒಡೆದು ಒಂದು ಭಾಗವನ್ನು ಒಡೆಯರ ರಾಜವಂಶಸ್ಥರಿಗೆ ಒನ್ನೊಂದು ಭಾಗವನ್ನು ಮರಾಠರಿಗೆ ಮತ್ತು ಉಳಿದ ಭಾಗವನ್ನು ಹೈದ್ರಾಬಾದಿನ ನಿಜಾಮನೊಂದಿಗೆ ಹಂಚಿಕೊಂಡರು. ಇದರಿಂದ ಕರ್ನಾಟಕವನ್ನು ಒಡೆದು ಆಳುವ ನೀತಿಗೆ ಅಳವಡಿಸಿದರು. ಇತಿಹಾಸದಲ್ಲಿ ಮುಂದುವರೆದಂತೆ ಮರಾಠರ ಶಕ್ತಿ ಕುಗ್ಗಿತು. ಮೈಸೂರು ಸಂಸ್ಥಾನವನ್ನು ಸುತ್ತುವರೆದ ಕನ್ನಡ ಭಾಗಗಳು ಬ್ರಿಟೀಷ್ ಪ್ರಾಂತ್ಯಗಳಲ್ಲೂ ಹೈದ್ರಾಬಾದಿನಲ್ಲೂ ಹಂಚಿಹೋಗಿದ್ದವು. ಕೊಡಗು ಬ್ರಿಟೀಷ್ ಕಮಿಷನರ್ ಆಡಳಿತಕ್ಕೆ ಒಳಗಾಯಿತು. ಅಲ್ಲದೇ ಮೈಸೂರು ಸಹ ನೇರವಾಗಿ ೧೮೩೧ ರಿಂದ ಬ್ರಿಟೀಷ್ ಕಮಿಷನರರ ಆಡಳಿತಕ್ಕೆ ಒಳಪಟ್ಟಿತ್ತು.

ಬ್ರಿಟೀಷರು ಭಾರತವನ್ನು ಕ್ರಮೇಣವಾಗಿ ಆಕ್ರಮಿಸಿಕೊಂಡಾಗ ಯಾವ ಯಾವ ಪ್ರದೇಶಗಳಲ್ಲಿ ಯಾವ ಯಾವ ಭಾಷೆಗಳಿದ್ದವೋ ಆಯಾ ಭಾಷೆಗಳನ್ನೇ ಆಯಾ ಪ್ರದೇಶಗಳ ಆಡಳಿತದಲ್ಲಿ ಬಳಸತೊಡಗಿದರು. ಆದರೆ ದಕ್ಷಿಣ ಭಾರತದಲ್ಲಿ ಅವರ ಅಧೀನದಲ್ಲಿದ್ದ ಪ್ರಾಂತ್ಯಗಳು ಭಾಷಾನುಗುಣವಾಗಿ ರೂಪಿತವಾಗಿರಲಿಲ್ಲ. ಹಳೆಯ ಮದ್ರಾಸು ಪ್ರಾಂತ್ಯದಲ್ಲಿ ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂ ಭಾಷೆಯನ್ನು ಬಳಸುವ ಭಾಗಗಳಿದ್ದವು. ಮುಂಬೈ ಪ್ರಾಂತ್ಯದಲ್ಲಿ ಮರಾಠಿ, ಗಾಹೂ, ಗುಜರಾತಿ ಪ್ರದೇಶಗಳ ಜೊತೆಗೆ ಕನ್ನಡ ಮಾತನಾಡುವವರ ಜಿಲ್ಲೆಗಳೂ ಸೇರಿಹೋಗಿದ್ದವು. ನಿಜಾಮರ ಅಧೀನಕ್ಕೊಳಪಟ್ಟ ಹೈದ್ರಾಬಾದ್ ಸಂಸ್ಥಾನದಲ್ಲಿ ಕನ್ನಡ ಜಿಲ್ಲೆಗಳೂ ಸೇರಿದ್ದವು. ಆಗಿನ ಮೈಸೂರು ಸಂಸ್ಥಾನ ಕನ್ನಡ ಪ್ರದೇಶವಾಗಿತ್ತು.

ಆಡಳಿತ ಭಾಷೆಯ ಗೊಂದಲ ಸೃಷ್ಟಿಯಾದದ್ದೇ ಇಲ್ಲಿಂದ ಎನ್ನಬಹುದು. ಆಗಿನ ಸಂದರ್ಭದಲ್ಲಿ ಬ್ರಿಟೀಷರು ತಮ್ಮ ಆಡಳಿತಕ್ಕೆ ಒಳಪಟ್ಟಿರುವ ಪ್ರದೇಶಗಳಲ್ಲಿ ಬಹತೇಕ ಬಹುಭಾಷಾ ಪ್ರಾಂತ್ಯಗಳಿದ್ದ ಕಾರಣ ಯಾವುದೇ ಒಂದು ಭಾಷೆಯನ್ನು ಆಡಳಿತ ಭಾಷೆಯಾಗಿ ಬಳಸುವಂತಿರಲಿಲ್ಲ. ಉತ್ತರ ಕರ್ನಾಟಕದಲ್ಲಿ ಸುಲ್ತಾನರ ಆಡಳಿತದಲ್ಲೂ ಹಳೆಯ ಮೈಸೂರು ರಾಜ್ಯದಲ್ಲಿ ಹೈದರ್, ಟಿಪ್ಪುಗಳ ಕಾಲದಲ್ಲೂ ಪರ್ಷಿಯನ್ ಮತ್ತು ಉರ್ದುಭಾಷೆಗಳ ಪ್ರಭಾವ ಇದ್ದರೂ ಕನ್ನಡ ಆಡಳಿತ ಭಾಷೆಯಾಗಿತ್ತು ಎನ್ನುವುದಕ್ಕೆ ಪುರಾವೆಗಳಿವೆ. ಬ್ರಿಟೀಷರು ದೇಶಿಯ ಭಾಷೆಯನ್ನೇ ಆಡಳಿತ ಭಾಷೆಯಾಗಿ ಬಳಸಬಹುದೆಂಬ ಪ್ರಶ್ನೆ ಬಂದಾಗ ಪರ್ಷಿಯನ್, ಸಂಸ್ಕೃತ ಇವೆರಡರಲ್ಲಿ ಒಂದನ್ನು ಸ್ವೀಕರಿಸಬಹುದೆಂಬ ವಾದವೂ ಇತ್ತು. ಆಸ್ಥಾನಗಳಲ್ಲಿ ಬಳಕೆಯ ಭಾಷೆಯೆಂದರೆ ಆಗಿನ ಸಂದರ್ಭದಲ್ಲಿ ಪರ್ಷಿಯನ್. ಅದನ್ನು ಬಳಸುವ ಬದಲು ಜನ ಆಡುವ ಭಾಷೆಯನ್ನೇ ಬಳಸಲು ಬ್ರಿಟೀಷ್ ಆಡಳಿತಗಾರರು ಬಯಸಿದರು. ಇದಕ್ಕೆ ಹಲವಾರು ಕಾರಣಗಳೂ ಇವೆ. ಆರಂಭದಲ್ಲಿ ಇದು ಅನಿವಾರ್ಯವೂ ಆಗಿತ್ತು. ಇಂಗ್ಲೀಷನ್ನು ಬಲ್ಲವರು ಬಹಳಷ್ಟು ಜನ ಭಾರತದಲ್ಲಿರಲಿಲ್ಲ. ಉನ್ನತ ಅಧಿಕಾರಿಗಳು ಮಾತ್ರ ಇಂಗ್ಲೀಷನ್ನು ಬಲ್ಲವರಾಗಿದ್ದು ಕೆಳಮಟ್ಟದ ನೌಕರ ವರ್ಗದವರು ಕೂಡಲೇ ಇಂಗ್ಲೀಷನ್ನು ಕಲಿಯುವುದು ಅಸಾಧ್ಯದ ಮಾತು. ಕೆಲವು ಇಂಗ್ಲೀಷ್ ಅಧಿಕಾರಿಗಳು ದೇಶಿಯ ಭಾಷೆಯನ್ನು ಕಲಿತು ಆ ಭಾಷೆಯ ಸಹಾಯದಿಂದ ಆಡಳಿತವನ್ನು ನಡೆಸುವುದು ಹೆಚ್ಚು ಸುಲಭವೆನಿಸಿತ್ತು. ಅಲ್ಲದೆ ಇಲ್ಲಿಯ ಜನರ ಹಿತಸಾಧನೆಯೇ ತಮ್ಮ ಉದ್ದೇಶ ಎಂಬುದನ್ನು ಅವರು ಸಾಬೀತುಪಡಿಸಬೇಕಾಗಿತ್ತು. ಆದ್ದರಿಂದ ಅವರು ಪ್ರಾದೇಶಕ ಭಾಷೆಯಲ್ಲಿ ಆಡಳಿತ ನಡೆಸುವ ತಮ್ಮ ಅಭಿಲಾಷೆಯನ್ನು ಆಗಾಗ ಒತ್ತಿ ಹೇಳುತ್ತಿದ್ದರು. ಇದರಂತೆ ಹಲವಾರು ಪ್ರಖ್ಯಾತ ವಿದ್ವಾಂಸರು ಇಲ್ಲಿಯ ಭಾಷೆಯನ್ನು ಕಲಿತು ಅದರಲ್ಲಿಯೇ ಕೆಲಸಮಾಡಿದರು.

ಉದಾಹರಣೆಗಾಗಿ: ಈ.ಪಿ.ರೈಸ್ – ಕನ್ನಡ ಸಾಹಿತ್ಯ ಚರಿತ್ರೆ.

ವಿಲಿಯಂಕ್ಯಾರಿ ವ್ಯಾಕ್ಯುರೇಟ್ – ಕನ್ನಡ ವ್ಯಾಕರಣ

ಫರ್ಗ್ಯಸನ್ – ವಾಸ್ತುಶಿಲ್ಪ

ಆರ್.ಎಫ್.ಕಿಟಲ್ – ಕನ್ನಡ ನಿಘಂಟು.

ರಾಬರ್ಟ ಕಾಲ್ಡವೆಲ್ – ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನ

ಮೆಕೆಂಜೆ – ಸ್ಥಳ ನಾಮ ಮತ್ತು ಕೈಫಿಯತ್ತುಗಳು.

ಇದಲ್ಲದೇ ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಮಾಡುವಲ್ಲಿ ಅನೇಕರು ಶ್ರಮಿಸಿದ್ದಾರೆ. ಆಂಗ್ಲರ ಆಡಳಿತದಲ್ಲಿ ಆಡಳಿತ ಭಾಷೆ ಕನ್ನಡದಲ್ಲೇ ಇದ್ದದ್ದು ಹಾಗೂ ಕಚೇರಿ ವ್ಯವಹಾರಗಳಲ್ಲೆಲ್ಲ ಕನ್ನಡವೇ ಬಳಕೆಯಾಗುತ್ತಿತ್ತು ಎನ್ನುವುದಕ್ಕೆ ಪುರಾವೆಗಳು ಸಾಕಷ್ಟು ದೊರಕುತ್ತವೆ.

ಸರ್ಕಾರಿ ಪ್ರಕಟಣೆ, ವರದಿ, ಕರಪತ್ರ, ಭಾಷಣ, ಕೈಪಿಡಿ, ಪತ್ರವ್ಯವಹಾರ, ಅಧಿಸೂಚನೆ ಮುಂತಾದವುಗಳೆಲ್ಲವು ಕನ್ನಡದಲ್ಲಿಯೇ ನಡೆಯುತ್ತಿದ್ದವೆಂಬುದಕ್ಕೆ ಹಲವಾರು ದಾಖಲೆಗಳಿವೆ. ಇದಕ್ಕೆ ಸಂಬಂಧಪಟ್ಟ ಹೆಚ್ಚಿನ ವಿವರಣೆ ಮತ್ತು ವಿಚಾರಗಳನ್ನು ಮಹದೇವ ಬಣಕಾರರು ರಚಿಸಿದ "ಆಂಗ್ಲರ ಆಡಳಿತದಲ್ಲಿ ಕನ್ನಡ" ಎಂಬ ಕೃತಿಯಿಂದ ತಿಳಿಯಬಹುದಾಗಿದೆ.

ರಿಕೆಟ್ಸ್ ಎಲ್. ಎಂಬುವವರ ಸಾರಥ್ಯದಲ್ಲಿ 'ಮೈಸೂರು ಗೆಜೆಟ್' ಪ್ರಾರಂಭವಾಯಿತು. ಅಲ್ಲಿನ ಆಡಳಿತ ವ್ಯವಹಾರಗಳನ್ನು ಜನಸಾಮಾನ್ಯರ ಭಾಷೆಯಲ್ಲಿ ಮುದ್ರಿಸಿ ಪ್ರಚಾರ ಪಡಿಸಿದರೆ ಆಡಳಿತವು ಹೆಚ್ಚು ಪರಿಣಾಮಕಾರಿ ಆಗುವುದೆಂದು ಅವರು ನಂಬಿದ್ದರು.

ಆಗಿನ ಸಂದರ್ಭದಲ್ಲಿ 'ಮೈಸೂರು ವೃತ್ತಾಂತ ಭೋಧಿನಿ' ಎಂಬ ಕನ್ನಡ ಜನಪ್ರಿಯ ಪತ್ರಿಕೆ ೧೮೮೦ರಲ್ಲಿ ಪ್ರಾರಂಭವಾಯಿತೆಂಬ ಮಾಹಿತಿ ಆಡಳಿತ ಕನ್ನಡ ಪುಸ್ತಕದ ಪುಟ ೨೨ರಲ್ಲಿ ದೊರೆಯುತ್ತದೆ. ಇದರಿಂದ ಕಂಡುಬರುವುದೇನೆಂದರೆ ಆಡಳಿತದಲ್ಲಿ ಆಗಿನ ಸಂದರ್ಭದಲ್ಲಿ ಕನ್ನಡ ದಿನ ಪತ್ರಿಕೆ ಪ್ರಚಾರಕ್ಕೆ ಬಂದದ್ದು ಒಂದು ಸಾಧನೆಯೇ ಸರಿ. ಕನ್ನಡ ಆಗಿನ ಸಂದರ್ಭದಲ್ಲಿ ಆಡಳಿತದಲ್ಲಿ ಬರೆಯುವ ಪತ್ರಗಳು, ನ್ಯಾಯಾಲಯದಲ್ಲಿ ಕನ್ನಡದ ಬಳಕೆ, ವಾದ-ವಿವಾದ ಮತ್ತು ತೀರ್ಮಾನಗಳ ವಿಷಯಗಳಿಗೆ ಸಂಬಂಧಿಸಿದಂತೆ ಅಲ್ಲಲ್ಲಿ ಕನ್ನಡ ಭಾಷೆ ಬಳಕೆಯಾಗುತ್ತಿತ್ತೆಂದು ತಿಳಿಯಬಹುದಾಗಿದೆ.

ಕನ್ನಡದಲ್ಲಿ ಪರಿಪೂರ್ಣ ನಿಘಂಟನ್ನು ರಚಿಸಿದ-ಆರ್.ಎಫ್.ಕಿಟ್ಟೆಲ್, ದ್ರಾವಿಡಭಾಷೆಗಳ ತುಲನಾತ್ಮಕ ಅಧ್ಯಯನ ನಡೆಸಿದ ಕಾಲ್ಡವೆಲ್, ಕನ್ನಡ ಸಾಹಿತ್ಯ ಚರಿತ್ರೆ ಬರೆದ ಬಿ.ಎಲ್.ರೈಸ್, ಕನ್ನಡದಲ್ಲಿ ಆಡಳಿತ ನಡೆಸಿದ ಕಬ್ಬನ್, ಹಡ್ಸನ್ ಮುಂತಾದವರು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲು ಪ್ರಯತ್ನಪಟ್ಟಿರುವುದು ಮೇಲ್ನೋಟಕ್ಕೆ ಇತಿಹಾಸದಿಂದ ತಿಳಿಯುತ್ತೇವೆ.

ಕನ್ನಡ ಪ್ರದೇಶಗಳನ್ನೆಲ್ಲಾ ಒಂದೇ ಆಡಳಿತದಲ್ಲಿ ಒಂದುಗೂಡಿಸಬೇಕೆಂದು ಸೂಚಿಸಿದವರಲ್ಲಿ ಸರ್‌ಥಾಮಸ್ ಮನ್ರೊ ಮೊದಲಿಗನಾಗುತ್ತಾನೆ. ಅಲ್ಲದೆ ಭಾಷೆಬಾರದ ಯುರೋಪಿಯನ್ ನ್ಯಾಯಾಧೀಶರಿಂದ ಮುಗ್ಧ ಕನ್ನಡಿಗರು ಘೋರ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆಂದು ಸ್ಥಳೀಯ ನ್ಯಾಯಾಧೀಶರನ್ನೇ ನೇಮಕಮಾಡಿ ಆಡಳಿತದಲ್ಲಿ ಕನ್ನಡವನ್ನೇ ಬಳಸಿದವರಲ್ಲಿಯೂ ಮೊದಲಿಗನಾಗುತ್ತಾನೆ. ಸರ್ ರಾಬರ್ಟಅಬರ್ ಕ್ರಾಂಬೆ ಅವರು ಕೊಡಗಿನ ನೊಂದಣಿ ಅಧಿಕಾರಿಯಾಗಿ ಕನ್ನಡದಲ್ಲೇ ಕಾಗದಪತ್ರಗಳನ್ನು ನೊಂದಾಯಿಸಿದ. ವಾಲ್ಟರ್ ಇಲಿಯಟ್ ಧಾರವಾಡದಲ್ಲಿ ಮಾರಾಠ ಶಾಲೆಗಳನ್ನು ಪ್ರತಿಭಟಿಸಿ ಕನ್ನಡ ಶಾಲೆಯನ್ನು ತೆರೆದ. ಎ.ಎಫ್.ಜೆ. ಮೆಕಾರ್ಡಿ ಬಳ್ಳಾರಿಯ ಜಿಲ್ಲಾಧಿಕಾರಿಯಾಗಿದ್ದಾಗ ಇಲ್ಲಿನ ಆಡಳಿತದಲ್ಲಿ ಜನರು ಕನ್ನಡವನ್ನೂ ಅಧಿಕಾರಿಗಳು ತೆಲುಗಿನಲ್ಲಿಯೂ ಮಾತನಾಡುವುದನ್ನು ಕಂಡು ಕನ್ನಡಬಲ್ಲ ಅಧಿಕಾರಿಗಳನ್ನು ನೇಮಕಮಾಡಿ ಬಳ್ಳಾರಿ ಜಿಲ್ಲೆಯ ಸಮಗ್ರ ಆಡಳಿತವನ್ನು ಕನ್ನಡದಲ್ಲಿಯೇ ನಡೆಸಿದ. ಟಿ.ಜಿ ಕ್ಲಾರ್ಕ ಕಚೇರಿಗೆ ಬರುವ ಅರ್ಜಿಗಳು ಕನ್ನಡದಲ್ಲಿರಬೇಕೆಂದು ಆದೇಶ ಮಾಡಿದ ದಿಟ್ಟ ಆಧಿಕಾರಿ. ಸರ್ ಮಾರ್ಕ ಕಬ್ಬನ್ ಪ್ರತಿ ತಾಲೂಕು ಕಚೇರಿಯಲ್ಲಿ ಅಧಿಕೃತ ಪತ್ರವ್ಯವಹಾರ ಕನ್ನಡದಲ್ಲಿ ನಡೆಯಬೇಕೆಂದು ಆಜ್ಞೆಮಾಡಿದ. ಹಡ್ಸನ್ ಅರವತ್ತಕ್ಕೂ ಹೆಚ್ಚು ಕನ್ನಡ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ. ಕನ್ನಡ ಬಾರದೇ ಇರುವ ಅಧಿಕಾರಿಗಳು ಸ್ವಯಂ ನಿವೃತ್ತಿಯಾದದ್ದನ್ನು ಆಂಗ್ಲರ ಆಡಳಿತದ ಇತಿಹಾಸದಲ್ಲಿ ಕಾಣುತ್ತೇವೆ. ಉದ್ದೇಶ ಏನೇ ಇರಲಿ ಈ ರೀತಿಯಾಗಿ ಆಡಳಿತದಲ್ಲಿ ಕನ್ನಡವನ್ನು ಬಳಸುವ ನಿಟ್ಟಿನಲ್ಲಿ ಇಂಗ್ಲೀಷರ ಪಾಲು ಇದೆ.

ಆದರೆ ಮುಂದುವರೆದಂತೆ ಇಂಗ್ಲೀಷಿನ ಪ್ರಭಾವ ಕ್ರಮೇಣವಾಗಿ ಬೆಳೆಯುತ್ತಾ ಹೋಯಿತು. ಪ್ರಸ್ತುತ ಆಳುವವರ ಭಾಷೆಯಾದ ಇಂಗ್ಲೀಷನ್ನು ಕಲಿಯಲು ಇಲ್ಲಿಯವರು ತೊಡಗಿಕೊಂಡರು. ಬ್ರಿಟೀಷ್ ಆಡಳಿತ ಪದ್ಧತಿ ಜಾರಿಗೆ ಬಂದಾಗ ಸಹಜವಾಗಿಯೇ ಪಾಶ್ಚಾತ್ಯ ಪರಿಕಲ್ಪನೆಗಳ ಅಭಿವ್ಯಕ್ತಿಗೆ ಇಂಗ್ಲೀಷ್ ಹೆಚ್ಚಾಗಿ ಬಳಕೆಯಾಗತೊಡಗಿತು. ಮೈಸೂರು ಒಂದನ್ನು ಬಿಟ್ಟರೆ ಉಳಿದ ಭಾಗಗಳು ಬ್ರಿಟೀಷರ ಆಡಳಿತಕ್ಕೊಳಪಟ್ಟದ್ದರಿಂದಲೂ ಕನ್ನಡವೇ ಮೇಲಿಂದ ಕೆಳಗಿನ ಹಂತದವರೆಗೆ ಬಳಕೆಯಾಗುವುದು ಸಾಧ್ಯವಿರಲಿಲ್ಲ. ಸ್ಥಳೀಯ ಆಡಳಿತದಲ್ಲಿ ಕನ್ನಡವನ್ನು ಬಳಸಲು ಪ್ರೋತ್ಸಾಹಿಸುತ್ತಿದ್ದರು ನಿಜ ಆದರೆ ಪಾಶ್ಚಾತ್ಯ ಮಾದರಿಯ ಶಿಕ್ಷಣ ಪದ್ಧತಿ ಭಾರತದಲ್ಲಿ ಜಾರಿಗೆ ಬರತೊಡಗಿದಾಗ ವಿಜ್ಞಾನ ಮುಂತಾದ ವಿಚಾರಗಳ ಬೋಧನೆಗೆ ಇಂಗ್ಲೀಷೆ ಸೂಕ್ತ ಮಾಧ್ಯಮವೆಂಬುದು ಅನೇಕರ ನಂಬಿಕೆಯಾಗಿತ್ತು. ಆಗಿನ ಸಂದರ್ಭದಲ್ಲಿ ಹೊಸ ವಿಷಯಗಳನ್ನು ಕುರಿತಂತೆ ಭಾರತೀಯ ಭಾಷೆಗಳಲ್ಲಿ ರಚಿತವಾದ ಪಠ್ಯಪುಸ್ತಕಗಳಿಲ್ಲವೆಂಬುದು ಕಾರಣವಾಗಿತ್ತು. ಭಾರತೀಯರಿಗೆ ಇಂಗ್ಲೀಷ್ ಶಿಕ್ಷಣ ನೀಡುವುದರಿಂದ ಅವರು ಸಹಜವಾಗಿಯೇ ಬ್ರಿಟೀಷರಾದ ತಮ್ಮ ಬಗ್ಗೆ ಅಭಿಮಾನ ತಳೆವರೆಂದು, ತಮ್ಮಂತೆಯೇ ಚಿಂತಿಸಬಲ್ಲ, ತಮ್ಮ ಅಭಿಪ್ರಾಯಗಳನ್ನು ಒಪ್ಪುವ, ತಮಗೆ ಅನುಕೂಲವಾಗಿ ವರ್ತಿಸುವರೆಂದು, ಇವರ ಮೂಲಕ ಆಡಳಿತ ನಡೆಸುವುದು ಸುಲಭವೆಂದೂ ಅನೇಕ ಬ್ರಿಟೀಷ್ ಆಡಳಿತಗಾರರು ಭಾವಿಸಿದ್ದರು.

ಇದಕ್ಕೆ ಉದಾಹರಣೆ : ಲಾರ್ಡ ಮೆಕಾಲೆಯು 'ಬಣ್ಣದಲ್ಲಿ ಭಾರತೀಯರಾಗಿದ್ದೂ ರುಚಿಧರ್ಮ, ಅಭಿಪ್ರಾಯ, ನೀತಿ ಮತ್ತು ಬುದ್ಧಿಮತ್ತೆಗಳಲ್ಲಿ ಆಂಗ್ಲೇಯರಂತಿರುವ ಹೊಸ ಮಾದರಿಯ ವ್ಯಕ್ತಿಗಳನ್ನು ಇಲ್ಲಿಯ ಶಿಕ್ಷಣ ಸಂಸ್ಥೆಗಳಲ್ಲಿ ತಯಾರಿಸಬೇಕು' ಎಂದು ಅವನು ಟಿಪ್ಪಣೆಗಳನ್ನು ಬರೆದಿಟ್ಟಿದ್ದ.

ಗರ್ವನರ್-ಜನರಲ್ ಲಾರ್ಡ ವಿಲಿಯಂ ಬೆಂಟಿಕ್ : 'ಇಂಗ್ಲೀಷ್ ಶಿಕ್ಷಣ ಮತ್ತು ವಿಜ್ಞಾನ ಬೋಧನೆಗೆ ಮಾತ್ರ ಸರ್ಕಾರದ ಹಣವನ್ನು ಮಾಡತಕ್ಕದ್ದು' ಎಂಬ ನೀತಿಯನ್ನು ಜಾರಿಗೆ ತಂದನು.

ಈ ಮೇಲಿನ ವಿಷಯಗಳನ್ನು ಎಚ್ಚೆಸ್ಕೆ ಅವರ ಆಡಳಿತ ಕನ್ನಡ ಕೃತಿಯ ಪುಟ ಸಂಖ್ಯೆ ಹದಿನೆಂಟರಲ್ಲಿ ವಿವರಿಸಿದ್ದಾರೆ. ಅವರ ವಿಷಯವನ್ನೇ ಇಲ್ಲಿ ಎರವಲಾಗಿ ಪಡೆಯಲಾಗಿದೆ. ಈ ಹಿನ್ನಲೆಯಲ್ಲಿಯೇ ಬಹು ಬೇಗ ಇಂಗ್ಲೀಷಿನಲ್ಲೇ ಕಲಿತವರ ದಂಡು ಸೃಷ್ಟಿಯಾಯಿತು. ಆಡಳಿತದಲ್ಲೂ ಇಂಗ್ಲೀಷ್ ಹೆಚ್ಚುಹೆಚ್ಚಾಗಿ ಪ್ರವೇಶ ಮಾಡಲು ಶಿಕ್ಷಣ ಪದ್ಧತಿಯಿಂದ ನೆರವಾಯಿತು. ಅಲ್ಲದೇ ಸ್ಥಳೀಯ ಭಾಷೆಯ ಸ್ಥಾನದಲ್ಲಿ ಕ್ರಮೇಣ ಇಂಗ್ಲೀಷ್ ಬಂತೆಂಬುದು ಅವರ ಅಭಿಪ್ರಾಯ.

ಆಂಗ್ಲರ ಆಡಳಿತದಲ್ಲಿ ಆಡಳಿತ ಭಾಷೆಯಾಗಿ ಕನ್ನಡ ಇದ್ದು ಕಚೇರಿ ವ್ಯವಹಾರಗಳಲ್ಲಿ ಬಳಕೆಯಲ್ಲಿತ್ತು. ಕಡೆತಗಳು, ರಾಜ್ಯಪಪತ್ರಗಳು, ಜ್ಞಾಪನಾ ಪತ್ರಗಳು, ಪತ್ರವ್ಯವಹಾರಗಳು, ಅಧಿಸೂಚನೆಗಳು, ಸರ್ಕಾರಿ ಪ್ರಕಟಣೆಗಳು, ಕೈಪಿಡಿಗಳು, ಸ್ವೀಕೃತಿಗಳು ಮುಂತಾದ ಕಚೇರಿ ಪತ್ರ ವ್ಯವಹಾರಗಳಲ್ಲಿ ಕನ್ನಡ ಭಾಷೆ ಬಳಕೆಯಲ್ಲಿತ್ತು ಎಂಬುದಕ್ಕೆ ದಾಖಲೆಗಳಿವೆ. ಆಂಗ್ಲರು ತಮ್ಮ ಆಡಳಿತದ ಕಾಲದಲ್ಲಿ ಭಾಷಣ, ವರದಿಗಳು ಮತ್ತು ಕರಪತ್ರ ವ್ಯವಹಾರಗಲೆಲ್ಲವೂ ಕನ್ನಡ ಭಾಷೆಯಲ್ಲೆ ಇರಬೇಕೆಂದು ತೀರ್ಮಾನಿಸಿದ್ದರು. ಇದರ ಉದ್ದೇಶ ಸರ್ಕಾರದ ಪ್ರತಿಯೊಂದು ನಿಯಮಾವಳಿ ಕೂಡ ಜನಸಾಮಾನ್ಯರಿಗೆ

ಮುಟ್ಟಬೇಕು. ಆದ್ದರಿಂದ ಅವು ಜನಸಾಮಾನ್ಯರ ಭಾಷೆಯಲ್ಲೇ ಪ್ರಕಟವಾಗಬೇಕೆಂದು ಮನಗಂಡಿದ್ದರು. ಇದಕ್ಕೆ ಸಂಬಂಧಪಟ್ಟ ಉದಾಹರಣೆಗಳನ್ನು ಮಹದೇವ ಬಣಕಾರರ ಆಂಗ್ಲರ ಆಡಳಿತದಲ್ಲಿ ಕನ್ನಡ ಕೃತಿಯಲ್ಲಿ ವಿವರವಾಗಿ ನೋಡಬಹುದಾಗಿದೆ.

ಒಟ್ಟಿನಲ್ಲಿ ಬ್ರಿಟೀಷ್ ಸಾಮ್ರಾಜ್ಯದ ಕಾಲದಲ್ಲಿ ಆಡಳಿತ ಭಾಷೆಯನ್ನು ಕುರಿತಂತೆ ಸ್ಥೂಲವಾಗಿ ಮೂರು ಹಂತಗಳನ್ನು ಗುರುತಿಸಬಹುದೆಂದು ಎಚ್ಚೆಸ್ಕೆ ಅವರು ಅಭಿಪ್ರಾಯ ಪಡುತ್ತಾರೆ.

ಮೊದಲನೆಯದಾಗಿ : ಕಂಪನಿಯ ಆಡಳಿತ ಪ್ರಾರಂಭವಾದಾಗ ಇಂಗ್ಲೀಷ್ ತಿಳಿದವರ ತಂಡ ದೇಶದಲ್ಲಿರಲಿಲ್ಲವಾದ್ದರಿಂದ ಆಡಳಿತ ಸೌಲಭ್ಯಕ್ಕಾಗಿ ಇಂಗ್ಲೀಷರೇ ಇಲ್ಲಿಯ ಭಾಷೆ ಕಲಿಯುವುದು ಅನಿವಾರ್ಯವಾಗಿತ್ತು.

ಎರಡನೆಯದಾಗಿ : ವಾಸ್ತವವಾಗಿ ಭಾರತೀಯ ಭಾಷೆಗಳಿಗೆ ವಿರೋಧವಾಗಿದ್ದು ಪರ್ಷಿಯನ್ ಭಾಷೆಯೇ ಹೊರತು ಇಂಗ್ಲೀಷಲ್ಲ ಎಂಬ ಭಾವನೆಯನ್ನು ಅವರು ಬಿತ್ತಿದರು.

ಮೂರನೆಯದಾಗಿ : ಶಿಕ್ಷಣದಲ್ಲಿ ಇಂಗ್ಲೀಷನ್ನು ಬೇರೂರಿಸುವುದೂ ಆ ಮೂಲಕ ದೇಶಿಯರಲ್ಲಿ ಅದರ ಬಗ್ಗೆ ಅಭಿಮಾನ ಬೆಳೆಸಿ, ಇಂಗ್ಲೀಷ್ ಇಲ್ಲದಿದ್ದರೆ ಆಧುನಿಕ ಜ್ಞಾನವಾಗಲಿ ವ್ಯವಹಾರವಾಗಲಿ ಸಾಧ್ಯವಾಗದೆಂಬ ಭಾವನೆ ಮೂಡಿಸಿ, ಇಲ್ಲಿಯ ಜನರೇ ಸ್ವಂತ ಇಚ್ಛೆಯಿಂದ ಇಂಗ್ಲೀಷ್ ಕಲಿಯುವಂತೆ, ಇಂಗ್ಲೀಷಿನಲ್ಲಿ ವ್ಯವಹಾರ ಮಾಡುವಂತೆ ಪರಿವರ್ತನೆಗೊಳಿಸಿದ್ದು.

ಈ ಮೇಲಿನ ಮೂರನೆಯ ವಿಚಾರವನ್ನು ಅನೇಕರು ಇಂಗ್ಲೀಷನ್ನು ಕಲಿಯುವುದರ ಮೂಲಕ ಆಧುನಿಕ ವಿಚಾರಗಳಿಗೆ ತಾವೂ ಪಾಶ್ಚಾತ್ಯರಂತೆ ಮುನ್ನಡೆ ಸಾಧಿಸಬಹುದೆಂದು ಭಾವಿಸಿದರು. ಆದರೆ ಬ್ರಿಟೀಷ್ ಸಾವ್ರಾಜ್ಯದ ಸ್ಥಿರತೆಗಾಗಿ ಇಂಗ್ಲೀಷನ್ನು ಉಪಯೋಗಿಸಬೇಕೆಂಬ ಧೋರಣೆಯಿಂದಾಗಿಯೂ, ಪ್ರಭುಗಳ ಭಾಷೆ ಕಲಿಯುವುದು ಲಾಭಕರವೆಂದು ಹೆಚ್ಚು ಜನ ಭಾವಿಸತೊಡಗಿದ್ದರಿಂದಾಗಿಯೂ ಕ್ರಮೇಣವಾಗಿ ಆಡಳಿತದಲ್ಲಿ ಇಂಗ್ಲೀಷ್ ಭಾಷೆ ನೆಲೆಯೂರಲು ಸಹಕಾರಿಯಾಯಿತು. ಅಲ್ಲದೇ ಭಾರತೀಯರ ಮುಖಾಂತರವಾಗಿಯೇ ಭಾರತದಲ್ಲಿ ಆಡಳಿತ ನಡೆಸಲು ಸಾಧ್ಯವಾಯಿತು. ಇಂದಿಗೂ ಆಡಳಿತದಲ್ಲಿ ಅದರ ಛಾಯೆ ಹಾಗೆಯೇ ಮುಂದುವರೆದುಕೊಂಡು ಬಂದಿದೆ.

೨.೩. ಆಡಳಿತ ಭಾಷೆಯಾಗಿ ಕನ್ನಡದ ಸ್ವತಂತ್ರ್ಯ ನಂತರದ ಇತಿಹಾಸ

ಕರ್ನಾಟಕದಲ್ಲಿ ಕನ್ನಡ ಭಾಷೆ ಒಂದೇ ಆಗಿದ್ದರೂ ಸಹಿತ ಕರ್ನಾಟಕ ವಿವಿಧ ಭಾಗಗಳಲ್ಲಿ ಆಡುವ ಭಾಷೆಯ ರೀತಿ ಭಿನ್ನವಾಗಿದೆ. ಆಡಳಿತದ ದೃಷ್ಟಿಯಿಂದಲೂ ಕರ್ನಾಟಕ ವಿವಿಧ ಪ್ರದೇಶಗಳಿಗೆ ಒಳಪಟ್ಟಿತ್ತು. ಈ ಹಿಂದೆ ರಾಜಕೀಯ ತಳಹದಿಯ ಮೇಲೆ ಕರ್ನಾಟಕದ ಬೇರೆ ಬೇರೆ ಪ್ರದೇಶಗಳು ಬೇರೆ ಬೇರೆ ಆಡಳಿತಕ್ಕೆ ಒಳಪಟ್ಟಿದ್ದ ಕಾಲದಲ್ಲಿ ಈ ಭಿನ್ನತೆ ಕಂಡುಬರಲಿಲ್ಲ. ಏಕೆಂದರೆ ಆ ಕಾಲದಲ್ಲಿ ಈ ಅನೇಕ ಭಾಗಗಳ ಜನರ ನಡುವೆ ಹೆಚ್ಚಿನ ಸಂಬಂಧ ಸಂಪರ್ಕಗಳು ಇರಲಿಲ್ಲ. ಮುಂಬಯಿ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ ವೆಂದು ಕರೆಯುತ್ತಿದ್ದರಾದರೂ ಕರ್ನಾಟಕದ ಜನತೆಯು ಆಡುವ ಭಾಷೆ ಬೇರೆ ಬೇರೆಯೇ ಅನಿಸುತ್ತಿತ್ತು.

ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಜಾರಿಗೆಬಂದ ಸಂವಿಧಾನದಲ್ಲಿ ಭಾರತ ಒಕ್ಕೂಟದ ಮತ್ತು ರಾಜ್ಯಗಳ ಅಧಿಕೃತ ಭಾಷೆಗಳ ಬಗ್ಗೆ ವಿವರಣೆಯನ್ನು ಅನುಚ್ಛೇದ ೩೪೩ ರಿಂದ ೩೪೭ ರವರೆಗೆ ನೀಡಲಾಗಿದೆ. ಇವುಗಳಲ್ಲಿ ಮೊದಲ ಎರಡು ಅನುಚ್ಛೇದಗಳು ಒಕ್ಕೂಟದ ಅಧಿಕೃತ ಭಾಷೆಯನ್ನು ಕುರಿತವು. ಮುಂದಿನ ಮೂರು ಅನುಚ್ಛೇದಗಳು ರಾಜ್ಯಗಳ ಅಧಿಕೃತ ಭಾಷೆಗಳಿಗೆ ಸಂಬಂಧಿಸಿದವು. 'ಒಂದು ರಾಜ್ಯದ ವಿಧಾನ ಮಂಡಲ ಕಾನೂನಿನ ಮೂಲಕ ಆ ರಾಜ್ಯದಲ್ಲಿ ಬಳಕೆಯಲ್ಲಿರುವ ಯಾವುದೇ ಒಂದು ಅಥವಾ ಹೆಚ್ಚಿನ ಭಾಷೆಯನ್ನು ಯಾವುದೇ ಅಧಿಕೃತ ಉದ್ದೇಶಗಳಿಗಾಗಿ ಅಂಗೀಕರಿಸಬಹುದು'ಎಂದು ಸಂವಿಧಾನದಲ್ಲಿ ಹೇಳಿದೆ. ಆದರೆ ವಾಸ್ತವವಾಗಿ ಭಾರತದ ಸಂವಿಧಾನವನ್ನು ರಚಿಸಿದಾಗ ಭಾಷೆಗನುಗುಣವಾಗಿ ರಾಜ್ಯಗಳ ವಿಂಗಡಣೆ ಆಗಿರಲಿಲ್ಲ. ಮೈಸೂರಿನ ಹೊರಗಿನ ಕನ್ನಡ ಭಾಷಾ ಪ್ರದೇಶಗಳು ಸುತ್ತಣ ಪ್ರದೇಶಗಳಿಗೆ ಹಂಚಿಹೋಗಿದ್ದವು. ಮುಂಬಯಿ, ಮದ್ರಾಸು ಬಹುಭಾಷಾ ರಾಜ್ಯಗಳಾಗಿದ್ದವು. ಮುಂಬಯಿಯಲ್ಲಿ ಗುಜರಾತಿ, ಮರಾಠಿ ಮತ್ತು ಕನ್ನಡ ಪ್ರದೇಶಗಳಿದ್ದವು. ಮದ್ರಾಸ್ ರಾಜ್ಯದಲ್ಲಿ ತೆಲುಗು, ಕನ್ನಡ, ತಮಿಳು ಭಾಷಾ ಪ್ರದೇಶಗಳಿದ್ದವು. ಇಂತಹ ಒಂದು ಸಂದರ್ಭದಲ್ಲಿ ಯಾವುದೇ ಒಂದು ರಾಜ್ಯದಲ್ಲಿ ಒಂದು ಭಾಷೆಯನ್ನು ಅಧಿಕೃತ ಭಾಷೆಯಾಗಿ ಅಂಗೀಕರಿಸಲು ಸಾಧ್ಯವಿರಲಿಲ್ಲ. ಒಂದೊಂದು ರಾಜ್ಯಕ್ಕೆ ಒಂದೊಂದು ಅಧಿಕೃತ ಭಾಷೆ ಆಗಿನ ಸಂದರ್ಭದಲ್ಲಿ ಆಗುವುದು ಕೆಲರಾಜ್ಯಗಳಲ್ಲಿ ಅಸಾಧ್ಯವೇ ಆಗಿತ್ತು.

ಮೇಲಿನ ವಿಷಯವನ್ನು ಮನಗಂಡು ೧೯೫೬ರಲ್ಲಿ ರಾಜ್ಯ ಪುನರ್ವಿಂಗಡಣಾ ಆಯೋಗದ ವರದಿಯ ಆಧಾರದ ಮೇಲೆ ಸಿದ್ಧವಾದ ರಾಜ್ಯ ಪುನರ್ವಿಂಗಡನಾ ಅಧಿನಿಯಮವು ಜಾರಿಗೆ ಬಂದಿತು. ಇದರ ಪ್ರಕಾರ ಭಾಷೆಗಳ ಆಧಾರದ ಮೇಲೆ ರಾಜ್ಯಗಳ ಮರುವಿಂಗಡಣೆಯಾಯಿತು. ಈ ಸಂದರ್ಭದಲ್ಲಿ ಮುಂಬಯಿ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ ಪ್ರದೇಶಗಳು ಸೇರಿಕೊಂಡು ಹೊಸ ರಾಜ್ಯವಾಗಿ ರಚನೆಯಾಯಿತು. ವಿವಿಧ ರಾಜ್ಯಗಳಲ್ಲಿ ಹಂಚಿ ಹೋಗಿದ್ದ ಕರ್ನಾಟಕದ ಕೆಲವೊಂದು ಪ್ರದೇಶಗಳು ಕರ್ನಾಟಕಕ್ಕೆ ಸೇರಿ ಕರ್ನಾಟಕದ ಏಕೀಕರಣವಾಯಿತು. ೧೯೫೬ ನವಂಬರ್ ೧ರಂದು ಮೈಸೂರು ರಾಜ್ಯದ ಉದಯವಾಯಿತು. ಆದರೆ ಇದು ಮುಂದೆ ೧೯೭೩ರಲ್ಲಿ ಕರ್ನಾಟಕ ರಾಜ್ಯವೆಂದು ನಾಮಕರಣ ಮಾಡಲಾಯಿತು.

೧೯೬೩ರಲ್ಲಿ ಅಂಗೀಕೃತವಾದ ರಾಜ್ಯಭಾಷಾ ಅಧಿನಿಯಮದ ಪ್ರಕಾರ ಕನ್ನಡವು ಕರ್ನಾಟಕ ರಾಜ್ಯದ ಆಡಳಿತ ಭಾಷೆಯಾಯಿತು. ಆದರೆ ಇದಕ್ಕೊಂದು ಅಡ್ಡಿ ಇತ್ತು. ಅದೇನೆಂದರೆ ರಾಜ್ಯದ ವಿಧಾನಮಂಡಲದಲ್ಲಿ ಮಂಡಿಸಲಾಗುವ ಮಸೂದೆಗಳೂ, ತಿದ್ದುಪಡಿಗಳೂ, ಅಂಗೀಕರಿಸುವ ಅಧಿನಿಮಗಳು, ರಾಜ್ಯಪಾಲರು ಹೊರಡಿಸುವ ಆದೇಶಗಳು ಎಲ್ಲವೂ ಇಂಗ್ಲೀಷ್ ಆಗಿರತಕ್ಕದ್ದೆಂದು ಸಂವಿಧಾನದಲ್ಲಿ ಹೇಳಲಾಗಿತ್ತು. ಆದರೆ ಇವುಗಳಲ್ಲಿಯೂ ಸಹಿತವಾಗಿ ಕನ್ನಡವನ್ನು ಬಳಸಬಹುದೆಂಬ ತಿದ್ದುಪಡಿಯನ್ನು ೧೯೮೭ ರಲ್ಲಿ ತರಲಾಯಿತು. ಇದರಿಂದ ಸರ್ಕಾರದ ಕಾರ್ಯಾಂಗದೊಂದಿಗೆ ಶಾಸಕಾಂಗದ ಭಾಷೆಯೂ ಕನ್ನಡವಾಗಿರಲು ಅವಕಾಶ ಕಲ್ಪಿತವಾಯಿತು.

೧೯೬೩ರ ರಾಜ್ಯಭಾಷಾ ಅಧಿನಿಯಮದ ಪ್ರಕಾರ ರಾಜ್ಯದ ಆಡಳಿತ ಭಾಷೆ ಕನ್ನಡವಾಯಿತು. ಆದರೆ ಅಲ್ಲಿಗೆ ಯಾವುದೇ ರೀತಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆ ಆಗಲಿಲ್ಲ ಮತ್ತು ಆಗುತ್ತಿಲ್ಲ ಎಂಬ ಕೂಗು ಅಲ್ಲಲ್ಲಿ ಕೇಳಿಬರುತ್ತಿತ್ತು. ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕೆಂಬ ತೀರ್ಮಾನವನ್ನು ೧೯೭೦ ನವಂಬರ್ ೦೧ರಿಂದ ರಾಜ್ಯದ ಉಪವಿಭಾಗದ ಮಟ್ಟದಲ್ಲಿ ಎಲ್ಲಾ ಕಚೇರಿಗಳಲ್ಲಿ ಕನ್ನಡವನ್ನು ಬಳಸಲು, ಕನ್ನಡ ಜಾರಿಗೆ ತರಲು "ಕನ್ನಡ ಭಾಷಾ ಸಮಿತಿ' ರಚನೆಯಾಯಿತು.

ಕನ್ನಡ ಭಾಷಾ ಸಮಿತಿಯು ೧೦ ಮುಖ್ಯ ಅಂಶಗಳ ಉದ್ದೇಶಗಳನ್ನಿಟ್ಟುಕೊಂಡು ತನ್ನ ಕಾರ್ಯವನ್ನು ಮುಂದುವರೆಸಿತು. ಇದರಲ್ಲಿ ಅತ್ಯಂತ ಮುಖ್ಯವಾದವುಗಳೆಂದರೆ, ಕನ್ನಡ ಜಾರಿಗೆ, ನಿಯಮ ನಿಬಂಧನೆಗಳು. ಕನ್ನಡಕ್ಕೆ ಅನುವಾದ, ಸರ್ಕಾರದ ಆಂಗ್ಲ ಆದೇಶಗಳು ಕನ್ನಡದಲ್ಲಾಗಬೇಕು ಮತ್ತು ಕನ್ನಡದಲ್ಲಿರಬೇಕು, ಆಡಳಿತ ಕನ್ನಡದ ತರಬೇತಿ, ಕನ್ನಡ ಬೆರಳಚ್ಚು ಯಂತ್ರಗಳ ಒದಗಿಸುವಿಕೆ, ಕಾರ್ಯನಿರ್ವಹಿಸುವ ಅಧಿಕಾರಿಗಳು ಕನ್ನಡ ಕಲಿಕೆ ಹಾಗೂ ಕಲಿಯದೇ ಇರುವ ಅಧಿಕಾರಿಗಳಿಗೆ ಕನ್ನಡ ಕಲಿಕೆಗೆ ಅವಕಾಶ ಕಲ್ಪಿಸುವಿಕೆ. ಕನ್ನಡ ನ್ಯಾಯಾಲಯದ ಭಾಷೆಯಾಗಬೇಕು. ಕನ್ನಡದ ಅರ್ಜಿಗಳಿಗೆ ಆದ್ಯತೆ, ಅಧಿಕಾರಿಗಳು ಕನ್ನಡದಲ್ಲಿಯೇ ಸಹಿ ಮಾಡಬೇಕು ಎಂದು ಉದ್ದೇಶವನ್ನು ಹೊಂದಿ ತನ್ನ ಕಾರ್ಯವನ್ನು ನಿರ್ವಹಿಸಿತು. ಆದರೆ ಈ ಎಲ್ಲಾ ಉದ್ದೇಶಗಳು ಫಲಪ್ರದವಾಗಲಿಲ್ಲ.

೧೯೭೩ ನವಂಬರ್ ೦೧ರಂದು ಕನ್ನಡವೇ ಮ್ಯಾಜಿಸ್ಟ್ರೀಯಲ್‌ನ ಭಾಷೆಯಾಗಬೇಕೆಂದು ಸರಕಾರ ಆದೇಶ ಹೊರಡಿಸಿ ನಿರ್ದೇಶನವನ್ನು ನೀಡಿತು. ೧೯೭೯ –೮೦ ವರ್ಷವನ್ನು 'ರಾಜ್ಯ ಭಾಷಾ ವರ್ಷ'ವೆಂದು ಆಚರಿಸಲಾಯಿತು. ಆದರೂ ಪ್ರಯೋಜನವಾಗಲಿಲ್ಲ. ೧೯೮೩ ಜೂನ್ ೨೩ ರಂದು 'ಕನ್ನಡ ಕಾವಲು ಸಮಿತಿ'ಯನ್ನು ನೇಮಕ ಮಾಡಲಾಯಿತು. ಇದರ ಉದ್ದೇಶ ಕನ್ನಡ ಆಡಳಿತ ಭಾಷೆಯಾಗಬೇಕು ಹಾಗೂ ಸರ್ಕಾರದಿಂದ ಭಾಷಾನೀತಿಯನ್ನು ಜಾರಿಗೆ ತರಲಾರದ ಇಲಾಖೆಗಳ ಪ್ರಯತ್ನದ ಪರಿಶೀಲನೆ ನಡೆಸಿತು.

೧೯೮೨ರಲ್ಲಿ ಸರ್ಕಾರವು ಕಾರ್ಯಾಂಗದ ಜೊತೆಗೆ ಶಾಸಕಾಂಗದ ಭಾಷೆ ಕನ್ನಡವಾಗಿ ಆದೇಶ ಹೊರಡಿಸಿ ಆಡಳಿತದಲ್ಲಿ ಕನ್ನಡ ಬಳಕೆಯ ಅವಕಾಶವನ್ನು ಸ್ವಲ್ಪಮಟ್ಟಿಗೆ ಕಲ್ಪಿಸಿತು. ೧೯೮೫–೮೬ರವರೆಗಿನ ವರ್ಷವನ್ನು "ಸಮಗ್ರ ಕನ್ನಡ ಆಡಳಿತ ಭಾಷಾ ವರ್ಷ" ವೆಂದು ಆಚರಿಸಲು ಆದೇಶಿಸಲಾಯಿತು. ತದನಂತರದಲ್ಲಿ ಮಹಾಜನ್ ವರದಿ– ಗೋಕಾಕ್ ಚಳುವಳಿ– ವಹಿಷಿವರದಿ– ಕನ್ನಡ ಕ್ರಿಯಾ ಸಮಿತಿ– ಕನ್ನಡ ಅಭಿವೃದ್ಧಿ ಪ್ರಾಧಿಕಾರ– ಕನ್ನಡ ಸಾಹಿತ್ಯ ಪರಿಷತ್– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇನ್ನಿತರ ಹಲವಾರು ಸರ್ಕಾರ ಮತ್ತು ಸರ್ಕಾರೇತರ ಸಂಘ– ಸಂಸ್ಥೆಗಳು ಇಂದು ಕನ್ನಡ ಆಡಳಿತ ಭಾಷೆಯಾಗುವುದಕ್ಕೆ ಶ್ರಮಿಸಿದ್ದಾರೆ ಮತ್ತು ಇಂದಿಗೂ ಶ್ರಮಿಸುತ್ತಿದ್ದಾರೆ.

ಆದರೆ ಇಂದು ಇಂಗ್ಲೀಷ್ ಭಾಷೆಯನ್ನು ಪ್ರತಿಷ್ಠೆಯ ಭಾಷೆ ಎಂದುಕೊಂಡು ಮೆರೆಯುವ ಜನಗಳ ಮಧ್ಯೆ ಅದು ನಮ್ಮ ಸ್ವಾಭಿಮಾನವನ್ನು ಹೆಚ್ಚಿಸುತ್ತದೆ ಎಂದು ಭಾವಿಸಿ ಆಡಳಿತ ನಿರ್ವಹಣೆ

ಮಾಡುತ್ತಿರುವವರ ಮಧ್ಯೆ ಸಿಲುಕಿ ಆಡಳಿತ ಕನ್ನಡದ ಬಳಕೆ ಒಂದು ದೊಡ್ಡ ಸಮಸ್ಯೆಯನ್ನು ಅನುಭವಿಸುವಂತಾಗಿದೆ.

ಈ ನಿಟ್ಟಿನಲ್ಲಿ ನೋಡಿದರೆ ಆಡಳಿತದಲ್ಲಿ ಇನ್ನೂ ಕನ್ನಡದ ಬಳಕೆ ಪರಿಪೂರ್ಣವಾಗಿ ಆಗುತ್ತಿಲ್ಲ ಮತ್ತು ಆಗಿಲ್ಲ ಎಂಬುವುದು ಸ್ಪಷ್ಟ. ಹೀಗಾಗಿ ಆಡಳಿತ ಕನ್ನಡ ತನ್ನದೇ ಆದ ಸಮಸ್ಯೆಗಳನ್ನು ಎದಿರುಸುತ್ತಿದೆ ಎನ್ನುವ ಸಹಜವಾದ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಹಾಗಾದರೆ ಕಾಡುವ ಈಪ್ರಶ್ನೆಗೆ ಉತ್ತರವೇನು ಎಂಬುದನ್ನು ಚಿಂತಿಸಬೇಕಾಗಿದೆ. ಸದರಿ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾಗಿದೆ. ಈ ಕುರಿತಂತೆ ಆಡಳಿತದಲ್ಲಿ ಕನ್ನಡ ಬಳಕೆಯ ಸಮಸ್ಯೆ ಮತ್ತು ಸವಾಲುಗಳ ಒಂದು ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಅಧ್ಯಯನ ಮಾಡುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಇತ್ತೀಚಿನ ದಿನಗಳಲ್ಲಿ ಜನತೆಯ ಆಶೋತ್ತರಗಳನ್ನು ಅರಿತು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಅನೇಕ ಯೋಜನೆಗಳನ್ನು ಕೈಗೊಂಡು ಕಾರ್ಯನಿರ್ವಹಿಸುತ್ತಿದೆ. ಆದರೆ ಅವುಗಳೆಲ್ಲವೂ ಸರಿಯಾದ ರೀತಿಯಲ್ಲಿ ಫಲಿಸುತ್ತಿಲ್ಲವೆಂಬುದು ಅಲ್ಲಲ್ಲಿ ಕೇಳಿಬರುತ್ತಿರುವ ಮಾತು.

೩. ಆಡಳಿತ ಕನ್ನಡದ ಮೇಲೆ ವಿವಿಧ ಭಾಷೆಗಳ ಪ್ರಭಾವ

ಭಾರತದಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಭಾಷೆಗಳಿವೆ ಎಂದು ಅಂದಾಜಿಸಲಾಗಿದೆ. ಆದರೆ ಕೆಲವು ಭಾಷೆಗಳು ನಶಿಸಿಹೋಗಿವೆ. ಕೆಲವು ಭಾಷೆಗಳು ಅಳಿವಿನ ಅಂಚಿನಲ್ಲಿವೆ. ಕೆಲವು ಭಾಷೆಗಳನ್ನು ಮಾತನಾಡುವ ಜನರು ಬೆರಳೆಣಿಕೆಯಷ್ಟು ಮಾತ್ರ ಉಳಿದಿದ್ದಾರೆ. ಇನ್ನೂ ಕೆಲವು ಭಾಷೆಗಳೂ ಇಂದಿಗೂ ಬಳಕೆಯಲ್ಲಿವೆ. ಇಂದಿಗೂ ಬಳಕೆಯಲ್ಲಿರುವ ಭಾಷೆಗಳ ಸಾಲಿಗೆ ಕನ್ನಡ ಭಾಷೆಯೂ ಸೇರುತ್ತದೆ. ಕನ್ನಡ ಹಲವಾರು ವರ್ಷಗಳಿಂದ ಇತರ ಭಾಷೆಗಳ ಜೊತೆಯಲ್ಲಿಯೇ ಉಳಿದು ಬೆಳೆದು ಬಂದಿದೆ. ಇತಿಹಾಸದ ಉದ್ದಕ್ಕೂ ನೋಡಿದಾಗ ಕನ್ನಡ ಭಾಷೆಯ ಮೇಲೆ ಅನೇಕ ಭಾಷೆಗಳ ಪ್ರಭಾವವೂ ಆಗಿದೆ ಹಾಗೂ ಸಂಪರ್ಕ ಮತ್ತು ಸಂಬಂಧವನ್ನು ಹೊಂದಿದೆ ಎನ್ನಬಹುದು. ಒಂದು ಭಾಷೆಯು ಇನ್ನೊಂದು ಭಾಷೆಯ ಮೇಲೆ ಪರಿಣಾಮ ಅಥವಾ ಪ್ರಭಾವ ಬೀರಲು ಕೆಲವೊಂದು ಕಾರಣಗಳಿವೆ.

೦೧. ಚಾರಿತ್ರಿಕ ಹಿನ್ನೆಲೆಯ ಕಾರಣ

೦೨. ಭೌಗೋಳಿಕ ಕಾರಣ

೦೩. ಸಾಮಾಜಿಕ ಕಾರಣ

೦೪. ಇತರೆ ಕಾರಣಗಳು.

೧. ಚಾರಿತ್ರಿಕ ಹಿನ್ನೆಲೆಯ ಕಾರಣ

ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಿದಾಗ ಕ್ರಿಸ್ತ ಪೂರ್ವದ ಹಿಂದೆಯೇ ಕನ್ನಡ ಬಳಕೆಯಲ್ಲಿತ್ತು ಎಂದು ಹೇಳುವ ಕನ್ನಡ ಪದ ಬಳಕೆಯಾದ ಬಗ್ಗೆ ನಮಗೆ ಪುರಾವೆಗಳು ದೊರೆಯುತ್ತವೆ. ಆದರೆ

ನಿಖರವಾಗಿ ಕನ್ನಡದ ಬಗ್ಗೆ ಹೇಳುವುದು ಹಲ್ಮಿಡಿ ಶಾಸನ. ಕ್ರಿಸ್ತ ಪೂರ್ವದ ಹಿಂದೆಯೇ ಅಶೋಕನ ಕಾಲದಲ್ಲಿ ಪ್ರಾಕೃತ ಆಡಳಿತ ಭಾಷೆ, ಅದರ ಜೊತೆಯಲ್ಲಿ ಕನ್ನಡ ಪದಗಳ ಬಳಕೆ. ಕ್ರಿ.ಶ ಎರಡನೆಯ ಶತಮಾನದಲ್ಲಿ ಆಳ್ವಿಕೆ ನಡೆಸುತ್ತಿದ್ದ ಎನ್ನಲಾದ ಮಯೂರವರ್ಮನ ಕಾಲದಿಂದಲೂ ಇಂದಿನ ಸಂದರ್ಭದವರೆಗೂ ಸಂಸ್ಕೃತದ ಜೊತೆಗಿನ ಒಡನಾಟ. ಖಿಲ್ಜಿ ಮನೆತನ, ಮೊಘಲ್ ಸಾಮ್ರಾಟರು, ನಿಜಾಂ, ಆದಿಲ್ ಷಾಹಿ ಮತ್ತು ಬಹುಮನಿ ಸುಲ್ತಾನರ ಆಡಳಿತದೊಂದಿಗೆ ಬೆಳೆದುಬಂದ ಉರ್ದು ಭಾಷೆ. ಆಂಗ್ಲೋ ಮೈಸೂರು ಯುದ್ಧದ ನಂತರ ಕರ್ನಾಟಕದ ಕೆಲವು ಭಾಗಗಳು ಮರಾಠರ ಆಳ್ವಿಕೆಗೆ ಒಳಗಾದಾಗ ಮರಾಠಿ ಭಾಷೆ ಕನ್ನಡಕ್ಕೆ ಹತ್ತಿರವಾಯಿತು. ಭಾರತಕ್ಕೆ ಆಗಮಿಸಿ ವ್ಯಾಪಾರ ವಹಿವಾಟು ನಡೆಸಿ ಇಲ್ಲಿನ ರಾಜರ ಜೊತೆಗೆ ಒಡನಾಡ ಇಟ್ಟುಕೊಂಡಿದ್ದು ಪೂರ್ಚುಗೀಸರು ಮತ್ತು ಅವರ ಪೋರ್ಚುಗಿಸ್ ಭಾಷೆ. ಹಲವು ವರ್ಷಗಳ ಕಾಲ ಭಾರತವನ್ನು ಆಳಿದ ಮತ್ತು ಕರ್ನಾಟಕದಲ್ಲಿ ಆಡಳಿತವನ್ನು ಸ್ಥಾಪಿಸಿದ್ದ ಇಂಗ್ಲೀಷ್ ಭಾಷೆ. ಈ ರೀತಿಯಾಗಿ ಚಾರಿತ್ರಿಕವಾಗಿ ಪ್ರಾಕೃತ, ಸಂಸ್ಕೃತ, ಉರ್ದು, ಪೋರ್ಚುಗೀಸ್, ಪರ್ಶಿಯನ್, ಮರಾಠಿ, ಇಂಗ್ಲೀಷ್ ಭಾಷೆಗಳ ಪ್ರಭಾವ ಕನ್ನಡದ ಮೇಲೆ ಪರಿಣಾಮವನ್ನು ಶೈಕ್ಷಣಿಕವಾಗಿ, ಸಾಹಿತ್ಯಿಕವಾಗಿ ಹಾಗೂ ಆಡಳಿತಾತ್ಮಕವಾಗಿಯೂ ಪರಿಣಾಮವನ್ನು ಬೀರಿದೆ.

೨. ಭೌಗೋಳಿಕ ಕಾರಣ

ಮೊದಲನೆಯದಾಗಿ ಕರ್ನಾಟಕವನ್ನು ಭೌಗೋಳಿಕವಾಗಿ ಪರೀಕ್ಷಿಸಿದಾಗ ಭಾಷಾವಾರು ವಿಂಗಡಣೆಯ ನಂತರದಲ್ಲಿ ಕರ್ನಾಟಕ ಬೇರೆ ಬೇರೆ ಭಾಷೆಗಳನ್ನು ಬಳಸುವ ಬೇರೆ ಬೇರೆ ರಾಜ್ಯಗಳಿಂದ ಸುತ್ತುವರೆದಿದೆ.

ಪೂರ್ವದಲ್ಲಿ – ಆಂಧ್ರಪ್ರದೇಶ ರಾಜ್ಯ – ತೆಲುಗು ಭಾಷೆ

ಪಶ್ಚಿಮದಲ್ಲಿ – ಗೋವಾ ಮತ್ತು ಕೊಡಗು, ಕೊಂಕಣಿ ಮತ್ತು ತುಳು ಮಾತನಾಡುವ ಪ್ರದೇಶ.

ಉತ್ತರದಲ್ಲಿ – ಮಹರಾಷ್ಟ್ರ ರಾಜ್ಯ – ಮರಾಠಿ ಭಾಷೆ.

ದಕ್ಷಿಣದಲ್ಲಿ – ತಮಿಳುನಾಡಿನಿಂದ ತಮಿಳು ಮತ್ತು ಕೇರಳ ರಾಜ್ಯದಿಂದ ಮಲೆಯಾಳಂ.

ಇಲ್ಲಿ ಭಾಷೆ ಮತ್ತು ಭಾಷಿಕರೊಂದಿಗೆ ಹಲವಾರು ಕಾರಣಗಳಿಂದ ದಿನನಿತ್ಯ ಸಂಪರ್ಕವನ್ನು ಹೊಂದಲೇಬೇಕಾಗುತ್ತದೆ. ಈ ಸಂಪರ್ಕದಿಂದ ಕನ್ನಡ ಭಾಷೆ ನೆರೆರಾಜ್ಯಗಳ ಭಾಷೆಗಳೊಂದಿಗೆ ಸಂಪರ್ಕವನ್ನು ಹೊಂದಿದ್ದರಿಂದ ನೆರೆ ರಾಜ್ಯಗಳ ಭಾಷೆಯ ಪ್ರಭಾವ ಕನ್ನಡದ ಮೇಲೆ ಆಗಿದೆ.

ಎರಡನೆಯದಾಗಿ ಭಾಷಾವಾರು ಪ್ರಾಂತ್ಯಗಳು ರಚನೆಯಾಗದ ಪೂರ್ವದಲ್ಲಿ ಕರ್ನಾಟಕವನ್ನು ಮದ್ರಾಸು ಕರ್ನಾಟಕ, ಮುಂಬೈ ಕರ್ನಾಟಕ, ಮತ್ತು ಹೈದ್ರಾಬಾದ್ ಕರ್ನಾಟಕವೆಂದು ಆಡಳಿತ ನಡೆಸುತ್ತಿದ್ದ ಕಾಲವೊಂದಿತ್ತು. ಆ ಸಂದರ್ಭದಲ್ಲಿ ಸಹಜವಾಗಿ ಕರ್ನಾಟಕದ ಹಲವಾರು ಭಾಗಗಳು ಈ ಪ್ರದೇಶದಲ್ಲಿ ಹಂಚಿಹೋಗಿದ್ದವು. ಆಗಿನ ಸಂದರ್ಭದಲ್ಲಿ ಆಯಾ ಪ್ರದೇಶಕ್ಕೆ ಒಳಪಟ್ಟ ಆ

ಪ್ರದೇಶದಲ್ಲಿ ಆಡಳಿತ ನಡೆಸಿದ ಆಡಳಿತದ ಪ್ರಭಾವ ಕರ್ನಾಟಕದ ಮೇಲೆ ಭೌಗೋಳಿಕ ಪ್ರದೇಶಗಳ ಹಿನ್ನೆಲೆಯಿಂದಲೂ ಆಗಿದೆ.

ಹೈದ್ರಾಬಾದ್-ತೆಲುಗು, ಮದ್ರಾಸ್-ತಮಿಳು, ಮುಂಬೈ- ಮರಾಠಿ ಹೀಗೆ ಭೌಗೋಳಿಕವಾಗಿ ರಾಜ್ಯಗಳ ವಿಂಗಡಣೆಯಾದ ನಂತರದಲ್ಲಿ ಕರ್ನಾಟಕಕ್ಕೆ ಸಂಬಂಧಪಟ್ಟ ಕೆಲವು ಪ್ರದೇಶಗಳು ಇತರೆ ರಾಜ್ಯಗಳಿಗೆ ಹಂಚಿಹೋದವು. ಬೇರೆ ರಾಜ್ಯಗಳ ಪ್ರದೇಶಗಳು ಕರ್ನಾಟಕಕ್ಕೆ ಸೇರ್ಪಡೆಗೊಂಡವು. ಈ ಹಿನ್ನೆಲೆಯಲ್ಲಿ ಕರ್ನಾಟಕಕ್ಕೆ ಬೇರೆ ರಾಜ್ಯಗಳಿಂದ ಬಂದು ಸೇರಿದ ಪ್ರದೇಶಗಳು ಮತ್ತು ಕರ್ನಾಟಕದಿಂದ ಬೇರೆ ರಾಜ್ಯಕ್ಕೆ ಹಂಚಿಹೋದ ಪ್ರದೇಶಗಳು ಮತ್ತು ಎರಡಕ್ಕೂ ಹೊಂದಿಕೊಂಡ ಪ್ರದೇಶಗಳಲ್ಲಿಯೂ ಪರಸ್ಪರರಲ್ಲಿ ಭೌಗೋಳಿಕವಾಗಿ ಆ ರಾಜ್ಯಗಳ ಭಾಷೆಯ ಪ್ರಭಾವ ಆಗಿದೆ.

೩. ಸಾಮಾಜಿಕ ಕಾರಣ

ಸಾಮಾಜಿಕ ಹಿನ್ನೆಲೆಯಲ್ಲಿ ನೋಡಿದಾಗ ಮನುಷ್ಯ ಸಂಘಜೀವಿ. ಒಂಟಿಯಾಗಿ ಬದುಕಲಾರ. ಹೀಗಾಗಿ ಮನುಷ್ಯ ಮತ್ತು ಸಮಾಜ ಎಂಬ ವ್ಯವಸ್ಥೆ ಬೆಳೆದಂತೆ ಸಹಜವಾಗಿ ವಿಶಾಲತೆಯನ್ನು ಹೊಂದುತ್ತದೆ. ಆಗ ಭಾಷಿಕವಾಗಿ ಮತ್ತು ಸಾಮಾಜಿಕವಾಗಿ ಕೊಡುಕೊಳ್ಳುವಿಕೆಯ ವಿಚಾರಗಳು, ವ್ಯಾಪಾರ, ವಹಿವಾಟುಗಳು ವಿನಿಮಯಗೊಂಡು ಸಂಪರ್ಕವನ್ನು ಸೃಷ್ಟಿಸುತ್ತವೆ. ಕನ್ನಡ ಸಾಮಾಜಿಕವಾಗಿ ತೆಲುಗು, ಉರ್ದು, ಹಿಂದಿ, ಮಲೆಯಾಳಿ, ಮರಾಠಿ, ವಿವಿಧ ಭಾಷೆಗಳ ಜೊತೆ ಸಂಬಂಧವನ್ನು ಹೊಂದಿದೆ. ಹಳೆಯ ಗುರುಕುಲ ಶಿಕ್ಷಣ ಪದ್ಧತಿಯ ಮುಖಾಂತರ ಸಾಮಾಜಿಕವಾಗಿ ಸಂಸ್ಕೃತದ ಬಳಕೆ ಮತ್ತು ಕರ್ನಾಟಕದಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಪಟ್ಟ ಹಾಗೂ ಆಳ್ವಿಕೆ ನಡೆಸಿದ ಇಂಗ್ಲೀಷ್ ಭಾಷೆಗಳೊಂದಿಗೆ ಕನ್ನಡ ಅನನ್ಯ ಸಂಪರ್ಕಹೊಂದಿದೆ. ಈ ಹಿನ್ನೆಲೆಯಲ್ಲಿ ಕನ್ನಡದ ಮೇಲೆ ಸಾಮಾಜಿಕವಾಗಿ ವಿವಿಧ ಭಾಷೆಗಳು ಪರಿಣಾಮವನ್ನು ಬೀರಿವೆ.

೪. ಇತರೆ ಕಾರಣಗಳು

ಭಾಷೆಗಳ ಹುಟ್ಟು ಮತ್ತು ಬೆಳವಣಿಗೆಯನ್ನು ನೊಡಿದಾಗ ಕೆಲವೊಂದು ವಿಚಾರಗಳು ಕಂಡುಬರುತ್ತವೆ. ಕೆಲವು ಭಾಷೆಗಳು ಒಂದೇ ಭಾಷೆಯಿಂದ ಜನ್ಮತಾಳಿ ಕಾಲಾನಂತರದಲ್ಲಿ ಸ್ವತಂತ್ರ ಭಾಷೆಗಳಾಗಿವೆ. ದ್ರಾವಿಡ ಜನಾಂಗ ಸಿಂಧೂ ನದಿಯ ಬಯಲಿನಲ್ಲಿದ್ದಾಗ ಆಡುತ್ತಿದ್ದ ಭಾಷೆಯನ್ನು ಮೂಲ ದ್ರಾವಿಡ ಭಾಷೆಯೆಂದು ಕರೆದರು. ಕಾಲಾನಂತರದಲ್ಲಿ ಈ ಮೂಲ ದ್ರಾವಿಡ ಭಾಷೆಗಳು ಒಡೆದು ಉಪ ಭಾಷೆಗಳಾದವು. ಅವುಗಳನ್ನು ಉತ್ತರ ದ್ರಾವಿಡ, ಮಧ್ಯ ದ್ರಾವಿಡ ಮತ್ತು ದಕ್ಷಿಣ ದ್ರಾವಿಡ ಎಂದು ಕರೆಯಲಾಗಿದೆ. ಕನ್ನಡವೂ ದ್ರಾವಿಡ ಭಾಷಾವರ್ಗಕ್ಕೆ ಸೇರಿದುದ್ದಾಗಿದೆ. ತೆಲುಗು, ಮಲೆಯಾಳಂ, ತಮಿಳು, ತುಳು, ಇತ್ಯಾದಿ ದ್ರಾವಿಡ ಭಾಷೆಗಳ ವರ್ಗಗಳ ಸಂಪರ್ಕ ಹೊಂದಿದ ಕನ್ನಡ ಸಹಜವಾಗಿ ಈ ದ್ರಾವಿಡ ಭಾಷೆಗಳ ಪ್ರಭಾವ ಭಾಷಿಕವಾಗಿ ಇದ್ದೇ ಇದೆ.

ಜನರು ಕಾಲಕ್ಕೆ ತಕ್ಕಂತೆ ಮತ್ತು ಅಭಿರುಚಿಗಳಿಗೆ ತಕ್ಕಂತೆ ಬೇರೆ ಭಾಷೆಯನ್ನು ಯಾವುದಾದರೊಂದು ವಿಷಯಕ್ಕೆ ಸಂಬಂಧಪಟ್ಟಂತೆ ವ್ಯವಹಾರಗಳಿಗೆ ಬಳಸಿದಾಗ, ಅಭಿರುಚಿಯೇ ಅಭ್ಯಾಸವಾಗಿ, ಅಭ್ಯಾಸವೇ ಅಳವಡಿಕೆಯಾಗಿ, ಅದೇ ಮುಂದೆ ಬಳಕೆಯಾಗಿ ಪರಿಣಮಿಸಬಹುದಾದ

ಕಾರಣವೂ ಒಂದಾಗಿದೆ. ಈ ಕಾರಣಗಳ ಹಿನ್ನೆಲೆಯಲ್ಲಿ ಬೇರೆ ಭಾಷೆಗಳ ಪ್ರಭಾವ ಮತ್ತು ಪರಿಣಾಮ ಕನ್ನಡದ ಮೇಲೆ ಆಗಿದೆ.

ಕನ್ನಡ ನಾಡು ಮತ್ತು ಕನ್ನಡ ಭಾಷೆ ಮೊದಲಿನಿಂದಲೂ ಅನೇಕ ಭಾಷೆ ಮತ್ತು ಸಂಸ್ಕೃತಿಗಳ ಸಂಬಂಧವುಳ್ಳದ್ದಾಗಿದೆ. ಆರ್ಯರು, ಗ್ರೀಕರು, ರೋಮನ್ನರು, ಪಾರಸಿಕರು, ಯವನರು, ಪೋರ್ಚುಗೀಸರು, ಪ್ರೆಂಚರು ಮತ್ತು ಇಂಗ್ಲೀಷರು, ನಿಜಾಮರು, ಮರಾಠರು, ಮೊಘಲರು, ಇತ್ಯಾದಿ. ಈ ಮೊದಲಾದ ಭಾಷಿಕ ಜನರ ಒಡನಾಟ ಕನ್ನಡಿಗರಿಗಿತ್ತು. ಇದರ ಜೊತೆಯಲ್ಲೇ ನೆರೆಹೊರೆಯ ರಾಜ್ಯಗಳಲ್ಲಿ ಬಳಕೆಯಲ್ಲಿದ್ದ ದ್ರಾವಿಡ ಭಾಷೆಗಳ ವ್ಯಾಪಾರ, ವಹಿವಾಟುಗಳ ಸಂಪರ್ಕ ಕನ್ನಡದ ಮೇಲೆ ಪ್ರಭಾವ ಬೀರಿ ಜೊತೆಯಲ್ಲಿಯೇ ಬೆಳೆದವು. ಈ ಎಲ್ಲಾ ಭಾಷೆಗಳ ಪ್ರಭಾವ, ಅನೇಕ ಪದಗಳ ಸ್ವೀಕರಣ ಕನ್ನಡಕ್ಕೆ ಆಯಿತು.

ಪ್ರಾಕೃತ

ಕನ್ನಡ ಮತ್ತು ಪ್ರಾಕೃತ ಭಾಷೆಗಳು ಕ್ರಿಸ್ತ ಪೂರ್ವದಿಂದ ಸಂಬಂಧಉಳ್ಳದ್ದೆಂದು ಹೇಳಲು ನಮ್ಮಲ್ಲಿ ಪುರಾವೆಗಳಿವೆ. ಅಶೋಕನ ಬ್ರಹ್ಮಗಿರಿ ಶಾಸನ ಪ್ರಾಕೃತ ಭಾಷೆಯ ಶಾಸವಾಗಿದೆ. ಅದರಲ್ಲಿ ಬಳಸಲಾದ ಇಸಿಲಾ ಎಂಬ ಪದವು ಕನ್ನಡದ್ದಾಗಿದೆ ಎಂದು ಈಗಾಗಲೇ ವಿದ್ವಾಂಸರಲ್ಲಿ ಒಮ್ಮತವಿದೆ. ಶಾತವಾಹನರ ಕಾಲದಲ್ಲಿ ಪ್ರಾಕೃತ ರಾಜಭಾಷೆಯಾಗಿತ್ತೆಂದು ಇತಿಹಾಸದಿಂದ ತಿಳಿದುಬರುತ್ತದೆ. ಕನ್ನಡ ಮಾತೃಭಾಷೆಯುಳ್ಳ ನೇಮಿಚಂದ್ರ, ದೇವಸೇನ ಪ್ರಾಕೃತ ಗ್ರಂಥಗಳನ್ನು ರಚಿಸಿದ್ದಾರೆಂದು ರಾಜಪ್ಪ ದಳವಾಯಿ ಇವರಿಂದ ಸಂಪಾದನೆಗೊಂಡ ಕನ್ನಡ ಸಾಹಿತ್ಯ ಕೋಶ ಕೃತಿಯ ಪುಟ ಸಂಖ್ಯೆ ೨೮೨ ರಲ್ಲಿ ಉಲ್ಲೇಖಿಸಲಾಗಿದೆ. ಸುಪ್ರಸಿದ್ಧ ವೈಯಾಕರಣಿಯಾದ ತ್ರಿವಿಕ್ರಮನು ಸಹ ಕನ್ನಡಿಗನು ಈ ಕಾರಣಗಳಿಂದ ಕನ್ನಡದ ಜೊತೆಗೆ ಪಾಕೃತ ಭಾಷೆಯ ಪದಗಳು ಸೇರಿಕೊಂಡಿವೆ ಎಂದಿದ್ದಾರೆ. ವಿದ್ವಾಂಸರಾದ ಆ.ನೇ.ಉಪಾದ್ಯೆ ಅವರು ತಮ್ಮ ಒಂದು ಲೇಖನದಲ್ಲಿ ಪ್ರಾಕೃತಗಳಲ್ಲಿರುವ ಕನ್ನಡ ಶಬ್ದಗಳ ಬಗ್ಗೆ ವಿವೇಚಿಸಿದ್ದಾರೆ. ಇವರು ಕನ್ನಡದಿಂದಲೇ ಪ್ರಾಕೃತ ಶಬ್ದಗಳನ್ನು ಸೂಚಿಸಿದ್ದಾರೆ.

ಉದಾಹರಣೆಗಾಗಿ ಅಕ್ಕಾ ಉಡು, ಉಮ್ಮೆಲ್ಲೋ, (ಕ.ಉಮ್ಮಳ) ಉಲ್ಲೀ (ಚುಲ್ಲೀ-ಉಲ್ಲೀ) ಕನ್ನಡ, ಒಲೆನೋಡು, ಉರೋ (ಕ. ಊರು) ಇತ್ಯಾದಿ. ವಾಸ್ತವಿಕವಾಗಿ ಪ್ರಾಕೃತ ಭಾಷೆಯನ್ನು ನೋಡಿದಾಗ ಆಗಿನ ಸಂದರ್ಭದಲ್ಲಿ ರಾಜಭಾಷೆಯಾಗಿದ್ದರೂ ಸಹ ಕನ್ನಡ ಭಾಷೆಗೆ ಸಂಸ್ಕೃತದಷ್ಟು ಪ್ರಭಾವವನ್ನು ಬೀರಲಿಲ್ಲ ಎನ್ನಬಹುದು.

ಸಂಸ್ಕೃತ

ಚಾರಿತ್ರಿಕವಾಗಿ ಮತ್ತು ಸಾಮಾಜಿಕವಾಗಿ ಸಂಸ್ಕೃತ ಭಾಷೆ ಪುರಾತನವಾದ ಭಾಷೆಯಾಗಿದೆ. ಕನ್ನಡ ಭಾಷೆಯು ಸಂಸ್ಕೃತ ಜನ್ಯವೆಂದು ಹದಿನೆಂಟನೆಯ ಶತಮಾನದವರೆಗೂ ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದರು. ಇದಕ್ಕೆ ಕಾರಣ ಕನ್ನಡ ಭಾಷಾ ಕೋಶದಲ್ಲಿ ಕಂಡುಬರುವ ಹೇರಳವಾದ ಸಂಸ್ಕೃತ ಶಬ್ದಗಳು. ಸಂಸ್ಕೃತ ಭಾಷೆಯ ಜೊತೆಯಲ್ಲಿಯೇ ಕನ್ನಡ ಬೆಳೆದುಬಂದದ್ದರಿಂದ ಕನ್ನಡ

ಸಂಸ್ಕೃತ ಜನ್ಯವೆಂಬ ವಿಚಾರ ಬಹು ಬೇಗನೇ ದೂರಾಗಲಿಲ್ಲ. ಕಾಲಕ್ರಮೇಣ ಕನ್ನಡ ಭಾಷೆಯು ಸಂಸ್ಕೃತ ಜನ್ಯವಲ್ಲವೆಂಬ ಅಭಿಪ್ರಾಯವು ಬದಲಾಯಿತು. ಕನ್ನಡ ಕೋಶದಲ್ಲಿ ಕಂಡುಬರುವ ಸಂಸ್ಕೃತ ಶಬ್ಧಗಳ ಮಿಶ್ರಣದ ಮೂಲಕ ಕನ್ನಡ ಭಾಷೆಯು ಸಂಸ್ಕೃತ ಜನ್ಯವೆಂದು ಹೇಳುವುದು ಸರಿಯಲ್ಲ. ವ್ಯಾಕರಣದ ದೃಷ್ಟಿಯಿಂದ ಕನ್ನಡವು ಸಂಸ್ಕೃತದಿಂದ ತೀರಾ ಭಿನ್ನವಾದದ್ದಾಗಿದೆ. ಕಾರಣ ಇದು ಸಂಸ್ಕೃತ ಜನ್ಯವಲ್ಲ. ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಸ್ವತಂತ್ರ ಭಾಷೆಯೆಂದು ಹಲವು ಭಾಷಾ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಆದರೆ ಸಂಸ್ಕೃತ ಕನ್ನಡದ ಮೇಲೆ ಪ್ರಭಾವ ಬೀರಿರುವುದಂತು ಒಪ್ಪುವ ಮಾತು.

ಸಂಸ್ಕೃತದ ಪ್ರಭಾವ ಕನ್ನಡ ಮೇಲೆ ಆಗಿದೆ. ಇಂದಿನ ಕನ್ನಡದಲ್ಲಿ ಅರ್ಧದಷ್ಟು ಸಂಸ್ಕೃತದ ಪದಗಳು ಸೇರಿವೆ, ಈ ಸಂಸ್ಕೃತದ ಪದಗಳೂ ಆಡಳಿತದಲ್ಲಿಯೂ ಕಂಡುಬರುತ್ತವೆ. ಶೈಕ್ಷಣಿಕವಾಗಿ, ಸಾಹಿತ್ಯಿಕವಾಗಿ ನುರಾರು ವರ್ಷಗಳ ಕಾಲ ಕನ್ನಡ ನಾಡಿನಲ್ಲಿ ಸಂಸ್ಕೃತದ ಬಳಕೆ ಇದ್ದೇ ಇದೆ. ಹೀಗಾಗಿ ಕನ್ನಡ ಭಾಷೆಯ ಮೇಲೆ ಸಂಸ್ಕೃತದ ಪ್ರಭಾವ ಇದ್ದೇ ಇದೆ. ಕನ್ನಡದ ಬರವಣಿಗೆ ಚರಿತ್ರೆಗಿಂತ ಸಂಸ್ಕೃತಕ್ಕೆ ಹೆಚ್ಚಿನ ಚಾರಿತ್ರಿಕ ಹಿನ್ನಲೆ ಇದೆ. ಕನ್ನಡದ ಬರಹ ಮತ್ತು ಸಾಹಿತ್ಯದ ಮೇಲೆ ಸಹಜವಾಗಿಯೇ ಸಂಸ್ಕೃತದ ಪ್ರಭಾವ ಆಗಿರುವುದು ಬಳಕೆಯಲ್ಲಿನ ಭಾಷೆ ಮತ್ತು ದೊರೆತಿರುವ ಶಾಸನ ಮತ್ತು ಲಭ್ಯವಿರುವ ಕೃತಿಗಳಿಂದ ಗೋಚರಿಸುತ್ತದೆ.

ಸಂಸ್ಕೃತದ ಸ್ಮೃತಿ, ಸೂತ್ರ, ಧರ್ಮಶಾಸ್ತ್ರ, ಕೌಟಿಲ್ಯನ ಅರ್ಥಶಾಸ್ತ್ರಗಳಲ್ಲಿ ಬರುವ ಅನೇಕ ಶಬ್ದಗಳನ್ನು ಕನ್ನಡ ಆಡಳಿತ ಭಾಷೆಯಲ್ಲಿ ಅಧಿಕಾರಸ್ಥರ ಹುದ್ದೆ ಮತ್ತು ವಿಶೇಷ ಕಾರ್ಯಗಳನ್ನು ಸೂಚಿಸುವುದರಲ್ಲಿ ಕನ್ನಡ ಶಬ್ದಗಳಂತೆಯೇ ಬಳಸಲಾಗುತ್ತದೆ.

ಉದಾಹರಣೆಗಾಗಿ :– ಋಣದಾನ, ಸಂಧಿಕರ್ಮ, ಸೂತ್ರಾಧ್ಯಕ್ಷ,
ಶುಲ್ಕಾಧ್ಯಕ್ಷ, ಸುವರ್ಣಾಧ್ಯಕ್ಷ, ನಿಂದಾ ಪ್ರೇರಣೆ,
ದೇವರು, ಧರ್ಮ, ಈ ಪದಗಳು ಸಂಸ್ಕೃತ ಪದಗಳಾಗಿವೆ.

ಉರ್ದು

ಚಾರಿತ್ರಿಕವಾಗಿ ಅಲ್ಲಾವುದ್ದೀನ್ ಖಿಲ್ಜಿ ಕಲಬುರ್ಗಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ನಂತರ ಉರ್ದುಭಾಷೆ ಕರ್ನಾಟಕದಲ್ಲಿ ಬೆಳೆದುಬಂತೆಂಬುದು ಚಾರಿತ್ರಿಕ ಹಿನ್ನಲೆಯುಳ್ಳದ್ದು. ಆದರೆ ಹಿಂದಿ, ಅರೆಬ್ಬಿ ಮತ್ತು ಪಾರಸಿ ಭಾಷೆಗಳ ಮಿಶ್ರಣದಿಂದಾಗಿ ಉರ್ದುಭಾಷೆಯು ಜನನವಾಗಿದೆ ಎಂದು ಹೇಳಲಾಗುತ್ತದೆ. ವಿಜಯನಗರದ ಪತನದ ನಂತರದಲ್ಲಿ ಹದಿನಾಲ್ಕನೆಯ ಶತಮಾನದ ಅಂತ್ಯಕ್ಕೆ ಉರ್ದು ಸಾಹಿತ್ಯದ ಉಗಮ ಮತ್ತು ಅದರ ಪ್ರಭಾವ ಕನ್ನಡದ ಮೇಲೆ ಪ್ರಾರಂಭವಾಯಿತು. ಮೊಘಲ್ ಸಾಮ್ರಾಟರು, ಬಹುಮನಿ ಸುಲ್ತಾನರು, ಹೈದರಾಲಿ, ಟಿಪ್ಪು ಸುಲ್ತಾನ್ ಇವರ ಆಡಳಿತದಲ್ಲಿ ಉರ್ದುಭಾಷೆಗೆ ಮಹತ್ವ ಕೊಟ್ಟಿತ್ತು. ಇದರ ಪರಿಣಾಮವಾಗಿ ಇಂದಿಗೂ ಕರ್ನಾಟಕದಲ್ಲಿ ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಉರ್ದುಭಾಷೆ ರಾಯಚೂರು, ಬೀದರ್, ಕಲಬುರ್ಗಿ, ಯಾದಗಿರಿ ಜಿಲ್ಲೆಗಳಲ್ಲಿ ಬಳಕೆಗೆ ಬಂದು ನೆಲೆಯೂರಿದೆ.

ಈಗಲೂ ಈ ಪ್ರದೇಶದಲ್ಲಿ ಉರ್ದುಭಾಷಿಕರೆ ಹೆಚ್ಚು. ಕನ್ನಡಿಗರೂ ಉರ್ದು ಭಾಷಿಕರಾಗಿರುವುದು ಇನ್ನೊಂದು ತರಹದ ಅಚ್ಚರಿಯಾಗಿದೆ. ಹೈದ್ರಾಬಾದ್ ಕರ್ನಾಟಕದಲ್ಲಿ ಉರ್ದುವಿನ ಪ್ರಭಾವ ಹೆಚ್ಚಿದ್ದು ಚಾರಿತ್ರಿಕವಾಗಿ ಹಿಂದಿನಿಂದಲೇ ಆಡಳಿತದಲ್ಲಿ ಅನೇಕ ಉರ್ದುಪದಗಳು ಸೇರಿಕೊಂಡು ಈಗಲೂ ಅವು ಕನ್ನಡ ಪದಗಳಾಗಿಯೇ ಉಳಿದಿವೆ. ಈಗಾಗಲೇ ತಿಳಿಸಿದಂತೆ ಮೂರು ಭಾಷೆಗಳ ಮಿಶ್ರಣದ ಫಲವಾಗಿ ಕನ್ನಡಕ್ಕೆ ಆಡಳಿತದಲ್ಲಿ ಅನೇಕ ಪದಗಳು ಸೇರಿಕೊಂಡಿವೆ.

ಉದಾಹಣೆಗಾಗಿ:

ಪಾರಸಿ ಪದಗಳು–ಜಮೀನು, ರಸ್ತೆ, ಸಿಬ್ಬಂದಿ, ಸಿಪಾಯಿ, ಸರಬರಾಜು, ಬಂದೋಬಸ್ತು,
ಅರಬ್ಬಿ ಪದಗಳು– ಆಸಾಮಿ, ಖಜಾನೆ, ಕಾಯ್ದೆ, ಇಲಾಖೆ, ಜಪ್ತಿ, ವಸೂಲು ಮಾಮೂಲು,
ಪಾರಸಿ ಮತ್ತು ಅರಬ್ಬಿ ಪದಗಳು– ಪಾತ್ಯಾವು(ಬಾದಷಃ), ವಜೀರ, ಸಲಾಮು, ಫೌಜು,
ಸರತ್ತಾಣ (ಸುಲ್ತಾನ), ದರಖಾಸ್ತು, ರುಜು, ಮೊಹರ್,
ದಸ್ತವೇಜು, ಮೊಕದ್ದಮೆ, ಇನಾಂ, ಅಸಲು, ನಗದು,

ವಿಜಯನಗರ ಪತನದ ನಂತರ ಚಾರಿತ್ರಿಕವಾಗಿ ಕನ್ನಡ ನಾಡು ಮುಸ್ಲಿಂರ ಆಡಳಿತಕ್ಕೆ ಒಳಪಡುತ್ತದೆ. ಮುಸ್ಲಿಂರ ಆಡಳಿತಕ್ಕೆ ಒಳಪಟ್ಟ ಸಂದರ್ಭದಲ್ಲಿ ಕೆಲವೊಂದು ಉರ್ದುಭಾಷೆಯ ಪದಗಳು ಕನ್ನಡಕ್ಕೆ ಸೇರಿವೆ. ಕಂದಾಯ ಇಲಾಖೆಯ ಶೇಕಡಾ ೬೦ರಷ್ಟು ಶಬ್ದಗಳು ಉರ್ದು ಭಾಷೆಯವು ಅವುಗಳನ್ನು ಉರ್ದು ಎನ್ನುವುದಿಲ್ಲ. ಈಗಲೂ ಅವೂ ಕನ್ನಡ ಪದಗಳೇ ಆಗಿ ಆಡಳಿತ ಭಾಷೆಯಲ್ಲಿ ಕಲೆತು ಹೋಗಿವೆ. ಆದರೆ ಇಂದಿಗೂ ಅವುಗಳನ್ನು ಬಿಡದ ಪರಿಸ್ಥಿತಿ ಇಂದಿನದ್ದಾಗಿದೆ.

ಉದಾಹರಣೆಗಾಗಿ:–ಬಂದೋಬಸ್ತು, ರುಸಂ, ಖಾಯಂ, ಮೊಲ್ಲುಜಾರಿ, ದರಖಾಸ್ತು,
ಮಹಜರು, ಪಂಚನಾಮ, ಇಸ್ತಿಹಾರು, ಪರಾರು, ಹಾರೆಮ್,
ಹುಕುಮ್, ಮೊಕದ್ದಮೆ, ವಜಾ, ದಸ್ತಿಗೀರು, ಬೇಜಿಗಾರು,
ಜಮಾಬಂದಿ, ದಸ್ತಾಗಿರು, ಹಾಜರು, ಇರಸಾಲು, ತರಿ
ಖಷ್ಕಾ, ಬಣಾಯ್ತು, ಖಿಸ್ತು, ತಕರಾರು, ತಖ್ತೆ.

ಪಾರಸಿ ಮತ್ತು ಉರ್ದು ಪದಗಳು:

ಅಹವಾಲು, ಅಮೀರ, ಇಲಾಖೆ, ಖರ್ಚು, ಕಬೂಲ
ಕಿಮ್ಮತ್, ಖೈದಿ, ಖಾಲಿ, ಜದಾಬ್, ಜಮಾ,
ಜಮೀನು, ತಹಶೀಲ್ದಾರ್, ತಾರೀಖು, ತಾಲ್ಲೂಕು, ದವಲತ್ತು,
ಪರಾರಿ, ಫಸಲು, ಮುನ್ನ, ವಹಿ, ಸಾಬೀತು
ಮೊಕದ್ದಮ್ಮೆ, ರದ್ದು, ವಕಾಲತ್ತು, ವಕೀಲ, ವಗೈರ,
ವಜಾ, ಷರತ್ತು, ಷರಾ, ಮಂಜೂರು, ಸಹಿ,
ಹಕ್ಕು, ಹವಾ, ಹೆಕ್, ಮತ್ತು, ಅಬ್ಕಾರಿ, ಸಬೂಬು, ಇತ್ಯಾದಿ ಪದಗಳು,

ಮೂಲ ಕನ್ನಡಕ್ಕೆ ಸೇರಿವೆ ಈ ಪದಗಳು ಇಂದಿಗೂ ಕನ್ನಡದವೇ ಎಂಬಂತೆ ಬಳಕೆ ಮಾಡಲಾಗುತ್ತಿದೆ.

ಮರಾಠಿ

ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಕರ್ನಾಟಕವನ್ನು ಮರಾಠರ ವಂಶಸ್ಥರಾದ ಪೇಶ್ವೆ–ಶಿವಾಜಿಯವರು ಆಳಿದರು. ನಾಲ್ಕನೇಯ ಆಂಗ್ಲೋ ಮೈಸೂರು ಯುದ್ಧದ ಪರಿಣಾಮವಾಗಿ ಮೈಸೂರಿನ ಕೆಲವು ಪ್ರದೇಶಗಳು ನೇರವಾಗಿ ಮರಾಠರ ಆಳ್ವಿಕೆಗೆ ಒಳಪಟ್ಟವು. ಅದರ ಫಲವಾಗಿ ಆಡಳಿತದಲ್ಲಿ ಮರಾಠಿ ಭಾಷೆಯ ಪದಗಳು ಸೇರಿಕೊಂಡವು. ನಂತರ ಮರಾಠಿ ಭಾಷೆಯನ್ನು ಸರ್ಕಾರಿ ವ್ಯವಹಾರಕ್ಕೆ ಬಳಸಿದರು. ಹೀಗಾಗಿ ಕರ್ನಾಟಕದಲ್ಲಿ ಮತ್ತು ಮಹಾರಾಷ್ಟ್ರಕ್ಕೆ ಹೊಂದಿಕೊಂಡ ಕರ್ನಾಟಕದ ಅನೇಕ ಭಾಗದಲ್ಲಿ ಮರಾಠಿ ಶಬ್ದಗಳು ಆಡಳಿತ ಭಾಷೆಯಲ್ಲಿ ಸೇರಿವೆ.

ಮರಾಠರ ಆಳ್ವಿಕೆಗೆ ಬೆಂಗಳೂರು ಜಹಗೀರ ಆಗಿತ್ತು. ಅದನ್ನು ಆಳಿದ ಶಹಜಿ ಮತ್ತು ಅವನ ಮಗ ಏಕೋಜಿ ಆಳ್ವಿಕೆಯ ಕಾಳದಲ್ಲೂ ಕನ್ನಡವೇ ಆಡಳಿತ ಭಾಷೆಯಾಗಿತ್ತು. ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಕಾಡುಮಲ್ಲೇಶ್ವರ ದೇವಾಲಯದ ಹತ್ತಿರದಲ್ಲಿರುವ ಶಾಸನದಲ್ಲಿ ಶಿವಾಜಿಯ ಆಡಳಿತ ಕಾಲದಲ್ಲೂ ಕನ್ನಡವೇ ಆಡಳಿತ ಭಾಷೆ ಆಗಿತ್ತು ಎಂಬುದು ತಿಳಿದಿಬರುತ್ತದೆ. ಹದಿನೈದನೆಯ ಶತಮಾನದಿಂದ ಹದಿನೆಂಟನೆಯ ಶತಮಾನದಲ್ಲಿ ಕಂಡುಬರುವ ಲಕ್ಷ್ಮೇಶ್ವರ ದೇಸಾಯರಿಗೆ ಸಂಬಂಧಿಸಿದ ಅನೇಕ ಕಾಗದ ಪತ್ರಗಳು ಕನ್ನಡದಲ್ಲಿವೆ. ಇವುಗಳಿಗೆ ಮರಾಠಿ ಭಾಷೆಯಲ್ಲಿ 'ರುಮಾಲು'ಗಳು ಎನ್ನುತ್ತಾರೆ. ಈ ಕಾಗದ ಪತ್ರಗಳು ಕನ್ನಡದಲ್ಲಿವೆ. ಕ್ರಯ, ವಿಕ್ರಯ ಮತ್ತು ತರಿಗೆ ಎಂಬ ಅರ್ಥವನ್ನು ಪ್ರತಿನಿಧಿಸುತ್ತವೆ. ಮರಾಠರ ಆಳ್ವಿಕೆಯಿಂದ ಕನ್ನಡ ಭಾಷೆಯ ಮೇಲೆ ಪ್ರಭಾವ ಆಗಿದೆ. ಮರಾಠಿ ಪದಗಳು ಕನ್ನಡ ಪದಕೋಶದಲ್ಲಿ ಕನ್ನಡದವೇ ಎಂಬಷ್ಟರ ಮಟ್ಟಿಗೆ ಸಹಜವಾಗಿ ಬಳಕೆಯಲ್ಲಿವೆ. ಎಂದು ಆಡಳಿತ ಕನ್ನಡ ಪುಸ್ತಕದ ಪುಟ ಸಂಖ್ಯೆ ೧೧ರಲ್ಲಿ ತಿಳಿಸಲಾಗಿದೆ.

ಕನ್ನಡ ಮತ್ತು ಮರಾಠಿ ಎರಡೂ ಬೇರೆ ಬೇರೆ ಭಾಷಾವರ್ಗಕ್ಕೆ ಸೇರಿದವುಗಳಾಗಿದ್ದರೂ, ಚಾರಿತ್ರಿಕವಾಗಿ ಸಾಮಾಜಿಕವಾಗಿ ಹಾಗೂ ಭೌಗೋಳಿಕವಾಗಿ ನಿಕಟ ಸಂಬಂಧವನ್ನು ಹೊಂದಿವೆ. ಅನೇಕ ವರ್ಷಗಳ ಕಾಲ ಕರ್ನಾಟಕದ ಹಲವು ಪ್ರದೇಶಗಳನ್ನು ಮರಾಠರು ಆಳಿದ್ದಾರೆ. ಹಾಗೆಯೇ ಮಹರಾಷ್ಟ್ರದ ಕೆಲವು ಪ್ರದೇಶಗಳು ಕನ್ನಡಿಗರ ಆಳ್ವಿಕೆಗೆ ಒಳಪಟ್ಟಿದ್ದವು. ಧಾರವಾಡ, ಬೆಳಗಾವಿ, ಬೀದರ್, ಬಿಜಾಪುರ ಹಾಗೂ ಮಹರಾಷ್ಟ್ರಕ್ಕೆ ಹೊಂದಿಕೊಂಡ ಕರ್ನಾಟಕದ ಗಡಿಪ್ರದೇಶಗಳಲ್ಲಿ ಈಗಲೂ ಮರಾಠಿಯನ್ನು ಮಾತನಾಡುತ್ತಾರೆ ಹಾಗೂ ಬಳಕೆಯಲ್ಲೂ ತಂದಿದ್ದಾರೆ. ಇದಲ್ಲದೆ ಮಹರಾಷ್ಟ್ರದಲ್ಲೂ ಸಹ ಕನ್ನಡ ಮಾತನಾಡುವ ಸಾಂಗ್ಲಿ, ನಿಲಂಗಾ ಜೋತ್, ಸೊಲ್ಲಾಪುರ ಇತರೆ ಪ್ರದೇಶಗಳಲ್ಲಿ ಈಗಲೂ ಕನ್ನಡ ಭಾಷಿಕರಿದ್ದಾರೆ.

ಚಾರಿತ್ರಿಕ ಹಿನ್ನಲೆ, ಗಡಿ ಪ್ರದೇಶ, ರಾಜರ ಆಡಳಿತ, ಕರ್ನಾಟಕ ಮತ್ತು ಮಹರಾಷ್ಟ್ರಿಗರಲ್ಲಿ ಬೆಳೆದ ಸಂಬಂಧಗಳ ಮುಖಾಂತರ ಮರಾಠಿ ಭಾಷೆ ಕನ್ನಡದ ಮೇಲೆ ಪ್ರಭಾವ ಮತ್ತು ಪರಿಣಾಮವನ್ನು ಬೀರಿದೆ. ಇದರಿಂದ ಆಡಳಿತದಲ್ಲಿ ಹಲವಾರು ಪದಗಳು ಸೇರಿಕೊಂಡಿವೆ.

ಉದಾಹರಣೆಗಾಗಿ,

ಆಡಳಿತ ಪದಗಳು:– ಅಠಾರ ಕಚೇರಿ, ದೊನಾಣೆ, ಚೌರಾಣೆ, ಅಡೀಚ್, ಬಾರ, ಮೋಜಣಿ, ಮೋಜುದಾರರು,

ಸಾಮಾನ್ಯ ಪದಗಳು:– ಖರೆ, ಪುಡಾರಿ, ಚಟ್ನಿ, ಚಪಾತಿ,

ಶೀಕಪದಗಳು:– ಅಠವಣೆ, ಪಂಚ/ಪಂಚವೀಸ

ಕರ್ನಾಟಕದ ಕನ್ನಡ ಪದಗಳಾದ:– ಅತ್ಯಾ, ಅಕ್ಕಾ, ಹೆಗಡೆ, ಹುಡುಕಣಿ, ಗೋಂಧಳ, ಅಪ್ಪಾ, ಆಗಲೆ, ಭಂಗಾರ, ಮಾತು, ಪೀಳೆ, ತೂಕ, ಅಕ್ಕಸಾಲ, ಉಳಿಗೆ, ಗುಡಾರ, ಅವಳಿ,ಆವಳಿ, ಗುಂಟ, ಉಪ್ಪಿಟ್ಟು, ಈ ಕನ್ನಡ ಪದಗಳು ಮರಾಠಿಯಲ್ಲಿ ಸೇರಿ ಹೋಗಿವೆ.

ಪೋರ್ಚುಗೀಸ್

ಭಾರತಕ್ಕೆ ವ್ಯಾಪಾರಕ್ಕೆಂದು ಬಂದವರಲ್ಲಿ ಪೋರ್ಚುಗೀಸರೂ ಒಬ್ಬರು. ವಿಜಯನಗರ ಕಾಲದಲ್ಲಿ ಇವರ ವ್ಯಾಪಾರ ವಹಿವಾಟು ಉನ್ನತಮಟ್ಟಕ್ಕೆ ತಲುಪಿತ್ತು. ಇವರ ವ್ಯಾಪಾರ ಮತ್ತು ವಹಿವಾಟುಗಳ ಮೂಲಕ ಪೋರ್ಚುಗೀಸರೊಂದಿಗೆ ಸಂಪರ್ಕ ಮತ್ತು ಸಂಬಂಧ ಕರ್ನಾಟಕದ ಜೊತೆ ಬೆಳೆಯಿತು. ಕುದುರೆಗಳ ವ್ಯಾಪಾರ ಬಹುಶಃ ಪೋರ್ಚುಗೀಸರ ಮುಖಾಂತರ ನಡೆಯುತ್ತಿತ್ತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇತಿಹಾಸ ತಜ್ಞರಾದ ಫಾದರ್ ಹೆರಾಸ್ ಅವರ ಪ್ರಕಾರ ವಿಜಯನಗರದ ವಿಠ್ಠಲಸ್ವಾಮಿಯ ಗುಡಿಯಲ್ಲಿನ ಅನೇಕ ಕೆತ್ತನೆಗಳು ಪೋರ್ಚುಗೀಸರದ್ದಾಗಿವೆ ಎಂದಿದ್ದಾರೆ. ಶ್ರೀ ಶಂಬಾ ಜೋಷಿಯವರು ಅನೇಕ ತಿನ್ನುವ ವಸ್ತುಗಳು, ಅಯುಧಗಳು ಮತ್ತು ಸಮಾಜ ವ್ಯವಸ್ಥೆಯ ಶಬ್ದಗಳು ಪೋರ್ಚುಗೀಸಿನಿಂದ ಕನ್ನಡಕ್ಕೆ ಬಂದಿವೆ ಎಂದಿದ್ದಾರೆ.

ಉದಾಹರಣೆಗಾಗಿ ಅನಾನಸ್ಸು, ಪಗಾರ, ಚಾವಿ, ಫಿರಂಗಿ, ಪಾದ್ರಿ, ಲಿಲಾವು, ಇಸ್ತ್ರಿ, ಅಲ್ಮಾರಿ, ಆಸ್ಪತ್ರೆ, ಬೊಂಬು, ಖಟೋಣ, ಲಾಟೀನು, ಪಡಾಯಿ, ಪಿಸ್ತೂಲು, ಸಾಬಣ, ಪೆನ್ನು, ತಂಬಾಕು, ವರಾಂಡ, ಸಾಬೂನು, ಕಾಡತೊಸು, ಕಂದೀಲು, ಚಾವಿ, ಪಿಂಗಾಣಿ, ಪೋಲೀಸು, ಮೇಜು, ಪೇರಲ, ಲಿಂಬೆ, ಮುಂತಾದವು ಕನ್ನಡ ಪದಗಳಾದವು.

ಒಟ್ಟಿನಲ್ಲಿ ಪೋರ್ಚುಗೀಸ್ ಭಾಷೆಯು ಕನ್ನಡ ಮತ್ತು ಆಡಳಿತ ಕನ್ನಡದ ಮೇಲೆ ಪ್ರಭಾವವನ್ನು ಬೀರಿದೆ.

ಆಂಗ್ಲ/ಇಂಗ್ಲೀಷ್

ಭಾರತಕ್ಕೆ ಡಚ್ಚರು, ಪೋರ್ಚುಗೀಸರು, ಫ್ರೆಂಚರು ಮತ್ತು ಬ್ರಿಟೀಷರು ವ್ಯಾಪಾರದ ಬಹುಮುಖ್ಯವಾದ ಉದ್ದೇಶವನ್ನಿಟ್ಟುಕೊಂಡು ಬಂದರು. ಆದರೆ ಇವರೆಲ್ಲರಲ್ಲಿ ಭಾರತದಲ್ಲಿ ಗಟ್ಟಿಯಾಗಿ ಉಳಿದವರಲ್ಲಿ ಬ್ರಿಟೀಷರು ಮಾತ್ರ, ಬ್ರಿಟೀಷರು ಭಾರತಕ್ಕೆ ಬಂದಾಗ ಭಾರತದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿ ಅವರನ್ನು ಇಲ್ಲಿಯೇ ಉಳಿಯುವಂತೆ ಮಾಡಿತು. ಅಲ್ಲದೇ ಇಲ್ಲಿಯೇ ಸುಮಾರು ವರ್ಷಗಳ ಕಾಲ ಆಡಳಿತವನ್ನು ನಡೆಸುವಂತಹ ಪರಿಸ್ಥಿತಿಯನ್ನು ನಿರ್ಮಾಣಮಾಡಿ ಕೊಟ್ಟಿತು.

ಜಗತ್ತಿನ ವಿವಿಧ ಭಾಷೆಗಳ ಮೇಲೆ ತೀವ್ರವಾಗಿ ಪ್ರಭಾವಶಾಲಿಯಾಗಿ ಪರಿಣಾಮ ಬೀರಿದ ಮತ್ತು ಇಂದಿಗೂ ಬೀರುತ್ತಲಿರುವ ಭಾಷೆಯೆಂದರೆ ಇಂಗ್ಲೀಷ್. ಬಹುಶಃ ಎಲ್ಲಾ ಭಾಷೆಗಳ ಮೇಲೆ ತನ್ನ ಪರಿಣಾಮವನ್ನು ಬೀರಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಈ ಭಾಷೆಯ ಹಿಡಿತಕ್ಕೆ ಸಿಲುಕಿರುವಷ್ಟು ಮತ್ತು ದಮನಕ್ಕೊಳಗಾದಷ್ಟು ಭಾಷೆಗಳು ಬೇರೆ ಯಾವ ಭಾಷೆಯ ಹಿಡಿತಕ್ಕೆ ಮತ್ತು ದಮನಕ್ಕೊಳಗಾಗಿರುವುದಿಲ್ಲ. ಇಂಗ್ಲೀಷಿನ ಪ್ರಭಾವ ಕನ್ನಡದ ಮೇಲೆ ಅಷ್ಟೆ ಅಲ್ಲ ಜಗತ್ತಿನ ಹಲವಾರು ಭಾಷೆಗಳ ಮೇಲೆ ಆಗಿದೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ, ಆಡಳಿತಾತ್ಮಕವಾಗಿ ರಾಜ್ಯಾಂಗ, ಕಾರ್ಯಾಂಗ, ನ್ಯಾಯಾಂಗ, ಹಾಗೂ ಸೈನ್ಯ ವ್ಯವಸ್ಥೆ, ಸಾಮಾಜಿಕವಾಗಿ ದಿನನಿತ್ಯದ ಜೀವನದ ವ್ಯವಸ್ಥೆಗಳ ಮೇಲೆ ಹಾಗೂ ಬೆಳೆಯುತ್ತಿರುವ ವಿವಿಧ ಕ್ಷೇತ್ರಗಳಲ್ಲಿ ಇಂಗಿಷಿನ ಪ್ರಭಾವ ಕನ್ನಡ ಹಾಗೂ ಇತರೆ ಭಾಷೆಗಳ ಮೇಲೆ ಆಗಿರುವುದನ್ನು ಕಾಣಬಹುದು.

ಹದಿನೇಳನೆಯ ಶತಮಾನದ ನಂತರ ರಾಜಕೀಯವಾಗಿ ಆಡಳಿತದ ಸೂತ್ರವನ್ನು ಬ್ರಿಟೀಷರು ಹಿಡಿದರು. ಇವರ ಆಡಳಿತದ ಅವಧಿಯ ಕಾಲದಲ್ಲಿ ಇಂಗ್ಲೀಷ್ ಆಡಳಿತ ಭಾಷೆಯಂತೆ ಕೆಲಸಮಾಡಿದೆ. ಇಂದಿಗೂ ಇದರ ಪ್ರಭಾವದಿಂದ ಹೊರಬರಲು ಸಾಧ್ಯವಾಗಿಲ್ಲ. ಇಂಗ್ಲೀಷ್ ಕಲಿತರೆ ಬದುಕು ಸುಲಭ. ಜಗತ್ತಿನ ಯಾವ ಮೂಲೆಯಲ್ಲಾದರೂ ಬದುಕಬಹುದು ಎನ್ನುವ ಮನೋಧರ್ಮ ಹುಟ್ಟಿಕೊಂಡಿದೆ. ಆದ್ದರಿಂದ ಇಂಗ್ಲೀಷ್ ಬಳಸಬೇಕೆಂಬ ಆಸಕ್ತಿ ಹೆಚ್ಚಾಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರೂ ಆಡುವ ಕನ್ನಡಲ್ಲೂ ಮುಕ್ಕಾಲು ಭಾಗ ಇಂಗ್ಲೀಷ್ ಅವರಿಗೆ ತಿಳಿಯದಂತೆ ಮಾತನಾಡುತ್ತಾರೆ. ಇಂಗ್ಲೀಷಿನಿಂದ ಸ್ವೀಕರಣಗೊಂಡ ಸಾವಿರಾರು ಇಂಗ್ಲೀಷ್ ಪದಗಳು ಸೇರಿ ಕನ್ನಡ ಪದಗಳಾಗಿಯೇ ಬಳಕೆಯಾಗುತ್ತಿವೆ.

ಈಗಾಗಲೇ ಆಡಳಿತ ಕನ್ನಡ ನಡೆದುಬಂದ ದಾರಿಯಲ್ಲಿ ಇಂಗ್ಲೀಷಿನ ಬಳಕೆ, ಪರಿಣಾಮ ಮತ್ತು ಪ್ರಭಾವದ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ.

ಆಂಗ್ಲರ ಆಡಳಿತದಲ್ಲಿ ಕನ್ನಡದ ಬಳಕೆ ಕಂಡುಬಂದರೂ ಇಂಗ್ಲೀಷಿನ ಪ್ರತಿಷ್ಠೆ ಎಲ್ಲಾ ಕಡೆ ಹೆಚ್ಚಿತ್ತು. ಈಗಲೂ ಅದು ಮುಂದುವರೆದಿದೆ ಎನ್ನಬಹುದು. 'ಜ್ಞಾನಯೆಲ್ಲಿಂದಾದರೂ ಬಂದು ಕನ್ನಡಕ್ಕೆ ಸೇರಲಿ ಸ್ವಾಗತಾರ್ಹ, ಆದರೆ ಕನ್ನಡಕ್ಕೆ ಮೊದಲು ಪ್ರಾಶಸ್ತ್ಯ ನೀಡಬೇಕು' ಎನ್ನುವ ಧ್ವನಿ ಅಲ್ಲಲ್ಲಿ ಕೇಳುತ್ತಿದೆ. ಹೆಚ್ಚು ಒತ್ತು ಕನ್ನಡಕ್ಕೆ ಮತ್ತು ಕನ್ನಡ ಆಡಳಿತ ಭಾಷೆಗೆ ಕೊಡಬೇಕು ಎನ್ನುವುದು ಕನ್ನಡ ಪರ ಚಿಂತಕರ ಅಳಲು.

'ಕನ್ನಡಿಗರು ಭಾಷಾಂತರದ ಗೋಜು ಬೇಡವೆಂದು ರೂಢಿಯಲ್ಲಿರುವ ಇಂಗ್ಲೀಷ್ ಭಾಷೆಯಿಂದಲೇ, ಆಡಳಿತ ಭಾಷೆ ಬೆಳೆಯಲೆಂದು ಮೊದಮೊದಲು ಇಂಗ್ಲೀಷ್ ಪದಗಳಿಗೆ ಕೊನೆಯಲ್ಲಿ 'ಉ' ಕಾರ ಹಚ್ಚಿದರೆ ಕನ್ನಡ ಪದಗಳಾಗುತ್ತವೆ ಎಂದು ಹೇಳಿದರು, ಅದನ್ನು ಹಾಗೆಯೇ ಮಾಡಿದರು' ಎಂದು ಮಾಧವರಾವ್ ಮುಧೋಳ್, ಇವರ ಕೃತಿಯಾದ 'ಆಡಳಿತ ಭಾಷೆ ಕನ್ನಡ' ಕೃತಿಯ ಪುಟ ೧೦ರಲ್ಲಿ ತಿಳಿಸುತ್ತಾರೆ.

ಉದಾಹರಣೆಗಾಗಿ:- ರೈಲ್-ರೈಲು, ಬಸ್-ಬಸ್ಸು, ಸ್ಕೂಟರ್-ಸ್ಕೂಟರು, ಬೈಕ್-ಬೈಕು, ಹೆಲ್ಮೆಟ್-ಹೆಲ್ಮೆಟು, ಇತ್ಯಾದಿ.

"ಉ" ಕಾರಾಂತ್ಯದಿಂದ ಕನ್ನಡಕ್ಕಿಂತಲೂ ಕನ್ನಡ ಶಬ್ದಗಳಾಗಿ ಕನ್ನಡ "ಆಡಳಿತ ಭಾಷೆಯ ಶಬ್ದ ಭಂಡಾರಕ್ಕೆ ಸೇರಿಹೋದವು. ಸೇರಿದ ಈ ಶಬ್ದಗಳನ್ನು ಬಹಿಷ್ಕರಿಸುವಷ್ಟು ಮಡಿವಂತಿಕೆ ನಮಗೆ ಬೇಡವೆಂದು" ಮಾಧವರಾವ್ ಮುಧೋಳ್ ಇವರು ತಿಳಿಸಿದ್ದಾರೆ. ಈ ಬಗ್ಗೆ ಕುವೆಂಪುರವರು ಬಗೆಹರಿಸಿದ ಒಂದು ಪ್ರಸಂಗವನ್ನು ಉದಾಹರಣೆಯನ್ನಾಗಿ ನೀಡಿದ್ದಾರೆ. ಅದೇನೆಂದರೆ,

ಕಚೇರಿಯ ವಿಷಯ ನಿರ್ವಾಹಕನಿಗೆ ಒಂದು ಕಾಗದ ಬಂದಿತು. ಅದರಲ್ಲಿ ಸಾವಿರ ಟನ್ ವಜ್ರಚೂರ್ಣದ ಅಗತ್ಯವಿದೆ ಎಂದಿತ್ತು. ಸಾಮಾನ್ಯವಾಗಿ ವಿಷಯನಿರ್ವಾಹಕರ ಸ್ವಭಾವವೆಂದರೆ ಕಾಗದದಲ್ಲಿ ತಮ್ಮ ವಿಭಾಗದ ವಿಷಯ ನಿರ್ವಹಣೆಯ ಹೆಸರು ಕಾಣದಿದ್ದರೆ ಬಂದ ಕಾಗದ ತಮ್ಮದಲ್ಲವೆಂದು ಬೇರೆಯವರಿಗೆ ಹೊತ್ತು ಹಾಕುವುದು. 'ಚೂರ್ಣ' ಎಂದು ಓದುತ್ತಲೇ, 'ಆಯುರ್ವೇದಿಕ್ ವಿಭಾಗಕ್ಕೆ ಕಳಿಸಿ' ಎಂದರಂತೆ.

ಆಯುರ್ವೇದದವರಿಗೆ ಔಂಸಿನ ಲೆಕ್ಕದಲ್ಲಿ ಚೂರ್ಣವನ್ನು ಕೊಟ್ಟು ಗೊತ್ತು. ಸಾವಿರ ಟನ್ ಚೂರ್ಣ ಎನ್ನುತ್ತಲೂ ಪ್ರಾಯಶಃ ಆ ಕಾಗದ ಲೋಕೋಪಯೋಗಿ ವಿಭಾಗಕ್ಕೆ ಸಂಬಂಧಪಟ್ಟಿದ್ದು ಇರಬಹುದು. ಟನ್ ಗಟ್ಟಲೇ ವ್ಯವಹಾರ ನಡೆಯುವುದು ಆ ಇಲಾಖೆಯಲ್ಲೇ ಎಂದು ಕಾಗದವನ್ನು ಲೋಕೋಪಯೋಗಿ ವಿಭಾಗಕ್ಕೆ ಕಳಿಸಲಾಯಿತು. ಆ ವಿಭಾಗದ ವಿಷಯನಿವಾಹಕ ಆ ಕಾಗದವನ್ನು ತನ್ನ ವಿಭಾಗದ್ದೇ ಎಂದು ಒಪ್ಪಿಕೊಂಡ. ಒಪ್ಪಿಕೊಂಡಾಗ, "ಈ ವಜ್ರ ಚೂರ್ಣ ಎಂದರೆ ಏನು?" ಎಂದು ವಿಷಯ ನಿರ್ವಾಹಕ ಪತ್ರಬರೆದವರನ್ನು ಕೇಳಿದ. ಆಗ ಪತ್ರ ಬರೆದವನು 'ಸಿಮೆಂಟಿಗೆ ವಜ್ರಚೂರ್ಣವೆಂದು ಕನ್ನಡ ಪದ ಉಪಯೋಗಿಸಿದ್ದೇನೆ' ಎಂದು ಉತ್ತರಿಸಿದ. "ಸಿಮೆಂಟ್ ಅಂದರೇನೆ ಸುಲಭವಾಗಿ ತಿಳಿಯುತ್ತಿತ್ತು. ಇಷ್ಟು ಜಟಿಲವಾದ ಪದವನ್ನು ಏಕೆ ಉಪಯೋಗಿಸಿದೆ?" ಎಂದು ಕೇಳಿದನಂತೆ. ಅದಕ್ಕೆ ಉತ್ತರವಾಗಿ "ಸಿಮೆಂಟ್ ಇಂಗ್ಲೀಷ್ ಪದ ಅದಕ್ಕೆ ಕನ್ನಡದಲ್ಲಿ ವಜ್ರಚೂರ್ಣ ಎಂದು ಉಪಯೋಗಿಸಿರುವೆ" ಎಂದು ಉತ್ತರ ನೀಡಿದರಂತೆ. ಇಬ್ಬರೂ ವಿಷಯ ನಿರ್ವಾಹಕರು, ಸಿಮೆಂಟ್ ಪದ ಬಳಸುವುದೋ ಅಥವಾ ವಜ್ರಚೂರ್ಣ ಪದ ಉಪಯೋಗಿಸುವುದೋ ಎಂಬ ನಿರ್ಣಯವನ್ನು ಮಾಡಿಬಿಡೋಣವೆಂದು ಕುವೆಂಪು ಅವರಲ್ಲಿ ನಿರ್ಣಯ ಪಡೆಯಲು ಹೋದರು.

ಕುವೆಂಪು ಅವರಿಬ್ಬರನ್ನೂ ಕೂರಿಸಿ, ವಿಷಯವೇನೆಂದು ತಿಳಿದರು. ಎದುರಿಗಿದ್ದವರಿಗೆ ಚಾಕ್ ಪೀಸ್ ತೋರಿಸಿ ಇದನ್ನು ಏನೆನ್ನುತ್ತಾರೆ.? ಎಂದು ಕೇಳಿದರು. ವಜ್ರಚೂರ್ಣ ಬರೆದ ವ್ಯಕ್ತಿ 'ಸೀಮೆ ಸುಣ್ಣ' ಎಂದ. ಸಂಜೆಯಾಗುತ್ತಲೆ ಕಂದೀಲಿಗೆ ದೀಪ ಹಚ್ಚಲು ಯಾವ ಎಣ್ಣೆ ಹಾಕುತ್ತಾರೆ? ಎಂದು ಮರು ಪ್ರಶ್ನೆಯನ್ನು ಕೇಳಿದರು. ಅದಕ್ಕೆ ಉತ್ತರವಾಗಿ 'ಸೀಮೆ ಎಣ್ಣೆ' ಎಂಬ ಉತ್ತರ ಬಂತು. ನಂತರ ಕುವೆಂಪು ಅವರು ಹೌದು! ಸೀಮೆ ಸುಣ್ಣ, ಸೀಮೆ ಎಣ್ಣೆ ಹೇಗೆ ಅಂದಿರೋ ಹಾಗೇ ಸಿಮೆಂಟು ಅನ್ನ ಬೇಕು.' ಏಕೆಂದರೆ ಇದು ಕಲ್ಲುಗಳನ್ನು ಜೋಡಿಸುವ ಅಂಟು, ಸೀಮೆ ಅಂಟು=ಸಿಮೆಂಟು ಎಂದು ಹೇಳಿ ವಜ್ರಚೂರ್ಣಕ್ಕಿಂತಲೂ, ಸಿಮೆಂಟು ಒಳ್ಳೆಯದು. ಇದು ಎಲ್ಲರ ನಾಲಿಗೆಯ ಮೇಲಿರುವ ಸುಲಭ ಪದ" ಎಂದು ಹೇಳಿ ಸಮಾಧಾನ ಮಾಡಿ ಕಳಿಸಿದರು.

ಜನರ ನಾಲಿಗೆಯ ಮೇಲೆ, ಜನ ಜನಿತವಾಗಿ ಉಪಯೋಗಿಸುವ ಅರ್ಥವಾಗುವ ಪದ ಯಾವುದೇ ಭಾಷೆಯದ್ದಾದರೂ ಕನ್ನಡದ್ದೇ ಎಂದು ಭಾವಿಸುವುದು ಸೂಕ್ತ, ಇಂಥ ಪದಗಳನ್ನು ಬಳಸುತ್ತಿರುವಾಗ ಅವುಗಳಿಗೆ ಸಂವಾದಿಯಾಗುವ ಕನ್ನಡ ಪದಗಳು ಸೃಷ್ಟಿ ಆದಾಗ, ಇಂಗ್ಲೀಷ್ ಪದಗಳು ತಾವಾಗಿಯೇ ಮಾಯವಾಗುತ್ತವೆ ಎನ್ನುತ್ತಾರೆ.

ಉದಾ: ಉರ್ದು ಪದಗಳಾದ ತಾರೀಖು – 'ದಿನಾಂಕ'ವಾಗಿದೆ. ಕಿಮ್ಮತ್ತು –'ಬೆಲೆ'ಯಾಗಿದೆ.

ಸಂವಾದಿ ಪದಗಳು ರೂಡಿಗೆ ಬಂದಾಗ ಇರುವ ಇಂಗ್ಲೀಷ್ ಅಥವಾ ಬೇರೆ ಯಾವ ಭಾಷೆಯ ಪದಗಳು ತಮ್ಮ ತಾವಾಗಿಯೇ ಮಾಯವಾಗುತ್ತವೆ. ಎಂದು ವಿವರಿಸಿದ್ದಾರೆ.

'ಉ' ಕಾರ ಸೇರಿಸಿ ಆಡಳಿತದಲ್ಲಿ ಬಳಸಲಾಗುತ್ತಿರುವ ಅನ್ಯದೇಶಿಯ ಅಥವಾ ಸ್ವೀಕರಣ ಪದಗಳು: ಕೋರ್ಟ್–ಕೋರ್ಟು, ವಾರೆಂಟ್–ವಾರೆಂಟು, ಪೋಲೀಸ್–ಪೋಲಿಸು, ಅರೆಸ್ಟ್–ಅರೆಸ್ಟು, ಹಿಯರಿಂಗ್–ಹಿಯರಿಂಗು, ಪೋಸ್ಟ್–ಪೋಸ್ಟು, ಸಸಪೆಂಡ್–ಸಸ್ಪೆಂಡು, ಡಿಸ್‌ಮಿಸ್–ಡಿಸ್‌ಮಿಸ್ಸು, ಎಫಿಡೆವಿಟ್–ಎಫಿಡೆವಿಟ್ಟು, ಇತ್ಯಾದಿ.

ಸಂವಾದಿ ಪದಗಳು ಇದ್ದರೂ ನೇರವಾಗಿ ಆಡಳಿತದಲ್ಲಿ ಬಳಕೆಯಲ್ಲಿರುವ ಪದಗಳು.

Slip – ಚೀಟಿ , Token- ಗುರುತು, ಚಿಹ್ನೆ, ಲಕ್ಷಣ, ನೆನಪಿಗಾಗಿ (ಆದರೆ ಆಡಳಿತಕ್ಕೆ ಸರಿ ಹೊಂದದು), Bill- ಬೆಲೆ ಪಟ್ಟಿ , Acqueatence – ವಹಿ, Seel-ಮುದ್ರೆ , Circular -ಸುತ್ತೋಲೆ, Pookar - ತೂತು ಮೊಳೆ, Punch- ರಂದ್ರಯಂತ್ರ, Register-ವಹಿ /ನೊಂದಣಿ, Stapler , Tapal- bag -ಸಂಚೆ ಚೀಲ /ಕಡತ ಚೀಲ File-ಕಡತ, Xerox- ನೆರಳಚ್ಚು, Print–ಮುದ್ರಣ, Tape-ಅಳತೆ ಪಟ್ಟಿ, ಅಂಟು ಹೊದಿಕೆ, Eraz-ex-ಅಳಿಕೆ, Stamp - ಅಂಚೆ ಚೀಟಿ, M.O - money order. ಹಣ ಕಳುಹಿಸುವಿಕೆ, Bond-ಗಟ್ಟಿ, ಬಿಗಿಯಾದ, ಖಾಲಿ ನೊಂದಣಿ ಪತ್ರ (Bond paper), Rack- ಕಪಾಟು.

ಕೋರ್ಟ, ವಾರಂಟು, ಮಹಜರ್, ಟಪಾಲು, ಗೆಜಟ್ಟು, ನೋಟಿಫಿಕೇಶನ್ ಇವುಗಳಿಗೆ ಕನ್ನಡ ಪದಗಳು ಬಳಕೆಗೆ ಬಂದಿವೆ. ಅದರೆ ಇನ್ನೂ ಈ ಪದಗಳು ಹಾಗೆಯೇ ಬಳಕೆಯಾಗುತ್ತಿವೆ. ಹೀಗೆ ಹಲವಾರು ಹಂತಗಳಲ್ಲಿ ಪಾರಿಭಾಷಿಕ ಪದಗಳ ಪ್ರಭಾವವನ್ನು ಬೀರಿವೆ.

ತೆಲುಗು ಮತ್ತು ತಮಿಳು

ಕನ್ನಡ, ತೆಲುಗು ಮತ್ತು ತಮಿಳು, ಮೂರೂ ಭಾಷೆಗಳು ಬೇರೆ ಬೇರೆಯಾದರೂ, ಈ ಮೂರೂ ಭಾಷೆಗಳ ಮಧ್ಯದಲ್ಲಿ ಸಂಬಂಧಗಳಿವೆ. ಮೊದಲನೆಯದಾಗಿ, ಈ ಮೂರೂ ಭಾಷೆಗಳು ಮೂಲದಲ್ಲಿ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಭಾಷೆಗಳಾಗಿವೆ. ಎರಡನೆಯದಾಗಿ, ಮೂರೂ ಭಾಷೆಗಳಲ್ಲಿ ನಡುವೆ ಒಂದರಲ್ಲೊಂದು ರಾಚನಿಕವಾದ ಸಾಮ್ಯತೆಗಳಿರುವುದನ್ನು ನೋಡಬಹುದಾಗಿದೆ. ಮೂರನೆಯದಾಗಿ, ಭೌಗೋಳಿಕವಾಗಿ ಒಂದು ಇನ್ನೊಂದರ ಗಡಿಪ್ರದೇಶಗಳಿಗೆ ಹೊಂದಿಕೊಂಡಿವೆ. ನಾಲ್ಕನೆಯದಾಗಿ, ಸಾಮಾಜಿಕವಾಗಿ ಮೂರೂ ಭಾಷೆಗಳು ಕೊಡುಕೊಳುವಿಕೆಯ ಸಂಬಂಧವನ್ನು ಹೊಂದಿವೆ.

ಭಾಷಾವಾರು ಪ್ರಾಂತ್ಯಗಳ ರಚನೆಯಾದ ನಂತರದಲ್ಲಿ ಕನ್ನಡ ಭಾಷೆಯನ್ನು ಮಾತನಾಡುವ ಭಾಷಿಕರು ತೆಲುಗು ಮತ್ತು ತಮಿಳು (ಆಂಧ್ರಪ್ರದೇಶ ಮತ್ತು ತಮಿಳುನಾಡು) ರಾಜ್ಯಗಳಲ್ಲಿ ಉಳಿದಿದ್ದಾರೆ. ತೆಲುಗು ಭಾಷೆಯನ್ನು ಮಾತನಾಡುವ ಭಾಷಿಕರು ಕನ್ನಡ ಮತ್ತು ತಮಿಳು ರಾಜ್ಯಗಳಲ್ಲಿ ಉಳಿದಿದ್ದಾರೆ. ಅದೇತರಹ ತಮಿಳು ಭಾಷೆಯನ್ನು ಮಾತನಾಡುವ ಭಾಷಿಕರು ಕನ್ನಡ ಮತ್ತು ತೆಲುಗು ರಾಜ್ಯಗಳಲ್ಲಿ ಉಳಿದಿದ್ದಾರೆ. ಹೀಗಾಗಿ ಅನಿವಾರ್ಯವಾಗಿ ಭಾಷಿಕವಾಗಿ ರಾಜ್ಯದ ಭಾಷೆಯನ್ನು ಕಲಿಯಲೇಬೇಕು. ಆದರೆ ವ್ಯವಹಾರದಲ್ಲಿ ತಮ್ಮ ಮನೆಯ ಪರಿಸರದಲ್ಲಿ ತಮ್ಮ ಭಾಷೆಯನ್ನು ಬಳಸಬೇಕಾದ ಸಂದರ್ಭಗಳು ಏರ್ಪಟ್ಟಿವೆ. ಅಲ್ಲದೇ ಸಾಮಾಜಿಕ ಸಂಬಂಧದ ವಿವಿಧ ಕಾರಣಗಳಾದ–ವಿವಾಹ, ಸಂಬಂಧ, ವ್ಯಾಪಾರ, ಹೋಗಿಬರುವಿಕೆಯ ಮುಖಾಂತರ ಎರಡೂ ಭಾಷೆಗಳ ಮಧ್ಯೆ ಸ್ವೀಕರಣ ಮತ್ತು ಈ ಭಾಷಿಕರು ಸಾಮಾಜಿಕವಾಗಿ ಅನೇಕ ಸಂದರ್ಭಗಳಲ್ಲಿ ಮುಖಾಮುಖಿಯಾಗ ಬೇಕಾಗಿರುವುದರಿಂದ ಅನೇಕ ಬಗೆಯ ಸಂಬಂಧಗಳು ನಡೆದಿದೆ ಎನ್ನಬಹುದು.

ತಮಿಳು ಮತ್ತು ತೆಲುಗು ಭಾಷಿಕರು ಕರ್ನಾಟಕದಲ್ಲಿ ನೆಲೆಸಿರುವುದರಿಂದ, ಕನ್ನಡ ಭಾಷೆಯ ಪದಗಳನ್ನು ಬಳಸುವುದು ಅನಿವಾರ್ಯವಾಗಿ ಅನೇಕ ಸಂದರ್ಭಗಳಲ್ಲಿ ದ್ವಿಭಾಷಿಕರಾಗಿ ಮಾರ್ಪಡುವುದು ಸಾಮಾನ್ಯವಾಗಿದೆ. ಕೋಲಾರ, ಬೆಂಗಳೂರು, ಚಾಮರಾಜನಗರ, ಮೈಸೂರಿನ ಪ್ರದೇಶಗಳು ತಮಿಳುನಾಡಿಗೆ ಅಂಟಿಕೊಂಡಿವೆ. ಬಳ್ಳಾರಿ, ರಾಯಚೂರು, ಕಲಬುರ್ಗಿ, ಬೀದರ್, ಚಿತ್ರದುರ್ಗ, ಪಾವಗಡ ಈ ಪ್ರದೇಶಗಳು ಆಂಧ್ರಪ್ರದೇಶದ ಗಡಿಗಳಿಗೆ ಹೊಂದಿಕೊಂಡಿವೆ. ಈ ಹಿನ್ನೆಲೆಯಲ್ಲಿ ಬೇರೆ ಬೇರೆ ಕಾರಣಗಳಿಂದ ಕನ್ನಡಕ್ಕೆ ಎರಡೂ ರಾಜ್ಯಗಳಲ್ಲಿನ ಭಾಷೆಗಳ ಪ್ರಭಾವ ಆಗಿದೆ ಎನ್ನಬಹುದು.

ಆಡಳಿತ ಕನ್ನಡದ ಮೇಲೆ ವಿವಿಧ ಭಾಷೆಗಳು ಪರಿಣಾಮ ಬೀರಿರುವುದನ್ನು ಗಮನಿಸಿದಾಗ ಕೆಲವೊಂದು ವಿಚಾರಗಳು ಕಂಡು ಬರುತ್ತವೆ.

೧. ಬೇರೆ ಭಾಷೆಯಿಂದ ಪದ ವ್ಯತ್ಯಾಸವಾಗದೇ ನೇರವಾಗಿ ಕನ್ನಡಕ್ಕೆ ಬಂದ ಪದಗಳು.

ಉದಾ; ಹಸ್ತಕ್ಷೇಪ, ಸ್ತ್ರೀ, ಭೂಮಿ ಇತ್ಯಾದಿ.

೨. ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಕನ್ನಡಕ್ಕೆ ಬಂದ ಪದಗಳು.

ಉದಾ; ಶಾಖಾ–ಶಾಖೆ ಇತ್ಯಾದಿ.

೩. ಸಂಪೂರ್ಣವಾಗಿ ಅರ್ಥಬದಲಾಯಿಸಿಕೊಂಡು ಕನ್ನಡಕ್ಕೆ ಬಂದ ಪದಗಳು.

ಉದಾ; ಅವಸ್ಥೆ–ಸ್ಥಿತಿ, ಸಂಭ್ರಮ–ಉತ್ಸಾಹ.

೪. ಶಬ್ದಕ್ಕೆ ಶಬ್ದಗಳನ್ನಿಟ್ಟು ಕನ್ನಡದಲ್ಲಿ ಭಾಷಾಂತರ ಮಾಡಿ ಬಳಕೆಮಾಡಲಾದ ಪದಗಳು.

೫. ತಮ್ಮ ಉಚ್ಚಾರಕ್ಕನುಗುಣವಾಗಿ ತತ್ಸಮಗಳಿಗೆ ತದ್ಭವಗಳನ್ನು ರೂಪಿಸಿಕೊಂಡು ಬಳಕೆಮಾಡಲಾದ ಪದಗಳು.

ಒಟ್ಟಾರೆಯಾಗಿ ಆಡಳಿತ ಕನ್ನಡದ ಮೇಲೆ ವಿವಿಧ ಭಾಷೆಗಳ ಪ್ರಭಾವದ ಪರಿಣಾಮವಾಗಿ ಬೇರೆ ಭಾಷೆಯ ಪದಗಳ ಪ್ರವೇಶ ಆಡಳಿತದಲ್ಲಿ ಆಗಿದ್ದು ಅವು ಇಂದಿಗೂ ಬಳಕೆಯಾಗುತ್ತಿವೆ.

೪. ಆಡಳಿತ ಕನ್ನಡ : ಬಳಕೆಯ ಹಂತಗಳು.

ಒಂದು ಭಾಷೆಯನ್ನು ಸಂದರ್ಭಕ್ಕೆ ತಕ್ಕಂತೆ ಹಲವಾರು ಕ್ಷೇತ್ರಗಳಲ್ಲಿ ಹಲವಾರು ವಲಯಗಳಲ್ಲಿ ವಿವಿಧ ರೀತಿಗಳಲ್ಲಿ ಬಳಸಲಾಗುತ್ತದೆ. ಉದಾ; ವ್ಯಾಪಾರ, ವಹಿವಾಟು, ಕಚೇರಿ, ಸಾಮಾಜಿಕ ತಾಣಗಳು, ತಾಂತ್ರಿಕ, ವಿಜ್ಞಾನ, ವೈದ್ಯಕೀಯ ಇತ್ಯಾದಿ. ಈ ರೀತಿಯಲ್ಲಿ ಗಮನಿಸುವುದಾದರೆ ಕನ್ನಡವನ್ನು ಆಡಳಿತ ಕ್ಷೇತ್ರದಲ್ಲಿ ವಿವಿಧ ಹಂತಗಳಲ್ಲಿ ಬಳಸಲಾಗುತ್ತದೆ. ಅದನ್ನೇ ಪ್ರಸ್ತುತ ಸಂದರ್ಭದಲ್ಲಿ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಆಡಳಿತ ಕನ್ನಡದ ಹಂತಗಳು ಎಂದು ಗುರುತಿಸಿಕೊಂಡು ವಿವರಿಸುವ ಪ್ರಯತ್ನ ಮಾಡಲಾಗಿದೆ. ಆಡಳಿತ ಕನ್ನಡ ಹಂತಗಳು ಈ ಕೆಳಕಡಂತಿವೆ,

೧. ಸಾಮಾನ್ಯ ವ್ಯವಹಾರದಲ್ಲಿ ಆಡಳಿತ ಕನ್ನಡದ ಬಳಕೆ,

೨. ನ್ಯಾಯಾಲಯಗಳಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆ.

೧. ಸಾಮಾನ್ಯ ವ್ಯವಹಾರದಲ್ಲಿ ಆಡಳಿತ ಕನ್ನಡದ ಬಳಕೆ.

ಸರಕಾರಿ ಇಲಾಖೆಗಳು ಸಾರ್ವಜನಿಕರೊಡನೆ ನಿರ್ವಹಿಸುವ ವ್ಯವಹಾರದ ಆಡಳಿತ ಕನ್ನಡವೆಂದು ಕರೆಯಲಾಗಿದೆ. ಕಚೇರಿಗಳಲ್ಲಿ ದಿನನಿತ್ಯದ ಕಾರ್ಯಕಲಾಪಗಳಲ್ಲಿ, ಸಾರ್ವಜನಿಕರೊಡನೆ ವ್ಯವಹರಿಸುವ, ಮೇಲಾಧಿಕಾರಿಗಳಿಗೆ ಬರೆಯುವ, ಹಿಂಬರಹ ನೀಡುವ, ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಮುಂತಾದ ಹತ್ತು ಹಲವು ವಿಚಾರಗಳಿಗೆ ಸಂಬಂಧಪಟ್ಟಂತೆ ಆಡಳಿತದಲ್ಲಿ ಹಲವಾರು ಪತ್ರ ವ್ಯವಹಾರಗಳು ನಡೆಯುತ್ತಿರುತ್ತವೆ.

ಸಾರ್ವಜನಿಕರೊಡನೆ ವ್ಯವಹರಿಸುವ ಆಡಳಿತ ಕನ್ನಡವು ಗ್ರಾಥಿಕ ಕನ್ನಡವಾಗಿದ್ದು ಆಡಳಿತ ಕನ್ನಡದ ರೂಪುರೇಷೆಗಳನ್ನು ಸ್ವಲ್ಪ ಮಟ್ಟಿಗೆಯಾದರೂ ಹೊಂದಿರುತ್ತದೆ ಹಾಗೂ ಹೋಲುವಂತಿರುತ್ತದೆ. ಇಲಾಖೆಗಳು ಸಾರ್ವಜನಿಕರೊಡನೆ ನಿರ್ವಹಿಸುವ ವ್ಯವಹಾರದ ಆಡಳಿತ ಕನ್ನಡ ವ್ಯಂಗ್ಯ, ಅಪಹಾಸ್ಯ, ವಿಡಂಬನೆಗಳಿಗೆ ಅವಕಾಶಗಳನ್ನು ನೀಡದೇ ಆಡಳಿತ ಭಾಷೆಗೆ ಹತ್ತಿರವಾಗಿರುವುದಾಗಿರುತ್ತದೆ, ಇದನ್ನು ಹಲವಾರು ಉದಾಹರಣೆಗಳಿಂದ ಗಮನಿಸಬಹುದು.

ಇಲಾಖೆಗಳು ಸಾರ್ವಜನಿಕರೊಡನೆ ವ್ಯವಹರಿಸುವ ಆಡಳಿತ ಕನ್ನಡ, ಕನ್ನಡವಾಗಿದ್ದು, ಆಡುಮಾತಿನ ಕನ್ನಡಕ್ಕೆ ಅವಕಾಶವನ್ನು ಕಲ್ಪಿಸಿಕೊಡದೇ ವ್ಯವಹರಿಸುತ್ತದೆ. ಒಂದು ರೀತಿಯಲ್ಲಿ ಹೇಳುವುದಾದರೆ, ಆಡುಮಾತಿನ ಕನ್ನಡ ಗ್ರಾಂಥಿಕ ರೂಪ ಪಡೆದುಕೊಂಡು ಆಡಳಿತ ವಲಯದಲ್ಲಿನ ವಿಶಿಷ್ಟ ಪದಗಳು ಸೇರಿ, ಇಲಾಖೆಗಳಲ್ಲಿ ಬಳಕೆಯಾಗುವ ಕನ್ನಡವೇ ಆಡಳಿತ ಕನ್ನಡವಾಗಿದೆ.

ಉದಾಹರಣೆಗಾಗಿ:- ಎರಡು ಪತ್ರದಲ್ಲಿನ ಭಿನ್ನತೆಯನ್ನು ಕಾಣಬಹುದಾಗಿದೆ.

೧. ಸಾರ್ವಜನಿಕರಿಂದ ಸ್ವೀಕೃತಿಯಾದ ಅರ್ಜಿ

೨ ಅದಕ್ಕೆ ಸಂವಾದಿಯಾಗಿ ಇಲಾಖೆಗಳು ವ್ಯವಹರಿಸುವ ಆಡಳಿತ ಕನ್ನಡ ಪ್ರತಿ.

ಸಾರ್ವಜನಿಕರು ಇಲಾಖೆಗಳಿಗೆ ವ್ಯವಹರಿಸುವ ಸಂದರ್ಭದಲ್ಲಿ, ಪತ್ರಗಳಲ್ಲಿ ಆಡಳಿತ ಕನ್ನಡದ ಬಳಕೆ ಇರಬಹುದು ಅಥವಾ ಇರದಿರಬಹುದು. ಕಾರಣ ಅದು ಅವರವರ ವೈಯಕ್ತಿಕ ಭಿನ್ನತೆ ಮತ್ತು ಅರ್ಹತೆಗಳ ಮೇಲೆ ನಿರ್ಧಾರವಾಗಿರುತ್ತದೆ. ಸಾರ್ವಜನಿಕರ ವೈಯಕ್ತಿಕ ಅರ್ಹತೆ ಮತ್ತು

ಭಿನ್ನತೆಗಳಿಗೆ ಗಮನಕೊಡದೆ, ಪತ್ರದಲ್ಲಿನ ವಿಷಯಕ್ಕೆ ಒತ್ತುಕೊಟ್ಟು ಆ ವಿಷಯಕ್ಕೆ ಸಂಬಂಧಪಟ್ಟಂತೆ ಇಲಾಖೆಗಳು ಸಂಬಂಧಪಟ್ಟವರಿಗೆ ವ್ಯವಹರಿಸುವ ಪತ್ರದಲ್ಲಿನ ಬಳಕೆಯ ಕನ್ನಡವೇ ಆಡಳಿತ ಕನ್ನಡವಾಗಿರುತ್ತದೆ. ಈ ನಿಟ್ಟಿನಲ್ಲಿ ನೋಡುವುದಾದದರೆ ಇಲ್ಲಿ ಭಾಷೆ, ಬರಹಕ್ಕೆ ಒತ್ತು ನೀಡದೇ ವಿಷಯಕ್ಕೆ ಒತ್ತುಕೊಡುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಆಡಳಿತ ಕನ್ನಡಕ್ಕೂ, ಸಾಮಾನ್ಯ ಕನ್ನಡಕ್ಕೂ ತುಂಬಾ ವ್ಯತ್ಯಾಸಗಳಿವೆ. ಇದನ್ನು ಪರಿಶೀಲಿಸಿದಾಗ ಅದರಲ್ಲಿನ ಸೂಕ್ಷ್ಮತೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಪ್ರತಿಯೊಬ್ಬರೂ ಸಾರ್ವಜನಿಕ ವಲಯದಲ್ಲಿನ ನಾಗರಿಕ ತಮ್ಮ ಪ್ರಾದೇಶಿಕ ವಲಯದ ಭಾಷೆಯನ್ನು ಪ್ರಯೋಗಿಸಿ ಪತ್ರ ವ್ಯವಹಾರಗಳನ್ನು ನಡೆಸುತ್ತಿರುತ್ತಾರೆ. ವಿವಿದ ಇಲಾಖೆಗಳಿಗೆ ತಮ್ಮ ತಮ್ಮ ವಿಷಯಗಳಿಗೆ ಸಂಬಂಧಪಟ್ಟಂತೆ ಪತ್ರವ್ಯವಹಾರಗಳನ್ನು ನಡೆಸುತ್ತಿರುವ ಸಂದರ್ಭದಲ್ಲಿ ಯಥಾವತ್ತಾಗಿ ದಿನನಿತ್ಯ ಮಾತನಾಡುವ ಕನ್ನಡವನ್ನೇ ಕಚೇರಿಯಲ್ಲಿನ ಪತ್ರವ್ಯವಹಾರಕ್ಕೆ ಬಳಸಿಕೊಳ್ಳುತ್ತಾರೆ ಇದನ್ನೇ ಕನ್ನಡದಲ್ಲಿ ದಾಖಲಾಗುವ ಕನ್ನಡ ಅಥವಾ ಸಾಮಾನ್ಯ ಕನ್ನಡ ಎನ್ನುತ್ತೇವೆ.

ಆಡುಮಾತಿನ ಕನ್ನಡವು ಲಿಖಿತ ರೂಪವನ್ನು ಪಡೆದುಕೊಂಡು ಪತ್ರ ವ್ಯವಹಾರ ನಡೆಸುವುದೇ ಸಾಮಾನ್ಯ ಕನ್ನಡವಾಗಿದೆ.

ಇಲಾಖೆ	ಕನ್ನಡದಲ್ಲಿ ದಾಖಲಾಗುವ ಕನ್ನಡ	ಗ್ರಾಂಥಿಕ ರೂಪ	ಆಡಳಿತ ಕನ್ನಡ ರೂಪ
ಪೋಲಿಸ್ ಇಲಾಖೆಗೆ ಸಲ್ಲಿಸಲಾದ ಮನವಿ	ಗಾಡಿಯಿಂದ ಗುದ್ದಿದನು ತಿವುದನು, ಎಟ್ಟಿದನು	ದ್ವಿಚಕ್ರ ವಾಹನ ಡಿಕ್ಕಿ	ದ್ವಿಚಕ್ರ ವಾಹನದಿಂದ ಅಪಘಾತ
ಕಂದಾಯ ಇಲಾಖೆ	ಹೊಲ ಪಟ್ಟ ಮಾಡಿಕೊಡುವ ಬಗ್ಗೆ	ಭೂಮಿ-ಜಮೀನು ಪಟ್ಟಾ ಮಾಡುವ ಬಗ್ಗೆ	ಭೂ-ಒಡೆತನ ಹಕ್ಕು
ಅರಣ್ಯ ಇಲಾಖೆ	ಕಾಡಿಗೆ ಬೆಂಕಿ ಅತ್ತಿದೆ	ಕಾಡಿಗೆ ಬೆಂಕಿ ಹತ್ತಿದೆ	ಅರಣ್ಯ ಪ್ರದೇಶಕ್ಕೆ ಬೆಂಕಿ ಹತ್ತಿದೆ
ಸಾರಿಗೆ ಇಲಾಖೆ	ಗಾಡಿಯನ್ನು ರಿಜಿಸ್ಟರ್ ಮಾಡಿಕೊಡಿ	ವಾಹನವನ್ನು ನೋಂದಣಿ ಮಾಡಿಕೊಡಿ	ವಾಹನವನ್ನು ನೋಂದಣಿ ಮಾಡಿಕೊಡಿ
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ	ನನಗೆ ದುಡ್ಡು ತಗೊಂಡ್ಬಾ ಎಂದು ಕಾಟ ಕೊಡುತ್ತಿದ್ದಾರೆ	ನನಗೆ ಹಣ ತೆಗದುಕೊಂಡು ಬಾ ಎಂದು ಕಿರುಕುಳ ಕೊಡುತ್ತಿದ್ದಾರೆ	ವರದಕ್ಷಿಣೆ ಕಿರುಕುಳ
ಸಾಮಾನ್ಯವಾಗಿ ಎಲ್ಲಾ ಇಲಾಖೆಗಳಲ್ಲಿ	ಮಾಡಕಾಗಲ್ಲ ಕೆಟ್ಟ ಶಬ್ದಗಳಿಂದ ಬೈದರು	ಮಾಡಲು ಆಗುವುದಿಲ್ಲ ಅವಾಚ್ಯ ಶಬ್ದಗಳಿಂದ ನಿಂದನೆ	ಆಗದು ನಿಂದನೆ

ಮಾತಿನ ರೂಪದಲ್ಲಿ ದಾಖಲಾಗುವ ಕನ್ನಡದ ಸ್ವರೂಪವು, ಪ್ರಾದೇಶಿಕ ಭಿನ್ನತೆ, ಆಡು ಭಾಷೆಯ ಪ್ರಭಾವ ಎದ್ದು ಕಾಣುತ್ತಿರುತ್ತದೆ. ಇಂತಹ ದಾಖಲೆಯ ಕನ್ನಡವನ್ನು ಕೆಳಕಂಡಂತೆ ಆಡಳಿತ ಕನ್ನಡದ ಉಪ ವಿಭಾಗಗಳು ಅಥವಾ ಉಪ ಹಂತಗಳೆಂದು ವಿಭಾಗಿಸಿ ಕರೆಯಲಾಗಿದೆ. ಕರೆಯಲಾಗಿದೆ.

ಅ) ಪ್ರಾದೇಶಿಕ ಭಿನ್ನತೆಯ ಹಿನ್ನೆಲೆಯಲ್ಲಿ ಕನ್ನಡದಲ್ಲಿ ದಾಖಲಾದ ಕನ್ನಡ

ಮೈಸೂರು, ಕಲಬುರ್ಗಿ, ಕೋಲಾರ, ಬಳ್ಳಾರಿ, ಧಾರವಾಡ, ಬೀದರ, ಚಾಮರಾಜನಗರ

ಆ) ಅನ್ಯ ಭಾಷೆಯ ಪ್ರಭಾವದಿಂದ ಕನ್ನಡದಲ್ಲಿ ದಾಖಲಾದ ಕನ್ನಡ

ಮರಾಠಿ, ಉರ್ದು, ತೆಲುಗು, ಇಂಗ್ಲೀಷ್, ಮಲೆಯಾಳಂ.

ಇ) ಆಡು ಭಾಷೆಯ ಅಥವಾ ಮಾತೃ ಭಾಷೆಯ ಪ್ರಭಾವದಿಂದ ಕನ್ನಡದಲ್ಲಿ ದಾಖಲಾದ ಕನ್ನಡ,

ತುಳು, ಕೊಂಕಣಿ, ತೆಲುಗು, ಉರ್ದು.

ಈ) ಮಾತಿಗೂ ಮತ್ತು ಬರಹಕ್ಕೂ ಭಿನ್ನತೆಯ ಹಿನ್ನಲೆಯಲ್ಲಿ ಕನ್ನಡದಲ್ಲಿ ದಾಖಲಾದ ಕನ್ನಡ

ರೇಫಾಕ್ಷರಗಳ ಬಳಕೆ, ಉಚ್ಚಾರಣೆಗೆ ಮತ್ತು ಬರಹಕ್ಕೆ ವ್ಯತ್ಯಾಸಗಳ ಕನ್ನಡ

ಮೇಲಿನ ಎಲ್ಲಾ ಹಂತಗಳಲ್ಲಿ ಕನ್ನಡ ಬಳಕೆಯಾಗುತ್ತಿದ್ದರೂ ಆಡಳಿತದ ವಲಯದಲ್ಲಿ ಅದರ ಬಳಕೆ ಬೇರೆಯಾಗಿಯೇ ರೂಪುಗೊಳ್ಳುತ್ತವೆ. ಮೊದಲು ಕನ್ನಡವು ಆಡುಮಾತಿನ ರೂಪವನ್ನು ಪಡೆದು ನಂತರದಲ್ಲಿ ಗ್ರಾಥಿಕ ರೂಪವಾಗಿ ರೂಪುಗೊಂಡು ಕೊನೆಯದಾಗಿ ಆಡಳಿತ ಕನ್ನಡದ ರೂಪವನ್ನು ಪಡೆದುಕೊಳ್ಳುತ್ತದೆ.

೨. ನ್ಯಾಯಾಲಯಗಳ ಆಡಳಿತದಲ್ಲಿ ಕನ್ನಡದ ಬಳಕೆ.

ಆಡಳಿತಕ್ಕೆ ಬೇಕಾದ ಅಗತ್ಯವಾದ ನೀತಿ, ನಿಯಮ, ಕಾನೂನು, ಕಟ್ಟಳೆ ಇತ್ಯಾದಿಗಳ ಕಾನೂನಿನ ಮೂಲಕ ಬಂಧನವನ್ನೊದಗಿಸಿರುವ ಕಾನೂನಿನ ಕನ್ನಡವನ್ನು ನ್ಯಾಯಾಲಯಗಳ ಆಡಳಿತದಲ್ಲಿ ಬಳಕೆಯಾದ ಆಡಳಿತ ಕನ್ನಡ ಎನ್ನಬಹುದು.

ಸಾರ್ವಜನಿಕವಾಗಿ ಒಬ್ಬ ಸಾಮಾನ್ಯ ಪ್ರಜೆಯು ತನ್ನ ವಿಷಯಗಳನ್ನು ಮತ್ತು ಅಭಿಪ್ರಾಯಗಳನ್ನು ಹಾಗೂ ಕುಂದು ಕೊರತೆಗಳನ್ನು ತನಗೆ ತಿಳಿದ ರೀತಿಯಲ್ಲಿ ಅಭಿವ್ಯಕ್ತ ಪಡಿಸುತ್ತಾನೆ, ಅದನ್ನೆ ತನಗೆ ತಿಳಿದ ಭಾಷೆಯಲ್ಲಿ ದಾಖಲಿಸುತ್ತಾನೆ. ಈ ಪ್ರಕ್ರಿಯೆ ಕನ್ನಡದಲ್ಲಿ ದಾಖಲಾಗುವ ಕನ್ನಡವಾದರೆ ಈ ಕನ್ನಡಕ್ಕೆ ನೀತಿನಿಯಮಗಳನ್ನು ರೂಪಿಸುವಲ್ಲಿ ಒಂದು ಚೌಕಟ್ಟನ್ನು ರೂಪಿಸುವಲ್ಲಿ ಸಫಲವಾಗಿರುವುದು ಕಾನೂನಿನ ಕನ್ನಡ. ಈ ಕಾನೂನಿನ ಕನ್ನಡದಲ್ಲಿ ಬಳಕೆಯಾಗುವ ಆಡಳಿತ ಕನ್ನಡ ಸಾಮಾನ್ಯ ಆಡಳಿತ ಕನ್ನಡಕ್ಕಿಂತಲೂ ಸ್ವಲ್ಪ ಭಿನ್ನವಾದದ್ದು. ಪ್ರತಿಯೊಂದು ಇಲಾಖೆಗಳಲ್ಲಿ ತನ್ನದೇ ಆದ ಇಲಾಖೆಯ ಪದಗಳ ಬಳಕೆ, ಅವುಗಳ ಪ್ರಯೋಗ ಆಡಳಿತ ವಲಯದಲ್ಲಿ ನಡೆಯುವುದು ಸಾಮಾನ್ಯ

ಕಾನೂನಿನ ಆಡಳಿತದಲ್ಲಿ ಬಳಕೆಯಾಗುವ ಆಡಳಿತ ಕನ್ನಡ ಪದಗಳು ಭಾಗಶಃ ಬೇರೊಂದು ಇಲಾಖೆಗಳಲ್ಲಿ ಬಳಸುವುದು ತುಂಬಾ ವಿರಳ. ಪ್ರಸ್ತುತ ಪರಿಶೀಲಿಸುವ ಹಾಗೂ ವಿಚಾರ ಮಾಡುವ ಅಂಶವೇನೆಂದರೆ, ಕಾನೂನಿನ ಕನ್ನಡದಲ್ಲಿ ಹಲವಾರು ಪಾರಿಭಾಷಿಕ ಪದಗಳು ಸೇರ್ಪಡೆಗೊಂಡು ಅವು ಕನ್ನಡ ಪದಗಳಾಗಿಯೇ ಕಾನೂನಿನ ಕನ್ನಡದಲ್ಲಿ ಉಳಿದು ಹೋಗಿರುವುದು ಮುಖ್ಯ ಸಂಗತಿ. ಸಹಜವಾಗಿ ಕಾನೂನಿನ ವ್ಯಾಪ್ತಿಯೇ ವಿಶಾಲವಾದದ್ದು ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಬಳಕೆಯಾಗುತ್ತಿರುವ ಕಾನೂನಿನ ಕನ್ನಡದ ವ್ಯಾಪ್ತಿಯು ವಿಶಿಷ್ಟ ಹಾಗೂ ವಿಭಿನ್ನವಾದುದಾಗಿದೆ.

ಪರಾಮರ್ಶನ ಗ್ರಂಥ

೧. ಎಚ್ಚೆಸ್ಕೆ, ೨೦೧೧, ಆಡಳಿತ ಕನ್ನಡ, ಚೇತನ ಬುಕ್ ಹೌಸ್, ಮೈಸೂರು

೨. ನಾರಾಯಣ ಕೆ.ವಿ., ೧೯೯೭, ಕನ್ನಡ ಶೈಲಿ ಕೈಪಿಡಿ, (ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಪಾರ್ಥಸಾರಥಿ. ಬಿ., ೨೦೦೬, ಕನ್ನಡದಲ್ಲಿ ಆಡಳಿತ, ಸಪ್ನ ಬುಕ್ ಹೌಸ್, ಬೆಂಗಳೂರು

೪. ಬಡ್ಡಿ. ಎಂ.ಎಂ., ೨೦೦೫, ಭಾರತದ ಸಂವಿಧಾನ, ಆಕಳವಾಡಿ ಬುಕ್ ಡಿಪೊ. ಧಾರವಾಡ

೫. ಭಾಷಾ ವಿಜ್ಞಾನ – ೧, ೨೦೧೧, (ಭಾಷೆ ಮತ್ತು ಪರಿವಾರಗಳು) ಪುಟ ೧೬–೧೮

೬. ಮಹದೇವ ಬಣಕಾರ, ೧೯೮೬, ಆಂಗ್ಲರ ಆಡಳಿತದಲ್ಲಿ ಕನ್ನಡ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೭. ಮಹದೇವಯ್ಯ. ಪಿ., ೨೦೦೮, ಕನ್ನಡ ಮತ್ತು ಸಮಾಜ, ಮೈಸೂರು

೮. ಮುಖ್ಯಮಂತ್ರಿ ಚಂದ್ರು., (ಸಂ) ಇತರರು (ಸಂ), ೨೦೧೦, ಆಡಳಿತ ಕನ್ನಡ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯. ಮಾದವರಾವ್ ಮುಧೋಳ್, ಆಡಳಿತ ಭಾಷೆ ಕನ್ನಡ, ಚೇತನ ಬುಕ್ಕ್ ಹೌಸ್, ಮೈಸೂರು. ಪು.ಸಂ–೧೦

೧೦. ರಾಜಪ್ಪ ದಳವಾಯಿ, ೨೦೦೮, ಕನ್ನಡ ಸಾಹಿತ್ಯ ಕೋಶ, ದಳವಾಯಿ ಪ್ರಕಾಶನ, ಬೆಂಗಳೂರು, ಪು ಸಂ–೨೮೨

೧೧. ಲೋಕಾಪುರ ರಂ.ಶಾ., ೧೯೯೪, ಕನ್ನಡ ಮರಾಠಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨. ಶೇಷಗಿರಿರಾವ್ ಎಲ್.ಎಸ್., (ಸಂ), ೧೯೯೪, ಕಿರಿಯರ ಕರ್ನಾಟಕ : ವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ಮಹತ್ವ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ಸ್ವರೂಪ

೧.೩. ಅಧ್ಯಯನದ ಮಹತ್ವ

೧.೪. ಅಧ್ಯಯನದ ವ್ಯಾಪ್ತಿ

೧.೫. ಅಧ್ಯಯನದ ವೈಧಾನಿಕತೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ಮಹತ್ವ, ವ್ಯಾಪ್ತಿ ಮತ್ತು ವೈಧಾನಿಕತೆ

ಕನ್ನಡದ ಚಿಂತನೆಗಳು ಇಂದು ನಿನ್ನೆಯದಲ್ಲ, ಶಿಕ್ಷಣ ಮಾಧ್ಯಮ, ಶಾಸ್ತ್ರೀಯ ಸ್ಥಾನ ಮಾನ, ಗಡಿಭಾಗದ ಪರಕೀಯತೆ ಆಡಳಿತದಲ್ಲಿ ಸಮರ್ಥವಾಗಿ ಕನ್ನಡ ಬಳಕೆ ಇತ್ಯಾದಿ. ಹಲವು ಆಯಾಮಗಳಲ್ಲಿ ಕನ್ನಡ ಭಾಷೆಯ ಕುರಿತಾದ ಚರ್ಚೆಗಳು ಹಿಂದಿನಿಂದಲೂ ನಡೆಯುತ್ತಲಿದ್ದು ಇಂದಿಗೂ ನಡೆದುಕೊಂಡು ಬಂದಿವೆ. ಆಡಳಿತ, ಶಿಕ್ಷಣ ಮತ್ತು ನ್ಯಾಯಾಲಯಗಳಲ್ಲಿ ಕನ್ನಡದ ಬಳಕೆ ಸುಗಮಗೊಳಿಸುವ ನಿಟ್ಟಿನಲ್ಲಿ ಕನ್ನಡ ಭಾಷೆ ಸಜ್ಜುಗೊಳಿಸಿಲ್ಲ ಎನ್ನುವ ವಾದಗಳು ಕೇಳಿಬರುತ್ತಿವೆ. ಭಾಷೆಯ ಉಳಿವು ಮತ್ತು ಬೆಳವಣಿಗೆಗೆ ಸಂಬಂಧಿಸಿದಂತೆ ಆಧುನಿಕ ತಂತ್ರಜ್ಞಾನದ ನಾಗಾಲೋಟಕ್ಕೆ ಪೂರಕವಾಗಿ ಇನ್ನೇನಿದ್ದರೂ ಕಂಪ್ಯೂಟರ್‌ಗಳ ಕೋಡೆಡ್ ಲ್ಯಾಂಗ್ವೇಜುಗಳ ಸೃಷ್ಟಿಯಲ್ಲಿ ಮುನ್ನಡೆಯಬೇಕಾದ ಘಟಕ್ಕೆ ಬಂದಿದ್ದೇವೆ.

ಒಂದು ಪ್ರಜಾಪ್ರಭುತ್ವದ ಆಡಳಿತದ ವ್ಯವಸ್ಥೆಯಲ್ಲಿ ರಚನೆಗೊಂಡ ಆಡಳಿತದ ನೀತಿನಿಯಮಗಳು, ಯೋಜನೆಗಳು, ಸುತ್ತೋಲೆ, ಅಧಿಸೂಚನೆ, ಪ್ರಕಟಣೆ, ಸಾರ್ವಜನಿಕ ಮಾಹಿತಿಗಳು, ಟೆಂಡರ್‌ಗಳು, ರೂಪುರೇಷಗಳು, ಇತ್ಯಾದಿ ಜನರಲ್ಲಿಗೆ ತಲುಪಬೇಕಾದರೆ ಅದು ಅಲ್ಲಿನ ಜನರಾಡುವ ಭಾಷೆಯ ಮುಖಾಂತರವಾಗಿಯೇ ಸಾಧ್ಯ, ಹೊರತು ಬೇರೆ ಭಾಷೆಯಿಂದಲ್ಲ ಎಂಬುದು ಸತ್ಯ. ಆಡಳಿತದ ವಿಷಯಕ್ಕೆ ಬಂದಾಗ ಆಡಳಿತದಲ್ಲಿನ ಆಡಳಿತ ಭಾಷೆ ಜನರ ಮತ್ತು ಆಡಳಿತ ವ್ಯವಸ್ಥೆಯ ಮಧ್ಯೆ ಸಂವಹನ ಮಾಧ್ಯಮವಾಗಿ ಬಹು ಮುಖ್ಯವಾದ ಸ್ಥಾನವನ್ನು ಪಡೆದುಕೊಳ್ಳುತ್ತದೆ.

ಆಡಳಿತದಲ್ಲಿನ ಕನ್ನಡವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಏನೆಲ್ಲಾ ಆದೇಶಗಳಿದ್ದರೂ ಪ್ರಸ್ತುತ ಸಂದರ್ಭದಲ್ಲಿ ಹಲವಾರು ಚಿಂತಕರು ಮತ್ತು ವಿದ್ವಾಂಸರ ಅಭಿಪ್ರಾಯದಂತೆ ಆಡಳಿತದಲ್ಲಿ ಕನ್ನಡದ ಬಳಕೆ ಸಂಪೂರ್ಣವಾಗಿ ಆಗುತ್ತಿಲ್ಲ. ಇಂದಿಗೂ ಅದು ತನ್ನದೇ ಆದ ಸಮಸ್ಯೆ ಮತ್ತು ಸವಾಲುಗಳನ್ನು ಎದಿರುಸುತ್ತಿದೆ. ಆಡಳಿತ ಕನ್ನಡಕ್ಕೆ ಸಂಬಂಧಪಟ್ಟಂತೆ ಹಲವಾರು ವಿದ್ವಾಂಸರಿಂದ ರಚಿತಗೊಂಡ ಪುಸ್ತಕಗಳಲ್ಲಿ, ಚಿಂತನ-ಮಂಥನಗಳಲ್ಲಿ ವಿಶೇಷ ಲೇಖನಗಳಲ್ಲಿಯ ಈ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆಯಾಗಿರುವುದನ್ನು ಕಾಣುತ್ತೇವೆ.

ಕನ್ನಡವನ್ನು ದೈನಂದಿನ ವ್ಯವಹಾರದಲ್ಲಿ, ಆಡಳಿತದಲ್ಲಿ, ಸಹಜವಾಗಿ ಬಳಸಬೇಕೆಂಬ ಮನಸ್ಥಿತಿಯಿಂದ ದೂರವಾಗುತ್ತಿದ್ದಾರೆ. ಕನ್ನಡದಲ್ಲಿ ಮಾತನಾಡಿದರೆ ತಮ್ಮ ವ್ಯಕ್ತಿತ್ವಕ್ಕೆ, ಘನತೆಗೆ ಎಲ್ಲಿ ಕುಂದು ಬರುತ್ತದೆಂದು ವರ್ತಿಸುತ್ತಿದ್ದಾರೆ. ಕರ್ನಾಟಕದಲ್ಲಿ ವಾಸಿಸುತ್ತಿರುವ ಅನ್ಯ ಭಾಷಿಕರು ಕನ್ನಡವನ್ನು ಬಳಸಬೇಕಾದ ಅನಿವಾರ್ಯತೆ ಇಲ್ಲದ ಕಾರಣ ಇಂಗ್ಲೀಷಿನಲ್ಲಿ ವ್ಯವಹರಿಸಲು ಮುಂದಾಗುತ್ತಾರೆ ಎನ್ನುವುದು ಹಲವರ ಅಭಿಪ್ರಾಯವಾಗಿದೆ.

ಇಂತಹ ಹಲವಾರು ಸೋಜಿಗದ ಸಂಗತಿಗಳ ಹುಡುಕಾಟ, ಹಾಗೂ ಅದಕ್ಕಿರುವ ಸಮಸ್ಯೆ ಮತ್ತು ಸವಾಲುಗಳನ್ನು ಗುರುತಿಸುವಿಕೆ ಹಾಗೂ ಗುರುತಿಸಿಕೊಂಡ ಸಮಸ್ಯೆಗಳ ಪರಿಹಾರ ಕಂಡುಕೊಳ್ಳುವಿಕೆಗಾಗಿ ಪ್ರಸ್ತುತ ಆಡಳಿತದಲ್ಲಿ ಕನ್ನಡ ಬಳಕೆಯ ಸಮಸ್ಯೆ ಮತ್ತು ಸವಾಲುಗಳ ಅಧ್ಯಯನದ ಅವಶ್ಯಕತೆ ಇದೆ ಎನ್ನುವ ವಿಷಯವನ್ನು ಮನಗೊಂಡು ಈ ಅಧ್ಯಯನವನ್ನು ಕೈಗೊಳ್ಳಲಾಯಿತು

೧.೧. ಅಧ್ಯಯನದ ಉದ್ದೇಶ

ಆಡಳಿತದಲ್ಲಿ ಕನ್ನಡ ಬಳಕೆಯ ಕುರಿತಾಗಿ ಇದುವರೆಗೂ ಅಲ್ಲಲ್ಲಿ ಆಂಶೀಕವಾಗಿ ಚರ್ಚೆಗಳು ನಡೆದಿವೆ. ಅದರಲ್ಲಿ ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಚರಿತ್ರೆಯುದ್ದಕ್ಕೂ ಹೋರಾಟ, ಚಳುವಳಿಗಳು ನಡೆದುಕೊಂಡು ಬಂದಿವೆ. ಆದರೆ ಇತ್ತೀಚಿನ ಕೆಲವು ವರ್ಷಗಳಿಂದೀಚೆಗೆ ಈ ಚರ್ಚೆಗಳು ಮಹತ್ವ ಪಡೆದುಕೊಂಡು ತಾರಕಕ್ಕೇರಿವೆ. ಇಂತಹ ಸಮಸ್ಯೆ ಮತ್ತು ಸವಾಲುಗಳ ಒಂದು ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಅಧ್ಯಯನ ಮಾಡುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಹಲವು ದಶಕಗಳಿಂದ ಆಡಳಿತದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಅನೇಕ ಕ್ರಮ ಕೈಗೊಂಡರೂ ಈಗಲೂ ಕೂಡ ಸಮರ್ಥವಾಗಿ ಕನ್ನಡ ಬಳಕೆಯಾಗುತ್ತಿಲ್ಲ. ಎನ್ನುವ ಆಪಾದನೆ ಇದೆ. ಇದಕ್ಕೆ ಇರುವ ಕಾರಣಗಳೇನು ಎನ್ನುವುದನ್ನು ಅರಿಯುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಆಡಳಿತದಲ್ಲಿ ಕನ್ನಡ ಬಳಕೆ ಕುರಿತಂತೆ ಕ್ರಮಬದ್ಧವಾದ ಅಧ್ಯಯನಗಳು ಕನ್ನಡದಲ್ಲಿ ಇದುವರೆಗೆ ನಡೆದೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಕಡಿಮೆ. ಅಂಥ ಒಂದು ಕೊರತೆಯನ್ನು ತುಂಬುವ ಪ್ರಯತ್ನ ಈ ಅಧ್ಯಯನದ್ದಾಗಿದೆ.

ಆಡಳಿತದಲ್ಲಿ ಕನ್ನಡವನ್ನು ಬಳಸುವಾಗ ಎದುರಾಗುವ ಸಮಸ್ಯೆ ಮತ್ತು ಸವಾಲುಗಳನ್ನು ಕುರಿತು ತಾತ್ವಿಕವಾಗಿ, ಭಾಷಿಕವಾಗಿಅಧ್ಯಯನ ಮಾಡುವುದು ಈ ಸಂಶೋಧನೆಯ ಉದ್ದೇಶವಾಗಿದೆ.

ಆಡಳಿತದಲ್ಲಿ ಕನ್ನಡದ ಬಳಕೆ ಒಂದು ಬಗೆಯದ್ದಾದರೆ. ಆಡಳಿತದಲ್ಲಿ ಕನ್ನಡವನ್ನು ಬಳಕೆ ಮಾಡುವಲ್ಲಿನ ಸಮಸ್ಯೆಗಳು ಇನ್ನೊಂದು ಬಗೆಯದ್ದು. ಇವೆರಡಕ್ಕೂ ಭಿನ್ನವಾದ ಸಮಸ್ಯೆಗಳು ಕಾಣುತ್ತವೆ. ಈ ಹಿನ್ನೆಲೆಯಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಯ ಸಮಸ್ಯೆ ಮತ್ತು ಸವಾಲುಗಳ ಬಗ್ಗೆ ವಿವರಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಕನ್ನಡ ಸಂಪೂರ್ಣವಾಗಿ ಆಡಳಿತ ಭಾಷೆಯಾಗಬೇಕೆಂಬ ನಿಟ್ಟಿನಲ್ಲಿ ಈಗಾಗಲೇ ಸರ್ಕಾರದಿಂದ ಸುಮಾರು ಸುತ್ತೋಲೆಗಳನ್ನು ಹೊರಡಿಸಲಾಗಿದ್ದರೂ, ಆಡಳಿತದಲ್ಲಿ ಸಂಪೂರ್ಣವಾಗಿ ಇಂದಿಗೂ ಕನ್ನಡವನ್ನು ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಸಮಸ್ಯೆಗಳೇನು ಮತ್ತು ಅದಕ್ಕಿರುವ ಸವಾಲುಗಳಾವುವು ಎಂಬ ವಿಷಯವನ್ನು ಸಾಮಾಜಿಕ ಮತ್ತು ರಾಜಕೀಯದ ಹಿನ್ನೆಲೆಯಲ್ಲಿ ನೋಡುವ ಉದ್ದೇಶವನ್ನು ಹೊಂದಿದೆ.

ಸರ್ಕಾರವು ಆಡಳಿತದಲ್ಲಿ ಕನ್ನಡದ ಬಳಕೆಯನ್ನು ಕಡ್ಡಾಯಗೊಳಿಸಿ ಅಧಿಸೂಚನೆ, ಕಾಯ್ದೆ, ಕಾನೂನೂಗಳನ್ನು, ಅಧಿಕೃತಗೊಳಿಸಿ ಹೊಸ ನೀತಿ ನಿಯಮಗಳನ್ನು ರೂಪಿಸಿದ್ದಾಗಿಯೂ ಆಡಳಿತ ನಿರ್ವಹಣೆಯಲ್ಲಿ ಅವುಗಳನ್ನು ಜಾರಿಗೆ ತರಲು ವಿಫಲವಾಗುತ್ತಿದೆ. ಈ ವಿಫಲತೆಗೆ ಕಾರಣಗಳನ್ನು ತಿಳಿಯುವ ಉದ್ದೇಶವವೂ ಈ ಅಧ್ಯಯನದ್ದಾಗಿದೆ.

'ಕರ್ನಾಟಕದಲ್ಲಿ ಆಡಳಿತ ಭಾಷೆ ಸಂಪೂರ್ಣವಾಗಿ ಕನ್ನಡದಲ್ಲಿದ್ದರೆ ಆಡಳಿತದಲ್ಲಿ ಕನ್ನಡ ಬಳಕೆಯ ಸಮಸ್ಯೆಗಳು ಹುಟ್ಟುವುದಿಲ್ಲ' ಎನ್ನುವ ಮಾತುಗಳು ಮೇಲ್ನೋಟಕ್ಕೆ ಸತ್ಯವಾದರೂ ಕಾರ್ಯಾಚರಣೆಗೆ ತರುವುದು ಕಷ್ಟವೇ ಸರಿ. ಈ ವಿಷಯವನ್ನು ಭಾಷಾ ನೀತಿಗಳ ಹಿನ್ನಲೆಯಲ್ಲಿ ಸ್ಪಷ್ಟಪಡಿಸುವುದು ಕೂಡ ಅಧ್ಯಯನದ ಉದ್ದೇಶಗಳಲ್ಲೊಂದಾಗಿದೆ

ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವುದಕ್ಕಾಗಿ ರೂಪಿಸಲಾದ ಹಾಗೂ ಕಾರ್ಯರೂಪಕ್ಕೆ ತರಲಾದ ಯೋಜನೆಗಳು ಸರಿಯಾದ ರೀತಿಯಲ್ಲಿ ಸಫಲತೆಯನ್ನು ಕಾಣುತ್ತಿಲ್ಲ. ಯೋಜನೆಗಳ ವಿಫಲತೆಗೆ ಇರುವ ಕಾರಣಗಳನ್ನು ಕಂಡುಕೊಳ್ಳುವ ಉದ್ದೇಶ ಕೂಡ ಈ ಅಧ್ಯಯನಕ್ಕಿದೆ.

ಬಹುಭಾಷಿಕ ಪರಿಸರವಾದ ಕರ್ನಾಟಕದಲ್ಲಿ ಆಡಳಿತ ಭಾಷೆಯಾಗಿ ಕನ್ನಡ ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳನ್ನು ಗುತುರಿಸುವ ಉದ್ದೇಶವನ್ನು ಈ ಅಧ್ಯಯನವು ಹೊಂದಿದೆ.

ಆಡಳಿತದ ವರ್ಗಗಳಾದ ಎ.ಬಿ.ಸಿ.ಡಿ. ವೃಂದಗಳಲ್ಲಿನ ಅಧಿಕಾರಿಗಳು ಮತ್ತು ನೌಕರರು ಆಡಳಿತ ನಿರ್ವಹಣೆಯ ಸಂದರ್ಭದಲ್ಲಿ ಕನ್ನಡ ಬಳಕೆಯಲ್ಲಿನ ಸಮಸ್ಯೆ ಮತ್ತು ಸವಾಲುಗಳನ್ನು ಸಾಮಾಜಿ, ಶೈಕ್ಷಣಿಕ, ಆಡಳಿತಾತ್ಮಕ ಮತ್ತು ತಾಂತ್ರಿಕವಾಗಿ ವಿಶ್ಲೇಷಿಸುವ ಉದ್ದೇಶ ಹೊಂದಿದೆ.

೧.೨. ಅಧ್ಯಯನದ ಸ್ವರೂಪ

ಮಹಾಪ್ರಬಂಧದ ಪ್ರಸ್ತಾವನೆಯಲ್ಲಿ ಆಡಳಿತ ಕನ್ನಡದ ಬಗ್ಗೆ ಪ್ರಾಸ್ತಾವಿಕ ನುಡಿಗಳೊಂದಿಗೆ ಆಡಳಿತ ಕನ್ನಡದ ಸಂಕ್ಷಿಪ್ತ ಪರಿಚಯ. ಆಡಳಿತ ಭಾಷೆಯಾಗಿ ಕನ್ನಡ, ಆಡಳಿತ ಕನ್ನಡ ನಡೆದುಬಂದ ದಾರಿಯಲ್ಲಿ ಪೂರ್ವ ಇತಿಹಾಸ, ಆಡಳಿತ ಕನ್ನಡ ಭಾಷೆಯಾಗಿ ಬ್ರಿಟೀಷರ ಆಡಳಿತದ ಇತಿಹಾಸ, ಹಾಗೂ ಸ್ವಾತಂತ್ರ್ಯ ನಂತರ ನಡೆದು ಬಂದ ಆಡಳಿತ ಕನ್ನಡದ ಇತಿಹಾಸದ ಬಗ್ಗೆ ಚರ್ಚೆ ಮತ್ತು ವಿಷಯಗಳನ್ನು ವಿವರಣೆ ಮುಖಾಂತರ ವಿವರಿಸಲಾಗಿದೆ.

ಆಡಳಿತ ಕನ್ನಡದ ಮೇಲೆ ಸಂಸ್ಕೃತ, ತೆಲುಗು, ಮರಾಠಿ, ಉರ್ದು, ಪಾರ್ಸಿ, ಹಾಗೂ ವಿವಿಧ ಭಾಷೆಗಳ ಪರಿಣಾಮದ ಹಿನ್ನೆಲೆಯಲ್ಲಿ ಚಾರಿತ್ರಿಕವಾಗಿ ನಡೆದ ಆಡಳಿತದ ಪಕ್ಷಿನೋಟ

ಇದರಲ್ಲಿದೆ. ಆಡಳಿತದಲ್ಲಿ ಕನ್ನಡದ ಹಂತಗಳನ್ನು ವಿಶೇಷವಾಗಿ ಮೂರು ರೀತಿಯಲ್ಲಿ ಅಂದರೆ ವ್ಯವಹಾರದ ಆಡಳಿತ ಕನ್ನಡ, ಕನ್ನಡದಲ್ಲಿ ದಾಖಲಾಗುವ ಕನ್ನಡ, ಕಾನೂನಿನ ಕನ್ನಡ, ಇವುಗಳನ್ನು ಆಡಳಿತ ಕನ್ನಡ ಬಳಕೆಯ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ: ೧ : ಅಧ್ಯಯನದ ಉದ್ದೇಶ, ಸ್ವರೂಪ, ಮಹತ್ವ, ವ್ಯಾಪ್ತಿ, ಮತ್ತು ವೈಧಾನಿಕತೆ

ಮಹಾಪ್ರಬಂಧದ ಅಧ್ಯಾಯ ಒಂದರಲ್ಲಿ ಸಂಪೂರ್ಣವಾಗಿ ಆಡಳಿತದಲ್ಲಿ ಕನ್ನಡ ಬಳಕೆಯ ಸಮಸ್ಯೆ ಮತ್ತು ಸವಾಲುಗಳ ಹಿನ್ನಲೆಯಲ್ಲಿ ಈ ಸಂಶೋಧನೆಯ ಉದ್ದೇಶ, ಸ್ವರೂಪ, ಮಹತ್ವ, ವ್ಯಾಪ್ತಿ, ಮತ್ತು ವೈಧಾನಿಕತೆಯ ವಿವರಣೆಯನ್ನು ಒಳಗೊಂಡಿದೆ.

ಅಧ್ಯಾಯ: ೨ : ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಮಹಾಪ್ರಬಂಧದ ಎರಡನೆಯ ಅಧ್ಯಾಯದಲ್ಲಿ ಆಡಳಿತ ಕನ್ನಡ ಮತ್ತು ಕನ್ನಡ ಬಳಕೆಗೆ ಸಂಬಂಧಪಟ್ಟಂತೆ ಹಾಗೂ ಅದಕ್ಕೆ ಹೊಂದುವ ಪೂರಕ ಸಾಹಿತ್ಯವನ್ನು ಪ್ರಸ್ತುತ ಸಂದರ್ಭದವರೆಗೆ ನಡೆದ ಅಧ್ಯಯನಗಳನ್ನು ಸಮೀಕ್ಷೆ ಮಾಡಲಾಗಿದೆ. ಪಿಎಚ್.ಡಿ ಮಹಾಪ್ರಬಂಧಗಳು, ಎಂ.ಫಿಲ್ ಪ್ರಬಂಧಗಳು, ಕೃತಿಗಳು, ಲೇಖನಗಳು, ನಿಯತಕಾಲಿಕೆಗಳು, ಸಂಶೋಧನಾ ಲೇಖನಗಳು, ಮಿಂಚೆಯ ಭಾಗಗಳು, ಪಾರಿಭಾಷಿಕ ಪದಕೋಶಗಳು, ಆಡಳಿತ ಪದಕೋಶ, ನಿಘಂಟುಗಳು, ಇತ್ಯಾದಿಗಳನ್ನು ಅಧ್ಯಯನ ಮಾಡಿ ಸಮೀಕ್ಷೆಯನ್ನು ಮಾಡಲಾಗಿದೆ.

ಕನ್ನಡ ನಾಡು ನುಡಿಗೆ ಸುಮಾರು ಎರಡುಸಾವಿರ ವರ್ಷಗಳಷ್ಟು ಸುಧೀರ್ಘವಾದ ಇತಿಹಾಸವಿದೆ. ಕ್ರಿಶ ಪೂರ್ವದಿಂದಲೇ ಕನ್ನಡ ಭಾಷೆ ಇತ್ತೆಂಬುದಕ್ಕೆ ಆಧಾರಗಳಿವೆ. ಕನ್ನಡ ನಾಡು ಮತ್ತು ನುಡಿಯನ್ನು ಹೆಸರಿಸುವ ಹಲವು ಆಧಾರಗಳು ಸಂಸ್ಕೃತ ಮತ್ತು ಪ್ರಾಕೃತ ಕಾವ್ಯಗಳಲ್ಲಿ ದೊರೆಯುತ್ತವೆ. ಕನ್ನಡ ಭಾಷೆ ಬಹಳ ಪ್ರಾಚೀನವೆಂಬುದು ಸ್ಪಷ್ಟ. ಆದರೆ ಎಷ್ಟು ಪ್ರಾಚೀನವೆಂದು ಹೇಳುವುದು ಮಾತ್ರ ಕಷ್ಟವಾಗಿದೆ. ಆದರೆ ಬರವಣಿಗೆಗೆ ಬರುವ ಮುನ್ನ ಬಹಳ ಕಾಲದವವರೆಗೆ ಆಡುಭಾಷೆಯಾಗಿ ಕನ್ನಡ ಬಳಕೆಯಾಗಿದ್ದಿರಬೇಕು ಎಂಬ ವಿಚಾರ ಸ್ಪಷ್ಟ. ಕನ್ನಡ ಪ್ರಾಚೀನತೆಗೆ ಸಂಬಂಧಿಸಿದಂತೆ ಹಲವಾರು ಉಲ್ಲೇಖಗಳು ಭಾರತೀಯ ಪ್ರಾಚೀನ ಗ್ರಂಥಗಳಲ್ಲಿ ದೊರೆಯುತ್ತವೆ. ಕನ್ನಡ ಭಾಷೆ ಎಷ್ಟು ಪ್ರಾಚೀನವಾದದ್ದೆಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆಯಾದರೂ ಕ್ರಿಶ ಆರಂಭದಲ್ಲಿ ಕನ್ನಡ ಜನಭಾಷೆಯಾಗಿತ್ತೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳೇನು ಇಲ್ಲ.

ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕೆಂಬ ಚರ್ಚೆಗಳು ಮತ್ತು ವಿಚಾರಗಳು ಇಂದು ನಿನ್ನೆಯದಲ್ಲ. ಕನ್ನಡವನ್ನು ಅಧಿಕೃತವಾಗಿ ಆಡಳಿತ ಭಾಷೆಯೆಂದು ಘೋಷಿಸಿ ಐದು ದಶಕಗಳೇ ಕಳೆದಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಯಲ್ಲಿತ್ತು ಎನ್ನುವುದಕಕ್ಕೆ ಪುರಾವೆಗಳಿವೆ. ಬ್ರಿಟಿಷರ ಆಡಳಿತದಲ್ಲಿಯೂ ಸಹ ಕನ್ನಡ ಅಲ್ಲಲ್ಲಿ ಆಡಳಿತ ಭಾಷೆಯಾಗಿ ಬಳಕೆಯಲ್ಲಿತ್ತು ಎನ್ನುವುದಕ್ಕೆ ಹಲವಾರು ನಿದರ್ಶನಗಳು ದೊರಕುತ್ತವೆ. ಸ್ವಾತಂತ್ರ್ಯದ ನಂತರದಲ್ಲಿ ಕರ್ನಾಟಕದಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಯಲ್ಲಿತ್ತು ಎನ್ನುವುದನ್ನೂ ಕಾಣುತ್ತೇವೆ. ಆದರೆ

ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯಾದ ಮೇಲೆ ಕರ್ನಾಟಕ ರಾಜ್ಯದಲ್ಲಿ ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕೆಂಬ ಆದೇಶಗಳನ್ನು ಜಾರಿಗೊಳಿಸಲಾಯಿತು. ಆದರೆ ಕಟ್ಟುನಿಟ್ಟಾದ ಆದೇಶಗಳನ್ನು ಜಾರಿಗೊಳಿಸಲಾದರೂ ಆಡಳಿತದಲ್ಲಿ ಕನ್ನಡವನ್ನು ಬಳಸಲು ಸಾಧ್ಯವಾಗುತ್ತಿಲ್ಲ. ಈ ವಿಷಯದ ಹಿನ್ನೆಲೆಯಲ್ಲಿ ಈಗಾಗಲೇ ಹಲವಾರು ಭಾಷಾತಜ್ಞರಿಂದ, ವಿದ್ವಾಂಸರಿಂದ, ಭಾಷಾ ಹಿತಚಿಂತಕರಿಂದ ವಿಷಯವನ್ನು ಕುರಿತಂತೆ ಚಿಂತನ ಮಂಥನಗಳು ನಡೆದಿರುವುದು ಕಂಡುಬರುತ್ತದೆ.

ಇತ್ತೀಚಿನ ದಿನಗಳಲ್ಲಿ ಆಡಳಿತದಲ್ಲಿ ಕನ್ನಡ ಬಳಕೆ ಕುರಿತಾಗಿ ಸಾಕಷ್ಟು ಚರ್ಚೆಗಳು ಬೆಳೆದು ಬರುತ್ತಿವೆ. ಆಡಳಿತ ಕನ್ನಡದ ಬಳಕೆಗೆ ಸಂಬಂಧಿಸಿದಂತೆ ಸಮಸ್ಯೆ ಸವಾಲುಗಳ ಹಿನ್ನೆಲೆಯಲ್ಲಿ ಚರ್ಚೆಗಳು ಕಾಣಸಿಗುತ್ತವೆ. ಇಂತಹ ಎಲ್ಲಾ ವಿಷಯಗಳ ಅಧ್ಯಯನಗಳು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿರುವುದರಿಂದ ಅವುಗಳನ್ನು ಇಲ್ಲಿ ಸಮೀಕ್ಷೆ ಮಾಡಲಾಗಿದೆ.

ಅಧ್ಯಾಯ: ೩ : ಆಡಳಿತದಲ್ಲಿ ಕನ್ನಡದ ಬಳಕೆ : ಸಮಸ್ಯೆ ಮತ್ತು ಸವಾಲುಗಳು

ಪ್ರಸ್ತುತ ಸಂಶೋಧನಾ ಮಹಾಪ್ರಬಂಧದ ಮುಖ್ಯಭಾಗವೇ ಮೂರನೆಯ ಅಧ್ಯಾಯ. ಈ ಅಧ್ಯಾಯದಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆ ಸಮಸ್ಯೆ ಮತ್ತು ಸವಾಲುಗಳುಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಗುರ್ತಿಸಿ ವಿಂಗಡಣೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ಸಾಮಾಜಿಕ, ರಾಜಕೀಯ, ತಾಂತ್ರಿಕ, ಮತ್ತು ಆಂತರಿಕ ಸಮಸ್ಯೆಗಳೆಂದು ಗುರುತಿಸಿಕೊಂಡು ಪೂರ್ಣವಾಗಿ ಅವುಗಳ ಬಗ್ಗೆ ಸಮಸ್ಯೆ ಮತ್ತು ಸವಾಲುಗಳನ್ನು ವಿಸ್ತೃತವಾಗಿ ವಿವರಿಸುವ ಕಾರ್ಯವನ್ನು ಮಾಡಲಾಗಿದೆ. ಸಾಮಾಜಿಕ ಸಮಸ್ಯೆಗಳಲ್ಲಿ ಪ್ರಾದೇಶಿಕ ಭಿನ್ನತೆ, ಗಡಿನಾಡ ಭಾಷೆಗಳ ಪ್ರಭಾವ, ಬಹುಭಾಷಿಕರು, ಭಾಷಾ ಅಲ್ಪಸಂಖ್ಯಾತರು ಈ ರೀತಿಯಲ್ಲಿ ಸಾಮಾಜಿಕ ಸಮಸ್ಯೆಗಳಿಂದ ಆಡಳಿತದಲ್ಲಿ ಕನ್ನಡ ಬಳಕೆಯಲ್ಲಿ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿದೆ.

ತಾಂತ್ರಿಕ ಸಮಸ್ಯೆಗಳಲ್ಲಿ ಭಾಷಿಕ ಹಿನ್ನೆಲೆಯನ್ನಿಟ್ಟುಕೊಂಡು ವಾಕ್ಯದೋಷ, ಬರವಣಿಗೆಯ ದೋಷ, ಪದಗಳಲ್ಲಿನ ಅಕ್ಷರದ ಸ್ಥಾನಪಲ್ಲಟದ ದೋಷಗಳನ್ನು ಚರ್ಚಿಸಲಾಗಿದೆ. ರಾಜಕೀಯ ಸಮಸ್ಯೆಗಳಲ್ಲಿ ರಾಜಕೀಯ ವಿಭಾಗದಲ್ಲಿ ಆಡಳಿತಕ್ಕೆ ಸಂಬಂಧಿಸಿದಂತೆ ಕನ್ನಡಕ್ಕಿರುವ ಸಮಸ್ಯೆಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದ್ದು ಮೂರು ಬಣಗಳನ್ನು ಗುರ್ತಿಸಿದೆ. ಅವುಗಳೆಂದರೆ, ಆಡಳಿತದಲ್ಲಿ ಕನ್ನಡ ಬಳಕೆಯ ಜಾರಿಗೆ ಕ್ರಮವಹಿಸುವ ಬಣ ಒಂದನೆಯದಾದರೆ, ಆಡಳಿತದಲ್ಲಿ ಕನ್ನಡ ಬಳಕೆ ಕಡ್ಡಾಯಕ್ಕೆ ವಿರೋಧ ಒಡ್ಡುವ ಬಣ ಎರಡನೆಯದಾಗಿದೆ. ಮುಂದುವರೆದು, ಯಾವುದು ಬೇಡ ತನ್ನಷ್ಟಕ್ಕೆ ತಾನೆ ಎಲ್ಲಾ ಕಾರ್ಯಗಳು ಆಗುತ್ತಲಿರುತ್ತವೆಂದು ಸುಮ್ಮನೆ ಇದ್ದು ಕಾರ್ಯನಿರ್ವಹಿಸುತ್ತಲಿರುವ ಬಣ ಮೂರನೆಯದು. ಇದನ್ನು ಆಡಳಿತದಲ್ಲಿ ಕನ್ನಡ ಬಳಕೆಯ ವಿಚಾರದಲ್ಲಿ ತಟಸ್ಥ ಮನಸ್ಸಿನ ಬಣವೆಂದು ಕರೆಯಲಾಗಿದೆ. ನಂತರದಲ್ಲಿ ಆಂತರಿಕ ಸಮಸ್ಯೆಗಳಲ್ಲಿ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ಅಥವಾ ಲಿಪಿಕ ಮತ್ತು ಆಡಳಿತ ವರ್ಗದವರ ಮಧ್ಯದಲ್ಲಿನ ಸಮಸ್ಯೆ ಸವಾಲುಗಳನ್ನು ಈ ಭಾಗದಲ್ಲಿ ಗುರುತಿಸಲಾಗಿದೆ.

ಅಧ್ಯಾಯ: ೪ : ಆಡಳಿತ ಕನ್ನಡದ ಬರಹ ಮತ್ತು ಬಳಕೆಯಲ್ಲಿನ ದೋಷಗಳು

ಆಡಳಿತದಲ್ಲಿ ಕನ್ನಡದ ಬರಹ ಶುದ್ಧರೂಪದಲ್ಲಿ ನಡೆಯುತ್ತಿಲ್ಲವೆಂಬುದು, ಆಡಳಿತ ಕನ್ನಡದ ಬಳಕೆಯಲ್ಲಲ್ಲದೇ ಬೇರೆ ಸಂದರ್ಭದಲ್ಲಿಯೂ ಕನ್ನಡದ ಬಳಕೆ ಶುದ್ಧವಾಗಿ ಆಗುತ್ತಿಲ್ಲ ಎಂಬ ಅಪವಾದವಿದೆ. ಶಿಕ್ಷಣತಜ್ಞರ ಮತ್ತು ಭಾಷಾತಜ್ಞರ ವಿಚಾರಗಳ ಹಿನ್ನೆಲೆಯಲ್ಲಿ ನೋಡಿದಾಗ ಶುದ್ಧಬರಹ ಸ್ಪಷ್ಟ ಬಳಕೆ ಎಂಬುದು ಪ್ರಸ್ತುತ ಚರ್ಚೆಯಲ್ಲಿರುವ ವಿಷಯ. ಮಾತಿನ ಬರಹದ ರೂಪವನ್ನು ಶುದ್ಧಬರಹ ಎನ್ನಬೇಕೋ. ಪ್ರಸ್ತುತ ಬರವಣಿಗೆಯ ಬರಹವನ್ನು ಶುದ್ಧಬರಹ ಎನ್ನಬೇಕೊ ಎನ್ನುವ ವಿಚಾರಗಳು ಚರ್ಚೆಯಲ್ಲಿವೆ. ಈ ವಿಷಯದ ಸಮಸ್ಯೆಯನ್ನು ಇಲ್ಲಿ ಪ್ರಸ್ತಾಪಿಸದೆ ಆಡಳಿತದಲ್ಲಿ ಕನ್ನಡ ಬಳಕೆಯಲ್ಲಿರುವ ರಚನೆಯ ಭಾಷಾದೋಷಗಳ ಹಿನ್ನೆಲೆಯಲ್ಲಿ ಮಾತ್ರ ಚರ್ಚಿಸಿದ್ದೇನೆ.

ಆಡಳಿತ ಕನ್ನಡದಲ್ಲಿ ಬರಹದ ಅಥವಾ ಬಳಕೆಯ ಸಂದರ್ಭದಲ್ಲಿ ಕಂಡುಬಂದ ದೋಷಗಳನ್ನು ಈ ನಾಲ್ಕನೆಯ ಅಧ್ಯಾಯದಲ್ಲಿ ಗುರುತಿಸಲಾಗಿದ್ದು ಸಹಜವಾಗಿ ಬರವಣಿಗೆಯ ಸಂದರ್ಭದಲ್ಲಿ ದಿನನಿತ್ಯದ ಆಡಳಿತದಲ್ಲಿ ಆಗುವ ದೋಷಗಳಾದ ಅಕ್ಷರ/ಶಬ್ದದೋಷಗಳು, ವಾಕ್ಯದೋಷಗಳು, ತಲೆಬರಹದಲ್ಲಿನ ದೋಷಗಳು/ಶಿರೋನಾಮದ ದೋಷಗಳು, ಅರ್ಥದೋಷಗಳು, ಅಕ್ಷರದ ಸ್ಥಾನಪಲ್ಲಟದಿಂಡುಂಟಾಗುವ ದೋಷಗಳು, ಪ್ರಕಟಣಾ ದೋಷಗಳು/ಮುದ್ರಣಾ ದೋಷಗಳು/ ಬೆರಳಚ್ಚು ದೋಷಗಳನ್ನು ವಿವರಣೆಯ ಮುಖಾಂತರ ಸಮಸ್ಯೆಗಳನ್ನು ಗುರುತಿಸಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಅಲ್ಲದೇ ಬೇರೆ ಭಾಷೆಯಿಂದ ಕನ್ನಡ ಭಾಷೆಗೆ ಆಡಳಿತದಲ್ಲಿ ಅನುವಾದ, ಭಾಷಾಂತರಗೊಳಿಸುವ ಸಂದರ್ಭದಲ್ಲಿ ಉಂಟಾಗುವ ಸಮಸ್ಯೆಗಳ ಬಗ್ಗೆ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಾಯ: ೫ : ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಸಂದರ್ಭದಲ್ಲಿ ಆಡಳಿತ ಕನ್ನಡ: ಸಮಸ್ಯೆ ಮತ್ತು ಸವಾಲುಗಳು.

ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಸಂದರ್ಭದಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆ ಎಂಬ ಶಿರ್ಷಿಕೆಯ ಅಡಿಯಲ್ಲಿ ಐದನೆಯ ಅಧ್ಯಾಯವನ್ನು ಸಂಶೋಧನೆಗೆ ಒಳಪಡಿಸಿಕೊಂಡಿರುತ್ತೇನೆ.

ವಿಜ್ಞಾನ ಮತ್ತು ತಂತ್ರಜ್ಞಾನ ಜಗತ್ತಿನ ಬೆಳವಣಿಗೆಗೆ ಎರಡು ಮುಖಗಳಿದ್ದಂತೆ, ಒಂದನ್ನು ಬಿಟ್ಟು ಒಂದು ಇರಲಾರದು. ಎಲ್ಲಿ ತಂತ್ರಜ್ಞಾನ ತನ್ನ ಬೆಳವಣಿಗೆಯನ್ನು ಕಾಣುತ್ತಲಿದೆಯೋ ಅಲ್ಲಿ ವಿಜ್ಞಾನದ ಪಾತ್ರ ಇದ್ದೇ ಇರುತ್ತದೆ. ಎಲ್ಲಿ ವಿಜ್ಞಾನದ ಬೆಳವಣಿಗೆ ಇರುತ್ತದೆಯೋ ಅಲ್ಲಿ ಹೊಸ ತಂತ್ರಜ್ಞಾನಗಳು ಹುಟ್ಟಿಕೊಳ್ಳುತ್ತವೆ. ವಿಜ್ಞಾನ ಹಿಡಿಯಾದ ಭಾಗವಾದರೆ ತಂತ್ರಜ್ಞಾನ ಅದರ ಉಪ ಭಾಗ. ಒಂದೆಡೆ ವಿಜ್ಞಾನದ ಬೆಳವಣಿಗೆ, ಇನ್ನೊಂದೆಡೆ ತಂತ್ರಜ್ಞಾನದ ಬೆಳವಣಿಗೆಯಾದಲ್ಲಿ ದೇಶವನ್ನು ಮುಂಚೂಣೆಯಲ್ಲಿ ಕೊಂಡೊಯ್ಯಬಹುದು.

ಬೆಳೆಯುತ್ತಿರವ ಇಂದಿನ ಆಧುನೀಕರಣದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅತ್ಯಂತ ವೇಗದಲ್ಲಿ ಸಾಗುತ್ತಿರುವುದಕ್ಕೆ ಬೆಂಗಳೂರಿನಂತಹ ಮಹಾನಗರಗಳೇ ಸಾಕ್ಷಿ. ತಂತ್ರಜ್ಞಾನದಲ್ಲಿ

ಮುಂಚೂಣೆಯಲ್ಲಿರುವುದು ಕರ್ನಾಟಕ. ಅದರಲ್ಲಿ ಬೆಂಗಳೂರು ಎನ್ನುವುದು ಹೆಮ್ಮೆಯ ವಿಷಯ. ವಿಶ್ವದಲ್ಲೇ ಮಾಹಿತಿ ತಂತ್ರಜ್ಞಾನದಲ್ಲಿ ತನ್ನನ್ನೆ ಗುರುತಿಸಿಕೊಂಡಿರುವ ಕರ್ನಾಟಕ, ಕನ್ನಡ ತಂತ್ರಜ್ಞಾನವನ್ನು ಸೃಷ್ಟಿಸುವಲ್ಲಿ ಎಡವಿದೆ ಅಥವಾ ಬೇರೆ ಭಾಷೆಗೆ ಹೋಲಿಸಿದರೆ ಹಿಂದೆ ಬಿದ್ದಿದೆ ಎನ್ನುಬಹುದು.

ಆಡಳಿತದಲ್ಲಿ ಕಚೇರಿಯಲ್ಲಿನ ಲಿಪಿಕ ಕಾರ್ಯಗಳಲ್ಲಿ ವೇಗ, ಸರಾಗವಾಗಿ ಕಾರ್ಯನಿರ್ವಹಣೆ, ಸಮಯ ಉಳಿತಾಯ, ಕಡಿಮೆ ಸಮಯದಲ್ಲಿ ಹೆಚ್ಚು ಕಾರ್ಯನಿರ್ವಹಣೆ, ತಿದ್ದುಪಡಿ, ಸೇರಿಸುವಿಕೆ, ಸಂಸ್ಕರಣೆ ಮತ್ತು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಗೆಯಾಗುವಂತೆ ಮಾಡಿದ್ದು ಗಣಕಯಂತ್ರ ಬಂದಾಗಿನಿಂದ ಎಂದರೆ ತಪ್ಪಾಗಲಿಕ್ಕಿಲ್ಲ. ಇಂತಹ ಯಂತ್ರವನ್ನು ಆಡಳಿತದಲ್ಲಿ ಬಳಸುವುದಕ್ಕಾಗಿ ಮೊದಮೊದಲು ಸಮಸ್ಯೆಯಾಗಿದೆ ನಿಜ ಆದರೆ ಅದಕ್ಕೆ ಹೊಂದಿಕೊಂಡ ನಂತರ ಕಾರ್ಯಸರಾಗವಾಗಿ ಹಾಗೂ ಸರಳವಾಗಿ ಸಾಗಿತು ಎನ್ನುವುದು ಅಭಿಮತ.

ಗಣಕಯಂತ್ರದ ಸಮಸ್ಯೆಗಳು ಮತ್ತು ಸವಾಲುಗಳು ಹಲವಾರು ಇರಬಹುದು ಆದರೆ ಅವುಗಳನ್ನು ಇಲ್ಲಿ ಒಟ್ಟಾರೆಯಾಗಿ ಚರ್ಚಿಸಲಾಗುತ್ತಿಲ್ಲ ಬದಲಾಗಿ ಆಡಳಿತದಲ್ಲಿ ಕನ್ನಡ ಬಳಕೆಗೆ ಸಂಬಂದಿಸಿದಂತೆ ಮಾತ್ರ ಸಮಸ್ಯೆ ಮತ್ತು ಸವಾಲುಗಳನ್ನು ಗುರುತಿಸಿಸಲಾಗಿದೆ.

ಗಣಕಯಂತ್ರ ದಿನದಿಂದದಿನಕ್ಕೆ ಬದಲಾವಣೆ ಹೊಂದುತ್ತಾ ಮುಂದುವರೆದಿದೆ. ಮೊದಲಿಗೆ ನಿಧಾನಗತಿಯ ಗಣಕಯಂತ್ರಗಳಿಂದ ಪ್ರಾರಂಭವಾಗಿ ಮುಂದೊಂದು ದಿನ ನಾವು ಮಾತನಾಡಿದ್ದನ್ನು ಬೆರಳಚ್ಚು ಗೊಳಿಸುವ ಗಣಕಯಂತ್ರಗಳು ಕನ್ನಡದಲ್ಲೂ ಆಧುನಿಕ ಜಗತ್ತಿಗೆ ಪಾದಾರ್ಪಣೆ ಮಾಡಿದರೆ ಅಚ್ಚರಿ ಪಡಬೇಕಾಗಿಲ್ಲ. ಕಾರಣವೇನೆಂದರೆ, ಗಣಕಯಂತ್ರ ಒಂದು ಪೆಟ್ಟಿಗೆ ಮಾತ್ರ ನಾವು ಅದಕ್ಕೆ ನಮ್ಮ ಕಾರ್ಯಸಾಧನೆಗಾಗಿ ನಮಗೆ ಬೇಕಾದ ಕ್ಷೇತ್ರದ ಮಾಹಿತಿಗಳನ್ನೊಳಗೊಂಡ ತಂತ್ರಾಂಶಗಳನ್ನು ಅಳವಡಿಸಿದಲ್ಲಿ ಮಾತ್ರ ನಮ್ಮ ಉದ್ದೇಶಿತ ಕಾರ್ಯದ ಸಫಲತೆಯುಂಟಾಗುತ್ತದೆ ಹೀಗಾಗಿ ಗಣಕಯಂತ್ರ ಪೂರ್ಣ ಪ್ರಮಾಣದಲ್ಲಿ ತಂತ್ರಾಂಶಗಳ ಅಳವಡಿಕೆಯ ಮೇಲೆಯೇ ನಿಂತಿದೆ.

ಆಡಳಿತದಲ್ಲಿ ಗಣಕಯಂತ್ರದ ಬಳಕೆಯ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳನ್ನು ಗುರುತಿಸಲಾಗಿದೆ. ಅವುಗಳನ್ನು ಈ ಅಧ್ಯಾಯದಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಹಾಗೂ ಬದಲಾವಣೆಗೆ ಸಲಹೆಗಳನ್ನೂ ಸೂಚಿಸಲಾಗಿದೆ.

ಈಗಿನ ಸಂದರ್ಭದಲ್ಲಿ ಪ್ರತಿಯೊಂದು ಹಂತದಲ್ಲೂ ಇಲಾಖೆಗಳು ಅಂತರ್ಜಾಲವನ್ನು ಬಳಸುತ್ತಿವೆ. ಯಾವ ಇಲಾಖೆಯಲ್ಲೂ ಅಥವಾ ಇಲಾಖೆಗಳ ವಿವಿಧ ಕಾರ್ಯಾಲಯಗಳಲ್ಲಿ ಗಣಕಯಂತ್ರ ಅಥವಾ ಅಂತರ್ಜಾಲ ಸೌಲಭ್ಯವಿಲ್ಲವೆಂದು ಹೇಳಲಾಗದು. ಈ ಭಾವನೆ ಒಂದೆಡೆಯಾದರೆ ಗಣಕಯಂತ್ರ ಹಾಗೂ ಅಂತರ್ಜಾಲದ ಸೌಲಭ್ಯವನ್ನು ಹೊಂದಿರುವ ಕೆಳ ಸ್ಥರದಲ್ಲಿ ಹಲವಾರು ಕಚೇರಿಗಳನ್ನು ಕಾಣಬಹುದು. ಆಡಳಿತದಲ್ಲಿ ಕ್ರಾಂತಿಯನ್ನು ಎಬ್ಬಿಸಿದ ಪರಿಣಾಮಕಾರಿ ಆಡಳಿತಕ್ಕೆ ಒಂದು ಸಾಕ್ಷಿಯೇ ಅಂತರ್ಜಾಲ. ಅಂತರ್ಜಾಲದ ಮುಖಾಂತರ ವಿವಿಧ ಇಲಾಖೆಗಳಲ್ಲಿ ಮಾಡಲಾಗುತ್ತಿರುವ ಕೆಲಸಗಳು, ಆದೇಶಗಳು, ಸುತ್ತೋಲೆಗಳು, ನೇಮಕಾತಿಗಳು, ಅಂತರ್ಜಾಲದಲ್ಲಿಯೇ ನೇರವಾಗಿ ಅರ್ಜಿಸಲ್ಲಿಕೆ, ಅಂತರ್ಜಾಲದಲ್ಲಿಯೇ ಬ್ಯಾಂಕ್ ಚಲಾನ್, ಇ–ವೇತನ ಪಾವತಿ ಇಂತಹ

ಸೌಲಭ್ಯಗಳನ್ನು ಪರಿಣಾಮಕಾರಿ ಆಡಳಿತ ನೀಡಿದ ಅಂತರ್ಜಾಲದ ಕೀರ್ತಿ ಅಪಾರ. ಅಂತರ್ಜಾಲ ಪ್ರಸುತ ಸಂದರ್ಭದಲ್ಲಿ ಮೊಬೈಲ್‌ಗಳಿಗೂ ಕಾಲಿಟ್ಟು ಅಂಗೈಯಲ್ಲೇ ಪ್ರಪಂಚವನ್ನು ಕಾಣುವ ಸ್ಥಿತಿ ಬಂದಿದೆ.

ಆಡಳಿತದಲ್ಲಿ ಅನೇಕ ರೀತಿಯ ಕ್ರಾಂತಿಕಾರಿ ಬದಲಾವಣೆಗಳನ್ನು ತಂದುಕೊಟ್ಟದ್ದು ಅಂತರ್ಜಾಲ. ಅಂತರ್ಜಾಲಕ್ಕೂ ಮತ್ತು ತಂತ್ರಜ್ಞಾನಕ್ಕೂ ಅವಿನಾಭಾವ ಸಂಬಂಧವಿದೆ. ಅನೇಕ ಮುಖ್ಯ ತಂತ್ರಾಂಶಗಳ ಅಳವಡಿಕೆಯಿಂದ ಆಡಳಿತದಲ್ಲಿ ಪಾರದರ್ಶಕತೆ ಗುಣಮಟ್ಟದ ಸೇವೆ ಹಾಗೂ ಕಾಯುವ ಪರಿಸ್ಥಿತಿ ಕೆಲವೊಂದು ಸಂದರ್ಭದಲ್ಲಿ ಹಲವಾರು ವಿಚಾರಗಳಿಗೆ ಸಂಬಂಧಿಸಿದಂತೆ ವಿಷಯಗಳು ಅಂತರ್ಜಾಲದಲ್ಲಿ ಏಕಕಾಲಕ್ಕೆ ದೊರೆತು ಕಚೇರಿಗೆ ಅಲೆಯುವ ಸಂದರ್ಭಗಳು ದೂರವಾದಂತಾಗಿದೆ. ಈ ವಿಷಯವನ್ನು ಆಡಳಿತ ನಡೆಸುವ ಇಲಾಖೆಗಳಲ್ಲಿನ ಕೆಲವೊಂದು ವಿಚಾರಕ್ಕೆ ಸಂಬಂದಪಟ್ಟಂತೆ ಮಾತ್ರ ಹೇಳಬಹುದು. ಇನ್ನೂ ಕೆಲವು ವಿಚಾರಗಳು ಹಾಗೂ ಇಲಾಖೆಗಳು ಯಾವುದೇ ಪ್ರಗತಿ ಕಾಣದೇ ಜಡಮತಿಯ ರೀತಿಯಲ್ಲಿ ಇದ್ದು ಹಾಗೆಯೇ ಮುಂದುವರೆಯುತ್ತಿರುವುದು ಹಿಂದುಳಿದ ಆಡಳಿತಕ್ಕೆ ಇಟ್ಟ ಕನ್ನಡಿಯಂತೆ ಗೋಚರಿಸುತ್ತಿವೆ.

ತೀವ್ರಗತಿಯಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನ ಹಾಗೂ ಅದಕ್ಕೆ ಸಂಬಂಧಪಟ್ಟ ಅಂತರ್ಜಾಲ ತಾಣ ಈ ಆಧುನಿಕ ಜಗತ್ತಿನಲ್ಲಿ ಇನ್ನೂ ಆಡಳಿತದಲ್ಲಿ ಕೆಲವೊಂದು ಶಾಖೆ ಹಾಗೂ ಕೆಲವೊಂದು ವಿಚಾರಗಳಲ್ಲಿ ಬದಲಾವಣೆಯನ್ನು ಕಾಣದಿರುವುದು ಶೋಚನೀಯ ಸಂಗತಿ. ಈ ಸಂಬಂಧವಾಗಿ ಕಾರಣ ಅಧ್ಯಾಯದಲ್ಲಿ ಆಡಳಿತದಲ್ಲಿ ಅಂತರ್ಜಾಲ ಕನ್ನಡ ಬಳಕೆಯ ಸಂದರ್ಭದಲ್ಲಿನ ಸಮಸ್ಯೆ ಮತ್ತು ಸವಾಲುಗಳನ್ನು ಹುಡುಕುವ ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಾಯ: ೬ : ಆಡಳಿತದಲ್ಲಿ ಕನ್ನಡ ಬಳಕೆ: ಎದುರಿಸುವ ಸಮಸ್ಯೆ ಮತ್ತು ಪರಿಹಾರಗಳು

ಪ್ರಸ್ತುತ ಮಹಾಪ್ರಬಂಧದಲ್ಲಿ ಆರನೆಯ ಅಧ್ಯಾಯವು ಆಡಳಿತದಲ್ಲಿ ಕನ್ನಡ ಎದುರಾದ ಸಮಸ್ಯೆಗಳು ಮತ್ತು ಸವಾಲುಗಳನ್ನು ಈ ಹಿಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಅವುಗಳ ಜೊತೆಯಲ್ಲಿ ಇನ್ನೂ ಕೆಲವೊಂದು ಸಮಸ್ಯೆಗಳು ಬಾಹ್ಯವಾಗಿ ಮತ್ತು ಅಂತರಿಕವಾಗಿ ಕಾಡುತ್ತಿವೆ. ಈ ಸಮಸ್ಯೆಗಳ ಬಗ್ಗೆ ಒಂದು ಪಕ್ಷಿನೋಟ ಹಾಗೂ ಪರಿಹಾರ ಈ ಅಧ್ಯಾಯದಲ್ಲಿದೆ.

ಕೇಂದ್ರ ಮತ್ತು ರಾಜ್ಯಸರ್ಕಾರಗಳಲ್ಲಿ ಅಧಿಕಾರಿಗಳ ಹಂಚಿಕೆ ತಂತ್ರಜ್ಞಾನದ ಅಸಮರ್ಪಕ ಬಳಕೆ ಹಾಗೂ ಕನ್ನಡದ ನಿರ್ಲಕ್ಷ್ಯ ಕನ್ನಡರಿಗೆ ಕನ್ನಡ ಬಳಸುವ ಮನೋಧರ್ಮ ಇಲ್ಲದಿರುವುದು, ತಂತ್ರಂಶಗಳ ಕೊರತೆ ಅಂತರ್ಜಾಲದ ಆಧುನೀಕರಣ ಮತ್ತು ಪ್ರಭಾವ, ಜಾಗತಿಕ ಮತ್ತು ಆಧುನೀಕರಣದ ನೆಲೆಯಲ್ಲಿ ಕನ್ನಡ ಭಾಷೆಯ ಮೇಲೆ ನಡೆಯುತ್ತಿರುವ ಹುನ್ನಾರ. ಯೋಜನೆಗಳ ನಿರ್ವಹಣೆಯನ್ನು ಖಾಸಗೀಯವರಿಗೆ ನೀಡಿರುವುದು. ಭಾಷಾ ನೀತಿಗಳಲ್ಲಿನ ತೊಡಕುಗಳು ಹಾಗೂ ಸರ್ಕಾರ ರೂಪಿತ ಯೋಜನೆಗಳಲ್ಲಿನ ತೊಡಕುಗಳು. ಇಂಗ್ಲೀಷಿನ ವ್ಯಾಮೋಹ, ಪ್ರಾದೇಶಿಕ ವಲಯದಲ್ಲಿ ಭಾಷೆಯ ಭಿನ್ನತೆ, ಗಡಿನಾಡ ಭಾಷೆಗಳ ಪ್ರಬಾವ, ಮತ್ತು ಭಾಷಾ ಅಲ್ಪಸಂಖ್ಯಾತರಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಗಾಗಿ ಎದುರಾದ ಸಮಸ್ಯೆಗಳು, ಮತ್ತು ಪರಿಹಾರಗಳನ್ನು ಸೂಚಿಸುವ ನಿಟ್ಟನಲ್ಲಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಕಚೇರಿಗಳಿಗೆ ಸಂಬಂಧಿಸಿದಂತೆ ಟಿಪ್ಪಣಿ, ಕಡತ ಮತ್ತು ಪತ್ರ ಇವುಗಳಲ್ಲಿ ಆಗುವ ಮತ್ತು ಆಗುತ್ತಿರುವ ದೋಷಗಳು ಮತ್ತು ಸಮಸ್ಯೆಗಳನ್ನು ಗುರುತಿಸುವುದರೊಂದಿಗೆ ಸಮಸ್ಯೆಗಳ ವಿವರಣೆಯನ್ನು ನೀಡುತ್ತವೆ.

ಅಧ್ಯಾಯ: ೭ : ಸಮಾರೋಪ

ಪ್ರಸ್ತುತ ಅಧ್ಯಾಯವು ಈ ಸಂಶೋಧನಾ ಪ್ರಬಂಧದ ಕೊನೆಯ ಅಧ್ಯಾಯವಾಗಿದ್ದು ಈ ಅಧ್ಯಾಯದಲ್ಲಿ ಸಂಶೋಧನಾ ಪ್ರಬಂಧದ ಸಮಾರೋಪ, ಹಾಗೂ ಅಧ್ಯಾಯದ ಫಲಿತಗಳನ್ನು ವಿವರಿಸಲಾಗಿದೆ. ಸಂಶೊಧನೆಗೆ ಸಂಬಂಧಿಸಿದಂತೆ ಅನುಬಂಧಗಳನ್ನು ಹಾಕಲಾಗಿದೆ. ಈ ಸಂಶೋಧನೆಗೆ ಬಳಸಿಕೊಳ್ಳಲಾದ ಪರಾಮರ್ಶನ ಗ್ರಂಥಗಳ ವಿವರಣೆಗಳನ್ನು ಹಾಗೂ ಕ್ಷೇತ್ರಧ್ಯಾಯನದ ಸಂದರ್ಭದಲ್ಲಿ ಬಳಸಿಕೊಳ್ಳಲಾದ ಮಾದರಿ ಪ್ರಶ್ನಾವಳಿಗಳನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

೧.೩. ಅಧ್ಯಯನದ ಮಹತ್ವ

ಸರ್ಕಾರವು ಆಡಳಿತದಲ್ಲಿ ಕನ್ನಡದ ಬಳಕೆಯನ್ನು ಕಡ್ಡಾಯಗೊಳಿಸಿ ಅಧಿಸೂಚನೆ, ಕಾಯ್ದೆ, ಕಾನೂನೂಗಳನ್ನು, ಅಧಿಕೃತಗೊಳಿಸಿ ಹೊಸ ನೀತಿ ನಿಯಮಗಳನ್ನು ರೂಪಿಸಿದ್ದಾಗಿಯೂ ಆಡಳಿತ ನಿರ್ವಹಣೆಯಲ್ಲಿ ಅವುಗಳನ್ನು ಜಾರಿಗೆ ತರಲು ವಿಫಲವಾಗುತ್ತಿದೆ. ಈ ವಿಫಲತೆಗೆ ಕಾರಣಗಳನ್ನು ತಿಳಿಯುವ ಮಹತ್ವವನ್ನು ಅಧ್ಯಯನವು ಪಡೆದುಕೊಳ್ಳುತ್ತದೆ.

ಕರ್ನಾಟಕದಲ್ಲಿ ಆಡಳಿತ ಭಾಷೆ ಸಂಪೂರ್ಣವಾಗಿ ಕನ್ನಡದಲ್ಲಿದ್ದರೆ ಆಡಳಿತದಲ್ಲಿ ಕನ್ನಡ ಬಳಕೆಯ ಸಮಸ್ಯೆಗಳು ಹುಟ್ಟುವುದಿಲ್ಲ' ಎನ್ನುವ ಮಾತುಗಳು ಮೇಲ್ನೋಟಕ್ಕೆ ಸತ್ಯವಾದರೂ ಕಾರ್ಯಾಚರಣೆಗೆ ತರುವುದು ಕಷ್ಟವೇ ಸರಿ. ಈ ವಿಷಯವನ್ನು ಭಾಷಾ ನೀತಿಗಳ ಹಿನ್ನಲೆಯಲ್ಲಿ ಸ್ಪಷ್ಟಪಡಿಸುವಲ್ಲಿ ಅಧ್ಯಯನವು ಮಹತ್ವವನ್ನು ಪಡೆದುಕೊಳ್ಳುತ್ತದೆ.

ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವುದಕ್ಕಾಗಿ ರೂಪಿಸಲಾದ ಹಾಗೂ ಕಾರ್ಯರೂಪಕ್ಕೆ ತರಲಾದ ಯೋಜನೆಗಳು ಸರಿಯಾದ ರೀತಿಯಲ್ಲಿ ಸಫಲತೆಯನ್ನು ಕಾಣುತ್ತಿಲ್ಲ. ಯೋಜನೆಗಳ ವಿಫಲತೆಗೆ ಇರುವ ಕಾರಣಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಅಧ್ಯಯನವು ಮಹತ್ವವನ್ನು ಪಡೆದುಕೊಳ್ಳುತ್ತದೆ.

ಪ್ರಸ್ತುತ ಅಧ್ಯಯನವು ವಿಶ್ಲೇಷಣೆ ಮಾದರಿಯ ಅಧ್ಯಯನವಾಗಿದೆ. ಆಡಳಿತದಲ್ಲಿ ಕನ್ನಡ ಬಳಕೆಯನ್ನು ಜಾರಿಗೆ, ಮತ್ತು ಬಳಕೆಯಲ್ಲಿರುವ ತರುವಲ್ಲಿನ ಸಮಸ್ಯೆ ಮತ್ತು ಸವಾಲುಗಳೇನು?. ಆಡಳಿತದಲ್ಲಿ ಕನ್ನಡ ಬಳಕೆಯನ್ನು ತಂದನಂತರದಲ್ಲಿ ಎದುರಿಸಬೇಕಾಗಿರುವ ಸಮಸ್ಯೆ ಮತ್ತು ಸವಾಲುಗಳೇನು? ಎಂಬ ವಿಷಯಗಳ ಬಗ್ಗೆ ಹಾಗೂ ಕಂಡುಕೊಂಡ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಸ್ತುತ ಅದ್ಯಯನವು ತನ್ನ ಮಹತ್ವವನ್ನು ಪಡೆದುಕೊಳ್ಳುತ್ತದೆ.

ಆಡಳಿತದಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಸಮಸ್ಯೆ ಮತ್ತು ಸವಾಲುಗಳ ಹಿನ್ನೆಲೆಯಲ್ಲಿ ಒಂದು ಹೊಸ ಆಯಾಮವನ್ನು ರೂಪಿಸಲು ಸಹಾಯಕವಾಗಲು ಅಧ್ಯಯನವು ತನ್ನ ಮಹತ್ವವನ್ನು ಪಡೆದಿದೆ.

ಬಹುಭಾಷಿಗರಿರುವ ಕರ್ನಾಟಕದಲ್ಲಿ ಸಂಪೂರ್ಣವಾಗಿ ಕನ್ನಡ ಆಡಳಿತ ಭಾಷೆಯಾಗಿ ಬಳಕೆಯ ಬಗ್ಗೆ ಸಾಧ್ಯತೆಗಳು ಇವೆಯೇ? ಎನ್ನುವ ಬಗ್ಗೆ ಪರಾಮರ್ಶನ ಮತ್ತು ಆಡಳಿತದಲ್ಲಿ ಕನ್ನಡ ಬಳಕೆಯಲ್ಲಾಗುತ್ತಿರುವ ಲೋಪದೋಷಗಳನ್ನು ತಿದ್ದಿ ಸುಧಾರಣೆಯನ್ನು ತರುವಲ್ಲಿ ಈ ಅಧ್ಯಯನ ಮಹತ್ವವನ್ನು ಪಡೆದಿದೆ ಹಾಗೂ ಸುಧಾರಣೆಯನ್ನು ತರಲು ಸಹಕಾರಿಯಾಗತ್ತದೆ.

ಆಡಳಿತದಲ್ಲಿ ಕನ್ನಡ ಬಳಕೆಯ ಸಮಸ್ಯೆಗಳು ಹೇಗಿವೆ? ಎಲ್ಲೆಲ್ಲಿ ಸಮಸ್ಯೆಗಳಿವೆ? ಸಮಸ್ಯೆಗೆ ಕಾರಣಗಳೇನು? ಅದಕ್ಕಿರುವ ಸವಾಲುಗಳಾವುವು? ಈ ಕುರಿತಾಗಿ ಸಮಗ್ರವಾಗಿ ಅಧ್ಯಯಮಾಡಿರುವುದು ಹೆಚ್ಚು ಸಹಕಾರಿಯಾಗಿದೆ. ಅಲ್ಲದೇ ಇದರ ನೆರವಿನಿಂದ ಪ್ರಸ್ತುತ ಆಡಳಿತ ವಲಯದಲ್ಲಿ ಆಡಳಿತ ಕನ್ನಡವನ್ನು ಬಳಕೆಗೆ ತರಲು ಮಾರ್ಗೋಪಾಯಗಳನ್ನು ಸೂಚಿಸುವಲ್ಲಿ ಅಧ್ಯಯನವು ಹೆಚ್ಚು ಮಹತ್ವವನ್ನು ಪಡೆದಿದೆ.

೧.೪. ಅಧ್ಯಯನದ ವ್ಯಾಪ್ತಿ

ಆಡಳಿತದಲ್ಲಿ ಕನ್ನಡ ಬಳಕೆ: ಸಮಸ್ಯೆ ಮತ್ತು ಸವಾಲುಗಳು ಒಂದು ಪಿಎಚ್.ಡಿ ಅಧ್ಯಯನವಾಗಿರುವುದರಿಂದ ಇದಕ್ಕೆ ತನ್ನದೇ ಮಿತಿಗಳಿವೆ.

ಕರ್ನಾಟಕ ಸರ್ಕಾರಕ್ಕೆ ಒಳಪಡುವ ಎಲ್ಲಾ ಇಲಾಖೆಗಳನ್ನು ಇಡಿಯಾಗಿ ಗಮನಿಸಿದರೂ ಸೂಕ್ಷ್ಮ ವಿಶ್ಲೇಷಣೆಗೆ ಹೋಗದೇ ಕಂದಾಯ, ಅರಣ್ಯ, ತೋಟಗಾರಿಕೆ, ಪೊಲೀಸ್, ಶಿಕ್ಷಣ, ಕಾನೂನು, ಸಾರಿಗೆ, ಖಜಾನೆ, ನೊಂದಣಿ ಮತ್ತು ಮುದ್ರಾಂಕ, ಭೂದಾಖಲೆ, ವಾರ್ತಾ ಮತ್ತು ಪ್ರಚಾರ ಇಲಾಖೆ ಮತ್ತಿತರ ಇಲಾಖೆಗಳನ್ನು ಸೀಮಿತಗೊಳಿಸಿಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕರ್ನಾಟಕದಲ್ಲಿ ಪ್ರಾದೇಶಿಕ ಪ್ರಾಂತ್ಯ ಬೇಧಗಳಿದ್ದು ಅವು ಒಂದಕ್ಕಿಂತ ಇನ್ನೊಂದು ಭಿನ್ನವಾದವುಗಳಾಗಿವೆ. ಇವುಗಳಿಗೆಲ್ಲಾ ಪ್ರಾದೇಶಿಕವಾಗಿ ಭಾಷಿಕ ಹಿನ್ನೆಲೆಯಲ್ಲಿ ಆಡಳಿತ ಕನ್ನಡದ ಬಳಕೆಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಗುರುತಿಸುವ ಅಧ್ಯಯನದ ಮಿತಿ ಹೊಂದಿದೆ.

ಆಡಳಿತದಲ್ಲಿ ಪ್ರಸ್ತುತ ಚರ್ಚೆಯಲ್ಲಿರುವ ಶಿಕ್ಷಣ ಮಾಧ್ಯಮದ ಕನ್ನಡವನ್ನು ಇಲ್ಲಿ ಚರ್ಚಿಸದೇ ಇಲಾಖೆಗಳಲ್ಲಿ ಬಳಕೆಯಲ್ಲಿರುವ ಆಡಳಿತದಲ್ಲಿ ಕನ್ನಡ ಬಳಕೆಗೆ ಮಾತ್ರ ವ್ಯಾಪ್ತಿಯನ್ನು ನಿಗಧಿಪಡಿಸಿಕೊಳ್ಳಲಾಗಿದೆ.

ಆಡಳಿತದಲ್ಲಿ ಕಂಡುಬರುವ ಕನ್ನಡ ಬಳಕೆಯಲ್ಲಿನ ಅರ್ಥವ್ಯತ್ಯಾಸ, ಭಾಷಾಂತರ, ಪದಗಳ ಬಳಕೆ, ಗಣಕಯಂತ್ರ, ಅಂತರ್ಜಾಲ, ವಿಜ್ಞಾನ ಮತ್ತು ತಂತ್ರಜ್ಞಾನದ ಸಮಸ್ಯೆ ಮತ್ತು ಸವಾಲುಗಳನ್ನೊಳಗೊಂಡಂತೆ ವಿಷಯವು ತನ್ನ ಅಧ್ಯಯನದ ಮಿತಿಯನ್ನು ನಿಗಧಿಪಡಿಸಿಕೊಳ್ಳಲಾಗಿದೆ.

೧.೫. ಅಧ್ಯಯನದ ವೈಧಾನಿಕತೆ

ಪ್ರಸ್ತುತ ಅಧ್ಯಯನದ ವಿಧಾನವು ಪ್ರಚಲಿತದಲ್ಲಿ ಪ್ರಮುಖವಾಗಿ ಚರ್ಚೆಯಲ್ಲಿರುವ ಆಡಳಿತದಲ್ಲಿ ಕನ್ನಡದ ಬಳಕೆ ಸಮಸ್ಯೆ ಮತ್ತು ಸವಾಲುಗಳು ಕುರಿತಂತೆ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನವನ್ನು ಅನುಸರಿಸಿ ಅಧ್ಯಯನ ಮಾಡಲಾಗಿದೆ.

ಆಡಳಿತದಲ್ಲಿನ ಕನ್ನಡ ಬಳಕೆಯ ಸಮಸ್ಯೆ ಮತ್ತು ಸವಾಲುಗಳನ್ನೊಳಗೊಂಡಂತೆ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಬಳಕೆಯಾಗುತ್ತಿರುವ ಕನ್ನಡದ ಮಾದರಿ ಪದಗಳನ್ನು ಉದಾಹರಣೆಗಳ ಜೊತೆಯಲ್ಲಿ ಆಡಳಿತದ ವಿಭಾಗಗಳನ್ನು, ಕನ್ನಡದ ಪ್ರಾಂತ್ಯಭೇದಗಳನ್ನು ಹಾಗೂ ಬೇರೆ ಭಾಷೆಯ ಪ್ರಭಾವದಿಂದ ಆಡಳಿತದಲ್ಲಿನ ಕನ್ನಡ ಬಳಕೆಯ ಸಮಸ್ಯೆ ಮತ್ತು ಸವಾಲುಗಳನ್ನು ಹೇಗೆ ಎದುರಿಸಬೇಕಾಗುತ್ತದೆ ಎಂಬ ನಿಟ್ಟಿನಲ್ಲಿ ವಿವರಣಾತ್ಮ ಅಧ್ಯಯನವಾಗಿದೆ. ಮತ್ತು ಕ್ಷೇತ್ರಧ್ಯಾಯನದ ಮೂಲಕ ಸಮೀಕ್ಷೆಯನ್ನು ಮಾಡಲಾಗಿದೆ.

ವಿವಿಧ ಇಲಾಖೆಗಳಲ್ಲಿ ಬಳಸಲಾಗುತ್ತಿರುವ ಆಡಳಿತದಲ್ಲಿನ ಕನ್ನಡ ಪದಗಳ ಜೊತೆಯಲ್ಲಿ ಒಂದು ನೋಟವನ್ನು ಹಾಯಿಸುವುದರ ಮೂಲಕ ಆಡಳಿತದಲ್ಲಿನ ಕನ್ನಡ ಪದಗಳ ಬಳಕೆಯ ಸಮಸ್ಯೆ, ಮತ್ತು ಸವಾಲುಗಳು ಮತ್ತು ಅದಕ್ಕಿರುವ ಪರಿಹಾರಗಳೇನು? ಎಂಬ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಅವಶ್ಯವೆಂದು ಕಂಡುಬಂದಲ್ಲಿ ಕ್ಷೇತ್ರಧ್ಯಾಯನದ ಮಾಹಿತಿ ಮೂಲಕ ವಿವರಿಸಲು ಪ್ರಯತ್ನಿಸಲಾಗಿದೆ.

ಆಡಳಿತದಲ್ಲಿ ಕನ್ನಡ ಬಳಕೆಯ ಸಂದರ್ಭದಲ್ಲಿ ಬರಿ ಆಡಳಿತಾತ್ಮಕವಾಗಿ ಅಲ್ಲದೇ ಸಾಮಾಜಿಕ, ರಾಜಕೀಯ, ತಾಂತ್ರಿಕ, ಬಾಹ್ಯ ಮತ್ತು ಆಂತರಿಕ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಪ್ರಸ್ತುತ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನದ ವೈಧಾನಿಕತೆಯನ್ನು ರೂಪಿಸಿಕೊಳ್ಳಲಾಗಿದೆ.

ಕರ್ನಾಟಕದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ನಿಟ್ಟಿನಲ್ಲಿ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಎಲ್ಲಾ ಕಚೇರಿಗಳಲ್ಲೂ ಕನ್ನಡ ಕಡ್ಡಾಯವಾಗಿ ಬಳಕೆಯಾಗಬೇಕು ಹಾಗೂ ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳೂ ಕನ್ನಡದಲ್ಲೇ ನಡೆಯಬೇಕು ಎಂಬುದು ಘನ ಸರ್ಕಾರದ ಧೋರಣೆಯಾಗಿದೆ. ಆದರೂ ಆಡಳಿತದ ವ್ಯವಹಾರದಲ್ಲಿ ಕನ್ನಡದ ಬಳಕೆ ಸರಿಯಾದ ಕ್ರಮದಲ್ಲಿ ಬಳಕೆಯಾಗದೆ ಅನೇಕ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸಬೇಕಾಗುತ್ತಿದೆ. ಆ ಸಮಸ್ಯೆಗಳಿಗೆ ಕಾರಣಗಳನ್ನು ಕಂಡುಕೊಳ್ಳುವ ವೈಧಾನಿಕತೆಯನ್ನು ರೂಡಿಸಿಕೊಳ್ಳಲಾಗಿದೆ.

ಅಧ್ಯಾಯ: ಎರಡು

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೨.೧. ಪಿಎಚ್.ಡಿ ಮಹಾಪ್ರಬಂಧಗಳು

೨.೨. ಕೃತಿಗಳು

೨.೩. ಲೇಖನಗಳು

೨.೪. ನಿಯತಕಾಲಿಕೆಗಳು

ಅಧ್ಯಾಯ : ಎರಡು

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕೆಂಬ ಚರ್ಚೆಗಳು ಮತ್ತು ವಿಚಾರಗಳು ಇಂದು ನಿನ್ನೆಯದಲ್ಲ. ಕನ್ನಡವನ್ನು ಅಧಿಕೃತವಾಗಿ ಆಡಳಿತ ಭಾಷೆಯೆಂದು ಘೋಷಿಸಿ ಐದು ದಶಕಗಳೇ ಕಳೆದಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಯಲ್ಲಿತ್ತು ಎನ್ನುವುದಕಕ್ಕೆ ಪುರಾವೆಗಳಿವೆ. ಬ್ರಿಟಿಷರ ಆಡಳಿತದಲ್ಲಿಯೂ ಸಹ ಕನ್ನಡ ಅಲ್ಲಲ್ಲಿ ಆಡಳಿತ ಭಾಷೆಯಾಗಿ ಬಳಕೆಯಲ್ಲಿತ್ತು ಎನ್ನುವುದಕ್ಕೆ ಹಲವಾರು ನಿದರ್ಶನಗಳು ದೊರಕುತ್ತವೆ. ಸ್ವಾತಂತ್ರ್ಯದ ನಂತರದಲ್ಲಿ ಕರ್ನಾಟಕದಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಯಲ್ಲಿತ್ತು ಎನ್ನುವುದನ್ನೂ ಕಾಣುತ್ತೇವೆ. ಆದರೆ ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯಾದ ಮೇಲೆ ಕರ್ನಾಟಕ ರಾಜ್ಯದಲ್ಲಿ ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕೆಂಬ ಆದೇಶಗಳನ್ನು ಜಾರಿಗೊಳಿಸಲಾಯಿತು. ಆದರೆ ಕಟ್ಟುನಿಟ್ಟಾದ ಆದೇಶಗಳನ್ನು ಜಾರಿಗೊಳಿಸಲಾದರೂ ಆಡಳಿತದಲ್ಲಿ ಕನ್ನಡವನ್ನು ಬಳಸಲು ಸಾಧ್ಯವಾಗುತ್ತಿಲ್ಲ. ಈ ವಿಷಯದ ಹಿನ್ನೆಲೆಯಲ್ಲಿ ಈಗಾಗಲೇ ಹಲವಾರು ಭಾಷಾತಜ್ಞರಿಂದ, ವಿದ್ವಾಂಸರಿಂದ, ಭಾಷಾ ಹಿತಚಿಂತಕರಿಂದ ವಿಷಯವನ್ನು ಕುರಿತಂತೆ ಚಿಂತನ ಮಂಥನಗಳು ನಡೆದಿರುವುದು ಕಂಡುಬರುತ್ತದೆ.

ಇತ್ತೀಚಿನ ದಿನಗಳಲ್ಲಿ ಆಡಳಿತದಲ್ಲಿ ಕನ್ನಡ ಬಳಕೆ ಕುರಿತಾಗಿ ಸಾಕಷ್ಟು ಚರ್ಚೆಗಳು ಬೆಳೆದು ಬರುತ್ತಿವೆ. ಆಡಳಿತ ಕನ್ನಡದ ಬಳಕೆಗೆ ಸಂಬಂಧಿಸಿದಂತೆ ಸಮಸ್ಯೆ ಸವಾಲುಗಳ ಹಿನ್ನೆಲೆಯಲ್ಲಿ ಚರ್ಚೆಗಳು ಕಾಣಸಿಗುತ್ತವೆ. ಇಂತಹ ಎಲ್ಲಾ ವಿಷಯಗಳ ಅಧ್ಯಯನಗಳು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿರುವುದರಿಂದ ಅವುಗಳನ್ನು ಇಲ್ಲಿ ಸಮೀಕ್ಷೆ ಮಾಡಲಾಗಿದೆ.

ಆಡಳಿತದಲ್ಲಿ ಕನ್ನಡ ಬಳಕೆ ಸಮಸ್ಯೆ ಮತ್ತು ಸವಾಲುಗಳು ಕುರಿತಂತೆ ಇದುವರೆಗೂ ಬಂದ ಅಧ್ಯಯನಗಳನ್ನು ಸಮೀಕ್ಷೆ ಮಾಡಲಾಗಿದೆ. ಅದರಲ್ಲಿ ಪಿಹೆಚ್.ಡಿ. ಮಹಾಪ್ರಬಂಧಗಳನ್ನು, ಎಂ.ಫಿಲ್ ಕಿರು ಪ್ರಬಂಧಗಳನ್ನು ಸಮೀಕ್ಷೆಗೆ ಬಳಸಿಕೊಳ್ಳಲಾಗಿದೆ. ನಂತರದಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ಕೃತಿಗಳನ್ನು ಮತ್ತು ಲೇಖನಗಳನ್ನು ಇಲ್ಲಿ ಸಮೀಕ್ಷೆ ಮಾಡಲಾಗಿದೆ. ಅದೇ ರೀತಿಯಾಗಿ ಆಡಳಿತದಲ್ಲಿ

ಕನ್ನಡ ಬಳಕೆಗೆ ಕುರಿತಾದ ಕಳೆದ ನಾಲ್ಕು ಐದು ವರ್ಷಗಳಿಂದ ಚರ್ಚೆಗಳು ವಾದ ವಿವಾದಗಳು ಪತ್ರಿಕೆಗಳಲ್ಲಿ ಸ್ಥಳಾವಕಾಶವನ್ನು ಪಡೆದುಕೊಳ್ಳುತ್ತಿವೆ. ಅಂತಹ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ತ್ರೈಮಾಸಪತ್ರಿಕೆಗಳಲ್ಲಿ ಬಂದಿರುವ ಲೇಖನಗಳನ್ನು ಸಹ ಇಲ್ಲಿ ಸಮೀಕ್ಷೆಮಾಡಲಾಗಿದೆ.

೨.೧. ಪಿಎಚ್.ಡಿ ಮಹಾಪ್ರಬಂಧಗಳು

ರಂಗನಾಥ.ಕೆ.ಆರ್., ೨೦೦೭ರಲ್ಲಿ ಕಿ.ರಂ.ನಾಗರಾಜ ಅವರ ಮಾರ್ಗದರ್ಶನದಲ್ಲಿ **'ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷದ ನೆಲೆಗಳು'** ಎನ್ನುವ ಪಿಎಚ್.ಡಿ. ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದಲ್ಲಿ ಭಾಷೆಗಳ ಕುರಿತಾಗಿ ಸಾಂಸ್ಕೃತಿಕ ಮತ್ತು ರಾಜಕೀಯ ಚರ್ಚೆಗಳ ಹಿನ್ನೆಲೆಯಲ್ಲಿ ತಾತ್ವಿಕವಾಗಿ ಅಧ್ಯಯನ ಮಾಡಲಾಗಿರುತ್ತದೆ. ಜನಭಾಷೆ, ಪ್ರಭುತ್ವದ ಭಾಷೆ ಮತ್ತು ಅವುಗಳ ಮಧ್ಯದಲ್ಲಿನ ಸಂಘರ್ಷದ ನೆಲೆಗಳೆಂದು ಮೂರು ಭಾಗಗಳಾಗಿ ವಿವರಿಸಲಾಗಿದೆ.

ಭಾಷೆ ಮತ್ತು ಭಾಷಿಕ ಪರಿಸರದ ಸ್ವರೂಪದ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ವ್ಯಕ್ತಿವಾದ, ಜಾತಿವಾದ, ಕೋಮುವಾದಗಳ ಸುಳಿಯಲ್ಲಿ ಕನ್ನಡ ಚಳುವಳಿಗಳು ಮತ್ತು ಕನ್ನಡ ರಾಷ್ಟ್ರೀಯತೆಯ ಹಿತಾಸಕ್ತಿಗಳೇ ಮುಖ್ಯವಾಗಿದೆ ಎಂದಿದ್ದಾರೆ. ಇಂಗ್ಲೀಷ್ ಭಾಷೆ ಮಾತ್ರ ಪ್ರಭುತ್ವದ ಯಜಮಾನಿಕೆ ಭಾಷೆಯಾಗಿದೆ. ನಿರ್ದಿಷ್ಟ ಸಂದರ್ಭಗಳಲ್ಲಿ ಯಾವ ಭಾಷೆ ಬೇಕಾದರೂ ಪ್ರಭುತ್ವದ ಯಜಮಾನಿಕೆಯ ಭಾಷೆಯಾಗಿ ಪರಿವರ್ತನೆಗೊಳ್ಳಬಹುದು. ಭಾಷೆಗೆ ಸಮರ್ಥನೆಯನ್ನು ಒದಗಿಸುವ ಕೆಲಸವನ್ನು ಪ್ರಭುತ್ವಗಳು ನಡಸುತ್ತಿರುತ್ತವೆ. ಮಾನವನ ಸಮಾಜದ ಬದಲಾವಣೆಯ ಹಾದಿಯಲ್ಲಿ ಏಕಭಾಷಾ ಪರಿಸರವು ದ್ವಿಭಾಷಿಕ ಹಾಗೂ ಬಹುಭಾಷಿಕ ಪರಿಸರಗಳಾಗಿ ಬದಲಾಗುತ್ತಿರುವುದನ್ನು ಕಾಣಬಹುದೆಂದು ಚರ್ಚಿಸಿದ್ದಾರೆ. ಆದರೆ ವಸಾಹತುಶಾಹಿ ಪ್ರಭುತ್ವಗಳ ಭಾಷೆಯ ರಾಜಕಾರಣದಿಂದ ಜನಮುಖಿ ಸಂಸ್ಕೃತಿಯನ್ನು, ಭಾಷೆಗಳನ್ನು ನಾಶಗೊಳಿಸಿ ತನ್ನ ಒಡೆತನವನ್ನು ಸ್ಥಾಪಿಸುತ್ತದೆ. ಕನ್ನಡವು ತನ್ನ ನೆಲದಲ್ಲೇ ಅನಾಥವಾಗುವ ಬಿಕ್ಕಟ್ಟಿಗೆ ಒಳಗಾಗಿದೆ. ಎಂದು ವಿವರಿಸಿದ್ದಾರೆ.

ವೀರಾಕ್ಷಿ ಎಲ್. ವಿವೇಕಿ, ೨೦೧೦ರಲ್ಲಿ ಅಶೋಕಕುಮಾರ ರಂಜೇರೆ ಅವರ ಮಾರ್ಗದರ್ಶನದಲ್ಲಿ **'ಕರ್ನಾಟಕದಲ್ಲಿ ಭಾಷಾ ಶಿಕ್ಷಣ ಮತ್ತು ಮಾಧ್ಯಮದ ವಾಗ್ವಾದಗಳು'** (ಪ್ರಾಥಮಿಕ ಶಿಕ್ಷಣದ ಕನ್ನಡ ಮಾದ್ಯಮವನ್ನು ಅನುಲಕ್ಷಿಸಿ) ಎನ್ನುವ ಪಿಎಚ್.ಡಿ. ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ.

ಭಾಷಾ ಮಾಧ್ಯಮದ ವಾಗ್ವಾದಗಳನ್ನು ಪ್ರಧಾನೀಕರಿಸಿಕೊಂಡು ಈ ಸಂಶೋಧನೆ ನಡೆದಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಉಂಟಾಗಿರುವ ಭಾಷೆಯ ಬಗೆಗಿನ ಗೊಂದಲಗಳು, ಭಾಷೆ ಮತ್ತು ಮಾಧ್ಯಮದ ಹಿನ್ನೆಲೆಯಲ್ಲಿ ರೂಪಗೊಂಡಿವೆ. ಭಾಷೆ ಮತ್ತು ಮಾಧ್ಯಮ ಇವೆರಡೂ ಭಿನ್ನ ಅರ್ಥಹೊಂದಿರುವ ಪರಿಕಲ್ಪನೆಗಳಾಗಿವೆ ಎಂಬುದನ್ನು ಚರ್ಚಿಸಿದ್ದಾರೆ. ಪ್ರಸ್ತುತ ಮಹಾ ಪ್ರಬಂಧವು ಪ್ರಧಾನವಾಗಿ ಚರ್ಚೆಯಾಗುತ್ತಿರುವ ಪ್ರಾಥಮಿಕ ಹಂತದ ಕನ್ನಡ ಭಾಷಾಮಾಧ್ಯಮದ ವಾಗ್ವಾದಗಳನ್ನು ಗಮನದಲ್ಲಿಟ್ಟುಕೊಂಡು ಚಾರಿತ್ರಿಕವಾಗಿ, ಭಾಷಾಶಿಕ್ಷಣ ಮತ್ತು ಭಾಷಾಮಾಧ್ಯಮ ಕುರಿತು ಶೈಕ್ಷಣಿಕ ಹಾಗೂ ಭಾಷಾವೈಜ್ಞಾನಿಕ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಮಂಜುನಾಥ ಜೋಗಿನಕಟ್ಟಿ, ೨೦೧೧ರಲ್ಲಿ ಪಿ.ಮಹದೇವಯ್ಯ ಅವರ ಮಾರ್ಗದರ್ಶನದಲ್ಲಿ **'ಮಸ್ಕಿ ಕನ್ನಡ : ಒಂದು ಭಾಷಿಕ ಅಧ್ಯಯನ'** ಎನ್ನುವ ಪಿಎಚ್.ಡಿ. ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ.

ಮಸ್ಕಿ ಕನ್ನಡ ಪೂರ್ವ ಮತ್ತು ಪಶ್ಚಿಮ ವಿಭಾಗಗಳಲ್ಲಿ ಬಳಕೆಯಲ್ಲಿರುವ ಕನ್ನಡ ಮೂಲದ್ರಾವಿಡ ಭಾಷಾಅಂಶಗಳನ್ನು ಉಳಿಸಿಕೊಂಡಿದೆ. ಉತ್ತರ ಮತ್ತು ದಕ್ಷಿಣ ಪರಿಸರದಲ್ಲಿ ಮಸ್ಕಿ ಕನ್ನಡ ಬದಲಾವಣೆಗೆ ಒಳಗಾಗಿದೆ. ಈ ರೀತಿಯ ಬದಲಾಣೆಯು ಕೆಲವು ಪ್ರಾದೇಶಿಕ ಕನ್ನಡಗಳಲ್ಲಿ ಮಾತ್ರ ಸಿಗುತ್ತದೆ. ಮಸ್ಕಿ ಕನ್ನಡದ ವಿಶೇಷ ಎಂದರೆ ಕೆಲವು ಭಾಷಿಕ ಅಂಶಗಳಲ್ಲಿ ಮೂಲ ಕನ್ನಡದ ಲಕ್ಷಣಗಳನ್ನು ಉಳಿಸಿಕೊಂಡಿದೆ ಎಂದಿದ್ದಾರೆ. ಮಸ್ಕಿ ಕನ್ನಡ ಮಾತೃಭಾಷಿಕರ ಮೇಲೆ ಮರಾಠಿ ಹಾಗೂ ಉರ್ದು ಭಾಷೆಯ ಪ್ರಭಾವವನ್ನು ಸ್ವಲ್ಪ ಮಟ್ಟಿಗೆ ಗುರುತಿಸಬಹುದು. ಮರಾಠಿ ಹಾಗೂ ಉರ್ದು ಭಾಷೆಯ ಪ್ರಭಾವಕ್ಕೆ ಕಾರಣ ಈ ಪ್ರದೇಶದಲ್ಲಿ ಮರಾಠರ ಹಾಗೂ ನಿಜಾಮರ ಆಳ್ವಿಕೆ ನಡೆದಿದೆ ಎಂದು ವಿವರಿಸಿದ್ದಾರೆ.

ಶಿವಪ್ರಕಾಶ ನಾಯಕ, ೨೦೧೨ರಲ್ಲಿ ಪಿ.ಮಹದೇವಯ್ಯ ಅವರ ಮಾರ್ಗದರ್ಶನದಲ್ಲಿ **'ಆದೋನಿ ಕನ್ನಡ'** ಎನ್ನುವ ಪಿಎಚ್.ಡಿ. ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ.

ಕನ್ನಡ ಭಾಷೆಯ ಮೇಲೆ ಅನೇಕ ಅನ್ಯ ಭಾಷೆಗಳು ಪ್ರಭಾವ ಬೀರಿವೆ ಅದರಂತೆ ತೆಲುಗು ಭಾಷೆಯ ಮೇಲೆ ಅನ್ಯ ಭಾಷೆಯ ಪ್ರಭಾವವೂ ಆಗಿದೆ. ಭಾಷಿಕವಾಗಿ ಒಂದು ಕಡೆ ಕನ್ನಡದ ಎಲ್ಲೆ ಮತ್ತೊಂದು ಕಡೆ ತೆಲುಗಿನ ಎಲ್ಲೆ. ಪರಸ್ಪರರಲ್ಲಿ ಭಾಷೆ ಕೊಡುಕೊಳ್ಳುವಿಕೆಯಲ್ಲಾದ ದ್ವಿಭಾಷಿಕ ಸ್ಥಿತಿಯನ್ನು ವಿಶ್ಲೇಷಿಸುವ ಕೆಲಸವನ್ನು ಮಹಾಪ್ರಬಂಧದಲ್ಲಿ ಮಾಡಲಾಗಿದೆ. ಗಡಿ ಭಾಗಗಳಲ್ಲಿನ ಕನ್ನಡಿಗರು ಕನ್ನಡ ಮಾತುಗಳೊಂದಿಗೆ ತೆಲುಗು ಭಾಷೆಯನ್ನು ಬೆರೆಸಿ ಬಳಸುವುದರಿಂದ ಅವರ ಮಾತಿನಲ್ಲಿ ತೆಲುಗು ಭಾಷೆಯ ಧ್ವನಿ, ವ್ಯಾಕರಣ ವಿಚಾರಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಆದ್ದರಿಂದ ಕನ್ನಡಿಗರ ಮಾತಿನಲ್ಲಿ ತೆಲುಗು ಮಾತುಗಳು ಸಹಜವಾಗಿಯೇ ಕನ್ನಡೀಕರಣಗೊಂಡಿರುವ ಅಂಶ ಸ್ಪಷ್ಟವಾಗುತ್ತದೆಂದು ಚರ್ಚಿಸಿದ್ದಾರೆ.

ಶ್ರೀನಿವಾಸ ಬೇಂದ್ರೆ, ೨೦೦೨ರಲ್ಲಿ ಕೆ.ವಿ.ನಾರಾಯಣ ಅವರ ಮಾರ್ಗದರ್ಶನದಲ್ಲಿ **'ಬೀದರ ಕನ್ನಡ : ಸಾಮಾಜಿಕ ಹಾಗೂ ಪ್ರಾದೇಶಿಕ ಪ್ರಭೇದಗಳು'** (ಭಾಷಾ ಶಾಸ್ತ್ರೀಯ ಅಧ್ಯಯನ) ಎನ್ನುವ ಪಿಎಚ್.ಡಿ. ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ.

ಸಾಮಾಜಿಕ ಮತ್ತು ಪ್ರಾದೇಶಿಕ ಪ್ರಭೇದಗಳ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆಯಲ್ಲಿನ ಸಾಮಾಜಿಕವಾಗಿ ಒಡನಾಟದಲ್ಲಿರುವ ಕನ್ನಡ ಭಾಷೆಯ ರಚನೆ, ಪ್ರಾದೇಶಿಕ ವರ್ಗೀಕರಣದ ಹಿನ್ನೆಲೆಯಲ್ಲಿ ವರ್ಣನಾತ್ಮಕವಾಗಿ ಹಾಗೂ ತೌಲನಿಕವಾಗಿ ಭಾಷಾ ಶಾಸ್ತ್ರೀಯ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದಲ್ಲಿ ತಿಳಿಸಿದಂತೆ ಬೀದರ್ ಕನ್ನಡದ ಮೇಲೆ ಉರ್ದು, ಮರಾಠಿ, ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳ ಪ್ರಭಾವ ಆಗಿರುವುದನ್ನು ಗುರ್ತಿಸಿದ್ದಾರೆ.

ನಾರಾಯಣಸ್ವಾಮಿ. ಕೆ, ೨೦೦೭ರಲ್ಲಿ ಕೆ.ವಿ. ನಾರಾಯಣ ಅವರ ಮಾರ್ಗದರ್ಶನದಲ್ಲಿ **'ಕೋಲಾರ ಜಿಲ್ಲೆಯ ದ್ವಿಭಾಷಿಕತೆಯ ನೆಲೆಗಳು'** ಎನ್ನುವ ಪಿಎಚ್.ಡಿ. ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ.

ಕೋಲಾರ ಜಿಲ್ಲೆಯ ದ್ವಿಭಾಷಿಕತೆಯ ನೆಲೆಗಳು ಯಾವುವು? ಯಾವ ಕಾರಣಗಳಿಂದಾಗಿ ಇಲ್ಲಿ ದ್ವಿಭಾಷಾ ಪರಿಸರ ಉಂಟಾಗಿದೆ? ಅದರ ಸ್ವರೂಪ ಎಂತಹದು? ದ್ವಿಭಾಷಿಕತೆಯ ಕಾರಣಗಳಿಂದಾಗಿರುವ ಪರಿಣಾಮಗಳು ಯಾವ ರೀತಿಯವು? ಎನ್ನುವುದನ್ನು ಚರ್ಚಿಸಿದ್ದಾರೆ. ಸಾಮಾಜಿಕ ಭಿನ್ನಾಂಶಗಳಾದ ಜಾತಿ, ಲಿಂಗ, ವರ್ಗ, ಕುಟುಂಬ, ವಯಸ್ಸು, ಕಸುಬು ಇವುಗಳಿಂದ ದ್ವಿಭಾಷಿಕತೆಯಲ್ಲಿ ವ್ಯತ್ಯಾಸಗಳಿರುವುದನ್ನು ವಿವರಿಸಲಾಗಿದೆ. ಕೊಲಾರ ಜಿಲ್ಲೆಯಲ್ಲಿ ದ್ವಿಭಾಷಿಕತೆಯ ನೆಲೆಗಳಲ್ಲಿ ಕನ್ನಡ ಮತ್ತು ತೆಲುಗು ಇಲ್ಲಿನ ಸಾಮಾಜಿಕ ಜೀವನದಲ್ಲಿ ಹೇಗೆ ಹಾಸುಹೊಕ್ಕಾಗಿದೆ ಎಂಬ ಅಂಶವನ್ನು ತಿಳಿಸಿದ್ದಾರೆ. ಕನ್ನಡ ಹಾಗೂ ತೆಲುಗು ಭಾಷಿಕರಲ್ಲಿ ಬಹಳಷ್ಟು ಹಳ್ಳಿಯಲ್ಲಿ ವಾಸಿಸುವವರೇ ಆಗಿದ್ದು, ನಗರವಾಸಿಗಳ ಪ್ರಮಾಣ ತೀರಾ ಕಡಿಮೆ ಇದೆ. ಹಳ್ಳಿವಾಸಿಗಳಲ್ಲಿಯೂ ಕನ್ನಡ ಭಾಷಿಕರಿಗಿಂತ ತೆಲುಗು ಭಾಷಿಕರೇ ಹೆಚ್ಚಾಗಿರುವುದು ಎದ್ದು ಕಾಣತಕ್ಕ ಅಂಶವಾಗಿದೆ ಎಂದು ಚರ್ಚಿಸಿದ್ದಾರೆ.

೨.೨. ಕೃತಿಗಳು

ಆಡಳಿತ ಕಚೇರಿ ಕನ್ನಡ ಕೈಪಿಡಿ: ಸಿ.ಎಂ.ವೀರಭದ್ರಯ್ಯ, ಕರಾವಳಿ ಪ್ರಕಾಶನ, ಮಂಗಳೂರು, ೨೦೦೮. ಇವರ ಈ ಕೃತಿಯು ಆಡಳಿತ ಭಾಷೆ, ಕನ್ನಡ ಆಡಳಿತ ಪರಂಪರೆ, ಆಡಳಿತ ಭಾಷೆಯಾಗಿ ಕನ್ನಡ, ಆಂಗ್ಲರ ಕಾಲದಲ್ಲಿ ಕನ್ನಡ ಆಡಳಿತ ಭಾಷೆಯಾಗಿತ್ತು ಎಂಬ ವಿಚಾರಗಳಿಗೆ ಸಂಬಂಧಿಸಿದಂತೆ ಬೆಳಕನ್ನು ಚೆಲ್ಲುತ್ತದೆ. ಆಡಳಿತ ಕನ್ನಡದ ಕೆಲವೊಂದು ಸಮಸ್ಯೆಗಳನ್ನೂ ಸಹ ಕೃತಿಯಲ್ಲಿ ತಿಳಿಸಿದ್ದಾರೆ.

ನಮ್ಮ ಕನ್ನಡ ಆಡಳಿತ ಭಾಷೆ ಸಮಸ್ಯೆಯಾಗಲು ನಾವಾಗಿ ರೂಪಿಸಿಕೊಂಡ ಇಂಗ್ಲೀಷ್ ವ್ಯಾಮೋಹ ಹಾಗೂ ಸಾಮಾಜಿಕ ಪ್ರತಿಷ್ಠೆ, ಕನ್ನಡ ಭಾಷೆಯಲ್ಲಿ ನಾವು ಸುಲಭವಾಗಿ ವ್ಯವಹಾರ ನಡೆಸಬಲ್ಲೆವೇ? ಎಂಬ ಅಳುಕು ನಮ್ಮಲ್ಲಿದೆ. ಅಧಿಕಾರಿಗಳ ಕೀಳರಿಮೆ ಕನ್ನಡದ ಬಗ್ಗೆ ಇರುವುದು, ಅಧಿಕಾರಿಗಳಿಗೆ ಗೌರವ ತರುವುದು ಹಾಗೂ ದಕ್ಷತೆ ಹೆಚ್ಚಿಸುವುದು ಪ್ರಾಮಾಣಿಕ ನಿಷ್ಪಕ್ಷಪಾತ ಮನೋಭಾವ, ಸಾರ್ವಜನಿಕ ಸೇವೆಗೆ ಸಾಧ್ಯ ಎಂಬ ಮನೋಭಾವ ಇಲ್ಲದಿರುವುದು ಕಂಡುಬರುತ್ತದೆ ಎಂದಿದ್ದಾರೆ.

ಆಡಳಿತ ಕನ್ನಡ : ರಮೇಶ್ ಬೇವೂರ, ವಾಗ್ದೇವಿ ಬುಕ್ ಹೌಸ್, ಮೈಸೂರು. ೨೦೦೦. ಕೃತಿಯು ಆಡಳಿತ ಭಾಷೆಯಾಗಿ ಕನ್ನಡ ಬೆಳೆದು ಬಂದ ದಾರಿ, ಆಡಳಿತ ಕನ್ನಡದ ಸ್ವರೂಪ ಮತ್ತು ಲಕ್ಷಣಗಳ ಬಗ್ಗೆ ವಿವರಿಸುತ್ತದೆ. ಆಯಾ ಪ್ರಾದೇಶಿಕ ಭಾಷೆಯನ್ನು ಆಡಳಿತದಲ್ಲಿ ಬಳಕೆ ಮಾಡುವ ಬಗ್ಗೆ ಸಂವಿಧಾನದ ೩೪೫ ನೇ ಅನುಚ್ಛೇದವು ಅವಕಾಶವನ್ನು ಕಲ್ಪಿಸುತ್ತದೆ. ೧೯೬೩ ರಲ್ಲಿ ಅಂಗೀಕೃತವಾದ, ಕರ್ನಾಟಕ ರಾಜ್ಯಭಾಷಾ ಅಧಿನಿಯಮವು 'ಕನ್ನಡವು ಕರ್ನಾಟಕ ರಾಜ್ಯದ

ಆಡಳಿತ ಭಾಷೆ ಆಗಿರತಕ್ಕದ್ದು' ಎಂದು ಹೇಳುತ್ತದೆ. ೧೯೮೨ ರಲ್ಲಿ ಈ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿ ತರುವ ಮೂಲಕ "ರಾಜ್ಯ ವಿಧಾನಮಂಡಲದಲ್ಲಿ ಮಂಡಿಸಲಾಗುವ ಅಧಿನಿಯಮಗಳಲ್ಲಿ ಮತ್ತು ಕರ್ನಾಟಕ ರಾಜ್ಯದ ರಾಜ್ಯಪಾಲರು ಹೊರಡಿಸುವ ಆದೇಶಗಳಲ್ಲಿ ಮತ್ತು ಸಂವಿಧಾನದ ಅಥವಾ ಸಂಸತ್ತಿನ ಅಥವಾ ಕರ್ನಾಟಕ ವಿಧಾನಮಂಡಲದ ಕಾನೂನಿನ ಮೇರೆಗೆ ಹೊರಡಿಸಲಾಗುವ ಯಾವುದೇ ಆದೇಶ, ನಿಯಮಗಳು, ವಿನಿಮಯಗಳು ಅಥವಾ ಉಪವಿಧಿಗಳಲ್ಲಿ ಕನ್ನಡವನ್ನು ಬಳಸಲು ಅವಕಾಶ"ವನ್ನು ಕಲ್ಪಿಸಿಕೊಡಲಾಯಿತು.

೧೯೮೩ರಲ್ಲಿ ಕರ್ನಾಟಕದ ರಾಜ್ಯಪಾಲರು ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ 'ಆಡಳಿತದ ಎಲ್ಲಾ ಹಂತದಲ್ಲೂ ಕನ್ನಡಕ್ಕೆ ಅಗ್ರ ಸ್ಥಾನ ನೀಡಲಾಗುವುದು' ಎಂದು ಘೋಷಿಸಿದರು. ಅದಕ್ಕನುಗುಣವಾಗಿ ಕರ್ನಾಟಕ ಸರ್ಕಾರವು ೧೯೮೩ರ ಫೆಬ್ರವರಿ ೧೫ ರಂದು ಗ್ರಾಮಾಂತರ ಪ್ರದೇಶಗಳಿಂದ ಹಿಡಿದು ಸಚಿವಾಲಯದವರೆಗೆ ರಾಜ್ಯ ಸರ್ಕಾರದ ಎಲ್ಲಾ ಕಚೇರಿಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಕಟ್ಟುನಿಟ್ಟಾಗಿ ಅತ್ಯಂತ ಯಶಸ್ವಿ ಹಾಗೂ ಔಚಿತ್ಯಪೂರ್ಣವಾಗಿ ಜಾರಿಗೆ ತರಬೇಕೆಂದು ಆದೇಶ ನೀಡಿತು. ಆಡಳಿತದಲ್ಲಿ ಕನ್ನಡ ಕಡ್ಡಾಯವೆಂಬ ಸರಕಾರದ ದೃಢ ಮನೋಸಂಕಲ್ಪ ಅಕ್ಷರ ರೂಪಕ್ಕಿಳಿಯಿತು ಎಂಬ ವಿಚಾರಗಳನ್ನು ಕೃತಿಯಲ್ಲಿ ಸ್ಪಷ್ಟವಾಗಿ ಗುರುತಿಸಲಾಗಿದೆ.

ಆಡಳಿತ ಕನ್ನಡ ಮೇಲ್ನೋಟಕ್ಕೆ ಒಂದು ಘಟಕವೆನಿಸಿದರೂ ಅದರಲ್ಲಿ

೧. ಸರಕಾರಿ ಇಲಾಖೆಗಳು ಸಾರ್ವಜನಿಕರೊಡನೆ ನಿರ್ವಹಿಸುವ ವ್ಯವಹಾರ ಕನ್ನಡ.

೨. ಕನ್ನಡದಲ್ಲಿ ದಾಖಲಾಗುವ ಕನ್ನಡ.

೩. ಇವೆರಡಕ್ಕೂ ಅಗತ್ಯವಾದ ನೀತಿ, ನಿಯಮ, ಕಾನೂನು ಇತ್ಯಾದಿ ಬಂಧನವನ್ನೊದಗಿಸುವ ಕಾನೂನಿನ ಕನ್ನಡ.

ಎಂಬ ಮೂರು ಹಂತಗಳಿವೆ. ಈ ಮೂರೂ ಹಂತಗಳಲ್ಲಿ ಆಡಳಿತ ಕನ್ನಡ ಬಳಕೆಯಾಗುತ್ತದೆಂಬ ಅಂಶವನ್ನು ಗುರುತಿಸಿದ್ದಾರೆ.

ಭಾಷೆ ಅಭಿವೃದ್ಧಿ ಹೊಂದಿದಂತೆ, ಸಮಾಜ ಪ್ರಗತಿ ಹೊಂದಿದಂತೆ, ಜನ ಹೆಚ್ಚು ಸುಶಿಕ್ಷಿತರಾದಂತೆ ಸರ್ಕಾರದ ಆಡಳಿತ ವ್ಯವಸ್ಥೆ ಬಹುಮುಖವೂ ಹೆಚ್ಚು ವೈವಿಧ್ಯಪೂರ್ಣವೂ ಮತ್ತು ಜಟಿಲವೂ ಆಗುವುದರಲ್ಲಿ ಸಂದೇಹವಿಲ್ಲ. ಆಗ ಸರ್ಕಾರವು ತನ್ನ ವ್ಯವಹಾರದಲ್ಲಿ ಅನೇಕ ಹೊಸ ಪದಗಳನ್ನು ಬಳಸಲೇಬೇಕಾಗುತ್ತದೆ. ಆದರೆ ಭಾಷೆಯನ್ನು ಅಗತ್ಯಕ್ಕಿಂತ ಹೆಚ್ಚು ಕ್ಲಿಷ್ಟವಾಗಿ ಮಾಡಬಾರದು ಎಂದು ವಿವರಿಸಲಾಗಿದೆ.

ಕನ್ನಡ ಚಿಂತನೆ : ದೇ.ಜವರೇಗೌಡ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭. ಕೃತಿಯಲ್ಲಿ ಕನ್ನಡ ಭಾಷೆಯನ್ನು ಪ್ರಧಾನವಾಗಿಟ್ಟುಕೊಂಡು ಆಡಳಿತ, ಶಿಕ್ಷಣ, ಮಾಧ್ಯಮ, ನ್ಯಾಯಾಲಯಗಳಲ್ಲಿ ಕನ್ನಡದ ಬಳಕೆ ಕುರಿತು ಅಧ್ಯಯನಪೂರ್ಣವಾದ ಕಾರ್ಯರೂಪಿ ಚಿಂತನೆಗಳಿವೆ. ಕನ್ನಡದ

ಅಭಿವೃದ್ಧಿಯ ಕುರಿತು ನೀಲಿ ನಕಾಶೆಯನ್ನು ಈ ಕೃತಿಯಲ್ಲಿ ರೂಪಿಸಲಾಗಿದೆ. ತ್ರಿಭಾಷಾ ಸೂತ್ರ, ಕನ್ನಡ–ಇಂಗ್ಲೀಷ್ ಸಂಬಂಧಗಳ ಚರ್ಚೆ ವಿಶೇಷವಾಗಿ ಇಲ್ಲಿ ಮಂಡಿತವಾಗಿದೆ. ಕನ್ನಡ ಮುಖ್ಯ ಭಾಷೆಯಾಗಿ ಮತ್ತು ಮಾಧ್ಯಮವಾಗಿ ಬಳಕೆಯಾಗಬೇಕಾದ ಅಗತ್ಯತೆಗಳನ್ನು ಸಮರ್ಥವಾಗಿ ಪ್ರತಿಪಾದಿಸಲಾಗಿದೆ. ಈ ಕೃತಿಯು ಜಾಗತಿಕರಣದ ಮತ್ತು ಆಂಗ್ಲೀಕರಣದ ಇಂದಿನ ಸನ್ನಿವೇಶಗಳಲ್ಲಿ ಅತ್ಯಂತ ಮಹತ್ವದ ಒಳನೋಟ ಮತ್ತು ಮುನ್ನೋಟಗಳನ್ನುಳ್ಳದ್ದಾಗಿದೆ.

ಆಡಳಿತ ಕನ್ನಡಕ್ಕೆ ಸಂಬಂದಿಸಿದಂತೆ ಕೃತಿಯಲ್ಲಿನ 'ಆಡಳಿತ ಭಾಷೆ ಕನ್ನಡ–ಎಂದು?' ಎನ್ನುವ ಲೇಖನದಲ್ಲಿ ಕೆಲವೊಂದು ಅಂಶಗಳನ್ನು ಸ್ಪಷ್ಟಪಡಿಸಿದ್ದಾರೆ. ಕನ್ನಡ ಸದ್ಯಕ್ಕೆ ಆಡಳಿತ ಭಾಷೆಯಾಗಬಾರದೆಂದು ಕೆಲವರು ಕಾರಣಗಳನ್ನು ಕೊಡುತ್ತಾರೆ ಆ ಕಾರಣಗಳೇನೆಂದರೆ,

೧. ಅಂತರರಾಜ್ಯಗಳ ಹಾಗೂ ಕೇಂದ್ರ ಮತ್ತು ರಾಜ್ಯಗಳ ನಡುವಣ ವ್ಯವಹಾರಗಳಿಗೆ ತೊಡಕಾಗುತ್ತದೆ.

೨. ಭಾಷಾ ಅಲ್ಪಸಂಖ್ಯಾತರಿಗೆ ತೊಂದರೆಯಾಗುತ್ತದೆ,

೩. ಇನ್ನೂ ಕನ್ನಡ ಆಡಳಿತ ಭಾಷೆಯಾಗುವ ಸಾಮರ್ಥ್ಯವನ್ನು ಪಡೆದಿಲ್ಲ.

ಈ ಪ್ರಶ್ನೆಗಳಿಗೆ ಮುಂದುವರೆದು, ಕನ್ನಡ ಭಾಷೆಯಲ್ಲಿ ಸಾಕಷ್ಟು ಪದಗಳಿಲ್ಲ, ಅದು ಸಮರ್ಥ ಭಾಷೆಯಲ್ಲ, ಎಂದು ಹೇಳುವವರು ಅಜ್ಞರು. ಕನ್ನಡಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಅನೇಕ ಭಾಷೆಗಳ ಸಂಪರ್ಕವಿದೆ. ಒಂದು ಭಾಷೆಯ ಸಾಮರ್ಥ್ಯವನ್ನು ಪ್ರಶ್ನಿಸುವವನು ಪೂರ್ವಗ್ರಹ ಪೀಡಿತನಾಗಿರುಬೇಕು, ಇಲ್ಲವೆ ದಡ್ಡನಾಗಿರಬೇಕು, ಭೌತಿಕವಾಗಿ ಪೆಂಗುವಾಗಿರಬೇಕು. ಕನ್ನಡ ಸ್ವೀಕರಣ ಭಾಷೆಯಾದ್ದರಿಂದ ಶಬ್ದದಾರಿದ್ರಕ್ಕೆ ಅವಕಾಶವಿಲ್ಲ. ಆಡಳಿತ ಭಾಷೆಯಾದ ಕ್ಷಣದಿಂದಲೇ ಕನ್ನಡ ಬೆಳೆಯುತ್ತದೆಯೇ? ಎಂದು ಕೆಲವರು ಅಪ್ರಬುದ್ಧರು ಪ್ರಶ್ನಿಸುವುದುಂಟು ಅದಕ್ಕೆ 'ಅಹುದು' ಎಂದೇ ಉತ್ತರ ಎಂದಿದ್ದಾರೆ.

ಕನ್ನಡ ಆಡಳಿತ ಭಾಷೆಯೆಂದು ಸರ್ಕಾರ ಘೋಷಿಸಿದೆ. ಆದರೆ ಕನ್ನಡವನ್ನು ಆಡಳಿತದಲ್ಲಿ ಜಾರಿಗೆ ತರುವುದು ಒಬ್ಬಿಬ್ಬರ ಕಾರ್ಯವಲ್ಲ. ಸಣ್ಣ ದೊಡ್ಡ ಅಧಿಕಾರಿಗಳು ಮನಸ್ಸು ಮಾಡಿದರೆ ಒಂದೇ ದಿನದಲ್ಲಿ ಕನ್ನಡ ಆಡಳಿತ ಭಾಷೆಯಾಗುವುದರಲ್ಲಿ ಸಂದೇಹವಿಲ್ಲವೆಂದು ವಿವರಿಸಿದ್ದಾರೆ.

ಕನ್ನಡ ಜಗತ್ತು ಅರ್ಧಶತಮಾನ : ಡಾ.ಕೆ.ವಿ.ನಾರಾಯಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯. ಕೃತಿಯಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಯ ಸಂಬಂಧದಲ್ಲಿ ಕೆಲವೊಂದು ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವೊಂದು ಅಧಿನಿಯಮಗಳ ಪ್ರಕಾರ ಸರ್ಕಾರಿ ಉದ್ದೇಶಗಳಿಗಾಗಿ ಬಳಸಬೇಕಾದ ಭಾಷೆ ಕನ್ನಡವೆಂದೂ ರಾಜ್ಯ ವಿಧಾನ ಮಂಡಲದ ವ್ಯವಹಾರದ ನಿರ್ವಹಣೆಗೆ ಬಳಸಬೇಕಾದ ಭಾಷೆ ಇಂಗ್ಲೀಷ್ ಎಂದು ಉಪ ವರದಿಸಲ್ಲಿಸಲಾಗಿದೆ. ೧೯೮೨ರ ತಿದ್ದುಪಡಿಯ ನಂತರ ರಾಜ್ಯದ ಆಡಳಿತ ಭಾಷೆ ಅಧಿನಿಯಮಕ್ಕೆ ಯಾವುದೇ ಬದಲಾವಣೆಗಳು ಆಗಿಲ್ಲ. ಹೀಗಾದ ಮೇಲೆ ಕನ್ನಡವನ್ನು ವಿಧಾನ ಮಂಡಲದ ಅಧಿಕೃತ ಭಾಷೆಯನ್ನಾಗಿ ಮಾಡುವ ಪ್ರಯತ್ನಗಳು ನಡೆದಿಲ್ಲ. ಇಂಗ್ಲೀಷನ್ನು ಸಹ ಭಾಷೆಯಾಗಿ ಮಾತ್ರ ಕನ್ನಡಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಪರಿಸ್ಥಿತಿ ನಾವು ಯೋಚಿಸುವಂತೆ ಮಾಡುತ್ತದೆ ಎಂದಿದ್ದಾರೆ.

ಭಾಷಾ ಅಲ್ಪಸಂಖ್ಯಾತರು ಹೆಚ್ಚಾಗಿ ಇರುವ ರಾಜ್ಯದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಬಳಸಬೇಕು ಎಂಬ ನೀತಿಯನ್ನು ಜಾರಿಗೆ ತರುವುದು/ನೀಡುವುದು ಕಷ್ಟವಾಗುತ್ತದೆ. ಆಡಳಿತದಲ್ಲಿ ಕನ್ನಡ ಬಳಕೆಗಾಗಿ ಸರಕಾರ ನೂರಾರು ಆದೇಶಗಳನ್ನು ಆಡಳಿತದಲ್ಲಿ ಕನ್ನಡ ಬಳಕೆ ಸಂಪೂರ್ಣವಾಗಿ ಆಗಬೇಕು ಎಂಬ ಉದ್ದೇಶಕ್ಕಾಗಿಯೇ ಹೊರಡಿಸಿದೆ. ಆದರೂ ಪರಿಣಾಮ ಏನು ಆಗಿಲ್ಲ ಮತ್ತು ಬದಲಾಗಲೇ ಇಲ್ಲ. ಇದು ಸರಕಾರದಲ್ಲಿ ಇರುವ ಇಚ್ಛಾಶಕ್ತಿಯ ಕೊರತೆ, ಎಂಬ ಟೀಕೆಯನ್ನು ಕೇಳುತ್ತೇವೆ ಆದರೆ ಏಕೆ? ಹೇಗೆ? ಕನ್ನಡದ ಅನುಷ್ಠಾನ ಪೂರ್ಣ ಪ್ರಮಾಣದಲ್ಲಿ ಆಗಿಲ್ಲ ಎಂಬುದನ್ನು ಸರಿಯಾದ ಚೌಕಟ್ಟಿನಲ್ಲಿ ವಿಶ್ಲೇಷಿಸಿ ತಿಳಿಯಬೇಕಾಗಿದೆ ಎಂದು ವಿವರಿಸಿದ್ದಾರೆ.

ಏಕೆ ಕನ್ನಡ ಆಡಳಿತ ಭಾಷೆಯಾಗಬೇಕು, ಹಾಗೆ ಆಗದಿದ್ದರೆ ಆಗುವ ತೊಂದರೆಗಳೇನು, ಕನ್ನಡ ಬಳಕೆಯಾಗದಿದಲ್ಲಿ ಅದರ ಪ್ರಯೋಜನಗಳು ಪೂರ್ವ ನಿರ್ಧಾರಿತ ಯಾರಿಗಾದರೂ ಇರುವುದು ಸಾಧ್ಯವೆ ಎಂಬ ಪ್ರಶ್ನೆ ಮುಖ್ಯ. ಜನರ ಭಾಷೆ ಆಡಳಿತ ಭಾಷೆ ಆಗಬೇಕು ಎಂಬ ಗ್ರಹಿತ ನೆಲೆಯಲ್ಲಿ ನಾವು ಮಾತನಾಡುತ್ತಿರುತ್ತೇವೆ. ಆದರೆ ಆಡಳಿತ ಯಂತ್ರದಲ್ಲಿ ಜನಸಾಮಾನ್ಯರ ಪಾತ್ರವೇನು ಎಂಬ ಬಗೆಗೆ ಯೋಚಿಸುವುದಿಲ್ಲ. ಜನರು ಆಡಳಿತದಲ್ಲಿ ಭಾಗಿಯಾಗಬೇಕಾದರೆ, ಆಡಳಿತದ ನಿರ್ಧಾರಗಳಲ್ಲಿ ತಮ್ಮ ಪಾಲು ಇದೆ ಎಂದು ತಿಳಿಯಬೇಕಾದರೆ, ಮುಖ್ಯವಾಗಿ ಎರಡು ಸಂಗತಿಗಳು ಅಗತ್ಯ. ಒಂದು : ಆಡಳಿತ ಯಂತ್ರದ ಉತ್ತರದಾಯಿತ್ವ, ಹಾಗೂ ಎರಡನೆಯದಾಗಿ : ಆಡಳಿತ ಯಂತ್ರದ ಪಾರದರ್ಶಕತೆ. (ಕೆ.ವಿ.ನಾರಾಯಣ, ಕನ್ನಡ ಜಗತ್ತು ಅರ್ದಶತಮಾನ, ಪುಟ ಸಂಖ್ಯೆ ೩೧ ರಿಂದ ೪೨.) ಕಳೆದ ೫೦ ವರ್ಷಗಳ ಇತಿಹಾಸದಲ್ಲಿ ಎರಡೂ ಸಂಗತಿಗಳು ದೃಢಗೊಳ್ಳುತ್ತಾ ಹೋಗುವ ಬದಲು ಸಡಿಲವಾಗಿತ್ತಾ ಬಂದಿವೆ. ಈ ಕಾರಣದಿಂದ ಜನರು ಆಡಳಿತ ಯಂತ್ರದೊಡನೆ ಹೊಂದಿರುವ ಸಂಬಂಧ ಅತ್ಯಂತ ಕನಿಷ್ಠ ಪ್ರಮಾಣದ್ದಾಗಿದೆ ಹಾಗೆ ಉಳಿದಿರುವ ಸಂಬಂಧದಲ್ಲೂ ಅವರ ಅಪೇಕ್ಷಗಳು, ದೃಷ್ಟಿಕೋನಗಳು ಮಾನ್ಯವಾಗುವುದಿಲ್ಲ. ಹೀಗಾಗಿ ಜನಭಾಷೆಯೂ ಆಡಳಿತದ ಭಾಷೆಯಾಗಿ ನೆಲೆಗೊಳ್ಳುವ ಅವಕಾಶಗಳು ಕಡಿಮೆಯಾಗುತ್ತಿದೆ. ಎಂದು ವಿವರಿಸಿದ್ದಾರೆ.

ಆಡಳಿತ ಕನ್ನಡ : ಮುಖ್ಯಮಂತ್ರಿ ಚಂದ್ರು (ಪ್ರ.ಸಂ) ಇತರರು, ಇವರ ಸಂಪಾದಕತ್ವದಲ್ಲಿ ದೂರು ಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೦. ಕೃತಿಯು ಮುಖ್ಯವಾಗಿ ಆಡಳಿತ ಕನ್ನಡ ನಡೆದುಬಂದ ದಾರಿ, ಸಾಮಾನ್ಯ ಕನ್ನಡ, ವ್ಯವಹಾರದ ಬಗೆಗಳು, ಆಡಳಿತ ಕನ್ನಡದ ಪಾರಿಭಾಷಿಕ ಪದರಚನೆ ಅನುವಾದ ಮತ್ತು ಕಂಪ್ಯೂಟರ್ ಬಳಕೆ, ಹಾಗೂ ಸ್ವತಂತ್ರ್ಯೋತ್ತರ ಸಂದರ್ಭದಲ್ಲಿ ಆಡಳಿತ ಕನ್ನಡದ ಸ್ಥಿತಿಗತಿಗಳ ಬಗ್ಗೆ ವಿವರಣೆಯನ್ನು ನೀಡುತ್ತದೆ.

ಸದರಿ ಕೃತಿಯಲ್ಲಿ ಪಿ.ಮಹಾದೇವಯ್ಯನವರು 'ಕನ್ನಡದ ಇಂದಿನ ಸ್ಥಿತಿ-ಗತಿ' ಎಂಬ ಲೇಖನವನ್ನು ಬರೆದಿದ್ದಾರೆ. ಆಡಳಿತಕ್ಕೆ ಸಾಕ್ಷಿಯಾಗಿ ಲೇಖನದಲ್ಲಿ ವಿವರಿಸಿದಂತೆ ಏಕೆ ಕನ್ನಡ ಆಡಳಿತ ಭಾಷೆಯಾಗಿ ಇಲ್ಲಿಯವರೆಗೆ ಪೂರ್ಣವಾಗಿ ಜಾರಿಗೆ ತಂದಿಲ್ಲ. ಇದಕ್ಕೆ ಕಾರಣಗಳೇನು? ಕಾರಣರ್‍ಯಾರು? ಎಂಬ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಾಸುತ್ತದೆ ಎಂಬ ಪ್ರಶ್ನೆಯನ್ನು ಓದುಗರ ಮುಂದಿಡುತ್ತಾರೆ.

ಸರ್ಕಾರ ಆಡಳಿತದಲ್ಲಿ ಕನ್ನಡ ಕಡ್ಡಾಯ ಕುರಿತು ನೂರಾರು ಸುತ್ತೋಲೆಗಳಿದ್ದರೂ, ಅದು ಪೂರ್ಣವಾಗಿ ಜಾರಿಯಾಗಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಇದರಲ್ಲಿ ಸರ್ಕಾರದ ಇಚ್ಛಾಶಕ್ತಿಯ ಕೊರತೆಯೂ ಒಂದು. ಇದು ಸತ್ಯವೇ ಎಂದು ಚಿಂತಸಬೇಕಾಗಿದೆ ಎಂದಿದ್ದಾರೆ. ಕನ್ನಡ ಭಾಷೆ ಗ್ರಾಮೀಣ ಪರಿಸರದಲ್ಲಿ ಬದುಕಿದೆ ಹಾಗೂ ಕನ್ನಡ ಭಾಷೆ ಉಳಿದಿದ್ದರೆ ಅದು ಅನಕ್ಷರಸ್ಥರಿಂದ ಎನ್ನುವುದನ್ನು ಬಿಂಬಿಸುತ್ತದೆ. ಆದರೆ ಕಲಿತವರು ಕನ್ನಡ ಭಾಷೆಯನ್ನು ತುಂಬ ನಿರ್ದಿಷ್ಟ ವಲಯದಲ್ಲಿ ಬಳಕೆ ಮಾಡುತ್ತಿದ್ದಾರೆ. ಅನಕ್ಷರಸ್ಥರು ಎಲ್ಲಾ ವಲಯದಲ್ಲೂ ಕನ್ನಡವನ್ನು ಅನಿವಾರ್ಯವಾಗಿ ಬಳಕೆ ಮಾಡುತ್ತಾರೆ. ಅದಕ್ಕಾಗಿ ಅನಕ್ಷಸ್ಥರಿಂದ ಕನ್ನಡ ಭಾಷೆ ಉಳಿದಿದೆ ಎನ್ನುವ ವಿಷಯವನ್ನು ತಮ್ಮ ಕಿರುಲೇಖನದಲ್ಲಿ ತಿಳಿಸಿದ್ದಾರೆ.

ಜನರ ಭಾಷೆ ಆಡಳಿತ ಭಾಷೆಯಾಗುವುದು ಹೇಗೆ? ಏನೆಲ್ಲಾ ಉಪಾಯಗಳನ್ನು ಹೂಡಬೇಕಾಗಿದೆ, ಆಳುವವರು ಮತ್ತು ಆಳಿಸಿಕೊಳ್ಳುವವರ ಮದ್ಯದಲ್ಲಿನ ಈ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕಾದರೆ ಏನು ಮಾಡಬೇಕು. ಎಂಬುದಕ್ಕೆ ಅವರೇ ಸ್ವತಃ ಕೆ.ವಿ. ನಾರಾಯಣಅವರ ಕನ್ನಡ ಜಗತ್ತು ಅರ್ಧ ಶತಮಾನ ಕೃತಿಯಲ್ಲಿನ ಮಾತುಗಳನ್ನು ಉದಾಹರಣೆಗಾಗಿ ನೀಡಿರುತ್ತಾರೆ. ಆಡಳಿತ ಭಾಷೆಯಾಗಿ ಕನ್ನಡ ಇಂದಿಗೂ ಏಕೆ ಪೂರ್ಣವಾಗಿ ಜಾರಿಯಲ್ಲಿಲ್ಲ ಎಂಬುದಕ್ಕೆ ವಿದ್ವಾಂಸರು ಹೇಳುವಹಾಗೆ ಕನ್ನಡಿಗರಲ್ಲಿ ಮನೆಮಾಡಿರುವ ಕನ್ನಡ ಭಾಷೆಗಿನ ನಿರಾಭಿಮಾನ, ನಿರುತ್ಸಾಹ, ಹೊಣೆಗೇಡಿತನ, ತಾಟಸ್ಥ್ಯ ಮನೋಭಾವ ಅಸಂಘಟನೆ ಮುಂತಾದ ವಿಚಾರಗಳು ಸ್ಪಷ್ಟವಾಗುತ್ತವೆ ಎಂದು ತಿಳಿಸಿದ್ದಾರೆ.

ಸರ್ಕಾರದ ಚುಕ್ಕಾಣಿ ಹಿಡಿದು ಆಡಳಿತದಲ್ಲಿ ಕನ್ನಡ ಕಡ್ಡಾಯ ಮಾಡುವವರು ಮಾತ್ರ ನಿಯಮಗಳನ್ನು ಜಾಣತನದಿಂಲೇ ಉಲ್ಲಂಘಿಸುತ್ತಾ ಬಂದಿದ್ದಾರೆ. ಆದರೆ ಉದ್ದೇಶಪೂರ್ವಕವಾಗಿ ನಿಯಮಗಳನ್ನು ಉಲ್ಲಂಘಿಸುತ್ತಿದ್ದಾರೆ ಎಂದಲ್ಲ ಅದರ ಬಗ್ಗೆ ಉತ್ಸಾಹ ತೋರಿಸುತ್ತಿಲ್ಲ ಎಂದು. ಕನ್ನಡ ಭಾಷೆ ಆಧುನಿಕ ತಂತ್ರಜ್ಞಾನಕ್ಕೆ ತೆರೆದುಕೊಂಡಿದೆ. ಆದರೂ ಆಡಳಿತದಲ್ಲಿ ಅದನ್ನು ಅಳವಡಿಸಿ ಜಾರಿಗೊಳಿಸಲು ಸಾಧ್ಯವಾಗದ ಸ್ಥಿತಿಯಲ್ಲಿದ್ದೇವೆ. ಇದಕ್ಕೆ ಕಾರಣಗಳನ್ನು ಈ ರೀತಿಯಲ್ಲಿ ಊಹಿಸಬಹುದು ಎಂದಿದ್ದಾರೆ.

೧. ಇಚ್ಛಾಶಕ್ತಿಯ ಕೊರತೆ.

೨. ಅನುಕರಣೆ ಮನೋಭಾವ.

೩. ಕೀಳರಿಮೆ ಮನೋಭಾವ.

೪. ಆಡಳಿತದಲ್ಲಿ ಕನ್ನಡ ಜಾರಿಗೆ ತರಲು ಭಾಷೆ ಸಿದ್ದವಾಗಿಲ್ಲ ಎಂಬ ಅಭಿಪ್ರಾಯ.

೫. ಕೇಂದ್ರ ಮತ್ತು ಹೊರರಾಜ್ಯಗಳೊಡನೆ ವ್ಯವಹರಿಸಬೇಕಾಗಿರುವುದರಿಂದ ಇಂಗ್ಲಿಷ್ ಭಾಷೆಯನ್ನು ಆಶ್ರಯಿಸಬೇಕಾಗಿದೆ.

೬. ಕರ್ನಾಟಕದಲ್ಲಿ ಅಲ್ಪಸಂಖ್ಯಾತರು ಇರುವುದರಿಂದ ಅವರ ಹಿತವನ್ನು ಕಾಯಬೇಕಾಗಿದೆ.

೭. ಕನ್ನಡದಲ್ಲೇ ಆಡಳಿತ ಮಾಡಬೇಕಾದರೆ ಪಾರಿಭಾಷಿಕ ಪದಗಳ ಕೊರತೆ ಇದೆ.

ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರಲು ಮೇಲಿನ ಕಾರಣಗಳು ನೆಪ ಮಾತ್ರ ಬಳಕೆ ಮಾಡುವ ಮನಸ್ಸು ಬೇಕು ಎಂದೆನಿಸುತ್ತದೆ. ಅಲ್ಲದೆ ಕರ್ನಾಟಕದಲ್ಲಿರುವ ಕೇಂದ್ರ ಸಂಸ್ಥೆಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಕನ್ನಡ ಭಾಷೆಯನ್ನು ಕಡ್ಡಾಯ ಗೊಳಿಸಬೇಕಾಗಿದೆ. ಉನ್ನತ ಸಂಶೋಧನಾಲಯಗಳಲ್ಲಿ ಕಂಪ್ಯೂಟರ್‌ನಲ್ಲಿ (ಗಣಕಯಂತ್ರದಲ್ಲಿ) ಕನ್ನಡ ಬಳಕೆ ಕಡ್ಡಾಯಗೊಳಿಸಬೇಕಾಗಿದೆ ಎಂದು ವಿವರಿಸಿದ್ದಾರೆ.

ಕಚೇರಿ ಕೈಪಿಡಿ : ಆದಿಶೇಷಮೂರ್ತಿ, ಸರ್ಕಾರಿ ನೌಕರರ ಮಿತ್ರ ಪ್ರಕಾಶನ, ಬೆಂಗಳೂರು, ೨೦೧೧.

ಈ ಕೃತಿಯು ಆಡಳಿತದಲ್ಲಿ ಕನ್ನಡ ಬಳಕೆಯ ಸಂದರ್ಭಲ್ಲಿ ಮೂಲತಃವಾಗಿ ಕಡೆತ ಹಾಗೂ ಕಡೆತದಲ್ಲಿನ ಟಿಪ್ಪಣೆಗಳು ಬಹುಮುಖ್ಯವಾದ ಸ್ಥಾನವನ್ನು ಹೊಂದುತ್ತವೆ. ಈ ನಿಟ್ಟಿನಲ್ಲಿ ಹೇಳುವುದಾದರೆ ಈ ಭಾಗದಿಂದಲೇ ನಮ್ಮ ಆಡಳಿತ ಕನ್ನಡ ಸುಧಾರಣೆಯಾಗಬೇಕು. ಈ ಮಟ್ಟದಲ್ಲಿ ಸುಧಾರಣೆಯಾದರೆ ಮುಂದಿನ ಹಂತಗಳಲ್ಲಿ ಯಾವ ಸಮಸ್ಯೆಗಳು ಗಂಭೀರವಾಗಿ ಪರಿಣಮಿಸಲಾರವು.

ಕಚೇರಿ ಟಿಪ್ಪಣೆಗಳ ರಚನೆಯ ಸಂದರ್ಭದಲ್ಲಿ ಅನೇಕ ತೊಡಕುಗಳು ಆಗುತ್ತವೆ. ವಿಷಯ ನಿರ್ವಾಹಕರಿಗೆ ಭಾಷಾಜ್ಞಾನ ಇಲ್ಲದಿರುವಿಕೆಯಿಂದ, ಪದ ಪ್ರಯೋಗ ಹಾಗೂ ವಾಕ್ಯಗಳು ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿಲ್ಲ. ತಿಳಿದಿರುವ ಭಾಷಾಜ್ಞಾನದ ತಿಳುವಳಿಕೆಯಲ್ಲಿ ಇಂದು ಆಡಳಿತದಲ್ಲಿ ವಿಷಯ ನಿರ್ವಾಹಕರಿಂದ ಕಚೇರಿ ಟಿಪ್ಪಣಿಗಳು ಮಂಡನೆಯಾಗುತ್ತಿವೆ. ಪ್ರಸ್ತುತ ಸಂದರ್ಭದಿಂದಲೇ ಆಡಳಿತದಲ್ಲಿ ಕನ್ನಡದ ಬಳಕೆ ಸೂಕ್ಷ್ಮತರವಾಗಿ ಗೊಂದಲಕ್ಕೀಡಾಗುತ್ತದೆ ಎಂದಿದ್ದಾರೆ.

ಟಿಪ್ಪಣಿ ಆಡಳಿತದ ಮೂಲ ವಿದ್ದಂತೆ. ಕಚೇರಿ ಟಿಪ್ಪಣಿ ಮಂಡಿಸುವ ಸಂದರ್ಭದಲ್ಲಿ ವಿಷಯ ನಿರ್ವಾಹಕರು ಸಂಕ್ಷಿಪ್ತತೆ, ಖಚಿತತೆ, ಸರಳತೆ, ಹಾಗೂ ಅರ್ಥಪೂರ್ಣತೆ ಇರುವಂತೆ ವಿಷಯಕ್ಕನುಗುಣವಾಗಿ ಟಿಪ್ಪಣೆಗಳನ್ನು ರಚಿಸಿ ಇಡತಕ್ಕದ್ದು ಸರಿಯಾದ ಕ್ರಮ. ಆದರೆ ಈ ಪ್ರಕ್ರಿಯೆ ಇಂದು ಸರಿಯಾಗಿ ನಡೆಯುತ್ತಿಲ್ಲ ಎಂದು ವಿವರಿಸಿದ್ದಾರೆ.

ಆಡಳಿತ ಕನ್ನಡ: ಎಚ್ಚೆಸ್ಕೆ, ಲಕ್ಷ್ಮೀ ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು, ೨೦೧೦.

ಆಡಳಿತ ಕನ್ನಡ ಹಾಗೂ ವಾಣಿಜ್ಯ ಕನ್ನಡ, ವ್ಯವಹಾರಿಕ ಕನ್ನಡ, ಕೃತಿಗಳನ್ನು ರಚಿಸಿದ ಲೇಖಕರು ಇತರೆ ಎಲ್ಲಾ ಕನ್ನಡದ ಬಳಕೆಯು ಆಡಳಿತ ಕನ್ನಡ ಬಳಕೆಗಿಂತ ಭಿನ್ನವಾದದ್ದಾಗಿದ್ದು. ಆಡಳಿತ ಕನ್ನಡವೆಂಬುದು ನಿರ್ದಿಷ್ಟ ಚೌಕಟ್ಟಿನಲ್ಲಿ ಸ್ಪಷ್ಟ ಹಾಗೂ ಅಲಂಕಾರಿಕ ಭಾಷೆಯನ್ನು ಬಳಸದೆ ರೂಪುಗೊಂಡಿರುತ್ತದೆ. ಆಡಳಿತದಲ್ಲಿ ಬಳಸುತ್ತಿದ್ದ ಕನ್ನಡ ಜನಸಾಮಾನ್ಯರಿಗೆ ಅರ್ಥವಾಗುವಂತಿರಬೇಕೆಂಬ ಕಳಕಳಿ ಮಾತ್ರ ಎಂದಿಗೂ ಇದ್ದೇ ಇತ್ತು. ಹಲವು ರಾಜಕೀಯ ಪ್ರಭಾವಗಳಿಂದಾಗಿ ಹಲವು ಭಾಷೆಗಳ ಪದಗಳು ಕನ್ನಡದಲ್ಲಿ ಬೆರೆತುಕೊಂಡವು. ಇತರೆ ಭಾಷೆಗಳ ಜಾಯಮಾನಗಳೂ ಕೆಲಮಟ್ಟಿಗೆ ಕೂಡಿಕೊಂಡವು. ಕರ್ನಾಟಕದ ಬಹು ಸಂಖ್ಯಾತರು ಆಡುವ

ಭಾಷೆಯಾದ ಕನ್ನಡವನ್ನು ಆಡಳಿತದಲ್ಲಿಯೂ ಬಳಸುವುದರಿಂದ ಇದು ಸಾಮಾನ್ಯವಾಗಿ ಎಲ್ಲರಿಗೂ ಅರ್ಥವಾಗುತ್ತದೆಂಬ ಕಾರಣಕ್ಕೆ ಇದಕ್ಕೆ ಮಹತ್ವ.

ಕನ್ನಡ ಎಂಬ ಭಾಷೆ ಒಂದೇ ಆಗಿರುವಾಗ ಆಡಳಿತ ಕನ್ನಡವನ್ನು ಪ್ರತ್ಯೇಕವಾಗಿ ಅಭ್ಯಾಸ ಮಾಡಬೇಕಾದ ಪ್ರಮೇಯ ಇಲ್ಲವೆಂದು ಭಾವಿಸುವುದು ಸಹಜವೇ. ಕನ್ನಡ ಭಾಷೆ ಒಂದೇ ಆಗಿದ್ದರೂ ಕರ್ನಾಟಕದ ಬೇರೆ ಬೇರೆ ಭಾಗಗಳ ಜನ ಆಡುವ ಭಾಷೆ ಸ್ವಲ್ಪ ಮಟ್ಟಿಗೆ ಬೇರೆ ಬೇರೆಯಾಗಿರುತ್ತದೆಂಬುದು ನಿಜ. ರಾಜಕೀಯವಾಗಿ ಕರ್ನಾಟಕ ಬೇರೆ ಬೇರೆ ಆಡಳಿತಗಳಿಗೆ ಒಳಪಟ್ಟಿದ್ದ ಕಾಲದಲ್ಲಿ ನಾನಾ ಭಾಗಗಳ ಜನರ ನಡುವೆ ಹೆಚ್ಚಿನ ಸಂಪರ್ಕ ಇರಲಿಲ್ಲ. ಆದ್ದರಿಂದ ಈ ಭಿನ್ನತೆಗಳು ಎದ್ದುಕಾಣುತ್ತಿದ್ದವು. ಒಂದು ಭಾಗದ ಜನರು ಆಡುವ ಕನ್ನಡವನ್ನು ಇತರ ಭಾಗದ ಜನರು ಅರ್ಥಮಾಡಿಕೊಳ್ಳುವುದು ಬಹುತೇಕ ಅಸಾಧ್ಯ ಎನ್ನುವ ಮಟ್ಟಿಗೆ ಒಳಬೇದಗಳು ಎದ್ದು ಕಾಣುತ್ತಿದ್ದವು ಎನ್ನುತ್ತಾರೆ.

ಆಡಳಿತ ಕನ್ನಡ ಕಾರ್ಯಶಿಬಿರ ಕೈಪಿಡಿ: ಕರ್ನಾಟಕ ಸರ್ಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ದೂರಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯. ಇವರ ಸಹಯೊಗದಲ್ಲಿ ಹೊರಬಂದ ಕೃತಿ ಇದಾಗಿದೆ. ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೃಂದವಾರು ಅಧಿಕಾರಿಗಳಿಗೆ ನೀಡಲಾದ ತರಬೇತಿಯ ಸಂಪೂರ್ಣ ಮಾಹಿತಿ ಇದರಲ್ಲಿದೆ. ಇಲಾಖೆಗಳಲ್ಲಿನ ಪ್ರತಿಯೊಂದು ವೃಂದದವರಿಗೆ ಅವರವರ ಮಟ್ಟಕ್ಕೆ ತಕ್ಕಂತೆ ಕಾರ್ಯಶಿಬಿರ ಕೈಪಿಡಿ ರೂಪುಗೊಂಡು ವಿವರಣೆ ನೀಡಲಾಗಿದೆ. ಆಡಳಿತ ಭಾಷೆಯ ಬಗ್ಗೆ ಚಿಂತನೆಗಳಿಗೂ, ಬಳಕೆಯ ಸಾಧ್ಯತೆಗಳು, ಕಡತ ಕನ್ನಡದಲ್ಲಿ ರಚನೆ, ಪದನ್ವಯ ಕ್ರಮ, ನುಡಿಗಟ್ಟುಗಳ ಅರ್ಥವ್ಯತ್ಯಯ, ಪ್ರಚಲಿತ ಅಡೆತಡೆಗಳ ಕುರಿತು ವಿವರಣೆ, ಭಾಷಾ ದೋಷಗಳು, ಪತ್ರಗಳ ರಚನೆಯಲ್ಲಿ ಭಾಷಿಕ ಸ್ವರೂಪ ಮತ್ತು ಲಕ್ಷಣಗಳ ಸಂಕ್ಷಿಪ್ತ ವಿವರ, ಅನುವಾದ, ಗಣಕದಲ್ಲಿ ಕನ್ನಡ ಬಳಕೆ ಈ ರೀತಿಯಲ್ಲಿ ಹಲವಾರು ವಿಷಯಗಳನ್ನು ಅಳವಡಿಸಿ ದಿನ ನಿತ್ಯ ಆಡಳಿತದಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳಿಗೆ ಆಡಳಿತ ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಾಯೋಗಿಕವಾಗಿ ತರಬೇತಿ ನೀಡಿದ ವಿವರದ ಹೊತ್ತಿಗೆ ಇದಾಗಿದ್ದು ಉತ್ತಮ ವಿವರಣೆಗಳೊಂದಿಗೆ ಮೂಡಿಬಂದಿದೆ.

ಎಲ್ಲಾ ಸಿಬ್ಬಂದಿ ವರ್ಗಕ್ಕೂ ಕನ್ನಡ ಶಿಬಿರವನ್ನು ಏರ್ಪಡಿಸಿ ಅವರನ್ನೆಲ್ಲ ಕನ್ನಡ ಬಳಕೆಗೆ ತೊಡಗಿಸುವುದು ಇದರ ಉದ್ದೇಶವಾಗಿದೆ. ಕರ್ನಾಟಕದ ಆಡಳಿತ ಸೇವೆಯಲ್ಲಿ ಇರುವ ಅಖಿಲ ಭಾರತ ಸೇವೆಯ ಅಧಿಕಾರಿಗಳು ಕರ್ನಾಟಕ ಆಡಳಿತ ಸೇವೆಗಳ ಅಧಿಕಾರಿಗಳ ಜೊತೆಗೆ ಬಿಸಿಡಿ. ವರ್ಗ ವೃಂದದ ಸಿಬ್ಬಂದಿಯವರು ಆಡಳಿತದಲ್ಲಿ ಕನ್ನಡ ಬಳಸುವಾಗ ಬೇರೆ ಬೇರೆ ರೀತಿಯ ತೊಂದರೆ ಮತ್ತು ತೊಡಕುಗಳನ್ನು ಅನುಭವಿಸುತ್ತಿದ್ದಾರೆ. ಈ ಎಲ್ಲಾ ವೃಂದದ ಅಧಿಕಾರಿಗಳು, ಸಿಬ್ಬಂದಿ ವರ್ಗದವರಿಗೆ ಅವರು ಎದುರಿಸುತ್ತಿರುವ ತೊಡಕುಗಳನ್ನು ಪರಿಹರಿಸಿಕೊಂಡು ಆಡಳಿತದಲ್ಲಿ ಕನ್ನಡವನ್ನು ಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸಲು ಅನುಕೂಲವಾಗುವಂತೆ

ಆಡಳಿತದಲ್ಲಿ ಕನ್ನಡ ಬಳಕೆ ತರಬೇತಿ ಶಿಬಿರವನ್ನು ಹಾಕಿಕೊಂಡಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಂದಿನ ಅಧ್ಯಕ್ಷರಾಗಿದ್ದ ಮುಖ್ಯಮಂತ್ರಿ ಚಂದ್ರು ಇವರು ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸಿದ್ದಾರೆ.

ಆಂಗ್ಲರ ಆಡಳಿತ ವ್ಯವಸ್ಥೆಯನ್ನು ಮುಂದುವರೆಸುತ್ತ ಬಂದ ನಮಗೆ ಅವರ ಭಾಷೆಯ ನಂಟನ್ನು ಸಂಪೂರ್ಣವಾಗಿ ಬಿಡಿಸಿಕೊಳ್ಳಲಾಗಿಲ್ಲ. ಅಲ್ಲದೆ ಕನ್ನಡ ಬಳಕೆಯಲ್ಲಿ ಕೆಲವರಿಗೆ ಹಿಂಜರಿಕೆ, ಇನ್ನೂ ಕೆಲವರಿಗೆ ನಿರಾಸಕ್ತಿ. ಈ ಬಗೆಯ ಮನೋಧರ್ಮವನ್ನು ಹೋಗಲಾಡಿಸಿ ಕನ್ನಡದಲ್ಲೇ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸುವ ಬಗೆಗಿನ ಒಲವು ಮತ್ತು ಸಾಮರ್ಥ್ಯವನ್ನು ನೀಡಬೇಕಾಗಿದೆ. ಉದ್ಯೋಗಿಗಳಿಗೆ ಬೇಕಾಗಿರುವುದು ಆಡಳಿತ ಕನ್ನಡ ತರಬೇತಿ ತರಗತಿಗಳಲ್ಲ. ಅವರಲ್ಲಿ ಹುದುಗಿರುವ ಭಾಷಾ ಬಳಕೆಯ ಸಾಮರ್ಥ್ಯವನ್ನು ಬಿಡಿಸಿ, ಬಳಸಿಕೊಳ್ಳುವ ಬಗ್ಗೆ ಪುನಶ್ಚೇತನ ನೀಡುವ ಶಿಬಿರವೆಂಬುದನ್ನು ಮನಗಂಡಿದ್ದೇವೆ. ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅದ್ಯಕ್ಷರಾಗಿದ್ದ ಕಾ.ತ.ಚಿಕ್ಕಣ್ಣ ಅವರು 'ನಮ್ಮ ಮಾತು'ಗಳಲ್ಲಿ ಹೇಳಿದ್ದಾರೆ.

ಈ ರೀತಿಯಲ್ಲಿ ಆಡಳಿತ ವರ್ಗದವರಿಗೆ ಆಡಳಿತ ಕಾರ್ಯಶಿಬಿರಗಳ ಆಯೋಜನೆ ಮತ್ತು ನಿರ್ವಹಣೆಯ ವಿಷಯ ಶ್ಲಾಘನೀಯವಾದದ್ದಾಗಿದ್ದು ಇಂತಹ ಶಿಬಿರಗಳ ಅವಶ್ಯಕತೆ ಪ್ರಸ್ತುತ ಸಂದರ್ಭದಲ್ಲಿ ಬಹಳಷ್ಟಿದೆ. ಈ ಶಿಬಿರಗಳು ಪ್ರತಿಯೊಂದು ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ ನಡೆಯಬೇಕಿದೆ. ಅದರಲ್ಲಿ ಅಧಿಕಾರಿಗಳು ಮತ್ತು ನೌಕರರ ವರ್ಗದವರಲ್ಲಿ ಭೇದ ಭಾವ ಮರೆತು ಸಕ್ರಿಯವಾಗಿ ಪಾಲ್ಗೊಳ್ಳುವ ಅವಶ್ಯಕತೆಯೂ ಇದೆ ಅಲ್ಲದೆ ಅದನ್ನು ಅನುಷ್ಠಾನಗೊಳಿಸುವ ಹೊಣೆಯೂ ತರಬೇತಿ ಪಡೆದ ನೌಕರ ವರ್ಗದ ಮೇಲಿದೆ.

ಕನ್ನಡ ಭಾಷಾ ಪ್ರವೇಶ: ಸಾ.ಸಿ.ಮರುಳಯ್ಯ (ಪ್ರ.ಸಂ) ಇತರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೯.

ಇವರಿಂದ ಸಂಪಾದನೆಗೊಂಡಿರುವ ಈ ಕೃತಿಯು ಭಾಷೆ ಮತ್ತು ಕನ್ನಡ ಭಾಷೆಯ ಪ್ರಾಚೀನತೆಯ ಬಗ್ಗೆ ಮತ್ತು ವಿಕಾಸದ ಘಟ್ಟಗಳ ಬಗ್ಗೆ ವಿವರಿಸುತ್ತಾ ಕನ್ನಡ ಉಪ ಭಾಷೆಗಳ ಬಗೆಗೆ ಮತ್ತು ಅದರಲ್ಲಿನ ಉಪ ವಿಭಾಗಗಳಿಗೆ ಸಂಬಂಧಪಟ್ಟಂತೆ ವಿವರಣೆಯನ್ನು ಕೂಲಂಕಶವಾಗಿ ನೀಡುತ್ತದೆ. ಅಲ್ಲದೇ ಉಪ ಭಾಷೆಗಳಲ್ಲಿನ ಪ್ರಭೇಧಗಳ ಬಗ್ಗೆ ವಿವರಿಸಿ ಭಾಷೆಯಲ್ಲಿನ ಭಿನ್ನತೆಗಳನ್ನು ಗುರುತಿಸಿದ್ದಾರೆ. ಪ್ರತಿಯೊಂದು ಪ್ರದೇಶದಲ್ಲಿನ ಭಾಷೆ ಆ ಪರಿಸರದಲ್ಲಿನ ವಾತಾವರಣ, ಸಂಸ್ಕೃತಿ, ಪರಿಸರದ ಮೇಲೆ ನಿರ್ಧಾರವಾಗಿರುತ್ತದೆ ಮತ್ತು ಅಲ್ಲಿನ ಪ್ರಾದೇಶಿಕ ಭಿನ್ನತೆಯನ್ನು ಒಳಗೊಂಡಿರುತ್ತದೆಂಬುದನ್ನು ವಿವರಿಸಿದ್ದಾರೆ.

ಕನ್ನಡ ಕನ್ನಡಿಗ ಕರ್ನಾಟಕ : ಎಲ್,ಎಸ್, ಶೇಷಗಿರಾವ್, (ಪ್ರ.ಸಂ) ಇತರರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು. ೨೦೦೬.

ಇವರಿಂದ ಸಂಪಾದನೆಗೊಂಡಿರುವ ಈ ಕೃತಿಯಲ್ಲಿ ೧೯೯೦ರ ನವಂಬರಿನಿಂದ ೧೯೯೧ರ ಅಕ್ಟೋಬರ್‌ವರೆಗಿನ ವರ್ಷವನ್ನು ಕನ್ನಡ ಉಳಿಸಿ ವರ್ಷವನ್ನಾಗಿ ಆಚರಿಸಲು ಕರೆ ಕೊಟ್ಟಿತ್ತು.

ಕನ್ನಡ ಉಳಿಸಿ ವರ್ಷವನ್ನು ಅರ್ಥಪೂರ್ಣವಾಗಿ ಆಚರಿಸಲು ಸಹಾಯಕವಾಗಿದ್ದು ಈ ಕಿರು ಹೊತ್ತಿಗೆ ಎಂದು ಪ್ರಸ್ತಾವನೆಯ ಭಾಗದಲ್ಲಿ ವಿವರಿಸಿದ್ದಾರೆ. ಈ ಕೃತಿಯು ಶಿಕ್ಷಣ ಮತ್ತು ಆಡಳಿತವನ್ನು ಗಮನದಲ್ಲಿಟ್ಟುಕೊಂಡು ವಿಶೇಷವಾಗಿ ಕರ್ನಾಟಕದ ಸಂಕ್ಷಿಪ್ತ ಚರಿತ್ರೆಯ ಮೇಲೆ ಬೆಳಕನ್ನು ಚೆಲ್ಲುತ್ತದೆ.

ಕನ್ನಡ ಸಮಸ್ಯೆಗಳನ್ನು ಪ್ರಸ್ತುತ ಕೃತಿಯಲ್ಲಿ ವಿವರಿಸಲಾಗಿದೆ, ಆಡಳಿತ ಭಾಷೆ, ಕನ್ನಡ ಚಳುವಳಿಗಳ ಬಗ್ಗೆ ಬೆಳಕು, ಮಹಾಜನ್ ವರದಿ, ಗೋಕಾಕ್ ಚಳುವಳಿ, ಮಹಿಷಿ ವರದಿಗಳ ಬಗ್ಗೆ ಬೆಳಕನ್ನು ಚಲ್ಲುತ್ತದೆ. ಆಡಳಿತ ಭಾಷೆಯ ಸರ್ಕಾರಿ ಆಜ್ಞೆ, ನಾಮಫಲಕಗಳ ಸರ್ಕಾರಿ ಆಜ್ಞೆಗಳನ್ನು ವಿವರವಾಗಿ ನೀಡಲಾಗಿದೆ.

ಅನ್ಯ ಭಾಷಿಕರ ದಮನಕ್ಕೆ ಕನ್ನಡಿಗರು ಸಿಲಿಕಿರುವಷ್ಟು ಮತ್ಯಾರು ಸಿಲುಕಿಲ್ಲ, ಕರ್ನಾಟಕದಲ್ಲಿ ಕನ್ನಡದ ಇಂದಿನ ಸಮಸ್ಯೆ ಎಂದರೆ ಕನ್ನಡಿಗನ ಅತ್ಮಾಭಿಮಾನದ ಕೊರತೆ ಮತ್ತು ಅನ್ಯರ ವಿಷಯದಲ್ಲಿ ಅವರು ತೋರಿಸುವ ಮಿತಿ ಮೀರಿದ ಸಹನೆ, ಕನ್ನಡಿಗನಲ್ಲಿ ತನ್ನ ವ್ಯಕ್ತಿತ್ವದ ಅರಿವಿನ ಜೊತೆ ತನ್ನ ನಾಡು ಜನರ ಬಗ್ಗೆ ಅಭಿಮಾನ ಮೂಡಿದ ಕ್ಷಣದಿಂದ ಅವನ ಎಲ್ಲಾ ಸಮಸ್ಯೆಗಳು ಪರಿಹಾರವಾಗಲು ಸಾಧ್ಯ ಎಂದು ವಿವರಿಸಿದ್ದಾರೆ.

೨.೩. ಲೇಖನಗಳು

ದಾರಿ ದೀವಿಗೆ: ೨೦೧೨, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಇವರಿಂದ ಪ್ರಕಟಗೊಂಡ ಈ ಕಿರು ಹೊತ್ತಿಗೆಯಲ್ಲಿ ಕನ್ನಡ ಅನುಷ್ಠಾನಕ್ಕಾಗಿ ನಮ್ಮ ನಿಮ್ಮ ಪಾತ್ರ, ಆಡಳಿತವನ್ನು ಜಾರಿಗೆ ತರುವಲ್ಲಿನ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರ ಪಾತ್ರ, ಸಾರ್ವಜನಿಕರ ಪಾತ್ರ, ಶಿಕ್ಷಣದಲ್ಲಿ, ವ್ಯವಹಾರದಲ್ಲಿ, ಮಾಧ್ಯಮ, ವಿಜ್ಞಾನ, ತಂತ್ರಜ್ಞಾನಗಳಲ್ಲಿ, ಉದ್ಯೋಗದಲ್ಲಿ ಕನ್ನಡ ವಿಷಯಗಳ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ನಿಡಲಾಗಿದೆ.

ಆಡಳಿತದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸಬೇಕೆಂಬುದು ಎಲ್ಲಾ ಕನ್ನಡಿಗರ ಆಶಯ. ಈ ವಿಷಯದಲ್ಲಿ ಅಧಿಕಾರಿಗಳು ಮತ್ತು ಸರ್ಕಾರಿ ನೌಕರರು ಹಾಗೂ ನ್ಯಾಯಾಲಯ ಸೇರಿದಂತೆ ಎಲ್ಲಾ ಕಡೆಗಳಲ್ಲಿ ಸಾಕಷ್ಟು ಶ್ರದ್ಧೆಯನ್ನು ತೋರಿಸುತ್ತಾ ಕನ್ನಡವನ್ನು ಎಲ್ಲಾ ಹಂತಗಳಲ್ಲಿಯೂ ಬಳಸಲು ಪ್ರಯತ್ನಗಳನ್ನು ನಡೆಸಿ ಸಫಲರೂ ಆಗಿದ್ದಾರೆ.

ಆದರೆ ಕೆಲವು ಅಧಿಕಾರಿಶಾಹಿ ವರ್ಗದವರು ಮತ್ತು ಸ್ಥಳೀಯರ ಕಾರಣವಾಗಿ ಕನ್ನಡವನ್ನು ಸಂಪೂರ್ಣವಾಗಿ ಆಡಳಿತದಲ್ಲಿ ಬಳಸಲು ಸಾಧ್ಯವಾಗಿರುವುದಿಲ್ಲ. ಹಿಂದಿನ ತಪ್ಪುಗಳನ್ನು ಕೆದಕುತ್ತಾ ಸಮಸ್ಯೆಗಳನ್ನು ವೈಭವೀಕರಿಸುವುದನ್ನು ಬಿಟ್ಟು 'ತಾಯಿ ಕನ್ನಡತಿ, ನೆಲ ಕರ್ನಾಟಕ, ನಮ್ಮ ಭಾಷೆ ಕನ್ನಡ' ಎಂಬಂತೆ ವ್ಯವಹರಿಸಿದರೆ ಆಡಳಿತದಲ್ಲಿ ಕನ್ನಡವನ್ನು ಅನುಷ್ಠಾನ ಗೊಳಿಸುವುದು ಕಷ್ಟವೇನು ಅಲ್ಲ ಹಾಗೂ ತಮ್ಮ ಕಚೇರಿಯ ಎಲ್ಲಾ ಕಡತಗಳನ್ನು ಕನ್ನಡದಲ್ಲಿಯೇ ಸಿದ್ದಪಡಿಸಿ, ತಾವು ಬರೆಯುವ ಎಲ್ಲಾ ಟಿಪ್ಪಣಿಗಳನ್ನು ಕನ್ನಡದಲ್ಲೇ ಬರೆಯಿರಿ. ಅನಿವಾರ್ಯ ಪ್ರಸಂಗಗಳನ್ನು ಹೊರತುಪಡಿಸಿ ಉಳಿದೆಲ್ಲಾ ಸಂದರ್ಭದಲ್ಲಿ ಕನ್ನಡ ಭಾಷೆಯನ್ನು ಬಳಸಿ ಎಂದು ಕಿರು ಹೊತ್ತಿಗೆಯಲ್ಲಿ ಆಶಿಸಲಾಗಿದೆ.

ಕನ್ನಡ ನಾಡುನುಡಿ ರಕ್ಷಣೆ ಯಾಕೆ ಮತ್ತು ಹೇಗೆ : ಪ್ರಕಾಶ್ ರಾಮ್ ಪೈಯರ್.

ಇವರಿಂದ (ಸಂ) ಈ ಕೃತಿಯಲ್ಲಿ ಎಸ್.ಪಿ. ಶಾಸ್ತ್ರಿಯವರು ಬರೆದ ವ್ಯವಹಾರದಲ್ಲಿ ಕನ್ನಡದ ಸ್ಥಿತಿಗತಿ, ಎಂಬ ಲೇಖನದಲ್ಲಿ ಪ್ರಸ್ತುತ ಸಂದರ್ಭದಲ್ಲಿನ ಕನ್ನಡ ಸ್ಥಿತಿಗತಿಗಳ ಬಗ್ಗೆ ವಿವರಿಸಿದ್ದಾರೆ, ಆಡಳಿತ ಭಾಷೆಗೆ ಸಂಬಂಧಿಸಿದಂತೆ ಆಡುಭಾಷೆ ಕನ್ನಡ, ಕನ್ನಡವನ್ನೇ ಆಡಳಿತ ಭಾಷೆಯಾಗಿ ಸ್ವೀಕರಿಸಿ ಘೋಷಿಸಲಾಗಿದೆ. ನಮ್ಮಲ್ಲಿ ಕನ್ನಡಕ್ಕೆಂದು ಇಲಾಖೆ ಇದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವೂ ಇದೆ. ಕನ್ನಡ ಸಾಹಿತ್ಯ ಪರಿಷತ್ತು ಇದೆ. ಕನ್ನಡಕ್ಕಾಗಿ ಕನ್ನಡದ ಏಳಿಗಾಗಿ ದುಡಿಯುತ್ತೇವೆಂದು ಹೇಳಿಕೊಳ್ಳುವ ಸಂಘ ಸಂಸ್ಥೆಗಳೂ ಇವೆ. ಹಿಂದಿ ಭಾಷೆಗೆ ಹೋಲಿಸಿದರೆ ಕನ್ನಡವು ಆಡಳಿತ ಭಾಷೆಯಾಗಿ ಅದರ ಅಭಿವೃದ್ಧಿಗೆ ಯಾವ ರೀತಿಯಾದ ಪ್ರೋತ್ಸಾಹಕರ ಸೌಲಭ್ಯ ದೊರೆತಿರುವುದು ಕಂಡುಬರುತ್ತಿಲ್ಲ.

ಹೀಗಾದರೆ ಕನ್ನಡ ಆಡಳಿತ ಭಾಷೆಯಾಗಿ ನೆಲೆಯೂರುವುದು ಹೇಗೆ? ಅಧಿಕಾರಿ ಮತ್ತು ಸಿಬ್ಬಂದಿ ವರ್ಗಗಳಲ್ಲಿ ಆಡಳಿತ ಕನ್ನಡದ ಬಳಕೆಯ ಬಗ್ಗೆ ಶಿಸ್ತು ಮತ್ತು ಬದ್ಧತೆಗಳನ್ನು ಮೂಡಿಸಲು ಸಂಬಂಧಪಟ್ಟ ಇಲಾಖೆಗಳು (ಕನ್ನಡ ಕಾವಲು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇತರೆ) ಪರಿಣಾಮಕಾರಿಗಳಾಗದೆ, ವಿಫಲವಾಗಿರುವುದನ್ನು ನೋಡಿದ್ದೇವೆ. ಕನ್ನಡ ಭಾಷೆಯ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು. ಕನ್ನಡ ಅಭಿವೃದ್ಧಿಗಾಗಿ ಶ್ರಮಿಸಬೇಕು. ಸರಕಾರದ ವ್ಯವಹಾರಗಳ ಎಲ್ಲಾ ಹಂತಗಳಲ್ಲಿ ಎಲ್ಲಾ ರೀತಿಯಲ್ಲಿ ಕನ್ನಡವನ್ನೇ ಬಳಸುವಂತೆ ಒತ್ತಾಯ ಪಡಿಸಬೇಕು. ಎನ್ನುವ ಆವೇಶ ಪೂರಿತ ಉದ್ದುದ್ದನೆಯ ಭಾಷಣ ಮಾಡುವವರು ಸಾಕಷ್ಟು ಜನ ನಮ್ಮಲ್ಲಿದ್ದಾರೆ. ಅಂತಹ ಭಾಷಣಗಳನ್ನು ಕೇಳುವ ಜನರೂ ನಮ್ಮಲ್ಲಿದ್ದಾರೆ, ಆದರೆ ಆಚರಣೆಗಿಳಿಸುವವರು ಬೆರಳೆಣಿಕೆಯಷ್ಟು ಮಾತ್ರ ಎಂದು ವಿವರಿಸುತ್ತಾ ವ್ಯವಹಾರದಲ್ಲಿ ಕನ್ನಡದ ಸ್ಥಿತಿಗತಿಗಳ ಬಗ್ಗೆ ಹೇಳಿರುವುದು ಪ್ರಸ್ತುತ ಲೇಖನದಲ್ಲಿ ವಿವರಿಸಲಾಗಿದೆ.

ಇದೇ ಕೃತಿಯಲ್ಲಿ ಎಸ್.ವಿ. ಶಂಕರಪ್ಪ, ಇವರು ಬರೆದ ಕನ್ನಡಿಗರು ಅಭಿಮಾನ್ಯ ಶೂನ್ಯರೇ?, ಎಂಬ ಲೇಖನದಲ್ಲಿ ಕನ್ನಡಿಗರು ಅಭಿಮಾನ್ಯ ಶೂನ್ಯರು, ಎಂಬಮಾತು ಅವರ ದೃಷ್ಟಿಯಲ್ಲಿ ಹೌದು! ಕಟು ಸತ್ಯವೂ ಹೌದು! ಈ ಮಾತು ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶರತಮಾನದಲ್ಲೂ ದಟ್ಟವಾಗಿ ಕಂಡುಬರುತ್ತದೆ.

"ನಾನು ಕನ್ನಡಿಗ, ಕರ್ನಾಟಕವು ನನ್ನದು ಎಂಬ ಸದ್ವಿಚಾರಗಳಿಂದ ಯಾವನ ಹೃದಯವು ಅತ್ಯಾನಂದದಿಂದ ದೀಂಕಿಡುವುದಿಲ್ಲವೋ, ಕನ್ನಡ ತಾಯಿಗೆ ಈಗ ಬಂದಿರುವ ವಿಷಮ ಸ್ಥಿತಿಯಲ್ಲಿ ಯಾವಾತನ ಹೃದಯವು ತಲ್ಲಣಿಸುವುದಿಲ್ಲವೋ, ತಳಮಳಿಸುವುದಿಲ್ಲವೋ, ಅದು ಹೃದಯವಲ್ಲ ಕಲ್ಲುಬಂಡೆ, ದೇಹವಲ್ಲ ಮೋಟು ಮರ"ವೆಂದು ಹಿಂದೆ ಕನ್ನಡ ಕುಲಪುರೋಹಿತರಾದ ಆಲೂರು ವೆಂಕಟರಾಯರು ಕನ್ನಡಿಗರ ಅಭಿಮಾನ ಶೂನ್ಯತೆಯನ್ನು ಹೇಳುವಲ್ಲಿ ಈ ಮಾತುಗಳನ್ನು ಆಡಿದ್ದಾರೆಂದು ನೆನೆಪಿಸಿಕೊಳ್ಳುತ್ತಾರೆ. ಅಲ್ಲದೇ ನಮ್ಮ ಜನರಲ್ಲಿ ಇಂಗ್ಲೀಷ್ ಮೋಹ ಹೆಚ್ಚಿದ್ದು ಹೊರ ಪ್ರಪಂಚವನ್ನು ನೋಡುವ ಅರಿಯುವ ಕಿಟಕಿಯಾಗಿ ನಮಗೆ ಇಂಗ್ಲೀಷ್ ಬೇಕೆ ಹೊರತು ಸಾರ್ವಭೌಮತ್ವವನ್ನು ಸ್ಥಾಪಿಸುವುದಕ್ಕಲ್ಲ ಎಂದು ವಿವರಿಸಿದ್ದಾರೆ.

ಇದೇ ಕೃತಿಯಲ್ಲಿ ಪ.ಮಂಜುನಾಥ ಸ್ವಾಮಿ ಇವರು ಬರೆದ ಕರ್ನಾಟಕದಲ್ಲಿ ಕನ್ನಡದ ಸ್ಥಿತಿ ಗತಿಗಳು, ಎಂಬ ಲೇಖನದಲ್ಲಿ ಕರ್ನಾಟಕದಲ್ಲಿ ಕನ್ನಡದ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ವಿವರಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಕನ್ನಡಿಗರಿಗೆ ಕನ್ನಡದ ಬಗ್ಗೆ ಇದ್ದ ಗೌರವ ಕಡಿಮೆಯಾಗಿದ್ದು ಎಷ್ಟೋಜನ ಮನೆಯಲ್ಲಿ ತಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ಮಾತನಾಡಲೂ ಸಹ ಬಯಸುವುದಿಲ್ಲ. ಸರ್ಕಾರಿ ಕಚೇರಿಗಳಲ್ಲಿ ಎಷ್ಟೋ ಅಧಿಕಾರಿಗಳು ಕನ್ನಡವನ್ನು ಬಳಸುವುದೇ ಇಲ್ಲ. ಇದಕ್ಕೆ ಕಾರಣ ಕನ್ನಡ ತಿಳಿಯದ ಅನ್ಯ ಭಾಷಿಕರನ್ನು ಅಧಿಕಾರಿಗಳಾಗಿ ನೇಮಕ ಮಾಡಿರುವುದು ಎಂದು ಚರ್ಚಿಸುತ್ತಾರೆ. ಅನ್ಯ ರಾಜ್ಯದವರು ಇಲ್ಲಿ ಬಂದು ನೆಲೆಸಿದರೆ ಅವರಿಗೆ ಪ್ರತ್ಯೇಕ ಕಾನೂನು ರಚನೆ ಮಾಡಬೇಕು. ಅವರಿಗೆ ಕಾನೂನಾತ್ಮಕವಾಗಿ ಸ್ಥಳೀಯ ಕಾನೂನು ರಚನೆಯಾಗಬೇಕು. ಅವರಿಗೆ ಸಂಬಂಧಪಟ್ಟಂತೆ ಮೀಸಲಾತಿ ರಚನೆಯಾಗಬೇಕೆಂದು ಎಮ್.ಎನ್.ಸಿ ಕಚೇರಿಗಳಲ್ಲಿ ಶೇ **೫೦ ರಿಂದ ೬೦** ರವರೆಗೆ ಕನ್ನಡಿಗರಿಗೆ ಉದ್ಯೋಗ ಮೀಸಲಾಗಬೇಕೆಂದು ಈ ರೀತಿಯಾಗಿ ಹಲವಾರು ಸಮಸ್ಯೆಗಳನ್ನು ಕನ್ನಡದ ಚಿಂತನೆಗಳ ಬಗ್ಗೆ ವಿವರಿಸಿದ್ದಾರೆ.

ಕನ್ನಡ ಭಾಷಾಭಿವೃದ್ಧಿ ಸಾಧನೆ ಮತ್ತು ಮುನ್ನೋಟ: ಎಂಬ ಕೃತಿಯಲ್ಲಿ ಹೇಮಲತಾ ಮಹಿಷಿಯವರು ಬರೆದ ಕರ್ನಾಟಕ ಭಾಷಾ ನೀತಿ ಎಂಬ ಇವರ ಲೇಖನದಲ್ಲಿ ಕನ್ನಡದ ಅನೇಕ ರಾಜ ವಂಶಸ್ಥರು ಕನ್ನಡ ಭಾಷೆಯಲ್ಲಿಯೇ ಆಡಳಿತ ನಡೆಸಿದ್ದಾರೆ. ಟಿಪ್ಪುವಿನ ಕಾಲದಲ್ಲಿ ಕನ್ನಡ ಆಡಳಿತ ಭಾಷೆಯಾಗಿತ್ತು. ಬ್ರಿಟೀಷರು ನಮ್ಮ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳುವ ಪೂರ್ವದಲ್ಲಿಯೂ ಆಡಳಿತದಲ್ಲಿ ಕನ್ನಡ ಜಾರಿಯಲ್ಲಿತ್ತು ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿವೆ.

ಮುಂಬಯಿ, ಮದ್ರಾಸು ಪ್ರಾಂತಗಳಲ್ಲಿ ಕನ್ನಡವೇ ಕಚೇರಿ ಭಾಷೆಯಾಗಿತ್ತು ಎನ್ನುವುದಕ್ಕೆ ಸಾಕ್ಷ್ಯಾಧಾರಗಳಿವೆ. ಆದರೆ ಸ್ವಾತಂತ್ರ್ಯದ ನಂತರದಲ್ಲಿ ಆಡಳಿತ ಭಾಷಾ ನೀತಿ ಬದಲಾವಣೆಗೊಂಡು ಆಡಳಿತದಲ್ಲಿ ಕನ್ನಡ ಬಳಕೆಗೆ ಗೊಂದಲಗಳುಂಟಾಗಿವೆ. ಅವರ ಲೇಖನದಲ್ಲಿ '೧೯೬೩ರ ಭಾಷಾ ನೀತಿ ಅಧಿನಿಯ'ಮ ತಿಳಿಸಿದಂತೆ ಇಂಗ್ಲೀಷ್ ಅಧಿಕೃತ ಭಾಷೆಯಾಗಿ ನಮ್ಮ ರಾಜ್ಯದಲ್ಲಿ ಮುಂದುವರೆದಿರುವುದು, ಕನ್ನಡವನ್ನು ಆಡಳಿತ ಭಾಷೆಯಾಗಿ ಘೋಷಿಸಲ್ಪಟ್ಟರೂ ಅದೊಂದು ಏಕೈಕ ಆಡಳಿತ ಭಾಷೆಯಾಗಿ ಕಡ್ಡಾಯವಾಗಿಲ್ಲದಿರುವುದು ಸ್ಪಷ್ಟವಾಗುತ್ತದೆ.

ಆದರೆ ಕನ್ನಡವನ್ನು ಏಕೈಕ ಆಡಳಿತ ಭಾಷೆಯಾಗಿ ಘೋಷಿಸಲು ಕಡ್ಡಾಯ ಪಡಿಸಲು ಯಾವುದೇ ಸಂವಿಧಾನಾತ್ಮಕ ಅಡ್ಡಿ ಇರಲಿಲ್ಲ, ಇರುವುದೆಲ್ಲಾ ರಾಜಕೀಯ ಇಚ್ಚೆಯಲ್ಲಿ ಎನ್ನುವುದು ಸ್ಪಷ್ಟವಾಗಿದೆ. ಇರುವ ಭಾಷಾನೀತಿಗಳಿಗೆ ತಿದ್ದುಪಡಿ ತರಬೇಕೆನ್ನುವುದನ್ನು ಪ್ರಸ್ತುತ ಲೇಖನದಲ್ಲಿ ತಿಳಿಸಿದ್ದಾರೆ.

೨.೪. ನಿಯತಕಾಲಿಕೆಗಳು (ಪತ್ರಿಕೆಯ ಲೇಖನಗಳು)

ಸಮ್ಮೇಳನಾಧ್ಯಕ್ಷರ ಜೊತೆ ಸಂವಾದ: ಶ್ರೀನಾಥ್ ಎಸ್.ವಿ., ವಿಜಯ ಕರ್ನಾಟಕ, ೦೬.೦೨.೨೦೧೧

೭೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಜಿ. ವೆಂಕಟಸುಬ್ಬಯ್ಯನವರು ತಮ್ಮ ಪ್ರಾಸ್ತಾವಿಕ ಮಾತಿನಲ್ಲಿ ಆಡಳಿತದಲ್ಲಿ ಕನ್ನಡವನ್ನೇ ಬಳಸಬೇಕು ನಿಜ, ಆದರೆ ಅರ್ಜಿಗಳಿಗೆ,

ಪತ್ರಗಳಿಗೆ ಹಿಂಬರ ಬರೆಯುವಾಗ ಕೆಲವೊಮ್ಮೆ ಅನಿವಾರ್ಯವಾಗಿ ಇಂಗ್ಲೀಷ್ ಪದ ಬಳಕೆ ಮಾಡಬೇಕಾಗಿ ಬಂದಲ್ಲಿ, ಕನ್ನಡ ವಾಕ್ಯದ ನಡುವೆ ಒಂದು ಇಂಗ್ಲೀಷ್ ಪದ ಬಳಸಿ ಅದರಿಂದ ತಪ್ಪೇನೂ ಆಗುವುದಿಲ್ಲ. ಆದರೆ ಇಂಗ್ಲೀಷ್ ವಾಕ್ಯದ ನಡುವೆ ಕನ್ನಡ ಸೇರಿಸುವ ಪ್ರಯತ್ನ ಮಾಡಬೇಡಿ.

ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಅರ್ಜಿಗಳನ್ನು ಕನ್ನಡದಲ್ಲೇ ಸ್ವೀಕರಿಸಬೇಕು. ಬೇರೆ ಭಾಷೆಗಳ ಅರ್ಜಿಗಳನ್ನು ನಿಷ್ಠೂರವಾಗಿ ತಿರಸ್ಕರಿಸಬೇಕು, ಅರ್ಜಿಗಳಿಗೆ ಸಂಬಂಧಿಸಿದ ಟೀಕೆ–ಟಿಪ್ಪಣೆ ಸಹ ಕನ್ನಡದಲ್ಲಿ ಇರಲೇಬೇಕು. ಒಂದು ವೇಳೆ ಇದನ್ನು ಪಾಲಿಸದ ಅಧಿಕಾರಿಗಳಿಗೆ ಶಿಕ್ಷೆ ನೀಡಬೇಕು. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಲವು ಆದೇಶಗಳನ್ನು ಹೊರಡಿಸಿದ್ದರೂ ಪ್ರಯೋಜನವಾಗಿಲ್ಲ, ಸರಕಾರವೇ ಈ ನಿಟ್ಟಿನಲ್ಲಿ ನಿರ್ದಿಷ್ಟ ತೀರ್ಮಾನ ಕೈಗೊಳ್ಳಲೇ ಬೇಕು ಎಂದು ನುಡಿದರು. ಅದರ ಅರ್ಥ 'ಕನ್ನಡ ಕಲಿಯದ ಅಧಿಕಾರಿಗಳಿಗೆ ಶಿಕ್ಷೆ ಅವಶ್ಯ'ವೆಂದು ವಿವರಿಸುತ್ತಾರೆ.

ಅಧಿಕಾರಿಗಳು ಕಲಿಯದೇ ಕನ್ನಡ ಅಸಾಧ್ಯ: ಶ್ರೀನಾಥ್ ಎಸ್.ವಿ., ವಿಜಯ ಕರ್ನಾಟಕ, ೦೭.೦೨.೨೦೧೧.

'ಎಲ್ಲಿಯವರೆಗೆ ಐ.ಎ.ಎಸ್ ಅಧಿಕಾರಿಗಳು ಕನ್ನಡ ಕಲಿಯುವುದಿಲ್ಲವೋ, ಕನ್ನಡ ಬಳಸದ ಅಧಿಕಾರಿಗಳ ವಿರುದ್ಧ ಕಠಿಣಕ್ರಮ ಕೈಗೊಳ್ಳುವುದಿಲ್ಲವೋ, ಅಲ್ಲಿಯವರೆಗೂ ಆಡಳಿತದಲ್ಲಿ ಕನ್ನಡ ಜಾರಿ ಅಸಾಧ್ಯ'. ಐ.ಎ.ಎಸ್. ಅಧಿಕಾರಿಗಳಿಗೆ ಎರಡನೇ ತರಗತಿ ಕನ್ನಡವೂ ಬರದು ಅವರೊಂದಿಗೆ ಕನ್ನಡದಲ್ಲಿ ಆಡಳಿತ ನಡೆಸುವುದು ಕಷ್ಟಸಾಧ್ಯ. ಅಲ್ಲದೆ ಇಂಗ್ಲೀಷ್‌ನಲ್ಲಿ ವ್ಯವಹರಿಸದ್ದಿದ್ದರೆ ಎಲ್ಲಿ ತಮ್ಮ ಮರ್ಯಾದೆ ಕಡಿಮೆಯಾಗುತ್ತೋ ಎಂದು ಮಂತ್ರಿಗಳೂ ಕನ್ನಡದಲ್ಲಿ ವ್ಯವಹರಿಸುವುದಿಲ್ಲ.

ಆಡಳಿತದಲ್ಲಿ ಕನ್ನಡ ಎಂಬುದು ಬಾಯಿ ಮಾತಿನಲ್ಲಿ ಮಾತ್ರ. ಕನ್ನಡ ಬಳಸದ ಒಬ್ಬ ಐ.ಎ.ಎಸ್.ಅಧಿಕಾರಿ ಮೇಲೆ ಕ್ರಮಕೈಗೊಂಡ ಉದಾಹರಣೆಗಳಿಲ್ಲ. ಕನ್ನಡದ ಇಂದಿನ ಈ ದುಸ್ಥಿತಿಗೆ ನಮ್ಮನ್ನು ನಾವೇ ದೂಷಿಸಬೇಕಿದೆ. ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯನವರು **೭೭**ನೇ ಕನ್ನಡ ಸಾಹಿತ್ಯಸಮ್ಮೇಳನದ ಸಮಾರೋಪ ಸಮಾರಂಭದ ಅಥಿತಿಯಾಗಿ ಮಾತನಾಡಿದರು. ನಿಜವಾಗಿಯೂ ಇಂದು ಐ.ಎ.ಎಸ್. ಅಧಿಕಾರಿಗಳ ಮತ್ತು ಪ್ರಾದೇಶಿಕ ಆಡಳಿತ ಸಿಬ್ಬಂದಿಯವರ ಮಧ್ಯೆ ತುಂಬಾ ಅಂತರವಿರುವುದನ್ನು ಕಾಣುತ್ತೇವೆ. ಕನ್ನಡ ನಮಗೆ ಸರಿಯಾಗಿ ಅರ್ಥವಾಗುವುದಿಲ್ಲ ಅದನ್ನು ಇಂಗ್ಲೀಷಿಗೆ ತರ್ಜುಮೆ ಮಾಡಿ ಹೇಳಿ ಎಂದು ಹೇಳುವ ಅಧಿಕಾರಿಗಳ ಪರಿಪಾಠ ಇನ್ನೂ ಆಡಳಿತದಲ್ಲಿದೆ.

ಅಧಿಕಾರಿಗಳಿಗೆ ಕನ್ನಡ ಕಲಿಕೆ ಕಡ್ಡಾಯ : ಮುಖ್ಯ ಮಂತ್ರಿ ಚಂದ್ರು, ವಿಜಯ ಕರ್ನಾಟಕ, ೨೪.೦೧.೨೦೧೦.

ಆಡಳಿತ ಕಚೇರಿಯ ವಿಷಯಗಳನ್ನು ಗಮನಿಸಿದಾಗ ಕನ್ನಡೇತರ ಐ.ಎ.ಎಸ್. ಅಧಿಕಾರಿಗಳಿಗೆ ಕನ್ನಡ ಕಲಿಸಲು ಆರಂಭಿಸಿರುವ ತರಗತಿಗೆ ಹಾಜರಾತಿ ಮತ್ತು ಮೌಲ್ಯಮಾಪನ ಕಡ್ಡಾಯಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ. ಕನ್ನಡ ಕಲಿಯದಿದ್ದರೂ ಆಡಳಿತ ನಿರ್ವಹಣೆ ಮಾಡಬಹುದು

ಎಂಬ ಮನೋಭಾವನೆಯಿಂದ ಕೆಲ ಐ.ಎ.ಎಸ್. ಅಧಿಕಾರಿಗಳು ಕನ್ನಡ ಕಲಿಕೆ ಬಗ್ಗೆ ನಿರ್ಲಕ್ಷ್ಯ ತೋರಿದ್ದಾರೆ. ರಾಜ್ಯಕ್ಕೆ ಬಂದ ಅಧಿಕಾರಿಗಳು ಕನ್ನಡ ಕಲಿಯದೇ ಇರಬಾರದು ಎಂಬ ಉದ್ದೇಶದಿಂದ ಕನ್ನಡ ಕಲಿಕೆ ಹಾಗೂ ತೇರ್ಗಡೆ ಕಡ್ಡಾಯಗೊಳಿಸಿ ಆದೇಶ ಹೊರಡಿಸಿದೆ. ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಮುಖ್ಯ ಮಂತ್ರಿ ಚಂದ್ರು ಅವರು ಹೇಳಿದ್ದಾರೆ.

ಹೊರ ರಾಜ್ಯದ ಕನ್ನಡಿಗರ ಸಮಸ್ಯೆಗೆ ಸ್ಪಂದನೆ, ರಾಜ್ಯದ ೧.೨೦ ಲಕ್ಷ ಸರಕಾರಿ ನೌಕರರಿಗೆ ಕನ್ನಡ ಕಲಿಕಾ ತರಬೇತಿ ನೀಡಲಾಗುತ್ತಿದೆ. ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಕನ್ನಡ ಕವಿಗಳ ಎರಡು ಸಾವಿರ ನಾಣ್ನುಡಿಯನ್ನು ಬರೆಸಲಾಗುತ್ತಿದೆ, ಕನ್ನಡ ಏಕೀಕರಣಕ್ಕಾಗಿ ದುಡಿದ ವ್ಯಕ್ತಿಗಳ ಮತ್ತು ಕನ್ನಡದಲ್ಲಿ ತೀರ್ಪು ನೀಡಿದ ನ್ಯಾಯಾಧೀಶರನ್ನು ಗೌರವಿಸಲಾಗುತ್ತಿದೆ ಎಂದು ವಿವರಿಸಿದರು.

ಬೆಂಗಳೂರಿನಲ್ಲಿ ಕನ್ನಡಕ್ಕೇನು ಸ್ಥಾನ: ಎಲ್.ಎಸ್.ಶೇಷಗಿರಿ ರಾವ್, ವಿಜಯ ಕರ್ನಾಟಕ, ೧೫.೧೧.೨೦೧೦.

ಬೆಂಗಳೂರಿನಲ್ಲಿ ಕನ್ನಡವನ್ನು ಉಳಿಸಿಕೊಳ್ಳುವುದು ಒಂದು ಸವಾಲೇ ಆಗಿದೆ. ಕರ್ನಾಟಕದ ರಾಜಧಾನಿ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಶೀಲಿಸುವುದು ತೀರಾ ಅಗತ್ಯ. ಮೂರು ನಾಲ್ಕು ಜನ ಕನ್ನಡಿಗರು ಸೇರಿದರೆ ಇಂಗ್ಲೀಷಿನಲ್ಲಿ ಮಾತನಾಡುತ್ತಾರೆ. ಅವರಿಗೆ ಸ್ವಾಭಿಮಾನವಿಲ್ಲ. ಈ ರೀತಿ ನಾವೂ ಹೇಳುತ್ತಾ ಬಂದಿದ್ದೇವೆ, ಆದರೆ ಏಕೆ ಹೀಗೆ ಮಾಡುತ್ತಾರೆ ಎಂದು ಭಾಷಾಜ್ಞಾನದ ತಜ್ಞರೂ ಸೇರಿದಂತೆ ಕನ್ನಡಾಭಿಮಾನಿಗಳು ಗಂಭೀರವಾಗಿ ಪರಿಶೀಲಿಸಬೇಕಾಗುತ್ತದೆ. ಕನ್ನಡಾಭಿಮಾನಿಗಳು ಹೀಗೆ ಬೇರೆ ಭಾಷೆಗೆ ಸುಲಭವಾಗಿ ಜಾರುವುದೇಕೆ?.

ಕನ್ನಡತನವೆಲ್ಲ ಕೇವಲ ಬೊಗಳೆ: ಉಪ್ಪಂಗಳ ರಾಮಭಟ್ಟ, ವಿಜಯ ಕರ್ನಾಟಕ, ೨೩.೦೨.೨೦೧೧.

ಆಯಾ ರಾಜ್ಯದ ಭಾಷೆಯಲ್ಲಿ ಆಡಳಿತ ವ್ಯವಹಾರ ನಡೆಯಬೇಕೆಂಬ ಘನ ಉದ್ದೇಶದಿಂದ ಸಂವಿಧಾನ ಬದ್ಧವಾಗಿ ಭಾಷಾವಾರು ಪ್ರಾಂತ ರಚನೆಯಾಗಿದೆ. ಆದ್ದರಿಂದ ರಾಜ್ಯ ಸಭೆಗೂ ಅಥವಾ ಯಾವುದೇ ಸ್ಥಳೀಯ ಆಡಳಿತ ಮಂಡಳಿಗೆ ಆಯ್ಕೆಯಾಗುವ ಪ್ರತಿನಿಧಿಗಳು ಕನ್ನಡಬಲ್ಲ ಕನ್ನಡಿಗರಾಗಬೇಕಾದುದು ಸರ್ವಥಾ ನ್ಯಾಯ. ಇದರಲ್ಲಿ ಯಾವ ಸಂಕೋಚ ಮುಜುಗರ ಹೊಂದಾಣಿಕೆಗೆ ಅವಕಾಶವಿಲ್ಲ. ಕರ್ನಾಟಕದಲ್ಲಿ ಈಗಾಗಲೇ ಕನ್ನಡವರಿಯದವರನ್ನು ಒಂದಲ್ಲ, ಎರಡನೇ ಬಾರಿಗೂ ಆಯ್ಕೆ ಮಾಡಿದರು ಆಗಲೇ ಎಚ್ಚರಗೊಳ್ಳಬೇಕಿದ್ದ ಕನ್ನಡಿಗರು ತಿಳಿದೂ ತಿಳಿಯದಂತೆ ಮೌನವಾದರು...

ಕನ್ನಡ ಕನ್ನಡವೆಂದು ಬೊಬ್ಬಿರಿಯುವ ರಾಜಕಾರಣಿಗಳಿಗೆ ನ್ಯಾಯೋಚಿತ ಪ್ರಭಾರ ರಕ್ಷಣೆಗಿಂತ ಪಕ್ಷ ರಕ್ಷಣೆಯಲ್ಲಿ ಮೇಲೆನಿಸಿತೆ? ಇಂತಹ ನಿರಭಿಮಾನಿಗಳಿಂದ ಕನ್ನಡದ ಉದ್ಧಾರ ಸಾಧ್ಯವೇ ಸಮ್ಮೇಳನಗಳಲ್ಲಿ ಕನ್ನಡದ ಕಹಳೆ, ಆಡಳಿತದಲ್ಲಿ ಇನ್ನಿರದ ಬೊಗಳೆ! ಕನ್ನಡಿಗರಲ್ಲದಿದ್ದರೂ ಭಾರತೀಯ ಅಲ್ಲವೇ ಎಂಬ ವಿಶ್ವವಿಶಾಲ ಭಾವನೆಯ ಮೊಂಡುವಾದರೆ ಕರ್ನಾಟಕವೆಂಬ ರಾಜ್ಯವೇಕೆ ಬೇಕಿತ್ತು ಎಂದು ಕನ್ನಡದ ಬಗ್ಗೆ ರಾಜಕಾರಣಿಗಳು ತೋರುವ ಮನೋಭಾವಗಳನ್ನು ಬಿಚ್ಚಿಟ್ಟಿದ್ದಾರೆ.

ಶುದ್ಧ ಕನ್ನಡ ಬಳಕೆ ಆಶಯ: ಮಲ್ಲಿಕಾ ಘಂಟಿ, ವಿಜಯ ಕರ್ನಾಟಕ, ೦೪.೦೨.೨೦೧೧.

ಶುದ್ಧ ಕನ್ನಡ ಬಳಕೆಗೆ ಎಲ್ಲರೂ ಆದ್ಯತೆ ನೀಡಬೇಕು, ಪ್ರಾಧ್ಯಾಪಕರು ಮೊದಲು ಶುದ್ಧ ಕನ್ನಡ ಬಳಸಬೇಕು. ಶಿಕ್ಷಣದಲ್ಲಿ ಮತ್ತು ಮಾಧ್ಯಮಗಳಲ್ಲಿ ಶುದ್ಧ ಕನ್ನಡ ಬಳಕೆ ಜಾರಿಗೊಂಡರೆ ಎಲ್ಲಾ ಕಡೆಯೂ ಶುದ್ಧ ಕನ್ನಡ ಬಳಕೆ ಸಾಧ್ಯವಾಗುತ್ತದೆ ಅನ್ಯ ಸಂಸ್ಕೃತಿಯ ಪ್ರಭಾವದಿಂದ ಕನ್ನಡ ಉಳಿಸಬೇಕು, ಸಾಂಸ್ಕೃತಿಕ ಹಾಗೂ ಭಾಷಿಕವಾಗಿ ಕನ್ನಡವನ್ನು ಉಳಿಸುವ ಜವಾಬ್ದಾರಿ ಯುವ ಪೀಳಿಗೆಯ ಮೇಲಿದೆ ಎಂದಿದ್ದಾರೆ.

ಕನ್ನಡ ಮತ್ತು ಸಾಹಿತ್ಯ ಸಮ್ಮೇಳನ ಒಂದಿಷ್ಟು ಆಶಯಗಳು: ಯು.ಎನ್.ಸಂಗನಾಳ ಮಠ, ೧೨.೦೧.೨೦೧೧

ಆಡಳಿತದಲ್ಲಿ ಕನ್ನಡ ಅಂಕಿಗಳ ಬಳಕೆಗೆ, ಪ್ರಮುಖ ಊರಿನ ಹೆಸರುಗಳ ಕನ್ನಡೀಕರಣ, ಮಹಾಜನ ವರದಿ ಮತ್ತು ಸರೋಜನಿ ಮಹಿಷಿ ವರದಿಗಳ ಜಾರಿಗೆ 'ಇಂಗ್ಲೀಷ್ ವ್ಯಾಮೋಹದ ಹುಚ್ಚು ಹೊಳೆಯಲ್ಲಿ ಕನ್ನಡತನವೇ ಕೊಚ್ಚಿ ಹೊಗುತ್ತಿದೆ' ಕನ್ನಡ ಬಳಕೆಯ ಹೊಣೆ ನಮ್ಮ ಮೇಲಿದೆ.

ಕೊನೆಸಿಡಿ:– ವಿಶ್ವ ಆರು ಸಾವಿರ ಪ್ರಖರ ಭಾಷೆಗಳಲ್ಲಿ ೨೫ನೇ ಸ್ಥಾನದಲ್ಲಿರುವ ಕನ್ನಡ ಅತ್ಯಂತ ಸತ್ವಯುತವಾಗಿದೆ. ಹೀಗಾಗಿ ಕನ್ನಡ ಸಾಯುತ್ತಿದೆ ಎಂಬ ಮಾತನ್ನು ಯಾರು ಆಡಬೇಡಿ–ಜಿ.ವಿ.ಯವರು ವಿವರಿಸಿದ್ದಾರೆ,

ಕನ್ನಡ ಪ್ರಭವಾರ್ತೆ ಜಿ. ವೆಂಕಟಸುಬ್ಬಯ್ಯ ೦೫.೦೬.೨೦೧೧.

ಆಂಗ್ಲ ಮಾಧ್ಯಮದಲ್ಲಿ ಓದಿದ ಮಕ್ಕಳೆಲ್ಲಾ ಮೇಧಾವಿಗಳೇನೂ ಅಲ್ಲ. ಕನ್ನಡ ಮಾಧ್ಯಮದಲ್ಲಿ ಓದಿದ ಮಕ್ಕಳು ದಡ್ಡರೂ ಅಲ್ಲ, ಇದೆಲ್ಲಾ ಜನರ ಹುಚ್ಚು ಕಲ್ಪನೆ ಅಷ್ಟೇ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಕನ್ನಡ ಭಾಷೆಯಲ್ಲೇ ಕಡ್ಡಾಯವಾಗಿ ಕಲಿಯಬೇಕೆಂದು ಕಡ್ಡಾಯವಾಗಿ ಸರ್ಕಾರ ಆದೇಶ ಹೊರಡಿಸಬೇಕು ಎಂದು ಕರೆ ಕೊಡುತ್ತಾರೆ.

ಇಂಗ್ಲೀಷ್ ಎಂಬ ಕನ್ನಡದ ಸಂಕೀರ್ಣತೆ : ಕೆ ಸತ್ಯನಾರಾಯಣ, ಪ್ರಜಾವಾಣಿ, ೦೮.೦೧.೨೦೧೨.

ಇಂಗ್ಲೀಷ್ ಮೂಲಕ ವಿಶ್ವಮಾನವರಾಗಲು ಹೊರಟಿರುವ ಎಲ್ಲಾ ವಿಕಾಸ ಶೀಲ ದೇಶಗಳಿಂದಲೂ ಸ್ಪಷ್ಟವಾದ ಭಾಷೆ ನೀತಿಯನ್ನು ಬೇಡುವ ಪುಸ್ತಕವೊಂದರ ನೆಪದಲ್ಲಿ ಇಂಗ್ಲೀಷಿನಲ್ಲಿ ಶಕ್ತಿ ಸಾಧ್ಯತೆಗಳ ಬಗ್ಗೆ ಒಂದು ಚಿಂತನೆ ಆಗಬೇಕಿದೆ ಎಂದಿದ್ದಾರೆ.

ಗಡಿ ಜಿಲ್ಲೆಗಳಲ್ಲಿ ಕನ್ನಡ ಕಾಪಾಡಿ : ಶ್ರೀನಾಥ್ ಎಸ್ ವಿ., ವಿಜಯ ಕರ್ನಾಟಕ,

ಮೂವತ್ತರ ಪೈಕಿ. ೧೯ ಜಿಲ್ಲೆಗಳು ಗಡಿಭಾಗದಲ್ಲಿವೆ ಆ ಜಿಲ್ಲೆಗಳು ಎರಡು ಮೂರು ಭಾಷೆಗಳೊಂದಿಗೆ ಕನ್ನಡ ಹೋರಾಡಬೇಕಿದೆ ಇಲ್ಲಿ ಸರ್ಕಾರ ಸೂಕ್ತ ಮೂಲ ಸೌಕರ್ಯ ಒದಗಿಸಿಲ್ಲ. ಇಂಥ ಸಂದರ್ಭದಲ್ಲಿ ಪಕ್ಕದ ರಾಜ್ಯದವರು ನಮ್ಮ ಜಿಲ್ಲೆಗಳಿಗೆ ಮೂಲಭೂತ ಸೌಕಾರ್ಯದ ಆಮಿಷ ಒಡ್ಡುತ್ತಿದ್ದಾರೆ ಇದರಿಂದಾಗಿ ಆ ಭಾಗದ ಜನರು ಬೇರೆ ಭಾಷೆಗಳಿಗೆ ಮಾರು

ಹೋಗುವಂತಾಗಿದೆ. ಸರ್ಕಾರ ಈ ವಿಚಾರಗಳ ಬಗ್ಗೆ ಗಂಭೀರ ಚಿಂತನೆ ನಡೆಸುವ ಅಗತ್ಯವಿದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಮುಖ್ಯಮಂತ್ರಿ ಚಂದ್ರು ಈ ಮಾತನ್ನು ತಿಳಿಸಿದ್ದಾರೆ.

ಕನ್ನಡಕ್ಕೆ ಪಾಶ್ಚಾತ್ಯ ಸಂಸ್ಕೃತಿ ಅನುಕರಣೆ ಮಾರಕ: ವೀರೇಂದ್ರ ಹೆಗ್ಗಡೆ, ವಿಜಯ ಕರ್ನಾಟಕ, ೦೭.೦೨.೨೦೧೧

ವಿಜಯ ಕರ್ನಾಟಕದ ಕನ್ನಡ ಪರಿಶೆಯ ಭಾಗದಲ್ಲಿ, ನಮಗೆ ಕನ್ನಡವೇ ತಾಯಿ, ಕನ್ನಡವೇ ಉಸಿರು. ಕನ್ನಡ ಭಾಷೆ ಬಳಕೆ ಮತ್ತು ಸಂಸ್ಕೃತಿ ಉಳಿವಿನ ಬಗ್ಗೆ ವಿಶೇಷ ಗಮನ ಕೊಡಬೇಕಿದೆ. ಅನಿವಾಸಿ ಕನ್ನಡಿಗರಲ್ಲಿ ಇರುವ ಕನ್ನಡಾಭಿಮಾನ ಇಲ್ಲಿ ಕಾಣುತ್ತಿಲ್ಲ. ಅವರು ಮನೆಯಲ್ಲಿ ಸ್ವಚ್ಚವಾದ ಕನ್ನಡವನ್ನೇ ಬಳಸುತ್ತಾರೆ. ಆದರಿಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಕನ್ನಡ ಬಳಕೆ ಕಡಿಮೆಯಾಗುತ್ತಿದೆ ಎಂದು ವಿವರಿಸಿದ್ದಾರೆ.

ಬೆಂಗಳೂರು ಕೇಂದ್ರ ಆಡಳಿತ ಪ್ರದೇಶವಾಗುವ ಅಪಾಯ: ಪರಭಾಷಿಗರಿಗೆ ಕನ್ನಡ ಕಲಿಸಲೇಬೇಕು, ವಿಜಯ ಕರ್ನಾಟಕ, ೦೬.೦೨.೨೦೧೧.

ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶದಿಂದಾಗಿ ಹೊರರಾಜ್ಯಗಳಿಂದ ಬಂದಿರುವ ಅನ್ಯಭಾಷಿಗರಿಗೆ ಒತ್ತಾಯ ಪೂರ್ವಕವಾಗಿ ಕನ್ನಡವನ್ನು ಕಲಿಸಬೇಕು, ಜೊತೆಗೆ ಕನ್ನಡಿಗರಿಗೆ ಉದ್ಯೋಗದಲ್ಲಿ ಶೇ. ೫೦% ರಷ್ಟು ಮೀಸಲಿಡುವ ಸಂಬಂಧ ಸರಕಾರ ಕಾನೂನು ರೂಪಿಸಲೇಬೇಕು. ಕನ್ನಡ ಭಾಷೆಯ ಮೇಲೆ ಅಭಿಮಾನವಿರಲಿ ಆದರೆ ಉದ್ಯೋಗದ ದೃಷ್ಟಿಯಿಂದ ಕನ್ನಡಕ್ಕೆ ಜೋತು ಬೀಳಬಾರದು, ಆದರೆ ಕನ್ನಡವೊಂದರಿಂದಲೇ ಉದ್ಯೋಗ ಸಿಗುವ ಕಾಲ ಇಲ್ಲ. ಉದ್ಯೋಗವಕಾಶಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅದಕ್ಕೆ ತಕ್ಕಂತೆ ವಿದ್ಯೆಯನ್ನು ಕಲಿಯಬೇಕು. ಎಂದು ಜಿ.ವೆಂಕಟಸುಬ್ಬಯ್ಯ ಅವರು ತಿಳಿಸಿದ್ದಾರೆ.

ನಾಡಿನ ಮಾನ ಉಳಿಸಿ, ಕನ್ನಡ ಬೆಳಸಿ : ಅರವಿಂದ ನಾವಡಿ, ವಿಜಯ ಕರ್ನಾಟಕ, ೦೫.೦೨.೨೦೧೧.

ಶಿಕ್ಷೆ ಕೊಡಿ : ಎಲ್ಲಾ ಸರಕಾರಿ ಕಚೇರಿಗಳಲ್ಲಿ ಅರ್ಜಿಗಳನ್ನು ಕನ್ನಡದಲ್ಲಿ ಸ್ವೀಕರಿಸಬೇಕು. ಬೇರೆ ಭಾಷೆಗಳ ಅರ್ಜಿಗಳನ್ನು ನಿಷ್ಠೂರವಾಗಿ ತಿರಸ್ಕರಿಸಬೇಕು. ಅರ್ಜಿಗಳಿಗೆ ಸಂಬಂದಿಸಿದ ಟೀಕೆ ಟಿಪ್ಪಣಿಗಳು ಸಹ ಕನ್ನಡದಲ್ಲಿ ಇರಲೇಬೇಕು. ಒಂದುವೇಳೆ ಇದನ್ನು ಪಾಲಿಸದ ಅಧಿಕಾರಿಗಳಿಗೆ ಶಿಕ್ಷೆ ನೀಡಬೇಕು ಅಲ್ಲದೇ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಲವು ಆದೇಶಗಳನ್ನು ಹೊರಡಿಸಿದರೂ ಪ್ರಯೋಜನವಾಗಿಲ್ಲ ಸರಕಾರವೇ ಈ ನಿಟ್ಟಿನಲ್ಲಿ ನಿರ್ದಿಷ್ಟ ತೀರ್ಮಾನ ಕೈಗೊಳ್ಳಲೇಬೇಕು... ತಲೆ ತುಂಬ ಕಲಿಯೋಣ, ತಲೆ ಎತ್ತಿ ನುಡಿಯೋಣ, ತಲೆಬಾಗಿ ಬಾಳೋಣ, ಎಂದು ಜಿ. ವೆಂಕಟ ಸುಬ್ಬಯ್ಯನವರು ಕರೆ ನೀಡಿದರು

ವೈಜ್ಞಾನಿಕ ಕನ್ನಡ ಭಾಷೆಗೆ ಸಾವಿಲ್ಲ : ಡಿ.ಹೆಚ್ ಶಂಕರ್ ಮೂರ್ತಿ, ವಿಜಯ ಕರ್ನಾಟಕ, ೦೫.೦೨.೨೦೧೪.

ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ ವೈಜ್ಞಾನಿಕ ಭಾಷೆಯಾಗಿದ್ದು ಅದಕ್ಕೆ ಸಾವಿಲ್ಲ, ಕನ್ನಡ ಬರೆದಂತೆ ಓದಬಹುದು, ಇಂಗ್ಲೀಷ್ ಬರೆದಂತೆ ಓದಲು ಸಾಧ್ಯವಿಲ್ಲ.

ಎಲ್ಲಾ ವರ್ಗದ ಜನರಿಗೆ ಇಂಗ್ಲೀಷ್ ವ್ಯಾಮೋಹ ಇದೆ. ಪ್ರಪಂಚದ ಹಲವು ದೇಶಗಳಲ್ಲಿ ಇಂಗ್ಲೀಷ್ ಭಾಷೆ ಇಲ್ಲ, ಇಂಗ್ಲೀಷ್ ಭಾಷೆಯಿಂದ ದೇಶದ ಹಲವು ಪ್ರಾದೇಶಿಕ ಭಾಷೆಗಳಿಗೆ ಸಾಕಷ್ಟು ಹೊಡೆತ ಬಿದ್ದಿದೆ. ಕನ್ನಡ ಕಲಿತರೇ ಕನ್ನಡ ಉಳಿಯಲು ಸಾಧ್ಯ ಕನ್ನಡದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವಾಗಬೇಕು, ಕನ್ನಡ ಕಲಿತರೆ ಸಮಸ್ಯೆ ಇಲ್ಲ ಎಂಬ ವಿಷಯವನ್ನು ಮನದಟ್ಟು ಮಾಡಿಸುವ ಅಗತ್ಯವಿದೆ ಎಂದು ತಿಳಿಸಿದ್ದಾರೆ.

ಕನ್ನಡ ಗೊತ್ತಿಲ್ಲದವರಿಗೆ ನೌಕರಿ ಬೇಡ: ಡಿ ಎಚ್ ಶಂಕರಮೂರ್ತಿ, ವಿಜಯವಾಣಿ, ೦೫.೦೨.೨೦೧೪.

ಕನ್ನಡ ಬರೆಯಲು ಮಾತನಾಡಲು ಬಾರದವರಿಗೆ ಸರಕಾರಿ ನೌಕರಿ ನೀಡಲಾಗದು ಎಂಬ ಕಟ್ಟುನಿಟ್ಟಿನ ಕ್ರಮಕ್ಕೆ ರಾಜ್ಯ ಸರಕಾರ ಮುಂದಾಗಬೇಕು, ಹಾಗಾದಾಗ ಮಾತ್ರ ಭಾಷೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಲು ಸಾಧ್ಯ. ಭಾಷೆಯ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಕುರಿತಾಗಿ ರಾಜ್ಯ ಸರ್ಕಾರ ಕೇವಲ ತೋರಿಕೆ ಮಾತನಾಡುತ್ತಿದೆಯೇ ಹೊರತು ಮುಂದಿನ ಹೆಜ್ಜೆ ಇಡುತ್ತಿಲ್ಲ. ಮಂತ್ರಿಗಳು 'ಕನ್ನಡ ಭಾಷೆಯಲ್ಲಿಲ್ಲದ ಕಡತಗಳನ್ನು ಕಿತ್ತೆಸೆಯುತ್ತೇನೆ' ಎಂದು ಹೇಳುತ್ತಾರೆ ವಿನಃ ಆ ಕೆಲಸ ಮಾಡುತ್ತಿಲ್ಲ. ಹೀಗಾಗಿ ಭಾಷೆ ಕುರಿತು ಜನರಲ್ಲೂ ಜಾಗೃತಿ ಮೂಡುತ್ತಿಲ್ಲ..... ಬ್ರಿಟಿಷರ ಅಡಿಯಲ್ಲಿದ್ದ ನಮ್ಮೆಲ್ಲರ ಗುಲಾಮಿ ಭಾವನೆ ಇಂದಿಗೂ ಹಾಗೇ ಉಳಿದಿದೆ. ಇದರಿಂದ ಇಂಗ್ಲೀಷ್ ಎಂಬುದು ನಮಗೆ ಬಹುದೊಡ್ಡ ಭಾಷೆಯಾಗಿ ಕಂಡು ಬಂದಿದ್ದು ಅದರ ವ್ಯಾಮೋಹ ಹೆಚ್ಚಲು ಕಾರಣವಾಗಿದೆ. ಪ್ರತಿ ವರ್ಷ ಜಗತ್ತಿನ **೧೭** ಭಾಷೆಗಳು ಸಾಯುತ್ತಿದ್ದು ವೈಜ್ಞಾನಿಕ ಹಿನ್ನೆಲೆಯುಳ್ಳ ಕನ್ನಡ ಭಾಷೆ ಮಾತ್ರ ಇಂದಿಗೂ ತನ್ನ ಅಸ್ಥಿತ್ವ ಉಳಿಸಿಕೊಂಡಿದೆ ಎಂದು ವಿವರಿಸಿದ್ದಾರೆ.

ಕನ್ನಡ ನಾಮಫಲಕಕ್ಕೆ ಕಂಟಕ : ವಿಜಯವಾಣಿ, ೦೨.೦೪.೨೦೧೪

ಆಡಳಿತದಲ್ಲಿ ನಿಧಾನಗತಿಯಾಗಿ ಕನ್ನಡವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಸರ್ಕಾರವು ರಾಜ್ಯದಲ್ಲಿನ ಎಲ್ಲಾ ಅಂಗಡಿ ಮುಂಗಟ್ಟುಗಳ ನಾಮಫಲಕಗಳಲ್ಲಿ ಕನ್ನಡ ಕಡ್ಡಾಯವೆಂದು ಹೊರಡಿಸಿತ್ತು, ಅದನ್ನು ಪ್ರಶ್ನಿಸಿದ ವೊಡೊಫೋನ್ ಸಂಸ್ಥೆಯು ನಾಮಫಲಕ ಕನ್ನಡದಲ್ಲಿ ಅಳವಡಿಸಲು ಸಾಧ್ಯವಿಲ್ಲ, ನಾಮಫಲಕದಲ್ಲಿ ಕನ್ನಡ ಕಡ್ಡಾಯ ಎಂಬುದು ಸಂವಿಧಾನದ ಪರಿಚ್ಚೇದ **೧೩ ಮತ್ತು ೧೯**(ಎ)ಗೆ ವಿರುದ್ದವಾದದ್ದು ಎಂದು ನ್ಯಾಯಕ್ಕಾಗಿ ಕೋರ್ಟ ಮೊರೆಹೋದ ಹಿನ್ನೆಲೆಯಲ್ಲಿ, ಹೈಕೋರ್ಟ್ **'ನಾಮಫಲಕಗಳಲ್ಲಿ ಕನ್ನಡ ಕಡ್ಡಾಯವಲ್ಲ'** ಎಂದು ಹೇಳಿರುವುದಲ್ಲದೇ ಕನ್ನಡದಲ್ಲಿ ನಾಮಫಲಕ ಇರಬೇಕು ಎಂಬ ಸರ್ಕಾರದ ನಿಯಮ ಕಾನೂನು ಬಾಹಿರ ಎಂದು ತೀರ್ಪು ನೀಡಿತ್ತು. ಇದರಿಂದ ಕನ್ನಡಪರ ಚಿಂತಕರು ಚಿಂತಾಗ್ರಸ್ಥರಾದರು, ಈ ತೀರ್ಪಿನಿಂದ ಆಂಗ್ಲಬಾಷೆ ಹೇರುವ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅನುಕೂಲವಾಗುವುದು ಮಾತ್ರವಲ್ಲ, ಕನ್ನಡದ ಅಸ್ಥಿತ್ವಕ್ಕೆ ಧಕ್ಕೆಯಾಗಲಿದೆ. ಈ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.

ಇದರಂತೆ ತ್ರಿಭಾಷೆಯ ಸೂತ್ರದ ಪ್ರಕಾರ ಕೇಂದ್ರ ಸರ್ಕಾರಿ ಸ್ವಾಮ್ಯದ ಎಲ್ಲಾ ಸಂಸ್ಥೆಗಳು ಆಯಾ ರಾಜ್ಯಗಳಲ್ಲಿ ಅಲ್ಲಿನ ಪ್ರಾದೇಶಿಕ ಭಾಷೆಯನ್ನೇ ಪ್ರಧಾನವಾಗಿ ಪರಿಗಣಿಸಬೇಕು. ಬಳಿಕ ಹಿಂದಿ ಹಾಗೂ ಇಂಗ್ಲೀಷ್ ಇರಬೇಕು ಎಂಬುದೊಂದೆ ಮೊಂಡುವಾದ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಕೇಂದ್ರ ಸರ್ಕಾರಿ ಸ್ವಾಮ್ಯದ ಕಚೇರಿಗಳಲ್ಲಿ ಕನ್ನಡ ಕಡ್ಡಾಯ, ರಾಜ್ಯ ಸರ್ಕಾರಿ ಕಚೇರಿಯಲ್ಲಿ ಕನ್ನಡ ಇದ್ದೇ, ಇರುತ್ತದೆ. ಆದರೆ ಖಾಸಗಿ ಸಂಸ್ಥೆಗಳ ನಾಮಫಲಕಗಳಲ್ಲಿ ಕನ್ನಡ ಕಡ್ಡಾಯಗೊಳಿಸುವ ನಿಟ್ಟಿನಲ್ಲಿದ್ದ ಮಳಿಗೆ ಮತ್ತು ವಾಣಿಜ್ಯ ಸಂಸ್ಥೆಗಳ ನಿಯಮ-೧೯೬೩ಕ್ಕೆ ೨೦೦೮ರಲ್ಲಿ ಕಲಂ ೨೪(ಎ) ತಿದ್ದುಪಡಿಯನ್ನು ಮಾಡಲಾಗಿತ್ತು. ಇದನ್ನು ಹೈಕೋರ್ಟ್ ತಳ್ಳಿ ಹಾಕಿದೆ. ರಾಜ್ಯದಲ್ಲಿ ಕನ್ನಡ ಈಗಾಗಲೇ ಕಣ್ಮರೆಯಾಗುವ ಹಂತದಲ್ಲಿದೆ, ಪ್ರಸ್ತುತ ತೀರ್ಪಿನಿಂದಾಗಿ ಕನ್ನಡ ಕಡ್ಡಾಯ ಎನ್ನುವ ಹಾಗಿಲ್ಲ ಹೀಗಾಗಿ ಮುಂದೊಂದು ದಿನ ಕನ್ನಡ ಕಣ್ಣಿಗೆ ಕಾಣದಂತಾದರೂ ಆಶ್ಚರ್ಯವಿಲ್ಲ ಎಂದಿದ್ದಾರೆ. ಈ ಮೇಲಿನ ಅಂಶವನ್ನು ನಾವು ಯೋಚಿಸಲೇಬೇಕಾದ ವಿಷಯವಾಗಿದೆ.

ಮೇಲಿನ ಎಲ್ಲಾ ವಿಷಯಗಳನ್ನು ನೋಡಿದಾಗ ಕಂಡುಬರುವ ವಿಷಯವೇನೆಂದರೆ ಆಡಳಿತದಲ್ಲಿ ಕನ್ನಡದ ಬಳಕೆ ಸರಿಯಾಗಿ ಆಗದಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಅಲ್ಲಲ್ಲಿ ಚರ್ಚೆಗಳು ಆಗಿರುವುದನ್ನು ನೋಡಬಹುದಾಗಿದೆ. ಆದರೆ ಆಡಳಿತದಲ್ಲಿ ಕನ್ನಡದ ಬಳಕೆಯ ಸಮಸ್ಯೆಗಳ ಬಗ್ಗೆ ಕುರಿತಂತೆ ಚರ್ಚೆಗಳು ಗಹನವಾಗಿ ನಡೆದಿರುವುದು ತುಂಬಾ ವಿರಳ ಆ ಸಮಸ್ಯೆಗಳನ್ನು ನೋಡುವ ವಿಶೇಷತೆಯಿಂದ ಈ ಅಧ್ಯಯನವನ್ನು ಮಾಡುವ ಅವಶ್ಯಕತೆ ಕಂಡಿದೆ.

ಪರಾಮರ್ಶನ ಗ್ರಂಥ

೧. ಮುಖ್ಯಮಂತ್ರಿ ಚಂದ್ರು (ಪ್ರ.ಸಂ)ಇತರರು, ೨೦೧೦, **ಆಡಳಿತ ಕನ್ನಡ**, ದೂರು ಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಆದಿಶೇಷಮೂರ್ತಿ, ೨೦೧೧, **ಕಚೇರಿ ಕೈಪಿಡಿ**, ಸರ್ಕಾರಿ ನೌಕರರ ಮಿತ್ರ ಪ್ರಕಾಶನ, ಬೆಂಗಳೂರು

೩. ಕರ್ನಾಟಕ ಸರ್ಕಾರ, ೨೦೦೯, **ಆಡಳಿತ ಕನ್ನಡ ಕಾರ್ಯಶಿಬಿರ ಕೈಪಿಡಿ**, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಹಾಗೂ ದೂರ ಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಎಚ್ಚೆಸ್ಕೆ, ೨೦೧೦, **ಆಡಳಿತ ಕನ್ನಡ**, ಲಕ್ಷ್ಮೀ ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು

೫. ಚಂದ್ರಹಾಸ ಗುಪ್ತ ಅ.ರಾ., (ಸಂ) ೧೯೮೬, **ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೬. ಜವರೇಗೌಡ ದೇ, ೨೦೦೭, **ಕನ್ನಡ ಚಿಂತನೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ನಾರಾಯಣ ಕೆ.ವಿ., ೨೦೦೯, **ಕನ್ನಡ ಜಗತ್ತು ಅರ್ಧಶತಮಾನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮. ಮರುಳಯ್ಯ ಸಾ.ಸಿ. (ಪ್ರ.ಸಂ) ಇತರರು, ೨೦೦೯, **ಕನ್ನಡ ಭಾಷಾ ಪ್ರವೇಶ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೯. ರಮೇಶ್ ಬೇವೂರ, ೨೦೦೦, **ಆಡಳಿತ ಕನ್ನಡ**, ವಾಗ್ದೇವಿ ಬುಕ್ ಹೌಸ್, ಮೈಸೂರು

೧೦. ವೀರಭದ್ರಯ್ಯ, ಸಿ.ಎಂ., ೨೦೦೮, **ಆಡಳಿತ ಕಚೇರಿ ಕನ್ನಡ ಕೈಪಿಡಿ**, ಕರಾವಳಿ ಪ್ರಕಾಶನ, ಮಂಗಳೂರು

೧೧. ಶೇಷಗಿರಾವ್, ಎಲ್.ಎಸ್., (ಪ್ರ.ಸಂ) ಇತರರು, ೨೦೦೬, **ಕನ್ನಡ ಕನ್ನಡಿಗ ಕರ್ನಾಟಕ**, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಅಧ್ಯಾಯ : ಮೂರು

ಆಡಳಿತದಲ್ಲಿ ಕನ್ನಡದ ಬಳಕೆ : ಸಮಸ್ಯೆ ಮತ್ತು ಸವಾಲುಗಳು

೩.೧. ಸಾಮಾಜಿಕ ಸಮಸ್ಯೆ ಮತ್ತು ಸವಾಲುಗಳು

೩.೧.೧. ದ್ವಿಭಾಷಿಕತೆ

೩.೧.೨. ಬಹುಭಾಷಿಕತೆ

೩.೧.೩. ಅನಕ್ಷರತೆ

೩.೧.೪. ಭಾಷಿಕ ಗಡಿಗಳು

೩.೧.೫. ಪ್ರಾದೇಶಿಕ ಭಿನ್ನತೆ

೩.೧.೬. ಸಾಮಾಜಿಕ ಭಿನ್ನತೆ

೩.೧.೭. ಪಾರಂಪರಿಕ ಆಡಳಿತ.

೩.೨. ರಾಜಕೀಯ ಸಮಸ್ಯೆಗಳು ಮತ್ತು ಸವಾಲುಗಳು

೩.೨.೧. ಆಡಳಿತದಲ್ಲಿ ಕನ್ನಡ ಬಳಕೆಯ ಜಾರಿಗೆ ಕ್ರಮ

೩.೨.೨. ಆಡಳಿತದಲ್ಲಿ ಕನ್ನಡ ಬಳಕೆ ಕಡ್ಡಾಯಕ್ಕೆ ವಿರೋಧ

೩.೨.೩. ಆಡಳಿತದಲ್ಲಿ ಕನ್ನಡ ಬಳಕೆ ತಟಸ್ಥ ಮನಸ್ಸುಗಳು

೩.೩. ತಾಂತ್ರಿಕ ಸಮಸ್ಯೆಗಳು ಮತ್ತು ಸವಾಲುಗಳು

೩.೩.೧. ವಾಕ್ಯದೋಷ

೩.೩.೨. ಶಬ್ದದೋಷ

೩.೩.೩. ಅಕ್ಷರದ ಸ್ಥಾನಪಲ್ಲಟದಿಂದುಂಟಾಗುವ ದೋಷಗಳು.

೩.೩.೪. ಗಣಕಯಂತ್ರದ ಬಳಕೆ ಸಂದರ್ಭದಲ್ಲಿ ಎದರಿಸುತ್ತಿರುವ ತಾಂತ್ರಿಕ ಸಮಸ್ಯೆಗಳು

೩.೪. ಆಂತರಿಕ ಸಮಸ್ಯೆಗಳು ಮತ್ತು ಸವಾಲುಗಳು.

೩.೪.೧. ಸರ್ಕಾರದ ರೂಪಿತ ನೀತಿ

೩.೪.೨. ಆಡಳಿತ ಯಂತ್ರ

೩.೪.೩ ಕನ್ನಡ ಬಳಕೆಯ ಮನೋಧರ್ಮ

೩.೪.೪ ತಾತ್ಸಾರ ಹಾಗೂ ನೀರಸ ಮನೋಭಾವ

೩.೪.೫ ಇಂಗ್ಲೀಷಿನ ವ್ಯಾಮೋಹ

೩.೪.೬ ತರಬೇತಿಗಳು

೩.೫. ಆಡಳಿತ ಕನ್ನಡ ಬಳಕೆಯಲ್ಲಿನ ಬಾಹ್ಯ ಸಮಸ್ಯೆಗಳು

೩.೫.೧. ಉನ್ನತ ಶಿಕ್ಷಣದಲ್ಲಿ ಪ್ರಾದೇಶಿಕ ಭಾಷೆಗೆ ಮಾನ್ಯತೆ ಇಲ್ಲದಿರುವುದು.

೩.೫.೨. ಶಿಕ್ಷಣದಲ್ಲಿ ಪೋಷಕರು ಇಂಗ್ಲೀಷ್ ಭಾಷೆಯ ಬೆನ್ನು ಹತ್ತಿರುವುದು.

೩.೫.೩. ಅಧಿಕಾರಿಗಳಿಗೆ & ನೌಕರರಿಗೆ ನಡೆಸುವ ಕನ್ನಡ ಪರೀಕ್ಷೆಗಳು.

೩.೫.೪. ಕನ್ನಡದ ಅಂಕಿಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುವುದು.

ಅಧ್ಯಾಯ : ಮೂರು

ಆಡಳಿತದಲ್ಲಿ ಕನ್ನಡದ ಬಳಕೆ : ಸಮಸ್ಯೆ ಮತ್ತು ಸವಾಲುಗಳು

ಆಡಳಿತದಲ್ಲಿ ಕನ್ನಡದ ಬಳಕೆ ಎಂದಾಕ್ಷಣ ನಮಗೆ ನೆನಪಿಗೆ ಬರುವುದು ವಿವಿಧ ಇಲಾಖೆಗಳಲ್ಲಿನ ಪತ್ರಗಳು, ಕಡತಗಳು, ಅಲ್ಲಿನ ವಿಷಯ ನಿರ್ವಾಹಕರು, ಅಧಿಕಾರಿಗಳು, ಕೊನೆಯದಾಗಿ ವಿಧಾನ ಸೌಧವನ್ನು ನೆನೆಸಿಕೊಳ್ಳುವ ಒಂದು ಮಾನಸಿಕ ಚಿತ್ರಣ. ಹೊರಗಿನಿಂದ ನೋಡಿದಾಗ ಕಾಣದೇ ಇರುವ ನೂರಾರು ವಿಚಾರಗಳು ವಿಷಯದ ಒಳಹೊಕ್ಕು ಅದರ ಆಳಕ್ಕೆ ಹೊದಾಗ ಮಾತ್ರ ಅದರ ಸಂಪೂರ್ಣ ಪರಿಚಯ, ವಿಷಯದ ವಿವರಗಳು, ತಿಳಿಯುತ್ತವೆ. ಊಹೆಗೂ ಅಸಾಧ್ಯವಾಗದ ಕೆಲವೊಂದು ಸಂಗತಿ, ಘಟನೆಗಳ ಬಗ್ಗೆ ಅರಿವಾಗುತ್ತದೆ. ಆಡಳಿತದಲ್ಲಿ ಕನ್ನಡ ಬಳಕೆ ಎಂಬುದೊಂದು ಮೇಲ್ನೋಟಕ್ಕೆ ಸಾಮಾನ್ಯ ವಿಷಯವಾಗಿ ಕಂಡುಬಂದರೂ ಅದರ ಆಳಕ್ಕೆ ಒಳಹೊಕ್ಕು, ನೋಡಿದಾಗ ಗಹನ ಹಾಗೂ ಗಂಭೀರವಾದ ವಿಚಾರಗಳು ಹೊರಬಂದು, ನಮ್ಮನ್ನು ಓರೆಗೆ ಹಚ್ಚುತ್ತವೆ.

ಕೆ.ವಿ.ನಾರಾಯಣ, ಮಹದೇವ ಬಣಕಾರ, ಎಚ್ಚೆಸ್ಕೆ, ದೇ.ಜವರೇಗೌಡ, ಪಾರ್ಥಸಾರಥಿ. ಟಿ.ಎಸ್.ಛಾಯಾಪತಿ ಇನ್ನಿತರ ವಿದ್ವಾಂಸರು ರಚಿಸಿದ ಕೃತಿಗಳಲ್ಲಿ ಆಡಳಿತ ಕನ್ನಡದ ಬಗ್ಗೆ ಚಿಂತನ–ಮಂಥನಗಳು ನಡೆದಿರುವುದು ಕಾಣಸಿಗುತ್ತದೆ. ಹೀಗಿರುವ ನಿಟ್ಟಿನಲ್ಲಿ ಆಡಳಿತದಲ್ಲಿ ಕನ್ನಡ ಬಳಕೆ ಕೆಲವು ವಿಚಾರಗಳ ಮೇಲೆ ನಿಂತಿದೆ.

೧. ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರಬೇಕು ಎಂದು ಪ್ರಯತ್ನ ಪಡುವ ಬಣ ಒಂದೆಡೆಯಾದರೆ.

೨. ಅದನ್ನು ಕಾರ್ಯರೂಪಕ್ಕೆ ತರುವುದೇ ಇನ್ನೊಂದು ಬಣ.

ಆಡಳಿತದಲ್ಲಿ ಕಡ್ಡಾಯ ಕನ್ನಡದ ಬಳಕೆಯನ್ನು ಕಾರ್ಯರೂಪಕ್ಕೆ ತರುವಲ್ಲಿನ ಪ್ರಯತ್ನ ಒಂದು ಸಮಸ್ಯೆಯಾಗಿರದೇ ಸವಾಲೇ ಸರಿ. ಏಕೆಂದರೆ ವಿಭಿನ್ನ ನೆಲೆಯಲ್ಲಿ ಭಿನ್ನ ಭಿನ್ನ ರೀತಿಯಲ್ಲಿ ನಮ್ಮ ಆಡಳಿತದ ಆಯಾಮಗಳು ಹಂಚಿಹೋಗಿವೆ. ಎಲ್ಲ ಆಡಳಿತದ ಆಯಾಮಗಳನ್ನು ಒಂದು ಕಡೆ ಸೇರಿಸುವುದು ಕಷ್ಟ. ಎಲ್ಲರಿಗೂ ಅನುಕುಲವಾಗಲಂಬ ದೃಷ್ಟಿಯಿಂದ ಆಡಳಿತ ಒಂದೇ

ಆಗಿರಲಿ ಎಂಬ ಮನೋಭಾವದಿಂದ ಹಿತಚಿಂತಕರು ಯೋಚಿಸಿ ಮಾಡಿದ ಕೆಲವೊಂದು ಯೋಜನೆಗಳು, ರೂಪುರೇಷೆಗಳು, ಫಲಪ್ರದಾಯತೆಯನ್ನು ನೀಡುತ್ತಿಲ್ಲ ಎನ್ನುವ ಮಾತಲ್ಲಿ ತಪ್ಪಿಲ್ಲ ಎನ್ನಬಹುದು.

ಇದಕ್ಕೆ ಸಂಬಂಧಪಟ್ಟಂತೆ ಅನೇಕ ಚಿಂತನ ಮಂಥನಗಳು ನಡೆದಿರುವುದು ಕಂಡುಬರುತ್ತವೆ. ಚಿಂತನ ಮಂಥನಗಳ ನಡೆಯುವವರ ಮಧ್ಯೆ ಮತ್ತು ಅದನ್ನು ಪ್ರಯೋಗಿಕ (practical) ವಾಗಿ ಜಾರಿಗೆ ತರುವವರ ಮಧ್ಯೆ ಒಂದು ದೊಡ್ಡ ಅಂತರವಿದೆ. ಆ ಅಂತರವೇ ಆಡಳಿತದ ಮಜಲುಗಳು, (ಪತ್ರ, ಕಡತ ಇತ್ಯಾದಿ) ಇದಕ್ಕೆಲ್ಲಾ ಮಿಗಿಲಾಗಿ ಜನತೆ ಮತ್ತು ಆಡಳಿತ ನಡೆಸುವ ಮಧ್ಯೆ ಇರುವ ಎಡರು ತೊಡರುಗಳು.

ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರಬೇಕೆಂದು ರಚಿತವಾದ ಕಟ್ಟುನಿಟ್ಟಾದ ಆಡಳಿತದ ರೂಪುರೇಷೆಗಳೇ ಬೇರೆ. ಅದನ್ನು ಹೇಗೆ ಕಾರ್ಯರೂಪಕ್ಕೆ ತರಬೇಕೆಂದು ಚಿಂತನೆಮಾಡಿ ಕಾರ್ಯರೂಪಕ್ಕೆ ತರಲು ರೂಪಿಸಿದ ಯೋಜನೆಗಳೇ ಬೇರೆ. ಇವೆಲ್ಲದಕ್ಕೆ ಹೆಚ್ಚಾಗಿ ಪ್ರಾಯೋಗಿಕವಾಗಿ ಎಲ್ಲ ಯೋಜನೆಗಳು ಬಳಕೆಗೆ ತಂದಾಗ ಫಲಪ್ರದದಾಯಕವಾಗಿವೆಯೇ? ಇಲ್ಲವೇ? ಎಂಬುದು ಬೇರೆ. ಹೀಗಿರುವಾಗ ಕನ್ನಡದ ಬಳಕೆಯನ್ನು ಕಟ್ಟುನಿಟ್ಟಾಗಿ ಆಡಳಿತದಲ್ಲಿ ಬಳಕೆ ಮಾಡಬೇಕೆಂದು ಆದೇಶಗಳಿದ್ದರೂ ಕಾರ್ಯರೂಪಕ್ಕೆ ತರಬೇಕಾದ ವರ್ಗಗಳ ಮಧ್ಯೆ ಅವು ಕಾರ್ಯರೂಪಕ್ಕೆ ಬಾರದೆ ಸೋಲುತ್ತಿವೆ ಎಂಬುದು ಸತ್ಯ. ಈ ಕಾರಣಕ್ಕಾಗಿ ಇದೊಂದು ಸಮಸ್ಯೆಯಾಗಿ ಪರಿಣಮಿಸಿದೆ.

"practice man make as a perfect" ಎಂಬ ವಾಕ್ಯದಂತೆ, ಪ್ರಾಯೋಗಿಕವಾಗಿ ಮನುಷ್ಯ ತನ್ನ ಕೆಲಸಗಳನ್ನು ಹೆಚ್ಚು ಹೆಚ್ಚು ಮಾಡಿದಂತೆ ವಿಷಯದಲ್ಲಿ ಪರಿಪೂರ್ಣನಾಗಿ ಸಮರ್ಥನಾಗುತ್ತಾ ಹೋಗುತ್ತಾನೆ. ಅದೇ ರೀತಿ ಆಡಳಿತದಲ್ಲಿ ಕನ್ನಡವನ್ನು ಬಳಸುತ್ತಾ ಹೋದಂತೆಲ್ಲ ಅದು ತನ್ನ ವಿಸ್ತಾರವನ್ನು ಹೆಚ್ಚಿಸಿಕೊಳ್ಳುತ್ತಾ ಎಲ್ಲಾ ಕಡೆಗಳಲ್ಲಿ ವಿವಿಧ ಆಯಾಮದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸುತ್ತಾ ಹೋಗುತ್ತದೆ ಎಂಬುದು ಸತ್ಯವಾದದ್ದಾಗಿದೆ. ಪ್ರಾಯೋಗಿಕವಾಗಿ, ಅದನ್ನು ಬಳಕೆಗೆ ತಂದಾಗ ಅಲ್ಲಿ ಸಮಸ್ಯೆಗಳೇನು ಎಂಬುದು ನಮ್ಮ ಗಮನಕ್ಕೆ ಬರುತ್ತದೆ.

ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಉದ್ಭವಿಸಿದ ಸಮಸ್ಯೆಗಳು.

(೧) ಆಡಳಿತದಲ್ಲಿ ಕನ್ನಡ ಬಳಕೆಯನ್ನು ಜಾರಿಗೆ ತರುವಲ್ಲಿನ ಸಮಸ್ಯೆ.

(೨) ಆಡಳಿತದಲ್ಲಿ ಕನ್ನಡ ಬಳಕೆ ಮಾಡುವಲ್ಲಿನ ಸಮಸ್ಯೆಗಳು.

(೩) ಆಡಳಿತದಲ್ಲಿ ಕನ್ನಡ ಬಳಕೆಯನ್ನು ಜಾರಿಗೆ ತಂದಾಗ ಉಂಟಾದ ಸಮಸ್ಯೆಗಳು.

ಆಡಳಿತದಲ್ಲಿ ಕನ್ನಡ ಬಳಕೆಯನ್ನು ಆದೇಶಗಳ ಮುಖಾಂತರ ಕಡ್ಡಾಯವಾಗಿ ಜಾರಿಗೆ ತಂದದ್ದಾಯಿತು, ಅಲ್ಲದೆ ಅದನ್ನು ಕರ್ನಾಟಕದಲ್ಲಿ ಅನುಷ್ಠಾನಗೊಳಿಸುವಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಿ ಅನುಷ್ಠಾನಕ್ಕೆ ತರುವುದೇ ಒಂದು ಮಹತ್ಕಾರ್ಯ. ಆಡಳಿತದಲ್ಲಿ ಕನ್ನಡ ಬಳಕೆಯನ್ನು ಜಾರಿಗೆ ತಂದಾದ ನಂತರ ಕಾರ್ಯರೂಪಕ್ಕೆ ಲಿಖಿತ/ಬರವಣಿಗೆಯ ಮುಖಾಂತರ ತರುವ ಸಂದರ್ಭದಲ್ಲಿನ ಸಾಮಾನ್ಯವಾಗಿ ಪ್ರಾಯೋಗಿಕವಾಗಿ ಕನ್ನಡದ ಬಳಕೆಯನ್ನು ಮಾಡುವ ಸಂದರ್ಭದಲ್ಲಿ ಕಾಣಸಿಗುತ್ತದೆ.

ಆಡಳಿತದಲ್ಲಿ ಕನ್ನಡ ಬಳಕೆ ಎಂಬ ವಿಚಾರವನ್ನು ಕೇವಲ ನಾವು ಒಂದು ದೃಷ್ಟಿಕೋನದಲ್ಲಿ ನೋಡದೆ ಹಲವಾರು ದೃಷ್ಟಿಕೋನಗಳಲ್ಲಿ ವಿಚಾರ ಮಾಡಬೇಕಾದ ಸ್ಥಿತಿ ಇಂದು ಬಂದೊದಗಿದೆ. ಕಾರಣವೇನೆಂದರೆ, ಆಡಳಿತದಲ್ಲಿ ಕನ್ನಡ ಬಳಕೆಯ ಪರಿಕಲ್ಪನೆಯು ಸೀಮಿತಾರ್ಥದಲ್ಲಿ ಬಳಸಲಾಗುತ್ತಿರುವುದನ್ನು ಹಲವಾರು ಸಂದರ್ಭಗಳಲ್ಲಿ ಕಾಣುತ್ತೇವೆ. ಕಾರಣ ಆಡಳಿತದಲ್ಲಿ ಕನ್ನಡ ಬಳಕೆ ಎಂಬುದು ಒಂದೇ ದೃಷ್ಟಿ ಕೋನಗಳಲ್ಲಿ ವಿಚಾರ ಮಾಡದೆ ವಿವಿಧ ಆಯಾಮಗಳಲ್ಲಿ ವಿಚಾರ ಮಾಡಬೇಕಾಗಿದೆ.

ಆಡಳಿತದಲ್ಲಿ ಕನ್ನಡದ ಬಳಕೆಯು ಹೇಗಿರಬೇಕೆಂದರೆ, ಸರಳವಾಗಿರಬೇಕು, ಸ್ಪಷ್ಟವಾಗಿರಬೇಕು, ಜನಸಾಮಾನ್ಯರಿಗೆ ಅರ್ಥವಾಗುವಂತಿರಬೇಕು, ಬಳಸುವ ವಾಕ್ಯಗಳು ಚಿಕ್ಕದಾಗಿರಬೇಕು, ಸಂಯುಕ್ತ ವಾಕ್ಯ ರಚನೆಗೆ ಅವಕಾಶವಿಲ್ಲ, ವಾಕ್ಯದಲ್ಲಿ ಅಲಂಕಾರ, ಧ್ವನಿ, ದ್ವಂದ್ವಾರ್ಥ, ಉತ್ಪ್ರೇಕ್ಷೆ ಮೊದಲಾದ ಮೀಮಾಂಸೆಯ ಪದಗಳ ಬಳಕೆ ಮಾಡಕೂಡದು, ವಿಡಂಭನೆ, ಸಂದಿಗ್ಧತೆ, ಪ್ರಶಂಸೆ, ಮುಂತಾದ ವಿಚಾರಗಳನ್ನು ವಾಕ್ಯದಲ್ಲಿ ಬಳಕೆ ಆಗದಂತೆ ನೋಡಿ ಕೊಳ್ಳುವುದು, ಹೇಳುವ ವಿಷಯವನ್ನು ಹೆಚ್ಚು ಅವಲಂಬಿಸಬಾರದು ಎಂಬ ಸಾಮಾನ್ಯ ಲಕ್ಷಣಗಳನ್ನು ಗಮನಿಸಿದ್ದೇವೆ, ಇದನ್ನು ನೋಡಿದಾಗ ಆಡಳಿತದಲ್ಲಿ ಕನ್ನಡದ ಬಳಕೆಯನ್ನು ಒಟ್ಟುಗೂಡಿಸಿ ಅವುಗಳ ಲಕ್ಷಣ ಹಾಗೂ ಬರವಣಿಗೆಯನ್ನು ಕುರಿತಾಗಿ ವಿವರಿಸಿದ್ದನ್ನು ಹಲವಾರು ಕೃತಿಗಳಲ್ಲಿ ಕಾಣುತ್ತೇವೆ.

ಆಡಳಿತದಲ್ಲಿ ಕನ್ನಡದ ಬಳಕೆಯನ್ನು ಮೂರು ಹಂತಗಳಲ್ಲಿ ವಿಭಾಗಿಸಿ, ಅವುಗಳಲ್ಲಿನ ಸಮಸ್ಯೆ ಮತ್ತು ಸವಾಲುಗಳನ್ನು ಗುರುತಿಸಲಾಗಿದೆ.

೧. ಜನರು ಪ್ರಭುತ್ವ (ಅಧಿಕಾರಿಗಳಿಗೆ) ಕ್ಕೆ ಬರೆಯುವಾಗ ಬಳಕೆಯಲ್ಲಿ ಬಳಸುವ ಆಡಳಿತ ಕನ್ನಡ.

೨. ಪ್ರಭುತ್ವ-ಪ್ರಭುತ್ವಗಳ ನಡುವಿನ ಬಳಕೆಯ ಸಂದರ್ಭದಲ್ಲಿನ ಆಡಳಿತ ಕನ್ನಡ (ಸಿಬ್ಬಂದಿ/ ಅಧಿಕಾರಿ-ಅಧಿಕಾರಿಗಳ ಮದ್ಯೆ)

೩. ಪ್ರಭುತ್ವ-ಜನರಿಗೆ ಬರೆಯಲು ಬಳಸುವಾಗಿನ ಬಳಕೆಯ ಆಡಳಿತ ಕನ್ನಡ.

ಈ ಮೇಲಿನ ಮೂರು ಹಂತಗಳನ್ನು ಗಮನಿಸಿದಾಗ ಆಡಳಿತವು ಈ ಮೂರು ಹಂತದಲ್ಲಿ ನಡೆಯುತ್ತದೆ. ಭಾಷಿಕವಾಗಿ ಮತ್ತು ಪ್ರಾಯೋಗಿಕವಾಗಿ ಆಡಳಿತ ಕನ್ನಡವನ್ನು ಜಾರಿಗೆ ತರುವುದು ಕೂಡ ಈ ಮೂರು ಹಂತದಲ್ಲಿಯೇ. ಹೀಗಾಗಿ ಈ ಮೂರು ಹಂತದಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆ ಸ್ಪಷ್ಟ ಮತ್ತು ಶುದ್ಧವಾಗಿರಬೇಕು ಇಲ್ಲವಾದರೆ ಹಲವಾರು ಸಮಸ್ಯೆಗಳಿಗೆ ಕಾರಣವಾಗುತ್ತದೆ. ಇಂತಹ ಸಮಸ್ಯೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ವಿವರಿಸುವ ಮತ್ತು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿನ ಸಮಸ್ಯೆಗಳು

೧. ಸಾಮಾಜಿಕ ಸಮಸ್ಯೆ ಮತ್ತು ಸವಾಲುಗಳು

೨. ತಾಂತ್ರಿಕ ಸಮಸ್ಯೆ ಮತ್ತು ಸವಾಲುಗಳು

೩. ರಾಜಕೀಯ ಸಮಸ್ಯೆ ಮತ್ತು ಸವಾಲುಗಳು

೪. ಆಂತರಿಕ ಸಮಸ್ಯೆ ಮತ್ತು ಸವಾಲುಗಳು.

೫. ಆಡಳಿತ ಕನ್ನಡ ಬಳಕೆಯಲ್ಲಿನ ಬಾಹ್ಯ ಸಮಸ್ಯೆಗಳು

೩.೧. ಸಾಮಾಜಿಕ ಸಮಸ್ಯೆ ಮತ್ತು ಸವಾಲುಗಳು

ಕನ್ನಡವನ್ನು ಆಡಳಿತ ಭಾಷೆಯಾಗಿ ಸಂಪೂರ್ಣವಾಗಿ ಜಾರಿಗೆ ತರಬೇಕೆನ್ನುವ ವಿಚಾರಗಳು ಸಾಮಾಜಿಕ ವಲಯದಲ್ಲಿ ಮೂಡಿಬಂದಿರುವುದು ಸರಿ. ಆದರೆ ಸಾಮಾಜಿಕ ವಲಯದಲ್ಲಿ ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಕೆಲವೊಂದು ಸಮಸ್ಯೆಗಳಿರುವುದನ್ನು ಕಂಡುಕೊಳ್ಳಲಾಗಿದೆ.

೩.೧.೧. ದ್ವಿಭಾಷಿಕತೆ

ಒಂದು ಭಾಷೆಯ ಅಳಿವು ಉಳಿವು ಆ ಭಾಷೆಯನ್ನು ಆಡುವ ಜನಸಮೂಹದ ಮೇಲೆ ನಿರ್ಧಾರವಾಗಿರುತ್ತದೆ. ಭಾಷಿಕವಾಗಿ ಬಳಕೆಯನ್ನು ಕಡಿಮೆ ಮಾಡಿದಂತೆ ಭಾಷೆ ಅಳಿವಿನಂಚಿಗೆ ಬರುತ್ತದೆ. ಕನ್ನಡ ಭಾಷೆಯನ್ನೂ ಕೂಡ ಕನ್ನಡ ಭಾಷಿಕರು ಸುಮಾರು ೨೦೦೦ ವರ್ಷಗಳಿಂದ ಬಳಸುತ್ತಾ ಬಂದಿರುವುದಕ್ಕೆ ಕನ್ನಡ ಇಂದು ಜೀವಂತವಾದ ಭಾಷೆಗಳಲ್ಲಿ ಒಂದಾಗಿದೆ. ಈ ಭಾಷೆಯನ್ನು ಆಡಳಿತದಲ್ಲಿ ಸಂಪೂರ್ಣವಾಗಿ ಜಾರಿಗೆ ತರಲು ಸಾಧ್ಯವಾಗುತ್ತಿಲ್ಲವೆಂಬ ಅಳಲು ಕೇಳಿಬರುತ್ತಿದೆ.

ಭಾಷಾವಾರು ರಾಜ್ಯಗಳ ವಿಂಗಡಣೆಯ ಪೂರ್ವದಲ್ಲಿ ಕರ್ನಾಟಕದಲ್ಲಿ ಹಲವಾರು ಭಾಷೆಗಳನ್ನು ಮಾತನಾಡುವ ಜನರು ವಾಸವಾಗಿದ್ದರು. ಆದರೆ ಭಾಷಾವಾರು ರಾಜ್ಯಗಳ ವಿಂಗಡಣೆಯ ನಂತರದಲ್ಲಿ ಕರ್ನಾಟಕಕ್ಕೆ ಕನ್ನಡ ರಾಜ್ಯದ ಭಾಷೆಯಾಗಿ ರೂಪುಗೊಂಡಿತು. ಆದರೆ ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ನೆಲೆಯೂರಿದ್ದ ಬೇರೆ ಭಾಷಿಕರು ಇದಕ್ಕೆ ಒಗ್ಗಿಕೊಳ್ಳುವ ಸಂದರ್ಭ ಬಂದೊದಗಿತು. ಹಾಗೂ ಆಗಿನ ಸಂದರ್ಭದಲ್ಲಿ ಅನಿವಾರ್ಯವೂ ಆಗಿತ್ತು.

ಇನ್ನೊಂದೆಡೆ ಕರ್ನಾಟಕದಲ್ಲಿ ವಾಸಿಸುವರಲ್ಲಿ ಮಾತೃಭಾಷೆ ಬೇರೆಯಾಗಿದ್ದು ಮತ್ತು ಸಾಮಾನ್ಯವಾಗಿ ವ್ಯವಹಾರಿಕ ಭಾಷೆ ಕನ್ನಡವಾಗಿರುವ ಹಲವಾರು ಜನಸಮೂಹ ಕರ್ನಾಟಕದಲ್ಲಿ ನೆಲೆಯೂರಿರುವುದು ಗೋಚರಿಸುತ್ತದೆ ಹಾಗೂ ಇವರು ಇಲ್ಲಿಯೇ ತಮ್ಮ ಅಸ್ಥಿತ್ವವನ್ನೂ ಸ್ಥಾಪಿಸಿದ್ದೂ ಉಂಟು. ಇಂತಹವರಿಗೆ ಆಡಳಿತದಲ್ಲಿ ಕನ್ನಡವನ್ನು ಕಡ್ಡಾವಾಗಿ ಜಾರಿಗೊಳಿಸಬೇಕೆಂಬ ಆದೇಶಗಳು ಎಷ್ಟು ಸಹಕಾರಿಯಾಗಬಲ್ಲವು? ಎಂಬ ಪ್ರಶ್ನೆ ಮೂಡುತ್ತದೆ.

ಉದಾರಿಸುವುದಾದರೆ ಕರ್ನಾಟಕದಲ್ಲಿ ನೆಲೆಯೂರಿರುವ ಕನ್ನಡದವರೇ ಆದ ಲಂಬಾಣಿ ಜನತೆ. ಇವರ ಮಾತೃಭಾಷೆ ಲಂಬಾಣಿಯಾಗಿದ್ದು ವ್ಯಾವಹಾರಿಕವಾಗಿ ಹೊರಗಡೆ ಸಾಮಾಜಿಕವಾಗಿ ಕನ್ನಡವನ್ನು ಮಾತನಾಡುತ್ತಾರೆ. ಆದರೆ ಈ ಜನಾಂಗಕ್ಕೆ ಮೌಖಿಕವಾಗಿ ಭಾಷೆ ಇದ್ದು ಅದನ್ನು ತಮ್ಮ ವಲಯದಲ್ಲಿ ಸೀಮಿತವಾಗಿಸಿಕೊಂಡು ದಿನನಿತ್ಯದ ವ್ಯವಹಾರಗಳನ್ನು ನಡೆಸುತ್ತಿರುವುದು ಕಂಡುಬರುತ್ತದೆ. ಈ ಜನಾಂಗಕ್ಕೆ ಲಿಖಿತ ಬರವಣಿಗೆಯ ಭಾಷೆ ಇಲ್ಲವಾದ್ದರಿಂದ ಕನ್ನಡವನ್ನೇ ಅನುಸರಿಸಬೇಕಾಗುತ್ತದೆ. ಇದರಲ್ಲಿಯೇ ವ್ಯವಹರಿಸಬೇಕಾಗುತ್ತದೆ.

ಇಂತಹ ಹಲವಾರು ದ್ವಿಭಾಷಿಕರು ತಮ್ಮ ಮಾತೃಭಾಷೆಯನ್ನು ಮನೆಯಲ್ಲಿ ಮಾತಾಡುತ್ತ ವ್ಯವಹಾರಿಕವಾಗಿ ಕನ್ನಡವನ್ನು ಬಳಸುತ್ತಿರುವ ಉದಾಹರಣೆಗಳು ಕಾಣಸಿಗುತ್ತವೆ. ತೆಲುಗು– ಕನ್ನಡ, ಹಿಂದಿ–ಕನ್ನಡ, ಉರ್ದು–ಕನ್ನಡ, ಕೊಡವ–ಕನ್ನಡ, ಮಳೆಯಾಳಿ–ಕನ್ನಡ, ತುಳು–ಕನ್ನಡ ಈ ರೀತಿಯಾಗಿ ದ್ವಿಭಾಷಿಕವಾಗಿ ಅವಲಂಬನೆಯಾಗಿರುವ ಜನಸಮೂಹಗಳು ಕರ್ನಾಟಕದಲ್ಲಿ ವಾಸಿಸುತ್ತಿವೆ. ಆದರೆ ಇವರೆಲ್ಲರಿಗೆ ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಮತ್ತು ಬಳಸುವಲ್ಲಿ ಒಮ್ಮತವಿದೆಯೇ? ಅಥವಾ ಇಲ್ಲವೆ? ಎಂದು ಹೇಳಲಾಗದು. ದ್ವಿಭಾಷಿಕರು ಆಡಳಿತದಲ್ಲಿ ಕನ್ನಡವನ್ನು ಬಳಸುವಲ್ಲಿ ಒತ್ತಾಯಪೂರ್ವಕವಾಗಿ ಬಳಸುತ್ತಿರುವುದು ಅಲ್ಲಲ್ಲಿ ಕಂಡುಬರುತ್ತದೆ.

ಒತ್ತಾಯ ಪೂರ್ವಕವಾಗಿ ಹೇರಲಾದ ಯಾವ ವಿಷಯವೂ ಪರಿಣಾಮಕಾರಿಯಾಗಲಾರದು ಎಂಬ ನಿಲುವು ಸಹಜವಾದದ್ದು. ಇಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿರುವ ದ್ವಿಭಾಷಿಕರಲ್ಲಿ ಆಡಳಿತದಲ್ಲಿ ಕನ್ನಡವನ್ನು ಬಳಸುವಲ್ಲಿ ನಿರೀಕ್ಷೆಗಳನ್ನು ಇಡಬಹುದೇ? ಇಟ್ಟರೂ ಎಷ್ಟರ ಮಟ್ಟಿಗೆ ಇವು ಸಾಧ್ಯವೆಂಬ ಪ್ರಶ್ನೆ ಮತ್ತೆ ಮೂಡುತ್ತದೆ. ಉತ್ತರವಾಗಿ ಹೇಳುವುದಾದರೆ 'ಮಾತೃಭಾಷೆ ಒಂದೇ ಒಲಂ' ಎನ್ನುವ ವೀರಭದ್ರಯ್ಯ ಸಿ.ಎಂ. ಇವರ ಆಡಳಿತ ಕಚೇರಿ ಕನ್ನಡ ಕೈಪಿಡಿ ಪುಟ ಸಂಖ್ಯೆ –೧೧ ರಲ್ಲಿ ತಿಳಿಸಲಾದ ವಾಕ್ಯದಂತೆ ಮಾತೃಭಾಷೆಯ ಮೇಲೆ ಇದ್ದಷ್ಟು ಮತ್ತು ಇರುವಷ್ಟು ಪ್ರೀತಿ ಬೇರೆ ಭಾಷೆ ಮೇಲೆ ಇರಲಾರದು. ಈ ಹಿನ್ನೆಲೆಯಲ್ಲಿ ದ್ವಿಭಾಷಿಕರಿಗೆ ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕೆಂಬ ಆದೇಶಗಳು ಎಷ್ಟು ಪ್ರತಿಫಲವನ್ನು ನೀಡುತ್ತವೆನ್ನುವುದು ಯಕ್ಷಪ್ರಶ್ನೆಯೂ ಆಗಿದೆ ಮತ್ತು ಸವಾಲೂ ಆಗಿದೆ.

೩.೧.೨. ಬಹುಭಾಷಿಕತೆ

ಕರ್ನಾಟಕವನ್ನು ಇತಿಹಾದ ದೃಷ್ಟಿಕೊನದಿಂದ ನೋಡಿದಾಗ ಅನೇಕ ರಾಜಮನೆತನಗಳು ಕರ್ನಾಟಕವನ್ನು ಆಳಿಹೋಗಿವೆ. ಕರ್ನಾಟಕದ ಪ್ರದೇಶಗಳೆಲ್ಲವೂ ಸ್ವತಂತ್ರಪೂರ್ವದಲ್ಲಿ ಹಲವಾರು ವಿಭಾಗಗಳಾಗಿ ಹರಿದು ಹಂಚಿಹೋಗಿತ್ತು. ಅದನ್ನೆಲ್ಲಾ ಒಂದುಗೂಡಿಸಿ ಕರ್ನಾಟಕವೆಂದು ನಾಮಕರಣ ಮಾಡಿ ಆಡಳಿತದ ಹಿತದೃಷ್ಟಿಯಿಂದ ಗಡಿಗಳನ್ನು ಗುರುತಿಸಲಾಯಿತು. ಆದರೆ ಗುರುತಿಸಲಾದ ಗಡಿಗಳು ಕನ್ನಡವನ್ನು ಮಾತನಾಡುವ ಜನರೆಲ್ಲವನ್ನೂ ಒಂದುಗೂಡಿಸಲು ಸಾಧ್ಯವಾಗಲಿಲ್ಲ. ಮೇಲಾಗಿ ಗಡಿಯಿಂದಾಚೆಗೆ ಇರುವ ಕನ್ನಡಿಗರನ್ನೂ ಕರ್ನಾಟಕಕ್ಕೆ ಸೇರಿಸಲು ಸಾಧ್ಯವಿರಲಿಲ್ಲ. ಹೀಗಾಗಿ ಕೇವಲ ಆಡಳಿತದ ಹಿತದೃಷ್ಟಿಯಿಂದ ಈ ಗಡಿಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡವು ಎನ್ನಬಹುದು.

ಇಂದಿನ ದಿನಮಾನಗಳಲ್ಲಿ ಕರ್ನಾಟಕಕ್ಕೆ ಬೇರೆ ರಾಜ್ಯಗಳಿಂದ ಮತ್ತು ದೇಶ ವಿದೇಶಗಳಿಂದ ಉದ್ಯೋಗವನ್ನರಸಿ ವಲಸಿ ಬರುವವರ ಸಂಖ್ಯೆ ದಿನೆದಿನೆ ಹೆಚ್ಚಾಗುತ್ತಿದ್ದು ಕರ್ನಾಟಕ ಬಹುಭಾಷಿಗರಿಂದ ತುಂಬಿಹೋಗಿದೆ. ಕರ್ನಾಟಕ ರಾಜ್ಯದ ಭಾಷೆ ಕನ್ನಡವೆಂದು ಘೋಷಿಸಿದ ನಂತರದಲ್ಲಿ ಆಡಳಿತವೆಲ್ಲಾ ಕನ್ನಡದಲ್ಲಿಯೇ ನಡೆಸಬೇಕೆಂಬ ನೀತಿ ನಿಯಮಗಳನ್ನೂ ಜಾರಿಗೊಳಿಸಲಾಗಿರುವುದು ಸರಿಯಷ್ಟೆ. ಆದರೆ ಕರ್ನಾಟಕದಲ್ಲಿ ಕನ್ನಡವನ್ನು ಹೊರತುಪಡಿಸಿ ತೆಲುಗು, ಹಿಂದಿ, ಉರ್ದು, ತಮಿಳು, ತುಳು,

ಕೊಡವ, ಮಲೆಯಾಳಿ, ಮತ್ತಿತರ ಭಾಷೆಗಳನ್ನು ಮಾತನಾಡುವ ಭಾಷಿಕರಿದ್ದಾರೆ. ಈ ಹಿನ್ನಲೆಯಲ್ಲಿ ನೋಡಿದಾಗ ಕರ್ನಾಟಕ ಒಂದೇ ಭಾಷೆ ಯನ್ನು ಮಾತನಾಡುವ ಜನರನ್ನು ಹೊಂದಿರದೆ ಬಹು ಭಾಷೆಗಳನ್ನು ಮಾತನಾಡುವ ಭಾಷಿಕರನ್ನು ಹೊಂದಿದೆ. ಇವರಲ್ಲಿ ವಿಚಾರಗಳು, ವೈಚಾರಿಕ ಭಾವನೆಗಳು, ವ್ಯಕ್ತಿಗತ ನೆಲೆಗಳಲ್ಲಿನ ವಿಚಾರ ವಿನಿಮಯಗಳು ಬೇರೆ ಬೇರೆಯಾಗಿಯೇ ಇರುತ್ತವೆ. ಈ ಎಲ್ಲಾ ಬಹುಭಾಷಿಕರನ್ನು ಒಂದೇ ಸೂರಿನಡಿ ತರುವುದು ತುಂಬಾ ಕಷ್ಟದ ಕಾರ್ಯವಾಗಿದೆ. ಇಂತಹದರಲ್ಲಿ ಇವರೆಲ್ಲರಿಗೂ ಅನ್ವಯವಾಗುವಂತೆ ಒಂದೇ ಆಡಳಿತದ ಸೂತ್ರಗಳನ್ನು ತಿಳಿಸಿದಲ್ಲಿ ಅವುಗಳನ್ನು ಒಪ್ಪುವ ಮನಸ್ಸು ಬಹುಭಾಷಿಕರಲ್ಲಿ ಇದೆಯೇ? ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ತಾತ್ವಿಕವಾಗಿ ಒಂದೇ ತಾಯಿ ಮಕ್ಕಳನ್ನೇ ಒಂದುಗೂಡಿಸುವುದು ಈಗಿನ ಸಂದರ್ಭದಲ್ಲಿ ಕಷ್ಟವಾಗಿರುವಾಗ, ಸಾಮಾಜಿಕವಾಗಿ ಬಹುಭಾಷಿಗರನ್ನು ಒಂದೇ ಆಡಳಿತದ ದೃಷ್ಟಿಕೋನದಲ್ಲಿ ನೋಡುವುದು ಎಷ್ಟು ಸಮಂಜಸತೆ ಎನಿಸುವುದೆಂಬ ವಿಚಾರ ತಲೆದೋರುತ್ತದೆ.

ಬಹುಭಾಷಿಗರು ನೆಲೆಯೂರಿರುವ ಕರ್ನಾಟಕದಲ್ಲಿ ಆಡಳಿತದ ಹಿತದೃಷ್ಟಿಯಿಂದ ಕೈಗೊಳ್ಳಲಾದ ಆದೇಶಗಳು, ನೀತಿಗಳು, ನಿಯಮಗಳು, ಎಷ್ಟು ಪ್ರಭಾವವನ್ನು ಬೀರಬಲ್ಲವು ಎಂಬ ವಿಚಾರವನ್ನು ಮನಗಾಣಬೇಕಾಗಿದೆ. ಒಂದುವೇಳೆ ಬೀರಲಾರವು ಎಂಬ ಪ್ರಶ್ನೆಗಳು ಬಂದಲ್ಲಿ ಅದಕ್ಕೆ ಪರ್ಯಾಯ ವ್ಯವಸ್ಥೆಯನ್ನು ರೂಪಿಸಬೇಕಾದ ಸ್ಥಿತಿ ಬರುವುದು ಸಹಜ. ಬೀರುವವು ಎಂದಾದಲ್ಲಿ ಎಷ್ಟರ ಮಟ್ಟಿಗೆ ಬೀರುತ್ತವೆ ಎಂಬುದು ತಿಳಿಯಬೇಕಾಗಿದೆ.

ವಿಶಾಲವಾದ ಕರ್ನಾಟಕದಲ್ಲಿ ಒಂದೇ ಭಾಷೆ ಒಂದೇ ಮತ ಒಂದೇ ಕುಲದ ಜನರು ವಾಸಿಸುತ್ತಿಲ್ಲ. ಎಲ್ಲಾ ಭಾಷೆಯ, ಎಲ್ಲಾ ಮತದ ಜನರು ಕರ್ನಾಟಕದಲ್ಲಿ ವಾಸಿಸುತ್ತಿದ್ದಾರೆ. ಕರ್ನಾಟಕ ಬಹುಭಾಷಿಗರಿಗೆ ಆಶ್ರಯ ತಾಣವಾಗಿದೆ. ತೆಲುಗು, ಮಲೆಯಾಳಂ, ಮರಾಠಿ, ತಮಿಳು, ಹಿಂದಿ, ಉರ್ದು ಭಾಷೆಗಳನ್ನು ತಮ್ಮ ಮಾತೃ ಭಾಷೆಯನ್ನಾಗಿಸಿಕೊಂಡ ಜನರು ಕನಾಟಕದ ಗಡಿ ಜಿಲ್ಲೆಗಳಲ್ಲಿ ಸಿಗುತ್ತಾರೆ. ಅನೇಕ ಭಾಷೆಗಳಿಗೆ ಆಶ್ರಯ ನೀಡಿದ ಕರ್ನಾಟಕದಲ್ಲಿ ಅನೇಕ ಸಮುದಾಯಗಳು ಕಾಣಸಿಗುತ್ತವೆ.

ಗಡಿನಾಡ ಜಿಲ್ಲೆಗಳ ಗಡಿಭಾಗದಲ್ಲಿ ಬಳಕೆಯಾಗುವ ಭಾಷೆಯ ಕೆಲವು ಪಾರಿಭಾಷಿಕ ಪದಗಳು ಅದರ ಕೆಲವು ಶಬ್ದಗಳು ನಮ್ಮ ಆಡಳಿತದಲ್ಲಿ ಸ್ವೀಕೃತಿಯಾಗಿರುವುದು ಮತ್ತು ಸ್ವೀಕೃತಿಯಾಗುತ್ತಿರುವುದು ಒಪ್ಪಲೇಬಹುದಾದ ಸಂಗತಿ. ಸಹಜವಾಗಿ ಆ ಪದಗಳು ಆಡಳಿತದಲ್ಲಿ ಸೇರ್ಪಡೆಗೊಂಡಿವೆ ಬೇರೆ ಭಾಷೆಯಿಂದ ಸ್ವೀಕರಿಸಿದ ಭಾಷೆಯ ಪದಗಳು ಕನ್ನಡದಲ್ಲಿ ಹಾಗೆ ಮುಂದುವರೆದುಕೊಂಡು ಬಂದಿರುವುದು ಸ್ಪಷ್ಟವಾಗಿ ಗೋಚರಿಸುತ್ತವೆ. ಅದನ್ನು ಹಾಗೆ ಆಡಳಿತದ ಪದಗಳನ್ನಾಗಿ ಮಾರ್ಪಡಿಸಿಕೊಂಡು ಆಡಳಿತದಲ್ಲಿ ಬಳಸಿದ್ದು ನಮ್ಮ ಮೌನ ಒಪ್ಪಿಗೆಯೇ ಸರಿ. ಆದರೆ ಆ ಪದಗಳು ಆಡಳಿತ ಕನ್ನಡದಲ್ಲಿ ಬೆರೆತು ಹೋಗಿವೆ. ಬಹುಭಾಷಿಗರು ವಾಸವಿರುವ ಕರ್ನಾಟಕದಲ್ಲಿ ಆಡಳಿತ ಕನ್ನಡ ಜಾರಿಯಾಗುತ್ತಿಲ್ಲ ಎಂಬುದಕ್ಕೆ ಇರುವ ಸಮಸ್ಯೆಗಳು ಕೆಲವೊಂದು ವಿಚಾರಗಳು ಕೆಳಕಂಡಂತಿವೆ.

೧) ಬಹುಭಾಷಿಗರು ಮಾತನಾಡುವ ಮತ್ತು ಗಡಿನಾಡ ರಾಜ್ಯಗಳಲ್ಲಿ ಬಳಕೆಯಾಗುವ ಭಾಷೆಯ ಕೆಲವು ಪದಗಳನ್ನು ಆಡಳಿತ ಕನ್ನಡದಲ್ಲಿ ಸ್ವೀಕರಣ ಮತ್ತು ಬಳಕೆ ಮಾಡುತ್ತಿರುವುದು ಸತ್ಯ ಸಂಗತಿ. ಹಾಗಾಗಿ ಇದೊಂದು ಸಮಸ್ಯೆಯಾಗಿದೆ. ಈ ಸಮಸ್ಯೆಯ ನಿವಾರಣೆಗಾಗಿ ಆಡಳಿತದಲ್ಲಿ ಬಹುಭಾಷಿಗರಿಗೆ ಸಂಬಂಧಪಟ್ಟಂತೆ ಏಕಪದಗಳು ರೂಡಿಗೆ ಬರಬೇಕಾಗಿದೆ. ಇದರ ಅರ್ಥ ಪಾರಿಭಾಷಿಕ ಪದಗಳ ರಚನೆಯಾಗಿಲ್ಲ ಎಂದು ಅರ್ಥವಲ್ಲ. ಈಗಾಗಲೇ ಇಲಾಖಾ ಪಾರಿಭಾಷಿಕ ಪದಗಳು ರಚನೆಯಾಗಿದ್ದು ಇಲಾಖೆಗಳಿಗೆ ಸಂಬಂಧಪಟ್ಟಂತೆ ಸಂವಾದಿ ಪದಗಳು ರಚನೆಗೊಂಡಿದ್ದು ಅವುಗಳು ಜಾರಿಯಾಗುತ್ತಿಲ್ಲ ಎನ್ನುವ ಅರ್ಥವಷ್ಟೆ.

೨) ಆಡಳಿತದ ವಿವಿಧ ವಲಯಗಳು ಆ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು, ಮತ್ತು ಸಿಬ್ಬಂದಿ ವರ್ಗದವರು ಕನ್ನಡ ಮಾತ್ರ ಭಾಷೆಯನ್ನಾಗಿ ಮಾತನಾಡುವುದು ಸಹಜವಾದ ಸಂಗತಿ. ಅದರೆ ಕನ್ನಡ ಬರುತ್ತಿದ್ದರೂ ಕನ್ನಡವನ್ನು ಮಾತನಾಡದೇ ಅಲ್ಲಿನ ಪ್ರಾದೇಶಿಕವಾಗಿ ಪ್ರಭಾವ ಬೀರಿರುವ ಭಾಷೆಯಲ್ಲಿಯೇ ಮಾತನಾಡುವುದು ಕಂಡು ಬರುತ್ತಿದ್ದು ಇದರಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ ಒಂದನೆಯದಾಗಿ ಕನ್ನಡ ಭಾಷೆಯ ಬಗೆಗಿನ ನಿರಭಿಮಾನ ಎರಡನೆಯದಾಗಿ ಅವರ ಭಾಷೆಯಲ್ಲಿ ಮಾತನಾಡಿದರೆ ಹಿರಿಮೆ/ಪ್ರತಿಷ್ಠೆ ಎಂದು ತಿಳಿದು ನಮಗೂ ನಿಮ್ಮ ಭಾಷೆ ಬರುತ್ತದೆಂದು ತೋರಿಸುವ ಮನೋಭಾವ. ಈ ಎರಡರಲ್ಲೂ ಒಂದು ಇರುವುದಂತೂ ಖಚಿತ. ಆದರೆ ಅದನ್ನು ಮೀರಿ ಸಂದರ್ಭಕ್ಕೆ ತಕ್ಕಂತೆ ಮಾತನಾಡುವುದು ಭಿನ್ನವಾದುದ್ದಾಗಿದೆ.

ಉದಾ: ಬಳ್ಳಾರಿ–ತೆಲುಗು, ಬೆಳಗಾಂ–ಮರಾಠಿ. ಚಾಮರಾಜನಗರ–ತಮಿಳು, ಕಲಬುರ್ಗಿ–ಉರ್ದು ಇತ್ಯಾದಿ. ಈ ರೀತಿಯಲ್ಲಿ ಮುಂದುವರೆದಾಗ ಕನ್ನಡ ಭಾಷೆ ಗಡಿನಾಡ ಜಿಲ್ಲೆಗಳಲ್ಲಿ ನಶಿಸಿಹೋಗುವುದು ಮುಂದೊಂದು ದಿನಗಳಲ್ಲಿ ಕಂಡುಬರುತ್ತದೆಂದು ಹೇಳುವಲ್ಲಿ ಸಂಶಯವಿಲ್ಲ.

ಮೇಲಿನ ವಿಚಾರಗಳು ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರಿಗೆ ಸೀಮಿತವಾಗಿದ್ದರೆ ಅದಕ್ಕಿಂತ ಹೆಚ್ಚಾಗಿ ಆಡಳಿತಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪ್ರಧಾನ ಪಾತ್ರ ವಹಿಸುತ್ತಿರುವ ಜನರು ಕರ್ನಾಟಕದಲ್ಲಿ ಬಹುಭಾಷಿಗರು ನೆಲೆಸಿದ್ದಾರೆ. ಈ ಎಲ್ಲಾ ಬಹು ಭಾಷಿಗರಿಗೆ ಕನ್ನಡದ ಪರಿಚಯ, ವಿವರಣೆ ಮತ್ತು ಅರ್ಥ ಗ್ರಹಿಕೆ ಇರುತ್ತೆ ಎಂದು ಹೇಳಲಾಗದು. ಪ್ರಭುತ್ವವು ನೀಡುವ ಆದೇಶಗಳು, ಯೋಜನೆಗಳು, ಸುತ್ತೋಲೆಗಳು, ಅಧಿಕೃತ ಜ್ಞಾಪನಾಪತ್ರ ಜನಗಳಿಗೆ ಮುಟ್ಟುವುದು, ತಿಳಿಸುವುದು ಮತ್ತು ತಿಳಿಯುವುದು ಕಷ್ಟಕರವೇ.

ಒಟ್ಟಾರೆಯಾಗಿ ಬಹು ಭಾಷಿಗರು ಇರುವ ಕರ್ನಾಟಕದಲ್ಲಿ ಆಡಳಿತದಲ್ಲಿ ಕನ್ನಡ ಸರಿಯಾದ ರೀತಿಯಲ್ಲಿ ಸರಿಯಾದ ಸಮಯದಲ್ಲಿ ಬಳಕೆಯಾಗುತ್ತಿಲ್ಲ ವೆಂಬುದು ಸತ್ಯ ಸಂಗತಿಯಾಗಿದೆ. ಹಾಗೆಯೇ ಇದೊಂದು ಸಮಸ್ಯೆ ಮತ್ತು ಸವಾಲಾಗಿ ಕಾಣುತ್ತೇವೆ. ಈ ಪರಿಸ್ಥಿತಿ ಇರುವಲ್ಲಿ ಬಹುಭಾಷಿಗರು ಇರುವ ಕರ್ನಾಟಕದಲ್ಲಿ ಆಡಳಿತ ಕನ್ನಡದ ಬಳಕೆ ಆಗುವುದು ಸ್ವಲ್ಪ ಕಷ್ಟಕರವಾಗಿದೆ.

೩.೧.೩. ಅನಕ್ಷರತೆ

ಅನಕ್ಷರತೆ ಎಂಬುದೊಂದು ಸಾಮಾಜಿಕ ಪಿಡುಗು. ಅನಕ್ಷರತೆಯನ್ನು ಹೋಗಲಾಡಿಸಿದರೆ ರಾಜ್ಯ ಸುಶಿಕ್ಷಿತ ಸಮಾಜವನ್ನು ನಿರ್ಮಾಣ ಮಾಡಬಲ್ಲದು ಎಂಬುದು ಪ್ರತೀತಿ. ಕರ್ನಾಟಕದಲ್ಲಿ ಶೇ. ೨೦ರಿಂದ ೩೦ರಷ್ಟು ಅನಕ್ಷರಸ್ಥರಿದ್ದಾರೆ ಎಂದು ಪರಿಶೀಲನೆ, ಮತ್ತು ಕೆಲವೊಂದು ಇಲಾಖೆಗಳು ಹೊರತಂದ ಅಂಕಿ ಅಂಶಗಳಿಂದ ತಿಳಿದುಬರುತ್ತದೆ. ಅದರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ, ಅಲ್ಪ ಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳಲ್ಲಿ ಮತ್ತು ದಲಿತ ಸಮಾಜದಲ್ಲಿ ಅನಕ್ಷರಸ್ಥರ ಸಂಖ್ಯೆಯು ಹೆಚ್ಚಾಗಿರುವುದು ಕಂಡುಬರುತ್ತದೆ.

ಸರ್ಕಾರವು ಜನಸಾಮಾನ್ಯರಿಗಾಗಿ ರೂಪಿಸಿ ಜಾರಿಗೆ ತಂದ ಹಲವಾರು ಯೋಜನೆಗಳು ಮೊದಲು ಸಹಕಾರಗೊಂಡು ಯಶಸ್ವಿಗೊಳ್ಳಬೇಕೆಂದರೆ ಸರ್ಕಾರವು ರೂಪಿಸಿದ ಯೋಜನೆಗಳು ಗ್ರಾಮೀಣ ಪ್ರದೇಶದಲ್ಲಿ ಯಶಸ್ವಿಯಾಗಿ ಕಾರ್ಯರೂಪಕ್ಕೆ ಬಂದಾಗ ಮಾತ್ರ ಸಾಧ್ಯ.

ಆಡಳಿತದಲ್ಲಿ ಭಾಷೆಬಾರದೆ ಇರುವವರು ಮತ್ತು ಭಾಷೆಯ ಬಗ್ಗೆ ತಿಳಿಯದೇ ಇರುವವರು ಮತ್ತು ಅನಕ್ಷರಸ್ಥರು ಸಹಜವಾಗಿ ಬೇರೆಯವರನ್ನು ಆಶ್ರಯಿಸಬೇಕಾಗುತ್ತದೆ. ಸರ್ಕಾರವು ಜಾರಿಗೊಳಿಸಲಾದ ಜನಸಾಮಾನ್ಯರಿಗೆ ಅನುಕೂಲಕರವಾದ ಯೋಜನೆಗಳು ಇವರುಗಳಿಗೆ ಇನ್ನೊಬ್ಬರು ತಿಳಿಹೇಳಿದಾಗ ಮಾತ್ರ ಸಾಧ್ಯವಾಗುತ್ತದೆ. ಅನಕ್ಷರಸ್ಥರು ಯಾವ ಪತ್ರವನ್ನಾಗಲಿ ಮನವಿಯನ್ನಾಗಲಿ ಸಕಾರಕ್ಕೆ ಸಲ್ಲಿಸಬೇಕಾದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಲಿಖಿತ ರೂಪದ ರಚನೆಗೆ ಕೇವಲ ಇವರ ಹೆಬ್ಬೆಟ್ಟಿನ ಸಹಿ ಮಾತ್ರ ಪತ್ರಕ್ಕೆ ಇರುತ್ತದೆ. ಉಳಿದೆಲ್ಲವು ಭಾಷೆಯನ್ನು ತಿಳಿದು, ಓದಲು, ಬರೆಯಲು ಬರುವ ವ್ಯಕ್ತಿಯ ರಚನೆಯೇ ಅದಾಗಿರುತ್ತದೆ.

ಅನಕ್ಷರಸ್ಥರು ಸರ್ಕಾರದ ಜೊತೆಗೆ ವ್ಯವಹರಿಸಬೇಕಾದ ಸಂದರ್ಭಬಂದಾಗ ಇವರು ಪತ್ರ ಬರೆಯಲು ಸಹಾಯ ಪಡೆದ ವ್ಯಕ್ತಿಯ ಭಾಷೆಯ ಬರವಣಿಗೆ ಆಡಳಿತ ಕನ್ನಡದ ಬಳಕೆ ತಿಳಿದಿದ್ದರೆ ಮಾತ್ರ ಪತ್ರ ರಚನೆ ಸರಿಯಾಗಿ ಇರುತ್ತದೆ. ಇಲ್ಲವಾದಲ್ಲಿ ಎಲ್ಲವುದನ್ನು ಕಡೆಗಾಣಿಸಿದಂತಾಗಿ ಸಾಮಾನ್ಯ ವಿಷಯ ಪ್ರಸ್ತಾಪ ಮಾತ್ರ ಪತ್ರದಲ್ಲಿ ಅಭಿವ್ಯಕ್ತಗೊಂಡಿರುತ್ತದೆ.

ಇದು ಆಡಳಿತ ಕನ್ನಡ, ಇದು ಗ್ರಾಂಥಿಕ ಕನ್ನಡ, ಇದು ವ್ಯವಹಾರಿಕ ಕನ್ನಡವೆಂದು ಅನಕ್ಷರಸ್ಥರಿಗೆ ಹೇಗೆತಾನೆ ತಿಳಿದಿತು, "ನಮಗೆ ಓದಕೆ ಬರಿಯಾಕೆ ಬರಲ್ಲ– ಬೇರೆಯವರ ಹತ್ತಿರ ಬರೆಯಿಸಿಕೊಂಡು ಬಂದಿದ್ದೇವೆ ಸರಿಯಾಗಿ ಬರೆದಿದ್ದಾರೋ, ಇಲ್ಲವೋ" ಎಂದು ಒಮ್ಮೆ ಅದನ್ನು ಬೇರೆಯವರ ಹತ್ತಿರ ಓದಿಸಿ ನಂತರದಲ್ಲಿ ತಾವು ಏನು ಹೇಳಬೇಕೆಂದಿದ್ದಾರೆ ಆ ಹೇಳಬೇಕಾದ ವಿಷಯ ಅದೇ ಎಂದು ಮನದಟ್ಟಾದಲ್ಲಿ ಮಾತ್ರ ಅದನ್ನು ಸಂಬಂಧಪಟ್ಟವರಿಗೆ ಸಲ್ಲಿಸುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ ಇದೊಂದು ವಿಪರ್ಯಾಸದ ಸಂಗತಿಯೂ ಹೌದು.

ಅನಕ್ಷರಸ್ಥರ ಹೇಳಿಕೆ ಮತ್ತು ಬರವಣಿಗೆದಾರರ ಬರವಣಿಗೆಯಿಂದ ರಚಿಸಲ್ಪಟ್ಟ ಪತ್ರವು ಕಚೇರಿಗೆ ಬರುತ್ತದೆ ಕಚೇರಿಗೆ ಬಂದ ಪತ್ರವನ್ನು ಮುಂದಿನ ಹಂತದಲ್ಲಿ ಕ್ರಮಕೈಕೊಳ್ಳಬೇಕಾದದ್ದು ವಿಷಯ ನಿರ್ವಾಹಕರು. ವಿಷಯ ನಿರ್ವಾಹಕರು ಪತ್ರಗಳನ್ನು ಅನಕ್ಷರಸ್ಥರು ಬರೆದರೋ? ಅಕ್ಷರಸ್ಥರು

ಬರೆದರೋ? ಎಂಬುದನ್ನು ಆಲೋಚಿಸದೆ ಮತ್ತು ಅವಲೋಕಿಸದೆ ಬಂದ ಪತ್ರಗಳನ್ನು ಮುಂದಿನ ಕ್ರಮ ಕೈಗೊಳ್ಳಲು ಕಾರ್ಯಾಸಕ್ತರಾಗುತ್ತಾರೆ.

ಅನಕ್ಷರಸ್ಥರು ಬೇರೆಯವರ ಹತ್ತಿರ ತಮ್ಮ ಅಭಿವ್ಯಕ್ತಿಯನ್ನು ಹೇಳಿ ಬರೆಸಲಾದ ಪತ್ರವು ಸಂಪೂರ್ಣ ಪ್ರಾದೇಶಿಕ ಭಾಷೆ, ಆಡು ಮಾತಿನ ರೀತಿ ಮತ್ತು ಹೇಳಬೇಕಾದ ವಿಷಯವನ್ನು ಸುತ್ತಿಬಳಿಸಿ ಹೇಳಿದಂತಿರುತ್ತದೆ. ಭಾಷಿಕ, ಹಾಗೂ ವ್ಯಾಕರಣಬದ್ಧವಾಗಿ ಆ ಪತ್ರ ರಚನೆಗೊಂಡಿರುವುದಿಲ್ಲ. ಇದು ಆಡಳಿತದ ಸಮಸ್ಯೆಯಲ್ಲ ಅನಕ್ಷರಸ್ಥರ ಸಮಸ್ಯೆ. ಅನಕ್ಷರಸ್ಥರು ಆಡಳಿತದಲ್ಲಿ ನೇರವಾಗಿ ಭಾಗಿಯಾಗುವುದಿಲ್ಲ ಅವರುಗಳು ಪರೋಕ್ಷವಾಗಿ ಭಾಗಿಗಳಾಗಿರುತ್ತಾರೆ, 'ಅವರು ಬರೆದು ಕೊಟ್ರು ನಾವು ತಮಗೆ ತಂದು ಕೊಟ್ಟಿವಿ' ಎಂಬ ಪದವನ್ನು ಬಿಟ್ಟರೆ ಬೇರೆ ಮಾತುಗಳೇ ಅವರಿಂದ ಬಾರದು.

ಇಲ್ಲಿ ಹೇಳಬಯಸಲು ಹೊರಟ ವಿಷಯವೇನೆಂದರೆ, ಅನಕ್ಷರಸ್ಥರಿಗೆ ಹೇಗೆ ತಾನೆ ಆಡಳಿತದಲ್ಲಿ ಕನ್ನಡವನ್ನು ಜಾರಿಗೊಳಿಸಿ ಎಂದು ಹೇಳಲು ಸಾಧ್ಯ. ಅಲ್ಲದೇ ಸರ್ಕಾರವು ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ರೂಪಿಸಲಾದ ಆದೇಶಗಳು ಇವರ ಹಂತದಲ್ಲಿ ಹೇಗೆ ಕೈಗೂಡಲು ಸಾಧ್ಯ. ಅನಕ್ಷರಸ್ಥರೂ ಆಡಳಿತದ ಒಂದು ಭಾಗವೇ ಹೊರತು ಬೇರೆಯಲ್ಲ. ಹಾಗಾದರೆ ಇವರನ್ನು ಆಡಳಿತದಲ್ಲಿ ಕನ್ನಡವನ್ನು ಬಳಸಬೇಕೆಂಬ ನಿಲುವನ್ನು ಹೇಗೆ ಸಹಕಾರಗೊಳಿಸಬೇಕಾಗಿದೆ ಎನ್ನುವ ಸಮಸ್ಯೆ ಕಾಡುತ್ತದೆ.

೩.೧.೪. ಭಾಷಿಕ ಗಡಿಗಳು

ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಣೆ ಆದ ನಂತರದಲ್ಲಿ ಕರ್ನಾಟಕ ರಾಜ್ಯವು ಮಹಾರಾಷ್ಟ್ರ, ಆಂದ್ರ ಪ್ರದೇಶ, ತಮಿಳುನಾಡು, ಕೇರಳ ಮತ್ತು ಗೋವಾ ರಾಜ್ಯಗಳಿಂದ ಸುತ್ತುವರಿಯಲ್ಪಟ್ಟಿದೆ. ಶಿವಮೊಗ್ಗ, ಕೊಪ್ಪಳ, ಗದಗ, ಚಿತ್ರದುರ್ಗ, ಮತ್ತು ಉತ್ತರಕನ್ನಡ ಗಳನ್ನು ಬಿಟ್ಟರೆ ಬಹುತೇಕ ಎಲ್ಲಾ ರಾಜ್ಯದ ಗಡಿಗಳು ಒಂದಲ್ಲಾ ಒಂದು ಭಾಗದಲ್ಲಿ ಬೇರೆ ರಾಜ್ಯಗಳ ಗಡಿಗಳಿಗೆ ಹೊಂದಿಕೊಂಡಿರುವುದನ್ನೆ ಕಾಣುತ್ತೇವೆ. **(ಅನುಬಂಧ-೧)** ನೆರೆಹೊರೆ ರಾಜ್ಯಗಳು ತಮ್ಮದೇ ಆದ ಭಾಷೆಯನ್ನು ಹೊಂದಿದ್ದು ಭಾಷಿಕ ಗಡಿಗಳನ್ನು ರೂಪಿಸಿವೆ ಮತ್ತು ದ್ವಿಭಾಷಿಕರು ಈ ಭಾಷಿಕಗಡಿಗಳಲ್ಲಿ ವಾಸವಾಗಿದ್ದಾರೆ.

ಆದರೆ ಇಡಿಯಾಗಿ ಒಂದೇ ಜಿಲ್ಲೆಯು ಭಾಷಿಕ ಗಡಿಗಳಿಗೆ ಹೊಂದಿಕೊಂಡಿದೆ ಎಂದು ಹೇಳಲು ಸಾದ್ಯವಿಲ್ಲ. ಜಿಲ್ಲೆಯಲ್ಲಿನ ಕೆಲ ತಾಲೂಕುಗಳು ಮಾತ್ರ ಗಡಿ ಭಾಷೆಗಳ ಪ್ರಭಾವಕ್ಕೆ ಒಳಗಾಗಿರುವುದು ಕಾಣ ಸಿಗುತ್ತದೆ. ಬಿದರ್, ಗುಲ್ಬರ್ಗ, ಬಿಜಾಪುರ, ಬೆಳಗಾವಿ ಜಿಲ್ಲೆಗಳು ಮಹಾರಾಷ್ಟ್ರದ ಗಡಿಭಾಗಗಳಲ್ಲಿನ ಪ್ರದೇಶಗಳು ಮರಾಠಿ ಪ್ರಭಾವಕ್ಕೆ ಒಳಗೊಂಡಿದೆ. ಅದೇ ರೀತಿಯಲ್ಲಿ ಬೀದರ್, ಗುಲ್ಬರ್ಗ, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳು ಆಂದ್ರ ಪ್ರದೇಶ ಗಡಿಭಾಗಗಳಲ್ಲಿನ ಪ್ರದೇಶವು ತೆಲುಗು ಭಾಷೆಯ ಪ್ರಭಾವಕ್ಕೆ ಒಳಗೊಂಡಿರುವುದನ್ನು ಕಾಣಬಹುದು. ಕೋಲಾರ ಚೆನ್ನಪಟ್ಟಣ ಚಾಮರಾಜನಗರ- ತಮಿಳುಭಾಷೆಯ ಪ್ರಭಾವದಿಂದಲೂ, ದಕ್ಷಣಕನ್ನಡ ಮೈಸೂರು

ಮಡಿಕೇರಿ ಜಿಲ್ಲೆಗಳು–ಕೇರಳ ಭಾಷೆಯ ಭಾಷಿಕ ಗಡಿಗಳು ಕರ್ನಾಟಕಕ್ಕೆ ಹೊಂದಿಕೊಂಡಿರುವುದನ್ನು ಇಂದಿಗೂ ಕಾಣಬಹುದು.

ಗಡಿನಾಡ ರಾಜ್ಯಗಳಿಂದ ಅಲ್ಲದೇ ಬೀದರ್ ಕಲಬುರ್ಗಿಲ್ಲಿ ಎರಡು ಭಾಷೆಗಳ ಪ್ರಭಾವ ಎದ್ದು ಕಾಣುತ್ತದೆ. ಒಂದು ಗಡಿಯಲ್ಲಿ ಮರಾಠಿ, ಇನ್ನೊಂದು ಗಡಿಯಲ್ಲಿ ತೆಲುಗು, ತಮಿಳು ಮತ್ತು ತೆಲುಗು ಪ್ರಭಾವ ಇರುವುದು. ಹೀಗಾಗಿ ಸಹಜವಾಗಿ ಗಡಿನಾಡ ಭಾಷೆಗಳ ಪ್ರಭಾವ ನಮ್ಮ ಆಡಳಿತ ಕನ್ನಡದ ಮೇಲೆ ಇದ್ದೇ ಇದೆ ಎಂಬುದು ನಮ್ಮ ಅಭಿಪ್ರಾಯ. ಆದರೆ ಎಲ್ಲಾ ಭಾಷಿಗರನ್ನು ಒಳಗೊಂಡಿರುವ ತಮಿಳನಾಡಿನ ಗಡಿಗೆ ಹೊಂದಿಕೊಂಡಿರುವ ಕರ್ನಾಟಕದ ರಾಜಧಾನಿ ಬೆಂಗಳೂರು ಬಹುಭಾಷೆಗಳ ಅಥವಾ ಬಹುಭಾಷಿಕರ ಬೀಡಾಗಿ ಮಾರ್ಪಟ್ಟಿರುವುದು ಸತ್ಯ.

ಕರ್ನಾಟಕದಲ್ಲಿ ಒಂದು ಭಾಷೆಯ ಮತ ಪಂಥಗಳ ಜನರಿಲ್ಲ, ಎಲ್ಲಾ ಜನರಿಗೆ ಎಲ್ಲಾ ಭಾಷೆಗಳಿಗೆ ಎಲ್ಲಾ ಮತದವರಿಗೆ ಆಶ್ರಯದಾಯಕವಾಗಿದೆ, ವಿವಿಧತೆಯಲ್ಲಿ ಏಕತೆ ಎಂಬಂತೆ ನಮ್ಮ ಕರ್ನಾಟಕ ಅದರಲ್ಲೂ ಬೆಂಗಳೂರು ಗೋಚರಿಸುತ್ತದೆ. ಇದು ಸತ್ಯ ತಮಿಳುನಾಡ ಗಡಿಗೆ ಹೊಂದಿಕೊಂಡಿರುವ ನಮ್ಮ ರಾಜ್ಯ ಅಧಿಕ ಸಂಖ್ಯೆಯಲ್ಲಿ ಮಾತನಾಡುವ ಜನರು ತಮಿಳರಿದ್ದಾರೆ. ಹಾಗಾಗಿ ಅವರ ಭಾಷೆಯ ಪ್ರಭಾವ ನಮ್ಮ ಆಡಳಿತದ ಮೇಲೆ ಆಗಿದೆ.

ಬೇರೆ ರಾಜ್ಯಗಳ ಗಡಿಭಾಗಗಳು ಕರ್ನಾಟಕಕ್ಕೆ ಅಂಟಿಕೊಂಟಿರುವುದರಿಂದ ಮತ್ತು ಸಾಮಾಜಿಕವಾಗಿ ಅವರುಗಳಿಗೆ ಮೂಲಭಾತ ಸೌಕರ್ಯದ ಜೊತೆಗೆ ಶಿಕ್ಷಣ ಮತ್ತು ಉದ್ಯೋಗಗಳನ್ನು ಕಲ್ಪಿಸಬೇಕಾದ ಮಹತ್ತರ ಜವಾಬ್ದಾರಿ ಆಡಳಿತಕ್ಕಿದೆ. ಅಲ್ಲಿನ ವ್ಯವಸ್ಥೆಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯವು ರಾಜ್ಯದ ಗಡಿಭಾಗಗಳಲ್ಲಿ ಭಾಷಿಕವಾಗಿ ಶಾಲೆಗಳನ್ನು ತೆರೆಯಬೇಕಾಗುತ್ತದೆ. ನೆರೆರಾಜ್ಯದ ಗಡಿಭಾಗಗಳಲ್ಲಿ ಅಲ್ಲಿನ ಪ್ರಾದೇಶಿ ಭಾಷೆಗಳ ಆಧಾರದ ಮೇಲೆ ಯಾವ ಭಾಷೆಗಳನ್ನು ಇಲ್ಲಿ ಕಲಿಸಬೇಕೆಂಬ ನೀತಿ ನಿಯಮಗಳನ್ನು ರೂಪಿಸಬೇಕಾಗುತ್ತದೆ. ಇದೊಂದು ಸಮಸ್ಯೆಯೇ ಆಗಿದೆ.

ಉದಾ;– ಆಂದ್ರಪ್ರದೇಶದ ಗಡಿಭಾಗದಲ್ಲಿ ತೆಲುಗು ಶಾಲೆಗಳನ್ನು ತೆರೆಯುವುದು.

ಸಹಜವಾಗಿ ಗಡಿನಾಡ ಭಾಗದಲ್ಲಿರುವ ಜನರಿಗೆ ಕನ್ನಡ ಭಾಷೆಯ ಪರಿಚಯ ವಿಲ್ಲದಿರುವಾಗ ಹೇಗೆತಾನೆ ಕನ್ನಡ ಬಳಿಸಿಯಾರು? ಹೀಗಾಗಿ ಅವರು ಬೇರೊಂದು ರೀತಿಯಲ್ಲಿ ತಮ್ಮ ಅಭಿವ್ಯಕ್ತಿಯನ್ನು ವ್ಯಕ್ತಪಡಿಸುವ ಭಾಷೆಗೆ ಮೊರೆಹೋಗುತ್ತಾರೆ ಅದೇ ಎಲ್ಲರಿಗೂ ಸರಳವಾಗಿ ಸಾಮಾನ್ಯವಾಗಿ ರಚಿತವಾಗುವ ಇಂಗ್ಲೀಷ್.

ಹೀಗೆ ರೂಪಗೊಂಡ ಭಾಷಿಕ ಗಡಿಪ್ರದೇಶದಲ್ಲಿ ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರಲು ಸಾಧ್ಯವೇ. ಸಾದ್ಯವೆಂದಾದಲ್ಲಿ ಎಷ್ಟರ ಮಟ್ಟಿಗೆ ಸಾಧ್ಯ ಎನ್ನುವ ಪ್ರಶ್ನೆ ಮತ್ತೆ ಮೂಡುತ್ತದೆ. ಭಾಷಿಕ ಗಡಿಗಳಲ್ಲಿ ವಾಸಿಸುವ ಜನ ಸಮೂಹ ಉತ್ತಮ ಪ್ರಭುತ್ವದ ಕಡೆಗೆ ವಾಲಿರುವುದು ಸಹಜವಾಗಿ ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಆಡಳಿತದಲ್ಲಿ ಕನ್ನಡವನ್ನು ಬಳಸಬೇಕೆಂಬ ಆದೇಶಗಳು ಯಾವ ಪ್ರಭಾವವನ್ನು ಬೀರಬಲ್ಲವು ಎಂಬುದೊಂದು ಪ್ರಶ್ನೆಯೂ ಹೌದು, ಸಮಸ್ಯೆ ಹಾಗೂ ಸವಾಲೂ ಹೌದು.

೩.೧.೫. ಪ್ರಾದೇಶಿಕ ಭಿನ್ನತೆ

ಪ್ರಾದೇಶಿಕ ಭಿನ್ನತೆ ಎಂಬುದು ಕೇವಲ ಕರ್ನಾಟಕದ ಒಂದು ಭಾಗಕ್ಕೆ ಸೀಮಿತವಾಗಿಲ್ಲ. ಕರ್ನಾಟಕದ ವಿವಿದ ಭಾಗಗಳಲ್ಲಿ ಹಲವಾರು ರೀತಿಯಲ್ಲಿ ಭೌಗೋಳಿಕವಾಗಿಯೂ ಮತ್ತು ಸಾಮಾಜಿಕವಾಗಿಯೂ ಪ್ರಾದೇಶಿಕ ಭಿನ್ನತೆಯನ್ನು ಹೊಂದಿದೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋದಂತೆಲ್ಲ ಮಾತನಾಡುವ ಭಾಷೆ ಕನ್ನಡವೇ ಆದರೂ ಭಾಷೆಯನ್ನು ಮಾತನಾಡುವ ರೀತಿಗಳು ಬೇರೆ ಬೇರೆ. ಹೀಗಾಗಿ ಕರ್ನಾಟಕದ ಪ್ರತಿಯೊಂದು ಸ್ಥಳಗಳಲ್ಲಿ ನಾವು ಪ್ರಾದೇಶಿಕ ಭಿನ್ನತೆಯನ್ನು ಕಾಣಬಹುದಾಗಿದೆ. ಕರ್ನಾಟಕವನ್ನು ಪ್ರಾದೇಶಿಕವಾಗಿ ಕಲಬುರ್ಗಿ ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ (ಕರಾವಳಿ ಕನ್ನಡ), ಮಡಿಕೇರಿ/ಕೊಡಗು ಕನ್ನಡ, ಮೈಸೂರು ಕನ್ನಡ/ಬೆಂಗಳೂರು ಕನ್ನಡ, ಚಾಮರಾಜ ನಗರದ ಕನ್ನಡ

ಕಲಬುರ್ಗಿ ಕನ್ನಡ: ಕಲಬುರ್ಗಿ, ಬೀದರ್, ರಾಯಚೂರು ಮತ್ತು ವಿಜಾಪುರ ಜಿಲ್ಲೆಗಳ ಉತ್ತರ ಮತ್ತು ಪಶ್ಚಿಮದ ಭಾಗಗಳು.

ಧಾರವಾಡ ಕನ್ನಡ : ಧಾರವಾಡ, ಗದಗ, ಬೆಳಗಾವಿ ಮತ್ತು ವಿಜಾಪುರ ಜಿಲ್ಲೆಯ ಕೆಲವು ಭಾಗಗಳು.

ಮಂಗಳೂರು ಕನ್ನಡ: ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳು.

ಮೈಸೂರು ಕನ್ನಡ: ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು, ಹಾಸನ, ಕೋಲಾರ, ಚಿತ್ರದುರ್ಗ, ಶಿವಮೊಗ್ಗ, ಮತ್ತು ಚಿಕ್ಕಮಗಳೂರು.

ಇವುಗಳನ್ನು ಬಿಟ್ಟು ಇನ್ನುಳಿದ ಜಿಲ್ಲೆಗಳನ್ನು ಮಧ್ಯದ ಕನ್ನಡ ಎಂತಲೂ ಕರೆಯಬಹುದಾಗಿದೆ. ಪ್ರಾದೇಶಿಕ ವಲಯದಲ್ಲಿ ಜನರು ಮಾತನಾಡುವ ಭಾಷೆಯ ಆಧಾರದ ಮೇಲೆ ಪ್ರಾದೇಶಿಕ ಭಿನ್ನತೆಯನ್ನು ಗುರುತಿಸಬಹುದು. ಪ್ರಾದೇಶಿಕ ಹೆಸರುಗಳನ್ನು ಸೂಚಿಸುತ್ತಿದ್ದಂತೆಯೇ ನಮಗೆ ಆ ಭಾಗದಲ್ಲಿ ಮಾತನಾಡುವ ಕನ್ನಡ ನೆನಪಿಗೆ ಬರುತ್ತದೆ.

ಕಲಬುರ್ಗಿ ಕನ್ನಡದಲ್ಲಿ ರಚನೆಗೊಳ್ಳುವ ಒಂದು ಪತ್ರದ ಕನ್ನಡಕ್ಕೆ ಮತ್ತು ಮಂಗಳೂರು ಕನ್ನಡದಲ್ಲಿ–ರಚನೆಗೊಳ್ಳುವ ಒಂದು ಪತ್ರದ ಕನ್ನಡಕ್ಕೂ ಭಾಷಿಕ ಹಿನ್ನೆಲೆಯಲ್ಲಿ ಕೆಲವೊಂದು ವ್ಯತ್ಯಾಸಗಳಿರುವುದು ಸಾಮಾಜಿಕವಾಗಿಯೂ ಹಾಗೂ ಭಾಷಿಕ ರಚನೆಯ ದೃಷ್ಟಿಯಿಂದಲೂ ಕಂಡುಬರುತ್ತದೆ.

ಕರ್ನಾಟಕವು ಭಾಷೆಯ ದೃಷ್ಟಿಯಿಂದ ತನ್ನದೇ ಆದ ಪ್ರಾದೇಶಿಕ ಭಿನ್ನತೆಗಳನ್ನು ಒಳಗೊಂಡಿದೆ. ಭಾಷೆ ಸಂಪೂರ್ಣವಾಗಿ ಮಾನವಾವಲಂಬಿ. ಸಮುದಾಯದ ಇಚ್ಛೆಗೆ ತಕ್ಕಂತೆ ಅದು ರೂಪುಗೊಳ್ಳುತ್ತದೆ. ಸಾಮಾನ್ಯವಾಗಿ ಒಂದೇ ಭಾಷೆಯನ್ನಾಡುವ ಜನ ಒಂದೇ ಭಾಷಾ ತಂತುವಿಡಿದು ನುಡಿಯುತ್ತಾರೆ. ಅವರ ಭಾಷೆಯಲ್ಲಿ ಏಕರೂಪತೆ ಇರುತ್ತದೆ. ವ್ಯಕ್ತಿ ಮಾತನಾಡುವ ಭಾಷೆ ವ್ಯಕ್ತಿ ಇರುವ ಪ್ರದೇಶವನ್ನು ಗುರುತಿಸುವಂತೆ ಮಾಡುತ್ತದೆ. ವ್ಯಕ್ತಿ ಮಾತನಾಡುವ ಭಾಷೆಯೇ ಅವನ ಸಮುದಾಯ ಭಾಷೆ ಯಾವುದೆಂದು, ಮಾತನಾಡುವ ಭಾಷೆಯೇ ಸೂಕ್ಷ್ಮತೆಯಿಂದ ತಿಳಿಸಿಬಿಡುತ್ತದೆ.

ಭಾಷೆಯ ದೃಷ್ಟಿಕೋನವನ್ನು ಗಮನದಲ್ಲಿಟ್ಟುಕೊಂಡಾಗ ಪ್ರಾದೇಶಿಕ ಭಾಷೆಗಳಲ್ಲಿ ಭಿನ್ನತೆ ಇರುವುದು ಕರ್ನಾಟಕದಾದ್ಯಂತ ಗೋಚರಿಸುತ್ತದೆ. ಈ ಪ್ರಾದೇಶಿಕ ವಲಯದಲ್ಲಿ ಭಿನ್ನತೆ ಆಡಳಿತ ಕನ್ನಡ ಬಳಕೆ ಸಂದರ್ಭದಲ್ಲಿ ಆ ಪ್ರದೇಶದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಪ್ರಾದೇಶಿಕ ಭಾಷೆಯ ಪದಗಳು ಅಲ್ಲಿನ ವಿಷಯ ನಿರ್ವಾಹಕರಿಂದ ಸಹಜವಾಗಿ ಆ ಭಾಗದ ಪತ್ರಗಳಲ್ಲಿ ಕಡತಗಳಲ್ಲಿ ಕೆಲವೊಂದು ಕಾಣಸಿಗುತ್ತವೆ.

ಕರ್ನಾಟಕದ ಮೂಡ, ಪಡುವ, ತೆಂಕ, ಬಡಗ, ದಿಕ್ಕುಗಳಲ್ಲಿನ ಜನತೆ ತಮ್ಮ ಪ್ರಾದೇಶಿಕ ವೈಶಿಷ್ಟ್ಯಗಳನ್ನು ರೂಪಿಸಿಕೊಂಡಿದ್ದಾರೆ. ಮಾತನಾಡುವ ಸಂದರ್ಭದಲ್ಲಿ ಕನ್ನಡವೇ ಆಡುವುದು, ಆದರೆ ಮಾತನಾಡುವ ಭಾಷೆ ಕನ್ನಡವೇ ಆಗಿದ್ದರೂ ಮಾತನಾಡುವ ಧಾಟಿ, ನುಡಿಭೇದ ಮತ್ತು ಧೋರಣೆಗಳು ಬೇರೆ ಬೇರೆಯಾಗಿರುತ್ತವೆ. ಒಟ್ಟಾರೆಯಾಗಿ ಸದರಿ ಪ್ರಾದೇಶಿಕ ಹಿನ್ನೆಲೆಯಲ್ಲಿ ಬಳಕೆಯಲ್ಲಿರುವ ಭಾಷೆಗಳ ಪ್ರಾದೇಶಿಕ ಉಪಭಾಷೆಗಳು ಎಂದು ಕರೆಯಲಾಗುತ್ತದೆ. ಉಪಭಾಷೆಗಳಿಗೆ ಭೌಗೋಳಿಕ ಪರಿಸರ, ಪ್ರಾದೇಶಿಕ ಹಿನ್ನೆಲೆ, ಹಿಂದಿನಿಂದ ಬಂದ ಆಡಳಿತದ ಪ್ರಭಾವ ಕಾರಣವಾಗುತ್ತದೆ. ಅಧ್ಯಾಯ ೬ ವಿಷಯಕುರಿತಂತಾಗಿ ಪೂರ್ಣವಾಗಿ ಚರ್ಚಿಸಲಾಗಿದೆ.

೩.೧.೬. ಸಾಮಾಜಿಕ ಭಿನ್ನತೆ

ಕರ್ನಾಟಕ ಬಹುಭಾಷೆಗಳ ಬೀಡು, ಬಹು ಸಂಸ್ಕೃತಿಗಳ ನಾಡು, ಅನೇಕ ಆಚಾರ ವಿಚಾರ, ಕೆಳವರ್ಗ ಮೇಲ್ವರ್ಗ, ಅನೇಕ ಜಾತಿ, ಅನೇಕ ಮತ, ಅನೇಕ ಪಂಥಗಳಿಗೆಲ್ಲಾ ಆಶ್ರಯದಾಯಕವಾಗಿದೆ. ಇವೆಲ್ಲವುಗಳಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಸಾಮಾಜಿಕ ಭಿನ್ನತೆಗಳನ್ನು ಕಾಣುತ್ತೇವೆ. ಇವುಗಳಲ್ಲದೆ ಸರ್ಕಾರದ ವಲಯಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ಮತ್ತು ಅಧಿಕಾರಿಗಳ ವರ್ಗಗಳಲ್ಲಿ ಅವರವರ ವ್ಯಕ್ತಿಗತ ನೆಲೆಗಳಲ್ಲಿ ಸಾಮಾಜಿಕ ಭಿನ್ನತೆಗಳು ಕಾಣುತ್ತೇವೆ. ಕರ್ನಾಟಕದಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೊದಂತೆಲ್ಲಾ ಪರಿಸರದಲ್ಲೂ ಸಾಮಾಜಿಕ ಭಿನ್ನತೆಗಳನ್ನು ಕಾಣುತ್ತೇವೆ.

ಸಾಮಾಜಿಕ ಭಿನ್ನತೆ ಎಂಬುದು ಇಲ್ಲಿ ವ್ಯಕ್ತಿಗತ ನೆಲೆಯಲ್ಲಿ ನೋಡುತ್ತಿಲ್ಲ ಬದಲಾಗಿ ಆಡಳಿತ ದೃಷ್ಟಿಕೋನವನ್ನಿಟ್ಟುಕೊಂಡು ನೋಡಲಾಗುತ್ತಿದೆ. ಆಡಳಿತದಲ್ಲಿ ಕನ್ನಡವನ್ನು ಜಾರಿಗೊಳಿಸುವುದಕ್ಕಾಗಿ ಸರ್ಕಾರವು ಆದೇಶಗಳನ್ನು ಜಾರಿಗೆ ತಂದಿದೆ ಈ ಆದೇಶಗಳು ಸಾಮಾಜಿಕ ಭಿನ್ನತೆಯಿಂದ ಕೂಡಿರುವ ಕರ್ನಾಟಕದಲ್ಲಿ ಸಹಕಾರಿಯಾಗಬಲ್ಲವೇ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಕನ್ನಡ ಮಾತನಾಡುವ ಜನತೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಸಾಮಾಜಿಕ ವಲಯದಲ್ಲಿ ಕೆಲವೊಂದು ಪ್ರದೇಶಗಳಲ್ಲಿ ಮಾತನಾಡುವ ಕನ್ನಡವನ್ನು ನೋಡಿದರೆ ಇದು ಕನ್ನಡವೇ ಅಲ್ಲ ಎಂಬ ತೀರ್ಮಾನಕ್ಕೆ ಬರಲೂ ಬಹುದು. ಅಷ್ಟು ಭಿನ್ನವಾಗಿ ಸಾಮಾಜಿಕ ನೆಲೆಯಲ್ಲಿ ಕನ್ನಡ ಪ್ರದೇಶದಿಂದ ಪ್ರದೇಶಕ್ಕೆ ಬಳಸಲ್ಪಟ್ಟಿದೆ. ಈ ಸಾಮಾಜಿಕ ಭಿನ್ನತೆಯಲ್ಲಿ ಬಳಸಲ್ಪಡುವ ಕನ್ನಡವನ್ನು ಒಂದು ಪ್ರದೇಶದವರು ಇನ್ನೊಂದು ಪ್ರದೇಶದ ಕನ್ನಡವನ್ನು ಒಪ್ಪಲು ಸಾಧ್ಯವಿರದ ಮಾನಸಿಕ ಸ್ಥಿತಿಗಳು ಉಂಟಾಗಿವೆ.

ಸಾಮಾಜಿಕ ನೆಲೆಯಲ್ಲಿ ನೋಡಿದಾಗ ಕನ್ನಡವನ್ನು ಬಳಸಬೇಕೆಂಬ ಮತ್ತು ಆಡಳಿತದ ವಲಯದಲ್ಲಿ ಅದನ್ನು ಜಾರಿಗೊಳಿಸಬೇಕೆಂದು ಹೇಳುವ ಮನಸುಗಳು ತುಂಬಾ ವಿರಳ. ಇದಕ್ಕೆ ಕಾರಣವೇನೆಂದರೆ ಸಾಮಾಜಿಕ ನೆಲೆಗಳಲ್ಲಿ ಬೇರೂರುತ್ತಿರುವ ಇಂಗ್ಲೀಷ್ ಭಾಷೆ. ಅದನ್ನು ಬಿಡಲಾರದ ನಮ್ಮ ಜಾಯಮಾನ.

೩.೧.೭. ಪಾರಂಪರಿಕ ಆಡಳಿತ (ಗುಲ್ಬರ್ಗ, ಬೆಂಗಳೂರು, ಮಂಗಳೂರು, ಕನ್ನಡ)

ಕರ್ನಾಟಕವನ್ನು ಅನೇಕ ರಾಜವಂಶಸ್ಥರು ಆಳಿದವು, ರಾಜ್ಯದ ಕೆಲವು ಭಾಗಗಳೂ ಸಹ ಬೇರೆ ಬೇರೆ ರಾಜ್ಯಗಳಿಗೆ ಹಂಚಿಹೋಗಿ ಆಡಳಿತ ನಡೆಸಿದ್ದು ಮತ್ತು ಸುಮಾರು **೨೦೦** ವರ್ಷಗಳ ಕಾಲ ಬ್ರಿಟೀಷರು ಕರ್ನಾಟಕವನ್ನು ಆಳಿದ್ದನ್ನು ಕಂಡಿದ್ದೇವೆ. ಈ ಎಲ್ಲಾ ಬೆಳವಣಿಗೆಗಳು ಆಡಳಿತ ಕನ್ನಡದ ಮೇಲೆ ತನ್ನದೇ ಆದ ಪರಿಣಾಮ ಬೀರಿವೆ ಎಂಬುದು ಸತ್ಯ.

ಮೌರ್ಯರ ಕಾಲದಿಂದಲೂ ಮೈಸೂರು ರಾಜವಂಶಸ್ಥರ ಕೊನೆಯ ಅರಸರ ಕಾಲದವರೆಗೂ ಆಡಳಿತ ಕನ್ನಡವೂ ಪ್ರತಿಯೊಂದು ಹಂತದಲ್ಲಿ ಬದಲಾವಣೆ ಮತ್ತು ಬೆಳವಣಿಗೆ ಕಾಣುತ್ತಾ ಹೋಯಿತು. ಸಂಸ್ಕೃತ, ಮರಾಠಿ, ಪಾರ್ಸಿ, ಉರ್ದು, ಪೋರ್ಚುಗೀಸ್, ಇಂಗ್ಲೀಷ್ ಮೊದಲಾದ ಭಾಷೆಗಳ ಸಂಪರ್ಕ ಪಡೆದುಕೊಂಡು ಬೇರೆ ಬೇರೆ ಸಂದರ್ಭಗಳಲ್ಲಿ ಆಡಳಿತ ಭಾಷೆಯಾಗಿ ಕನ್ನಡ ಬೆಳೆದು ಬಂದಿದೆ. ಕನ್ನಡ ಆಡಳಿತ ಭಾಷೆಯು ಕಾಲಕ್ಕೆ ತಕ್ಕಂತೆ ಬೇರೆ ಭಾಷೆಯನ್ನು ಸ್ವೀಕರಿಸಿ, ತನ್ನ ಆಡಳಿತಕ್ಕೆ ಸೇರಿಸಿಕೊಂಡಿದೆ.

ಕರ್ನಾಟಕವನ್ನು ಮರಾಠರು, ಮೊಘಲರು, ಬ್ರಿಟೀಷರು, ಪೋರ್ಚುಗೀಸರು, ಡಚ್ಚರು, ಗ್ರೀಕರು ಆಳಿಹೋಗಿದ್ದಾರೆ. **(ಅನುಬಂಧ-೨)** ಸಂಸ್ಕೃತದ ಪರಿಣಾಮವು ಕನ್ನಡದ ಮೇಲಿರುವುದು ಸಹ ನಾವು ಹಿಂದಿನಿಂದಲೂ ಕಾಣುತ್ತಿದ್ದೇವೆ. ಆ ಭಾಷೆಗಳ ಪ್ರಭಾವ ಮತ್ತು ಹಿಂದಿನಿಂದ ಈಗಿನವರೆಗೂ ಮುಂದುವರೆಸಿಕೊಂಡು ಬಂದ ಆಡಳಿತ ಪದ್ಧತಿ ನಮ್ಮದಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯು ಎಲ್ಲಾ ಭಾಷೆಗಳ ಪದಗಳನ್ನು ಸ್ವೀಕರಿಸಿಕೊಂಡು ಸ್ವೀಕರಣ ಭಾಷೆಯಾಗಿರುವುದಂತು ಸತ್ಯ.

ಇತಿಹಾಸದ ಪುಟಗಳಲ್ಲಿ ಸುಮಾರು ವರ್ಷಗಳ ಕಾಲ ನಮ್ಮ ರಾಜ್ಯ ಮೊಘಲ್ ಸಾಮ್ರಾಜ್ಯದ ಆಡಳಿತದ ಪಾಲಾಯಿತು ಆಗಿನ ಸಂದರ್ಭದಲ್ಲಿ ಪಾರ್ಸಿಭಾಷೆಯ ಪದಗಳು ಆಡಳಿತದಲ್ಲಿ ಬಳಕೆಯಾದವು. ವಿಜಯನಗರ ಅವನತಿಯ ಆನಂತರದಲ್ಲಿ ಬಹುಮನಿ ಸುಲ್ತಾನರು ನಮ್ಮ ರಾಜ್ಯದ ಬಹುತೇಕ ಪ್ರದೇಶವನ್ನು ಆಳಿದರು. ಆಗ ಮುಸ್ಲೀಂ ಸುಲ್ತಾನರ ಪ್ರಭಾವ ಹೆಚ್ಚಾಯಿತು. ಉತ್ತರದಲ್ಲಿ ಬಹುಮನಿ ಸಾಮ್ರಾಜ್ಯ ಮತ್ತು ದಕ್ಷಿಣದಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಪ್ರಭಾವದಿಂದ ಎಷ್ಟೋ ಉರ್ದು ಶಬ್ದಗಳು ನಮ್ಮ ಆಡಳಿತದಲ್ಲಿ ಸೇರಿಕೊಂಡವು. ಅವುಗಳನ್ನು ಈಗಲೂ ಸಹ ಬಳಸುತ್ತಿದ್ದೇವೆ. ಇವುಗಳನ್ನು ಬಿಟ್ಟರೆ ಬೇರೆ ಪದಗಳನ್ನು ಸಂವಾದಿಯಾಗಿ ಬಳಸಿದರೂ, ಹಿಂದಿನಿಂದ ಬಳಕೆ ಮಾಡಿಕೊಂಡು ಹಾಗೂ ಮುಂದುವರೆಸಿಕೊಂಡು ಬಂದ ಪ್ರಭಾವ ನಮ್ಮಲ್ಲಿ ಇನ್ನು ಕಡಿಮೆಯಾಗಿಲ್ಲ.

ಭಾರತೀಯ ಸಂಸ್ಕೃತಿಯು ಸಂಸ್ಕೃತದ ಮೂಲ ಬೇರುಗಳಿಂದ ಮುಂದುವರೆದುಕೊಂಡು ಬಂದಿದೆ ಹಾಗೆಯೇ ಅದರ ಭಾಷೆಯ ಪ್ರಭಾವವೂ ಮುಂದುವರದುಕೊಂಡು ಬಂದಿದೆ. ಕರ್ನಾಟಕದಲ್ಲಿ ಮರಾಠರು ಆಡಳಿತಕ್ಕೆ ಬಂದಾಗ ಅವರು ತಮ್ಮ ಮರಾಠಿ ಭಾಷೆಯನ್ನೇ ಸರ್ಕಾರಿ ವ್ಯವಹಾರಕ್ಕೆ ಬಳಸಿದರು ಅದಲ್ಲದೇ ಮಹಾರಾಷ್ಟ್ರಕ್ಕೆ ಹೊಂದಿಕೊಂಡ ಕರ್ನಾಟಕದ ಅನೇಕ ಭಾಗಗಳಲ್ಲಿ ಇಂದಿಗೂ ಮರಾಠಿ ಶಬ್ದಗಳು ನಮ್ಮ ಆಡಳಿತದಲ್ಲಿ ಬಳಕೆಯಾಗುತ್ತಿರುವುದು ಗಮನಾರ್ಹದ ವಿಷಯ.

ವ್ಯಾಪಾರದ ನೆಪವೊಡ್ಡಿ ಬಂದ ಪಾಶ್ಚಿಮಾತ್ಯರಾದ ಇಂಗ್ಲೀಷ್‌ರು, ಅರಬ್ಬರು, ಪೋರ್ಚುಗೀಸರ ಪ್ರಾಭಾವದಿಂದ ಅವರ ಭಾಷೆಯಲ್ಲಿನ ಪದಗಳನ್ನು ನಮ್ಮ ಆಡಳಿತದ ವಲಯಗಳಲ್ಲಿ ಕಾಣಬಹುದು. ನಂತರದಲ್ಲಿ ಇಂಗ್ಲೀಷ್ ಭಾಷೆಯ ಪ್ರಭಾವ ನಮ್ಮನ್ನು ಕಾಡುತ್ತಾ ಹೋಯಿತು. ಜಗತ್ತಿನಲ್ಲಿ ಅತ್ಯಂತ ಶಕ್ತಿಯುತವಾದ ಭಾಷೆಯೆಂದು ಕರೆಸಿಕೊಂಡಿರುವ ಇಂಗ್ಲೀಷ್ ಭಾಷೆ ಕರ್ನಾಟಕದಲ್ಲಿ ಸುಮಾರು ೧೪ನೇ ಶತಮಾನದಿಂದ ಇಂದಿನ ಶತಮಾನದವರೆಗೂ ತನ್ನ ಪ್ರಭಾವವನ್ನು ಮುಂದುವರೆಸಿಕೊಂಡು ಬಂದಿದೆ.

ಬ್ರಿಟೀಷರ ಆಡಳಿತದ ಫಲವಾಗಿ ಇಂಗ್ಲೀಷಿನ ಕೆಲವೊಂದು ಪದಗಳು ಸಹ ಆಡಳಿತದಲ್ಲಿ ಸೇರಿಕೊಂಡಿವೆ ಅವುಗಳು ಇಲ್ಲವಾದಲ್ಲಿ ಬೇರೆ ಸಂವಾದಿ ಪದಗಳ ಬಳಕೆಯೂ ಸಹ ಇರದೆನ್ನುವಷ್ಟರ ಮಟ್ಟಿಗೆ ತನ್ನ ಪ್ರಭಾವವನ್ನು ಬೀರಿವೆ. ಕೆಲವೊಂದು ಇಂಗ್ಲೀಷ್ ಪದಗಳಿಗೆ 'ಉ'ಕಾರಗಳನ್ನು ಹಚ್ಚಿ ನಮ್ಮ ಪದಗಳನ್ನಾಗಿ ಬಳಸಿಕೊಂಡಿರುವುದು ನಮ್ಮ ದೌರ್ಭಾಗ್ಯವೇ ಸರಿ.

ಉದಾ:- ಲಾರಿ, ಬಸ್ಸು, ಟೇಬಲ್, ಸಿವಿಲ್, ಕೋರ್ಟು ಇತ್ಯಾದಿ.

ಹಿಂದೆ ಸ್ವಾತಂತ್ರ್ಯದ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯದ ನಂತರದಲ್ಲಿ ಕರ್ನಾಟಕದ ಕೆಲವು ಭಾಗಗಳು ಹೈದರಾಬಾದ್ ಪ್ರಾಂತ್ಯ, ಮದರಾಸ್ ಪ್ರಾಂತ್ಯ ಮತ್ತು ಮುಂಬಯಿ ಪ್ರಾಂತ್ಯ ಆಂದ್ರಪ್ರದೇಶ ಹಾಗೂ ಮಹರಾಷ್ಟ್ರಕ್ಕೆ ಹಂಚಿಹೋಗಿ **(ಅನುಬಂಧ-೩.ಅ)** ಆಡಳಿತ ನಡೆಸುತ್ತಿದ್ದವೆಂದು ಇತಿಹಾಸದಲ್ಲಿ ಕಾಣುತ್ತೇವೆ. ನಂತರದಲ್ಲಿ ಭಾಷಾವಾರು ಪ್ರಕಾರ ರಾಜ್ಯಗಳ ವಿಂಗಡನೆಯಾದ ಮೇಲೆ, ಮೇಲೆ ತಿಳಿಸಲಾದ ಪ್ರಾಂತ್ಯದ ಪ್ರದೇಶಗಳಲ್ಲಿ ಮತ್ತು ಅವುಗಳಲ್ಲಿನ ಕೆಲವು ಪ್ರದೇಶಗಳಲ್ಲಿ ಕರ್ನಾಟಕಕ್ಕೆ ಮತ್ತು ಕರ್ನಾಟಕದ ಕೆಲವು ಪ್ರದೇಶಗಳು ಬೇರೆ ರಾಜ್ಯಗಳಿಗೆ ಹಂಚಿಹೋಗಿವೆ.

೧೯೫೬ರಲ್ಲಿ ಹೈದರಾಬಾದ್ ಪ್ರಾಂತ್ಯದಿಂದ ಕೆಲವು ಪ್ರದೇಶಗಳು ಆಡಳಿತಕ್ಕೆ ಒಳಪಟ್ಟ ಸಂದರ್ಭದಲ್ಲಿ ಬಳ್ಳಾರಿ, ರಾಯಚೂರು, ಗುಲ್ಬರ್ಗ, ಬೀದರ್, ಹೊಸ ಜಿಲ್ಲೆಯಾದ ಯಾದಗಿರಿ, ಕೊಪ್ಪಳ ಈ ಪ್ರದೇಶದಲ್ಲಿ ಹೌದರಾಬಾದ್ ಕರ್ನಾಟಕವೆಂದು (ಅನುಬಂಧ-೩.ಆ) ಪ್ರತ್ಯೇಕವಾಗಿ ಕರೆದಿರುವುದುಂಟು. ಈ ಪ್ರದೇಶಗಳಲ್ಲಿ ಸ್ವಾತಂತ್ರ್ಯದನಂತರದಲ್ಲೂ ಆಡಳಿತದಲ್ಲಿ ಉರ್ದು ಭಾಷೆಯನ್ನು ಬಳಕೆಮಾಡಲಾಗಿತ್ತು. ಆಡಳಿತವನ್ನೇ ಉರ್ದು ಭಾಷೆಯಲ್ಲಿ ನಡೆಸಿದ ಪ್ರಭಾವವನ್ನು ಇಂದಿಗೂ ನಾವು ಕಚೇರಿಯ ಕೆಲವೊಂದು ಕಡತದಲ್ಲಿ ಕಾಣುತ್ತೇವೆ. ಕನ್ನಡ ಎಲ್ಲಾ ಭಾಷೆಗಳನ್ನು ಸ್ವೀಕರಿಸಿಕೊಂಡು ಆಡಳಿತ ಕನ್ನಡ ಬೇರೆ ಭಾಷೆಯ ಸ್ವೀಕರಣದ ಸಮಸ್ಯೆಯನ್ನು ಎದಿರುಸುತ್ತಿದೆ. ಸ್ವೀಕರಣದಿಂದ

ಭಾಷೆ ಶ್ರೀಮಂತಿಕೆಯನ್ನು ಪಡೆಯುತ್ತಿದೆ ಎಂದು ಹೇಳಲಾದರೂ ಮೂಲತಃವಾಗಿ ಬೇರೆ ಭಾಷೆಯ ಪದಗಳನ್ನು ನಾವು ಬಳಸಬಾರದೆಂಬುದು ಏನೂ ಇಲ್ಲ. ಆದರೆ ಅವುಗಳಿಗೆ ಕನ್ನಡದ ಇನ್ನೊಂದು ಸಂವಾದಿ ಪದಗಳ ರಚನೆಯಾಗಬೇಕಾಗಿದೆ. ಇಲ್ಲಿ ಮತ್ತೊಂದು ಪ್ರಶ್ನೆಯೂ ಉದ್ಭವಿಸಬಹುದು, ಸಂವಾದಿ ಪದ ರಚನೆಯಾದರೆ ಸಮಸ್ಯೆ ಬಗೆಹರಿಯುತ್ತಾ? ಇದೊಂದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಒಂದು ವೇಳೆ ಈಗಾಗಲೇ ಎಲ್ಲಾ ಸಂವಾದಿ ಪದಗಳು ರಚನೆಯಾಗಿದ್ದರೂ ಅವುಗಳನ್ನು ಆಡಳಿತ ಕನ್ನಡದಲ್ಲಿ ಬಳಸುವ ಮನೋಭಾವ ನಮ್ಮದಾಗಬೇಕಾಗಿದೆ.

ಕಾರಣ ಹಿಂದಿನಿಂದ ಪಾರಂಪರಿಕ ಆಡಳಿತದ ಘಟ್ಟಗಳನ್ನು ನೋಡಿದಾಗಿ ಆಡಳಿತ ಕನ್ನಡ ಯಾವ ಯಾವ ತಿರುವುಗಳನ್ನು ಪಡೆದುಕೊಂಡು ಅಭಿವೃದ್ಧಿ ಮತ್ತು ಅವನತಿ ಹೊಂದುತ್ತಾ ಬಂದಿದೆ ಎಂಬುದು ನಮಗೆ ಗೋಚರಿಸುತ್ತದೆ. ಈ ರೀತಿಯಾಗಿ ಆಗಿನ ಸಂದರ್ಭದಲ್ಲಿ ಪ್ರತಿಯೊಂದು ಹಂತವು ತನ್ನದೇ ಆದ ಆಳ್ವಿಕೆ ನಡೆಸಿದ ಪಾರಂಪರಿಕ ಸದೃಢ ಭಾಷೆಗಳ ಪ್ರಭಾವ ಇಂದಿನ ಆಡಳಿತ ಭಾಷೆ ಕನ್ನಡ ಭಾಷೆಗೆ ಸಮಸ್ಯೆಯಾಗಿರುವುದು ಕಂಡುಬರುವ ವಿಷಯವಾಗಿದೆ.

೩.೨. ರಾಜಕೀಯ ಸಮಸ್ಯೆಗಳು ಮತ್ತು ಸವಾಲುಗಳು

ಆಡಳಿತ ಕನ್ನಡ ಬಳಕೆಗೂ ಮತ್ತು ರಾಜಕೀಯಕ್ಕೂ ಏನು ಸಂಬಂಧವೆಂಬ ಪ್ರಶ್ನೆಯು ನಿಮ್ಮಲ್ಲಿ ಮೊಡಬಹುದು. ಆದರೆ ಆಡಳಿತ ಕನ್ನಡ ಬಳಕೆಗೂ ಮತ್ತು ರಾಜಕೀಯಕ್ಕೂ ಅವಿನಾಭಾವ ಸಂಬಂಧವಿದೆ. ಎಂಬುದು ಸತ್ಯಸಂಗತಿ. ಕಾರಣವೇನೆಂದರೆ ಆಡಳಿತದಲ್ಲಿ ಕನ್ನಡ ಬಳಕೆ ಎಂಬುದು ರಾಜಕೀಯವಾಗಿ ತಿರುವುಗಳನ್ನು ಪಡೆದುಕೊಳ್ಳುತ್ತದೆ.

೧. ಆಡಳಿತದಲ್ಲಿ ಕನ್ನಡ ಬಳಕೆಯು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ರೂಪಗೊಂಡು ರಾಜಕೀಯ ನಡೆಸುವ ಬಣ ಒಂದಾದರೆ.
೨. ಆಡಳಿತದಲ್ಲಿ ಕನ್ನಡ ಬಳಕೆ ಕಡ್ಡಾಯವಾಗಿ ಹೇಗೆ ತರಲು ಸಾಧ್ಯವಾಗುತ್ತದೆ? ಆಗುವುದಿಲ್ಲ ಎಂದು ಅದಕ್ಕೆ ವಿರೋದಗಳನ್ನು ಒಡ್ಡಿ ನಿಧಾನಗತಿಯ ಪ್ರಗತಿಯು ಕಾಣುವಂತೆ ಮಾಡುವ ಇನ್ನೊಂದು ಬಣ.
೩. ಅದು ಹೇಗಿದ್ದರೇನು ನಮ್ಮ ಪಾಡಿಗೆ ನಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗೋಣ ಎಂದು ರೂಪಿತವಾದ ಬಣ ಮೂರನೆಯದಾಗಿದೆ.

ಈ ಮೂರು ಬಣಗಳ ತಿಕ್ಕಾಟ ಮತ್ತು ವಾದ-ವಿವಾದಗಳ ಹಿನ್ನೆಲೆಯಲ್ಲಿ ಇಂದು ಯಶಸ್ವಿಪೂರ್ಣವಾಗಿ ಆಡಳಿತದಲ್ಲಿ ಕನ್ನಡದ ಬಳಕೆಯು ಜಾರಿಗೆ ತರಲು ಸಾಧವಾಗುತ್ತಿಲ್ಲ ಎನ್ನುವುದು ಸತ್ಯ.

ಅಧ್ಯಯನಕ್ಕಾಗಿ ಸದರಿ ವಿಷಯಗಳನ್ನು ೩ ವಿಭಾಗಗಳಾಗಿ ಮಾಡಲಾಗಿದೆ.

೧. ಆಡಳಿತದಲ್ಲಿ ಕನ್ನಡ ಬಳಕೆಯ ಜಾರಿಗೆ ಕ್ರಮ
೨. ಆಡಳಿತದಲ್ಲಿ ಕನ್ನಡ ಬಳಕೆ ಕಡ್ಡಾಯಕ್ಕೆ ವಿರೋಧ
೩. ಆಡಳಿತದಲ್ಲಿ ಕನ್ನಡ ಬಳಕೆ ತಟಸ್ಥ ಮನಸ್ಸುಗಳು

೩.೨.೧. ಆಡಳಿತದಲ್ಲಿ ಕನ್ನಡ ಬಳಕೆಯ ಜಾರಿಗೆ ಕ್ರಮ

ಹಲವಾರು ಸಮಸ್ಯೆಗಳ ಮಧ್ಯದಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆಯನ್ನು ಜಾರಿಗೆ ತರುವಲ್ಲಿ ಆದೇಶಗಳನ್ನು ಹೊರಡಿಸಿದ ರಾಜಕೀಯ ಹಿತಾಸಕ್ತಿಯ ಹೊಂದಿದ ಬಣ ಇದಾಗಿದೆ. ಇಲ್ಲಿನ ಉದ್ದೇಶಗಳೇನೆ ಇರಲಿ ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕೆಂಬ ಆದೇಶಗಳು ಬಂದಿರುವುದು ಶ್ಲಾಘನೀಯ. ಆದರೆ ಆಡಳಿತದಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಕೇವಲ ಆದೇಶಗಳನ್ನು ಜಾರಿಗೆ ತಂದು ಕಾರ್ಯಮುಗಿಯಿತೆಂದು ಕೊಂಡರೆ ಸಾಲದು. ಆಡಳಿತದಲ್ಲಿ ಕನ್ನಡವನ್ನು ಬಳಸಲು ಜಾರಿಗೆ ತಂದ ಆದೇಶಗಳು ಎಷ್ಟು ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂಬುದರ ಬಗ್ಗೆ ಗಮನ ಮತ್ತು ಅದನ್ನು ಪುನರಾವಲೋಕಿಸುವ ಕಾರ್ಯನಡೆಯಬೇಕಿದೆ.

೩.೨.೨. ಆಡಳಿತದಲ್ಲಿ ಕನ್ನಡ ಬಳಕೆ ಕಡ್ಡಾಯಕ್ಕೆ ವಿರೋಧ

ಕೆ.ವಿ.ನಾರಾಯಣರವರು, 'ಆಡಳಿತ ಕನ್ನಡ', ಪುಟ ಸಂಖ್ಯೆ ೪೩ ರಲ್ಲಿ ಹೇಳಿದಂತೆ, ಏಕೆ ಕನ್ನಡ ಆಡಳಿತ ಭಾಷೆಯಾಗಬೇಕು? ಹಾಗೆ ಆಗದಿದ್ದರೆ ಆಗುವ ತೊಂದರೆಗಳೇನು? ಕನ್ನಡ ಬಳಕೆ ಯಾಗದಿದ್ದಲ್ಲಿ ಅದರ ಪ್ರಯೋಜನೆಗಳು ಪೂರ್ವನಿರ್ಧಾರಿತವಾಗಿ ಯಾರಿಗಾದರು ಇರುವುದು ಸಾದ್ಯವೇ" ಎಂಬ ಪ್ರಶ್ನೆಗಳೆ ಮುಖ್ಯವಾಗಿ ಜನರ ಹಾಗೂ ಆಡಳಿತ ನಡೆಸುವವರ ಮಧ್ಯೆ ಕೇಳಿಬರುತ್ತಿವೆ ಎಂದು ತಿಳಿಸುತ್ತಾರೆ.

ಸರ್ಕಾರವು ಆಡಳಿತದಲ್ಲಿ ಕನ್ನಡವನ್ನು ಕಟ್ಟುನಿಟ್ಟಾಗಿ ಬಳಸಬೇಕೆಂದು ಆದೇಶಗಳನ್ನು ಹೊರಡಿಸಿ, ಅವುಗಳನ್ನು ಪಾಲನೆ ಮಾಡದವರ ವಿರುದ್ದ ಕ್ರಮಕೈಗೊಳ್ಳಲೂ ಸಹ ಅದೇಶಗಳಲ್ಲಿ ಸೂಚಿಸಿದ್ದಾಗಿದೆ. ಯಾವ ಭಾಷೆಯಾದರೇನು. ಆಡಳಿತ ಒಂದೇ ತಾನೆ, ಎಂದು ತಿಳಿದು ಒತ್ತಾಯ ಪೂರ್ವಕವಾಗಿ ಆಡಳಿತದಲ್ಲಿ ಕನ್ನಡವನ್ನು ಬಳಸಬೇಕೆಂಬುದನ್ನು ವಿರೋಧ ವ್ಯಕ್ತ ಪಡಿಸುವ ಬಣಗಳಲ್ಲಿ ಸಹಜವಾಗಿ ಮೇಲಿನ ಕೆ.ವಿ.ನಾರಾಯಣರವರು ಹೇಳಿದ ಪ್ರಶ್ನೆಗಳು ಮೂಡುವುದು ಖಂಡಿತ. ಇದಕ್ಕೆ ಕಾರಣ ರೂಪುರೇಷೆಗಳನ್ನು, ಯೋಜನೆಗಳನ್ನು ರೂಪಿಸುವಲ್ಲಿ ಹಾಗೂ ಅದನ್ನು ಜಾರಿಗೆ ತರುವಲ್ಲಿ ಅಥವಾ ಇವರಿಬ್ಬರ ಮಧ್ಯದಲ್ಲಿರುವ ಒಂದು ಅಂತರ ಎನ್ನಬಹುದು.

ರಾಜ್ಯ ಭಾಷಾನೀತಿ ಜಾರಿಯಾದ ನಂತರ, ಅಲ್ಲಿನ ಪ್ರಾದೇಶಿಕ ಭಾಷೆಯೇ ಅಲ್ಲಿನ ಆಡಳಿತ ಭಾಷೆಯಾಗಬೇಕೆಂಬ ನಿರ್ಧಾರದ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರಲಾಯಿತು. ಆದರೆ ಭಾಷಾ ಅಲ್ಪಸಂಖ್ಯಾತರಿರುವ ಕರ್ನಾಟಕದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರುವಲ್ಲಿ ಪ್ರಾರಂಭದಲ್ಲಿ ವಿರೋಧ ವ್ಯಕ್ತಪಡಿಸಿದ್ದನ್ನು ನಾವು ಚರಿತ್ರೆಯ ಪುಟಗಳಲ್ಲಿ ಅಲ್ಲಲ್ಲಿ ಕಾಣುತ್ತೇವೆ. ಇದು ಪ್ರಾರಂಭದಲ್ಲಿ ಸಮಸ್ಯೆ ಮತ್ತು ಸವಾಲಾಗಿ ಪರಿಣಮಿಸಿತು. ಮುಂದೆ ಕಾಲಾನಂತರದಲ್ಲಿ ವಿಶ್ಲೇಷಣೆ ಹಾಗೂ ಭಾಷಾ ಪರಿವಾರದ ಅಂಕಿ-ಅಂಶ ಸಂಖ್ಯೆಗಳನ್ನು ಸರ್ವೆ ಮುಖಾಂತರ ಕೈಗೊಂಡು ಸೂಕ್ತ ನಿರ್ಧಾರಗಳನ್ನು ತೆಗೆದುಕೊಂಡು ಸಲಹೆ ಸೂಚನೆಗಳ ವರದಿ ನೀಡಿದ್ದಾಗಿದೆ. ಆದರೆ ಕೆ.ವಿ.ನಾರಾಯಣ ಅವರು ಹೇಳುವಂತೆ "ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವ ವಿಚಾರವನ್ನು ಜಾರಿಗೆ ತರುವುದಾಗಿ ಸರ್ಕಾರ

ಹೇಳುತ್ತಲೇ ಇದೆ, ಆದರೆ, ಯಶಸ್ಸು ದೊರೆಯಲಿಲ್ಲವೆಂಬುದೇ ಕನ್ನಡ ಪರವಾದ ಹಲವರ ಅಳಲು" ಎಂದು ತಮ್ಮ ಮನದಾಳವನ್ನು ಬಿಚ್ಚಿಟ್ಟಿದ್ದಾರೆ, ಹಾಗಾದರೆ ಅದನ್ನು ಜಾರಿಗೆ ತರುವುದು ಒಂದು ಸಮಸ್ಯೆ ಹಾಗೂ ಸವಾಲಾಗಿದೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

೩.೨.೩. ಆಡಳಿತದಲ್ಲಿ ಕನ್ನಡ ಬಳಕೆ : ತಟಸ್ಥ ಮನಸ್ಸುಗಳು

ಆಡಳಿದಲ್ಲಿ ಕನ್ನಡವನ್ನು ಜಾರಿಗೊಳಿಸಬೇಕೆಂಬ ಬಣ ಒಂದಡೆ. ಅದನ್ನು ಏಕೆ ಜಾರಿಗೊಳಿಸಬೇಕೆಂಬುದು ಇನ್ನೊಂದು ಬಣ. ಇವೆಲ್ಲವುಗಳ ಮಧ್ಯೆ ರಾಜಕೀಯ ಹಿತಾಸಕ್ತಿ ಹೊಂದಿದವರು, ಆಡಳಿತ ಕನ್ನಡವನ್ನು ಜಾರಿಗೊಳಿಸಬೇಕು ಮತ್ತು ಏಕೆ ಜಾರಿಗೊಳಿಸಬೇಕು ಎಂಬುದರ ಹೇಳಿಕೆಗಳ ಮಧ್ಯದಲ್ಲಿ ತಟಸ್ಥರಾಗಿರುವುದು ಕಂಡುಬರುತ್ತದೆ. ಅದೇ ಆಡಳಿತದಲ್ಲಿ ಕನ್ನಡ ಬಳಕೆಗೆ ತಟಸ್ಥ ಮನಸ್ಸುಗಳ ಬಣ.

ಆಡಳಿತದ ಚುಕ್ಕಾಣಿ ಕೈಯಲ್ಲಿದ್ದರೂ ಅವುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸದೆ ತಟಸ್ಥರಾಗಿರುವುದು ಈ ಬಣದ ಮುಖ್ಯ ಲಕ್ಷಣ. ಸಾವಿರ ಆದೇಶಗಳು, ಮಸೂದೆಗಳು, ಬರಲಿ ಹೋಗಲಿ ಅದಕ್ಕೆ ಸಂಬಂಧವಿರದ ಹಾಗೆ ಆಡಳಿತ ಯಂತ್ರದಿಂದಲೇ ದೂರ ಉಳಿದ ಮನಸುಗಳಿರುವ ಜನಗಳಿಂದ ಕೂಡಿದ ಸಮೂಹ ಇದಾಗಿದೆ. ಇಂತಹ ಸಮೂಹದಿಂದ ಯಾವ ವಿಷಯದ ಫಲಿತಾಂಶವನ್ನು ಕಾಣಲು ಸಾಧ್ಯವಿಲ್ಲ. ಒಟ್ಟಾರೆಯಾಗಿ ಆಡಳಿತವನ್ನು ಜಾರಿಗೆ ತರುವಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇಲ್ಲಿ ಎದ್ದು ಕಾಣುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಮೇಲಿನವರ ಕಾನುನಾತ್ಮಕವಾದ ಹೋರಾಟದ ಸಮಸ್ಯೆ ಒಂದು ಕಡೆಯಾದರೆ ಪ್ರಾಯೋಗಿಕವಾಗಿ ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಪ್ರಭುತ್ವ ಎಡವುತ್ತಿದೆ ಎನ್ನುವ ಅಳಲು ಇನ್ನೊಂದೆಡೆ ಸಮಸ್ಯೆ ಹಾಗೂ ಸವಾಲಾಗಿ ಪರಿಣಮಿಸಿದೆ.

೩.೩. ತಾಂತ್ರಿಕ ಸಮಸ್ಯೆಗಳು ಮತ್ತು ಸವಾಲುಗಳು

ಕನ್ನಡ ವಿಧಾನ ಮಂಡಲದಲ್ಲಿ ಮಾತಿನಲ್ಲಿ ಮನ್ನಣೆ ಪಡೆದರೂ ಅದಕ್ಕೆ ಲಿಖಿತ ನೆಲೆಯಲ್ಲಿ ಅಧಿಕೃತತೆ ದೊರೆಯದೇ ಹೋದದ್ದಕ್ಕೆ ಹಲವಾರು ಕಾರಣಗಳನ್ನು ನಿಡಲಾಗಿದೆ. ಅಂತಹ ಕಾರಣಗಳು ತಾಂತ್ರಿಕ ನೆಲೆಯಲ್ಲಿ ಇರುವಂತೆ ತೋರುತ್ತವೆ. ಮುಖ್ಯವಾಗಿ ಕನ್ನಡ ಪರ ಅಧಿಕಾರಿಗಳು ಇಲ್ಲವೆಂಬ ಕೊರತೆ. ಕನ್ನಡದಲ್ಲಿ ದಾಖಲೆಗಳನ್ನು ಸಿದ್ದಪಡಿಸಲು ಅಗತ್ಯವಾದ ಬೆರಳಚ್ಚುಗಾರರು, ಶೀಘ್ರಲಿಪಿಗಾರರು ಇಲ್ಲವೆಂಬ ಪರಿಸ್ಥಿತಿ. ಬೆರಳಚ್ಚು ಯಂತ್ರಗಳು ಇಲ್ಲದಿರುವ ತಗಾದೆ. ದಾಖಲೆಗಳನ್ನು ಸಿದ್ಧಪಡಿಸಲು ಅಗತ್ಯವಾದ ನಮೂನೆಗಳು ಮಾದರಿಗಳು ಕನ್ನಡದಲ್ಲಿ ಲಭ್ಯವಿಲ್ಲ ಎಂಬ ನೆಪ ಇವೆಲ್ಲವೂ ಅಲ್ಲಲ್ಲಿ ಕೇಳಿಬಂದ ಸಂಗತಿಗಳು. ಇವೆಲ್ಲವನ್ನೂ ಸರ್ಕಾರವೂ ಕೂಡ ಬೇರೆ ಬೇರೆ ಸಂದರ್ಭಗಳಲ್ಲಿ ಒಪ್ಪಿಕೊಂಡು ಪರಿಹರಿಸಲು ಕ್ರಮ ಕೈಗೊಂಡಿದೆ.

ಅಧಿಕಾರಿಗಳಿಗೆ ಕನ್ನಡ ಭಾಷೆ ಕಲಿಯಲು ತರಬೇತಿ ನೀಡುವುದು, ಇಂಗ್ಲೀಷ್ ಬೆರಳಚ್ಚುಗಾರರು, ಶೀಘ್ರಲಿಪಿಗಾರರು ಕನ್ನಡದಲ್ಲಿ ವಿಶೇಷ ನೈಪುಣ್ಯ ಪಡೆಯಲು ಅವಕಾಶ ಕಲ್ಪಿಸಿ ಅದಕ್ಕೆ ಅವರಿಗೆ ಆರ್ಥಿಕ ನೆರವು ನೀಡುವುದು. ಕನ್ನಡದಲ್ಲಿ ಆಡಳಿತ ನಡೆಸಲು ಅಗತ್ಯವಾದ ಸಾಮಗ್ರಿಗಳನ್ನು

ಸಿದ್ಧಪಡಿಸುವುದು ಇತ್ಯಾದಿ ಕಾರ್ಯಕ್ರಮಗಳು ಅನೂಚಾನವಾಗಿ ನಡೆದು ಬಂದಿವೆ. ಸಮಸ್ಯೆ ಮತ್ತು ಪರಿಹಾರಗಳಿಗೆ ಇರುವ ಸಂಬಂಧವನ್ನು ಸರಿಯಾದ ಚೌಕಟ್ಟಿನಲ್ಲಿ ಪರಿಶೀಲಿಸಬೇಕಾಗುತ್ತದೆ. ಆಡಳಿತದಲ್ಲಿ ಕನ್ನಡದ ಅನುಷ್ಠಾನಕ್ಕೆ ಮೇಲೆ ಹೇಳಲಾದ ಕೊರತೆಗಳು ಎಷ್ಟು ಪರಿಣಾಮಕಾರಿ ಆಗಿದ್ದವು ಎಂಬುದನ್ನು ಆ ಹೊತ್ತಿಗೆ ಪರಿಶೀಲಿಸುವ ಪ್ರಯತ್ನಗಳು ನಡೆದಂತೆ ಕಾಣುತ್ತಿಲ್ಲವೆಂದು ಭಾಷಾತಜ್ಞರಾದ ಕೆ.ವಿ ನಾರಾಯಣ ಅವರು ಆಡಳಿತ ಕನ್ನಡ ಕೃತಿಯಲ್ಲಿ ತಿಳಿಸಿದ್ದಾರೆ.

ಮೇಲಿನ ಭಾಷಾತಜ್ಞರ ವಿಷಯವನ್ನು ಗಮನಿಸಿದಾಗ ಕನ್ನಡ ಪರ ಅಧಿಕಾರಿಗಳು ಇಲ್ಲವೆಂಬ ಕೊರತೆ. ಕನ್ನಡದಲ್ಲಿ ದಾಖಲೆಗಳನ್ನು ಸಿದ್ದಪಡಿಸಲು ಅಗತ್ಯವಾದ ಬೆರಳಚ್ಚುಗಾರರು, ಶೀಘ್ರಲಿಪಿಗಾರರು ಇಲ್ಲವೆಂಬ ಪರಿಸ್ಥಿತಿ. ಬೆರಳಚ್ಚು ಯಂತ್ರಗಳು ಇಲ್ಲದಿರುವ ತಗಾದೆ. ದಾಖಲೆಗಳನ್ನು ಸಿದ್ಧಪಡಿಸಲು ಅಗತ್ಯವಾದ ನಮೂನೆಗಳು, ಮಾದರಿಗಳು ಕನ್ನಡದಲ್ಲಿ ಲಭ್ಯವಿಲ್ಲ ಎಂಬ ನೆಪ. ನಿಜವಾಗಿಯೂ ಆಡಳಿತದಲ್ಲಿ ಕಡ್ಡಾಯವಾಗಿ ಕನ್ನಡದ ಬಳಕೆಯ ಸಂದರ್ಭದ ಮಾತುಗಳು ಕೇಳಿಬಂದಲ್ಲಿ ಈ ಮೇಲಿನ ಕಾರಣಗಳನ್ನು ಹೇಳಿ ಆಡಳಿತದ ವಲಯದಲ್ಲಿನ ಸಿಬ್ಬಂದಿ ಮತ್ತು ಅಧಿಕಾರಿವರ್ಗದವರು ಮತ್ತು ಕೆಲವೊಂದು ಹಿತಾಸಕ್ತಿ ಹೊಂದಿದ ವ್ಯಕ್ತಿಗಳು ಜಾರಿಕೊಳ್ಳುತ್ತಿರುವುದು ಆಡಳಿತದಲ್ಲಿದೆ.

ತಾಂತ್ರಿಕವಾಗಿ ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಅದಕ್ಕೆ ಸಂಬಂಧಪಟ್ಟ ಪೂರ್ಣಪ್ರಮಾಣದ ಸಿದ್ಧವಸ್ತುಗಳಿಲ್ಲ, ಗಣಕಯಂತ್ರಗಳಿಲ್ಲ, ನಮೂನೆಗಳಿಲ್ಲ ಎನ್ನುವುದು ತಪ್ಪು. ಅದಕ್ಕಾಗಿ ಈಗಾಗಲೇ ಸರ್ಕಾರವು ಆನೇಕ ತಂತ್ರಾಂಶಗಳನ್ನು ತಾಂತ್ರಿಕವಾಗಿ ಸಿದ್ದಪಡಿಸಿ ಇಲಾಖೆಗಳಿಗೆ ಅನುಷ್ಠಾನಕ್ಕಾಗಿ ಕ್ರಮಕೈಗೊಳ್ಳಲಾಗಿದೆ. ಆದರೆ ಅದನ್ನು ಸರಿಯಾಗಿ ಬಳಸುವ ಮನಸ್ಥಿತಿ ಆಡಳಿತದಲ್ಲಿ ಇಲ್ಲದಿರುವುದೇ ಒಂದು ವಿಪರ್ಯಾಸ.

ಇಂದಿನ ಆಧುನೀಕರಣದ ಬೆಳವಣಿಗೆಯ ಸಂದರ್ಭದಲ್ಲಿ ತಾಂತ್ರಿಕವಾಗಿ ಕನ್ನಡದ್ದೇ ಆದ ಬೇರಳಚ್ಚು ಕೀಲಿ ಮಣೆ ತಯಾರಾಗದೇ ಇರುವುದು ವಿಪರ್ಯಾಸ. ಒಂದು ವೇಳೆ ತಯಾರಾದರೂ ಬಳಕೆಗೆ ಬಾರದಿರುವುದು ತಾಂತ್ರಿಕವಾದ ಹಿನ್ನೆಡೆ.

ಇದು ಒಂದು ಭಾಗವಾದರೆ ಇದರ ಇನ್ನೊಂದು ಭಾಗ ಪತ್ರಕ್ಕೆ ಸಂಬಂಧಿಸಿದ ತಾಂತ್ರಿಕ ವಿಷಯಗಳು. ತಾಂತ್ರಿಕವಾಗಿ ಪತ್ರಬರವಣಿಗೆಯ ಸಂದರ್ಭದಲ್ಲಿ ಹಲವಾರು ತಪ್ಪುಗಳನ್ನು ಮಾಡುತ್ತಿರುವುದು ಪತ್ರಗಳಲ್ಲಿ ಕಂಡುಬರುತ್ತದೆ.

೧. ವಾಕ್ಯದೋಷ,

೨. ಶಬ್ಧದೋಷ

೩. ಅಕ್ಷರದ ಸ್ಥಾನಪಲ್ಲಟದಿಂದುಂಟಾಗುವ ದೋಷಗಳು.

೪. ಗಣಕಯಂತ್ರದ ಬಳಕೆ ಸಂದರ್ಭದಲ್ಲಿ ಎದರಿಸುತ್ತಿರುವ ತಾಂತ್ರಿಕ ಸಮಸ್ಯೆಗಳು.

೩.೩.೧. ವಾಕ್ಯದೋಷ

ಆಡಳಿತದಲ್ಲಿ ಕನ್ನಡ ಬಳಕೆಯ ಸಂದರ್ಭದಲ್ಲಿ ಮತ್ತು ಬರವಣಿಗೆಯ ಸಂದರ್ಭದಲ್ಲಿ

ವಾಕ್ಯಗಳನ್ನು ತಿರುಚುಮುರುಚಾಗಿ ಬರೆಯುವುದು, ಅರ್ಥಕೆಡುವಂತೆ ಬರೆಯುವುದು ಹೀಗೆ ಕನ್ನಡದ ಬಳಕೆ ಸರಿಯಾಗಿ ಆಗದಿರುವುದನ್ನು ವಾಕ್ಯದೋಷಗಳು ಎನ್ನುತ್ತೇವೆ. ಆಡಳಿತದಲ್ಲಿ ವಾಕ್ಯಗಳ ರಚನೆಯ ಸಂದರ್ಭದಲ್ಲಿ ಬೇನಾಮಿ ವಾಕ್ಯಗಳು ಗೊಂದಲವನ್ನುಂಟು ಮಾಡಿರುವುದು ಸಹಜ. ಇಂತಹ ವಾಕ್ಯಗಳು ಸರಿಯಾಗಿ ರಚನೆಯಾಗದಿರುವುದನ್ನು ಪತ್ರಗಳನ್ನು ಓದುವ ಸಂದರ್ಭದಲ್ಲಿ ಕಂಡಿಯೇ ಇರುತ್ತೇವೆ. ಇವೆಲ್ಲವುಗಳನ್ನು ಸಹಜವಾಗಿ ನಾವು ಆಡಳಿತ ಕನ್ನಡ ಬಳಕೆ ಸಂದರ್ಭದಲ್ಲಿನ ತಾಂತ್ರಿಕ ದೋಷಗಳೆಂದು ಅಥವಾ ತಾಂತ್ರಿಕ ಸಮಸ್ಯೆಗಳೆಂದು ಗುರುತಿಸಿದ್ದೇವೆ.

ತಾಂತ್ರಿಕ ಸಮಸ್ಯೆಗಳು ವಿಷಯ ನಿರ್ವಾಹಕರು ಬರವಣಿಗೆ ಸಂದರ್ಭದಲ್ಲಿ ಮಾಡಲಾದ ಬರಬಣಿಗೆ ದೋಷಗಳು ಮತ್ತು ಸಾರ್ವಜನಿಕರು ಕಚೇರಿಗಳಿಗೆ ಬರೆದ ಪತ್ರಗಳಲ್ಲಿನ ಸಾಮಾನ್ಯ ಬರವಣಿಗೆ ದೋಷಗಳು ಹಾಗೂ ಕಚೇರಿಗಳಿಗೆ ಬಂದ ಪತ್ರಗಳಲ್ಲಿ ಇಂತಹ ದೋಷಗಳನ್ನು ಆಡಳಿತದ ವಲಯದಲ್ಲಿ ಕಾಣುತ್ತೇವೆ.

ವಿಷಯನಿರ್ವಾಹಕರನ್ನು ಕೇಳಿದರೆ "ಎಲ್ಲಾ ಅರ್ಥ ಒಂದೇ ಬಿಡಿ ಸಾರ್" "ಅಳಿಯಲ್ಲ ಮಗಳ ಗಂಡ" ಎನ್ನುತ್ತಾರೆ. ಇಲ್ಲಿ ವಾಕ್ಯಗಳ ತಿರುಚು ಮುರುಚು ಆಗುವಿಕೆಯಿಂದ ಅರ್ಥಗಳು ಕೆಡದೇ ಇರಬಹುದು. ಆದರೇ ವಾಕ್ಯ, ಪದ, ಜೋಡಣೆಯಲ್ಲಿ ಒಂದು ಸ್ಪಷ್ಟತೆ ಇರುವುದಿಲ್ಲ ಕಾರಣ ತಿರುಚುಮುರುಚಾಗಿ ವಾಕ್ಯಗಳನ್ನಾಗಲಿ ಪದಗಳನ್ನಾಗಲಿ ಬರೆಯಬಾರದೆಂಬುದು ಅಭಿಪ್ರಾಯ ಹಾಗೂ ಇದೊಂದು ಸಮಸ್ಯೆಯೂ ಆಗಿದೆ.

ಸಮಸ್ಯೆಯ ಪರಿಹಾರಕ್ಕಾಗಿ ಹಾಗೂ ಬರವಣಿಗೆಯ ದೋಷಗಳನ್ನು ತಿದ್ದುವುದಕ್ಕಾಗಿ ಯೋಜನೆಗಳು ರೂಪರೇಷೆಗೊಂಡು ಕಾರ್ಯರೂಪಕ್ಕೆ ಬರಬೇಕಾಗಿಲ್ಲ, ಇದು ಸಹಜವಾಗಿ ಮತ್ತು ಭಾಷೆಯ ಮೇಲಿರುವ ಪ್ರಭುತ್ವದಿಂದ ಮಾತ್ರ ಸಾಧ್ಯವಾಗುತ್ತದೆ. ತರಬೇತಿಗಳು ಮತ್ತು ರೂಪಿತಗೊಂಡ ಬರವಣಿಗೆಯ ತಿದ್ದುವ ಯೋಜನೆಗಳು ಮತ್ತು ಕಾರ್ಯ ಶಿಬಿರಗಳು ಎಷ್ಟರಮಟ್ಟಿಗೆ ಎಲ್ಲರಿಗೂ ತಲುಪುವ ಹಾಗೆ ಮತ್ತು ತಲುಪಿದ ನಂತರ ಯಶಸ್ವಿಯಾಗಿ ಕಾರ್ಯರೂಪಕ್ಕೆ ಬರಬಲ್ಲವೇ ಎಂಬ ಪ್ರಶ್ನೆಗಳು ಉದ್ಭವಿಸುತ್ತಿದೆ. ಕಾರ್ಯ ರೂಪಕ್ಕೆ ಬಂದರೂ ಎಷ್ಟರಮಟ್ಟಿಗೆ ಮುಂದುವರೆಯ ಬಲ್ಲವು ಎಂಬ ಪ್ರಶ್ನೆಗಳು ಸಹ ಮೂಡಿ ಸಮಸ್ಯೆಗಳು ಸವಾಲಾಗುವ ಸಂದರ್ಭಗಳು ಕಂಡುಬರುತ್ತವೆ. ಈ ಸವಾಲುಗಳು ಪರಿಹಾರಗಳಿವೆ ಎಂದು ಯೋಚಿಸುವ ನಿಟ್ಟಿನಲ್ಲಿ ಪರಿಹಾರ ಕಂಡುಹಿಡಿಯಲು ಕಾರ್ಯ ಪ್ರವೃತ್ತರಾದರೇ ಅವು ಫಲಪ್ರದಾಯತೆಯನ್ನು ನೀಡುವುದಿಲ್ಲ. ಕಾರಣ ಈ ಬರವಣಿಗೆಯ ವಾಕ್ಯ ದೋಷ ಮತ್ತು ತಿರುಚುಮುರುಚಾಗಿ ಬರೆಯುವುದು ಅವರವರ ವೈಯಕ್ತಿಕ ಭಿನ್ನತೆಯ ಮೇಲೆ ಅವಲಂಬಿಸಿರುತ್ತದೆ. ಸಹಜವಾಗಿ ಸುಮಾರು ಪತ್ರಗಳ ಬರವಣಿಗೆಯಲ್ಲಿ ಈ ಸಮಸ್ಯೆಗಳು ಕಾಣುತ್ತಿವೆ ಎಂಬುದನ್ನು ಕೆಲವು ಉದಾಹರಣೆಯೊಂದಿಗೆ ಗಮನಿಸೋಣ.

ತಪ್ಪು : ನಾನು ಪತ್ರವನ್ನು ಕಳಿಸಿದ್ದೇನೆ,

ತಪ್ಪು : ಈ ಪತ್ರವನ್ನು ನಾನು ಕಳಿಸಿದ್ದೇನು

ಸರಿ : ಪತ್ರವನ್ನು ಕಳಿಸಲಾಗಿದೆ.

ತಪ್ಪು : ಕರಡು ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ

ತಪ್ಪು : ಅನುಮೋದಿಸಲ್ಪಟ್ಟಿದೆ ಕರಡು- ನಿರ್ದೇಶಕರಿಂದ

ಸರಿ : ಕರಡು ಅನುಮೋದಿಸಲ್ಪಟ್ಟಿದೆ.

ಸರಿಯಾದದ್ದನ್ನು ಬರವಣಿಗೆಗೆ ತರುವ ಭಾರ ಪ್ರತಿಯೊಬ್ಬರ ಮೇಲಿದೆ.

೩.೩.೨. ಶಬ್ದದೋಷ:

ಶಬ್ದದೋಷ ಎಂಬುದು ಭಾಷೆಯ ಬರವಣಿಗೆಯ ಸಂದರ್ಭದಲ್ಲಿ ಆದಂತಹ ತಪ್ಪುಗಳನ್ನೇ ಶಬ್ದ ದೋಷಗಳು ಎಂದು ಕರೆಯುತ್ತೇವೆ. ಈ ಭಾಷಾದೋಷಗಳ ತಪ್ಪುಗಳನ್ನೇ ಹೇಳುವುದಾದರೆ, ಹ್ರಸ್ವ-ದೀರ್ಘ, ಅಲ್ಪ ಪ್ರಾಣ-ಮಹಾಪ್ರಾಣ ಸಾಮಾನ್ಯವಾಗಿ ಆಗುವ ತಪ್ಪುಗಳ ರಚನೆಯ ದೋಷ, ಕೃತಕತೆ, ಅಸ್ಪಷ್ಟತೆ ಅಪಾರ್ಥತೆ, ಸಂದಿಗ್ಧತೆ, ಅರ್ಥಲಾಲಿತ್ಯ, ಗೊಂದಲ, ಸುತ್ತು ಬಳಸಿ ರಚನೆ, ವ್ಯಾಕರಣ ದೋಷಗಳು, ಬರವಣಿಗೆ ಶೈಲಿಯ ದೋಷಗಳು, ಉಪಮೆಯೇ ರೂಪಕಗಳ ಬಳಕೆ, ಅತಿ ಅಲಂಕಾರ ಭಾಷೆ ಇತ್ಯಾದಿ.

ಭಾಷಿಕವಾಗಿ ಹೇಳಬೇಕಾದದನ್ನು ಹೇಳದೇ ಇರುವುದು, ಹೇಳುವ ಅಗತ್ಯವಿಲ್ಲದ್ದನ್ನೆಲ್ಲಾ ಹೇಳುವುದು, ಈ ಮೊದಲಾದ ದೋಷಗಳಿಂದ ಕೂಡಿಸಿ ರಚನೆಗಳು ಸಹಜವಾಗಿ ಆಡಳಿತ ಕನ್ನಡ ಬಳಕೆ ಸಂದರ್ಭದಲ್ಲಿ ಕಂಡುಬರುತ್ತವೆ. ಅವುಗಳು ಆಗಬಾರದೆಂಬುದೇ ಉದ್ದೇಶ ಮತ್ತು ಅದೊಂದು ಸಮಸ್ಯೆ ಹಾಗೂ ಸವಾಲಾಗಿದೆ. ಬರವಣಿಗೆಯೆಂದರೆ ಕೇವಲ ಒಂದು ವಿಷಯಕ್ಕೆ ಸಂಬಂಧಿಸಿದ್ದಲ್ಲ. ಪ್ರತಿಯೊಬ್ಬ ವ್ಯಕ್ತಿಯ ಮಾನಸಿಕ ಹಾಗೂ ಭಾಷಿಕ ಸಾಮರ್ಥ್ಯದ ಮೇಲೆ ನಿಂತಿರುತ್ತದೆ. ಹೀಗಿರುವ ಪ್ರಸ್ತುತ ಸಂದರ್ಭದಲ್ಲಿ ಆದ ದೋಷಗಳನ್ನು ರಚನೆಯ ಸಂದರ್ಭಲ್ಲಿನ ದೋಷಗಳು ಎಂದು ಗುರುತಿಸಬಹುದಾಗಿದೆ. ಆದರೆ ಪ್ರತಿಯೊಬ್ಬರೂ ಭಾಷೆಯ ಬಳಕೆ ಮತ್ತು ಬರವಣಿಗೆಯ ಸಂದರ್ಭದಲ್ಲಿ ಈ ತಪ್ಪುಗಳನ್ನು ಮಾಡುತ್ತಿರುವುದು ಪ್ರತಿಯೊಂದು ಪತ್ರದಲ್ಲಿ ಕಾಣುತ್ತೇವೆ,

ಉದಾ:- ಕಾಯಿದಿಟ್ಟ-ಕಾಯ್ದಿಟ್ಟ, ಅಮುಶ-ಅಂಶ, ನೆಲೆಗುಳಿಸಲಾಯಿತು-ನೆಲೆಗೊಳಿಸಲಾಯಿತು, ಪರಗತಿ-ಪ್ರಗತಿ ಇದು ಒಂದು ಸಮಸ್ಯೆಯಾಗಿದೆ.

೩.೩.೩. ಅಕ್ಷರದ ಸ್ಥಾನ ಪಲ್ಲಟದಿಂದುಟಾಗುವ ದೋಷಗಳು:

ಒಂದು ವಾಕ್ಯದ ರಚನೆ ಅಥವಾ ಅತಿಚಿಕ್ಕ ಘಟಕವಾದ ಶಬ್ದದ ರಚನೆಯ ಸಂದರ್ಭದಲ್ಲಿ ಪದಗಳಲ್ಲಿನ ಅಕ್ಷರದ ಸ್ಥಾನ ಪಲ್ಲಟದಿಂಟಾಗುವ ತಪ್ಪುಗಳ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಬರವಣಿಗೆ ಎಂಬುದು ಶುದ್ಧ ಸ್ಪಷ್ಟ, ಹಾಗೂ ತಪ್ಪಿಲ್ಲದಂತೆ ಇರಬೇಕು. ಪತ್ರಗಳ ವಾಕ್ಯಗಳಲ್ಲಿನ ರಚನೆಯ ಸಂದರ್ಭದಲ್ಲಿ ಪದಗಳಲ್ಲಿನ ಅಕ್ಷರದ ಸ್ಥಾನಪಲ್ಲಟದಿಂದಾಗಿ ಅನೇಕ ಸಮಸ್ಯೆಗಳನ್ನು ನಾವು ಕಾಣುತ್ತೇವೆ. ಇದು ಬರವಣಿಗೆಗಾರ ಅಥವಾ ವಿಷಯನಿರ್ವಾಹಕರ ಸಮಸ್ಯೆಯಾಗಿರುತ್ತದೆ ಹೊರತು ಒಟ್ಟಾರೆಯಾದ ಸಮಸ್ಯೆಯಾಗಿರುವುದಿಲ್ಲ. ಅಲ್ಲದೇ ಇದು ಸವಾಲಾಗಿಯೂ ಪರಿಣಮಿಸಿರುವುದಿಲ್ಲ.

ವೈಯಕ್ತಿಕ ಭಿನ್ನತೆಯ ನೆಲೆಯಲ್ಲಿನ ಸಮಸ್ಯೆ ಅಥವಾ ವ್ಯಕ್ತಿಗತ ನೆಲೆಯಲ್ಲಿನ ಸಮಸ್ಯೆ ಎಂದು ಗುರ್ತಿಸಬಹುದಷ್ಟೆ.

ಉದಾ: ರಚನೆ–ಚರನೆ, ಪುಸ್ತಕ–ಕಪುಸ್ತ, ಬಾಗಿಲು–ಬಾಲುಗಿ, ಇವರು–ಇರುವ, ಇರುವ–ಇವರು, ಮನೋಸಾಮರ್ಥ್ಯ–ನಮೋಸಾಮರ್ಥ್ಯ, ಸವಾಲು–ಸಲುವಾ, ಗಮನ–ನಗಮ, ಸಮಯುಳಿಕೆ–ಸಮಳಿಯುಕೆ

೩.೩.೪. ಗಣಕಯಂತ್ರ ಬಳಕೆ ಸಂದರ್ಭದಲ್ಲಿ ಎದರಿಸುತ್ತಿರುವ ತಾಂತ್ರಿಕ ಸಮಸ್ಯೆಗಳು:

ಮನುಷ್ಯನ ಆಲೋಚನೆಗಳು ಬೆಳದಂತೆ ಜಗತ್ತು ಆಧುನೀಕರಣ ಹೊಂದುತ್ತಾ ಹೊಯಿತು. ಇಂದು ತನ್ನ ಅಂಗೈನಲ್ಲಿಯೇ ಪ್ರಪಂಚವನ್ನಿಟ್ಟುಕೊಂಡಿದ್ದಾನೆಂದರೆ ತಪ್ಪಾಗಲಾರದು. ಆಡಳಿತ ಕನ್ನಡದಲ್ಲಿ ಗಣಕಯಂತ್ರದ ಬಳಕೆಯು ಸಹ ಒಂದು ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ ಮತ್ತು ಪಡೆದುಕೊಳ್ಳುತ್ತದೆ ಇಂದಿನ ಜಾಗತಿಕರಣದಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆಯು ಗಣಕ ಯಂತ್ರದ ಮೂಲಕ ಮಹತ್ತರವಾದ ಮೇಲುಗೈ ಸಾಧಿಸಿದೆ ಎನ್ನಬಹುದು.

ಆಡಳಿತ ಕನ್ನಡ ಬಳಕೆಯ ಸಂದರ್ಭವನ್ನು ಗಣಕಯಂತ್ರದ ಮುಖಾಂತರ ಗಮನಿಸಿದಾಗ, ಇದರ ನಿರ್ವಾಹಕ ಮಾನವರಾಗಿದ್ದಾರೆ. ಇದರಿಂದ ಉಂಟಾದ ತಪ್ಪುಗಳೇನಾದರು ನಡೆದಿದೆ ಎನ್ನುವುದಾದರೆ ಅದು ನಮ್ಮಿಂದಲೇ ಆಗಿರಬೇಕು ಹೊರತು ಗಣಕ ಯಂತ್ರದಿಂದಲ್ಲ. ಇಂದು ಸಹಜವಾಗಿ ಎಲ್ಲಾ ಕಚೇರಿಗಳಲ್ಲಿ ಗಣಕಯಂತ್ರದ ಬಳಕೆ ಸರ್ವಸಾಮಾನ್ಯವಾಗಿ ಆಗುತ್ತಿದೆ. ಗಣಕಯಂತ್ರ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ, ಕೆಟ್ಟುಹೋಗಿದೆ ಎಂದಾಗ ಮಾತ್ರ ಅದರ ಕಾರ್ಯ ಸ್ಥಗಿತ ಗೊಳ್ಳುತ್ತದೆ. ಇದೊಂದನ್ನು ಬಿಟ್ಟು ಯಾವುದೇ ತಪ್ಪುಗಳು ಗಣಕ ಯಂತ್ರದ ಮೂಲಕ ನೆಡೆಯುವ ಸಾಧ್ಯತೆಗಳು ಇರುವುದಿಲ್ಲ.

ಒಂದು ಪತ್ರವನ್ನು ಬೆರಳಚ್ಚು ಮಾಡುತ್ತಿರುವ ಸಂದರ್ಭದಲ್ಲಿ ಕೆಲವು ತಪ್ಪುಗಳಾಗಿವೆ ಎಂದು ಭಾವಿಸೋಣ ಅದನ್ನು ನೋಡಿ 'ಏನು ಈ ರೀತಿಯ ತಪ್ಪುಗಳಿವೆ ಎಂದಾಗ' ಸಹಜವಾಗಿ ಎಲ್ಲಾರೂ ಹೇಳುವ ಉತ್ತರ ಅದು 'ಕಂಪ್ಯೂಟರ್ ಮಿಸ್ ಟೇಕ್' ಎನ್ನುತ್ತೇವೆ. ಇದು ಹೇಗೆ ತಾನೆ ಸಾಧ್ಯ? ತಪ್ಪನ್ನು ನಾವೇ ಮಾಡಿದ್ದರೂ ಅದನ್ನು ಕಂಪ್ಯೂಟರ್ ಮೇಲೆ ಹಾಕಿ ನುಸುಳಿಕೊಳ್ಳುವ ಪರಿಪಾಠ ನಮ್ಮಲ್ಲಿದೆ. ಹೀಗಾಗಿ ಕಂಪ್ಯೂಟರಿನ ಬಳಕೆಯ ಸಂದರ್ಭದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು (ಕೇವಲ ಬರವಣಿಗೆಗೆ ಸಂಬಂಧಿಸಿದಂತೆ) ಅವುಗಳೇನೆ ಇದ್ದರೂ ವಿಷಯನಿರ್ವಾಹಕ ಅಥವಾ ಕಾರ್ಯನಿರ್ವಾಹಕರಿಗೆ ಸಂಬಂಧಿಸಿದ್ದಾಗಿರುತ್ತದೆ. ಅವುಗಳಲ್ಲಿ ತಾಂತ್ರಿಕ ಸಮಸ್ಯೆಗಳು ಏನೇ ಇದ್ದರೂ ಸಹ ಅದು ಬೆರಳಚ್ಚುಗಾರರ ಮೇಲೆಯೇ ಅಥವಾ **ಗಣಕಯಂತ್ರ ನಿರ್ವಹಕರ** ಮೇಲೆ ನಿರ್ಧಾರವಾಗಿರುತ್ತದೆ.

- **ಗಣಕ ಯಂತ್ರದ ಬಗ್ಗೆ ಅರಿವು** ಅಥವಾ ತರಬೇತಿ ಹೊಂದಿದವರು ಅದನ್ನು ಬಳಸುವುದು ಸೂಕ್ತ.

- ದತ್ತಕಗಳ ಉಳಿಸುವಿಕೆಯೇ ಇಲ್ಲಿ ಮುಖ್ಯವಾದ ಪಾತ್ರವಹಿಸುತ್ತದೆ. ಇಲ್ಲವಾದಲ್ಲಿ ಮಾಡಿದ ಕೆಲಸವೆಲ್ಲವೂ ವ್ಯರ್ಥವಾದಂತೆ.
- ಬಳಕೆಯ ಸಂದರ್ಭದಲ್ಲಿ ತಪ್ಪುಗಳಾಗದಂತೆ ಗಮನ ಮತ್ತು ಎಚ್ಚರವಹಿಸತಕ್ಕದ್ದು.
- ಇದರ ಬಳಕೆ ಅತಿ ಅವಶ್ಯವಾಗಿ ಆಗಲೇಬೇಕು, ಸಮಯುಳಿಕೆ ಹಾಗೂ ತ್ವರಿತಗತಿಯಲ್ಲಿ ಕಾರ್ಯ ಸಾಧನೆಯಾಗುತ್ತದೆ ಮತ್ತು ಪದೇ ಪದೇ ಮಾಡುವ ಅವಶ್ಯಕತೆಗಳಿರುವಿದಿಲ್ಲ.
- ಅಂತರ್ಜಾಲದಲ್ಲಿ ಇನ್ನು ಪೂರ್ಣಪ್ರಮಾಣದಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆ ಆಗಬೇಕಿದೆ ಕೆಲವೊಂದು ತಾಂತ್ರಿಕ ದೋಷ, ಅದಕ್ಕೆ ಸಂಬಂಧಪಟ್ಟಂತಹ ಸಾಫ್ಟ್ ವೇರ್‌ಗಳು ಪೂರ್ಣ ಪ್ರಮಾಣದಲ್ಲಿ ರಚನೆಯಾಗದ ಕಾರಣ ಇನ್ನೂ ಕೆಲ ವಿಷಯಗಳ ಅಳವಡಿಕೆ ನೆನೆಗುದಿಗೆ ಬಿದ್ದಿವೆ. ಒಟ್ಟಾರೆಯಾಗಿ ಗಣಕ ಯಂತ್ರದ ತಾವಂತ್ರಿಕ ಸಮಸ್ಯೆಗಳನ್ನು ಹೊತರುಪಡಿಸಿ ಸಮಸ್ಯೆಗಳೇನೆ ಇದ್ದರೂ ಅವು ವಿಷಯ ನಿರ್ವಾಹಕರ ಅಥವಾ ಗಣಕಯಂತ್ರ ನಿರ್ವಾಹಕರ ಸಮಸ್ಯೆಗಳಾಗಿವೆಯೇ ಹೊರತು ಬೇರೆ ಸಮಸ್ಯೆಗಳಲ್ಲ ಎನ್ನುವುದು ಸೂಕ್ತ.

೩.೪. ಆಂತರಿಕ ಸಮಸ್ಯೆಗಳು ಮತ್ತು ಸವಾಲುಗಳು.:

ಕಚೇರಿಯಲ್ಲಿನ ದಿನನಿತ್ಯದ ಆಡಳಿತಕ್ಕೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳು ಇರುವುದು ಸಹಜ. ಆದರೆ ಕಚೇರಿಯಲ್ಲಿ ಆಂತರಿಕವಾಗಿ ಆಡಳಿತ ಕನ್ನಡವನ್ನು ಜಾರಿಗೆ ತರುವಲ್ಲಿ ಮತ್ತು ಬಳಕೆ ಮಾಡುವಲ್ಲಿ ಯಾವ ಯಾವ ಸಮಸ್ಯೆಗಳಿವೆ ಮತ್ತು ಅದರಿಂದ ಸಮಸ್ಯೆಗಳೇನಾದರು ಆಗಿವೆಯಾ? ಎಂಬ ವಿಷಯದ ಬಗ್ಗೆ ಅವಲೋಕಿಸಬೇಕಾಗಿದೆ.

೩.೪.೧. ಸರ್ಕಾರದ ರೂಪಿತ ನೀತಿ

ಆಡಳಿತ ಕನ್ನಡ ಸಂಪೂರ್ಣ ಅನುಷ್ಠಾನಕ್ಕಾಗಿ ಸರ್ಕಾರವು ಹಲವಾರು ನೀತಿಗಳನ್ನು, ಆದೇಶಗಳನ್ನು ಹಾಗೂ ಸಮಿತಿ ಹಾಗೂ ಪ್ರಾಧಿಕಾರಗಳನ್ನು ರಚನೆ ಮಾಡಿತು. ಆದರೆ ರೂಪಿತಗೊಂಡ ಸರ್ಕಾರದ ನೀತಿಗಳು ಎಷ್ಟರ ಮಟ್ಟಿಗೆ ಫಲಪ್ರದಾಯಕವಾಗಿ ಕಾರ್ಯನಿರ್ವಹಿಸಿದವೆಂಬುವುದು ಮಾತ್ರ ಪ್ರಶ್ನಾತೀತವಾಗಿದೆ. ಸರ್ಕಾರವು ನೀತಿ ನಿಯಮಗಳನ್ನು ಜಾರಿಗೆ ತಂದರೂ ಅವುಗಳನ್ನು ಅನುಷ್ಠಾನಗೊಳಿಸಬೇಕಾದದ್ದು ಅಧಿಕಾರಿಗಳ ವರ್ಗ ಮತ್ತು ಸಿಬ್ಬಂದಿ ವರ್ಗ. ಸರ್ಕಾರವು ಕಠಿಣ ಆದೇಶಗಳನ್ನು ರೀತಿ–ನೀತಿಗಳನ್ನು ರಚಿಸಿತಾದರೂ ಅವುಗಳನ್ನು ಜಾರಿಗೆ ತರುವಲ್ಲಿ ಆಸಕ್ತಿಯನ್ನು ತೋರಲಿಲ್ಲ ನೀತಿ ನಿಯಮಗಳನ್ನು ರಚಿಸುವ ಸಂದರ್ಭದಲ್ಲಿನ ಹುಮ್ಮಸ್ಸು ಅವುಗಳನ್ನು ಜಾರಿಗೆ ತರುವಲ್ಲಿ ಕಳೆದುಕೊಂಡು ನಿರಾಸಕ್ತಿಯನ್ನು ತೋರಿತು ಅಥವಾ ತೋರಿಸುತ್ತಿದೆ ಎನ್ನಬಹುದು.

ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡ 'ಆಡಳಿತ ಕನ್ನಡ' ಕೃತಿಯಲ್ಲಿ ಹೇಳುವಂತೆ ಸರ್ಕಾರದ ಇಚ್ಛಾಶಕ್ತಿ ಕೊರತೆಯಲ್ಲಿ ಆಡಳಿತ ಕನ್ನಡವನ್ನು ಜಾರಿಗೆ ತರುವಲ್ಲಿ ವಿಫಲವಾಗಿದೆ. ರೂಪಿತ ನೀತಿ ನಿಯಮಗಳು ಕಟ್ಟು ನಿಟ್ಟಾಗಿ ಕಠಿಣವಾಗಿದ್ದರೂ ಜಾರಿಗೆ ತರುವಲ್ಲಿ ವಿಫಲವಾಗಿದೆ. ಈ ನೀತಿ ನಿಯಮಗಳು ಜಾರಿಗೊಳ್ಳದೆ, ಅನುಷ್ಠಾನವಾಗದೇ ವಿಫಲವಾಗುವುದಕ್ಕೆ ಕಾರಣಗಳೇನು

ಎಂಬ ಪ್ರಶ್ನೆಯನ್ನು ಹಾಕಿದಾಗ ಅದಕ್ಕೆ ಹಲವಾರು ಕೊರತೆಗಳು ಕಂಡು ಬರುತ್ತದೆ ಹಾಗೂ ಸಮಸ್ಯೆಗಳು ತಲೆದೊರುತ್ತವೆ ಅವುಗಳನ್ನು ನೋಡಿದಾಗ;

೧. ೧೯೬೩ರ ಅಕ್ಟೋಬರ್ ೧೦ರಂದು ರಾಜ್ಯ ಭಾಷೆ ಅಧಿನಿಯಮವು ರಾಜ್ಯಪತ್ರದಲ್ಲಿ ಘೋಷಣೆಯಾಯಿತು. ಇದರ ಪ್ರಕಾರ ಸರ್ಕಾರಿ ಉದ್ದೇಶಗಳಿಗೆ ಬಳಸುವ ಭಾಷೆ ಇಂಗ್ಲೀಷ್ ಎಂದು ತಿಳಿಸುತ್ತಾ ಇಲ್ಲಿ ದ್ವಂದ್ವವನ್ನು ಸೃಷ್ಟಿಸಿರುವುದು ಪ್ರಾರಂಭದಲ್ಲಿ ಕಾಣುತ್ತೇವೆ.

೨. ಆಡಳಿತಕ್ಕೆ ಸಂಬಂಧಿಸಿದಂತೆ ರಾಜ್ಯಗಳನ್ನು ಭಾಷಾವಾರು ಹಿನ್ನಲೆಯಲ್ಲಿ ಪುನರ್ ವಿಂಗಡಣೆಯಾದ ನಂತರದಲ್ಲಿ ಅಲ್ಲಿನ ಭಾಷೆಯನ್ನು ರಾಜ್ಯ ಭಾಷೆ ಎಂದು ತೀರ್ಮಾನಿಸಲಾಯಿತು. ರಾಜ್ಯ ಭಾಷೆ ಅಧಿನಿಯಮದ ಪ್ರಕಾರ ಪುನಃ ಇಂಗ್ಲೀಷ್‌ಗೆ ರಾಜ್ಯ ವಿಧಾನ ಮಂಡಲದಲ್ಲಿ ಅವಕಾಶ ಕೊಟ್ಟಿತು. ಇದನ್ನ ಕಂಡು ಕೊಂಡರೆ ಸರ್ಕಾರಕ್ಕೆ ಇಂಗ್ಲೀಷನ್ನು ಬಿಡುವ ಮತ್ತು ಅದರ ಸಂಕೋಲೆಯಿಂದ ಹೊರಬರಲು ಸಾಧ್ಯವಾಗುತ್ತಿಲ್ಲವೆಂದೆನಿಸುತ್ತದೆ. ಈ ಹಿನ್ನಲೆಯಲ್ಲಿ ಸರ್ಕಾರವೇ ಆಡಳಿತ ಕನ್ನಡದ ಬಳಕೆಗೆ ಆಸ್ಪದ ನೀಡಲಿಲ್ಲವೆನ್ನಬಹುದು.

ಒಂದು ರೀತಿಯಲ್ಲಿ ಸರ್ಕಾರವು ಯಾವುದೇ ಉದ್ದೇಶವನ್ನು ಹೊಂದಿದ್ದರೂ ಇಂಗ್ಲೀಷನ್ನು ಬಳಕೆ ಮಾಡಲು ಅವಕಾಶ ಕೊಟ್ಟ ಹಿನ್ನೆಲೆಯೇ ದ್ವಂದ್ವಕ್ಕೆ ಕಾರಣವಾಯಿತು. ಇಂಗ್ಲೀಷ್‌ನ ಪ್ರೋತ್ಸಾಹ ಮತ್ತು ಪೋಷಣೆಯು ಆಡಳಿತ ಕನ್ನಡಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ಶೋಷಣೆಗಳು ಬಂದೊದಗಿದವು. ಅದನ್ನೆಲ್ಲಾ ನಿಭಾಯಿಸುವ ಮತ್ತು ಸರಿದೂಗಿಸುವ ಶಕ್ತಿ ಆಗಿನ ಸರ್ಕಾರಕ್ಕೆ ಇದ್ದರೂ ಅದರ ಬಗ್ಗೆ ಯಾವುದೇ ರೀತಿಯಲ್ಲಿ ಕ್ರಮಕೈಗೊಳ್ಳದೇ ಇರುವುದು ಹಾಗೂ ನಿರಾಸಕ್ತಿಯನ್ನು ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಹೀಗಾಗಿ ಈ ರೂಪಿತ ನೀತಿಯಲ್ಲಿ ದ್ವಂದ್ವವನ್ನು ಕಾಣುತ್ತೇವೆ. ಪ್ರಾಥಮಿಕವಾಗಿ ಇದೊಂದು ಸಮಸ್ಯೆಯಾಗಿದೆ. ಆಡಳಿತದಲ್ಲಿ ಕಡ್ಡಾಯ ಕನ್ನಡ ಬಳಕೆ ಮಾಡಬೇಕೆಂದು ೧೮ ಆಗಸ್ಟ್ ೧೮೬೬ ರಲ್ಲಿಯೇ ಕನ್ನಡವನ್ನು ಆಡಳಿತದಲ್ಲಿ ಜಾರಿ ಮಾಡಬೇಕೆಂದು ಆಗಿನ ಮೈಸೂರು ಕಮೀಷನರ್ ಒಂದು ಇಸ್ತಿಹಾರ ನಾಮೆಯನ್ನು (ಆದೇಶ) ಹೊರಡಿದ್ದರು.ಈ ಇಸ್ತಿಹಾರನಾಮೆಯಲ್ಲಿ ಹೇಳಲಾದ ವಿಷಯವೇನೆಂದರೆ ದಾಖಲು ಮಾಡುವ ಎಲ್ಲಾ ವಿಷಯಗಳು ಜನಗಳ ಸ್ವಂತ ಭಾಷೆಯಲ್ಲಿ ಇರತಕ್ಕದ್ದೆಂದು ಆಗಿನ ಸಂದರ್ಭದಲ್ಲಿಯೇ ಆದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಬ್ರಿಟೀಷರ ಅವಧಿಯಲ್ಲಿಯೇ ಆಡಳಿತ ಕನ್ನಡದ ಬಗ್ಗೆ ಕಡ್ಡಾಯವಾಗಿ ಜಾರಿಗೆ ತರುವ ಆಲೋಚನೆಗಳ ನಡೆದಿದ್ದವು ಎಂಬುದು ಸಾಬೀತಾಗುತ್ತದೆ.

ರಾಜ್ಯಭಾಷೆ ಅಧಿನಿಯಮಕ್ಕೆ ೧೯೮೨ರಲ್ಲಿ ೩ ತಿದ್ದುಪಡಿಗಳನ್ನು ಮಾಡಲಾಯಿತು. ಈ ತಿದ್ದುಪಡಿ ಪ್ರಕಾರ ರಾಜ್ಯದ ವಿಧಾನಮಂಡಲದಲ್ಲಿ ಕನ್ನಡ ಮತ್ತು ಹಿಂದಿ ಜೊತೆಗೆ ಇಂಗ್ಲೀಷನ್ನು ಮುಂದುವರಿಸಬಹುದು ಎಂಬ ತಿದ್ದುಪಡಿಯಾದರೂ ಇಲ್ಲಿಯೂ ಸಹ ಇಂಗ್ಲೀಷ್‌ನ್ನು ಬಿಡದ ಸರ್ಕಾರದ ವ್ಯವಸ್ಥೆ ಮತ್ತು ಹಿತಾಸಕ್ತಿ ಎದ್ದು ಕಾಣುತ್ತದೆ. ಈ ನಿಟ್ಟಿನಲ್ಲಿ ಮತ್ತೆ ತಿದ್ದುಪಡಿ ವಿಫಲವಾಗಿ ಇನ್ನೊಂದು ಸಮಸ್ಯೆಗೆ ಎಡೆಮಾಡಿಕೊಟ್ಟಿತು ಎನ್ನಬಹುದು. ಆಡಳಿತ ಕನ್ನಡ ಪುಸ್ತಕದಲ್ಲಿ

ವಿವರಿಸಿದಂತೆ ವಿಧಾನ ಮಂಡಲದ ಸದಸ್ಯರುಗಳೆಲ್ಲಾ ಸಹಜವಾಗಿ ಕನ್ನಡದಲ್ಲಿ ಆಡಳಿತ ವ್ಯವಹಾರವನ್ನು ನಡೆಸಬೇಕೆಂದು ಒತ್ತಾಯಿಸಿದ್ದರೂ ವಿಧಾನ ಮಂಡಲದಲ್ಲಿ, ಕನ್ನಡದಲ್ಲಿ ವ್ಯವಹರಿಸುತ್ತಿರಲಿಲ್ಲವೆಂದಲ್ಲ ಆದರೆ ಅಧಿಕೃತ ವ್ಯವಹಾರದ ದಾಖಲೆಗಳು ಇಂಗ್ಲೀಷ್‌ನಲ್ಲಿದ್ದದ್ದೇ ಅದಕ್ಕೆ ಆಕ್ಷೇಪಣೆಗಳು ಬರುತ್ತಿದ್ದುದು. ಸಮಾಜವಾದ ತಾತ್ವಿಕತೆಯ ಸದಸ್ಯರು ಮಾತ್ರ ಅಧಿಕೃತವಾಗಿ ಲಿಖಿತ ದಾಖಲೆಗಳು ಕನ್ನಡದಲ್ಲಿ ಇರಬೇಕೆಂದು ಒತ್ತಾಯಿಸುತ್ತಿದ್ದರೂ ಉಳಿದ ಸದಸ್ಯರಿಗೂ ಬರಹದ ಸ್ವರೂಪ ಇಂಗ್ಲೀಷನಲ್ಲೇ ಇರಬೇಕಿತ್ತು.

ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ವಿಧಾನಮಂಡಲದ ವ್ಯವಹಾರದ ಈ ನೀತಿ ವಿಚಾರ ಈಗಲೂ ಕೂಡ ಬೇರೆ ಬೇರೆ ಪ್ರಮಾಣದಲ್ಲಿ ಮುಂದುವರಿದಿದೆ. ಮಾತಿನ ನೆಲೆಯಲ್ಲಿ ಅವಕಾಶ ಪಡೆಯುವ ಕನ್ನಡ ಬರಹದ ಅಧಿಕೃತ ನೆಲೆಗೆ ದಾಟುವಾಗ ಮಾತ್ರ ಈಗಲೂ ಇಂಗ್ಲೀಷಿನ ಸಹಚರ್ಯದಲ್ಲಿ ಇರಬೇಕಾಗುತ್ತದೆ ಎಂದು ವಿವರಿಸಿದ್ದಾರೆ. ಬಾಯಿಮಾತಿನ ಮೇಲೆ ಆಡಳಿತ ಕನ್ನಡ ಜಾರಿಗೆ ತರುವ ವಿಚಾರವು ದಾಖಲೆಗಳಲ್ಲಿ ಸೇರಿತೇ ಹೊರತು ಕಾರ್ಯರೂಪಕ್ಕೆ ಬರಲಿಲ್ಲವೆಂಬ ಅಂಶ ಸ್ಪಷ್ಟವಾಗುತ್ತದೆ.

ವಿಧಾನಮಂಡಲದಲ್ಲಿ ಕೆಲಸಕ್ಕಾಗಿ ಮನ ಸಂತೃಪ್ತಿಗಾಗಿ ಆಶ್ವಾಸನೆಗಳ ರೂಪದಲ್ಲಿ ಹೊರಬಂದ ಈ ರೂಪಿತ ನೀತಿ ಅಥವಾ ಅದರಲ್ಲಿನ ಬದಲಾವಣೆಗಳು ಆಡಳಿತ ಕನ್ನಡವನ್ನು ಜಾರಿಗೆ ತರುವಲ್ಲಿ ಯಾವುದೇ ಬದಲಾವಣೆಗಳನ್ನು ತರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಈ ಸಂದರ್ಭದಲ್ಲಿ ಇದನ್ನು ಜಾರಿಗೆ ತರುವಲ್ಲಿ ಆಗದಿರುವುದಕ್ಕೆ ಸಮಸ್ಯೆಗಳೇನೆಂಬುವುದನ್ನು ಪರಿಶೀಲಿಸಿದಾಗ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ

೧. ಇಂಗ್ಲೀಷಿನ ಪ್ರಭಾವ ಮತ್ತು ಅದಕ್ಕೆ ಕಟ್ಟು ಬಿದ್ದನಮ್ಮ ಜಾಯಮಾನ

೨. ಇಂಗ್ಲೀಷಿನ ಒಲವು ಮತ್ತು ಕನ್ನಡದ ಬಗ್ಗೆ ನಿರಾಸಕ್ತಿ

೩. ಆಡಳಿತ ಕನ್ನಡ ಆಡಳಿತ ಭಾಷೆಯಾಕಾಗಬೇಕು? ಆಗದಿದ್ದರೆ ಏನಾಗುತ್ತದೆಂಬುವ ಮಾತುಗಳು ಅಲ್ಲಲ್ಲಿ ಕೇಳಿಬರುತ್ತಿರುವುದು.

ಈ ಎಲ್ಲಾ ಸಮಸ್ಯೆಗಳ ಮುಂಖಾತರ ಅಂದಿನ ಸಂದರ್ಭದಲ್ಲಿ ಆಡಳಿತ ಕನ್ನಡ ಇಂಗ್ಲೀಷನ ಭಾಷೆಯಿಂದ ಮಲತಾಯಿ ಧೋರಣೆ ಹೊಂದಿತು ಎನ್ನುವುದು ಸ್ಪಷ್ಟವಾಗುತ್ತದೆ.

ದಿನಾಂಕ ೧೦.೦೨.೧೯೮೨ರಂದು ಸರ್ಕಾರವು ದಿನಾಂಕ ೧೫.೦೨.೧೯೮೩ ರಿಂದ ಕನ್ನಡವನ್ನು ರಾಜ್ಯದಾದ್ಯಂತ ಆಡಳಿತ ಭಾಷೆಯಾಗಿ ಕಡ್ಡಾಯವಾಗಿ ಎಲ್ಲಾ ಹಂತದಲ್ಲೂ ತರುವ ಬಗ್ಗೆ ಸುತ್ತೋಲೆ ಹೊರಡಿಸಿತು. **(ಅನುಬಂಧ–೪)** ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಆದೇಶವನ್ನು ಹೊರಡಿಸಿ ಒಂದು ವರ್ಷಗಳ ಕಾಲ ಸಮಯವಕಾಶವನ್ನು ನೀಡಿದೆ. ತದನಂತರದಲ್ಲಿ ದಿನಾಂಕ ೧೬.೦೭.೧೯೮೮ಕ್ಕೆ ಸರ್ಕಾರವು ಇನ್ನೊಂದು ನಡಾವಳಿಗಳನ್ನು ಹೊರಡಿಸಿ "ಸರ್ಕಾರದ ಕಛೇರಿಗಳಲ್ಲಿ ತಾಂತ್ರಿಕ ವಿಷಯಗಳನ್ನು ವ್ಯವಹರಿಸುವ ಶಾಖೆಗಳನ್ನುಳಿದು ಉಳಿದ ಎಲ್ಲಾ ಶಾಖೆಗಳು ದೈನಂದಿನ

ಪತ್ರಗಳು ಸಂಪೂರ್ಣವಾಗಿ ಆಡಳಿತ ಕನ್ನಡ ಭಾಷೆಯಲ್ಲಿ ನಡೆಯಬೇಕು" ಎಂದು ಆದೇಶಿಸಿತು. **(ಅನುಬಂಧ-೫)** ಈ ರೂಪಿತ ಆದೇಶದಲ್ಲೂ ಮತ್ತೆ ಏಕರೂಪತೆಯನ್ನು ಕಾಣಲಿಲ್ಲ. ಕಾರಣವೇನೆಂದರೆ ಒಂದು ಕಚೇರಿಯಲ್ಲಿ ತಾಂತ್ರಿಕ ಸಿಬ್ಬಂದಿ ಹಾಗೂ ಲಿಪಿಕ ಸಿಬ್ಬಂದಿ ವರ್ಗದವರಿರುವುದರಿಂದ ಸದರಿ ಆದೇಶವು ಲಿಪಿಕ ವಿಭಾಗಕ್ಕೆ ಆದೇಶಿಸಿ, ತಾಂತ್ರಿಕ ವಿಭಾಗಕ್ಕೆ ಕಡ್ಡಾಯ ಕನ್ನಡದ ಆದೇಶಿಸದೇ ಇರುವ ಈ ಆದೇಶ ಎಷ್ಟಿರ ಮಟ್ಟಿಗೆ ಸರಿಯಾದದ್ದು ಎನ್ನುವ ಪ್ರಶ್ನೆ ಕಾಡಿ ಮತ್ತೆ ಇದರಲ್ಲಿ ದ್ವಂದ್ವ ಎದ್ದುಕಾಣುತ್ತದೆ.

ಇಂತಹ ಸಂದರ್ಭದಲ್ಲಿ ಈ ರೀತಿಯ ನೀತಿನಿಯಮಗಳ ಅಂಶಗಳನ್ನು ಜಾರಿಗೆ ತರುವಲ್ಲಿ ಸರ್ಕಾರವು ಎಡವಿದೆ ಎಂದು ತೋರುತ್ತದೆ. ಪತ್ರ ವ್ಯವಹಾರಗಳು ಸಂಪೂರ್ಣವಾಗಿ ಕನ್ನಡದಲ್ಲಿ ನಡೆಯಬೇಕೆಂಬ ಸರ್ಕಾರದ ತೆರೆಯಮರೆಯ ಹಿಂದಿನ ಧೋರಣೆಯನ್ನು ಒಪ್ಪೋಣ. ಆದರೆ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಎಡುವುತ್ತಿದೆ ಎನ್ನುವುದು ಮಾತ್ರ ಸತ್ಯ. ಇದಕ್ಕಿರುವ ಸಮಸ್ಯೆಗಳೇನು ಎಂಬುದನ್ನು ವೀಕ್ಷಿಸಿದಾಗ ಇಂಗ್ಲೀಷನ್ನು ಬಿಡಲಾದ ನಂಟು ಅಥವಾ ಇನ್ನೂ ಕನ್ನಡ ಆಡಳಿತದಲ್ಲಿ ಸತ್ವಯುತ ಕನ್ನಡವನ್ನು ಹೊಂದಿಲ್ಲವೆಂಬುದು ಇನ್ನೊಂದೆಡೆಗಿನ ಧೋರಣೆ, ಈ ಸಮಸ್ಯೆಯು ಇಂದಿಗೂ ಮುಂದುವರೆದಿದೆ.

ಭಾರತದ ಸಂವಿಧಾನದ ೩೪೫ನೇ ಅನುಚ್ಛೇದವು ಆಯಾ ಪ್ರದೇಶಿಕ ಭಾಷೆಯನ್ನು ಆಡಳಿತದಲ್ಲಿ ಬಳಕೆ ಮಾಡುವ ಬಗ್ಗೆ ಅವಕಾಶ ಕಲ್ಪಿಸಿಕೊಟ್ಟರೂ ಇಂದಿಗೂ ಅದು ಸಂಪೂರ್ಣವಾಗಿ ಜಾರಿಯಾಗುತ್ತಿಲ್ಲವೆಂಬುದೇ ಒಂದು ಸಂಗತಿ ಹಾಗೂ ಜಾರಿಗೆ ತರುವಲ್ಲಿ ನಮ್ಮ ದೌರ್ಬಲ್ಯವೇ ಸರಿ ಎಂಬುದು ಶೋಚನಿಯ ಸ್ಥಿತಿ.

೦೧.೧೧.೧೯೭೦ರಂದು ಕನ್ನಡ ಭಾಷಾ ಸಮಿತಿ ರಚನೆಯಾಯಿತು. ಇದಕ್ಕೆ ಪ್ರತಿಯಾಗಿ ಸರ್ಕಾರ ಆಡಳಿತ ನಡೆಸುವುದು ಸಾರ್ವಜನಿಕರ ಹಿತಕ್ಕಾಗಿ ಶೇ.೯೮ ಜನಕ್ಕೆ ಇಂಗ್ಲೀಷಿನ ಪರಿಚಯವಿಲ್ಲ. ಇಂಗ್ಲೀಷ್ ಬಲ್ಲ ಕೆಲವರ ಮೊರೆ ಹೊಕ್ಕುವಂತಹ ಪರಿಸ್ಥಿತಿ ತಪ್ಪಿಸಬೇಕೆಂದು ಸಮಿತಿ ವರದಿ ನೀಡಿತು ಹಾಗೂ ಕೆಲವೊಂದು ಶಿಫಾರಸ್ಸುಗಳನ್ನು ಮಾಡಿತು ಆ ಶಿಫಾರಾಸ್ಸುಗಳು ಯಾವೂ ಕಾರ್ಯಗತಕ್ಕೆ ಬಾರದೇ ಹಾಗೇಯೇ ಉಳಿದುದನ್ನು ಇಂದಿಗೂ ಕಂಡಿದ್ದೇವೆ. ಈ ಸಮಿತಿಯ ಆಶೋತ್ತರಗಳಾವುವು ಕೈಗೂಡದೆ ಹಾಗೇ ಉಳಿದವು ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತರುವಲ್ಲಿ ಸರಕಾರ ಎಡವಿತು ಮತ್ತು ಇಚ್ಛಾಶಕ್ತಿ ಇಲ್ಲದಿರುವುದು ಕಂಡು ಬರುತ್ತದೆ. ಇಚ್ಛಾಶಕ್ತಿ ಒಂದು ವೇಳೆ ಇದ್ದರೂ ಜಾರಿಗೆ ತರವಲ್ಲಿ ವಿಫಲವಾಯಿತು ಎಂದೇಳಬಹುದು.

ತದ ನಂತರದಲ್ಲಿ ಇವೆಲ್ಲವುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲೇಬೇಕು ಮತ್ತು ಆಡಳಿತದಲ್ಲಿ ಕನ್ನಡ ಜಾರಿಗೆ ಬರಲೇಬೇಕು ಹಾಗೂ ತರದವರ ವಿರುದ್ದ ಸೂಕ್ತ ಕ್ರಮಕೈಗೊಳ್ಳಬೇಕೆಂಬ ನಿಟ್ಟಿನಲ್ಲಿ ಆಡಳಿತ ಕನ್ನಡ ಕುರಿತು ಸರ್ಕಾರದ ನೀತಿಯನ್ನು ಯಶ್ವಸಿಗೊಳಿಸಲು ವಿವಿಧ ಇಲಾಖೆಗಳು ಕೈಗೊಂಡ ಕ್ರಮ ಹಾಗೂ ಅವಲೋಕನ ಮಾಡುವುದು ಅವಶ್ಯವೆಂಬ ಭಾವನೆ.

ಈ ಎಲ್ಲಾ ಪರಿವಿಕ್ಷಣೆಗಾಗಿ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ನಿರ್ಧರಿಸಿ ಸರ್ಕಾರವು ಅದಕ್ಕಾಗಿ ೧೯೮೩ ಜೂನ್-೨೩ರಂದು "ಕನ್ನಡ ಕಾವಲು : ಸಮಿತಿ"ಯೊಂದನ್ನು ರಚಿಸಿತು. ಅದೆ ಮುಂದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವಾಯಿತು. ಈ ಸಮಿತಿಯು ತನ್ನದೇ ರೀತಿಯಲ್ಲಿ ಕಾರ್ಯವ್ಯಾಪ್ತಿಯನ್ನು ನಿಗದಿಪಡಿಸಿಕೊಂಡು ಕಾರ್ಯನಿರ್ವಹಿಸಿತು.

ಸರ್ಕಾರದ ಭಾಷಾ ನೀತಿ ಪ್ರಕಾರ ೧೯೮೪ರ ಅಂತ್ಯದೊಳಗೆ ಎಲ್ಲಾ ಕನ್ನಡ ಮಯವಾಗಬೇಕು. ರಾಜ್ಯದ ಎಲ್ಲಾ ಇಂಗ್ಲೀಷಿನ ಶಾಸನಗಳು, ವಿಧೇಯಕಗಳು, ನಿಯಮ ನಿಬಂಧನೆಗಳು, ಕನ್ನಡಕ್ಕೆ ಭಾಷಾಂತರವಾಗಬೇಕು. ಕನ್ನಡ ಕಾವಲು ಸಮಿತಿಯ ಈ ನಿಲುವನ್ನು ಒಪ್ಪಿದ್ದೇವೆ. ಆದರೆ ಅವರ ನಿಲುವುಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಮತ್ತೆ ಸಫಲತೆಯನ್ನು ಪಡೆಯಬಲ್ಲದೇ ಎಂಬುದು ಎದ್ದು ಕಾಣುತ್ತದೆ. ಅಂದಿನ ಕನ್ನಡ ಕಲಿತವರ ಸಮಿತಿಯ ನೀತಿ ನಿರ್ಧಾರಗಳು ಇಂದಿಗೂ ಜಾರಿಯಾಗದೇ ಹಾಗೆಯೇ ಮುಂದುವರೆದು ಕೊಂಡು ಬಂದಿರುವುದು ಸತ್ಯಸಂಗತಿ. ಇಡಿಯಾದ ವ್ಯವಸ್ಥೆಯನ್ನು ನಾವು ದೂರುತ್ತಿಲ್ಲ ಆದರೆ ಅದರಲ್ಲಿ ಸರ್ಕಾರದ ನಾನಾ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಕಾರ್ಯನಿರ್ವಹಿಸಿದೆಯಾದರು ಸಮಿತಿಯ ಉದ್ದೇಶ ಈಡೇರದಿರುವುದು ಕಂಡು ಬರುತ್ತದೆ. ಇದಕ್ಕೆ ಆಡಳಿತದಲ್ಲಿ ಇರುವ ಜಡಮತಿಯ ಪರಿಕಲ್ಪನೆಯಲ್ಲಿ ಅಥವಾ ಜಾರಿಗೆ ತರುವಲ್ಲಿನ ನಿರಾಸಕ್ತಿ ಎಂಬುದು ಯಕ್ಷ ಪ್ರಶ್ನೆಯಾಗಿದೆ.

೦೧.೧೧.೧೯೮೬ರಂದು ಸಮಗ್ರ ಆಡಳಿತ ಭಾಷಾವರ್ಷವೆಂದು ಆಚರಿಸಲು ಸರ್ಕಾರ ನಿರ್ಧರಿಸಿ ಇದಕ್ಕಾಗಿ ಅಂದು ಕೆಲವೊಂದು ಆದೇಶ ಹೊರಡಿಸಿತು. ಅದೇನೆಂದರೆ ಕನ್ನಡ ಬಳಸದ ಮತ್ತು ಜಾರಿಗೊಳಿಸಲಾದ ನೀತಿಯನ್ನು ಪಾಲಿಸಿದ ಮತ್ತು ಜಾರಿಗೆ ತರುವಲ್ಲಿ ಉದಾಸೀನ ತೋರಿಸುವ ಅಧಿಕಾರಿಗಳ ಮತ್ತು ನೌಕರರ ಮೇಲೆ ಉಗ್ರಕ್ರಮ ಕೈಗೊಳ್ಳಲಾಗುವುದು. ಹಾಗೂ ಇದು ಕೊನೆ ಎಚ್ಚರಿಕೆ ಎಂದು ಸ್ಪಷ್ಟವಾಗಿ ತಿಳಿಸಿತ್ತಾದರೂ ತಪ್ಪುಮಾಡಿದ ಮತ್ತು ನೀತಿಗಳನ್ನು ಪಾಲಿಸದ ಅಧಿಕಾರಿಗಳಿಗೆ, ನೌಕರರಿಗೆ ಕ್ರಮಕೈಕೊಂಡ ಪ್ರಕರಣಗಳು ಆಡಳಿತದಲ್ಲಿ ಕಾಣಲಾಗುವುದಿಲ್ಲ. ಇದೇ ವಿಷಯಕ್ಕೆ ಸಂಬಂದಿಸಿದಂತೆ ಮತ್ತೆ ದಿನಾಂಕ ೧೩.೦೬.೨೦೦೨ರಲ್ಲಿ ಸುತ್ತೋಲೆಯನ್ನು ಸರ್ಕಾರವು ಹೊರಸಿಸಿರುವುದು ಯೋಚಿಸಬೇಕಾದ ವಿಷಯವಾಗಿದೆ. **(ಅನುಬಂಧ-೬)**

ಆದರೆ ಈ ಒಂದು ಆದೇಶವು ಸಹ ಕಚೇರಿ ಕಡತದಲ್ಲಿಯೇ ಉಳಿಯಿತು ಹೊರತು ಪ್ರಾಯೋಗೀಕವಾಗಿ ಜಾರಿಗೆ ಬರಲೇ ಇಲ್ಲ. ಈ ನಿಟ್ಟನಲ್ಲಿ ಕೆಲವೊಂದು ಕೆಲಸ ಕಾರ್ಯಗಳು ನಡೆದಿರುವುದನ್ನು ಕಾಣಬಹುದು. ಅದೇನೆಂದರೆ ಆದೇಶಗಳು, ವಿಧೇಯಕಗಳು, ಮಸೂದೆಗಳು ತರ್ಜುಮೆ ಮತ್ತು ಭಾಷಾಂತರವಾಗುವ ಕಾರ್ಯವಾಯಿತೇ ಹೊರತು ಆಡಳಿತದಲ್ಲಿ ಕನ್ನಡ ಬಳಕೆಯ ಕಾರ್ಯವಾಗಲಿಲ್ಲವೆಂಬುದು ದುರಂತರ ಸಂಗತಿ.

೧೯೯೦ ಜುಲೈ ೨೭ ಸರ್ಕಾರವು ಅಧಿಕೃತ ಜ್ಞಾಪನಾಪತ್ರವನ್ನು ಹೊರಡಿಸಿ ಕೇಂದ್ರ ಸರ್ಕಾರದ ಕಚೇರಿ ಮತ್ತು ಹೊರ ರಾಜ್ಯಗಳ ನ್ಯಾಯಾಲಯಗಳೊಡನೆ ನಡೆಸಬಹುದಾದ ಪತ್ರ ವ್ಯವಹಾರಗಳನ್ನು ಹೊರತು ಪಡಿಸಿ ಉಳಿದೆಲ್ಲಾ ವ್ಯವಹಾರಗಳು ಕನ್ನಡದಲ್ಲಿರಬೇಕು ಎನ್ನುವ

ಆದೇಶ ಜಾರಿ ಮಾಡಲಾಗಿದೆ. ಆದರೆ ಆ ಅದೇಶದಲ್ಲಿ ಮತ್ತೆ ಮಲತಾಯಿ ಧೋರಣೆಯನ್ನು ತೋರಿಸಿ, ಹೊರರಾಜ್ಯ ಮತ್ತು ಕೇಂದ್ರಸರ್ಕಾರದೊಂದಿಗೆ ವ್ಯವಹಾರಿಸುವ ಭಾಷೆ ಯಾವುದೆಂದು ವಿವರಿಸಲಿಲ್ಲ ಆದರೆ ಇಂಗ್ಲೀಷ್ ಬಳಕೆ ಮಾಡುವುದು ಮತ್ತು ಆಡಳಿತ ಇಂಗ್ಲೀಷ್‌ನಲ್ಲಿ ನಿರ್ವಹಿಸುವುದು ಕಂಡು ಬಂದರೆ ಅಂತಹವರ ವಿರುದ್ಧ ಶಿಸ್ತಿನಕ್ರಮ ಕೈಗೊಳ್ಳಲಾಗುವುದೆಂದು ಸೂಚಿಸಿತು.

ಪ್ರಸ್ತುತ ಸಂದರ್ಭದಲ್ಲಿ ಆದೇಶಕ್ಕೆ ಸಂಬಂಧಪಟ್ಟಂತೆ ಇಲ್ಲಿ ಎಲ್ಲರಿಗೂ ಸಂಪೂರ್ಣ ಏಕಮುಖಿಯವಾದ ಒಮ್ಮತದ ನಿಲುವು ಇಲ್ಲದಿರುವುದು ಕಂಡುಬರುತ್ತದೆ. ಇಂಗ್ಲೀಷ್ ಭಾಷೆ ಇನ್ನೂ ಬಳಸಲಾಗುತ್ತಿದ್ದು ಅದು ಸರ್ಕಾರದ ಗಮನಕ್ಕೆ ಬಂದಿದ್ದಾಗ್ಗಿಯೂ, ಇದನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸುವ ಸರ್ಕಾರ ಯಾವ ಉದ್ದೇಶಕ್ಕಾಗಿ ಬಳಕೆ ಮಾಡದವರ ವಿರುದ್ಧ ಕ್ರಮಕೈಗೊಳ್ಳದೆ ಹಾಗೆ ಬಿಟ್ಟಿರುವುದು ಹಲವು ಸಂಶಯಕ್ಕೆ ಕಾರಣವಾಗಿದೆ. ಸರ್ಕಾರವು ರೂಪಿತ ನೀತಿಗಳಲ್ಲಿನ ಸಡಿಲಿಕೆಗಳು ಎದ್ದುಕಾಣುತ್ತವೆ. ಹೀಗಾಗಿ ಈ ನೀತಿಯು ಕಾರ್ಯಗತಗೊಂಡು ಫಲಪ್ರದಾಯಕತೆಯನ್ನು ನೀಡಲಲ್ಲಿವೆಂಬುದು ಶೋಚನಿಯ ಸಂಗತಿ.

೧೯೯೩–೯೪ನೇ ವರ್ಷವನ್ನು ಕನ್ನಡ ಜಾಗೃತ ವರ್ಷವೆಂದು ಆಚರಿಸಲಾಯಿತು. ಸಾರ್ವಜನಿಕ ನಿಗಮ, ವಿಶ್ವವಿದ್ಯಾಲಯ, ಸ್ವಯಂ ಸಂಸ್ಥೆಗಳಲ್ಲಿ ತಮ್ಮ ಆಡಳಿತವನ್ನು ಕನ್ನಡದಲ್ಲಿಯೇ ನಡೆಸಬೇಕೆಂದು ಆದೇಶಗಳಲ್ಲಿ ಜಾರಿಗೆ ಬಂದಿತು ಆದರೆ ಅದು ಇಂದಿಗೂ ಕಾರ್ಯಗತಗೊಳ್ಳಲೇ ಇಲ್ಲ.

೧೧.೦೧.೧೯೮೫ರಲ್ಲಿ ಸರ್ಕಾರ ಆದೇಶ ಹೊರಡಿಸಿ ಕರ್ನಾಟಕದ ಎಲ್ಲಾ ವಾಣಿಜ್ಯ ಮತ್ತು ವ್ಯವಹಾರ ಸಂಸ್ಥೆಗಳ ನಾಮಫಲಕಗಳು ಕನ್ನಡದಲ್ಲಿ ಎದ್ದು ಕಾಣುತ್ತಿದ್ದು ನಂತರದಲ್ಲಿ ಅದರ ಅಡಿಯಲ್ಲಿ ಇತರೆ ಭಾಷೆಗಳಲ್ಲಿ ಬರೆಯುವಂತೆ ನಿರ್ದೇಶಿಸಿ ಆದೇಶವನ್ನು ಹೊರಡಿಸಿತ್ತು. ಕೆಲವೊಂದು ಸ್ಥಳಗಳಲ್ಲಿ ಇಂದಿಗೂ ಈ ಆದೇಶದ ತಿರಸ್ಕೃತ ಹಾಗೂ ಗಣನೆಗೆ ತೆಗೆದುಕೊಳ್ಳದಿರುವುದು ಕಂಡುಬರುತ್ತದೆ. ಇದಕ್ಕೆ ಈಗಲೂ ಕನ್ನಡಮಟ್ಟದ ಪ್ರತಿ ಇಲಾಖೆಯ ಅಧಿಕಾರಿಗಳು ಅವರವರ ಇಲಾಖೆಗೆ ಸಂಬಂಧಿಸಿದಂತೆ ಸೂಕ್ತ ಕ್ರಮಕೈಗೊಂಡಲ್ಲಿ ಪೂರ್ಣಪ್ರಮಾಣದಲ್ಲಿ ಕನ್ನಡವನ್ನು ಜಾರಿಗೆತರಲು ಸಾಧ್ಯವಾಗುತ್ತದೆ. ಪ್ರತಿ ಹೆಜ್ಜೆಯಲ್ಲಿ ಇದು ಬದಲಾಗಬೇಕಿದೆ. ಇದಕ್ಕೆ ನೂರು ಕಾರಣಗಳಿರಲಿ ಇದಕ್ಕೆ ಸಂಬಂಧಿಸಿದಂತೆ ಆದೇಶ ಜಾರಿಗೊಳ್ಳಬೇಕಿದೆ. ಹಾಗೂ ಅದು ಕಾರ್ಯಗತಗೊಂಡು ಅನುಷ್ಠಾನಗೊಳ್ಳಬೇಕಾಗಿದೆ. ಸರಕಾರ ಅನುಷ್ಠಾನಗೊಳಿಸುವಲ್ಲಿ ಎಡವುತ್ತಿರುವುದು ಶೋಚನೀಯ ಸಂಗತಿ, ನಂತರದಲ್ಲಿ ಬಂದ ಸರೋಜನಿ ಮಹಿಷಿ ವರದಿಯಲ್ಲಿ ಕನ್ನಡದವರಿಗೆ ಮಿಸಲಾತಿ ಹಾಗೂ ಕನ್ನಡಿಗರಿಗೆ ಉದ್ಯೋಗವಕಾಶಗಳಿಗೆ ಒತ್ತು ಕೊಟ್ಟಿತ್ತು. ಈ ವರದಿಯ ಪ್ರಸ್ತಾಪವು ಕೇವಲ ಮಾಹಿತಿಗಾಗಿ ಮಾತ್ರ ನೀಡಲಾಗಿದೆ.

ಮಹಾಜನ್ ಆಯೋಗ ವರದಿಯು ೨೫.೧೧.೧೯೬೭ರಲ್ಲಿ ಜಾರಿಗೊಂಡು ಗಡಿವಿವಾದಕ್ಕೆ ಸಂಬಂಧಪಟ್ಟಂತೆ ನ್ಯಾಯದೊರಕಿಸಿ ಕೊಡುವ ಕಾರ್ಯವನ್ನು ಮಾಡಿತು.

೧೨.೧೦.೨೦೦೪ರಂದು ಕೇಂದ್ರ ಸರ್ಕಾರವು ತನ್ನ ಅಧಿಸೂಚನೆಯ ಮೂಲಕ ತಮಿಳು ಭಾಷೆಯನ್ನು ಶಾಸ್ತ್ರಿಯ ಭಾಷೆಯೆಂದು ಘೋಷಿಸಿತು. ಆಗಿನ ಸಂದರ್ಭದಲ್ಲಿ ಕನ್ನಡಕ್ಕೂ ಶಾಸ್ತ್ರೀಯ ಭಾಷೆಯ ಸ್ಥಾನಮಾನಗಳು ಸಿಗಬೇಕೆಂಬ ದೃಷ್ಟಿಯಿಂದ ಹೋರಾಟ ಪ್ರಾರಂಭವಾಯಿತು. ಈ ನಿಟ್ಟಿನಲ್ಲಿ ಅನೇಕ ಜನರ ಶ್ರಮದ ಪರಿಣಾಮವಾಗಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನವನ್ನು ತಂದು ಕೊಟ್ಟಿರುವುದು ಶ್ಲಾಘನೀಯ ಸಂಗತಿಯಾಗಿದ್ದರೂ ಸಹ ದಾಖಲೆಗಳಲ್ಲಿ ಮಾತ್ರ ಅವುಗಳ ಸಂಚಲನೆಗಳನ್ನು ನಾವು ಕಾಣಬಹುದು. ಪ್ರಾಯೋಗಿಕವಾಗಿ ಆಡಳಿತ ಭಾಷೆ ಸಂಪೂರ್ಣವಾಗಿ ಜಾರಿಗೊಳ್ಳುತ್ತಿಲ್ಲವೆಂಬ ಕೊರಗು ಕಾಡುತ್ತಿದೆ.

ಕೆವಿಎನ್ ಇವರ **'ಕನ್ನಡ ಜಗತ್ತು ಅರ್ದಶತಮಾನ'**ದ ಕೃತಿಯಲ್ಲಿ ಇವುಗಳ ಬಗ್ಗೆ ಹಾಗೂ ಆಡಳಿತ ಕನ್ನಡ ಕೃತಿಯಲ್ಲಿ ಪುಟ ೩೯೨ ರಿಂದ ೩೯೪ರಲ್ಲಿ ವಿವರಿಸಿದಂತೆ "ಸರ್ಕಾರವು ನೂರಾರು ಆದೇಶಗಳನ್ನು ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಹೊರಡಿಸಿದರೂ ಅದರ ಪರಿಣಾಮ ಏನು ಆಗಿಲ್ಲ, ಇದಕ್ಕೆ ಸರ್ಕಾರದಲ್ಲಿನ ಇಚ್ಚಾಶಕ್ತಿಯ ಕೊರತೆ ಎಂಬ ಟೀಕೆ ಕೇಳಿದ್ದೇವೆ ಹಾಗೂ ಯೋಜನಾ ಕಾರ್ಯಕ್ರಮದ ಅಪಯಶ್ವಸ್ಸಿಗೆ ರೂಪಿತ ಯೋಜನಾ ತಂತ್ರಗಳಲ್ಲಿ ಕೊರತೆ ಇರುತ್ತವೆ ಅಥವಾ ಅವುಗಳ ಅನುಷ್ಠಾನದಲ್ಲಿಎಡರು .ತೊಡರುಗಳಿರಬೇಕು. ಕನ್ನಡ ಅನುಷ್ಠಾನಕ್ಕೆ ಬೇಕಾದ ಭಾಷಾ ನೀತಿ ಮತ್ತು ಯೋಜನೆಗಳು ರಾಜ್ಯ ಸರ್ಕಾರಕ್ಕೆ ಇಲ್ಲವೆಂಬ ನಿರ್ಣಯಕ್ಕೆ ಬರುವುದು ಸಾಧ್ಯ. ಹಾಗೂ ಏಕೆ ಕನ್ನಡ ಆಡಳಿತ ಭಾಷೆಯಾಗಬೇಕು ಹಾಗೆ ಆಗದಿದ್ದರೆ ತೊಂದರೆಗಳೇನು ಕನ್ನಡ ಬಳಕೆಯಾಗದಿದ್ದಲ್ಲಿ ಅದರ ಪ್ರಯೋಜನಗಳು ಪೂರ್ವನಿರ್ಧರಿತವಾಗಿ ಯಾರಿಗಾದರೂ ಇರುವುದು ಸಾಧ್ಯವೇ. ಎಂಬ ಪ್ರಶ್ನೆಗಳು ಮುಖ್ಯವಾಗಿ ಕಾಡುತ್ತವೆ. ಹೀಗಾಗಿ ಜನರು ಆಡಳಿತ ಯಂತ್ರದೊಂದಿಗಿನ ಸಂಬಂಧ ಅತ್ಯಂತ ಕನಿಷ್ಠ ಪ್ರಮಾಣದ್ದಾಗಿದೆ. ಕಾರಣ ಕನ್ನಡ ಆಡಳಿತ ಭಾಷೆಯಾಗಿ ನೆಲೆಗೊಳ್ಳುವ ಅವಕಾಶಗಳು ಕಡಿಮೆಯಾಗುತ್ತಿದೆ" ಎಂಬ ವಿವರಣೆಯನ್ನು ನೀಡಿದ್ದಾರೆ. ಅವುಗಳ ಜೊತೆಗೆ ಕೊರತೆ ಮತ್ತು ಸಮಸ್ಯೆ ಏನಿದೆ ಎಂಬುದನ್ನು ವಿವರಿಸಿದ್ದಾರೆ.

ಆದರೆ ಪರಿಶೀಲಿಸಿ ನೋಡಲಾಗಿ ಕೆ.ವಿ ನಾಯಾಯಣ ಅವರ ಅಭಿಪ್ರಾಯದಲ್ಲಿ ಕನ್ನಡ ಅನುಷ್ಠಾನಕ್ಕೆ ಬೇಕಾದ ಭಾಷಾನೀತಿ ಮತ್ತು ಯೋಜನೆಗಳು ಸರ್ಕಾರಕ್ಕೆ ಇಲ್ಲವೆಂಬ ನಿರ್ಣಯಕ್ಕೆ ಬರುವುದು ಸಾಧ್ಯವೆಂದಿದ್ದಾರೆ. ಆದರೆ ಆಡಳಿತ ಕನ್ನಡದ ಜಾರಿಗೆ ತರವಲ್ಲಿನ ನೀತಿ ಮತ್ತು ಯೋಜನೆಗಳ ರೂಪುರೇಷೆಗಳನ್ನು ನೋಡಿದಾಗ ಯೋಜನೆಗಳು ಮತ್ತು ಭಾಷಾನೀತಿಗಳು ಸರ್ಕಾರಕ್ಕೆ ಇಲ್ಲವೆಂದೇನಲ್ಲ ಇದ್ದರೂ ಅವುಗಳಲ್ಲಿನ ದ್ವಂದ್ವ ಮತ್ತು ರೂಪಿತ ಯೋಜನೆಗಳಲ್ಲಿನ ಸ್ವರೂಪಗಳ ಅನುಷ್ಠಾನದ ಕೊರತೆಯ ಸಮಸ್ಯೆ ಎದ್ದು ಕಾಣುತ್ತದೆ ಎಂಬುದು ಸ್ಪಷ್ಟವಾಗುತ್ತದೆ ಅಲ್ಲದೇ ಕನ್ನಡ ಆಡಳಿತ ಭಾಷೆ ಯಾಕೆ ಆಗಬೇಕು? ಹಾಗೆ ಆಗದಿದ್ದರೆ ಆಗುವ ತೊಂದರೆಗಳು ಏನು? ಇದರ ಪ್ರಯೋಜನೆಗಳು ಪೂರ್ವನಿರ್ಧರಿತವಾಗಿ ಯಾರಿಗಾದರೂ ಇರುವ ಸಾಧ್ಯತೆಗಳಿವೆಯೇ? ಎಂಬ ಪ್ರಶ್ನೆಗಳನ್ನು ಎತ್ತಿದ್ದಾರೆ.

ಕನ್ನಡ ಆಡಳಿತ ಭಾಷೆ ಏಕೆ ಆಗಬೇಕು? ಆದರಿಂದ ಆಗುವ ಪ್ರಯೋಜನೆಗಳೇನು? ಎಂಬ ಪ್ರಶ್ನೆಗಳನ್ನು ಎತ್ತುವವರ ಜ್ಞಾನದ ಮಟ್ಟ ಎಷ್ಟಿದೆ ಎಂದು ಪರಿಶೀಲಿಸಬೇಕಾಗುತ್ತದೆ. ಈ ರೀತಿಯ ಚಿಂತನೆಗಳನ್ನು ಮಾಡುವವರು ಮಾನಸಿಕ ಸ್ಥಿತಿ ಮತ್ತು ಕನ್ನಡ ಬಗೆಗಿನ ಅವರ ದೋರಣೆ ಮತ್ತು ಯಾವ ಕಡೆ ಅವರ ಒಲವು ಅಥವಾ ಅವರ ಪರಿಕಲ್ಪನೆಯಲ್ಲಿ ಏನಿದೆ ಎಂಬ ವಿಷಯಗಳನ್ನು ತಾಳೇ ನೋಡಬೇಕಾಗಿದೆ. ಬಹುಶಃ ಈ ನಿಲುವನ್ನು ತಳೆದಿರುವವರು ಕನ್ನಡಪರ ಅಥವಾ ಆಡಳಿತ ಭಾಷೆಯ ಬಗೆಗಿನ ವಿಷಯದ ಚಿಂತಕರು ಅಲ್ಲದೆ ಇರುವುದು ಆಡಳಿತ ಭಾಷೆಯ ಪರಿಕಲ್ಪನೆ ಅವರಿಗೆ ತಿಳಿಯದೇ ಇರುವುದು ಮೇಲಿನ ನೋಟಕ್ಕೆ ಕಂಡುಬರುತ್ತದೆ. ಈ ರೀತಿಯ ಬಗೆ ಬಗೆಯ ಆಡಳಿತ ಕನ್ನಡ ಪರ ದೋರಣೆಗಳಿಗೆ ತಲೆ ಕೊಡದೇ ಕಟ್ಟುನಿಟ್ಟಾಗಿ ಆಡಳಿತ ಕನ್ನಡವನ್ನು ಜಾರಿಗೆ ತರವಲ್ಲಿ ಪೂರ್ಣಪ್ರಮಾಣದಲ್ಲಿ ಶ್ರಮಿಸಬೇಕಾಗಿದೆ.

ಆಡಳಿತ ಕನ್ನಡವನ್ನು ಜಾರಿಗೆ ತರುವಲ್ಲಿ ಪೂರ್ವನಿರ್ಧರಿತವಾಗಿ ಪ್ರಯೋಜನೆಗಳು ಇರುವುದು ಸಾಧ್ಯವೇ ಎಂಬ ಪ್ರಶ್ನೆಯ ಹಿಂದಿನ ಉತ್ತರ, ರಾಜ್ಯ ಮತ್ತು ರಾಜ್ಯದ ಆಡಳಿತದ ಹಿತದೃಷ್ಟಿಯಿಂದ ರಾಜ್ಯಕ್ಕೆ ಅನುಕೂಲಕರವಾದ ನಿಟ್ಟಿನಲ್ಲಿ ಜನಸಾಮಾನ್ಯರ ಹಿತಾಸಕ್ತಿಗಳಿಗನುಗುಣವಾಗಿ ಆಡಳಿತ ಭಾಷೆ ಕನ್ನಡವನ್ನು ಜಾರಿಗೆ ತರುವಲ್ಲಿ ಪೂರ್ವನಿರ್ಧರಿತವಾದ ಪ್ರಯೋಜನಗಳನ್ನಿಟ್ಟುಕೊಂಡೆ ಅದರ ಅನುಷ್ಠಾನಕ್ಕೆ ಸರ್ಕಾರವಾಗಲಿ ಸ್ವಯಂ ಸಂಸ್ಥೆಗಳಾಗಲಿ ಶ್ರಮಿಸುತ್ತಿರುವುದು ಸತ್ಯ ಸಂಗತಿ.

೩.೪.೨. ಆಡಳಿತ ಯಂತ್ರ

ಒಂದು ಆಡಳಿತ ಸುಗಮವಾಗಿ ನಡೆಯಬೇಕಾದರೆ ಅಲ್ಲಿನ ಸಿಬ್ಬಂದಿವರ್ಗ ಮತ್ತು ಅಧಿಕಾರಿವರ್ಗದವರು ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಬೇಕಾಗುತ್ತದೆ. ಈ ಒಂದು ಆಡಳಿತದ ಯಂತ್ರದಲ್ಲಿ ಅಧಿಕಾರಿಗಳು ಮತ್ತು ಲಿಪಿಕ ಸಿಬ್ಬಂದಿ ಮತ್ತು ತಾಂತ್ರಿಕ ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿರುತ್ತಾರೆ. ಆಂತರಿಕವಾಗಿ ಕಚೇರಿಯ ಆಡಳಿತವನ್ನು ಸಹಜವಾಗಿ ಮೂರು ವಿಭಾಗಗಳಲ್ಲಿ ವಿಂಗಡಿಸುತ್ತಾರೆ.

೧. ಲಿಖಿತ ಲಿಪಿಕ ಸಿಬ್ಬಂದಿ Ministerial staff

೨. ತಾಂತ್ರಿಕ ಸಿಬ್ಬಂದಿ Techinical staff ಇವೆರಡರ ಮಧ್ಯದಲ್ಲಿ ಮೂರನೆಯದಾಗಿ

೩. ಅಧಿಕಾರಿಗಳ ವರ್ಗ.

ಯಾವುದೇ ಇಲಾಖೆಯನ್ನು ಉದಾಹರಣೆಯಾಗಿ ತೆಗೆದುಕೊಂಡಾಗ ಈ ಮೂರು ಅಂಶಗಳು ಮುಖ್ಯವಾಗಿ ಕಾಣಿಸುತ್ತವೆ. ಲಿಪಿಕ ಸಿಬ್ಬಂದಿಯವರು ಕಚೇರಿಯಲ್ಲಿನ ಕಾರ್ಯಭಾರವನ್ನು ನೋಡಿಕೊಂಡು ಹೋಗುವುದಾದರೆ ತಾಂತ್ರಿಕ ಸಿಬ್ಬಂದಿಯವರು ಅಧಿಕಾರಿಗಳಿಗೆ ತಾಂತ್ರಿಕವಾಗಿ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಇವರಿಬ್ಬರಿಗೆ ಮಾರ್ಗದರ್ಶನ ಮತ್ತು ಆಡಳಿತವನ್ನು ಸುಸೂತ್ರವಾಗಿ ನಡೆಸಲು ಅಧಿಕಾರಿಗಳು ಮುಖ್ಯ ಪಾತ್ರವನ್ನು ವಹಿಸುತ್ತಾರೆ.

ಕಚೇರಿಯ ಎಲ್ಲಾ ಕೆಲಸ ಕಾರ್ಯಗಳು ಅಧಿಕಾರಿಗಳ ನಿರ್ದೇಶನ ಮತ್ತು ಮಾರ್ಗದರ್ಶನದ ಮೇಲೆಯೇ ನಡೆಯುತ್ತವೆ.

ಕಚೇರಿಗೆ ಬರುವ ಪತ್ರಗಳನ್ನು ಸರಿಯಾಗಿ ನಮೂದಿಸಿ ಅಧಿಕಾರಿಗಳ ನಿರ್ದೇಶನದಂತೆ ಕಡತ ಹಾಗೂ ಟಿಪ್ಪಣಿಗಳನ್ನು ತಯಾರಿಸುವುದು ಕಚೇರಿಯಲ್ಲಿನ ಸಿಬ್ಬಂದಿಗಳ ಕೆಲಸ. ಪತ್ರಗಳು ತಾಂತ್ರಿಕ ವಿಷಯಕ್ಕೆ ಸಂಬಂಧಪಟ್ಟಿದ್ದರೆ ಅವುಗಳನ್ನು ತಾಂತ್ರಿಕ ಸಿಬ್ಬಂದಿಗೆ ಹಸ್ತಾಂತರಿಸಿ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ. ನಾವು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಯಾವಾಗ ತಾಂತ್ರಿಕ ಸಿಬ್ಬಂದಿ ವರ್ಗದವರಿಗೆ ಪತ್ರಗಳನ್ನು ಮುಂದಿನ ಕ್ರಮನಿರ್ವಹಿಸಲು ಹಸ್ತಾಂತರಿಸಲಾಗುತ್ತದೆ ಅಲ್ಲಿಯೇ ಸಮಸ್ಯೆ ಪ್ರಾರಂಭವಾಗುತ್ತದೆ.

ಸಹಜವಾಗಿ ಆಡಳಿತ ಕನ್ನಡದ ಪರಿಚಯ ಮತ್ತು ಬಳಕೆ ತಿಳಿಯದೇ ಇರುವ ಎಷ್ಟೋ ತಾಂತ್ರಿಕ ಸಿಬ್ಬಂದಿ ವರ್ಗದವರಿದ್ದಾರೆ. ಇವರೆಲ್ಲರಿಗೂ ಆಡಳಿತ ಕನ್ನಡದ ಬಳಕೆ ತುಸು ಕಷ್ಟವೇ. ಮೇಲಾಗಿ ತಾಂತ್ರಿಕ ಸಿಬ್ಬಂದಿ ವರ್ಗದವರ ಕಾರ್ಯವು ನೇರವಾಗಿ ಸಾಮಾಜಿಕವಾಗಿ ಬಂಧಿಸಲ್ಪಟ್ಟಿರುತ್ತದೆ. ಹಾಗಾಗಿ ಇಲ್ಲಿ ಸಹಜವಾಗಿ ಪ್ರಾದೇಶಿಕತೆ, ಗ್ರಾಮೀಣ ಭಾಷೆ, ಮಾತೃ ಭಾಷೆಯ ಪ್ರಭಾವದ ಹಿನ್ನೆಲೆಯಲ್ಲಿ ಪತ್ರಗಳು ರಚನೆಗೊಳ್ಳುವುದನ್ನು ಆಡಳಿತದಲ್ಲಿ ಕಾಣುತ್ತೇವೆ

ಸಹಜವಾಗಿ ತಾಂತ್ರಿಕ ಸಿಬ್ಬಂದಿ ವರ್ಗದವರಿಗೆ ಆಡಳಿತ ಕನ್ನಡ ಭಾಷೆ ಬಳಕೆಯ ಪರಿಚಯವೂ ಸರಿಯಾಗಿ ಇರುವುದಿಲ್ಲ ಹೀಗಾಗಿ ಈ ಭಾಗದಲ್ಲಿ ಆಡಳಿತ ಕನ್ನಡ ನಿರ್ಲಕ್ಷಕ್ಕೊಳಗಾಗಿರುವುದು ಅಥವಾ ಸರಿಯಾಗಿ ಬಳಕೆಯಾಗದಿರುವುದು ಕಂಡುಬರುತ್ತಿದೆ.

ಉದಾ:- ಪಂಚನಾಮೆ, ಪ್ರಥಮ ವರ್ತಮಾನ ವರದಿ (FIR), ಸರ್ವೆ ರಿಪೋರ್ಟ, ಸ್ಥಳ ತನಿಖೆ ಇತ್ಯಾದಿಗಳು ಇಲ್ಲಿ ಆಡಳಿತದ ಯಂತ್ರವು ತಾಂತ್ರಿಕ ಸಹಾಯಕರ ಸಿಬ್ಬಂದಿಗಳ ಮುಖಾಂತರ ನಡೆಯುವುದರಿಂದ ತಪ್ಪು ಎಂದು ಹೇಳಲಾಗದು ಅವರಲ್ಲಿ ಆಡಳಿತ ಕನ್ನಡದ ಬಗ್ಗೆ ಪರಿಚಯವಿಲ್ಲದಿರುವುದು ಮುಖ್ಯವಾಗಿ ಕಂಡು ಬರುತ್ತದೆ ಎಂದು ಹೇಳಬಹುದು.

ತಾಂತ್ರಿಕ ಸಿಬ್ಬಂದಿಯವರು ತಯಾರಿಸಿಕೊಂಡು ಬಂದ ವರದಿ, ಪಂಚನಾಮೆ, FIR ಗಳನ್ನು ತಂದು ಲಿಪಿಕ ಸಿಬ್ಬಂದಿ ವರ್ಗದವರಿಗೆ ಸಲ್ಲಿಸುತ್ತಾರೆ. ಲಿಪಿಕ ಸಿಬ್ಬಂದಿಯವರು ಮುಂದಿನ ಕ್ರಮಕ್ಕಾಗಿ ಅಧಿಕಾರಿಗಳ ಮುಖಾಂತರ ಮೇಲಿನ ಹಂತಕ್ಕೆ ಕಳುಹಿಸುತ್ತಾರೆ. ಈ ನಿಟ್ಟಿನಲ್ಲಿ ಕನ್ನಡ ಬಳಕೆಯಲ್ಲಿ ಯಾವುದೇ ರೀತಿಯ ಬಳಕೆ ಆಗಿರಲಿ ಆಗದಿರಲಿ ಅದಕ್ಕೆ ಪ್ರಾಧಾನ್ಯತೆಯನ್ನು ಕೊಡುವುದಿಲ್ಲ. ಇಲ್ಲಿ ಮುಖ್ಯವಾಗಿ ಅವರು ತಯಾರಿಸಲ್ಪಟ್ಟ ವರದಿ ಪಂಚನಾಮೆ, ಸ್ಥಳ ತನಿಖಾವರದಿ, ಸರ್ವೆ ವರದಿಗಳಿಗೆ ಮಾತ್ರ ಪ್ರಾಧಾನ್ಯತೆಯನ್ನು ನಿಡಲಾಗುತ್ತದೆ. ಸಮಸ್ಯೆಯನ್ನು ಹೋಗಲಾಡಿಸಬೇಕಾಗಿದೆ. ಇಲ್ಲಿ ತಾಂತ್ರಿಕ ಸಿಬ್ಬಂದಿ ವರ್ಗದವರಿಗೆ ಇದರ ಬಗ್ಗೆ ಕಾರ್ಯಾಗಾರಗಳನ್ನು ಏರ್ಪಡಿಸಿ ಅದರ ಬಗ್ಗೆ ತರಬೇತಿ ನಿಡಿದಲ್ಲಿ ಸ್ವಲ್ಪ ಮಟ್ಟಿಗೆಯಾದರು ಕನ್ನಡದ ಬಳಕೆ ಯಶಸ್ವಿಪೂರ್ಣವಾಗಬಲ್ಲದು.

ಈ ಮೇಲಿನ ಇಲ್ಲಾ ಸಿಬ್ಬಂದಿ ವರ್ಗ ಮತ್ತು ಅಧಿಕಾರಿಗಳ ವರ್ಗದ ನಡುವಿನ ಸಮಸ್ಯೆಗಳು ಬೇರೆ ಬೇರೆ ರಿತಿಯಲ್ಲಿಯೇ ಇರುವುದು ನಮಗೆ ಕಂಡುಬರುತ್ತದೆ. ಆಂತರಿಕವಾಗಿ ಇಡಿಯಾದ ಆಡಳಿತ ವ್ಯವಸ್ಥೆಯನ್ನು ಆಡಳಿತದ ಹಿತದೃಷ್ಟಿಯಿಂದ ನಾಲ್ಕು ವರ್ಗಗಳಾಗಿ ವಿಂಗಡಿಸಲಾಗಿದೆ.

'A' ವೃಂದದ ಅಧಿಕಾರಿಗಳ ವರ್ಗ

'B' ವೃಂದದ ಅಧಿಕಾರಿಗಳ ವರ್ಗ.

'C' ವೃಂದದ ಅಧಿಕಾರಿಗಳ ಹಾಗೂ ನೌಕರರ ವರ್ಗ.

'D' ವೃಂದದ ನೌಕರರ ವರ್ಗ.

ವಿಭಾಗ ಮಾಡಲಾದ ಈ ಆಡಳಿತ ವರ್ಗದ ವೃಂದ ಒಂದು ಪಿರಮಿಡ್ ವ್ಯವಸ್ಥೆಯಂತೆ ಕಂಡುಬರುತ್ತದೆ. ಮೇಲೆ ಹೊದಂತೆಲ್ಲಾ ಕನ್ನಡದ ಬಳಕೆ ಕಡಿಮೆ ಹಾಗೂ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತದೆ.

ಹೀಗಾಗಲೆ ಹಿಂದಿನ ಅಂಶದಲ್ಲಿ ವಿವರಿಸಿದಂತೆ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ಮಧ್ಯೆ ಒಂದು ದೊಡ್ಡದಾದ ಅಂತರ ವಿರುವುದನ್ನು ಕಾಣಬಹುದು. ಅದೇನೆಂದರೆ, ಪ್ರತಿಯೊಂದು ಹಂತದಲ್ಲಿ ಅಧಿಕಾರಿಗಳಿಗೆ ಕಡತಗಳ ಬಗ್ಗೆ ಪೂರ್ಣವಾಗಿ ತಿಳಿದಿರುವುದಿಲ್ಲ, ತಿಳಿದಿದ್ದರೂ ಮತ್ತೆ ನೆನಪಿಸಬೇಕಾದ ಸಂದರ್ಭಗಳು ಬರುತ್ತವೆ. ಕಡತ ಮತ್ತು ಪತ್ರಗಳ ಬಗ್ಗೆ ಹಾಗೂ ಅದಕ್ಕೆ ಸಂಬಂಧಪಟ್ಟ ಮಾಹಿತಿಗಳೆಲ್ಲವೂ ತಮ್ಮ ಅಧೀನ ಸಿಬ್ಬಂದಿ ವರ್ಗದವರಿಂದ ಮಾತ್ರ ಅಧಿಕಾರಿಗಳಿಗೆ ಮಾಹಿತಿ ಸಿಗಲು ಸಾಧ್ಯ ಹಾಗೂ ವಿಷಯ ನಿರ್ವಾಹಕರೇ ಅದನ್ನು ಪೂರೈಸಬೇಕಾದ ಮತ್ತು ಸರಿಯಾದ ರೀತಿಯಲ್ಲಿ ವಿವರಣೆ ನೀಡಿ ಕಡತಗಳನ್ನು ನಿರ್ವಹಿಸಬೇಕಾದ ಗುರುತರವಾದ ಜವಾಬ್ದಾರಿ ವಿಷಯನಿರ್ವಾಹಕರ ಮೇಲಿದೆ. ಆದರೆ ವಿಷಯವನ್ನು ಪರಿಶೀಲಿಸಲಾಗಿ ಕೆಳಹಂತದಲ್ಲಿ ಆಡಳಿತ ಕನ್ನಡದ ಬಳಕೆ ಒಂದು ಮಟ್ಟದಲ್ಲಿ ಕಂಡುಬಂದರೂ ಮೇಲಿನ ಹಂತಕ್ಕೆ ಹೊಂದಂತೆಲ್ಲಾ ಗೌಣವಾಗುತ್ತಾ ಹೋಗುತ್ತದೆ.


ಒಂದು ಹಂತದಲ್ಲಿ 'ಸಿ' ವೃಂದದಲ್ಲಿ ಬಳಕೆಯಾಗುತ್ತಿರುವ ಕನ್ನಡದ ಪ್ರಮಾಣ 'ಬಿ' ಮತ್ತು 'ಎ' ವೃಂದಕ್ಕೆ ಮುಟ್ಟುವಷ್ಟರಲ್ಲಿಗೆ ಅದು ತನ್ನ ಸ್ವರೂಪವನ್ನು ಬದಲಾಯಿಸಿ ಸಂಪೂರ್ಣವಾಗಿ ಇಂಗ್ಲೀಷ್‌ಮಯವಾದ ರೂಪವನ್ನು ಪಡೆದುಕೊಳ್ಳುತ್ತದೆ. ಹಾಗೆ ಪಡೆದುಕೊಂಡ ಹಲವಾರು ಉದಾಹರಣೆಗಳೂ ಇವೆ. ಹಾಗೂ ಇದು ಪ್ರತ್ಯಕ್ಷವಾಗಿ ಸಾಬೀತಾಗಿರುವ ವಿಷಯ. ಹೀಗಿರುವ ನಿಟ್ಟಿನಲ್ಲಿ ಹಂತದಿಂದ ಹಂತಕ್ಕೆ ಯಾವ ಉದ್ದೇಶಕ್ಕಾಗಿ ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಿದೆ ಎನ್ನುವುದು ಒಂದು ಯಕ್ಷ ಪ್ರಶ್ನೆಯಾಗಿ ಕಾಡುತ್ತದೆ.

ಇದರಲ್ಲಿ ಅಧಿಕಾರಿಗಳ ಮನೋಧರ್ಮ ಬದಲೋ? ಇಂಗ್ಲೀಷಿನ ವ್ಯಾಮೋಹವೋ? ಅಥವಾ ಇವೆರಡನ್ನು ಮೀರಿದ ಪ್ರತಿಷ್ಠೆಯ ಪ್ರಶ್ನೆಯೋ? ಎಂಬ ವಿಚಾರಗಳು ತಲೆದೊರುತ್ತದೆ. ಪ್ರಶ್ನೆಗಳಿಗೆ ಉತ್ತರ ಹೇಳುವುದಾದರೆ. ಅದಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ಮಧ್ಯದಲ್ಲಿರುವ ಈ ಒಂದು ಅಂತರ ಬದಲಾಯಿಸಬೇಕಾಗಿದೆ ಮತ್ತು ಬದಲಾಗಬೇಕಾಗಿದೆ. ಈ ನಿಟ್ಟಿನಲ್ಲಿ ಕ್ರಮ ವಹಿಸಬೇಕಾದದ್ದು ಸಹ ಪರಿಸ್ಥಿತಿಗಳನುಗುಣವಾಗಿ ಪ್ರಶ್ನಾತೀತವಾಗಿ ಕಂಡುಬರುತ್ತದೆ. ಹೇಗೆಂದರೆ

ಉನ್ನತ ವರ್ಗದ ಅಧಿಕಾರಿಗಳ ಮನೋಬಲಕ್ಕೆ ಹೊಂದಿಕೊಂಡು ಅವರ ಆಜ್ಞೆ ಮತ್ತು ಆದೇಶಗಳನ್ನು ಪಾಲಿಸುವುದು ಮಾತ್ರ ಕೆಳಹಂತದ ನೌಕರರ ಕರ್ತವ್ಯ. ಮೇಲ್ವರ್ಗದ ಅಧಿಕಾರಿಗಳ

ತಪ್ಪುಗಳನ್ನಾಗಲಿ ಅಥವಾ ಅವರ ಉದ್ದೇಶ ಮತ್ತು ವಿಚಾರಗಳನ್ನಾಗಲಿ ಪ್ರಶ್ನಿಸುವ ಅಧಿಕಾರವಾಗಲಿ ಅಥವಾ ಮನೋಧರ್ಮವಾಗಲಿ ಕೆಳಹಂತದ ನೌಕರರಿಗೆ ಇರುವುದಿಲ್ಲ. ಅದು ಅವರ ಹಂತಕ್ಕೆ ಸಮಂಜಸವೂ ಅನಿಸುವುದಿಲ್ಲ. ಹೀಗಾಗಿ ಮೇಲಧಿಕಾರಿಗಳು ನೀಡಲಾದ ನಿರ್ದೇಶನದಂತೆ ಕೆಳಹಂತದ ನೌಕರರು ಕೆಲವೊಂದು ಸಂದರ್ಭದಲ್ಲಿ ಅವರ ಮನಃ ಸಾಕ್ಷಿಗೆ ವಿರುದ್ಧವಾಗಿ ಕರ್ತವ್ಯ ನಿರ್ವಹಿಸುವ ಸಂದರ್ಭಗಳು ಬಂದೊದಗುತ್ತವೆ. ಅಲ್ಲದೆ ಪ್ರತಿಯೊಂದು ಹಂತದಲ್ಲಿ ಪರಿಶೀಲಿಸುವ ಅವಶ್ಯಕತೆ ಹಾಗೂ ಅನಿವಾರ್ಯಯತೆಗಳು ಬಂದೊದಗುತ್ತವೆ. ಆದರೆ ಇಲ್ಲಿ ನೌಕರರಿಗೆ ತಮ್ಮ ಸ್ವಂತ ವಿವೇಚನೆಯಾಗಲಿ, ಬುದ್ಧಿವಂತಿಕೆಯಾಗಲಿ ಪ್ರದರ್ಶಿಸುವ ಅವಕಾಶಗಳು ಇರುವುದಿಲ್ಲ. ಕಾರಣ ಈ ಹಂತದಲ್ಲಿ ನೌಕರರಿಗೆ ತಮ್ಮ ಸ್ವಾತಂತ್ರ್ಯತೆಗೆ ಯಾವುದೇ ರೀತಿಯ ಮನ್ನಣೆಗಳು ದೊರೆಯದು ಹಾಗೂ ಇವರ ವಿವೇಚನಗಳಿಗೆ ಅವಕಾಶಗಳು ಇರುವುದಿಲ್ಲವೆಂಬುದು ಹಾಗೂ ಒಂದು ವೇಳೆ ಇದ್ದರೂ ಅವು ನಿಲ್ಲವೂ ಎಂಬುದು ಮಾತ್ರ ಖಚಿತ.

ವಿಷಯನಿರ್ವಾಹಕನು ಸರ್ವೆಸಾಮಾನ್ಯವಾಗಿ ಒಂದು ಕಡತದ ಇತಿಹಾಸ ಸತ್ಯಾಸತ್ಯತೆಗಳನ್ನು ತಿಳಿದು ಕೊಂಡಿರುತ್ತಾನೆ ಹಾಗೂ ಅದನ್ನು ತಾನು ಟಿಪ್ಪಣಿ ರೂಪದಲ್ಲಿ ವಿವರಿಸಿರುತ್ತಾನೆ. ಆದರೆ ಮೇಲ್ ಹಂತದಲ್ಲಿ ಕಳುಹಿಸಲಾಗುವ ಕಡತದ ಟಿಪ್ಪಣಿಭಾಗ ಇಂಗ್ಲೀಷಿನ ಪದಗಳಿಂದ ಕೊನೆಗೊಳ್ಳುತ್ತದೆ. Discuss, grant ,find, Reason, yes, Agreed. ಹಾಗಾಗಿ ಕಚೇರಿಯಲ್ಲಿನ ಕಡತಗಳು




ಕಚೇರಿಯಲ್ಲಿನ ಕಡತಗಳ ಮಾದರಿ ನೋಟ

ಮೇಲಿನ ಹಂತಕ್ಕೆ ಹೋದಂತೆಲ್ಲಾ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತವೆ ಎನ್ನುವುದು ಸತ್ಯಸಂಗತಿ. ಈ ನಿಟ್ಟಿನಲ್ಲಿ ಅಧಿಕಾರಿಗಳ ಮತ್ತು ಸಿಬ್ಬಂದಿವರ್ಗದವರ ಮಧ್ಯದಲ್ಲಿ ಒಂದು ದೊಡ್ಡ ಅಂತರ ಇರುವುದು ಕಂಡುಬರುತ್ತದೆ. ಅದನ್ನು ಈ ರೀತಿ ಹೇಳಬಹುದು, ಕೆಳಹಂತದ ಸಿಬ್ಬಂದಿ ನೌಕರರುಗಳಲ್ಲಿ ವಿಶಾಲವಾಗಿ ಆಡಳಿತದಲ್ಲಿ ಬಳಕೆಯಾಗುವ ಕನ್ನಡ ಮೇಲಿನಹಂತಕ್ಕೆ ಅಂದರೆ, ದ್ವಿತಿಯ ದರ್ಜೆ ಸಹಾಯಕ–ಪ್ರಥಮ ದರ್ಜೆ ಸಹಾಯಕ–ಅಧೀಕ್ಷಕರು–ಪತ್ರಾಂಕಿತ ವ್ಯವಸ್ಥಾಪಕರು–ಅಧಿಕಾರಿಗಳು ಹೀಗೆ ಅನುಕ್ರಮವಾಗಿ ಹೋದಂತೆಲ್ಲಾ ಬಳಕೆ ಕಡಿಮೆಯಾಗುತ್ತಾ ಹೋಗುವುದನ್ನು ಪ್ರಯೋಗಿಕವಾಗಿ ಕಚೇರಿಗಳಲ್ಲಿ ಕಾಣುತ್ತೇವೆ. ಆದರೆ ಇದಕ್ಕೆ ಅಧಿಕಾರಿಗಳ ಮನೋಬಲವೂ? ಅವರ ಕನ್ನಡ ಬಗೆಗಿನ ನಿರಾಭಿಮಾನವೂ? ಇಂಗ್ಲೀಷಿನ ಸಂಕೋಲೆಯೋ? ಎನ್ನುವುದನ್ನು ಪರಿಶೀಲಿಸಬೇಕಾಗಿದೆ. ಆದರೆ ಅವರಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಯ ಬಗೆಗಿನ ಉದ್ದೇಶವೇ ಬೇರೆಯಾಗಿದೆ ಎನ್ನಬಹುದು.

ಕೆಳಹಂತದಲ್ಲಿ ವಿಶಾಲವಾಗಿ ಬೆಳೆದು ಬಳಕೆಯಲ್ಲಿರುವ ಕನ್ನಡ ಮೇಲಂತಕ್ಕೆ ಹೋದಂತೆಲ್ಲಾ ಅದೇ ಮಾದರಿಯಲ್ಲಿ ಹೋಗಬೇಕೆನ್ನುವುದು ಆಶಯ. ಹೀಗಾದಾಗ ಮಾತ್ರ ಅಧಿಕಾರಿಗಳ ಮತ್ತು ಸಿಬ್ಬಂದಿವರ್ಗದವರ ನಡುವಿರುವ ಅಂತರವು ಕಡಿಮೆಯಾಗುತ್ತದೆ ಅಥವಾ ಕಡಿಮೆಯಾಗಬಹುದೆಂಬ ನಿಲುವು ನಮ್ಮದಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಹಂತಕ್ಕೆ ಬಳಕೆಯ ಕನ್ನಡ ನಿಲ್ಲದೇ, ಬದಲಾಗದೇ ಹಾಗೆಯೇ ಮುಂದುವರೆಯಬೇಕಿದೆ.

ಪಿರಮಿಡ್ಡಿನಾಕಾರವಾಗಿ ಬೆಳೆದ ಕನ್ನಡದ ಬಳಕೆ ಅಧಿಕಾರಿಗಳ ಮತ್ತು ಸಿಬ್ಬಂದಿ ನೌಕರರ ಮಧ್ಯೆ ಒಂದು ಅಂತರವನ್ನು ಸೃಷ್ಟಿಸಿದೆ. ಈ ಹಿಂದೆ ವಿವರಿಸಿದಂತೆ ಮೇಲಂತಕ್ಕೆ ಹೋದಂತೆಲ್ಲಾ ಕಡಿಮೆಯಾಗುವ ಕನ್ನಡ ಬಳಕೆ ಪೂರ್ಣಪ್ರಮಾಣದಲ್ಲಿ ಆಗಬೇಕಿದೆ. ಹೇಗೆಂದರೆ, ಪ್ರಾರಂಭದ ಹಂತದಲ್ಲಿ ಬಳಕೆಯಾಗುತ್ತಿರುವ ಪ್ರತಿಶತ ಇರುವ ಕನ್ನಡದ ಪ್ರಮಾಣ ಉನ್ನತ ಅಧಿಕಾರಿಗಳ ಮಟ್ಟದ ಹಂತಕ್ಕೆ ತಲುಪಿದರೂ ಬದಲಾವಣೆಯಾಗದೆ ಹಾಗೆಯೇ ಬಳಕೆ ಯಾಗಬೇಕಿದೆ. ಆಗಾದಾಗ ಮಾತ್ರ ಆ ಉದ್ಭವಿಸಿರುವ ಅಂತರವನ್ನು ಕಡಿಮೆ ಮಾಡಲು ಸಾಧ್ಯವೇ ಹೊರೆತು ಇಂಗ್ಲೀಷಿನ ಮುಂದುವರೆಕೆಯಿಂದಲ್ಲ ಎಂಬುದು ಸ್ಪಷ್ಟ.

ಕೆಳಹಂತದಲ್ಲಿ ಬಳಕೆಯಾಗುವ ಕನ್ನಡದ ಪ್ರಮಾಣ ಮೇಲಂತಕ್ಕೆ ಹೋದಂತೆಲ್ಲಾ ಯಾವ ಕಾರಣಕ್ಕಾಗಿ ಕಡಿಮೆಯಾಗುತ್ತಿದೆ ಎನ್ನುವ ಪ್ರಶ್ನೆ ಮತ್ತು ಸಮಸ್ಯೆ ಕಾಡುತ್ತದೆ. ಇದು ಸವಾಲಾಗಿದೆಯೇ? ಅಥವಾ ಸವಾಲಾಗಿ ಪರಿಣಮಿಸಬಹುದೇ? ಎನ್ನುವ ಪ್ರಶ್ನೆಯೂ ಕಾಡುತ್ತದೆ. ಈ ನಿಟ್ಟಿನಲ್ಲಿ ಕೆಲವೊಂದು ಸಮಸ್ಯೆಗಳನ್ನು ನಾವು ಗುರುತಿಸಬಹುದಾಗಿದೆ.



'ಎ':- ಹತ್ತರಿಂದ ಇಪ್ಪತ್ತು ಪ್ರತಿಶತ
'ಬಿ':- ಇಪ್ಪತ್ತರಿಂದ ಅರವತ್ತು ಪ್ರತಿಶತ
'ಸಿ':- ಅರವತ್ತರಿಂದ ಎಪ್ಪತ್ತು ಪ್ರತಿಶತ

ಕೆಳಹಂತದ ನೌಕರಲ್ಲಿ ಬಳಕೆಯಾಗುವ ಕನ್ನಡದ ಪ್ರಮಾಣ ಮೇಲಂತದ ಅಧಿಕಾರಿಗಳ ಹಂತದಲ್ಲಿ ಕಡಿಮೆಯಾಗುವುದಕ್ಕೆ ಕೆಲವು ಕಾರಣಗಳಿವೆ. ಇವರು ಯಾವತರಹದ ಕನ್ನಡವನ್ನು ಬಳಸುತ್ತಾರೆ ಎನ್ನುವುದು ಇನ್ನೊಂದು ವಿಷಯ ಮತ್ತು ಸಮಸ್ಯೆಯೂ ಆಗಿದೆ.

೧. ಕೆಳಹಂತದ ನೌಕರರ ಬಗ್ಗೆ ಅಧಿಕಾರಿಗಳ ಮನೋಭಾವದಲ್ಲಿ ಸೌಮ್ಯತೆ ಇಲ್ಲದಿರುವುದು.


೨. ಕೆಲವೊಂದು ಸಂದರ್ಭದಲ್ಲಿ ಕೆಳಗಿನವರ ವಿವರಣೆಯನ್ನು ತಿರಸ್ಕರಿಸಬೇಕೋ ಅಥವಾ ಒಪ್ಪಬೇಕೋ ಎಂಬ ಗೊಂದಲದ ಮನಸ್ಥಿತಿ ನಿರ್ಮಾಣವಾದಾಗ ಕಡತಗಳ ಹಿಂದೇಟಿಗೆ ಇಂಗ್ಲೀಷಿನ ಬಳಕೆ.

೩. ಅಧಿಕಾರಿಗಳಿಗೆ ಸುತ್ತುವರಿದ ಇಂಗ್ಲೀಷಿನ ಸಂಕೋಲೆ ಮತ್ತು ವ್ಯಾಮೋಹ.

೪. ಅಧಿಕಾರಿಗಳಿಗೆ ಇಂಗ್ಲೀಷ್ ಪ್ರತಿಷ್ಠೆಯ ಭಾಷೆ ಎಂದು ಕಂಡುಕೊಂಡಿರುವ ಅವರ ನಂಬಿಕೆಗಳು.

೫. ಕೆಳಗಿನವರಿಗಿಂತ ಉತ್ತಮ ಪ್ರತಿಷ್ಠೆಗಾಗಿ ಒಂದು ಅಂತರವನ್ನು ಸೃಷ್ಟಿಸಿ ಇಂಗ್ಲೀಷಿನ ಬಳಕೆ ಮಾಡುವುದು.

ಈ ಮೇಲಿನ ಎಲ್ಲಾ ಕಾರಣಗಳಿಂದ ಮೇಲಂತಕ್ಕೆ ಹೋದಂತೆಲ್ಲಾ ಆಡಳಿತ ಕನ್ನಡ ತನ್ನದೇ ಆದ ಒಂದು ಅಂತರವನ್ನು ಸೃಷ್ಟಿಸಿಕೊಂಡು ಬೆಳೆದುಕೊಂಡು ಹೋಗುತ್ತದೆ.



ಎ – ಅಧಿಕಾರಿಗಳು – ಇಂಗ್ಲೀಷಿನ ಸಂಕೋಲೆ

ಬಿ – ಭಾಗಶಃ ಅಧಿಕಾರಿಗಳು, ಸಿಬ್ಬಂದಿ ವರ್ಗದವರು– ಇಂಗ್ಲೀಷಿನ ಒಲವು ಮತ್ತು ಪ್ರತಿಷ್ಠೆ, ಮೇಲಾಧಿಕಾರಿಗಳಿಗೆ ಕೇಳಬಾರದೆಂಬ ಭಾವನೆ.

ಸಿ – ಸ್ವಾತಂತ್ರ್ಯಕ್ಕೆ ಮನ್ನಣೆ ಇಲ್ಲ.

ಇಲ್ಲಿ ನಾನು ಪ್ರಸ್ತುತ ಪಡಿಸುತ್ತಿರುವ ವಿಷಯ ಎಲ್ಲಾ ಅಧಿಕಾರಿಗಳನ್ನು ಎಲ್ಲಾ ಆಡಳಿತ ವ್ಯವಸ್ಥೆಯ ಹಂತಗಳನ್ನು ಪ್ರಶ್ನಿಸುತ್ತಿಲ್ಲ. ಆಡಳಿತದಲ್ಲಿ ಕನ್ನಡವನ್ನು ಜಾರಿಗೆತರುವಲ್ಲಿ ಮತ್ತು ತಂದವರ ಸಾಲಿನಲ್ಲಿ ಅನೇಕ ಅಧಿಕಾರಿಗಳನ್ನು ಮತ್ತು ಸಿಬ್ಬಂದಿ ವರ್ಗದವರನ್ನು ಮತ್ತು ಅವರ ಕೊಡುಗೆಗಳನ್ನು ಹಾಗೂ ಆಡಳಿತ ಕನ್ನಡಕ್ಕೆ ಅವರು ನೀಡಿದ ಸಲಹೆ ಮತ್ತು ಸಹಕಾರಗಳನ್ನು ನೋಡಿದಾಗ ಅವುಗಳು ಅಪಾರವಾಗಿವೆ. ಅಂತಹ ಅಧಿಕಾರಿಗಳನ್ನು ಇಲ್ಲಿ ದೂಷಿಸಲಾಗುತ್ತಿಲ್ಲ. ಆದರೆ ಕೆಳಹಂತದಲ್ಲಿ ಬಳಕೆಯಾಗುತ್ತಿರುವ ಆಡಳಿತ ಕನ್ನಡ ಮೇಲಂತಕ್ಕೆ ಹೋದಂತೆಲ್ಲಾ ಕಡಿಮೆಯಾಗುತ್ತಿರುವ ಬಗ್ಗೆ ಮಾತ್ರ ನಮ್ಮ ಕಳವಳ.

'ಸಿ' ಹಂತದ ನೌಕರರು ತಮಗೆ ತಿಳಿದ ಮಟ್ಟಿಗೆ ಕನ್ನಡವನ್ನು ಬಳಕೆ ಮಾಡಿದರೆ 'ಬಿ' ವೃಂದದ ಹಂತಕ್ಕೆ ಹೋದಾಗ ಅಲ್ಲಿ ಕನ್ನಡ ಬಳಕೆ ಕಡಿಮೆಯಾಗುತ್ತದೆ. 'ಎ' ಹಂತಕ್ಕೆ ಹೋದಾಗ ಪೂರ್ಣ ಪ್ರಮಾಣದಲ್ಲಿ ಕಡಿಮೆಯಾಗುವುದನ್ನು ಕಾಣುತ್ತೇವೆ ಹಾಗಾದರೆ ಇದರ ಮಧ್ಯದಲ್ಲಿನ ಸಮಸ್ಯೆಗಳೇನು? ಎಂಬುದನ್ನು ಕಂಡಾಗ

'ಸಿ' ವೃಂದ ನೌಕರರ ಸಮಸ್ಯೆಗಳು: 'ಸಿ' ವೃಂದದ ನೌಕರರಲ್ಲಿ ಅವರಿಗೆ ತಿಳಿದಮಟ್ಟಿಗೆ ಆಡಳಿತ ಕನ್ನಡದ ಬಳಕೆಯಾಗುತ್ತಿದ್ದು ಅದು ಸಂಪೂರ್ಣವಾಗಿ ಆಗಬೇಕಾಗಿದೆ. ಹಿರಿಯ ಅಧಿಕಾರಿಗಳಿಂದ ಇವರ ಸ್ವಾತಂತ್ರ್ಯ ಮಟಕುಗೊಂಡಿದ್ದು ಅವರು ನಿರ್ದೇಶಿಸಿದ ರೀತಿಯಲ್ಲಿ ಕರ್ತವ್ಯ ನಿರ್ವಹಿಸುವ ಸಂದರ್ಭ ಬಂದೊದಗುವುದರಿಂದ ಸಿಬ್ಬಂದಿ ನೌಕರರ ವಿಚಾರಗಳಿಗೆ ಮತ್ತು ಬರಹಗಳಿಗೆ ಮನ್ನಣೆ ಇರುವುದಿಲ್ಲ. ಇನ್ನೂ ಕೆಳಹಂತದ ನೌಕರರಲ್ಲಿ ಮಾನಸಿಕ ಸ್ಥೈರ್ಯ ಇಲ್ಲದಿರುವುದು ಹಾಗೂ ಅಧಿಕಾರಿಗಳನ್ನು ಕಂಡಾಗ ಹೆದರಿಕೆ, ಹಿಂಜರಿಕೆಗಳು ಇರುವುದರಿಂದ ಅಧಿಕಾರಿಗಳನ್ನು ಪ್ರಶ್ನಿಸುವ ಮಟ್ಟಕ್ಕೆ ಇವರು ಇಳಿಯುವುದಿಲ್ಲ. ಇವರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಬಹುದೇ ವಿನಹ ತೀರ್ಮಾನಗಳನ್ನು ತೆಗೆದುಕೊಳ್ಳುವಂತಿಲ್ಲ. ಹೀಗಾಗಿ ತಮ್ಮ ವಿಚಾರಗಳನ್ನು

ಬರಹದ ರೂಪದಲ್ಲಿ ಪ್ರಕಟಪಡಿಸುವ ಸಂದರ್ಭದಲ್ಲಿ ಸಂಪೂರ್ಣ ಕನ್ನಡದ ಬಳಕೆಯನ್ನು ನೌಕರರು ಅಧಿಕಾರಿಗಳ ಮನಸ್ಸನ್ನು, ಆಲೋಚಿಸಿ ಅಧಿಕಾರಿಗಳಿಗೆ ತಕ್ಕಂತೆ ಭಾಷೆ ಬಳಕೆಯ ಪ್ರಯೋಗ ಮಾಡಿ ಟಿಪ್ಪಣೆಗಳನ್ನು ರಚಿಸುತ್ತಾರೆ.

ಇದರಿಂದ ಬಳಕೆಯ ಭಾಷೆಯು ಆಡಳಿತ ಕನ್ನಡವೂ, ಇಂಗ್ಲೀಷೋ ಇವುಗಳ ಗೋಜಿಗೆ ಹೋಗುವುದಿಲ್ಲ. ಬದಲಾಗಿ ತಮ್ಮ ವಿವೇಚನೆಯಲ್ಲಿಯೇ ಕಡತಗಳ ಮಂಡನೆಯಾಗುತ್ತವೆ. ಅದರಲ್ಲಿ ವಾಕ್ಯದೋಷ, ಶಬ್ದದೋಷ, ಮುಂತಾದವುಗಳು ಕಂಡುಬರುತ್ತವೆ. ಹಾಗೂ ಆಡಳಿತ ಕನ್ನಡ ಬಳಕೆ ಅಷ್ಟಕ್ಕಷ್ಟೆ ಯಾಗಿರುವುದನ್ನೆ ನಾವು ಕಾಣುತ್ತವೆ. ಹಾಗಾಗಿ ಅಧಿಕಾರಿಗಳ ಮನೋಭಿಲಾಷೆಯನ್ನು ನೌಕರರು/ಸಿಬ್ಬಂದಿವರ್ಗದವರು ಅರಿತು ಕಾರ್ಯನಿರ್ವಹಿಸುತ್ತಾರೆ.

'ಬಿ' ವೃಂದದ ನೌಕರರು ತಮ್ಮಗೆ ಬರುವ ಪತ್ರಗಳಾಗಲಿ ಕಡತಗಳಾಗಲಿ ಅವುಗಳಿಗೆ ಉತ್ತರಗಳನ್ನು ಕನ್ನಡಬಲ್ಲ ಅಧಿಕಾರಿಗಳಿದ್ದರೆ ಕನ್ನಡದಲ್ಲಿ ಉತ್ತರಿಸುತ್ತಾರೆ ಆದರೆ ಕನ್ನಡ ಬಾರದೇ ಇರುವ ಅಧಿಕಾರಿಗಳಿದ್ದಲ್ಲಿ ಮತ್ತೆ ಇಂಗ್ಲೀಷಿಗೆ ಮೊರೆ ಹೋಗುವುದಂತು ಖಂಡಿತ. ಆದರೆ ಪ್ರಸ್ತುತ ವಿಷಯವನ್ನು ಅವಲೋಕಿಸಿದಾಗ 'ಬಿ' ವೃಂದದಲ್ಲಿ ಕರ್ತವ್ಯ ನಿರ್ವಹಿಸುವ ನೌಕರರು ಅಥವಾ ಮೇಲಂತದ ಅಧಿಕಾರಿಗಳಿಗೆ ಕಡತಗಳನ್ನು ಮಂಡಿಸುವ ಸಂದರ್ಭದಲ್ಲಿ ಅತಿ ಹೆಚ್ಚಾಗಿ ಇಂಗ್ಲೀಷಿಗೆ ಮೊರೆ ಹೋಗುವುದು ಸಂಶೋಧನೆಯಿಂದ ಕಂಡುಬಂದಿರುತ್ತದೆ.

ಅದೇ ರೀತಿಯಲ್ಲಿ 'ಎ' ವೃಂದದ ಅಧಿಕಾರಿಗಳ ಕಾರ್ಯನಿರ್ವಹಣೆ ಒಂದಡೆಯಾದರೆ ಆಡಳಿತದಲ್ಲಿ ಕನ್ನಡದ ಬಳಕೆಯು ಅಷ್ಟಕ್ಕಷ್ಟೆ ಎಂದು ಹೇಳಬಹುದು. ಇದರಲ್ಲಿ ನೇರವಾಗಿ 'ಎ' ವೃಂದಕ್ಕೆ ಅಯ್ಕೆಯಾಗಿ ಬಂದ ಬೇರೆ ರಾಜ್ಯದ ಅಧಿಕಾರಿಗಳೇ ಹೆಚ್ಚಿರುವುದರಿಂದ ಅವರಿಗೆ ಕನ್ನಡದ ಬಗ್ಗೆ ಒಲವಾಗಲಿ ಅಥವಾ ವ್ಯಾಕರಣಬದ್ಧವಾದ ಪರಿಚಯವಾಗಲಿ ಸರಿಯಾದ ಪ್ರಮಾಣದಲ್ಲಿ ಆಗಿರುವುದಿಲ್ಲ. ಒಂದು ವೇಳೆ ಆಗಿದ್ದರೂ ಬಳಕೆಗೆ ಹಿಂದೇಟನ್ನು ಹಾಕುತ್ತಾರೆ.

ಕೆಳಗಿನ ಅಧಿಕಾರಿಗಳು ಕನ್ನಡದಲ್ಲಿ ಪತ್ರವ್ಯವಹಾರ ಮಾಡುವ ಸಂದರ್ಭದಲ್ಲಿ ಇವರಿಗೆ ಅರ್ಥವಾಗದೇ ಇರುವ ಸನ್ನಿವೇಶ ಬಂದಾಗ ಕೆಳಹಂತದ ಅಧಿಕಾರಿಗಳ ಮೇಲೆ ಪೇಚಾಡುವ ಪರಿಸ್ಥಿತಿ ಬರುತ್ತದೆ. ಅದ್ದಕ್ಕಾಗಿ 'ಎ' ವೃಂದದ ಅಧಿಕಾರಿಗಳು ಆಡಳಿತದಲ್ಲಿ ಕನ್ನಡ ಬರುವ ಅಧಿಕಾರಿಗಳನ್ನು ನೇಮಕ ಮಾಡುವ ನಿಟ್ಟಿನಲ್ಲಿ ಕ್ರಮ ಜರುಗಿಸಬೇಕಾಗುತ್ತದೆ. ಹಾಗೂ ಇದರಿಂದ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕಾಗಿದೆ. ಉನ್ನತ ವರ್ಗದವರಿಗೆ ಕೆಳವರ್ಗದವರಿಂದ ಬರೆಯಲಾದ ಪತ್ರಗಳಲ್ಲಿ ಆಡಳಿತ ಕನ್ನಡದ ಬಳಕೆ ಇದ್ದು ಇದಕ್ಕೆ ಉತ್ತರವಾಗಿ ಮೇಲಂತದ ಅಧಿಕಾರಿಗಳು ಕೆಳಹಂತದ ಅಧಿಕಾರಿಗಳಿಗೆ ಬರೆಯಲಾಗುವ ಪತ್ರಗಳಲ್ಲಿ ಆಡಳಿತದ ಎಲ್ಲಾ ಕುರುಹುಗಳು ಕಂಡುಬಂದರೂ ಆಡಳಿತ ಕನ್ನಡ ಭಾಷಾ ಬಳಕೆಯಲ್ಲಿ ಹಿನ್ನಡೆ ಕಾಣುತ್ತೇವೆ ಅಥವಾ ಗೌಣವಾಗಿರುತ್ತದೆ.

ಹೀಗಾಗಿ ಉನ್ನತ ವರ್ಗದಲ್ಲಿನ ಅಧಿಕಾರಿ ವರ್ಗದವರು ಆಡಳಿತದಲ್ಲಿ ಕನ್ನಡದ ಬಳಕೆಯನ್ನು ಮಾಡುವಲ್ಲಿ ಮತ್ತು ತರುವಲ್ಲಿ ಎಡವುತ್ತಿರುವುದು ಕಂಡುಬಂದಿರುತ್ತದೆ. ಆಡಳಿತದಲ್ಲಿ ಕಾರ್ಯನಿರ್ವಾಹಕ

ನೌಕರರ/ತಾಂತ್ರಿಕ ಸಹಾಯಕ ಮತ್ತು ಲಿಪಿಕ ಸಿಬ್ಬಂದಿವರ್ಗದವರ ಮತ್ತು ಅಧಿಕಾರಿ ವರ್ಗದವರ ಮಧ್ಯೆಯೂ ಒಂದು ದೊಡ್ಡ ಅಂತರವಿದೆ.

ಲಿಪಿಕವರ್ಗದವರೆಂದರೆ ಕೇವಲ ಕಚೇರಿಯಲ್ಲಿ ಕುಳಿತು ಕಾರ್ಯನಿರ್ವಹಿಸುವವರು. ತಾಂತ್ರಿಕ ನೌಕರ ಸಿಬ್ಬಂದಿಯೆಂದರೆ ಪ್ರಯೋಗಿಕವಾಗಿ ಕಾರ್ಯನಿರ್ವಹಿಸುವವರು. ಇವರಿಬ್ಬರ ಮಧ್ಯೆ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. ತಾಂತ್ರಿಕ/ಕಾರ್ಯನಿರ್ವಾಹಕ ವರ್ಗದವರಲ್ಲಿ ಆಡಳಿತ ಕನ್ನಡ ಬಳಕೆಯ ಸಂದರ್ಭದಲ್ಲಿ ಅನೇಕ ಸಮಸ್ಯೆಗಳಿವೆ. ತಾಂತ್ರಿಕ ವರ್ಗವಾದ ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕ, ಸರ್ವೇಯರ್, ಬರಹಗಾರ (ಪೋಲಿಸ್ ಇಲಾಖೆ) ರಕ್ಷಕ, ವೀಕ್ಷಕ, ವನಪಾಲಕ (ಅಬಕಾರಿ+ಅರಣ್ಯ+ಅಗ್ನಿಶಾಮಕ ಇಲಾಖೆಗೆ ಸಂಬಂಧಿಸಿದಂತೆ) ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕ, ಲೈನ್‌ಮ್ಯಾನ್, ಫಿಲ್ಡ್ ಆಫಿಸರ್, ಈ ರೀತಿಯಾಗಿ ಹಲವಾರು ಹುದ್ದೆಗಳನ್ನು ತಾಂತ್ರಿಕ ಸಿಬ್ಬಂದಿವರ್ಗ ಎಂದು ಕರೆಯುತ್ತಾರೆ.

ಮೊಟ್ಟ ಮೊದಲನೆಯದಾಗಿ ಇವರನ್ನು ಪರಿಗಣನೆಗೆ ತೆಗೆದುಕೊಂಡ ಸಂದರ್ಭದಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆ ಇವರಲ್ಲಿ ಯಾವುದೇ ರೀತಿಯ ಪ್ರಗತಿಯಾಗಲಿ ಅಥವಾ ವ್ಯಾಕರಣ ಬದ್ಧವಾಗಲಿ ಸರಿಯಾದ ಕ್ರಮದಲ್ಲಿ ಕಂಡುಬರುವುದಿಲ್ಲ. ಕಾರಣವೇನೆಂದರೆ ಕ್ಷೇತ್ರ ತಪಾಸಣೆಯ ಸಂದರ್ಭದಲ್ಲಿ ನಡೆಯುವ ಘಟನೆಗಳನ್ನಾಧರಿಸಿ ಪಂಚನಾಮ, ಹೇಳಿಕೆ, ಸ್ಥಳ ತನಿಖೆ, ವರದಿಗಳನ್ನು ಅಧಿಕಾರಿಗಳಿಗೆ ಸಲ್ಲಿಸುವ ಸಂದರ್ಭದಲ್ಲಿ ಪ್ರಸ್ತುತ ಸ್ಥಳದಲ್ಲಿ ನಡೆದ ಘಟನೆಯನ್ನೆ ವಿವರಿಸಿ ವರದಿಯನ್ನಾಗಿ ನೀಡುವ ಸಂದರ್ಭಗಳು ಕಾಣುತ್ತೇವೆ. ಇಲ್ಲಿ ಆಡಳಿತ ಕನ್ನಡ ಅಲ್ಲದೇ ತಮ್ಮದೇ ಆದ ರೀತಿಯಲ್ಲಿ ಎಲ್ಲವುದನ್ನು ಸೇರಿಸಿ ಬರೆಯಲಾದ ಬರಹಗಳು ಅವು ಆಗಿರುತ್ತವೆ. ಈ ಸಂದರ್ಭದಲ್ಲಿ ಅವರಿಗೆ ಆಡಳಿತ ಕನ್ನಡದ ಪರಿಚಯ ಅಥವಾ ಅದರ ಪರಾಂಬರಿಕೆಯ ಕಲ್ಪನೆಗಳು ಇರುವುದಿಲ್ಲ ಹೀಗಾಗಿ ಅವರಿಗೂ ಆಡಳಿತ ಕನ್ನಡದ ಬಳಕೆಯ ಬಗ್ಗೆ ಮನವರಿಕೆ ಮಾಡಬೇಕು ಮತ್ತು ಅದನ್ನು ಜಾರಿಗೆ ತರುವಂತೆ ಕಡ್ಡಾಯವಾಗಿ ಆದೇಶಿಸಬೇಕಾಗಿರುತ್ತದೆ.

ತಾಂತ್ರಿಕ ಸಹಾಯಕರಿಗೆ ಅಥವಾ ಕಾರ್ಯನಿರ್ವಾಹಕ ಸಿಬ್ಬಂದಿ ವರ್ಗದವರಿಗೆ ಆಡಳಿತದಲ್ಲಿ ಕನ್ನಡದ ಬಳಕೆಯ ಪದಗಳ ಪರಿಚಯ ಸರಿಯಾದ ಬಳಕೆ ಮತ್ತು ಬಳಸಲು ಕಡ್ಡಾಯವಾಗುವಂತೆ ನಿರ್ದೇಶಿಸಿದರೂ ಅವುಗಳನ್ನು ಪರಿಪಾಲಿಸದೇ ಇರುವುದು ಕಂಡುಬರುತ್ತದೆ.

ಆಡಳಿತದಲ್ಲಿ ಮುಖ್ಯವಾಗಿ ಕಾರ್ಯನಿರ್ವಾಹಕ ವರ್ಗವು ಜನಗಳ ಮಧ್ಯದಲ್ಲಿ ನೇರವಾಗಿ ಕಾರ್ಯನಿರ್ವಹಿಸುವುದರಿಂದ ಅವರುಗಳ ಈ ಆಡಳಿತ ಭಾಷೆಯ ಬಗ್ಗೆ ಕಾಳಜಿ ಅಥವಾ ಬಳಕೆಗೆ ಸಂಬಂಧವೇ ಇಲ್ಲ ಎನ್ನುವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಹೀಗಾಗಿ ಅವರ ಮಧ್ಯದಲ್ಲಿನ ಈ ಅಂತರವನ್ನು ತುಂಬುವ ಮತ್ತು ಆಡಳಿತದಲ್ಲಿ ಕನ್ನಡವನ್ನು ಬಳಕೆಗೆ ತರುವ ಕಾರ್ಯನೆಡೆಯಬೇಕಾಗಿದೆ. ಅತೀ ಹೆಚ್ಚು ಈ ನೌಕರರುಗಳಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆ ಆಗದಿರುವುದು ಕಂಡುಬರುತ್ತದೆ.

ಇದಕ್ಕೆ ಕಾರಣವೇನೆಂದರೆ:

೧. ಹಿಂದಿನಿಂದಲೂ ಬಳಕೆಯಲ್ಲಿರುವ ಪದಗಳಿಗೆ ಜೋತು ಬಿದ್ದಿರುವುದು ಒಂದು ಸಮಸ್ಯೆ

೨. ಪಾರಿಭಾಷಿಕ ಪದಗಳ ಸೃಷ್ಟಿಯಾಗಿದ್ದಾಗಿಯೂ ಅವುಗಳ ಬಳಕೆ ಆಗದೇ ಇರುವುದು

೩. ಆಡಳಿತ ಕನ್ನಡದ ಬಳಕೆಯ ಪರಿಚಯ ಇಲ್ಲದಿರುವ ಸಮಸ್ಯೆ

೪. ಆಡಳಿತ ಕನ್ನಡದ ಬಳಕೆಯ ಮಾಹಿತಿ ಅಥವಾ ಪರಿಚಯ ಇದ್ದರೂ ಅದರ ಬಳಕೆ ಆಗದಿರುವುದೇ ಸಮಸ್ಯೆ

೫. ಆಡಳಿತದಲ್ಲಿ ಕನ್ನಡ ಬಳಕೆ ಮಾಡುವಲ್ಲಿ ನಿರುತ್ಸಾಹ ತೋರುತ್ತಿರುವ ಸಮಸ್ಯೆ

೬. ಆಡಳಿತ ಕನ್ನಡದ ಜ್ಞಾನವೇ ಇಲ್ಲದಿರುವುದು ಕೆಲವೊಂದು ಸಂದರ್ಭದಲ್ಲಿ ಕಂಡುಬಂದ ಸಮಸ್ಯೆಯಾಗಿದೆ.

ಈ ನಿಟ್ಟಿನಲ್ಲಿ ನೋಡುವುದಾದರೆ ತಾಂತ್ರಿಕ ಅಥವಾ ಕಾರ್ಯನಿರ್ವಾಹಕ ವರ್ಗದವರ ಮಧ್ಯದಲ್ಲಿನ ಸಮಸ್ಯೆಗಳು ಇದ್ದರೂ ಇವರುಗಳು ಸಮಸ್ಯೆಗಳೇ ಇಲ್ಲವೆಂಬುವ ರೀತಿಯಲ್ಲಿ ತೆರೆಮೆರೆಯ ಹಿಂದೆ ನಿಂತಿರುವುದನ್ನು ಆಡಳಿತದಲ್ಲಿ ಅವರುಗಳು ಬರೆದ ಪತ್ರದಲ್ಲಿ ನೋಡಬಹುದಾಗಿದೆ. ಆದರೆ ಮುಖ್ಯವಾಗಿ ಇವರೇ ಆಡಳಿತದ ಮುಖ್ಯ ಭಾಗ. ಪ್ರತ್ಯಕ್ಷವಾಗಿ ಇವರು ನೇರವಾಗಿ ಸಾರ್ವಜನಿಕರ ಮಧ್ಯೆ ಕಾರ್ಯನಿರ್ವಹಿಸುವುದರಿಂದ ಆಡಳಿತದ ಪ್ರಥಮ ಮೆಟ್ಟಿಲಲ್ಲಿಯೇ ನಮ್ಮ ಆಡಳಿತ ಕನ್ನಡ ಎಡವುತ್ತಿರುವುದು ಕಂಡುಬಂದಿದ್ದು ಒಂದು ದೊಡ್ಡ ಸಮಸ್ಯೆಯನ್ನೇ ಎದುರಿಸುತ್ತಿದೆ ಹಾಗೂ ಸವಾಲಾಗಿ ಪರಿಣಮಿಸಿದೆ. ಪ್ರಸ್ತುತ ಸಂದರ್ಭದಲ್ಲಿ ಸದರಿ ತಾಂತ್ರಿಕ ಸಿಬ್ಬಂದಿವರ್ಗದವರು ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಕಡ್ಡಯವಾಗಿ ಈ ಸಿಬ್ಬಂದಿವರ್ಗದವರಿಗೆ ಆಡಳಿತ ಕನ್ನಡದ ತರಬೇತಿ ಅಗತ್ಯ.

ಒಂದು ಆಡಳಿತ ವ್ಯವಸ್ಥೆಯಲ್ಲಿ ಕೆಳಕಂಡಂತೆ ಭಾಗಗಳಾಗಿರುತ್ತವೆ.

ಎಲ್ಲಾ ಕಚೇರಿ	**ಭೂಮಾಪನಾ ಇಲಾಖೆ**	**ಅರಣ್ಯ ಇಲಾಖೆ**
ಡಿ. ವೃಂದದ ನೌಕರರು	**ಡಿ. ವೃಂದದ ನೌಕರರು**	**ಡಿ. ವೃಂದದ ನೌಕರರು**
ದ್ವಿ.ದ.ಸ	ಸರ್ವೆಯರ್	ಅರಣ್ಯವಿಕ್ಷಕ
ಪ್ರ.ದ.ಸ	ಸರ್ವೆಸುಪ್ರವೈಸರ್	ಅರಣ್ಯರಕ್ಷಕ
ವ್ಯವಸ್ಥಾಪಕರು	ತಾಂತ್ರಿಕ ಸಿಬ್ಬಂದಿ	ವನಪಾಲಕ
ಅಧಿಕಾರಿಗಳು	ಅಧಿಕಾರಿಗಳು	ಅಧಿಕಾರಿಗಳು

ಉದಾಹರಣೆಗಾಗಿ

ಜಿಲ್ಲಾಧಿಕಾರಿಗಳ ಕಚೇರಿಯನ್ನು ತೆಗೆದುಕೊಂಡಾಗ

ಶಿರಸ್ಥೆದಾರರು->ಪ್ರದಸ->ದ್ವಿದಸ->ಡಿಗ್ರೂಪ್
|
ಜಿಲ್ಲಾಧಿಕಾರಿಗಳು->ಸಹಾಯಕ ಆಯುಕ್ತರು->ತಹಶೀಲ್ದಾರರು
|
ಉಪ ತಹಶೀಲ್ದಾರರು->ಕಂದಾಯನಿರೀಕ್ಷಕ->ಗ್ರಾಲೇ

ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ

ಉಪನಿರ್ದೇಶಕರು -> ಸಹಾಯಕ ಭೂದಾಖಲೆಗಳ

ಉಪನಿರ್ದೇಶಕರು -> ಸೂಪರ್‌ವೈಸರ್
|
-> ಭೂಮಾಪಕರು

ಇದೇ ರೀತಿಯಲ್ಲಿ ಪ್ರತಿಯೊಂದು ಇಲಾಖೆಯಲ್ಲಿ ತಾಂತ್ರಿಕ ಸಹಾಯಕರು ಹಾಗೂ ಸಿಬ್ಬಂದಿವರ್ಗದವರು ಇರುವುದು ಕಂಡುಬರುತ್ತದೆ. ಆದರೆ ಆಡಳಿತದಲ್ಲಿ ಕನ್ನಡದ ಬಳಕೆ ಆಗುತ್ತಿಲ್ಲ ಎಂಬ ಮನೋಧರ್ಮವನ್ನು ಹೊಂದಿದ ನಾವುಗಳು ಕೇವಲ ಕಚೇರಿಯ ಸಿಬ್ಬಂದಿವರ್ಗದವರನ್ನೇ ಕೇಂದ್ರ ಬಿಂದುವಾಗಿಸಿಕೊಂಡು ಮಾತಾನಾಡುವುದರ ಜೊತೆಗೆ ತಾಂತ್ರಿಕ ಕಾರ್ಯನಿರ್ವಾಹಕ ಸಿಬ್ಬಂದಿವರ್ಗದವರ ಪಾಲು ಅದಕ್ಕೆ ಹೊರತಾಗಿಲ್ಲ ಎನ್ನುವುದನ್ನು ಪರಿಚಯಿಸಬೇಕಾಗಿದೆ. ಹೀಗಾಗಿ ತಾಂತ್ರಿಕ ಸಿಬ್ಬಂದಿಯವರು ಆಡಳಿತದಲ್ಲಿ ಕನ್ನಡದ ಬಳಕೆಯಿಂದ ನಾವು ಹೊರತಾಗಿದ್ದೇವೆ ಎನ್ನುವುದನ್ನು ಅಳಿಸಬೇಕಾಗಿದೆ. ಸಿಬ್ಬಂದಿವರ್ಗದವರ ಬಳಕೆಯಲ್ಲಿ ಇಂದು ಆಡಳಿತ ಕನ್ನಡ ಸಮಸ್ಯೆಗಳನ್ನು ಎದಿರುಸುತ್ತಿದೆ.

೩.೪.೩. ಕನ್ನಡ ಬಳಕೆಯ ಮನೋಧರ್ಮ

ಒಂದು ಭಾಷೆಯು ತನ್ನ ಅಸ್ಥಿತ್ವವನ್ನು ಉಳಿಸಿಕೊಳ್ಳಬೇಕಾದರೆ ಅದು ಆ ಭಾಷೆಯನ್ನು ಮಾತನಾಡುವ ಮತ್ತು ಆ ಭಾಷೆಯನ್ನು ಪ್ರೀತಿಸುವ ಮತ್ತು ಬಳಸುವ ಜನರ ಬಳಕೆಯ ಮನೋಧರ್ಮದ ಮೇಲೆ ನಿಂತಿರುತ್ತದೆ.

ಅದೇ ರೀತಿಯಾಗಿ ಆಡಳಿತದಲ್ಲಿ ಕನ್ನಡ ಬಳಕೆಯೂ ಸಹ ಸಿಬ್ಬಂದಿವರ್ಗದವರ ಮನೋಧರ್ಮದ ಮೇಲೆ ನಿಂತಿದೆ. ಆಡಳಿತ ಕನ್ನಡ ಬಳಕೆಯ ಮನೋಧರ್ಮವು ಸಿಬ್ಬಂದಿ ವರ್ಗದವರಲ್ಲಿ ಕಾಣುತ್ತಿಲ್ಲ. ಮೇಲ್ನೋಟಕ್ಕೆ ಬಳಸುವ ಹಾಗೆ ಕಂಡರೂ ನಂತರದಲ್ಲಿ ಅದರ ಬಳಕೆಯ ಬಗ್ಗೆ ಮನೋಭಾವ ಇಲ್ಲದಿರುವುದು ಕಂಡುಬರುತ್ತದೆ. ಹಾಗೂ ಇದು ಸಮಸ್ಯೆಯಾಗಿ ಕಾಣುತ್ತಿದೆ.

ನಾವು ನಮ್ಮ ಮನೆಯಲ್ಲಿ ಕೆಲಸ ಮಾಡುವ ಮನೆ ಕೆಲಸದ ಅಡುಗೆ ಮಾಡುವ ಮಹಿಳೆಗೆ ಅಕ್ಕಿಯ ಅನ್ನ ಮಾಡಲು ತಿಳಿಸಿದೆವೆಂದು ಭಾವಿಸೋಣ ಆ ಮಹಿಳೆಗೆ ತನ್ನ ಮನದೊಳಗೆ ಅನ್ನ ಮಾಡುವುದು ಇಷ್ಟವಿರುವುದಿಲ್ಲ. ಒತ್ತಾಯ ಪೂರ್ವಕವಾಗಿ ಇನ್ನೊಂದು ಸಲ ನಾವು ಅವಳಿಗೆ

ಅಡುಗೆ ಮಾಡಿ ಎಂದು ತಿಳಿಸಿದಾಗ ಅವಳು ಗೊಣಗುತ್ತ ಮಾಡಲು ಹೋಗುವಳು. ಅವಳಿಗೆ ಅಡುಗೆ ಮಾಡುವ ವನೋಧರ್ಮವಿಲ್ಲ. ಆದರೂ ಅವಳು ಒತ್ತಾಯ ಪೂರ್ವಕವಾಗಿ ಮಾಡುತ್ತಾಳೆ. ಆ ಅಡುಗೆ ಹೇಗಾದರು ಆಗಲಿ ಅದೇ ತರಹ ಕೆಲವು ಸಿಬ್ಬಂದಿ ವರ್ಗದವರಲ್ಲಿ ಕನ್ನಡ ಬಳಕೆಯ ಮನೋಧರ್ಮವೇ ಇಲ್ಲ. ಇಲ್ಲಿ ಬಳಕೆ ಸರಿಯಾಗಿ ಆಗದಿದ್ದಾಗ ಆ ಬಳಕೆ ಸರಿಯಾಗಿ ಆಗದಿರುವುದಕ್ಕೆ ೩ ಕಾರಣಗಳಿರಬಹುದು.

೧. ಬಳಕೆಯ ಮನೋಧರ್ಮ ವಿಲ್ಲದ್ದು.

೨. ಒತ್ತಾಯ ಪೂರ್ವಕವಾಗಿ ಹೇಳಲಾದದ್ದು

೩. ಬಳಕೆಯೇ ತಿಳಿಯದೇ ಇರಬಹುದು.

ಈ ಮೂರರಲ್ಲಿ ಯಾವುದಾದರೂ ಒಂದು ಕಾರಣ ಇದ್ದೇ ಇರುತ್ತದೆ. ಕಾರಣ ಆಡಳಿತದಲ್ಲಿ ಕನ್ನಡ ಬಳಕೆಯ ಮನೋಧರ್ಮವಿಲ್ಲದಿರುವುದು ಕೂಡ ಆಡಳಿತದಲ್ಲಿ ಕನ್ನಡ ಬಳಕೆ ಆಗದಿರುವುದಕ್ಕೆ ಕಾರಣವೂ ಆಗಿದೆ. ಜೊತೆಗೆ ಸಮಸ್ಯೆಯೂ ಆಗಿದೆ. ಯಾವುದೇ ಒಂದು ವಿಷಯವನ್ನು ಪದೇ ಪದೇ ಒತ್ತಿ ಒತ್ತಾಯ ಪೂರ್ವಕವಾಗಿ ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದರೆ ಆ ಕಾರ್ಯವು ಯಶಸ್ಸನ್ನು ಪಡೆಯಲಾರದು. ಒತ್ತಾಯ ಪೂರ್ವಕವಾಗಿ ಮಾಡಿದ ಕಾರ್ಯದಲ್ಲಿ ಸಂತೃಪ್ತಿ ಸಿಗದು. ಸ್ವಮನಸ್ಸಿನಿಂದ ಅದನ್ನು ಒಪ್ಪಿ ಕಾರ್ಯರೂಪಕ್ಕೆ ತರುವ ಮನಸ್ಸು ಇದ್ದರೆ ಅದು ಯಶಸ್ಸನ್ನು ಪಡೆಯುತ್ತದೆ ಎನ್ನುವಲ್ಲಿ ಎರಡು ಮಾತಿಲ್ಲ ಹೀಗಾಗಿ ಆಡಳಿತದಲ್ಲಿ ಕನ್ನಡ ಬಳಕೆಯನ್ನು ಮಾಡುವ ಮನೋಭಾವ ನಮ್ಮ ಆಡಳಿತದ ನಿರ್ವಹಣೆಯಲ್ಲಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿವರ್ಗದವರಿಗೆ ಬರಬೇಕು.

ಆಡಳಿತದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗ ಮತ್ತು ಅಧಿಕಾರಿಗಳಲ್ಲಿ ಈಗಿರುವ ಮನೋಭಾವಗಳು ಬದಲಾವಣೆಗೊಳ್ಳಬೇಕಾಗಿದೆ. ಅಂದಲ್ಲಿ ಮಾತ್ರ ವಿಷಯವು ಫಲಪ್ರದಾಯಕತೆಯನ್ನು ನೀಡುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಸಿಬ್ಬಂದಿ ಮತ್ತು ಅಧಿಕಾರಿಗಳಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಯ ಮನೋಧರ್ಮ ಇಲ್ಲವಾಗಿದೆ. ಆಡಳಿತ ಕನ್ನಡ ಅಂದರೇನು? ಎನ್ನುವುದು ಕೆಲವೊಂದು ಸಿಬ್ಬಂದಿ ವರ್ಗದವರಿಗೆ ಇನ್ನೂ ಇವರೆಗೂ ತಿಳಿದಿಲ್ಲದಿರುವುದು ಇನ್ನೊಂದು ಸಂಗತಿಯಾಗಿದೆ. ಇಂತಹ ಪರಿಸ್ಥಿತಿಯ ಘಟ್ಟದಲ್ಲಿ ನಾವಿರುವಾಗ ಅವರ ಮನೋಧರ್ಮವನ್ನು ಬದಲಾಯಿಸುವ, ಸಹಜ ಸ್ಥಿತಿಗೆ ವಾಲಿಸಿ ಆಡಳಿತದಲ್ಲಿ ಕನ್ನಡದ ಬಳಕೆ ಕಡ್ಡಾಯವಾಗಿ ಜಾರಿಗೆ ತರುವ ನಿಟ್ಟಿನಲ್ಲಿ ಶ್ರಮಿಸುವುದು ಹಾಗೂ ಅದರಲ್ಲಿ ಯಶಸ್ಸನ್ನು ಪಡೆಯುವುದು ಒಂದು ಅದ್ಭುತವೇ ಸರಿ. ಇದು ಹಾಸ್ಯಾದ ಮಾತಲ್ಲ ಗಂಭೀರ ಚಿಂತನೆಯ ಮಾತಾಗಿದೆ.

ಕಾರಣವೇನೆಂದರೆ ವಿಭಿನ್ನ ಜನ, ವಿಭಿನ್ನ ಭಾಷೆ, ಅದೆಲ್ಲದಕ್ಕೂ ಹೆಚ್ಚಾಗಿ ವಿಭಿನ್ನ ಮನೋಧರ್ಮವನ್ನು ಹೊಂದಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರ ಮಧ್ಯದಲ್ಲಿ ಬಳಕೆಯು ಯಶಸ್ಸನ್ನು ಪಡೆಯುವುದು ದೂರದ ಮಾತಾಗಿದೆ. ಇದರ ಬಗ್ಗೆ ಪರಿಚಯ, ವಿಷಯ ಪ್ರಸ್ತಾಪ, ಮನವರಿಕೆ ಮಾಡಲು ಹೊರಟರೆ "ನಿಮಿಗೆ ಬೇರೆ ಕೆಲಸ ಇಲ್ವಾ ಸಾರ್, ಸರ್ ನಮಿಗೆ ನೂರೆಂಟು

ಕೆಲಸ ಇವೆ, ಆಡಳಿತದಲ್ಲಿ ಕನ್ನಡ ಬಳಕೆ ಅಂದುಕೋಂತ ಕುಂತರೆ ನಮ್ಮ ಕೆಲಸ ಆಗಲ್ಲ ಸಾರ್ ನಮಿಗೆ ಕೆಲಸಾ ಆಗ್ಬೇಕು" ಎಂದು ಹೇಳುವ ಸಿಬ್ಬಂದಿ ವರ್ಗದ ನಡುವೆ ಆಡಳಿತದಲ್ಲಿ ಕನ್ನಡ ಬಳಕೆ ಯಶಸ್ಸನ್ನು ಪಡೆಯಲಾರದು ಹೀಗಿದ್ದಾಗ ಸಿಬ್ಬಂದಿ ಮತ್ತು ಅಧಿಕಾರಿಗಳ ಮನಸ್ಸನ್ನು ಅರಿಯಲು ಸಾಧ್ಯವೇ? ಸಾಧ್ಯವಿಲ್ಲ. ಕಾರಣ ಅವರವರ ಮನೋಧರ್ಮ ಭಾಷೆಯ ಬಳಕೆಯ ಬಗ್ಗೆ ಅಭಿಮಾನ, ಉಳಿಸುವಿಕೆಯ ಜವಾಬ್ದಾರಿಗಳು ಅರ್ಥವಾಗ ಬೇಕು ಅಷ್ಟೆ ಇದು ಅರ್ಥವಾದಾಗ ಮಾತ್ರ ಸ್ವಲ್ಪ ಮಟ್ಟಿಗೆ ಎಲ್ಲಾರೂ ಆಡಳಿತದಲ್ಲಿ ಕನ್ನಡ ಬಳಕೆಯನ್ನು ಜಾರಿಗೆ ತರಲು ಸಾಧ್ಯವಾಗುತ್ತದೆ.

೩.೪.೪. ತಾತ್ಸಾರ ಹಾಗೂ ನೀರಸ ಮನೋಭಾವ

ಒಂದು ಕಾರ್ಯವನ್ನು ಮಾಡುವ ಮನೋಧರ್ಮವಿದೆ. ಆದರೆ ಆ ಕಾರ್ಯವನ್ನು ಸರಿಯಾಗಿ ಮಾಡದೇ ತಾತ್ಸಾರ ಭಾವನೆ ತೋರುವುದು ಅಲ್ಲಲ್ಲಿ ಎದ್ದು ಕಾಣುತ್ತದೆ. ಹೇಗೆಂದರೆ ಆಡಳಿತದಲ್ಲಿ ಕನ್ನಡ ಬಳಕೆ ಮಾಡಬೇಕೆಂಬುದು ಒಂದು ಮನೋಧರ್ಮ ಮತ್ತು ಉದ್ದೇಶ. ಅದರ ಬಳಕೆ ಮಾಡುವಾಗ ನಿರುತ್ಸಾಹ, ತಾತ್ಸಾರ ಭಾವನೆ ತೋರುವುದು ಕೆಲವೊಂದು ಸಿಬ್ಬಂದಿ ಮತ್ತು ಅಧಿಕಾರಿಗಳ ವರ್ಗಗಳಲ್ಲಿ ಕಂಡುಬರುತ್ತದೆ.

ಪ್ರಸ್ತುತ ನೋಡುವುದಾದರೆ ಈ ಸಮಸ್ಯೆಯಲ್ಲಿ ಸಿಬ್ಬಂದಿ ವರ್ಗದವರೂ ಮತ್ತು ಅಧಿಕಾರಿ ವರ್ಗದವರು ಈಗಲೂ ಇರುವುದನ್ನು ಕಾಣುತ್ತೇವೆ. ಆಡಳಿತ ಕನ್ನಡದ ಬಗ್ಗೆ ಪರಿಚಯವಿದ್ದು, ಅಪಾರ ಜ್ಞಾನವಿದ್ದು ಬಳಕೆ ಮಾಡಬೇಕೆಂಬ ಮನೋಭಾವವಿದ್ದರೂ ಬಳಸುವಲ್ಲಿ ತಾತ್ಸಾರ ಮನೋಭಾವ ತೋರಿದರೆ ತಪ್ಪೆನಿಸುತ್ತದೆ. ಎಲ್ಲಾ ತಿಳಿದು ತಿಳಿದು ಬಳಕೆಯ ಬಗ್ಗೆ ತ್‌ತಕ್ಷಣದ ಮಟ್ಟಿಗೆ ತಾತ್ಸಾರ ತೋರುವುದು ವಯುಕ್ತಿಕ ಕಾರಣವಾದರೂ ಇದು ಒಂದು ಸಮಸ್ಯೆಯಾಗಿ ಕಾಡುತ್ತಿದೆ. ಹಾಗಾಗಿ ಆಡಳಿದಲ್ಲಿ ಕನ್ನಡ ಬಳಕೆಯ ವಿಷಯ ಬಂದಾಗ ಸಿಬ್ಬಂದಿ ವರ್ಗದವರು ಹಾಗೂ ಅಧಿಕಾರಿಗಳು ಆಡಳಿತದಲ್ಲಿ ಕನ್ನಡವನ್ನು ಬಳಸಲೇಬೇಕೆಂಬ ನಿರ್ಧಾರಕ್ಕೆ ಬಂದು ಬಳಸುವ ನಿಟ್ಟಿನಲ್ಲಿ ಯಶಸ್ವಿಪೂರ್ಣಗೊಳಿಸಬೇಕಾಗಿದೆ.

ಬೇಗ ಬೇಗ ಮುಗಿಯಲಿ ಎಂಬ ಉದ್ದೇಶ ಮತು ಮನೋಭಾವ ಹೊಂದಿರಿವುದು ಸರ್ವೇಸಾಮಾನ್ಯವಾಗಿ ಸಿಬ್ಬಂದಿ ವರ್ಗಗಳಲ್ಲಿ ಕಂಡುಬರುತ್ತದೆ. ಕಚೇರಿಗೆ ಬಂದ ಪತ್ರಗಳಿಗೆ ಮರು ಉತ್ತರ ಬರೆಯುವುದು ಒಂದು ಪದ್ಧತಿ ಹಾಗೂ ಕರ್ತವ್ಯವೂ ಆಗಿದೆ. ಕಚೇರಿಗೆ ಬಂದ ಪತ್ರಗಳು ಯಾವ ಭಾಷೆಯಾದರೇನು ಅದಕ್ಕೆ ಉತ್ತರ ಬರೆಯಬೇಕಾದ ಭಾಷೆ ಆಡಳಿತ ಕನ್ನಡ.

ಇಲ್ಲಿ ಪತ್ರವು ತ್ವರಿತಗತಿಯಲ್ಲಿ ಹೋಗಬೇಕೆಂಬ ಉದ್ದೇಶ ವಿರುವುದು ಸರಿಯೇ ಆದರೆ ಪತ್ರದ ಉದ್ದೇಶದ ಈಡೇರಿಕೆಗಾಗಿ ಇಂಗ್ಲೀಷ್ ನಲ್ಲಿ ಉತ್ತರಿಸುವುದು ಅಥವಾ ಬರೆಯುವುದು ಈ ಎರಡೂ ವಿಷಯವು ಆಡಳಿತದಲ್ಲಿ ಕನ್ನಡ ಅನುಷ್ಠಾನಕ್ಕೆ ವಿರೋಧವಾದದ್ದಾಗಿದೆ. ಸಿಬ್ಬಂದಿ ವರ್ಗ ಮತ್ತು ಆಡಳಿತ ವರ್ಗಗಳು ಪತ್ರಗಳಿಗೆ ಬೇಗ ಉತ್ತರ ಕಳುಹಿಸಲು ನಿರ್ಧಾರ ಕೈಗೊಂಡಿದ್ದರೂ ಬೇಗ-ಬೇಗ ಮುಗಿಯಬೇಕೆಂಬ ಉದ್ದೇಶದಿಂದ ಅಶುದ್ಧ ಮತ್ತು ಅಸ್ಪಷ್ಟತೆ ಹಾಗೂ ವಿಷಯವನ್ನು ಗೊಂದಲಮಯವಾಗಿ ಬರೆದು ಕಳುಹಿಸಿ ಆಡಳಿತದಲ್ಲಿ ಕನ್ನಡದ ಬಳಕೆಯನ್ನು ತೀರಾ ಕೆಳಮಟ್ಟದ ರೀತಿಯಲ್ಲಿ ಕಂಡಿರುವುದು ಕೆಲವೊಂದು ಪತ್ರಗಳಲ್ಲಿ ಕಂಡುಬರುತ್ತದೆ.

ಸದರಿ ಪತ್ರಗಳಲ್ಲಿ ವಾಕ್ಯ, ಶಬ್ದ, ಅರ್ಥಗಳೆಲ್ಲವೂ ಅಭಾಸವಾಗಿ ಕಂಡು ಆಡಳಿತದಲ್ಲಿ ಕನ್ನಡ ಬಳಕೆ ತೀರಾ ಕೆಳಮಟ್ಟದ್ದಾಗಿ ಕಂಡುಬರುತ್ತದೆ. ತ್ವರಿತ ಗತಿಯಲ್ಲಿ ಮುಕ್ತಾಯ ಮಾಡಬೇಕೆಂಬ ಉದ್ದೇಶದಿಂದ ಮನಸೋಇಚ್ಛೆ ಪತ್ರಗಳನ್ನು ಬರೆಯುವುದು, ಅಲ್ಲದೇ ಅಧಿಕಾರಿಗಳೇ ಅದಕ್ಕೆ ಸಾಕ್ಷಿದಾರರೂ ಎಂಬಂತೆ ತಾವೇ ಇಂತಹ ಅಶುದ್ಧ ಪತ್ರಗಳಿಗೆ ಸ್ವತಃ ಒಪ್ಪಿ ದೃಢೀಕರಿಸಿದಂತೆ ಅಧಿಕಾರಿಗಳು ಸಹಿ ಮಾಡುತ್ತಿರುವುದು ಹಾಗೂ ಈ ವಿಷಯವಾಗಿ ಅಧಿಕಾರಿಗಳು ಗಮನ ಅರಿಸದೆ ಇರುವುದು ಒಂದು ಶೋಚನೀಯ ಸಂಗತಿಯಾಗಿದೆ.

ಪತ್ರದಲ್ಲಿನ ವಿಷಯವನ್ನು ಭಾಷೆಯ ಬಳಕೆಯಲ್ಲಿ ತಪ್ಪುಗಳಾಗದಂತೆ ಪತ್ರಗಳನ್ನು ಸ್ಪಷ್ಟವಾಗಿ ಬರೆಸಿ ಅದಕ್ಕೆ ಸಹಿಮಾಡುವುದು ಅಧಿಕಾರಿಗಳ ಮುಖ್ಯ ಕರ್ತವ್ಯ. ಆದರೆ ಇಂದಿನ ಅಧಿಕಾರಿಗಳು ಸಹ ಈ ಒಂದು ಜವಾಬ್ದಾರಿಯನ್ನು ಮರೆತು ಹೋಗಿದ್ದಾರೆ. ಎಲ್ಲೋ ಒಬ್ಬ ಅಧಿಕಾರಿಗಳು ಭಾಷೆಯ ಬಗ್ಗೆ ಗಮನ ಅರಿಸುವ ನಿದರ್ಶನಗಳು ಕಾಣ ಸಿಗುತ್ತವೆ.

ವಿಷಯ ನಿರ್ವಾಹಕರು ಯಾವುದೇ ತಪ್ಪನ್ನು ಮಾಡಿದ್ದರೂ ಸಹ ಅವುಗಳು ಎಲ್ಲಾ ಮುಚ್ಚಿ ಹೋಗುವಂತೆ ಸಾಕ್ಷೀಕರಿಸಿ ಪತ್ರಕ್ಕೆ ಸಹಿ ಮಾಡಿ ಮೇಲಿನ ಪತ್ರ ಸರಿಯಾಗಿರುತ್ತದೆಂದು ದೃಢೀಕರಿಸುತ್ತಾರೆ. ಆದರೆ ಅಧಿಕಾರಿಗಳು ಪತ್ರದಲ್ಲಿ ಆಡಳಿತ ಕನ್ನಡ ಬಳಕೆಯ ಮತ್ತು ಪತ್ರದಲ್ಲಿ ಆದ ತಪ್ಪುಗಳನ್ನು ಗಮನ ವಹಿಸದೆ ಅವುಗಳನ್ನು ದೃಢೀಕರಿಸಿ ಸಂಬಂಧಪಟ್ಟವರಿಗೆ ರವಾನಿಸಲಾಗುತ್ತಿರುವುದು ತುಂಬಾ ದುರಂತಮಯ ಸಂಗತಿಯಾಗಿದೆ. **(ಅನುಬಂಧ-೭)**

ಏಕೆಂದರೆ ಸ್ವತಃ ಅಧಿಕಾರಿಗಳೇ ವಿಷಯನಿರ್ವಾಹಕರು ಪತ್ರದಲ್ಲಿ ತಿರಸ್ಕರಿಸಿ ಬಳಸಲಾದ ಶುದ್ಧ, ಸ್ಪಷ್ಟ, ಸರಿಯಾದ ವಾಕ್ಯ ಬಳಸಿ ಮಾಡಲಾಗದ ಅಥವಾ ಅಧಿಕಾರಿಗಳು ಅವರ ತಪ್ಪುಗಳನ್ನು ಮರೆಮಾಚಲು ಎಂಬಂತೆ ಸಹಿ ಮಾಡಿ ದೃಢೀಕರಿಸುತ್ತಾರೆ. ಈ ಬಳಕೆಯಲ್ಲಿ ಮಾಡಲಾದ ತಪ್ಪುಗಳ ಬಗ್ಗೆ ಕ್ರಮಕೈಗೊಂಡು ತಪ್ಪುಗಳನ್ನು ಸರಿಪಡಿಸಲು ಮತ್ತು ಆಡಳಿತದಲ್ಲಿ ಕನ್ನಡ ಬಳಕೆಯನ್ನು ಜಾರಿಗೆ ತರಲು ಸೂಕ್ತ ಕಾನೂನುಗಳನ್ನು ರೂಪಿಸಲು ಮತ್ತು ರೂಪಿಸಿದ ಕಾನೂನುಗಳನ್ನು ಕಾರ್ಯರೂಪಕ್ಕೆ ತಂದು ಯಶಸ್ವಿಗೊಳಿಸಲು ಮುಂದಾಗಬೇಕಾಗಿದೆ. ತ್ವರಿತಗತಿಯ ಉದ್ದೇಶವಿದ್ದರೂ ಬಳಕೆ ನಿಕೃಷ್ಟವಾಗಿರುವುದು ತುಂಬಾ ಶೋಚನೀಯ. ಈ ಮನೋಭಾವವು ಬದಲಾಗಬೇಕಿದೆ ತ್ವರಿತಗತಿಯ ಉದ್ದೇಶದ ಜೊತೆಗೆ ಸ್ಪಷ್ಟ, ಶುದ್ಧ ಹಾಗೂ ಸ್ಪಷ್ಟವಾದ ಪತ್ರಗಳು ಚಾಲನೆಗೆ ಬರಬೇಕಾಗಿದೆ.

ಈಗ ಬಳಸುತ್ತಿರುವುದು ತಪ್ಪು ಎಂದು ಹೇಳುತ್ತಿಲ್ಲ. ಹಾಗೆಯೇ ಎಲ್ಲಾ ಅಧಿಕಾರಿಗಳು ಹಿಗೆಯೇ ಮಾಡುತ್ತಾರೆ ಅಥವಾ ಮಾಡುತ್ತಿದ್ದಾರೆ ಎಂದು ಹೇಳುತ್ತಿಲ್ಲ ಆದರೆ ಬಹುಪಾಲು ಸಿಬ್ಬಂದಿ ವರ್ಗದವರು ಮತ್ತು ಅಧಿಕಾರಿಗಳು, ವಿಷಯನಿರ್ವಾಹಕರು ಈ ರೀತಿಯಾಗಿ ತಪ್ಪುಗಳನ್ನು ಮಾಡಿ ಆಡಳಿತದಲ್ಲಿ ಕನ್ನಡದ ಬಳಕೆಯನ್ನು ನಿಕೃಷ್ಟವಾಗಿ ಕಾಣುತ್ತಿದ್ದಾರೆಂಬುದು ನಮ್ಮ ವಾದ. ಇದಕ್ಕೆ ಏನೋ ಕಾರಣಗಳನ್ನು ಹೇಳಿ ಕಾಣದ ರೀತಿಯಲ್ಲಿ ಸಮರ್ಥನೆಯನ್ನು ಮಾಡಿಕೊಳ್ಳುತ್ತಿರುವುದು ಇನ್ನೊಂದು ದುರಂತಮಯ ಸಂಗತಿಯಾಗಿದೆ.

ಪದೇಪದೇ ಈ ತಪ್ಪುಗಳನ್ನು ಮಾಡುತ್ತಿರುವ ವಿಷಯ ನಿರ್ವಾಹಕರು ಮತ್ತು ಅಧಿಕಾರಿಗಳು ಮಾಡುವ ತಪ್ಪಿಗೆ, ಶಿಕ್ಷೆಗಳನ್ನು ನೀಡಿರುವುದು ಆಡಳಿತದ ಚರಿತ್ರೆಯಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಹಾಗಾಗಿ ಆಡಳಿತದಲ್ಲಿ ಕನ್ನಡದ ಬಳಕೆ ಬಳಸಿದರೇನು? ಅಥವಾ ಬಳಸದಿದ್ದರೇನು? ಪತ್ರಗಳಿಗೆ ಉತ್ತರಗಳು ಸಿಕ್ಕು ಆಡಳಿತ ನಡೆದರೆ ಸಾಕು ಎಂಬಂತೆ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರ ಮನೋಭಾವವಿರುವಾಗ ಆಡಳಿತದಲ್ಲಿ ಕನ್ನಡ ಬಳಕೆಯನ್ನು ಜಾರಿಗೆ ತರುವ ಹೋರಟಕ್ಕೆ ಧ್ವನಿ ಎತ್ತುವ ಕೂಗಿಗೆ ಸಿಬ್ಬಂದಿ ವರ್ಗದವರಾಗಲಿ ಆಡಳಿತ ವರ್ಗದವರಾಗಲಿ ಮಣಿಯುವುದಿಲ್ಲ.

ಈ ನಿಟ್ಟಿನಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆಯ ಕೂಗು ಹಾಗೆಯೇ ಉಳಿಯುತ್ತದೆ. ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ನಡುವೆ ಹೆಣೆದ ಒಂದು ಬಲೆಯಾಗಿದೆ. ಇಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆ ಏಕೆ ಹೀಗೆ ಮಾಡಿದ್ದೀರಿ? ಎಂಬುದನ್ನು ಸರಿಯಾಗಿ ಪ್ರಶ್ನಿಸುವ ಮತ್ತು ಅದರ ವಿರುದ್ಧ ಧ್ವನಿ ಎತ್ತುವ ವ್ಯಕ್ತಿಗಳು ಯಾರೂ ಇಲ್ಲ. ತಮ್ಮ ಕೆಲಸವು ಸರಿಯಾಗಿ ತ್ವರಿತಗತಿಯಲ್ಲಿ ಆದರೆ ಸಾಕು ಎಂದು ಕಾಯುವ ಜನ, ಇದಕ್ಕೆ ಉತ್ತರ ನೀಡಿದರೆ ಸಾಕು ಎಂದು ಬೇಸತ್ತ ಸಿಬ್ಬಂದಿ, ಹೀಗಿರುವ ನಿಟ್ಟಿನಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆ ಆಗಿದೆಯೋ ಇಲ್ಲವೋ, ತಪ್ಪೋ, ಸರಿಯೋ ಎಂದು ಪರೀಕ್ಷಿಸುವ ಜನ, ಸಿಬ್ಬಂದಿ ವರ್ಗ ಮತ್ತು ಅಧಿಕಾರಿಗಳು ಇಲ್ಲವೇ ಇಲ್ಲ ಮತ್ತು ಪರೀಕ್ಷಿಸಿದರೂ ಅದು ತಪ್ಪು ಎಂದು ಧ್ವನಿ ಎತ್ತುವುದೂ ಇಲ್ಲ ಅದರ ವಿರುದ್ಧ ಧ್ವನಿ ಎತ್ತುವವರೂ ಇರುವುದಿಲ್ಲ.

ಒಂದು ವೇಳೆ ಧ್ವನಿ ಎತ್ತಿದರೂ ಪ್ರಯೋಜನವೇನೂ ಇಲ್ಲ. ಕಾರಣ ಆಡಳಿತ ಕನ್ನಡದ ಬಳಕೆಯ ಸಂದರ್ಭದಲ್ಲಿ ಆದ ಬಳಕೆಯನ್ನು ತಪ್ಪೆಂದು ಭಾವಿಸದೇ ಅದನ್ನು 'ಟೈಪಿಂಗ್ ಮಿಸ್ಟೇಕ್' ಎಂದು ಇಂಗ್ಲೀಷಿನಲ್ಲಿ ಹೇಳಿ ಜಾರಿಕೊಳ್ಳುವ ಸಿಬ್ಬಂದಿ, ಅಧಿಕಾರಿವರ್ಗ ಮತ್ತು ಜನರಿದ್ದಾರೆ. ಒಂದು ತಪ್ಪನ್ನು ತಪ್ಪೆಂದು ಒಪ್ಪಿಕೊಳ್ಳುವ ಮನೊಭಾವ ಆಗಲಿ, ಗುಣವಾಗಲಿ ಅವರಲ್ಲಿ ಇರುವುದಿಲ್ಲ.

ಕೆಲವೊಂದು ಅಧಿಕಾರಿಗಳು ಭಾಷೆಯ ಬಗ್ಗೆ ಅಭಿಮಾನವಿದ್ದು ಆಡಳಿತ ಕನ್ನಡ ಬಳಕೆಯ ಬಗ್ಗೆ ತಾತ್ಸಾರ ಮನೋಭಾವ ತಾಳದೇ ತಪ್ಪಿದ್ದ ಬಳಕೆಯನ್ನು ಪುನಃ ಅವುಗಳ್ನು ತಿದ್ದಿ ಸ್ಪಷ್ಟ ಮತ್ತು ಶುದ್ಧವಾಗಿ ಪತ್ರಗಳ ರಚನೆಗೆ ಕ್ರಮಕೈಗೊಳ್ಳುವುದನ್ನು ಕಾಣಬಹುದು. ಪತ್ರದಲ್ಲಿನ ದೊಷಗಳನ್ನು ತಿದ್ದದೇ ಭಾಷೆಯ ಬಳಕೆಯಿಂದ ಹಲವಾರು ತಪ್ಪುಗಳು ಇದ್ದಾಗಿಯೂ ಹಾಗೆಯೇ ಸಹಿಮಾಡಿ ಕಳುಹಿಸಲಾದ ಅಧಿಕಾರಿಗಳ ಕೆಲವೊಂದು ಪತ್ರಗಳ ಮಾದರಿಗಳನ್ನು ನೋಡಬಹುದಾಗಿದೆ. **(ಅನುಬಂಧ ೮)** ಕನ್ನಡ ಭಾಷೆಯ ಬಗ್ಗೆ ಪರಿಚಯವಿದ್ದು ಅದರ ಜ್ಞಾನವಿದ್ದು ಬಳಕೆಯನ್ನು ತೀರಾ ಕಳಪೆ ರೀತಿಯಲ್ಲಿ ಕಂಡ ಒಂದು ಮಾದರಿಗಳು ಇವಾಗಿವೆ. ಹಾಗಾಗಿ ಇದೊಂದು ಸಮಸ್ಯೆಯಾಗಿದೆ. ಇಲ್ಲಿ ಆಧಿಕಾರಿಗಳಿಗೆ ಕನ್ನಡ ಬರುವುದಿಲ್ಲ ಎಂದಲ್ಲ ಅವರು ಅದನ್ನು ನೋಡಿ ತಿದ್ದಿ ಸಹಿಮಾಡಲು ಆಗುವುದಿಲ್ಲ ಎಂದಲ್ಲಾ ಇದಕ್ಕೆ ಸಂಬಂದಪಟ್ಟಂತೆ ಅಲ್ಲಿನ ಸಿಬ್ಬಂದಿವರ್ಗ, ಅದರ ಮೇಲಂತದ ಅಧಿಕಾರಿಗಳ ಕಾರ್ಯಾನಿರ್ವಾಹಕರ ಕೆಲಸವಾಗಿರುತ್ತದೆ. ಇದಕ್ಕೆ ಅವರೇ ಹೊಣೆಗಾರರು ಎಂದು ಹೇಳಿ ಮಾಡಿದ ತಪ್ಪನ್ನು ಮರೆಮಾಚುವುದು ಯಾವ ಹಂತದಲ್ಲೂ ಸರಿಯಲ್ಲ ಅದು ತಪ್ಪು ತಪ್ಪೇ. ಅವರವರ ಮನೋಬಲಕ್ಕೆ ಸಂಬಧಪಟ್ಟ ವ್ಯಕ್ತಿಗತ ನೆಲೆಯಲ್ಲಿ ಇದೊಂದು ಸವಾಲಾಗಿ ಪರಿಣಮಿಸುತ್ತದೆ.

ಸರ್ಕಾರವು ಅನೇಕ ಕಟ್ಟುನಿಟ್ಟಿನ ಆದೇಶಗಳನ್ನು ಹೋರಡಿಸಿದ್ದರೂ ಸಿಬ್ಬಂದಿವರ್ಗ ಹಾಗೂ ಅಧಿಕಾರಿಗಳ ವರ್ಗವೂ ಜಾಣ ಕುರುಡನ್ನು ತೋರುತ್ತಿವೆ. ಆಡಳಿತ ಕನ್ನಡ ಬಳಕೆಗೆ ಸಂಬಂದಿಸಿದಂತೆ ಹೊರಡಿಸಲಾದ ಆದೇಶಗಳು ತಮಗೆ ಸಂಬಂಧವಿಲ್ಲ ಎಂಬಂತೆ ನಿರುತ್ಸಾಹವನ್ನು ತೋರುತ್ತಿವೆ. ಇದಕ್ಕೆ ಕಾರಣ ಆಡಳಿತದಲ್ಲಿ ಕನ್ನಡ ಬಳಕೆಯ ಸಂದರ್ಭದಲ್ಲಿ ಕಟ್ಟುನಿಟ್ಟಾಗಿ ಬಳಸಬೇಕು ಎಂಬ ದೃಢನಿರ್ಧಾರಕ್ಕೆ ಇನ್ನೂ ಬಾರದೇ ಇರುವುದು, ಅವರುಗಳ ಹೇಳಿಕೆಯಂತೆ "ಬಳಸಿದರೆ ಏನಾಗುತ್ತೆ ಬಳಸಿದಿದ್ದರೇ ಏನಾಗುತ್ತೆ ಏನೂ ಆಗಲ್ಲ ತಾನೆ, ನಡೆಯುವವು ನಡೆಯುತ್ತಿರುತ್ತೆ ಯಾಕ್ರೀ ಸುಮ್ಮನೆ ತಲೆ ಕೆಡಿಸ್ಕೋತಿರಾ" ಎಂಬ ಮಾತುಗಳು ಕೆಲವೊಂದು ಸಿಬ್ಬಂದಿ ವರ್ಗದವರಲ್ಲಿ, ಅಧಿಕಾರಿಗಳ ವರ್ಗದವರಲ್ಲಿ ಕೇಳಿಬರುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಈ ಆಂತರಿಕ ಸಮಸ್ಯೆಯನ್ನು ಗಮನಿಸಿದಾಗ ಎಲ್ಲೋ ಸರ್ಕಾರವಾಗಲಿ, ಸಂಬಂಧ ಪಟ್ಟ ಪ್ರಾಧಿಕಾರಗಳಾಗಲಿ ಕಡ್ಡಾಯವಾಗಿ ಆಡಳಿತ ಕನ್ನಡವನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಎಡವಿದೆ ಎಂಬ ಅಂಶ ಪ್ರಧಾನವಾಗಿ ಕಂಡುಬರುತ್ತದೆ.

ಆದರೆ ಇಲ್ಲಿ ಬಳಸಿದರೆ ಏನಾಗುತ್ತೆ ಬಳಸದಿದ್ದರೆ ಏನಾಗುತ್ತೆ ಏನೂ ಆಗಲ್ಲ ಎಂಬ ಮಾತುಗಳಿಗೆ ಉತ್ತರಗಳನ್ನು ಹೇಳುವುದಾದರೆ, ಈ ವರೆಗೆ ಆಡಳಿತದಲ್ಲಿ ಕನ್ನಡದ ಬಳಕೆಗೆ ಸಂಬಂಧಪಟ್ಟಂತೆ ಜಾರಿಗೊಳಿಸಿ ಆದೇಶಿಸಿದ ಆದೇಶಗಳು ಫಲಪ್ರದಾಯತೆಯನ್ನು ನೀಡುತ್ತಿಲ್ಲ ಮತ್ತು ನೀಡಿಲ್ಲವೆಂಬುದು ಸತ್ಯವಾಗುತ್ತದೆ. ಆದೇಶಗಳ ಪ್ರಕಾರ ಆಡಳಿತದಲ್ಲಿ ಕನ್ನಡ ಬಳಕೆ ಮಾಡದಿರುವ ಆಧಿಕಾರಿಗಳಿಗೆ ಸಿಬ್ಬಂದಿವರ್ಗದವರಿಗೆ ವಿಚಾರಣೆ, ವಾರ್ಷಿಕ ವೇತನ ಬಡ್ತಿ ಸ್ಥಗಿತ, ಇತ್ಯಾದಿ ಇಂತಹ ಆದೇಶಗಳಿದ್ದರೂ ಅವುಗಳು ಜಾರಿಯಾದ ಬಗ್ಗೆ ಯಾವ ಮಾಹಿತಿಗಳು ಲಭ್ಯವಿಲ್ಲ ಹಾಗೂ ಕಾಣುವುದಿಲ್ಲ. ಕಾರಣ ಯಾರು ಏನನ್ನೂ ಮಾಡಲಾರರು ಆ ತಪ್ಪು ತಪ್ಪಲ್ಲವೆಂಬಂತೆ ಭಾವಿಸಿ ಆಡಳಿತ ಕನ್ನಡದ ಬಳಕೆಯ ಬಗ್ಗೆ ನಿರ್ಲಕ್ಷ್ಯ ತೊರುತ್ತಿರುವವರಿಗೆ ಒಂದು ಎಚ್ಚರಿಕೆ ಎಂಬಂತೆ ಆದೇಶಗಳ ಅಡಿಯಲ್ಲಿ ಕ್ರಮಕೈಗೊಳ್ಳಬೇಕಾಗಿದೆ.

ಆದರೆ ಯಾರೂ ಈ ಕಾರ್ಯಕ್ಕೆ ಮುಂದಾಗದೇ ಇರುವುದು ದುರಂತಮಯ ಸಂಗತಿ ಎಂದು ಹೇಳಿದರೆ ತಪ್ಪಾಗಲಾರದು. ಕಾರಣ ಆದೇಶಗಳನ್ನು ಜಾರಿಗೆ ತರುವಲ್ಲಿ ಸರ್ಕಾರ ಅಥವಾ ಪ್ರಭುತ್ವ ಸೋಲುತ್ತಿದೆ. ಇದನ್ನು ಜಾರಿಗೆ ತರುವುದರಿಂದ ಯಾರಿಗಾದರೂ ವಯುಕ್ತಿಕವಾಗಿ ಲಾಭವಿದೆಯಾ? ಅಥವಾ ಇದರಿಂದ ಲಾಭ ಪಡೆಯಬಹುದಾ? ಇದನ್ನು ಜಾರಿಗೆ ತರುವುದರಿಂದ ಏನು ಲಾಭಗಳಾಗುತ್ತವೆ? ಏಷ್ಟರ ಮಟ್ಟಿಗೆ ಲಾಭವಾಗುತ್ತದೆ ಎಂದು ಯೋಚಿಸಿ ಸರ್ಕಾರದ ಹಂತದಲ್ಲಿ ಯೋಜನೆಗಳನ್ನು ಜಾರಿಗೆ ತರುವ ಪರಿಸ್ಥಿತಿ ಈಗಿನದ್ದು. ಯಾರಿಗೂ ಲಾಭವಾಗದ ಈ ಒಂದು ವಿಷಯವನ್ನು ಮನಗಾಣದೇ ಯಾವ ತಂಟೆಗೂನೂ ಹೋಗದೆ ಈಗಿರುವುದನ್ನು ಹಾಗೆಯೇ ಬಿಟ್ಟುಬಿಡುವುದು ಒಳ್ಳೆಯದೆಂಬ ನಿರ್ಧಾರವು ದೃಢವಾಗಿ ಪ್ರಭುತ್ವದ ವಲಯದಲ್ಲಿ ನೆಲೆಯೂರಿರುವಾಗ, ಹಾಗೂ ಕೆವಿ.ನಾರಾಯಣನವರು ತಮ್ಮ ಕೃತಿಯಾದ 'ಕನ್ನಡ ಜಗತ್ತು ಅರ್ಧಶತಮಾನ'ದಲ್ಲಿ ತಿಳಿದಂತೆ ಆಡಳಿತ ಕನ್ನಡ ಜಾರಿಯಾಗುವುದಕ್ಕೆ ವಿರೋಧವನ್ನು ವ್ಯಕ್ತಪಡಿಸಿದ ಬಣಗಳು ಇರುವಾಗ

ಆಡಳಿತದಲ್ಲಿ ಕನ್ನಡ ಬಳಕೆಯನ್ನು ಜಾರಿಗೆ ತರುವುದು ಇಂದು ಒಂದು ಆತಂಕವಾಗಿ ಕಾಡುತ್ತಿದ್ದು ಬಹುದೊಡ್ಡ ಸಮಸ್ಯೆಯಾಗಿದೆ ಹಾಗೂ ಇದೊಂದು ಸವಾಲಾಗಿಯೂ ಪರಿಣಮಿಸಿದೆ ಎಂದಿದ್ದಾರೆ.

೩.೪.೫. ಇಂಗ್ಲೀಷಿನ ವ್ಯಾಮೋಹ

ಆಡಳಿತದಲ್ಲಿ ಕನ್ನಡದ ಬಳಕೆ ಎಂದಾಕ್ಷಣ ಮೊದಲನೆಯದಾಗಿ ಕಾಣುವ ಸಮಸ್ಯೆ ಏನೆಂದರೆ, ಇಂಗ್ಲೀಷ್ ಭಾಷೆಯ ಬಳಕೆ ಅಥವಾ ಇಂಗ್ಲೀಷ್‌ನ ಪ್ರಭಾವ ಮತ್ತು ಇಂಗ್ಲೀಷ್‌ನ ವ್ಯಾಮೋಹ. ಇಂದು ಇಂಗ್ಲೀಷ್ ಭಾಷೆ ಪ್ರತಿಯೊಂದು ರಂಗದಲ್ಲೂ ತನ್ನ ವಿಸ್ತಾರವನ್ನು ಹಂಚಿ, ಸ್ವೀಕರಣ ಭಾಷೆಯಾಗಿ ಪ್ರತಿಯೊಂದು ಕ್ಷೇತ್ರದಲ್ಲೂ ಹೆಜ್ಜೆಯಿಟ್ಟು ತನ್ನ ಪಾರುಪತ್ಯವನ್ನು ಮೆರೆದಿದೆ. ಅದಕ್ಕೆ ಆಸ್ಪದವನ್ನು ನೀಡಿದವರು ನಾವು ಎಂದು ಹೇಳಿದರೂ ಖಂಡಿತವಾಗಿಯೂ ತಪ್ಪಾಗಲಾರದು. ಒಂದು ಭಾಷೆಯು ಸ್ವೀಕರಣ ಭಾಷೆಯಾಗಬೇಕಾದರೆ ಆ ಭಾಷೆ ಸರಳೀಕರಣದಿಂದ ಕೂಡಿರುವುದರಿಂದ ಮಾತ್ರ, ಸಾಧ್ಯವೆಂಬುದನ್ನು ನಾವು ಕೇಳಿಯೇ ಇರುತ್ತೇವೆ.

ಇಂಗ್ಲೀಷ್ ಭಾಷೆಯು ಸರಳೀಕರಣದಿಂದ ಕೂಡಿರುವುದರಿಂದ ಮತ್ತು ಅದರ ಪ್ರಭಾವ ಭಾರತದಲ್ಲಿ ೨೦೦ ವರ್ಷಗಳ ಕಾಲ ನಡೆದಿದ್ದರಿಂದ ಜನ ಅದರತ್ತ ಸಹಜವಾಗಿ ವಾಲುತ್ತಾರೆಂಬುದು ಒಂದು ವಾದ ಮತ್ತು ಅಪವಾದವೂ ಆಗಿದೆ. ಅದಲ್ಲೆಕ್ಕಿಂತ ಹೆಚ್ಚಾಗಿ ಅದರ ಬಗ್ಗೆ ನಮ್ಮಲ್ಲಿ ವ್ಯಾಮೋಹ ಇದೆ ಎಂಬುದನ್ನು ನಾವು ಮರೆಯುವಂತಿಲ್ಲ. ಇದಕ್ಕೆ ಭಿನ್ನವಾದದ್ದು ಇನ್ನೊಂದು ಇಂಗ್ಲೀಷಿನ ನೋಟ.

ಸಹಜವಾಗಿ ಇತ್ತೀಚಿನ ದಿನಮಾನಗಳಲ್ಲಿ ಹೆಚ್ಚು ಹೆಚ್ಚು ಇಂಗ್ಲೀಷ್ ನೆಡೆಗೆ ಒಲವನ್ನು ತೋರುತ್ತಿರುವುದು ಸಹಜದ ಮಾತು. ತಮ್ಮ ವಿದ್ಯಾಭ್ಯಾಸದ ಸಂದರ್ಭದಲ್ಲಿ ಪೂರ್ಣಪ್ರಮಾಣದಲ್ಲಿ ಇಂಗ್ಲೀಷ್‌ನಲ್ಲಿ ಅಭ್ಯಾಸ ನೆಡೆಸಿ, ತದ ನಂತರದಲ್ಲಿ ಅಧಿಕಾರಿಗಳ ಹುದ್ದೆಗಳಾದ 'ಎ' ಮತ್ತು 'ಬಿ' ವೃಂದಗಳಿಗೆ ಆಯ್ಕೆಯಾಗಿ ಬಂದ ಸಂದರ್ಭದಲ್ಲಿ ಇವರಿಗೆ ಕನ್ನಡದಲ್ಲಿ ಆಡಳಿತ ನೆಡೆಸುವುದು ತುಸು ಕಷ್ಟವೇ ಸರಿ. 'ಎ' ವೃಂದ ಹುದ್ದೆಗಳಾದ ಐ.ಎ.ಎಸ್, ಐ.ಎಫ್.ಎಸ್ ಮತ್ತು ಐ.ಪಿ.ಎಸ್, ಇತ್ಯಾದಿ ಇವುಗಳು ಮತ್ತು ಇವುಗಳಿಗೆ ಆಯ್ಕೆಯಾದ ಅಭ್ಯರ್ಥಿಗಳು ಅಥವಾ ಅಧಿಕಾರಿಗಳನ್ನು ಅವಲೋಕಿಸಿದಾಗ ಸಹಜವಾಗಿ ಅವರ ಮಾತೃ ಭಾಷೆಯೇ ಬೇರೆ. ಆದರೆ ಅಧ್ಯಯನದ ಮಾಧ್ಯಮ ಇಂಗ್ಲೀಷ್ ಆಗಿರುವುದನ್ನು ಕಾಣುತ್ತೇವೆ.

ಉನ್ನತ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೇಂದ್ರಾಡಳಿತ ಪ್ರದೇಶದಿಂದ ಆಯ್ಕೆಯಾಗಿ ರಾಜ್ಯಕ್ಕೆ ಕರ್ತವ್ಯ ನಿರ್ವಹಿಸಲು ಆಡಳಿತದಲ್ಲಿ ಬಂದಾಗ ಸಮರ್ಥವಾಗಿ ಕನ್ನಡ ಬಳಕೆ ಆಗುತ್ತಿಲ್ಲ ಎನ್ನವುದು ಒಂದು ದುರಂತಮಯ ಸಂಗತಿ. ಅವರುಗಳು ಬರೆದ ಟಿಪ್ಪಣಿ, ಪತ್ರಗಳ ಮೇಲಿನ ಬರಹಗಳು ಪ್ರತಿಯೊಂದನ್ನು ನಾವು ಇಂಗ್ಲೀಷ್‌ನಲ್ಲಿರುವುದನ್ನು ಕಾಣುತ್ತೇವೆ. ಮೇಲಾಗಿ ಅವರು ಹೇಳುವುದೇನೆಂದರೆ ಒಂದು ಜಿಲ್ಲೆಯ ಆಡಳಿತವನ್ನು ನೆಡೆಸಬೇಕಾದ ನಾವು ಪ್ರಾದೇಶಿಕ ಭಾಷೆಯ ಬಗ್ಗೆ ಒಲವಿದ್ದರೂ ಸಮರ್ಥವಾಗಿ ಅದನ್ನು ಬಳಕೆ ಮಾಡಲು ಆಗವುದಿಲ್ಲ, ಆಡಳಿತದಲ್ಲಿ

ತೊಂದರೆಗಳನ್ನು ಅನುಭವವಿಸುವ ಸಂದರ್ಭಗಳುಂಟಾಗಬಹುದೆನ್ನುವ ಕಾರಣಕ್ಕಾಗಿ ಇಂಗ್ಲೀಷಿನ ಬಳಕೆ ನಮಗೆ ಅನಿವಾರ್ಯವಾಗಿದೆ ಎನ್ನುವ ಕೂಗು ಅವರಿಂದ ಕೇಳಬರುತ್ತದೆ.

ಇಲ್ಲಿ ಸಮಸ್ಯೆ ಇರುವುದು ಎಲ್ಲಿ? ಎಂಬುವುದನ್ನು ವೀಕ್ಷಿಸಿದಾಗ

೧) ಮಾಧ್ಯಮದ (ಅಧ್ಯಯನದ ಭಾಷೆ) ಸಮಸ್ಯೆ ಒಂದೆಡೆಯಾದರೆ,

೨) ಪ್ರಾದೇಶಿಕ ಭಾಷೆಯ ಬಗೆಗಿನ ಪ್ರಭುತ್ವ ಅವರಲ್ಲಿ ಇಲ್ಲದಿರುವುದು ಇನ್ನೊಂದಾಗಿದೆ.

ಕಾರಣ ಅಧ್ಯಯನದ ಮಾಧ್ಯಮ ಒಂದಾಗಿದ್ದು ತಾವು ಕರ್ತವ್ಯ ನಿರ್ವಹಿಸುವ ಮಾಧ್ಯಮದ ಭಾಷೆ ಬೇರೆಯಾದಲ್ಲಿ ಸಹಜವಾಗಿ ಆಡಳಿತದಲ್ಲಿ ಅಧಿಕಾರಿಗಳ ಮಧ್ಯದಲ್ಲಿ ಗೊಂದಲ ಉಂಟಾಗುತ್ತದೆ, ಕನ್ನಡದಲ್ಲಿ ಅಧ್ಯಯನ ಮಾಡಿ ಕರ್ನಾಟಕದಲ್ಲಿಯೇ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್.ಗಳಾಗಿ ನೇಮಕರಾದವರು ತುಂಬಾ ವಿರಳ. ಈ ಹಿನ್ನೆಲೆಯಲ್ಲಿ ನೋಡಿದಾಗ ಅವರ ಕಲಿಕೆಯು ಮಾಧ್ಯಮದ ಪ್ರಭಾವದಿಂದಲೇ ಇಂಗ್ಲೀಷ್ ನಲ್ಲೇ ಸಮರ್ಥವಾಗಿ ಆಡಳಿತವನ್ನು ನಿಭಾಯಿಸಬಲ್ಲರೆಂಬ ಕಾರಣದಿಂದ ಇಂಗ್ಲೀಷನ್ನೇ ತಮ್ಮ ಆಡಳಿತ ಭಾಷೆಯನ್ನಾಗಿ ಆಯ್ಕೆ ಮಾಡಿ ಕೊಂಡಿರುವುದು ಕಂಡು ಬರುತ್ತದೆ.

ಆದರೆ ಸದರಿ ವಿಷಯ ಕೆಳಹಂತದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಸ್ವಲ್ಪ ಮಟ್ಟಿಗೆ ತೊಂದರೆ ಹಾಗೂ ಕಷ್ಟವೆನಿಸಬುಹುದು. ಆದರೆ ಅನಿವಾರ್ಯವೂ ಆಗಿನ ಸಂದರ್ಭದಲ್ಲಿ ಆಗಿರುತ್ತದೆ, ಹಾಗಾಗಿ ಇದರಿಂದ ಪರಿಹಾರವೇನೆಂದರೆ ಕನ್ನಡ ಭಾಷೆಯ ಪರಿಚಯ, ಭಾಷೆ ಬಲ್ಲ, ಭಾಷೆಯ ಬಗ್ಗೆ ಅರಿವಿರುವ ಉನ್ನತ ಮಟ್ಟದ ಅಧಿಕಾರಿಗಳನ್ನು ಕಟ್ಟುನಿಟ್ಟಾಗಿ ನೇಮಕ ಮಾಡಿದಲ್ಲಿ ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರಲು ಸಾಧ್ಯವಾಗುತ್ತದೆ.

ಕೆ.ಎ.ಎಸ್ ಹಿರಿಯ ಶ್ರೇಣಿ ಹಾಗೂ ಕೆ.ಎ.ಎಸ್ ಕಿರಿಯ ಶ್ರೇಣಿಯಲ್ಲಿ ಆಯ್ಕೆಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಹಲವಾರು ಅಧಿಕಾರಿಗಳು ಕನ್ನಡದವರು ಮತ್ತು ಕನ್ನಡೇತರ ಅಧಿಕಾರಿಗಳು ಇರುವುದನ್ನು ಕಾಣುತ್ತೇವೆ. ಇಲ್ಲಿ ಕನ್ನಡಬಲ್ಲ ಕನ್ನಡ ಅಧಿಕಾರಿಗಳು ಕನ್ನಡವನ್ನು ಸರಿಯಾಗಿ ಬಳಸುತ್ತಿಲ್ಲವೋ ಅಥವಾ ಕನ್ನಡೇತರ ಅಧಿಕಾರಿಗಳು ಕನ್ನಡವನ್ನು ಸರಿಯಾಗಿ ಬಳಸದೇ ಇಂಗ್ಲೀಷಿನತ್ತ ಒಲವನ್ನು ತೋರಿಸುತ್ತಿದ್ದಾರೋ ಎಂಬ ಪ್ರಶ್ನೆಗಳು ಕಾಡುತ್ತವೆ. ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮವನ್ನಾಗಿ ಅಧ್ಯಯನ ಮಾಡಿಕೊಂಡು ಬಂದವರನ್ನೂ ಕಾಣುತ್ತೇವೆ. ಇವರಲ್ಲಿಯೂ ಸಹ ಈ ಇಂಗ್ಲೀಷಿನ ವ್ಯಾಮೋಹ ಕಾಡುತ್ತಿರುತ್ತದೆ ಹಾಗೂ ಉನ್ನತ ಅಧಿಕಾರಿಗಳಿಗೆ ಪ್ರತಿಷ್ಠೆಯಾಗಿ ಹಾಗೂ ಹೆಸರು ಪಡೆಯಬೇಕೆಂಬ ಮನೋಸಾಮರ್ಥ್ಯದಿಂದಲೂ ಕನ್ನಡ ಪರಿಪೂರ್ಣವಾಗಿ ಬರುತ್ತಿದ್ದರೂ ಇಂಗ್ಲೀಷಿನಲ್ಲಿ ಮಾತಾಡುವಿಕೆ, ಇಂಗ್ಲೀಷಿನಲ್ಲಿ ಪತ್ರ ಬರೆಯುವಿಕೆ, ಇಂಗ್ಲೀಷಿನಲ್ಲಿ ಕಡತಗಳಲ್ಲಿ ಮಂಡನೆಯಾಗುತ್ತಿರುವುದು ಹಲವಾರು ಉದಾಹರಣೆಗಳಿಂದ ಸಾಬೀತಾಗುತ್ತದೆ.

'ಬಿ' ವೃಂದದ ಅಧಿಕಾರಿಗಳು 'ಎ' ವೃಂದದವರಿಂದ ಶಭಾಷಗಿರಿ ಅಥವಾ ಉತ್ತಮ ಅಥವಾ. ಮಾನ್ಯತೆಯನ್ನು ಗಿಟ್ಟಿಸಿಕೊಳುವ ಕಾರಣದಿಂದಲೂ ಕೆಲವೊಮ್ಮೆ ಇಂಗ್ಲೀಷಿಗೆ ಅಂಟು ಬಿದ್ದಿರುವುದನ್ನು ಚರ್ಚೆ ಹಾಗೂ ಮಾತಿನ ಸಂದರ್ಭದಲ್ಲಿಯೂ ಇಂಗ್ಲೀಷಿನ ಸಂಪೂರ್ಣ ಬಳಕೆಯನ್ನು ಕಾಣುತ್ತೇವೆ ಹಾಗೂ ಕಾಣುತ್ತಿದ್ದೇವೆ.

ಕೆಲವೊಂದು ಸಂದರ್ಭದಲ್ಲಿ ಪೂರ್ಣಪ್ರಮಾಣದ 'ಬಿ' ವೃಂದದ ಅಧಿಕಾರಿಗಳು 'ಎ' ವೃಂದದವರ ಜೊತೆ ಚರ್ಚೆ ಅಥವಾ ಸಭೆ ಅಥವಾ ಮಾತಿನ ಸಂದರ್ಭದಲ್ಲಿ ತಮಗೆ ಪ್ರಭುತ್ವ ಇರದಿರುವ ಭಾಷೆಯಾದ ಇಂಗ್ಲೀಷನ್ನು ಪ್ರತಿಷ್ಠೆಗಾಗಿ ಮಾತಾನಾಡುವ ಸಂದರ್ಭ ಗೋಚರಿಸುತ್ತವೆ. ಅಧಿಕಾರಿಗಳಲ್ಲಿರುವ ಇಂಗ್ಲೀಷ್ ಭಾಷೆಯ ವ್ಯಾಮೋಹ ಅದಕ್ಕೆ ಕಟ್ಟು ಬಿದ್ದ ಅವರ ಜಾಯಮಾನ ಬದಲಾಗಬೇಕಾಗಿದೆ, ಅವರು ಆ ಸಂಕೋಲೆಗಳಿಂದ ಹೊರಬರಬೇಕಾಗಿದೆ ಎನ್ನುವುದು ಸತ್ಯ ಸಂಗತಿ.

ಅಧಿಕಾರಿಗಳ ಮನೋಸಾಮರ್ಥ್ಯ ಬದಲಾಗಬೇಕು ಮತ್ತು ಇಂಗ್ಲೀಷಿನ ಸಂಕೋಲೆಯಿಂದ ಹೊರಬರಬೇಕು ಮತ್ತು ಇಲ್ಲಿನ ಅಧಿಕಾರಿಗಳೇ ಆದ 'ಎ' ಮತ್ತು 'ಬಿ' ವೃಂದಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಇಲ್ಲಿನ ಆಡಳಿತ ಭಾಷೆಯಲ್ಲೇ ವ್ಯವಹಾರ ನೆಡೆಸಬೇಕು ಮತ್ತು ಅದನ್ನೇ ಬಳಕೆ ಮಾಡ ಬೇಕೆನ್ನುವುದು ಜನಜನಿತವಾಗಬೇಕಾಗಿದೆ. ಈ ಬಗ್ಗೆ ಅವರಿಗೆ ಮನವರಿಕೆ ಮಾಡಿ ಕೊಡಬೇಕಾದ ಅಗತ್ಯತೆ ಇದೆ. ಹಾಗಾದರೆ ಅವರಿಗೆ ಆಡಳಿತ ಭಾಷೆ ಬಳಕೆಮಾಡುವ ಬಗ್ಗೆ, ಇಂಗ್ಲೀಷಿನ ವ್ಯಾಮೋಹ ಬಿಡುವ ಬಗ್ಗೆ ಮನವರಿಕೆ ಮಾಡುವುದು ಹೇಗೆಂಬುವ ಪ್ರಶ್ನೆ ಉದ್ಭವಿಸುತ್ತದೆ. ಈ ನಿಟ್ಟಿನಲ್ಲಿ ನೋಡುವುದಾದರೆ ಸೂಕ್ತವಾದ ತರಬೇತಿಗಳ ಅಗತ್ಯವಿದೆ.

ಎಲ್ಲಾ ಅಧಿಕಾರಿಗಳನ್ನು ಒಂದೆಡೆ ಸೇರಿಸಿ ಆಡಳಿತ ಕನ್ನಡದ ಬಗ್ಗೆ ಮನದಟ್ಟು ಮತ್ತು ಅದರ ಬಳಕೆ ಬಗ್ಗೆ ಉತ್ಸಾಹ ತುಂಬುವ ಕಾರ್ಯಗಳು ನಡೆಯಬೇಕಿದೆ. ಇಲ್ಲಿಯೂ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ. ಎ ಮತ್ತು ಬಿ ವೃಂದದ ಅಧಿಕಾರಿಗಳು ಈ ತರಬೇತಿಗಳಿಗೆ ಭಾಗವಹಿಸಬಲ್ಲರೇ? ಭಾಗವಹಿಸಿದರೆ ಎಷ್ಟು ಜನ ಭಾಗವಹಿಸಬಲ್ಲರು? ಭಾಗವಹಿಸುವವರೆಲ್ಲಾ ನಿಜವಾಗಿಯೂ ಆ ತರಬೇತಿಯ ಪ್ರಯೋಜನ ಪಡೆಯಬಲ್ಲರೇ? ಅಥವಾ ಇಲ್ಲವೇ? ಎನ್ನುವ ಉಪಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಉನ್ನತ ಅಧಿಕಾರಿಗಳಾದ ನಾವುಗಳು ಆಡಳಿತ ಕನ್ನಡದ ಬಳಕೆಯ ತರಬೇತಿಗಳಿಗೆ ಹಾಜರಾಗಬೇಕೆ? ಮತ್ತು ಅದನ್ನು ಪಾಲಿಸಬೇಕೆ? ಎನ್ನುವ ಮನೋಭಾವವನ್ನು ಹೊಂದಿದ ಅಧಿಕಾರಿಗಳು ನಮ್ಮಲ್ಲಿ ಇರುವ ಉದಾಹರಣೆಗಳಿವೆ. ಅದೇನೆ ಇರಲಿ ಈ ಹಂತದ ಅಧಿಕಾರಿಗಳಲ್ಲಿ ಬಿಟ್ಟು ಬಿಡದಂತೆ, ಕಡ್ಡಾಯವಾಗಿ ಆಡಳಿತ ಕನ್ನಡದ ಬಳಕೆಯ ಬಗ್ಗೆ ಅರಿವು ಮೂಡಿಸುವ ತರಬೇತಿಗಳು ಹಾಗೂ ಅದಕ್ಕೆ ಸಂಬಂಧಪಟ್ಟಂತೆ ರೂಪುರೇಷೆಗಳು, ಸರಿಯಾದ ಕ್ರಮದಲ್ಲಿ ರೂಪುಗೊಳ್ಳಬೇಕಿದೆ. ಹೀಗೆ ಆದಾಗ ಮಾತ್ರ ಸದರಿ ವಿಷಯದ ಬಗ್ಗೆ ಸ್ವಲ್ಪ ಮಟ್ಟಿಗೆಯಾದರು ಕ್ರಮವಹಿಸಬಹುದಾಗಿದೆ.

ಹೀಗಾಗಿ ಏನೇ ಇರಲಿ ಇಂಗ್ಲೀಷನ್ನು ಮಾಧ್ಯಮವನ್ನಾಗಿ ಅಧ್ಯಯನಮಾಡಿ ಬಂದ 'ಎ' ಮತ್ತು 'ಬಿ' ವೃಂದದಲ್ಲಿನ ಅಧಿಕಾರಿಗಳ ಮನೋವೃತ್ತಿ ಬದಲಾದಾಗ ಮತ್ತು ಪ್ರಸ್ತುತ ಆಡಳಿತಕ್ಕೆ ಸಂಬಂಧಿಸಿದಂತೆ ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಆಡಳಿತದಲ್ಲಿ ಸ್ಪಂದಿಸಿದಾಗ ಮಾತ್ರ ಆಡಳಿತದಲ್ಲಿ ಕನ್ನಡ ಬಳಕೆ ಜಾರಿಗೆ ತರಲು ಸಾಧ್ಯ.

ಅನಂತರದಲ್ಲಿ 'ಸಿ' ವರ್ಗದ ನೌಕರರಲ್ಲಿ ಹೆಚ್ಚಾಗಿ ಕನ್ನಡ ಮಾಧ್ಯಮವನ್ನೆ ಅಧ್ಯಯನದ ಮಾಧ್ಯಮವನ್ನಾಗಿ ಅಭ್ಯಾಸ ಮಾಡಿಕೊಂಡು ಕರ್ತವ್ಯ ನಿರ್ವಹಿಸುತ್ತಿರುವವರು ಹೆಚ್ಚಾಗಿ ಕಾಣಸಿಗುತ್ತಾರೆ.

ಈ ಹಂತದ ನೌಕರರಲ್ಲಿ ಇಂಗ್ಲೀಷ್ ಮಾಧ್ಯಮವನ್ನು ಅಧ್ಯಯನ ಮಾಡಿಕೊಂಡು ಬಂದ ಹಾಗೂ ಕನ್ನಡವನ್ನು ಎರಡನೇ ಅಥವಾ ತೃತೀಯ ಭಾಷೆಯನ್ನಾಗಿ ಅಧ್ಯಯನ ಮಾಡಿಕೊಂಡು ಕರ್ತವ್ಯ ನಿರ್ವಹಿಸುತ್ತಿರುವ ನೌಕರರು ಪ್ರಸ್ತುತ ಆಡಳಿತದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಆದರೆ ಈ ಹಂತದಲ್ಲಿ ಇಂಗ್ಲೀಷಿನ ಬಳಕೆ ಇತ್ತೀಚಿನ ದಿನಮಾನಗಳಲ್ಲಿ ತುಸು ಕಡಿಮೆಯೇ ಎನ್ನಬಹುದು. ಕಾರಣವೇನೆಂದರೆ ಇವರ ಅಧ್ಯಯನದ ಮಾಧ್ಯಮ ಇಂಗ್ಲೀಷಾಗಿದ್ದರೂ ಕನ್ನಡ ಭಾಷೆಯನ್ನು ಜೊತೆಯಲ್ಲಿಯೇ ಅಧ್ಯಯನ ಮಾಡಿರುವುದರಿಂದ ಹಾಗೂ ಕನ್ನಡದ ಪರಿಚಯ ವಿರುವುದರಿಂದ ಆಡಳಿತದಲ್ಲಿ ಕನ್ನಡ ಬಳಕೆ ಸಾಧ್ಯವಾಗುತ್ತದೆ. ಒಂದುವೇಳೆ ಬಳಸಲು ಸಾಧ್ಯವಾಯಿತೆಂದು ಭಾವಿಸಿದಲ್ಲಿ ಪ್ರಭುತ್ವ ಪೂರ್ಣವಾಗಿ, ವ್ಯಾಕರಣ ಬದ್ಧವಾಗಿ ಬಳಸಲು ಸಾಧ್ಯವಿಲ್ಲ. ಒಬ್ಬ ಪ್ರಭುತ್ವ ಪೂರ್ಣ ವ್ಯಕ್ತಿಯ ಆಡಳಿತ ಕನ್ನಡದ ಬಳಕೆಗೂ ಪ್ರಭುತ್ವ ಇರದೇ ಇರುವವರು ಬಳಸುವ ಆಡಳಿತ ಕನ್ನಡದ ಬಳಕೆಗೂ ಭಿನ್ನವಾಗಿರುತ್ತದೆ.

ಇಂಗ್ಲೀಷ್ ಮಾಧ್ಯಮವನ್ನಾಗಿ ಅಧ್ಯಯನ ಮಾಡಿದ ನೌಕರರು ಕನ್ನಡವನ್ನು ಸ್ಪಷ್ಟವಾಗಿ ಬಳಸುತ್ತಿರುವುದು, ಕನ್ನಡ ಮಾಧ್ಯಮದ ನೌಕರರು ಇಂಗ್ಲೀಷನ್ನು ಬಳಸುತ್ತಿರುವುದು ಹಾಗೂ ಬಳಸದೇ ಇರುವ ಸಾಕಷ್ಟು ಉದಾಹರಣೆಗಳಿವೆ. ಹೀಗಿರುವ ನಿಟಿನಲ್ಲಿ ಇವರಿಗೂ ಸಹ ಮನೋಸಾಮಾರ್ಥ್ಯ ಹೆಚ್ಚಿಸುವ ತರಬೇತಿಗಳು ಅಗತ್ಯ ಎಂಬುದು ಕಂಡುಬರುತ್ತದೆ.

'ಡಿ' ವೃಂದದ ನೌಕರರ ಪಾತ್ರವೇ ಇಲ್ಲಿ ಉದ್ಭವಿಸುವುದಿಲ್ಲ ಅವರು ಬರೆಯುವ ರಜೆಯ ಪತ್ರಗಳು, ವೈದ್ಯಕೀಯ ವೆಚ್ಚ ಮರುಪಾವತಿ, ಸಾಲ ಬೇಡಿಕೆ ಪತ್ರಗಳೇ ಇವುಗಳನ್ನೂ ಸಹ ಬೇರೆಯವರ ಸಹಕಾರದಿಂದ ಅಥವಾ ತಮಗೆ ತಿಳಿದ ಮಟ್ಟಿಗೆ ಪತ್ರಗಳನ್ನು ಬರೆಯುವ ನಿದರ್ಶನಗಳು ಕಂಡುಬರುತ್ತವೆ. ಹೀಗಾಗಿ ಇವರ ಬಳಕೆ ಅಥವಾ ಇವರ ಸಹಾಯ ಪಡೆದುಕೊಂಡವರ ಬಳಕೆಯಲ್ಲಿ ನಾವು ಇಂಗ್ಲೀಷನ್ನು ಕಾಣುತ್ತೇವೆ. ಇಲ್ಲಿ ಇಂಗ್ಲೀಷ್ ಮಾಧ್ಯಮದ ಅವಶ್ಯಕತೆ ಇಲ್ಲ ಆದರೂ ಬರೆಯವವರ ದೃಷ್ಟಿಕೋನ ಇಂಗ್ಲೀಷ್ ಪದಗಳ ಬಳಕೆ ಸೇರಿರುತ್ತದೆ.

ಉದಾ:- ೧. ಮೆಡಿಕಲ್‌ಬಿಲ್ ಪಾವತಿಸಲು ಕೋರಿ

೨. ಕಮಿಟೆಡ್‌ಲಿವ್ ನೀಡುವ ಕುರಿತು

೩. ಸರಂಡರ್‌ಲಿವ್ ಮಾಡಿಕೊಡುವ ಕುರಿತು.

೪. ಮಗನ ವಿದ್ಯಾಭ್ಯಾಸಕ್ಕೆ ಲೋನ್ ನೀಡುವ ಕುರಿತು.

೫. G.P.F. ಲೋನ್ ನೀಡುವ ಕುರಿತು.

೬. K.G.I.D. ಲೋನ್ ನೀಡುವ ಕುರಿತು

೭. ಸ್ಯಾಲರಿ ಸ್ಲಿಪ್ ನೀಡುವ ಕುರಿತು.

೮. ಪೇಮೆಂಟ್‌ನಲ್ಲಿ ಲೋನ್ ನೀಡುವ ಬಗ್ಗೆ.

೯. ನನ್ನಗೆ ಪೆಂಚನ್ ಬಾರದಿರುವ ಬಗ್ಗೆ.

ಈ ರೀತಿಯಾಗಿ ಹಲವಾರು ಪತ್ರಗಳನ್ನು 'ಡಿ' ದರ್ಜೆಯ ನೌಕರರು ಕಚೇರಿಯ ಆಡಳಿತಕ್ಕೆ ನೀಡಿದ ಉದಾಹರಣೆಗಳು ಸಾಕಷ್ಟಿವೆ. ಆದರೆ ಇಲ್ಲಿಯೂ ಗೊತ್ತು ಗೊತ್ತಿದ್ದು ಇಂಗ್ಲೀಷಿನ ಬಳಕೆ ಸಂಪೂರ್ಣವಾಗಿ ಅಲ್ಲದೇ ಭಾಗಶಃ ಆಗಿರುವುದು ಮತ್ತು ಆಗುತ್ತಿರುವುದು ಕಂಡುಬರುತ್ತದೆ. ಆದರೆ ಇವುಗಳನ್ನು ತಿದ್ದುವ ಮತ್ತು ಸರಿಪಡಿಸುವ ವ್ಯವಸ್ಥೆಯನ್ನು ಮಾಡಬೇಕಾದದ್ದು ಕರ್ತವ್ಯವೆಂದು ತಿಳಿದು ಆ ತಪ್ಪುಗಳನ್ನು ಸರಿಪಡಿಸಿಕೊಡುವ ನಿಟ್ಟಿನಲ್ಲಿ ಇವರ ಮನೋಸಾಮರ್ಥ್ಯ ಬೆಳೆಯಬೇಕಾಗಿದೆ.

ಕೆಲವೊಂದು ಇಂಗ್ಲೀಷ್ ಬಳಕೆಯ ಪದ ನೋಡಿದಾಗ:

ಕ್ರಸಂ	ಎ ವೃಂದದ ಬಳಕೆ	ಎ ಮತ್ತು ಬಿ ವೃಂದದ ಬಳಕೆ	ಸಿ ವೃಂದದ ಬಳಕೆ	ಸಿ.ವೃಂದದ ಬಳಕೆ ಅಧಿಕಾರಿಗಳಿಂದ ಕಡತ ಬಂದ ನಂತರದಲ್ಲಿ.
01	Put Up	Put Up	For Kind	For kind Approval
02	Put Up File	Put up File	For nessory action	For nessory action
03	Verify,	Verify	Verifyed,....	For kind approval
04	Discuss,	Discuss/ed	Discussed.....	For kind approval reply letter
05	Grant	Grant	Grant for	Approval -
06	For spot , inspection	For spot inspection	For spot inspection	File put For spot inspection
07	Relies Budget,	Relies Budget	Relies Budget..	Relies Budget for Approval
08	Enquiry	Enquiry	Enquiry	File put up Enquiry
09	Yes, Agreed ,		submitting the Report for approval	
10	Give permission	Give permission	Give permission	-
11	Final Order	Final Order	Draft Final Order for kind approval	Order for kind approval
12	Take Necessary any Action			
13	Ok proceed	Ok proceed	-	-

ಈ ಮೇಲಿನ ಇಂಗ್ಲೀಷ್ ಪದಗಳ ಬಳಕೆಯನ್ನು ನಾವು ಸಹಜವಾಗಿ ಕಡತದಲ್ಲಿ ಪತ್ರಗಳ ಮೇಲೆ, ಟಿಪ್ಪಣಿಗಳ ಮಾದರಿಯಲ್ಲಿ, ವಿಶೇಷ ಪತ್ರಗಳ ಮೇಲೆ ಕಾಣುತ್ತೇವೆ. ಅಲ್ಲದೇ ಅವುಗಳ ಬಗ್ಗೆ ತುರ್ತಾಗಿ ಕಾರ್ಯನಿರ್ವಹಿಸುವುದನ್ನು ಕಾಣುತ್ತೇವೆ. ಹೀಗಾಗಿ ಇಂಗ್ಲೀಷ್ ಮಾಧ್ಯಮ ಪ್ರಭಾವ ಆಡಳಿತದಲ್ಲಿ ಕನ್ನಡ ಬಳಕೆಗೆ ಹಿಂದೇಟನ್ನು ಹಾಕುತ್ತಿದೆ ಎನ್ನುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಮಾಧ್ಯಮ ಯಾವುದೇ ಇರಲಿ ಕನ್ನಡ ಬಳಕೆಯ ಬಗ್ಗೆ ಒಲವನ್ನು ತೋರಬೇಕಾದ್ದು ನಮ್ಮ ಕರ್ತವ್ಯ ಹಾಗೂ ವೃತ್ತಿ ಧರ್ಮವಾಗಿದೆ.

೩.೪.೬. ತರಬೇತಿಗಳು

ಸರ್ಕಾರವು ರೂಪಿತ ಯೋಜನೆಗಳು ಮತ್ತು ನೀತಿನಿಯಮಗಳು ಒಂದೆಡೆಯಾದರೆ ಆಡಳಿತದಲ್ಲಿ ಕನ್ನಡದ ಅನುಷ್ಠಾನಕ್ಕಾಗಿ ನೇರವಾಗಿ ಆಡಳಿತ ವರ್ಗವನ್ನೇ ಕೇಂದ್ರೀಕೃತರನ್ನಾಗಿಸಿ ಅವರಿಗೆ ತರಬೇತಿ ನೀಡುವ ಕಾರ್ಯಕ್ರಮಗಳು ಇನ್ನೊಂದೆಡೆ.

ಕನ್ನಡ ಆಡಳಿತ ಭಾಷೆಯಾಗಿ ಸುಮಾರು ೬ ದಶಕಗಳೇ ಕಳೆದರೂ ಇಂದಿಗೂ ಆಡಳಿತ+ಕನ್ನಡದ ತರಬೇತಿಗಳು ನೌಕರರಿಗೆ ಬೇಕೆ? ಎಂಬ ಪ್ರಶ್ನೆಗಳು ಒಂದೆಡೆ ಉದ್ಭವಿಸಿವೆ. ಸರ್ಕಾರದ ರೂಪಿತ ನೀತಿನಿಯಮಗಳು ಅನುಷ್ಠಾನದಲ್ಲಿ ವಿಫಲತೆಯನ್ನು ಹೊಂದುವ ಹಿನ್ನೆಲೆಯಲ್ಲಿ ನೇರವಾಗಿ ಸಿಬ್ಬಂದಿಯವರನ್ನು ಮತ್ತು ಅಧಿಕಾರಿ ವರ್ಗದವರನ್ನು ಬಳಸಿಕೊಳ್ಳವುದರ ಮೂಲಕ ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಪ್ರಯತ್ನ ಮಾಡಬಹುದೆಂಬ ಸರ್ಕಾರದ ನಿಲುವು. ಈ ನಿಟ್ಟನಲ್ಲಿ ಸರ್ಕಾರವು ಆಡಳಿತ ಕನ್ನಡದ ತರಬೇತಿಗಳನ್ನು ನಿಡುವುದರ ಮೂಲಕ ಹೊಸದೊಂದು ಯೋಜನೆಗೆ ಚಾಲನೆ ನೀಡಿತು.

ಈ ತರಬೇತಿ ನೀಡುವ ಕಾರ್ಯಕ್ರಮಗಳು ಯಶಸ್ವಿ ಪೂರ್ಣವಾಯಿತೆ ಎಂಬ ಪ್ರಶ್ನೆಗಳು ಮೂಡುವುದು ಸಹಜ. ಆದರೆ ಸರ್ಕಾರವು ತೆಗೆದುಕೊಂಡು ಬಂದ ಹೊಸ ಮಾದರಿಯ ಆಡಳಿತ ಕನ್ನಡದ ತರಬೇತಿಗಳು ಎಷ್ಟರ ಮಟ್ಟಿಗೆ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಬಲ್ಲವು ಅಥವಾ ನಿರ್ವಹಿಸಿವೆಯೇ ಎಂಬ ಮಾತುಗಳು ಕೇಳಿಬರುತ್ತವೆ. ಇನ್ನೊಂದೆಡೆ ಸರ್ಕಾರದ ಯೋಜನೆಗಳೇ ಹೀಗೆ ಎಂಬ ಮಾತುಗಳು ಕೇಳಿ ಬರುತ್ತವೆ. ಅದೇನೇ ಇರಲಿ ಸರ್ಕಾರವು ರೂಪಿತ ಯೋಜನೆಗಳ ಹಿಂದೆ ಒಂದು ಉದ್ದೇಶವಿರುವುದು ಖಂಡಿತ. ಆದರೇ ಆ ಉದ್ದೇಶದ ಈಡೆರಿಕೆಗಾಗಿ ಅದರ ಸಫಲತೆಗಾಗಿ ಯೋಜನೆಗಳು, ತರಬೇತಿಗಳು, ಯಶ್ವಸಿಯಾಗಿ ಕಾರ್ಯನಿರ್ವಹಿಸಿ ಫಲಿತವನ್ನು ಕೊಟ್ಟಾಗ ಮಾತ್ರ ಯೋಜನೆಗಳು ಸಾರ್ಥಕತೆಯನ್ನು ಪಡೆದುಕೊಳ್ಳತ್ತವೆ.

ಹೀಗಾಗಿ ಆಡಳಿತ ಕನ್ನಡವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಸರ್ಕಾರವು ರೂಪಿತ ಯೋಜನೆಯಾದ ಸಿಬ್ಬಂದಿ ವರ್ಗದವರಿಗೆ ಮತ್ತು ಅಧಿಕಾರಿಗಳ ವರ್ಗದವರಿಗೆ ಆಡಳಿತ ಕನ್ನಡದ ತರಬೇತಿಯ ನೀಡಿಕೆ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಕೇಂದ್ರಬಿಂದುವಾಗಿಟ್ಟುಕೊಂಡು ರೂಪಿತಗೊಂಡ ಈ ತರಬೇತಿಯು ಉತ್ತಮ ಪ್ರತಿಕ್ರಿಯೆಗಳು ಬಂದಿದ್ದನ್ನು ಕಾಣುತ್ತೇವೆ. ಆದರೆ ಆಡಳಿತ ಕನ್ನಡದ ಬಗ್ಗೆ ತರಬೇತಿಯ ಕೊಡಿಗೆ ಮಾತ್ರ ಸಿಮೀತವಾದ ಈ ತರಬೇತಿಗಳು ಪ್ರಾಯೋಗಿಕವಾಗಿ ತನ್ನ ಕಾರ್ಯವನ್ನು ನಿಭಾಯಿಸುವಲ್ಲಿ ವಿಫಲವಾಯಿತು ಎಂದು ಹೇಳಿದರೆ ತಪ್ಪಾಗಲಾರದು.

ಆಡಳಿತ ಕನ್ನಡದ ಬಗ್ಗೆ ನೀಡಲಾಗುವ ವಿವಿಧ ತರಬೇತಿಗಳ ರೂಪರೇಷೆಗಳು ಉತ್ತಮವಾಗಿ ಮಾಡಿದರೂ ಅವುಗಳನ್ನು ಆಗಿನ ಸಂದರ್ಭದಲ್ಲಿ ಉತ್ತಮವಾಗಿ ಪ್ರತಿಕ್ರಿಯಿಸಿ ತರಬೇತಿಗಳು ಯಶಸ್ವಿಪೂರ್ಣವಾಗಿ ನಡೆದಿರುತ್ತವೆ. ಆದರೆ ತರಬೇತಿದಾರರಿಂದ ಆ ಕ್ಷಣಕ್ಕೆ ನೀಡಲಾದ ಉಪನ್ಯಾಸವನ್ನು ಆಲಿಸಿ ಅದಕ್ಕೆ ಚರ್ಚಿಸಿ ವಿಚಾರ ವಿನಿಮಯಗಳನ್ನು ಮಾಡಿ ಪ್ರತಿಕ್ರಿಯಿಸುತ್ತಾರೆ.

ಆದರೆ ಅದು ಅಲ್ಲಿಗೆ ಸೀಮಿತವಾಗಿ ಬಿಡುತ್ತದೆ. ಒಂದು ತರಬೇತಿಯ ಹಿಂದೆ ಅದರದ್ದೇ ಆದ ಉದ್ದೇಶದ ಈಡೇರಿಕೆಗಾಗಿ ತರಬೇತಿಗಳನ್ನು ಆಯೋಜನೆಯನ್ನು ಮಾಡಲಾಗಿರುತ್ತದೆ. ಆದರೆ ಇಲ್ಲಿ ಆಡಳಿತ ಕನ್ನಡದ ವಿಚಾರದಲ್ಲಿ ತರಬೇತಿಗಳ ಉದ್ದೇಶವೇ ಬೇರೆಯಾಗಿತು. ಕಾರಣವೇನೆಂದರೆ, ತರಬೇತಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ ಸಿಬ್ಬಂದಿ ಮತ್ತು ನೌಕರರು ತರಬೇತಿ ಪಡೆದ ನಂತರ ತರಬೇತಿಯಲ್ಲಿನ ಉದ್ದೇಶಗಳನ್ನು ತಮ್ಮ ಕಚೇರಿಯಲ್ಲಿ ಅಥವಾ ಆಡಳಿತದಲ್ಲಿ ಅಳವಡಿಸಿ ತರಬೇತಿಗಳ ಉದ್ದೇಶಗಳ ಈಡೇರಿಕೆಯಾದದ್ದನ್ನು ನಾವು ಕಾಣುವುದಿಲ್ಲ. ಕಂಡದ್ದೇ ಆದರೆ ಅದು ತುಂಬಾ ವಿರಳ ಎಂಬುದು ಸತ್ಯ.

ಸರ್ಕಾರವು ರೂಪಿತ ತರಬೇತಿಗಳ ಯೋಜನೆಗಳ ರೂಪುರೇಷಗಳನ್ನು ಸಿದ್ಧಪಡಿಸಿ ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲವಾಗುತ್ತಿರವುದು ದುರಂತದ ಸಂಗತಿ. ರೂಪಿತ ಯೋಜನೆಗಳ ತರಬೇತಿಗಳು ಸರಿಯಾಗಿ ರೂಪಿತವಾಗಿವೆಯೇ? ಒಂದುವೇಳೆ ಸರಿಯಾಗಿ ರೂಪಿತವಾಗಿದ್ದಲ್ಲಿ ಅವುಗಳು ಅನುಷ್ಠಾನಗೊಳ್ಳುವಲ್ಲಿ ಯಾಕೆ ವಿಫಲವಾಗುತ್ತಿವೆ. ಇಲ್ಲಿ ಉದ್ಭವಿಸುವ ಪ್ರಶ್ನೆ ಮತ್ತು ಸಮಸ್ಯೆಗಳು ಬೇರೆ. ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ಮಧ್ಯದಲ್ಲಿರುವ ಅವರವರ ಮಾನಸಿಕ ವಿಚಾರಗಳು ಹಾಗೂ ಮಾನಸಿಕ ಸ್ವಯಂ ಕಾರ್ಯಬಾರದ ಒತ್ತಡ. ಅತಿಯಾದ ಹಾಗೂ ಅವಿರತ ಕಾರ್ಯ ಅಥವಾ ನಿಯಮಿತದ ಕಾರ್ಯಕ್ಕಿಂತ ಹೆಚ್ಚಿಗೆ ಕೆಲಸವಿರುವುದು ಈಗಿನ ಸಂದರ್ಭದಲ್ಲಿ ಕಂಡುಬರುತ್ತದೆ. ಇವೆಲ್ಲವುಗಳ ಮಧ್ಯದಲ್ಲಿ ಈ ಆಡಳಿತ ಕನ್ನಡ ಅನುಷ್ಠಾನದ ಕಲ್ಪನೆಯೇ ಅವರಲ್ಲಿ ಮನೆಮಾಡಿರುವುದಿಲ್ಲ ವೆಂಬುದು ಸತ್ಯ. ಈ ನಿಟ್ಟಿನಲ್ಲಿ ಯೋಚಿಸುವುದಾದರೆ ಮೊದಲನೆಯಾದಾಗಿ ಅಧಿಕಾರಿಗಳ ವರ್ಗ ಮತ್ತು ಸಿಬ್ಬಂದಿವರ್ಗದವರು ಕಟ್ಟು ನಿಟ್ಟಾಗಿ ಕನ್ನಡವನ್ನು ಜಾರಿಗೆ ತರುವಲ್ಲಿ ಕ್ರಮವಹಿಸಬೇಕು.

ಈಗಾಗಲೇ ಹಲವಾರು ಕಟ್ಟು ನಿಟ್ಟಿನ ಕ್ರಮಗಳು ಜಾರಿಗೆ ಬಂದಿದ್ದರೂ ಅವುಗಳ ಬಗ್ಗೆ ಯಾರಿಗೂ ಬಿಸಿಮುಟ್ಟದಿರುವುದು ಹಾಗೂ ಇದಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳದೆ ಇರುವುದು ಎಲ್ಲಿಯೂ ಕಂಡುಬರುವುದಿಲ್ಲ. ಸಿಬ್ಬಂದಿ ವರ್ಗದವರು ಮತ್ತು ಅಧಿಕಾರಿ ವರ್ಗದವರು ತಮಗೆ ಅಗತ್ಯವೆನಿಸಿದ ಕಾರ್ಯಗಳನ್ನು ಮತ್ತು ವಿಷಯಗಳನ್ನು ಅನುಷ್ಠಾನಗೊಳಿಸುವಲ್ಲಿ ಯಾವ ರೀತಿಯಲ್ಲಿ ಆಸಕ್ತಿ, ಮುತುವರ್ಜಿ, ಜವಾಬ್ದಾರಿ ಹಾಗೂ ಕಳಕಳಿಯನ್ನು ತೋರಿಸುತ್ತಾರೊ ಅದೇ ರೀತಿಯಲ್ಲಿ ಆಡಳಿತದ ಒಂದು ಭಾಗವಾದ ಆಡಳಿತ ಕನ್ನಡದ ಅನುಷ್ಠಾನ ಮಾಡುವಲ್ಲಿಯೂ ತಮ್ಮ ಆಸಕ್ತಿಯನ್ನು ತೋರಿಸಬೇಕೆಂಬುದು ನಮ್ಮ ವಾದ. ಅಲ್ಲದೇ ಸಿಬ್ಬಂದಿ ವರ್ಗದವರು ತಮಗೆ ಅಗತ್ಯ ಮತ್ತು ಅನಿವಾರ್ಯ ಹಾಗೂ ಮೇಲಿನಿಂದ ಒತ್ತಡ ಬಂದ ಕಡತಗಳನ್ನು ಮತ್ತು ತಮ್ಮ ಹಿತಾಸಕ್ತಿಗಳನ್ನೊಳಗೊಂಡ ಕಡತಗಳನ್ನು ಯಾವ ರೀತಿಯಲ್ಲಿ ಆಸಕ್ತಿ ವಹಿಸಿ ಕಾರ್ಯ ನಿರ್ವಹಿಸುತ್ತಾರೆ ಅದೇ ರೀತಿಯಲ್ಲಿ ಆಸಕ್ತಿವಹಿಸಿ ಮತ್ತು ಆಸಕ್ತಿಯನ್ನು ತೋರಿಸಿ ಆಡಳಿತದಲ್ಲಿ ಕನ್ನಡದ ಅನುಷ್ಠಾನಕ್ಕೆ ಕಂಕಣ ತೊಡಬೇಕು.

"ಅಯ್ಯೋ! ಇದಕ್ಕೆಲ್ಲಾ ಎಲ್ಲಿ ಸಮಯ ಇದೆ, ನಮ್ಮ ಕೆಲಸನೇ ಹೆಚ್ಚು. ಒಬ್ಬಬ್ಬರು ನಾಲ್ಕು ಕೆಲಸಗಳನ್ನು ಮಾಡುತ್ತಿದ್ದೇವೆ ಅಂತಹದರಲ್ಲಿ ಆಡಳಿತ ಕನ್ನಡದ ಜಾರಿ ಮತ್ತು ಬಳಕೆ ದೂರದ ಮಾತಾಗಿದೆ" ಎಂದು ಹೇಳಿ ಸಿಬ್ಬಂದಿವರ್ಗದವರು ಉದಾಹರಿಸಿದ ಸನ್ನಿವೇಶಗಳುಂಟು. ಮೂಲತಹಃವಾಗಿ ವಿಶ್ಲೇಷಿಸುವುದಾದರೆ ಆಡಳಿತ ಕನ್ನಡಕ್ಕೆ ಸಮಸ್ಯೆ ಮತ್ತು ಸವಾಲಾಗಿ ಪರಿಣಾಮಿಸಿದೆ ಎಂದರೆ ತಪ್ಪಾಗ್ಲಲಾರದು. ನೌಕರರು ಮತ್ತು ಆಡಳಿತಾಧಿಕಾರಿಗಳು ತಮ್ಮನ್ನು ತಾವು ಸ್ವ-ಅವಲೋಕನ ಮಾಡಿಕೊಳ್ಳುವ ಪರಿಸ್ಥಿತಿ ಬರಬೇಕು. ಅವರ ಮನದಲ್ಲಿ ಆಡಳಿತ ಕನ್ನಡದ ಬಳಕೆ ಉಂಟಾಗಬೇಕೇ ಹೊರತು ನಾಲಿಗೆಗೆ ಹೆಚ್ಚಿಕೊಳ್ಳುವ ಉಪ್ಪಿನ ಕಾಯಿ ಆಗಬಾರದು. ಈ ಹಿನ್ನೆಲೆಯಲ್ಲಿ ನೌಕರರು ಅಧಿಕಾರಿಗಳು ಆಡಳಿತದಲ್ಲಿ ಬೇರೆ ವಿಷಯಕ್ಕೆ ಕೊಟ್ಟ ಮಹತ್ವವನ್ನು ಆಡಳಿತ ಕನ್ನಡವನ್ನು ಜಾರಿಗೆ ತರವಲ್ಲಿ ಅಳಲು ಸೇವೆ ನೀಡಬೇಕೆಂಬುದು ಆಶಯ.

ಹೀಗಾಗಿ ಸರ್ಕಾರ ರೂಪಿತ ಆಡಳಿತ ಕನ್ನಡದ ಜಾರಿಗೆ ತರವಲ್ಲಿನ ಯೋಜನೆಗಳು ಎಲ್ಲಾ ತರಹದ ಸಂದರ್ಭದಲ್ಲಿಯೂ ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಸಹಕಾರಿಯಾಗುವಂತಹ ನೀತಿಗಳನ್ನು ಜಾರಿಗೆ ತರಬೇಕಾಗುತ್ತದೆ. ಈ ಹಿಂದೆ ಜಾರಿಗೆ ತರಲಾದ ನೀತಿಗಳ ಏಳು-ಬೀಳುಗಳನ್ನು ಮನದಲ್ಲಿಟ್ಟಿಕೊಂಡು ಪರಿಶೀಲಿಸಿ ಪರಾಮರ್ಶಿಸಿ ಸದೃಢವಾದ ಮತ್ತು ಸಹಕಾರಿಯಾದ ನೀತಿನಿಯಮಗಳು ರೂಪಗೊಳ್ಳಬೇಕು. ಅಲ್ಲದೆ ಸರಳಕ್ಕೆ ಸರಳವಾಗಿಯೂ ಅಲ್ಲದೇ ಎಲ್ಲರೂ ಸ್ವೀಕರಿಸುವಂತಾಗಿ ನೆಲೆಗೊಂಡಿರಬೇಕು ಮತ್ತು ಅವುಗಳ ಅನುಷ್ಠಾನಕ್ಕೆ ಕಟ್ಟುನಿಟ್ಟಾಗಿ ಕ್ರಮವಹಿಸಬೇಕು. ಈ ರೂಪಿತ ನೀತಿನಿಯಮಗಳ ಅನುಷ್ಠಾನವೇ ಒಂದು ಸಮಸ್ಯೆಯಾಗಿರುವ ಹಿನ್ನೆಲೆಯಲ್ಲಿ ಯೋಜನೆಗಳ ಮತ್ತು ನೀತಿನಿಯಮಗಳಿಗೆ ಅಗತ್ಯವಾದ ಬದಲಾವಣೆಗಳನ್ನು ತರಬೇಕಾಗಿದೆ. ಆಡಳಿತ ಪರ ಮತ್ತು ಆಡಳಿತದಲ್ಲಿ ಅವುಗಳನ್ನು ಅನುಷ್ಠಾನಕ್ಕೆ ತರವಲ್ಲಿನ ಜನಪರ ನೀತಿಗಳು ರೂಪುಗೊಳ್ಳಬೇಕೆಂಬುದಾಗಿದೆ.

ಆಡಳಿತ ಕನ್ನಡದ ತರಬೇತಿಗೆ ಹಾಜರಾದ ಮತ್ತು ತರಬೇತಿಯನ್ನು ಪಡೆಯಲಾದ ಅಧಿಕಾರಿ ಮತ್ತು ನೌಕರರ ಸಂಖ್ಯೆಯನ್ನು ನೋಡಲಾದಾಗ ಅದು ಆಡಳಿತದಲ್ಲಿನ ವ್ಯಾಪ್ತಿಗೆ ತೀರ ಚಿಕ್ಕ ಪ್ರಮಾಣದ್ದಾಗಿರುತ್ತದೆ. ಇಷ್ಟೆ ಜನಕ್ಕೆ ಆಡಳಿತ ಕನ್ನಡದ ತರಬೇತಿ ಸಾಕಾಗುತ್ತದೆಯೇ? ವಿಶಾಲವಾದ ಆಡಳಿತ ವ್ಯಾಪ್ತಿಯಲ್ಲಿ ಎಲ್ಲೊ ಒಂದು ಮೂಲೆಯಲ್ಲಿ ತರಬೇತಿ ನೀಡಿದಂತಾಗುತ್ತದೆ. ಅದು 'ಸಮುದ್ರಕ್ಕೆ ಬಿದ್ದ ಹನಿಯಂತೆ' ಎಂಬ ರೀತಿಯಲ್ಲಿ ವಿವರಿಸಬಹುದು ಅದರಲ್ಲೂ ತರಬೇತಿ ಪಡೆದವರ ವ್ಯವಸ್ಥೆಯನ್ನು ನೋಡಿದರೂ ಇದು ಸಹ ಪಿರಮಿಡ್ಡಿನ ಆಕಾರದಲ್ಲಿ ಗೋಚರಿಸುತ್ತದೆ.

ಅಂದರೆ 'ಎ' ವೃಂದದ ಅಧಿಕಾರಿಗಳು ತರಬೇತಿಗಳಲ್ಲಿ ಭಾಗವಹಿಸುವುದು ಕಡಿಮೆ ಅವರ ಕೆಳಹಂತದ 'ಬಿ' ವೃಂದದ ಅಧಿಕಾರಿಗಳನ್ನು ತರಬೇತಿಗಳಲ್ಲಿ ಹಾಜರಾಗಲು ನೇಮಕಮಾಡಿರುತ್ತಾರೆ.

ಹೀಗಿರುವಾಗ 'ಎ' ವೃಂದದ ಅಧಿಕಾರಿಗಳ ೨ ದಿನ ಅಥವಾ ೩ ದಿನ ತರಬೇತಿ ಪಡೆದ 'ಬಿ' ವೃಂದದವರು 'ಎ' ವೃಂದದ ಅಧಿಕಾರಿಗಳಿಗೆ ಅರ್ಧತಾಸಿನಲ್ಲಿ ವಿವರಣೆ ನೀಡಿದಲ್ಲಿ ಸಾಕಾಗುವುದೇ, ಇದರಿಂದ ಆಡಳಿತ ಕನ್ನಡದ ಅನುಷ್ಠಾನವಂತೂ ಬಳಸದೆ ಸಾಧ್ಯವೇ ಎನ್ನುವ ಸಮಸ್ಯೆಯೂ

ಉದ್ಭವಿಸುತ್ತದೆ. ರೂಪಿತ ತರಬೇತಿಗಳು ಮತ್ತು ಅದರಿಂದ ರಚಿತವಾಗುವ ರೂಪುರೇಷೆಗಳ ದ್ವಂದ್ವಗಳಿಲ್ಲದಂತೆ ಅನುಷ್ಠಾನಗೊಳಿಸಿದಲ್ಲಿ ಸಮಸ್ಯೆಗಳಾಗದಂತೆ ತಡೆಗಟ್ಟಬಹುದು.

೩.೫. ಆಡಳಿತ ಕನ್ನಡ ಬಳಕೆಯಲ್ಲಿನ ಬಾಹ್ಯ ಸಮಸ್ಯೆಗಳು

ಇವು ಹೊರಗಿನ ಸಮಸ್ಯೆಗಳಾಗಿದ್ದು ಪ್ರತ್ಯಕ್ಷವಾಗಿ ಅಲ್ಲದೇ ಪರೋಕ್ಷವಾಗಿ ಆಡಳಿತದಲ್ಲಿ ಜಾರಿಗೆ ತರುವಲ್ಲಿ ಸಮಸ್ಯೆಗಳಾಗಿವೆ ಎಂಬುದು ಸತ್ಯ. ಅವುಗಳೆಂದರೆ

೧. ಉನ್ನತ ಶಿಕ್ಷಣದಲ್ಲಿ ಪ್ರಾದೇಶಿಕ ಭಾಷೆಗೆ ಮಾನ್ಯತೆ ಇಲ್ಲದಿರುವುದು.

೨. ಶಿಕ್ಷಣದಲ್ಲಿ ಪೋಷಕರು ಇಂಗ್ಲೀಷ್ ಭಾಷೆಯ ಬೆನ್ನು ಹತ್ತಿರುವುದು.

೩. ಅಧಿಕಾರಿಗಳಿಗೆ ಮತ್ತು ನೌಕರರಿಗೆ ನಡೆಸುವ ಕನ್ನಡ ಪರೀಕ್ಷೆಗಳು.

೪. ಕನ್ನಡದ ಅಂಕಿಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುವುದು.

೩.೫.೧. ಉನ್ನತ ಶಿಕ್ಷಣದಲ್ಲಿ ಪ್ರಾದೇಶಿಕ ಭಾಷೆಗೆ ಮಾನ್ಯತೆ ಇಲ್ಲದಿರುವುದು.

ಶಿಕ್ಷಣವೆಂಬುದು ಒಬ್ಬ ವಿದ್ಯಾರ್ಥಿಯ ಸರ್ವಾಂಗೀಣ ಪ್ರಗತಿ ಎಂದರ್ಥ. ಆದರೆ ಪ್ರಸ್ತುತ ಸಂದರ್ಭದಲ್ಲಿ ನಾವು ನೋಡಿದರೆ ಕೆಳಮಟ್ಟದಲ್ಲಿ ಕನ್ನಡ ಬಳಕೆಯಾದಷ್ಟು ಮೇಲಿನ ಹಂತದ ಶಿಕ್ಷಣಕ್ಕೆ ಹೊದಂತೆಲ್ಲ ಕಡಿಮೆಯಾಗುತ್ತಿರುವುದನ್ನು ಕಾಣುತ್ತೇವೆ. ಇದಕ್ಕೆ ನಮ್ಮ ಈ ವ್ಯವಸ್ಥೆಯೇ ಕಾರಣ ಎನ್ನಬಹುದು. ಹಾಗೂ ಉನ್ನತ ಶಿಕ್ಷಣವು ಇಂಗ್ಲೀಷ್‌ನಲ್ಲೆ ಆಗಬೇಕೆಂಬ ಕೆಲವರ ಪಟ್ಟು. ಉನ್ನತ ಶಿಕ್ಷಣದ ಪಠ್ಯಗಳು ಕನ್ನಡದಲ್ಲಿ ತಯಾರಿಸಲು ಸಾಧ್ಯವಿಲ್ಲ. ತಯಾರಿಸಿದರೂ ಅದರ ಫಲಿತಗಳು ಸರಿಯಾಗಿ ಬರುವುದಿಲ್ಲ ಎಂಬುದು ಶಿಕ್ಷಣ ತಜ್ಞರ ವಾದವಾಗಿದೆ. ಈ ನಿಟ್ಟಿನಲ್ಲಿ ಯೋಚಿಸುವುದಾದರೆ ಪ್ರತಿಯೊಂದು ಹಂತದಲ್ಲಿ ಉನ್ನತ ಶಿಕ್ಷಣವು ತನ್ನದೇ ಆದ ರೀತಿಯಲ್ಲಿ ಬೆಳೆದು ನಿಂತಿದೆ. ಉನ್ನತ ಶಿಕ್ಷಣ ಇಂಗ್ಲೀಷ್‌ನಲ್ಲಿರುವುದು ಸತ್ಯ ಸಂಗತಿ.

ಉದಾಹರಣೆಗೆ: ಇಂಜನಿಯರಿಂಗ್, ವೈದ್ಯಕೀಯ, ತಾಂತ್ರಿಕ ಶಿಕ್ಷಣ ಇತ್ಯಾದಿಗಳು.

ಇದಕ್ಕೆ ಕಾರಣ ಮತ್ತು ಸಮಸ್ಯೆಗಳನ್ನು ಹುಡಿಕಿದಾಗ ವಿಷಯಾಂತರವಾಗುವ ಸಾಧ್ಯತೆಗಳು ಕಂಡುಬರುತ್ತವೆ. ಆದರೆ ಆಡಳಿತ ಕನ್ನಡದ ಬಳಕೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಈ ಕ್ಷೇತ್ರಗಳಲ್ಲಿ ಆಡಳಿತದಲ್ಲೇ ಆಗಲಿ, ಪ್ರಯೋಗಿಕವಾಗಿಯೇ ಆಗಲಿ, ಕನ್ನಡವನ್ನು ದಿಕ್ಕರಿಸಲಾಗಿದೆ ಅಥವಾ ಕಡೆಗಾಣಿಸಲಾಗಿದೆ. ಈ ಕ್ಷೇತ್ರಗಳನ್ನು ಆಯ್ಕೆಮಾಡಿಕೊಂಡು ಇಲ್ಲಿ ಕನ್ನಡದ ಬಳಕೆ ಆಗಿಲ್ಲ, ಯಾಕಾಗಿಲ್ಲ ಎಂಬ ಪ್ರಶ್ನೆಗಳನ್ನು ಹಾಕಿಕೊಂಡಾಗ ಉತ್ತರಗಳು ಸ್ಪಷ್ಟವಾಗಿರುತ್ತವೆ, ಅವೇನೆಂದರೆ ಉನ್ನತ ಶಿಕ್ಷಣದ ಅಧ್ಯಯನವು ಇಂಗ್ಲೀಷ್‌ನಲ್ಲೇ ಮಾಡಬೇಕು ಹಾಗೆ ಮಾಡಿದರೆ ಉದ್ಯೋಗಾವಕಾಶಗಳು, ಎಲ್ಲಿಯಾದರೂ ಬೇಗನೆ ದೊರಕಬಲ್ಲವು, ಎಲ್ಲಿಯಾದರೂ ಬದುಕಬಲ್ಲೆವು. ಇದೆಲ್ಲಾ ನಂಬಲರ್ಹವಲ್ಲವಾದರೂ ಸಿಕ್ಕ ಸ್ಪಷ್ಟ ಉತ್ತರವೇನೆಂದರೆ ಇದಕ್ಕೆ ಸಂಬಂಧಿಸಿದ ಪಠ್ಯಪುಸ್ತಕ ಮತ್ತು ಅದನ್ನು ಬೋಧಿಸುವ ಶಿಕ್ಷಕರು ಹಾಗೂ ಕನ್ನಡದಲ್ಲಿ ವಿಷಯವನ್ನು ಅಧ್ಯಯನ ಮಾಡಿದ ಅಧ್ಯಾಪಕರ ಕೊರತೆ ಎನ್ನುತ್ತಾರೆ.

ತಾಂತ್ರಿಕ, ವೈದ್ಯಕೀಯ ಕ್ಷೇತ್ರಗಳಲ್ಲಿ ಬಳಸುವ ಇಂಗ್ಲೀಷ್‌ನ ಪದಗಳ ಕೊರತೆ ಎದ್ದುಕಾಣುತ್ತದೆ. ಕಾರಣ ಯಾರೂ ಸಹ ಉನ್ನತ ಶಿಕ್ಷಣದ ಬಗ್ಗೆ ತಲೆಕೆಡಿಸಿಕೊಳ್ಳದೇ ಇರುವುದು ಹಾಗೂ ಅದರ ಬಗ್ಗೆ 'ಚ'ಕಾರ ಎತ್ತುತ್ತಿರುವುದು ಕಂಡುಬರುತ್ತಿಲ್ಲ. ಈ ಕಾರಣದಿಂದಲೇ ವಿದ್ಯಾರ್ಥಿಯು ಪ್ರಾರಂಭದಿಂದಲೇ ಶಿಕ್ಷಣದಲ್ಲಿ ಪ್ರಥಮ ಭಾಷೆ ಹಾಗೂ ಮಾದ್ಯಮವಾಗಿ ಕನ್ನಡದ ಅದ್ಯಯನ ಆಗಬೇಕು ಹಾಗೂ ಅದು ಜಾರಿಗೆ ತರಬೇಕಿದೆ. ಹಾಗೆಯೇ ಅದು ಉನ್ನತ ಶಿಕ್ಷಣದಲ್ಲಿ ಜಾರಿಯಾಗಬೇಕೆಂದು ಅಭಿಪ್ರಾಯ ಪಡುತ್ತಾರೆ,

ಉನ್ನತ ಶಿಕ್ಷಣದ ಕೆಲವೊಂದು ವಿಜ್ಞಾನ ವಿಭಾಗಕ್ಕೆ ಸಂಬಂಧಪಟ್ಟ ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಪಠ್ಯಪುಸ್ತಕಗಳನ್ನು ರಚಿಸಿ ಅವುಗಳನ್ನು ಜಾರಿಗೆ ತಂದ ಕೀರ್ತಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲುತ್ತದೆ. ಇದೇ ರೀತಿಯಲ್ಲಿ ಉನ್ನತ ಶಿಕ್ಷಣದಲ್ಲೂ ಆದಾಗ ಕನ್ನಡ ಬಳಕೆ ಎಲ್ಲಾ ರೀತಿಯಿಂದಲೂ ಆಗುತ್ತದೆ. ಹಾಗಾಗಿ ಆಡಳಿತದಲ್ಲೂ ಕನ್ನಡದ ಅನುಷ್ಠಾನವಾದ ಹಾಗೆ ಎನ್ನುವ ನಂಬಿಕೆ ಬೆಳೆಯುತ್ತದೆ. ಈ ರೀತಿಯಲ್ಲಿ ನಾವು ಯೋಚಿಸುವುದಾದರೆ, ಉನ್ನತ ಶಿಕ್ಷಣದ ಎಲ್ಲಾ ಪಠ್ಯಪುಸ್ತಕಗಳು ಕನ್ನಡಕ್ಕೆ ಮತ್ತು ಕಡ್ಡಾಯವಾಗಿ ಕನ್ನಡದಲ್ಲಿ ಶಿಕ್ಷಣ ನೀಡಬೇಕೆಂದು ಹೋರಾಟ ನಡೆಸಿದಲ್ಲಿ ಸಿಗುವ ಉತ್ತರ ಶೂನ್ಯವೇ ಅಥವಾ ಅರ್ಥವಿಲ್ಲದ ಹೋರಾಟದ ಹಣೆಪಟ್ಟಿ ಎಂಬ ನಿಂದನೆಯ ಕೂಗು.

ಉನ್ನತ ಶಿಕ್ಷಣವು ಹಿಂದಿಯಲ್ಲಾಗಲಿ, ಕನ್ನಡದಲ್ಲಾಗಲಿ ಪಡೆಯುವಷ್ಟರ ಮಟ್ಟಿಗೆ ಅವುಗಳು ತನ್ನ ಸಾಮರ್ಥ್ಯವನ್ನು ಹೊಂದಿಲ್ಲ. ಅಲ್ಲದೇ ಅದರ ರಚನೆಯೇ ಇನ್ನೂ ಪ್ರಶ್ನೆಯಾಗಿ ಉಳಿದಿದೆ. ಈ ನಿಟ್ಟಿನಲ್ಲಿ ಹೋರಾಟ ಫಲಪ್ರದಾಯಕತೆಯನ್ನು ನೀಡುವುದಿಲ್ಲವೆಂಬುದು ಸತ್ಯಸಂಗತಿ. ಅಲ್ಲದೇ ಉನ್ನತ ಶಿಕ್ಷಣ ಬರೀ ರಾಜ್ಯಕ್ಕಲ್ಲ ದೇಶ-ವಿದೇಶ ವ್ಯಾಪಿಯಾಗಿರುವ ಹಿನ್ನೆಲೆಯಲ್ಲಿ ಹೊರಗಿನ ಪ್ರದೇಶಗಳಿಗೆ ನಾವು ಹೋಗಬೇಕಾದರೆ ನಮ್ಮ ಕನ್ನಡದ ಅಧ್ಯಯನ ಆಗಿನ ಸಂದರ್ಭದಲ್ಲಿ ಸರಿದೂಗುವುದೇ, ಆ ಸಂದರ್ಭದಲ್ಲಿ ನಮ್ಮ ರಾಜ್ಯದ ಉನ್ನತ ಶಿಕ್ಷಣ ನಮಗೆ ತಾರತಮ್ಯ ಮಾಡಿದಂತಲ್ಲವೇ ಎಂಬ ಅಭಿಪ್ರಾಯ ಬರುವುದು ಸಹಜ. ಅದಕ್ಕಾಗಿ ಉನ್ನತ ಶಿಕ್ಷಣವೆಲ್ಲ ಏಕ ಮಾದರಿಯ ರೂಪದಲ್ಲಿ ಇದ್ದು, ಪ್ರಾಥಮಿಕ ಶಿಕ್ಷಣ ಕಡ್ಡಾಯ ಕನ್ನಡವನ್ನು ಜಾರಿಗೆ ತರುವಲ್ಲಿ ಈಗಿನ ಹೋರಾಟಗಳು ಮತ್ತು ವಿದ್ವಾಂಸರು ಸಹ ಮತಗಳು ಕಂಡು ಬರುತ್ತವೆ.

ಆದ್ದರಿಂದ ಉನ್ನತ ಶಿಕ್ಷಣ ಮಾಧ್ಯಮದ ಮತ್ತು ಭಾಷೆಯ ವಿಚಾರದ ಪ್ರಶ್ನೆಗಳು ಬಂದಾಗ ಎಲ್ಲರೂ ಮೌನ ರೂಪವನ್ನು ತಾಳುವ ಸಂಸ್ಕೃತಿ ಪ್ರಸ್ತುತ ಸಂದರ್ಭಗಳಲ್ಲಿ ಕಂಡು ಬರುತ್ತದೆ. ಇನ್ನೂ ವಿಪರೀತವಾದ ಚರ್ಚೆಗಳು ಆದಲ್ಲಿ ಭಾಷಾ ವಿದ್ವಾಂಸರು ಮತ್ತು ಕನ್ನಡಪರ ಹೊರಾಟಗಾರರು ಮತ್ತು ಶಿಕ್ಷಣ ತಜ್ಞರಲ್ಲಿ ಪ್ರಶ್ನೆಗಳು ಪ್ರಾರಂಭವಾಗುತ್ತದೆ. ಭಾಷಾ ವಿದ್ವಾಂಸರು ಹೇಳುವಂತೆ ಉನ್ನತ ಶಿಕ್ಷಣವೂ ಸಹ ಕನ್ನಡದಲ್ಲಿ ಆಗಬೇಕು ಅದಕ್ಕೆ ಸಂಬಂಧಪಟ್ಟ ಸಿದ್ಧತೆಗೆ ಮತ್ತು ತಯಾರಿಗೆ ಮುಂದಾಗಬೇಕು. ಆದರೆ ಶಿಕ್ಷಣ ತಜ್ಞರ ಪ್ರಕಾರ ಉನ್ನತ ಶಿಕ್ಷಣಕ್ಕೆ ಬೇಕಾಗುವಷ್ಟರ ಮಟ್ಟಿಗೆ ಕನ್ನಡದಲ್ಲಿ ಸಂವಾದಿ/ಪಾರಿಭಾಷಿಕ ಪದಗಳ ರಚನೆಯಾಗಿಲ್ಲ. ಕಾರಣ ಅದರ ಸಾಧ್ಯತೆ ಆಗುವುದಿಲ್ಲವೆಂದಲ್ಲ ಕಷ್ಟದಾಯಕವಾದದ್ದು ಮತ್ತು ಅಸಾಧ್ಯವಾದದ್ದು ಎಂದಿದ್ದಾರೆ, ಒಟ್ಟಾರೆಯಾಗಿ

ನೋಡಿದಾಗ ಪ್ರಾಯೋಗಿಕವಾಗಿ ಉನ್ನತ ಶಿಕ್ಷಣದಲ್ಲಿ ಕನ್ನಡವನ್ನ ಜಾರಿಗೆ ತರುವುದು ಕಷ್ಟ ಮತ್ತು ಅಸಾಧ್ಯವೆಂಬ ಮಾತುಗಳು ಕೇಳಿಬರುತ್ತಿವೆ. ಈ ನಿಟ್ಟಿನಲ್ಲಿ ರೂಪುರೇಷೆಗಳು ಬದಲಾಗಿ ಕನ್ನಡ ಜಾರಿಗೆ ಬರಬೇಕಾದ ಅಥವಾ ತರಬೇಕಾದ ವ್ಯವಸ್ಥೆಗಳನ್ನು ಕಂಡುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಹಲವಾರು ಪ್ರಯತ್ನಗಳು ನಡೆಯುತ್ತಿರುವುದು ಕಂಡು ಬರುತ್ತದೆ. ಬಾಹ್ಯ ಸಮಸ್ಯೆಯಾಗಿ ಕಾಡುವ ಉನ್ನತ ಶಿಕ್ಷಣದಲ್ಲಿ ಕನ್ನಡ ಬಳಕೆಯ ಅನುಷ್ಠಾನ ತುಸು ಕಷ್ಟವೇ ಎಂದೆನಿಸುತ್ತದೆ. ಹೀಗಾಗಿ ಇದು ಆಡಳಿತ ಕನ್ನಡಕ್ಕೆ ಒದಗಿ ಬಂದಿರುವ ಬಾಹ್ಯ ಸಮಸ್ಯೆಯಾಗಿದೆ.

೩.೫.೨. ಶಿಕ್ಷಣದಲ್ಲಿ ಪೋಷಕರು ಇಂಗ್ಲೀಷ್ ಭಾಷೆಯ ಬೆನ್ನು ಹತ್ತಿರುವುದು.

ಸರ್ಕಾರದಲ್ಲಿ ಹಲವಾರು ಕಟ್ಟುನಿಟ್ಟಿನ ಕ್ರಮಗಳನ್ನು ಶಿಕ್ಷಣದಲ್ಲಿ ಪ್ರಾಥಮಿಕ ಹಂತದಿಂದಲ್ಲೇ ಕನ್ನಡದ ಬಳಕೆ ಮತ್ತು ಭಾಷಾಮಾಧ್ಯಮವಾಗಬೇಕೆಂಬ ಕೂಗು ಎಲ್ಲೆಡೆಯೂ ಕೇಳಿಬರುತ್ತಿದ್ದರೂ, ಶಿಕ್ಷಣ ಕ್ಷೇತ್ರದಲ್ಲಿ ಅವುಗಳ ನಿಲುವುಗಳು ಬದಲಾಗಲಿಲ್ಲ ಪ್ರಸ್ತುತ ಸಂದರ್ಭದಲ್ಲಿ ನಮ್ಮ ಮಗು ಇಂಗ್ಲಿಷ್ ಶಾಲೆಗೆ ಹೋಗಬೇಕು, ಇಂಗ್ಲೀಷ್‌ನ್ನು ಕಲಿಯಬೇಕು. ಅವನು ಇಂಗ್ಲೀಷ್‌ನಲ್ಲೆ ಮಾತನಾಡಬೇಕು ಎಂದು ಆಸೆಪಡುವುದು ಸರ್ವೆ ಸಾಮಾನ್ಯವಾಗಿದೆ. ಗ್ರಾಮಾಂತರ ಮತ್ತು ನಗರ ಪ್ರದೇಶದಲ್ಲಿನ ತಂದೆ ತಾಯಂದಿರು ಆಸೆ ಪಡುವುದೇ ಮಗುವನ್ನು ಕಾನ್ವೆಂಟ್ ಶಾಲೆಗೆ ಹಾಗೂ ಪ್ರತಿಷ್ಠಿತ ಇಂಗ್ಲೀಷ್ ಶಾಲೆಗಳಿಗೆ ಹಾಕಬೇಕೆನ್ನುವ ಮನೋಭಾವ ಅವರಲ್ಲಿ ಇದ್ದೇ ಇದೆ. ಆರ್ಥಿಕವಾಗಿ ಹಿಂದುಳಿದ ಹಾಗೂ ಬಡತನ ರೇಖೆಗಿಂತ ಕಡಿಮೆ ಇರುವ ಸಾಮಾನ್ಯ ಜನರು ಮಕ್ಕಳನ್ನು ಮಾತ್ರ ಇಂದು ನಾವು ಸರ್ಕಾರಿ ಶಾಲೆಗಳಲ್ಲಿ ದಾಖಲಾಗಿರುವುದು ಕಂಡುಬರುತ್ತದೆ.

ಅದಲ್ಲದೆ ಅಂಗನವಾಡಿಯಲ್ಲೂ ಮಕ್ಕಳ ಹೆಚ್ಚಾಗಿ ಬಡತನ ರೇಖೆಗಿಂತ ಕಡಿಮೆ ಇರುವವರೇ ಹೊರತು ಬೇರೆಯವರು ಬೆರಳೆಣಿಕೆಯಷ್ಟು ಮಾತ್ರ. ಉಳಿದವರೆಲ್ಲ LKG, UKG ಓದಿಸುವ ಸಲುವಾಗಿ ಕಾನ್ವೆಂಟ್‌ಗೆ ಕಳಿಹಿಸುವ ಪರಿಪಾಠ ಬೆಳೆದುಕೊಂಡು ಬಂದಿದೆ. ಕಾನ್ವೆಂಟಿನಲ್ಲೂ ಹಿಂದಿನಿಂದಲೂ ಒಂದೇ ರೀತಿಯಲ್ಲಿ ಕಲಿಕೆಯು ಮುಂದುವರೆದಿದೆ.

Twinkle Twinkle little star,

Jani Jani yes papa

Jack and Jill,

A for Apple,

Bow bow Says the dog

ಇತ್ಯಾದಿ ಕಲಿಕೆಗಳನ್ನು ಸುಮಾರು ದಿನಗಳಿಂದಲೂ ಕಲಿಸುತ್ತಲೇ ಬಂದಿದ್ದಾರೆ. ಈ ರೀತಿಯಾಗಿ ಶಿಕ್ಷಣದಲ್ಲಿ ಬೆಳೆದುಬಂದಿದೆ. ಇದಕ್ಕೆ ಮಾರುಹೋದ ನಮ್ಮ ಜನತೆ ತನ್ನ ಮಾತೃಭಾಷೆಯನ್ನೇ ಮರೆತು ಮತ್ತು ಧಿಕ್ಕರಿಸಿ ಇಂಗ್ಲೀಷ್‌ಗೆ ಮುಗಿಬಿದ್ದಿರುವುದು ಕೆಲವೊಂದು ಸಂದಂರ್ಭದಲ್ಲಿ ಚರ್ಚೆಗೆ ಕಾಣಸಿಗುತ್ತದೆ.

"ನಮ್ಮ ಇಷ್ಟ ನಾವು ಏನನ್ನಾದರೂ ಕಲಿಸುತ್ತೇವೆ ನಿಮಗ್ಯಾಕ್ ರೀ ನೋವು" ಎನ್ನುವ ಪೋಷಕರ ಮಾತುಗಳು ಕೇಳಿಬರುತ್ತಿರುವುದು ವಾಡಿಕೆಯಾಗಿದೆ. ಸರಿ ಇವರ ಗೋಜಿಗೆ ಹೋಗದೆ ಶಿಕ್ಷಣದಲ್ಲಿ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಒಂದರಿಂದ ೪ನೇ ತರಗತಿಯವರೆಗೆ ಕಡ್ಡಾಯ ಕನ್ನಡದಲ್ಲಿ ಶಿಕ್ಷಣ ನೀಡಬೇಕು ಹಾಗೂ ಈ ಹಂತದಲ್ಲಿ ಇಂಗ್ಲೀಷ್ ಶಾಲೆಗಳಿಗೆ ಮಾನ್ಯತೆ ನೀಡಲಾಗುವುದಿಲ್ಲ ಎಂದು ಸರ್ಕಾರ ಆದೇಶಗಳನ್ನು ಹೊಡಿಸಿದೆ. ಆದರೆ ವ್ಯವಸ್ಥೆಯಲ್ಲಿ ಬದಲಾವಣೆಯಾಗದೇ ತೆರೆಯಮರೆಯ ಹಿಂದೆ ಹಾಗೆಯೇ ಇದೆ. ಎಲ್ಲಾ ಹೊಸದಾಗಿ ಪ್ರಾರಂಭಗವಾಗುವ ಶಾಲೆಗಳ ಮಾಧ್ಯಮ ಷರತ್ತಗಳನ್ವಯ ಕನ್ನಡವನ್ನೇ ಕಲಿಕೆಯ ಮಾಧ್ಯಮವನ್ನಾಗಿ ಅಭ್ಯಾಸಿಸಬೇಕೆಂದು ಇದ್ದರೂ, ಶಿಕ್ಷಣ ಇಲಾಖೆಯಲ್ಲಿ ಕನ್ನಡ ಮಾಧ್ಯಮಕ್ಕೆ ಅನುಮತಿ ಪಡೆದು, ಪ್ರಸ್ತುತ ಸಂದಂರ್ಭದಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡುತ್ತಿರುವ ಎಷ್ಟೋ ಸಾವಿರಾರು ಶಾಲೆಗಳು ನಮ್ಮ ಕರ್ನಾಟಕದಲ್ಲಿವೆ. ಆದರೂ ಇದಕ್ಕೆ ಶಿಕ್ಷಣ ಇಲಾಖೆ ಅವರಿಗೆ ಕಟ್ಟುನಿಟ್ಟಿನ ಆದೇಶ ಮಾಡಿದ್ದೇವೆ ಎಂದು ಹೇಳುವ ಮೂಲಕ ಜಾಣ ಕುರುಡನ್ನು ಪ್ರದರ್ಶಿಸುತ್ತದೆ.

ಶಿಕ್ಷಣ ಇಲಾಖೆಯಲ್ಲಿನ ಕೊರತೆ, ನ್ಯೂನ್ಯತೆ, ಸಮಸ್ಯೆ ಮತ್ತು ಅಭಿಪ್ರಾಯ ಬದಲಾಗಬೇಕಿದೆ. ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಕಟ್ಟುನಿಟ್ಟಾಗಿ ಜಾರಿಗೆ ಬಂದಲ್ಲಿ ತಾನಾಗಿಯೇ ಕನ್ನಡದ ಬಗ್ಗೆ ಇರುವ ಅಭಿಪ್ರಾಯ ಬದಲಾಗಿ ಕನ್ನಡ ಬಳಕೆಯ ಸಾಧ್ಯತೆಗಳು ಕಂಡುಬರುತ್ತವೆ. ಅದರ ಜೊತೆಗೆ ಪೋಷಕರ ನಿಲುವುಗಳು, ಅಭಿಪ್ರಾಯಗಳು ಬದಲಾಗಬೇಕಿದೆ. ಈ ನಿಟ್ಟಿನಲ್ಲಿಯೂ ಕಾರ್ಯಸಾಧನೆ ಯಾಗಬೇಕಿದೆ, ಪೋಷಕರ ಕನ್ನಡದ ಬಗೆಗಿನ ನಿಲುವು, ಇಂಗ್ಲೀಷ್ ಬಗೆಗಿನ ಅಭಿಪ್ರಾಯಗಳು ಬದಲಾಗಬೇಕೆಂದರೆ ತುಸು ಕಷ್ಟವೇ ಸರಿ. ಇದು ಶಿಕ್ಷಣದಲ್ಲಿನ ಚರ್ಚೆಯ ವಿಷಯ ಇದಕ್ಕೆ ಆಡಳಿತ ಕನ್ನಡವನ್ನು ಜಾರಿಗೆ ತರುವಲ್ಲಿ ಶಿಕ್ಷಣದ ಪಾತ್ರ ಇರುವ ಹಿನ್ನೆಲೆಯಲ್ಲಿ ಪ್ರಸ್ತುತ ಸಂದರ್ಭದಲ್ಲಿ ಚರ್ಚಿಸುವ ಪರಿಸ್ಥಿತಿ ಬಂದಿದೆ.

ಈ ನಿಟ್ಟಿನಲ್ಲಿಯೇ ಆದರೂ ಆಡಳಿತ ಕನ್ನಡವನ್ನು ಸ್ವಲ್ಪ ಮಟ್ಟಿಗೆ ಜಾರಿಗೆ ತರಲು ಪ್ರಯತ್ನ ಪಡಬಹುದಲ್ಲ ಎಂಬುದು ನಮ್ಮ ನಿಲುವಾಗಿದೆ. ಈ ಮಾರ್ಗವೂ ತುಸು ಕಷ್ಟ ಸಾಧ್ಯವೆಂದು ತಿಳಿದಿದ್ದರೂ ಬದಲಾವಣೆ ಪ್ರಾರಂಭ ಹಂತದ ಶಿಕ್ಷಣದಿಂದಲೇ ಆಗಬೇಕಾಗಿರುವುದರಿಂದ ಶಿಕ್ಷಣ ಮಾಧ್ಯಮ ಸಂಪೂರ್ಣವಾಗಿ ಕನ್ನಡವಾಗಿ ಜಾರಿಗೆ ಬರಬೇಕು ಮತ್ತು ಪ್ರಾಯೋಗಿಕವಾಗಿ ಕಾರ್ಯರೂಪದಲ್ಲಿ ಕಾರ್ಯಗತಗೊಳ್ಳಬೇಕಾಗಿದೆ. ಈ ಎಲ್ಲಾ ಬಾಹ್ಯ ಸಮಸ್ಯೆಗಳು ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಬಾಹ್ಯ ಸಮಸ್ಯೆಗಳಾಗಿ ಕಾಡುತ್ತಿವೆ.

೩.೫.೩. ಅಧಿಕಾರಿಗಳಿಗೆ ಮತ್ತು ನೌಕರರಿಗೆ ನಡೆಸುವ ಕನ್ನಡ ಪರೀಕ್ಷೆಗಳು.

ಅಧಿಕಾರಿಗಳಿಗೆ ಮತ್ತು ನೌಕರರಿಗೆ ನಡೆಸುವ ಕನ್ನಡ ಪರೀಕ್ಷೆಯ ಬಗ್ಗೆ ೭೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಪಾಟೀಲ್ ಪುಟ್ಟಪ್ಪನವರು 'ಆಡಳಿತ ಕನ್ನಡ' ಶೀರ್ಷಿಕೆಯಡಿ ಈರೀತಿ ಹೇಳಿದ್ದಾರೆ, ಪ್ರಸ್ತುತ ಈ ವಿಚಾರವನ್ನು ಆಡಳಿತ ಕನ್ನಡ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡ ಪುಸ್ತಕದ ಪುಟ-೯೧ರಿಂದ ನೇರವಾಗಿ ಪಡೆದುಕೊಳ್ಳಲಾಗಿದೆ.

ಸರ್ಕಾರದ ಕೇಂದ್ರ ಸ್ಥಳವಾದ ವಿಧಾನಸೌಧದಲ್ಲಿರುವ ಹಿರಿಯ ಅಧಿಕಾರಿಗಳಿಗೆ ಕನ್ನಡದ ಬಗೆಗೆ ಇರಬೇಕಾದ ಆಸಕ್ತಿ ಇಲ್ಲ 'ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ' ಎಂಬಂತೆ ಅವರ ಕನ್ನಡದ ಕೆಲಸ ನಡೆದಿದೆ ಕನ್ನಡದ ಉಪಯೋಗದಲ್ಲಿ ಅವರು ಪರಿಣಿತಿ ಪಡೆದಿದ್ದಾರೆ ಎಂಬುದನ್ನು ಅವರು ತೆಗೆದುಕೊಂಡ ಇಲಾಖೆ ಪರೀಕ್ಷೆಗಳು ಹೇಳುತ್ತವೆ. ಅವುಗಳ ಆಧಾರದ ಮೇಲೆ ಅವರ ಸಂಬಳಲ್ಲಿ ಹೆಚ್ಚಳ ಹಾಗೂ ಪದೋನ್ನತಿಯನ್ನೂ ಪಡೆದಿದ್ದಾರೆ. ಕನ್ನಡವನ್ನು ಉಪಯೋಗಿಸುವಲ್ಲಿ ಅವರಿಗಿರುವ ಸಾಮರ್ಥ್ಯವನ್ನು ನೋಡಿದರೆ ಕನ್ನಡ ಸಂಬಂಧ ಇಲಾಖಾ ಪರೀಕ್ಷೆಗಳು ಪೊಳ್ಳು, ಬೋಗಸ್ ಎಂದು ಅವು ಹೇಳುತ್ತವೆ. ಸುಳ್ಳು ಪರೀಕ್ಷೆ ತೆಗೆದು ಕೊಂಡವರನ್ನು, ಅವರಿಗೆ ಸುಳ್ಳು ಪ್ರಮಾಣ ಪತ್ರ ಕೊಟ್ಟವರನ್ನು ಉಭಯ ಭ್ರಷ್ಟರೆಂದು ಪರಿಗಣಿಸಿ ಅವರನ್ನು ದಂಡಿಸಬೇಕು, ಅವರು ಪಡೆದು ಕೊಂಡಿರುವ ಹಣಕಾಸಿನ ಸೌಲಭ್ಯವನ್ನು ಅವರಿಂದ ಮರಳಿ ಪಡೆದು ಸುಳ್ಳು ದಾಖಲೆ ಸೃಷ್ಟಿಸಿ ಅವುಗಳ ಆಧಾರದ ಮೇಲೆ ಪದೋನ್ನತಿ ಪಡೆದವರಿಂದ ಕಸಿದುಕೊಳ್ಳಬೇಕು ಎಂದು ಅಭಿಪ್ರಾಯ ಪಡುತ್ತಾರೆ.

ಪಾಟೀಲ್ ಪುಟ್ಟಪ್ಪನವರು ಹೇಳಿದಂತೆ ಕನ್ನಡ ಬಾರದೇ ಇರುವ ಅಧಿಕಾರಿಗಳಿಗೆ ಕರ್ನಾಟಕದಲ್ಲಿ ಆಡಳಿತದಲ್ಲಿ ನೆಲೆಯೂರಲು ಅಥವಾ ಕರ್ತವ್ಯ ನಿರ್ವಹಿಸಲು ಕನ್ನಡ ಪರೀಕ್ಷೆ ಪಾಸಾಗಬೇಕೆಂಬುದು ಮಾನದಂಡವಾಗಿದೆ. ಆದರೆ ಕನ್ನಡ ಪರೀಕ್ಷೆಗೆ ಕುಳಿತು ಕೊಳ್ಳುವ ಹಾಗೂ ಬರೆಯುವ ಅಧಿಕಾರಿಗಳಿಗೆ ಪರೀಕ್ಷೆಗೆ ಸಂಬಧಪಟ್ಟಂತೆ ಅಧ್ಯಯನಗಳು ಮಾತ್ರ ನಡೆದಿರುತ್ತವೆ. ಇಲಾಖೆಯ ಪರೀಕ್ಷೆಗಳು ಹೇಗೆ ನಡೆಯುತ್ತವೆಂಬುದನ್ನು ಕಂಡಿದ್ದೇವೆ. ಹೀಗಾಗಿ ಕನ್ನಡ ಬಾರದಿರುವ ಅಧಿಕಾರಿಗಳಿಗೆ ಈ ಇಲಾಖೆ ಪರೀಕ್ಷೆಗಳು ಯಾವ ರೀತಿಯಿಂದಲೂ ಪರಿಣಾಮವನ್ನುಂಟು ಮಾಡಲಾರವು ಎಂಬುದು ಸತ್ಯ.

ಕಾರಣವೇನೆಂದರೆ ಕನ್ನಡ ಅರ್ಹತಾ ಪರೀಕ್ಷೆಯನ್ನು ಪಾಸು ಮಾಡುವಲ್ಲಿ ಯಾವುದೇ ರೀತಿಯಿಂದಲೂ ಕಷ್ಟ ಸಾಧ್ಯ ಇಲ್ಲ. ತ್‌ತಕ್ಷಣದ ಮಟ್ಟಿಗೆ ಕಷ್ಟಪಟ್ಟರೆ ಸಾಕು ಕನ್ನಡ ಅರ್ಹತಾ ಪರೀಕ್ಷೆಯನ್ನು ಸುಲಭವಾಗಿ ಪಾಸಾಗಬಹುದು. ಇತ್ತೀಚಿನ ದಿನಗಳಲ್ಲಿ ಇಲಾಖೆ ಪರೀಕ್ಷೆಗಳು ತನ್ನ ಸ್ವರೂಪ ಸ್ಥಾನಮಾನಗಳನ್ನು ಬದಲಾಯಿಸಿಕೊಂಡಿದೆ ಅಥವಾ ಕಳೆದುಕೊಂಡಿದೆ ಎಂದು ಹೇಳಬಹುದು. ಅಲ್ಲದೇ ಕನ್ನಡ ಪರೀಕ್ಷೆಗಳನ್ನು ತೇರ್ಗಡೆ ಹೊಂದಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ನೌಕರರು ಇರುವುದನ್ನು ನಾವು ಕಾಣುತ್ತೇವೆ. ನಾವು ಪರೀಕ್ಷೆಯನ್ನು ಪ್ರಶ್ನಿಸುವುದಾದರೆ, ಇಡೀ ಆ ಒಂದು ಪರೀಕ್ಷೆ ಅಧಿಕಾರಿಗಳ ಕನ್ನಡ ಸಾಮರ್ಥ್ಯ ಮತ್ತು ಅವರ ಬರಹ ಮತ್ತು ಕನ್ನಡ ಬಗೆಗಿನ ಅರಿವುಗಳನ್ನು ನಿರ್ಧರಿಸಬಲ್ಲದೇ? ಇದು ಸಾಧ್ಯವೇ ಆಗದ ಮಾತು. ಈ ಪ್ರಶ್ನೆಯಿಂದ ದೃಢಗೊಳ್ಳುವುದೇನೆಂದರೆ, ಕನ್ನಡೇತರ ಅಧಿಕಾರಿಗಳು ಮತ್ತು ನೌಕರರು ಆಡಳಿತದಲ್ಲಿ ನೆಲೆಯೂರಲು ಯಾವುದೇ ಹಿತಾಸಕ್ತಿಗಳ ಹಿನ್ನೆಲೆಯಲ್ಲಿ ನೆಲೆಯೂರಿ ರಚಿಸಲಾದ ಮಾನದಂಡವೇ ಕನ್ನಡ ಪರೀಕ್ಷೆ ತೇರ್ಗಡೆ ಎಂಬುದು ನನ್ನ ವಾದವಾಗಿದೆ.

ಇದೊಂದರ ಆಧಾರದ ಮೇಲೆ ನಾವು ಅಧಿಕಾರಿಗಳು ಮತ್ತು ನೌಕರರು ಕನ್ನಡ ಸಾಮರ್ಥ್ಯವನ್ನು ಅಳೆದು ಇವರ ಆಡಳಿತದಲ್ಲಿ ಮುಂದುವರೆಯಲು ಅರ್ಹರೆಂದು ನಿರ್ಧಾರಕ್ಕೆ ಬರುವುದು ಮೇಲ್ನೋಟಕ್ಕೆ

ಸತ್ಯ ಮತ್ತು ಸರಿಯಾಗಿದ್ದರೂ ಪ್ರಾಯೋಗಿಕವಾಗಿ ಸರಿಯಲ್ಲವೆಂದು ಕಂಡು ಬರುತ್ತದೆ. ಈ ನಿಟ್ಟಿನಲ್ಲಿ ರಚಿತಗೊಂಡ ಅಥವಾ ರೂಪಿತಗೊಂಡ ಪರೀಕ್ಷೆ ನೆಪಕ್ಕೆ ಮಾತ್ರ ರಚನೆಯಾದದ್ದೆಂದು ಕಂಡುಬರುತ್ತದೆ. ಅದರ ಸಮರ್ಪಕ ಬಳಕೆ ಆಗುತ್ತಿಲ್ಲ ಹಾಗೂ ಕಠಿಣತೆಯಿಂದ ಕೂಡಿದ್ದಾಗಿಲ್ಲವೆಂದು ಎದ್ದು ಕಾಣುತ್ತದೆ. ಆದರೆ ಈ ಪರೀಕ್ಷೆಯಲ್ಲಿ ಬದಲಾಣೆಗಳು ಆಗಬೇಕಿದೆ ಹಾಗೂ ಕಠಿಣ ಸವಾಲುಗಳನ್ನು ಮತ್ತು ಪ್ರಾಯೋಗಿಕವಾಗಿ ಕಾರ್ಯಾಚರಣೆಯಲ್ಲಿರುವ ಸಮಸ್ಯೆಗಳ ಪ್ರಶ್ನೆ ಪತ್ರಿಕೆಗಳು ತಯಾರಾಗಬೇಕಿದೆ.

ಭಾಷೆಯಲ್ಲಿನ ಶಬ್ದ ಬಳಕೆ, ವ್ಯಾಕರಣ ಬದ್ಧತೆ, ವಾಕ್ಯದ ಸರಿಯಾದ ರಚನೆ ಇಂತಹ ಸ್ಪಷ್ಟ ಕನ್ನಡದ ಬಳಕೆಯ ಬಗೆಗಿನ ಕಠಿಣ ಮತ್ತು ಜ್ಞಾನವನ್ನು ತಿಳಿಯುವ ಪ್ರಕ್ರಿಯೆ ಪ್ರಾರಂಭವಾಗಬೇಕಿದೆ. ಇಲ್ಲವಾದಲ್ಲಿ ಪಾಟೀಲ್ ಪುಟ್ಟಪ್ಪನವರು ತಿಳಿಸಿದಂತೆ ಕನ್ನಡ ಸಂಬಂಧ ಇಲಾಖೆ ಪರೀಕ್ಷೆಗಳು ಪೊಳ್ಳು, ಬೋಗಸ್ ಎಂದು ಹೇಳುವ ಮಾತು ಸರಿಯಾದದ್ದು ಎಂಬ ತೀರ್ಮಾನಕ್ಕೆ ಬಂದಂತೆ, ಇದೇ ಸರಿಯೆಂದು ಒಪ್ಪಿಕೊಳ್ಳುವ ಪರಿಸ್ಥಿತಿ ಬಂದಂತೆ ಮುಂದೆಯೂ ಇದನ್ನೇ ಮುಂದುವರೆಸುವ ಸ್ಥಿತಿಯೂ ಬರಬಹುದಾಗಿದೆ.

ಹೀಗಾಗಿ ಕನ್ನಡ ಇಲಾಖೆ ಪರೀಕ್ಷೆಗಳಿಂದ ಒಬ್ಬ ಕನ್ನಡೇತರ ಅಧಿಕಾರಿ ಮತ್ತು ನೌಕರರ ಸಾಮರ್ಥ್ಯವನ್ನು ಅಳೆಯಲು ಸಾಧ್ಯವಿಲ್ಲ. ಇಲ್ಲಿ ಸಮಸ್ಯೆ ಇದ್ದರೂ ಅದು ಸಮಸ್ಯೆಯಾಗಿ ಪರಿಗಣಿಸದೆ ಈ ಪೂರ್ಣ ವ್ಯವಸ್ಥೆ ಬದಲಾಗಬೇಕಿದೆ. ಹೊಸ ಸ್ವರೂಪವನ್ನು ಪಡೆಯಬೇಕಾಗಿದೆ. ನಾವು ಇಲಾಖೆಯಲ್ಲಿ ನೇಮಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಕನ್ನಡ ಪರೀಕ್ಷೆಗಳನ್ನೇ ನೋಡಿದ್ದೇವೆ ಆದರೆ ಇಲಾಖೆಗೆ ನೇಮಕವಾಗುವುದಕ್ಕೆ ಮುಂಚಿತವಾಗಿ ನಡೆಸುವ ಸಾಮಾನ್ಯ ಕನ್ನಡ ಪರೀಕ್ಷೆ, ಐಚ್ಛಿಕ ಕನ್ನಡ ಪರೀಕ್ಷೆಗಳೂ ಆಡಳಿತಕ್ಕೆ ಬರುವ ಅರ್ಭರ್ಥಿಗಳ ಮಟ್ಟವನ್ನು ಪ್ರಸ್ತುತ ಸಂದರ್ಭದಲ್ಲಿ ಕಾಣಲಾಗುತ್ತಿದೆ. ಈ ಪರೀಕ್ಷೆಗಳು ಯಾವ ರೀತಿಯಲ್ಲಿ ಆಡಳಿತ ಕನ್ನಡದ ಮೇಲೆ ಪರಿಣಾಮ ಬೀರಬಲ್ಲವೇ? ಅಥವಾ ಇಲ್ಲವೇ? ಎಂಬ ಪ್ರಶ್ನೆಗಳು ಸವಾಲುಗಳಾಗಿವೆ.

ಪರೀಕ್ಷೆಗಳು ನೇಮಕ ಮಾತ್ರಕ್ಕೆ ಸಿದ್ದವಾಗಿವೆಯೇ? ಸಿದ್ದವಾದ ಕನ್ನಡ ಪರೀಕ್ಷೆಯ ರೂಪುರೇಷೆಗಳು ಮುಂದೆ ನೌಕರರು ಆಡಳಿತ ಕನ್ನಡವನ್ನು ಜಾರಿಗೆ ತರುವಲ್ಲಿ ಸಫಲವಾಗುವವೇ? ಎಂಬ ಪ್ರಶ್ನೆಗಳು ಮೂಡಿದರೂ ಅವೆಲ್ಲವೂ ನೌಕರರು ಮತ್ತು ಅಧಿಕಾರಿಗಳ ಆಡಳಿತದ ಯಂತ್ರದೊಳಕ್ಕೆ ಪ್ರವೇಶ ಪಡೆಯುವ ಸ್ವಾರ್ಥಭಾವ ಹೊಂದಿ ರಚಿತವಾದ ಪ್ರವೇಶದ ಮಾರ್ಗಗಳು ಮಾತ್ರವೇ ಹೊರತು ಅದರಿಂದ ಆಡಳಿತ ಕನ್ನಡವನ್ನು ಜಾರಿಗೆ ತರುವಲ್ಲಿ ಫಲಪ್ರದಾಯಕವಾಗುತ್ತವೆ ಎಂಬ ಉದ್ದೇಶ ಹೊಂದಿ ರಚಿತವಾದ ಪರೀಕ್ಷೆಗಳಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಕನ್ನಡ ಮಾಧ್ಯಮ ಮತ್ತು ಕನ್ನಡ ಭಾಷೆ ಪ್ರಥಮವಾಗಿ ಅಧ್ಯಯನ ಮಾಡಿದವರಿಗೆ ಕನ್ನಡ ಪರೀಕ್ಷೆ ಬರೆಯುವಲ್ಲಿ ರಿಯಾಯಿತಿಯನ್ನು ನೀಡಲಾಗಿದೆ. ಈ ನಿಟ್ಟಿನಲ್ಲಿ ಕನ್ನಡ ದ್ವಿತೀಯ ಭಾಷೆ ಮತ್ತು ತೃತೀಯ ಭಾಷೆ ಅಧ್ಯಯನ ಮಾಡಿದ ಅಭ್ಯರ್ಥಿಗಳಿಗೆ ಕನ್ನಡ ಪರೀಕ್ಷೆ ರಿಯಾಯಿತಿಯನ್ನು ನೀಡಲಾಗಿದ್ದು ಮತ್ತು ಕನ್ನಡ ಪರಿಚಯವೇ ಇರದ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆ

ತೇರ್ಗಡೆಯ ಮಾನದಂಡ ನೀಡಿದ್ದು ಮುಂಬರುವ ದಿನಗಳಲ್ಲಿ ಇದು ಎಷ್ಟು ಸೂಕ್ತವೆಂಬುದು ಪರಿಶೀಲಿಸಲಾಗಿದೆ.

ಮುಂದೆ ಉದ್ಯೋಗದಲ್ಲಿ ಆಯ್ಕೆಯಾಗಿ ಕರ್ತವ್ಯಕ್ಕೆ ಹಾಜರಾಗುವ ಅಭ್ಯರ್ಥಿಗಳು ಅಥವಾ ನೌಕರರು ನೇಮಕವಾಗುವ ಮಟ್ಟಕ್ಕೆ ಮಾತ್ರ ಅವರ ಅಧ್ಯಯನ ಸೀಮಿತವಾಗಿರುತ್ತದೆ ಹೊರತು ಪ್ರಾಯೋಗಿಕವಾಗಿ ಆಡಳಿತದಲ್ಲಿ ಕನ್ನಡ ಬಳಕೆಯನ್ನು ಮಾಡುವ ನಿಟ್ಟಿನಲ್ಲಿ ಕಾರ್ಯತಾತ್ವಿಕತೆಯಿಂದ ಕೂಡಿರುವುದಿಲ್ಲ. ಹೀಗಾಗಿ ಇಲ್ಲಿಯೂ ಬಳಕೆಯ ಸಂದರ್ಭದಲ್ಲಿ ಸಮಸ್ಯೆಯನ್ನು ಕಾಣಬಹುದಾಗಿದೆ. ಇಂದಿನ ಯುವ ಜನಾಂಗವು ಆಧುನಿಕ ಯುಗದತ್ತ ವಾಲುತ್ತಿರುವುದು ಮತ್ತು ಇಂಗ್ಲೀಷ್‌ನತ್ತ ಮುಖ ಮಾಡಿರುವುದು ಸ್ಪಷ್ಟವಾಗಿ ಕಾಣುತ್ತದೆ. ಹೀಗಾಗಿ ಇವರಿಗೆ ಆಡಳಿತ ಕನ್ನಡ ಬಳಕೆಯ ಬಗ್ಗೆ ತಿಳಿಹೇಳುವುದು ಕಷ್ಟ ಸಾಧ್ಯ. ಈ ನಿಟ್ಟಿನಲ್ಲಿ ಅಭ್ಯರ್ಥಿಗಳು ಬದಲಾಗಬೇಕಿದೆ ಹಾಗೂ ತೇರ್ಗಡೆ ಹೊಂದಿದ ನಂತರದಲ್ಲಿ ಅವರಿಗೆ ನೇರವಾಗಿ ಆಡಳಿತ ಕನ್ನಡದ ಬಳಕೆಯ ಬಗ್ಗೆ ನಿರ್ದೇಶನಗಳನ್ನು ನೀಡುವ ಅವಶ್ಯಕತೆಗಳಿವೆ ಹಾಗೂ ಅಗತ್ಯಗಳಿವೆ.

ವೃತ್ತಿ ಬುನಾದಿ ತರಬೇತಿಗಳ ಆಯೋಜನೆಗಳಾದರೂ ಅದರಲ್ಲಿ ಆಡಳಿತ ಕನ್ನಡದ ಬಗ್ಗೆ ವಿವರಣೆ ಮತ್ತು ಬಳಕೆ, ಅದರ ದೋಷಗಳ ಬಗ್ಗೆ, ವಾಕ್ಯರಚನೆ ಸರಿಯಾದ ಬಳಕೆ ಆಡಳಿತ ಕನ್ನಡದ ಪೂರ್ವ ಇತಿಹಾಸ ಮತ್ತು ಅದರ ಅನುಷ್ಠಾನದ ಬಗ್ಗೆ ಪ್ರಾರಂಭದಲ್ಲಿಯೇ ನೇಮಕವಾಗಿರುವ ಅಭ್ಯರ್ಥಿಗಳಿಗೆ ತರಬೇತಿಗಳನ್ನು ನೀಡಿದಲ್ಲಿ ಉತ್ತಮವಾಗಿ ಆಡಳಿತಲ್ಲಿ ಕನ್ನಡ ಬಳಕೆಯ ಬಗ್ಗೆ ಬೇರುಗಳನ್ನು ಬಿತ್ತಲು ಸಾಧ್ಯ ಆ ಬೇರುಗಳು ಹಾಗೆಯೇ ಚಿಗುರೊಡೆದು ಹೆಮ್ಮರವಾಗುವ ಸಾಧ್ಯತೆಗಳು ಕಂಡುಬರುತ್ತವೆ.

ಆಡಳಿತ ಕನ್ನಡಕ್ಕೆ ಬಾಹ್ಯ ಸಮಸ್ಯೆಗಳಾಗುತ್ತಿರುವುದು ಒಂದು ರೀತಿಯಾಗಿ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಹೀಗಾಗಿ ಇದಕ್ಕೆ ಇರುವ ಪರಿಹಾರಗಳನ್ನು ರೂಪಿಸುವುದಾದರೆ ಹೊಸದಾಗಿ ನೇಮಕವಾಗುವ ಅಭ್ಯರ್ಥಿಗಳಿಗೆ ಈಗ ನೀಡುತ್ತಿರುವ ಹಾಗೂ ಇಲಾಖೆಗಳಿಂದ ನೀಡಲಾಗುತ್ತಿರುವ ತರಬೇತಿಗಳ ಜೊತೆಗೆ ಆಡಳಿತ ಕನ್ನಡ ಸಂಪೂರ್ಣ ಜಾರಿಗೆ ತರುವ ನಿಟ್ಟಿನಲ್ಲಿ ತರಬೇತಿಗಳು ರಚನೆಯಾಗಬೇಕು ಮತ್ತು ಅವುಗಳು ಯಶಸ್ವಿ ಪೂರ್ಣವಾಗಿ ಕಾರ್ಯಗತಗೊಂಡು ಪ್ರಾಯೋಗಿಕವಾಗಿ ಜಾರಿಯಾಗಬೇಕು ಹಾಗೂ ಕನ್ನಡ ಪರೀಕ್ಷೆಗಳಲ್ಲಿ ಮಾರ್ಪಾಡು ಮತ್ತು ಬದಲಾವಣೆಗಳು ಆಗಬೇಕಾಗಿದೆ.

೩.೫.೪. ಕನ್ನಡದ ಅಂಕಿಗಳನ್ನು ಸಂಪೂರ್ಣವಾಗಿ ಅಲ್ಲಗೆಳೆದಿರುವುದು.

ಕನ್ನಡ ಅಂಕಿಗಳಿಗೆ ಪುರಾತನ ಕಾಲದಿಂದಲೂ ವಿಶೇಷವಾದ ಸ್ಥಾನವಿದೆ. ಪ್ರಾಚೀನ ಕಾಲದಿಂದಲೂ ಕನ್ನಡದ ಅಂಕಿಗಳನ್ನು ಬಳಸುತ್ತಿದ್ದರು ಎಂಬುದಕ್ಕೆ ಶಾಸನಗಳಲ್ಲಿ ಪುರಾವೆಗಳಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಕನ್ನಡ ಅಂಕಿಗಳನ್ನು ಪೂರ್ಣವಾಗಿ ಅಲ್ಲಗೆಳೆದಿರುವುದು ಆಡಳಿತದಲ್ಲಿ ಅಷ್ಟೇ ಅಲ್ಲದೇ ಸಾಮಾಜಿಕ ವಲಯದಲ್ಲೂ ಕನ್ನಡದ ಅಂಕಿಗಳು ಮಾಯವಾಗಿವೆ ಎಂದು ಹೇಳಬಹುದು. ಪ್ರಸ್ತುತ ಸಂದರ್ಭದಲ್ಲಿ ಕನ್ನಡದ ಅಂಕಿಗಳನ್ನು ಕೆಲವೊಂದು ವಿಶ್ವವಿದ್ಯಾಲಯಗಳನ್ನು ಬಿಟ್ಟರೆ ಉಳಿದ ಆಡಳಿತದ ವಲಯಗಳಲ್ಲಿ ನೋಡಲೂ ಸಹ ಸಿಗುವುದಿಲ್ಲ. ಕಾರಣ ಕನ್ನಡದ

ಅಂಕಿಗಳಿಗಿರುವ ಸ್ಥಾನ ಪ್ರಸ್ತುತ ತುಂಬಾ ಶೋಚನೀಯದ್ದಾಗಿದೆ ಹಾಗೂ ಕನ್ನಡದ ಅಂಕಿಗಳು ಅಳಿವಿನ ಅಂಚಿನಲ್ಲಿವೆ ಎನ್ನುವುದು ಸತ್ಯ.

ಆಡಳಿತದಲ್ಲಿ ಕನ್ನಡದ ಅಂಕಿಗಳನ್ನು ಲೆಕ್ಕಪತ್ರಶಾಖೆ, ಅನುದಾನ ಬಿಡುಗಡೆಯ ಶಾಖೆಗಳಲ್ಲಿ ಯಥೇಚ್ಚವಾಗಿ ಬಳಕೆಮಾಡಬೇಕಾಗುತ್ತದೆ. ಆದರೆ ಈವರೆಗೂ ಒಂದು ಕನ್ನಡದ ಅಂಕಿಗಳನ್ನು ಈ ವಿಭಾಗದಲ್ಲಿ ಬಳಸಿದ್ದನ್ನು ನಾವು ನೋಡಲು ಸಿಗುವುದಿಲ್ಲ. ಒಂದು ವೇಳೆ ಕನ್ನಡದ ಅಂಕಿಗಳನ್ನು ಆಡಳಿತದಲ್ಲಿ ಬಳಕೆಮಾಡುವ ಮನಸುಗಳಿದ್ದರೂ ಅಧಿಕಾರಿಗಳು ಅದಕ್ಕೆ ತಕರಾರುಗಳನ್ನು ಒಡ್ಡಿರುವ ಪ್ರಸಂಗಗಳು ಕ್ಷೇತ್ರಧ್ಯಯನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ. ಕನ್ನಡದ ಅಂಕಿಗಳನ್ನು ಬಳಕೆಮಾಡದಿರುವುದಕ್ಕೆ ಕೆಲವು ಕಾರಣಗಳನ್ನು ಆಡಳಿತವರ್ಗದಲ್ಲಿನ ಜನತೆ ಮತ್ತು ಸಿಬ್ಬಂದಿ ವರ್ಗದವರು ನೀಡುತ್ತಾರೆ.

ಕನ್ನಡದ ಅಂಕಿಗಳ ಬಗ್ಗೆ ಪರಿಚಯವಿರದಿರುವುದು, ಕನ್ನಡ ಅಂಕಿಗಳನ್ನು ಬರೆಯುವಲ್ಲಿ ಸತತೆ ಇಲ್ಲದಿರುವುದು, ಕನ್ನಡದ ಅಂಕಿಗಳು ಈಗಾಗಲೇ ದೂರ ಸರಿದಿರುವುದು, ಇಂಗ್ಲೀಷ್ ಅಂಕಿಗಳು ಸರಳವಾಗಿ ಬಳಕೆ ಸಾಧ್ಯ, ಈಗಾಗಲೇ ಇಂಗ್ಲೀಷ್ ಅಂಕಿಗಳು ಮನೆಮಾತಾಗಿವೆ ಅವುಗಳನ್ನು ಬದಲಾಯಿಸುವುದು ಬೇಡ, ಕನ್ನಡದ ಅಂಕಿಗಳು ಜನಸಾಮಾನ್ಯರ ಬಳಕೆಯಲ್ಲಿ ಇಲ್ಲದಿರುವುದು ಇಂತಹ ಕಾರಣಗಳನ್ನು ನೀಡುತ್ತಾರೆ. ಒಟ್ಟಾರೆಯಾಗಿ ಕನ್ನಡದ ಅಂಕಿಗಳು ಕನ್ನಡದಿಂದ ದೂರ ಸರಿಯುತ್ತಿರುವುದಂತೂ ಸತ್ಯ. ಕನ್ನಡದ ಅಂಕಿಗಳ ಬದಲಿಗೆ ಮತ್ತು ಜೊತೆಗೆ ವಾಹನಗಳಿಗೆ ನಾಮಫಲಕಗಳಲ್ಲಿನ ಸಂಖ್ಯೆಗಳನ್ನು ಕನ್ನಡ ಮತ್ತು ಇಂಗ್ಲೀಷ್‌ನ್ನು ಕಡ್ಡಾಯವಾಗಿ ಬರೆಯಬೇಕೆಂಬ ಆದೇಶವನ್ನು ಹೊರಡಿಸಿದ್ದನ್ನು ನಾವು ಇಲ್ಲಿ ನೆನೆಸಿಕೊಳ್ಳಬೇಕಾಗಿದೆ. **(ಅನುಬಂಧ ೯)** ಇಗಾಗಲೇ ಇಂಗ್ಲೀಷ್ ಅಂಕಿಗಳ ಪ್ರಭಾವದಿಂದ ಕನ್ನಡದ ಅಂಕಿಗಳು ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಿವೆ ಎನ್ನುವ ಸಂದರ್ಭದಲ್ಲಿ ಇಂತಹ ಆದೇಶಗಳನ್ನು ಸರ್ಕಾರವು ಹೊರಡಿಸಿ ದ್ವಂದ್ವವನ್ನು ನಿರ್ಮಾಣಮಾಡಿರುವುದು ಎಷ್ಟು ಸಮಂಜಸ ಎನ್ನುವುದು ಪ್ರಶ್ನೆಯಾಗಿದೆ.

ಕನ್ನಡ ಅಂಕಿಗಳನ್ನು ಉಳಿಸುವ, ಬಳಸುವ ಮತ್ತು ಬೆಳೆಸುವ ಮನೋಭಾವ ಪ್ರತಿಯೊಬ್ಬ ಕನ್ನಡಿಗನಿಗೂ ಮತ್ತು ಆಡಳಿತದಲ್ಲಿರುವ ನೌಕರವರ್ಗ ಮತ್ತು ಅಧಿಕಾರ ವರ್ಗದವರಿಗೂ ಬರಬೇಕಿದೆ.

ಪರಾಮರ್ಶನ ಗ್ರಂಥ

೧. ಅಶೋಕ ಕುಮಾರ ರಂಜೇರೆ, ೨೦೦೫, *ಭಾಷೆ ಮತ್ತು ಶಿಕ್ಷಣ*, ನಿಧಿ ಪ್ರಕಾಶನ, ಹೊಸಪೇಟೆ

೨. ಜವರೇಗೌಡ. ದೇ, ೨೦೦೭, *ಕನ್ನಡ ಚಿಂತನೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ನಾರಾಯಣ ಕೆ.ವಿ., ೨೦೦೭, *ಕನ್ನಡ ಜಗತ್ತು, ಅರ್ಧಶತಮಾನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ನಾರಾಯಣ ಕೆ.ವಿ., ೨೦೦೫, *ನಮ್ಮೊಡನೆ ನಮ್ಮ ನುಡಿ*, ಲೋಹಿಯಾ ಪ್ರಕಾಶನ, ಬಳ್ಳಾರಿ

೫. ಪಾರ್ಥಸಾರಥಿ. ಬಿ., ೨೦೦೭, *ಕನ್ನಡದಲ್ಲಿ ಆಡಳಿತ*, ಸಪ್ನ ಬುಕ್ ಹೌಸ್, ಬೆಂಗಳೂರು

೬. ಮಹದೇವಯ್ಯ ಪಿ., ೨೦೦೯, *ಕನ್ನಡ ಓದಿ ಬರೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ಮಹದೇವಯ್ಯ ಪಿ., ೨೦೦೮, *ಕನ್ನಡ ಮತ್ತು ಸಮಾಜ*, ಮೈಸೂರು.

೮. ಮಹದೇವಯ್ಯ ಪಿ., ೨೦೧೪, ಕನ್ನಡ *ನುಡಿ ಬಳಕೆಯ ನೆಲೆಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯. ರಾಮ್ ನವರತ್ನ, ೧೯೮೮, *ಸಿಬ್ಬಂದಿ ಆಡಳಿತ ಕನ್ನಡ ಕೈಪಿಡಿ*, ಜಂಗಾಡೆ ಬಿಲ್ಡಿಂಗ್, ಬೆಂಗಳೂರು

೧೦. ರಂಗಸ್ವಾಮಿ. ಡಿ.ಟಿ., ೧೯೮೬, *ವ್ಯವಹಾರ ಕನ್ನಡ*, ಗೀತಾ ಬುಕ್ ಹೌಸ್, ಮೈಸೂರು

೧೧. ವಿಠ್ಠಲಮೂರ್ತಿ.ಐ.ಎಂ., ೧೯೮೪, *ಆಡಳಿತದಲ್ಲಿ ಕನ್ನಡ*, (ಸಂ).೧. ಸಂಪಾದನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೧೨. ವೀರಭದ್ರಯ್ಯ.ಸಿ.ಎಂ., ೨೦೦೮, *ಆಡಳಿತ ಕಚೇರಿ ಕನ್ನಡ ಕೈಪಿಡಿ*, ಕರಾವಳಿ ಪ್ರಕಾಶನ, ಮಂಗಳೂರು

೧೩. ವೀರೇಶ ಬಡಿಗೇರ, ೨೦೦೧, *ಹಲಗೆ ಬಳಪ*, ಅಕ್ಷರ ಗ್ರಂಥಾಲಯ, ಬೆಂಗಳೂರು

೧೪. ಶಂಕರ ಭಟ್.ಡಿ.ಎನ್., ೧೯೯೫, **ಕನ್ನಡ ನುಡಿ ನಡೆದುಬಂದ ದಾರಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫. ಶೇಷಗಿರಿರಾವ್.ಎಲ್.ಎನ್., ೨೦೧೫, *ಕನ್ನಡ ತಾಯಿಗೆ ನುಡಿ ನಮನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಧ್ಯಾಯ : ನಾಲ್ಕು

ಆಡಳಿತ ಕನ್ನಡದ ಬರಹ/ಬಳಕೆಯಲ್ಲಿನ ದೋಷಗಳು

೪.೧. ಅಕ್ಷರ/ಶಬ್ದದೋಷಗಳು

೪.೨. ವಾಕ್ಯ ದೋಷಗಳು

೪.೩. ತಲೆಬರಹದಲ್ಲಿನ ದೋಷಗಳು/ ಶಿರೋನಾಮದ ದೋಷಗಳು

೪.೪. ಅರ್ಥದೋಷಗಳು

೪.೫. ಅಕ್ಷರದ ಸ್ಥಾನಪಲ್ಲಟದಿಂದುಟಾಗುವ ದೋಷಗಳು

೪.೬. ಪ್ರಕಟಣಾ ದೋಷಗಳು/ಮುದ್ರಣಾ ದೋಷಗಳು/ ಬೆರಳಚ್ಚು ದೋಷಗಳು

೪.೭. ಅನುವಾದ, ಭಾಷಾಂತರದ ಸಮಸ್ಯೆಗಳು

ಅಧ್ಯಾಯ : ನಾಲ್ಕು

ಆಡಳಿತ ಕನ್ನಡದ ಬರಹ/ಬಳಕೆಯಲ್ಲಿನ ದೋಷಗಳು

ಆಡಳಿತದಲ್ಲಿ ಕನ್ನಡದ ಬರಹ ಶುದ್ಧರೂಪದಲ್ಲಿ ನಡೆಯುತ್ತಿಲ್ಲವೆಂಬುದು, ಆಡಳಿತ ಕನ್ನಡದ ಬಳಕೆಯಲ್ಲಲ್ಲದೇ ಬೇರೆ ಸಂದರ್ಭದಲ್ಲಿಯೂ ಕನ್ನಡದ ಬಳಕೆ ಶುದ್ಧವಾಗಿ ಆಗುತ್ತಿಲ್ಲ ಎಂಬ ಅಪವಾದವಿದೆ. ಶಿಕ್ಷಣತಜ್ಞರ ಮತ್ತು ಭಾಷಾತಜ್ಞರ ವಿಚಾರಗಳ ಹಿನ್ನೆಲೆಯಲ್ಲಿ ನೋಡಿದಾಗ ಶುದ್ಧಬರಹ ಸ್ಪಷ್ಟ ಬಳಕೆ ಎಂಬುದು ಪ್ರಸ್ತುತ ಚರ್ಚೆಯಲ್ಲಿರುವ ವಿಷಯ. ಮಾತಿನ ಬರಹದ ರೂಪವನ್ನು ಶುದ್ಧಬರಹ ಎನ್ನಬೇಕೋ. ಪ್ರಸ್ತುತ ಬರವಣಿಗೆಯ ಬರಹವನ್ನು ಶುದ್ಧಬರಹ ಎನ್ನಬೇಕೊ ಎನ್ನುವ ವಿಚಾರಗಳು ಚರ್ಚೆಯಲ್ಲಿವೆ. ಈ ವಿಷಯದ ಸಮಸ್ಯೆಯನ್ನು ಇಲ್ಲಿ ಪ್ರಸ್ತಾಪಿಸದೆ ಆಡಳಿತದಲ್ಲಿ ಕನ್ನಡ ಬಳಕೆಯಲ್ಲಿರುವ ರಚನೆಯ ಭಾಷಾದೋಷಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದೇನೆ. ಆಡಳಿತದಲ್ಲಿ ಕನ್ನಡ ಬಳಕೆಯ ಸಂದರ್ಭಕ್ಕೆ ತಕ್ಕಂತೆ ಹೇಳುವುದಾದರೆ ಹಾಗೂ ಸಾಮಾನ್ಯ ಕನ್ನಡದ ಬಳಕೆಗೂ ಹೋಲಿಸುವುದಾದರೆ ಕೆಲವೊಂದು ಮುಖ್ಯ ಕಾರಣಗಳು ಕಂಡುಬರುತ್ತವೆ.

೧. ಆಡುಮಾತಿಗೂ ಮತ್ತು ಬರವಣಿಗೆಯ ರೂಪಕ್ಕೂ ಇರುವ ವ್ಯತ್ಯಾಸ ಹಾಗೂ ಸಾಮ್ಯತೆ ಇಲ್ಲದಿರುವುದು.

೨. ಬರಹದ ಖಚಿತ ರೂಪದ ಕಲ್ಪನೆ ಸರಿಯಾಗಿ ಇಲ್ಲದಿರುವುದು.

೩. ಕನ್ನಡದ ಬಗ್ಗೆ ಇರುವ ಉದಾಸೀನ ಮನೋಭಾವ.

೪. ಬೇರೆ ಭಾಷೆಗಳ ಪ್ರಭಾವ.

೫. ಪ್ರಾದೇಶಿಕ ಭಾಷೆಯಲ್ಲಿ ಭಿನ್ನತೆ

೬. ಗಡಿನಾಡ ಭಾಷೆಗಳ ಪ್ರಭಾವ ಮತ್ತು ಕೂಡಿಕೆ.

೭. ವ್ಯಾಕರಣ ಜ್ಞಾನದ ಕೊರತೆ

೮. ಭಾಷಾದೋಷಗಳನ್ನು ತಿದ್ದುವ ಮತ್ತು ಅದನ್ನು ತಿಳಿಹೇಳುವ ಪರಿಣಿತರ ಕೊರತೆ ಹಾಗೂ ಚರ್ಚೆ ಮತ್ತು ತರಬೇತಿಗಳು ನಡೆಯದೇ ಇರುವುದು.

೯. ಅನ್ಯ ಶಬ್ದಗಳ ಬೆರಕೆ.

೧೦. ಕಾಗುಣಿತಾಕ್ಷರಗಳ ತಪ್ಪು ಬಳಕೆ.

ಭಾಷೆಯ ಬಳಕೆಯ ಸಂದರ್ಭದಲ್ಲಿ ಸಮಸ್ಯೆ ಮತ್ತು ಸರಿಯಾಗಿ ಬಳಕೆಯಾಗದಿರುವುದಕ್ಕೆ ಕಾರಣಗಳನ್ನು ಹೇಳಬಹುದು. ಆದರೆ ವ್ಯಾಕರಣ ಬದ್ದವಾಗಿ ಭಾಷಾದೋಷಗಳನ್ನು ಕ್ರಮವಾಗಿ ವಿವರಿಸುವ ಪ್ರಯತ್ನ ಇಲ್ಲಿ ಮಾಡಲಾಗಿಲ್ಲ ಬದಲಾಗಿ ಬಳಕೆಯಾಗುವ ಅಕ್ಷರದೋಷ, ವಾಕ್ಯದೋಷ. ಅಕ್ಷರದ ಸ್ಥಾನ ಪಲ್ಲಟ, ಇತ್ಯಾದಿಗಳನ್ನು ಒಟ್ಟಾರೆಯಾಗಿ ಉದಾಹರಣೆಗಳ ಸಮೇತವಾಗಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಹಾಗಾಗಿ ಆಡಳಿತ ಕನ್ನಡದಲ್ಲಿ ಭಾಷೆಯ ಬಳಕೆಯು ಶುದ್ಧ ಮತ್ತು ಸ್ಪಷ್ಟವಾಗಿ ಇದ್ದಾಗ ಮಾತ್ರ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಸಾಧ್ಯ.

ಒಂದು ಭಾಷೆಯ ಬಳಕೆಯ ಸಂದರ್ಭದಲ್ಲಿ ಆ ಭಾಷೆಯು ಒಂದು ನಿಯಮಿತ ಚೌಕಟ್ಟಿನಲ್ಲಿ ಇರುತ್ತದೆ. ಹಾಗೂ ವ್ಯಾಕರಣಬದ್ದವಾಗಿ ಕಾರ್ಯನಿರ್ವಹಿಸುತ್ತದೆ. ವ್ಯಾಕರಣದ ಚೌಕಟ್ಟನ್ನು ದಾಟಿದಾಗ ಅನೇಕ ದೋಷಗಳು ಕಂಡುಬರುತ್ತವೆ. ಶಬ್ದದೋಷ, ಅರ್ಥದೋಷ, ಅಕ್ಷರದಸ್ಥಾನ ಬದಲಾವಣೆ ಅಥವಾ ಬದಲಾವಣೆಯ ದೋಷಗಳು, ಪ್ರಕಟಣಾ ದೋಷಗಳು ಇತ್ಯಾದಿ ದೋಷಗಳು ಬಳಕೆಯ ಸಂದರ್ಭದಲ್ಲಿ ಕಂಡುಬರುತ್ತವೆ.

ಭಾಷೆಯ ಬಳಕೆಯಲ್ಲಿ ದೋಷಗಳು ಕಂಡುಬರಬೇಕಾದರೆ ಭಾಷೆಯನ್ನು ಬಳಸುತ್ತಿರುವ ವ್ಯಕ್ತಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರವೂ ಕಾರಣವಾಗುತ್ತದೆ. ಭಾಷೆಯ ಬರಹದ ಸಂದರ್ಭದಲ್ಲಿ ಆಗುವ ದೋಷಗಳ ಹಿನ್ನೆಲೆಯನ್ನು ನೋಡಿದಾಗ

ಅ) ಭಾಷೆಯ ಬಳಕೆಯಲ್ಲಿನ ದೋಷವು ಪಾರಿಭಾಷಿಕ ಪದಗಳಲ್ಲಿ ಆಗುತ್ತಿದೆಯಾ?

ಆ) ಅಥವಾ ದೇಶಿಭಾಷೆಗಳಲ್ಲಿ ಆಗುತ್ತಿದೆಯಾ? (ಇಲ್ಲಿ ದೇಶಿ ಭಾಷೆಯನ್ನು ಕನ್ನಡಕ್ಕೆ ಸೀಮಿತಗೊಳಿಸಲಾಗಿದೆ.) ಎನ್ನುವ ಪ್ರಶ್ನೆಗಳು ಉದ್ಭವಿಸುತ್ತವೆ. ಆದರೆ ಅದಕ್ಕೆ ಭಿನ್ನವಾದ ಸಮಸ್ಯೆ ಏನೆಂದರೆ,

ಇ) ಬಹುಭಾಷಿಗರಿರುವ ಕರ್ನಾಟಕದಲ್ಲಿ ಬಳಸುವ ಭಾಷೆಗೆ ಸಂಬಂಧಿಸಿದಂತೆ ದೋಷಗಳು ಆಗುತ್ತಿದೆಯಾ? ಎನ್ನುವುದು ಸಮಸ್ಯೆಗಳು ನಮ್ಮ ಮುಂದಿವೆ.

ಈ ಮೇಲಿನ ೩ ಪ್ರಶ್ನೆಗಳು ನಮ್ಮನ್ನು ಬಳಕೆಯ ಸಂದರ್ಭದಲ್ಲಿ ಆಗಬಹುದಾದ ದೋಷಗಳು ಎಂದು ಎತ್ತಿ ತೋರಿಸುತ್ತವೆ. ಹಾಗಾದರೆ ಆಡಳಿತದಲ್ಲಿ ಬಳಕೆಯಾಗುವ ಕನ್ನಡ ಪದಗಳು ಮತ್ತು ಪಾರಿಭಾಷಿಕ ಪದಗಳನ್ನು ನಾವು ನೋಡಿದಾಗ.

ಆಡಳಿತದಲ್ಲಿ ಬಳಕೆಯಲ್ಲಿರುವ ಕನ್ನಡ ಮತ್ತು ಪಾರಿಭಾಷಿಕ ಪದಗಳು/ಶಬ್ದಗಳು ಉದಾಹರಣೆಗಾಗಿ,

ಅಡಕ	ಕಣ್ತಪ್ಪು ಅಡವು	ಕಳವಳ	ಅಳವಡಿಕೆ
ಕಾಯ್ದಿರಿಸು	ಆಡಳಿತ	ಕಿರುಕುಳ	ಆದಾಯ

ಕುಳ	ಇಡಿಗಂಟು	ಕೈವಾಡ	ಇಳುವರಿ
ಕೊರತೆ ಈಡೇರಿಸು	ಕೊಲೆ	ಎಚ್ಚರಿಕೆ	ಕೊಳೆಗೇರಿ
ಎದುರಾಳಿ	ಗಳಿಕೆ	ಒಕ್ಕಣಿ	ಗುತ್ತಿಗೆ
ಇಪ್ಪಿಗೆ	ಗೇಣಿ	ಒಪ್ಪೊತ್ತು	ಚಟುವಟಿಕೆ
ಕಂತು	ಚಾವಡಿ	ಕಣ್ಣೊರಸು	ಓಪ್ಪಣಿ
ಟೀಕೆ	ನೋಂದಣಿ	ತಂತಿ	ಪತ್ತೆದಾರಿ
ತಗಾದೆ	ಬಡತನ	ತಡೆಹಿಡಿ	ಬಡಿಗಲ್ಲು
ತನಿಖೆ	ಬಿಡುಗಡೆ	ತರಾಟೆ	ಬೇರ್ಪಡಿಸು
ತಲೆಮರಸು	ಮಾದರಿ	ತಾಳೆಮಾಡು	ಮನವಿ
ತಿದ್ದುಪಡಿ	ಮೀಸಲು	ತಿಳಿವಳಿಕೆ	ಮಾಹಿತಿ
ತೀರ್ಮಾನ	ಮುಂದುವರಿಸು	ತೆಗೆದು ಹಾಕು	ಮುಂಗಡ
ದಂಡು	ಮುಚ್ಚಳಿಕೆ	ದಬ್ಬಾಳಿಕೆ	ಮುಕ್ತಾಯ
ನಡತೆ	ವರದಿ	ನಡಾವಳಿ	ಮೊಂಡ
ನೀರಾವರಿ	ವಿನಾಯಿತಿ	ನೆಲಸಮ	ವರಮಾನ
ನೇಮಕ	ಹಣಕಾಸು	ವಿಳಾಸ	ಸುತ್ತೋಲೆ
ಶಿಸ್ತು	ಹುದ್ದೆ	ಸಂಬಳ	ಲೆಕ್ಕ
ಸರಕು	ಹುಟ್ಟುವಳಿ	ಸರಬರಾಜು	ಹುಂಡಿ
ಸಾಗಣೆ	ಬೇಜವಾಬ್ದಾರಿ	ಸಾಗುವಳಿ	ಹುರಿಯಾಳು.ಇತ್ಯಾದಿ.

ಅನ್ಯಭಾಷಾ ಮೂಲದ ಕನ್ನಡ ಪದಗಳು ಉದಾಹರಣೆಗಾಗಿ,

ಅಂದಾಜು	ಕಾರ್ಖಾನೆ	ಅಪೀಲು	ಕಾರ್ಡು
ಅಬಕಾರಿ	ಕುಮ್ಮಕ್ಕು	ಅಮಾನತ್ತು	ಕೂಪನ್
ಅರ್ಜಿ	ಕೇಡಿ	ಅಸಲು	ಕೇಸು
ಆಕ್ರಾಯಿ	ಕೈದಿ	ಇನಾಮು	ಕೋರ್ಟು
ಇನಾಮ್ತಿ	ಖಜಾನೆ	ಏಜೆಂಟು	ಖರ್ಚು
ಏಜೆನ್ಸಿ	ಖಾತರಿ	ಕಚೇರಿ	ಖಾತೆ
ಕಂಟ್ರಾಕ್ಟರು	ಖಾಯಂ	ಕಂಟ್ರಾಕ್ಟು	ಖುದ್ದು
ಕಂಪನಿ	ಖುಲಾಸೆ	ಕಮಿಷನ್ನು	ಖೂನಿ

ಕರಾರು	ಖೋಟಾ	ಕಾಗದ	ಗ್ಯಾರೆಂಟಿ
ಕಾಮಗಾರಿ	ಗುಮಾನಿ	ಗೆಜೆಟ್ಟು	ಜುಲ್ಮಾನೆ
ಗೈರುಹಾಜರಿ	ಝುಡ್ತಿ	ಘೇರಾವು	ಟಪಾಲು
ಚಲನ್ನು	ಟಿಕೆಟ್ಟು	ಚಾಲ್ತಿ	ಟೆಂಡರು
ಚಾಲೂ	ಡಿಕ್ರಿ	ಚೆಕ್ಕು	ವಾರಸುದಾರ
ಚೌಕಾಸಿ	ತಕರಾರು	ಛಡ್ ಸವಾಲು	ತಕಾವಿ
ಛಾಪಾಕಾಗದ	ತರಬೇತಿ	ಜಪ್ತಿ	ತಲಾಶು
ಜಮಾ	ತಾಬೆದಾರ	ಜಮೀನುದಾರ	ದರಖಾಸ್ತು
ಜಮೀನು	ದಸ್ತಗಿರಿ	ಜರೂರು	ದಸ್ತಾಮೇಜು
ಜಾಹಿರಾತು	ದಾಖಲೆ	ಜವಾಬ್ದಾರಿ	ದಾವಾ
ನಿಗಾ	ದಾಸ್ತಾನು	ಜಾರಿ	ನಕಲು
ನಿಯತ್ತು	ನಗದು	ನಮೂನೆ	ನಮೂದು
ಪರಾರಿ	ಬಾಬು, ಬಾಬ್ತು	ನಿಭಾಯಿಸು	ಬಿಡ್ಡು
ಪಾವತಿ	ಬಿಲ್ಲು	ಪಕ್ಕಾ	ಬೇನಾಮಿ
ಪುಸುಲಾಯಿಸು	ಬೇಲು	ಪಹಣಿ	ಹಾಜರಿ
ಫೈಲು	ಬ್ಯಾಂಕು	ಪ್ಯಾರಾ	ಭತ್ಯೆ
ಬಚಾಯಿಸು	ಮಂಜೂರು	ಫಸಲು	ವೋಚರು
ಬಟವಾಡೆ	ಮಹಜರು	ಫೈಸಲಾತಿ	ಮಾಜಿ
ಬಂದೀಖಾನೆ	ಮಾಫಿ	ಬಜೆಟ್ಟು	ಮಾಮೂಲಿ
ಬದಲಿ	ಮಾಲಿಕ	ಬಡ್ತಿ	ಹಾಲಿ
ರದ್ದು	ಮುಲಾಜು	ಬಂದೋಬಸ್ತು	ಮೆಮೋ
ರಸೀದಿ	ಮೊಕ್ಕಾಂ	ಬಾಕಿ	ಮೋಹರು
ರಾಜಿ	ಶಿಫಾರಸ್ಸು	ರವಾನೆ	ಷರತ್ತು
ರಿಪೇರಿ	ಸತಾಯಿಸು	ರಹದಾರಿ	ಸಹರದ್ದು
ಲೂಟಿ	ಸಲಹೆ	ರಾಜೀನಾಮೆ	ಸವಾರ
ಲೈಸೆನ್ಸು	ಸವಾಲು	ಲುಕ್ಸಾನು	ಸಾದಿಲ್ವಾರು
ವಸೂಲಿ	ಸಾಬೀತು	ಲೇವಾದೇವಿ	ಸೀಲು

ಜವಾಬು	ಸುಪರ್ದು	ವಕೀಲ	ಹಂಗಾಮಿ
ಜಾಮೀನು	ಹಕ್ಕು	ವಾರಂಟು	ಹರಕತ್ತು. ಇತ್ಯಾದಿ.

ಸದರಿ ಮೇಲ್ಕಂಡ ಪದಾವಳಿಗಳ ಪಟ್ಟಿಯನ್ನು ದೂರ ಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಇಂದ ಪ್ರಕಟಗೊಂಡ 'ಆಡಳಿತ ಕಚೇರಿ ಕಾರ್ಯ ಶಿಬಿರ ಕೈಪಿಡಿ' ಎನ್ನುವ ಕೃತಿಯ ಪುಟ ಸಂಖ್ಯೆ ೯೬-೯೭ರಿಂದ ನೇರವಾಗಿ ಎರವಲಾಗಿ ಪದಗಳ ವಿರಣೆಗಾಗಿ ಪಡೆಯಲಾಗಿದೆ. ಮೇಲಿನ ಪದಗಳನ್ನು ನೋಡಿದಾಗ ಭಾಷಿಕವಾಗಿ ಪದಗಳ ಬಳಕೆಯಲ್ಲಿ ಅನೇಕ ತಪ್ಪುಗಳನ್ನು ಆಡಳಿತದಲ್ಲಿ ಕನ್ನಡವನ್ನು ಬಳಸುವ ಸಂದರ್ಭದಲ್ಲಿ ಕಾಣುತ್ತೇವೆ ಹಾಗೂ ಅಂತಹ ತಪ್ಪುಗಳು ಅನರ್ಥಕ್ಕೆ ದಾರಿ ಮಾಡಿಕೊಡತ್ತವೆ.

ಕರ್ನಾಟಕದ ಪ್ರಾದೇಶಿಕ ಮತ್ತು ಭೌಗೋಳಿಕ ಪ್ರದೇಶಗಳಲ್ಲಿ ಬಳಸುವ ಕನ್ನಡದ ಬಳಕೆಯ ಹಿನ್ನೆಲೆಯಲ್ಲೂ ದೋಷಗಳಾಗುವುದನ್ನು ಕಾಣಬಹುದು. ಪ್ರಾದೇಶಿಕ ಭಿನ್ನತೆ, ಪಾರಿಭಾಷಿಕ ಪದ ಬಳಕೆ, ಬಹುಸಂಖ್ಯಾತರ ಪರಿಣಾಮ, ಬಹುಭಾಷಿಕರು ನೆಲೆಯೂರಿರುವ ಕರ್ನಾಟಕದಲ್ಲಿ ಸಹಜವಾಗಿ ಆಡಳಿತ ಕನ್ನಡದ ಬಳಕೆಯಲ್ಲಿ ಭಾಷಾ ದೋಷಗಳು ಕಂಡುಬರುತ್ತವೆ. ಎಲ್ಲಾ ಬಹುಭಾಷಿಗಳು ತಪ್ಪು ಮಾಡುತ್ತಾರೆಂದಲ್ಲ ಅಥವಾ ಇಲ್ಲೇ ಇರುವ ಕನ್ನಡಿಗರಿಂದ ತಪ್ಪು ಆಗುವುದಿಲ್ಲ ಎಂಬುದು ಸರಿಯಲ್ಲ, ಆದರೆ ಕಡಿಮೆ ಮಟ್ಟದಲ್ಲಿ ತಪ್ಪುಗಳು ಆಗುತ್ತದೆಂಬುವುದು ಸಮರ್ಥನೆ.

ಆಡಳಿತ ಕನ್ನಡದಲ್ಲಿ ಬರಹದ ಅಥವಾ ಬಳಕೆಯ ಸಂದರ್ಭದಲ್ಲಿ ಕಂಡುಬಂದ ದೋಷಗಳು

೧. ಅಕ್ಷರ/ಶಬ್ದದೋಷಗಳು

೨. ವಾಕ್ಯ ದೋಷಗಳು

೩. ತಲೆಬರಹದಲ್ಲಿನ ದೋಷಗಳು/ಶಿರೋನಾಮದ ದೋಷಗಳು

೪. ಅರ್ಥದೋಷಗಳು

೫. ಅಕ್ಷರದ ಸ್ಥಾನಪಲ್ಲಟದಿಂದುಂಟಾಗುವ ದೋಷಗಳು

೬. ಪ್ರಕಟಣಾ ದೋಷಗಳು/ಮುದ್ರಣಾ ದೋಷ/ ಬೆರಳಚ್ಚು ದೋಷಗಳು

೭. ಅನುವಾದ, ಭಾಷಾಂತರದ ಸಮಸ್ಯೆಗಳು

೪.೧. ಅಕ್ಷರ/ಶಬ್ದದೋಷಗಳು:

ಒಂದು ಶಬ್ದದಲ್ಲಿನ ಅಕ್ಷರಗಳಲ್ಲಿ ಆದ ದೋಷವು ಪದದ ಮೂಲ ಅರ್ಥವನ್ನು ಬದಲಾಯಿಸುವ ಸಂದರ್ಭವನ್ನುಂಟುಮಾಡುತ್ತವೆ. ಅಕ್ಷರದ ದೋಷವೇ ಇಡಿ ಆ ಶಬ್ದದ ತಪ್ಪು ತಿಳುವಳಿಕೆ ಅಥವಾ ಅದರ ಅರ್ಥವ್ಯತ್ಯಾಸವಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಇಂತಹ ಅಕ್ಷರ ಅಥವಾ ಶಬ್ದದೋಷಗಳನ್ನು ನಾವು ಸರಿಯಾದ ರೀತಿಯಲ್ಲಿ ಬದಲಾಯಿಸಿಕೊಳ್ಳಬೇಕಾಗಿದೆ. ಈ ಅಕ್ಷರ ಅಥವಾ ಶಬ್ದ ದೋಷಗಳು ಪ್ರಾದೇಶಿಕ ಭಾಷೆಗಳ ಹಿನ್ನೆಲೆಯಲ್ಲಿ ಆಗಿರಬಹುದು ಅಥವಾ ಬಹುಭಾಷಿಗರು ಬಳಸುವ ಆಡಳಿತ ಕನ್ನಡ ಬಳಕೆಯ ಸಂದರ್ಭದಲ್ಲಿ ಆಗಿರಬಹುದು. ಪ್ರಸ್ತುತ ಸಂದರ್ಭದಲ್ಲಿ ಅಲ್ಪಪ್ರಾಣ ಮತ್ತು

ಮಹಾ ಪ್ರಾಣಗಳ ಬಗ್ಗೆ ಒಂದು ದೊಡ್ಡ ಚರ್ಚೆಯೇ ಪ್ರಾರಂಭವಾಗಿದೆ. ಅಕ್ಷರ ಅಥವಾ ಶಬ್ದ ದೋಷಗಳ ಬಗ್ಗೆ ಬೇಕು ಬೇಡವೆಂದು ಹೇಳಲಾಗದು ಆದರೆ ಪ್ರಸ್ತುತ ಸಂದರ್ಭದಲ್ಲಿನ ವ್ಯವಸ್ಥೆಗಳಿಗನುಗುಣವಾಗಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ತಪ್ಪು ಬಳಕೆ	ಸರಿಯಾದ ಬಳಕೆ	ತಪ್ಪು ಬಳಕೆ	ಸರಿಯಾದ ಬಳಕೆ.
ಅಡಳಿತ	ಆಡಳಿತ	ಆವಾನಪತ್ರ	ಆಹ್ವಾನ ಪತ್ರ
ಯಲ್ಲಿಗೆ	ಎಲ್ಲಿಗೆ	ಹಾರಂಭ	ಆರಂಭ
ಅತವಾ	ಅಥವಾ	ಅಭ್ಯರ್ತಿ	ಅಭ್ಯರ್ಥಿ
ಪ್ರಬಂದ	ಪ್ರಬಂಧ	ಬಾಸೆ	ಭಾಷೆ
ಸಂಧರ್ಬ	ಸಂದರ್ಭ	ಶುಭಾಷಯ	ಶುಭಾಶಯ
ಯಿಲ್ಲ	ಇಲ್ಲ	ಬಾರತ	ಭಾರತ
ಅರಕೆ	ಹರಕೆ	ನೇತ್ರತ್ವ	ನೇತೃತ್ವ
ಅತ್ತಿರ	ಹತ್ತಿರ	ಕೂಲಂಕುಶ	ಕೂಲಂಕುಷ
ಸಬೆ	ಸಭೆ	ತಾಸಿಲ್ದಾರ	ತಹಶೀಲ್ದಾರ್
ಕರವೋಲೆ	ಕರೆಯೋಲೆ	ಆವಾಂತರ	ಅವಾಂತರ
ಸಬಿಕರು	ಸಭಿಕರು	ಅತ್ತಿರ	ಹತ್ತಿರ
ಆವಿನಹಟ್ಟಿ	ಹಾವಿನಹಟ್ಟಿ	ಓರಾಡು	ಹೋರಾಡು
ನಿರ್ದೆಶಕರು	ನಿರ್ದೇಶಕರು	ಸದಸ್ಯ	ಸದಸ್ಯರು
ಬರ್ತಾನೆ	ಬರುತ್ತಾನೆ, ಬರುತ್ತಾರೆ,	ಮಾತಾಡು	ಮಾತನಾಡು
ಅಧಿಕಾರಿ	ಅಧಿಕಾರಿಯವರು	ಕುತ್ಕೊ	ಕುಳಿತುಕೊಳ್ಳಿರಿ.

ಇವುಗಳನ್ನೂ ನೇರವಾಗಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿತ 'ಆಡಳಿತ ಕನ್ನಡ' ಕೃತಿಯಿಂದ ಪಡೆಯಲಾಗಿದೆ.

ಪ್ರಾದೇಶಿಕ ಭಿನ್ನತೆಯಲ್ಲಿಯೂ ಆಡಳಿತ ಕನ್ನಡದ ಬಳಕೆಯು ವಿಭಿನ್ನ ನೆಲೆಯಲ್ಲಿ ಬಳಕೆಯಾದ ಬರವಣಿಗೆಯನ್ನು ಕಾಣುತ್ತೇವೆ. ಇಲ್ಲಿ ಬಳಕೆಯಾಗುವ ಮಾತಿನ ರೂಪಕ್ಕೂ ಮತ್ತು ಬರವಣಿಗೆಯ ರೂಪಕ್ಕೂ ಬೇರೆಯಾಗಿರುವುದು ಕಂಡುಬರುತ್ತದೆ. ಇದರಲ್ಲಿ ಯಾವುದು ಶುದ್ಧರೂಪ ಎನ್ನುವ ದ್ವಂದ್ವ ನಮ್ಮನ್ನು ಕಾಡುತ್ತದೆ. ಉಡುಪಿ, ಮೈಸೂರು, ಧಾರವಾಡ, ಕಲಬುರ್ಗಿ, ಚಾಮರಾಜನಗರದ ಪ್ರದೇಶಗಳಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆ ಭಿನ್ನ ಭಿನ್ನ ನೆಲೆಯಾಗಿ ಕಂಡುಬಂದರೂ, ಈ ನಿಟ್ಟಿನಲ್ಲಿ ಬಳಸುವ ಆಡಳಿತ ಕನ್ನಡ ತಮಿಳು, ಮರಾಠಿ, ಉರ್ದು, ತೆಲುಗು ಭಾಷೆಗಳ ಶಬ್ದಗಳೂ ಸಹ ಆಡಳಿತ ಕನ್ನಡದಲ್ಲಿ ಸೇರಿಕೊಂಡಿರುವುದು ಕರ್ನಾಟಕದ ವಿವಿಧ ಗಡಿಭಾಗಗಳಲ್ಲಿ ಕಂಡುಬರುತ್ತದೆ.

ಅಂಕಿತ ನಾಮ, ಸಂಖ್ಯಾವಾಚಕ, ಕ್ರಿಯಾಪದ, ದ್ವಿರುಕ್ತಿ ದೋಷ ಹಾಗೂ ಅಕ್ಷರ ದೋಷ, ಗೌರವ ಸೂಚಕ ಪದಗಳಲ್ಲಿ ದೋಷ, ಅಲ್ಪಪ್ರಾಣ-ಮಹಾಪ್ರಾಣಗಳಲ್ಲಿ ಆಗುವ ದೋಷ, ಇತರೆ ದೋಷಗಳು ಸರ್ವೆಸಾಮಾನ್ಯವಾಗಿ ಆಡಳಿತ ಕನ್ನಡ ಬಳಕೆಯ ಸಂದರ್ಭದಲ್ಲಿ ಕಂಡುಬರುತ್ತವೆ. ಅಂತಹ ಕೆಲವೊಂದು ಉದಾಹರಣೆಗಳನ್ನು 'ಆಡಳಿತ ಕನ್ನಡ' ಪುಟ-೧೮೫ ರಿಂದ ೧೯೪ರವರೆಗಿನ ಉದಾಹರಣೆಗಳನ್ನು ಮತ್ತು 'ಆಡಳಿತ ಕಚೇರಿ ಕನ್ನಡ ಕೈಪಿಡಿ' ಯಿಂದ ಪುಟ-೨೫, ೩೪ ರಲ್ಲಿನ ಕೆಲವೊಂದು ಉದಾಹರಣೆಗಳನ್ನು ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ತಪ್ಪು ಬಳಕೆ	**ಸರಿಯಾದ ಬಳಕೆ**	**ತಪ್ಪು ಬಳಕೆ**	**ಸರಿಯಾದ ಬಳಕೆ.**
ವಂದು	ಒಂದು	ವಂದನೇ	ಒಂದನೆಯ
ಯೆರಡು	ಎರಡು	ಪ್ರತಮ ದರ್ಜೆ	ಪ್ರಥಮ ದರ್ಜೆ
ನಾಕು	ನಾಲ್ಕು	ಇರಿಯ ಶ್ರೇಣಿ	ಹಿರಿಯ ಶ್ರೇಣಿ
ಎರಡನೆ	ಎರಡನೆಯ	ಇರಿಯ ಸಾಯಕ	ಹಿರಿಯ ಸಹಾಯಕ
ಮೂರನೆ	ಮೂರನೆಯ	ನಾಲ್ಕನೆ	ನಾಲ್ಕನೆಯ
ಐದನೆ	ಐದನೆಯ	ಎಂಡನೆ	ಎಂಟನೆಯ
ಅರವತ್ನೇ ವರ್ಷ	ಅರವತ್ತನೆಯ ವರ್ಷ	ಐವತ್ನೇ ವರ್ಷ	ಐವತ್ತನೆಯ ವರ್ಷ
ಡಾವಣಗೇರೆ	ದಾವಣಗೆರೆ	ಬ್ಯಾಂಗ್ಳೂರ್	ಬೆಂಗಳೂರು
ಇಜಾಪುರ	ವಿಜಾಪುರ, ವಿಜಯಪುರ	ಟುಂಕೂರ್	ತುಮಕೂರು
ಮರ್ಕೆರ	ಮಡಿಕೇರಿ	ಮ್ಯಾಂಗ್ಳೂರ್	ಮಂಗಳೂರು
ಷೀಮೊಗ್ಗ	ಶಿವಮೊಗ್ಗ	ಹೂಬ್ಳಿ	ಹುಬ್ಬಳ್ಳಿ
ಸತ್ತ ಹೆಣ	ಹೆಣ	ಗಂಡು ಹುಡುಗ	ಹುಡುಗ
ಹೆಣ್ಣು ಹುಡುಗಿ	ಹುಡುಗಿ	ಮಹಿಳಾ ಸದಸ್ಯೆ	ಸದಸ್ಯೆ
ಒರದಿ	ವರದಿ	ಬಾಲಕೀಯರ	ಬಾಲಕಿಯರ
ಅರ್ತಾತ್	ಅರ್ಥಾತ್	ಫ್ರೌಢಶಾಲೆ	ಪ್ರೌಢಶಾಲೆ
ಅತಿತಿ	ಅಥಿತಿ	ಶಿತಿಲ	ಶಿಥಿಲ
ನಾಗರೀಕ	ನಾಗರಿಕ	ಭೋಧನೆ	ಬೋಧನೆ
ಸಾಲೆ	ಶಾಲೆ	ಸಿಕ್ಷಕ	ಶಿಕ್ಷಕ
ಖಡತ	ಕಡತ	ಮುಕ್ಯಾಧಿಕಾರಿ	ಮುಖ್ಯಾಧಿಕಾರಿ
ಪ್ರಭಂದಕ	ಪ್ರಬಂಧಕ	ಪೈಲು	ಫೈಲು

ಕಾಪಿ	ಕಾಫಿ	ಮದ್ಯಂತರ	ಮಧ್ಯಂತರ
ಇವತ್ತು	ಈ ದಿನ	ಚಿನ್ನೆ	ಚಿಹ್ನೆ
ನಕಾಸೆ	ನಕಾಶೆ, ನಕ್ಷೆ	ಪಾಣಿ	ಪಹಣಿ
ಕಮ್ ಪ್ಯೂಟರ್	ಕಂಪ್ಯೂಟರ್	ಪೂರ್ವಾನ್ನ	ಪೂರ್ವಾಹ್ನ
ಬಿತ್ತಿಪತ್ರ	ಭಿತ್ತಿಪತ್ರ	ಲಿಕಿತ	ಲಿಖಿತ
ನ್ಯೂನ್ಯತೆ	ನ್ಯೂನತೆ	ಅಂಥಹ	ಅಂತಹ
ತಾಲೂಕ್	ತಾಲೂಕು	ಸರ್ಕಿಪಿಕೇಟ್	ಸರ್ಟಿಫಿಕೇಟ್
ಪೋಲೀಸ್	ಪೊಲೀಸ್	ಕರೀದಿಸು	ಖರೀದಿಸು
ವಿದಾನ ಸೌಧ	ವಿಧಾನಸೌಧ	ಮದ್ಯಾನ	ಮಧ್ಯಾಹ್ನ
ಜಾತ್ಯಾತೀತ	ಜಾತ್ಯತೀತ	ಚುನವಣೆ	ಚುನಾವಣೆ
ಮೋಜಣೀ	ಮೋಜಣಿ	ಇಮಾನ	ವಿಮಾನ
ಸದ್ರಿ	ಸದರಿ	ವಿಳಂಭ	ವಿಳಂಬ
ಎತಿರಿಕ್ತವಾಗಿ	ವ್ಯತಿರಿಕ್ತವಾಗಿ	ಅಲ್ಲಾಬಾದ್	ಅಲಹಾಬಾದ್
ಆನಿವಾಸಿ	ಅನಿವಾಸಿ	ಆಯುಖ್ತ	ಆಯುಕ್ತ
ನಿರ್ಭಂಧ	ನಿರ್ಬಂಧ	ಅಪ್ತ	ಆಪ್ತ
ಅದ್ಯಾದೇಶ	ಅಧ್ಯಾದೇಶ	ಅದೀಕ್ಷಕ	ಅಧೀಕ್ಷಕ
ಅಪರಾನ್ಹ	ಅಪರಾಹ್ನ	ಅದಿನಿಯಮ	ಅಧಿನಿಯಮ
ಅದಿಕೃತ	ಅಧಿಕೃತ	ಅಬ್ಯಾಸ	ಅಭ್ಯಾಸ
ಅದ್ಯಕ್ಷ	ಅಧ್ಯಕ್ಷ	ಆರಂಬಿಸು	ಆರಂಭಿಸು
ಪ್ರಾರಂಬ	ಪ್ರಾರಂಭ	ಆಧ್ಯತೆ	ಆದ್ಯತೆ
ಅನುಚ್ಚೇದ	ಅನುಚ್ಛೇದ	ಅನುಮೋಧನೆ	ಅನುಮೋದನೆ
ಉಲ್ಲೆಖಿಟ	ಉಲ್ಲೇಖ	ಉಧ್ಯಮ	ಉದ್ಯಮ
ಗೋಷಣೆ	ಘೋಷಣೆ	ಕಾಸಗಿ	ಖಾಸಗಿ
ಉಲ್ಲಂಗನೆ	ಉಲ್ಲಂಘನೆ	ಗ್ರಹ ಮಂಡಲಿ	ಗೃಹ ಮಂಡಳಿ
ಗಂಬೀರ	ಗಂಭೀರ	ಗಂಟಾಘೋಶ	ಘಂಟಾಘೋಷ
ಜಾಗ್ರತದಳ	ಜಾಗೃತ ದಳ	ಜಾಹಿರಾತು	ಜಾಹೀರಾತು
ಜಂಟೀ	ಜಂಟಿ	ಜ್ನಾಪನಾಪತ್ರ	ಜ್ಞಾಪನಪತ್ರ

ನಡಾವಳಿ	ನಡವಳಿ	ನಗಧೀಕರಣ	ನಗದೀಕರಣ
ಪ್ರಬಾರ	ಪ್ರಭಾರ	ಪ್ರತಿನಿದಿ	ಪ್ರತಿನಿಧಿ
ಬಾಶೆ	ಭಾಷೆ	ರುಣ	ಋಣ
ಬತ್ಯೆ	ಭತ್ಯೆ	ಭಧ್ರತೆ	ಭದ್ರತೆ
ಭಡ್ತಿ	ಬಡ್ತಿ	ಯತಾಪ್ರತಿ	ಯಥಾಪ್ರತಿ
ರಸಿದಿ	ರಸೀದಿ	ಲೇಕನ	ಲೇಖನ
ವೈಧ್ಯ	ವೈದ್ಯ	ವಿಶೇಶ	ವಿಶೇಷ
ವಿಶಯ	ವಿಷಯ	ಶೀರ್ಶಿಕೆ	ಶೀರ್ಷಿಕೆ
ಹಾರ್ಧಿಕ	ಹಾರ್ದಿಕ	ವಿಸ್ವ	ವಿಶ್ವ
ವಿಬಾಗೀಯ	ವಿಭಾಗೀಯ	ವ್ಯವಸ್ತಾಪಕ	ವ್ಯವಸ್ಥಾಪಕರು
ವಿಶಾದ	ವಿಷಾದ	ಸಹಾಯದನ	ಸಹಾಯಧನ
ಸಂಬಂದ	ಸಂಬಂಧ	ಸಂಧರ್ಬ	ಸಂದರ್ಭ
ಸಂಭೋದನೆ	ಸಂಬೋಧನೆ	ಸಾಮರ್ತ್ಯ	ಸಾಮರ್ಥ್ಯ
ಸ್ತಾಯಿಸಮಿತಿ	ಸ್ಥಾಯಿಸಮಿತಿ	ಸ್ವೀಕ್ರುತಿ	ಸ್ವೀಕೃತಿ
ದುರಾದೃಷ್ವ	ದುರದೃಷ್ಟ	ಪುನಹ	ಪುನಃ
ಸ್ವತಹ	ಸ್ವತಃ	ಶ್ರುದ್ದೆ	ಶ್ರದ್ಧೆ
ವೃತ	ವ್ರತ	ಏಶಿಯಾ	ಏಷ್ಯಾ
ಖುಶಿ	ಖುಷಿ	ಪ್ರದಾನ	ಪ್ರಧಾನ

ಈ ರೀತಿಯಲ್ಲಿ ಶುದ್ಧ ಬರಹ ಆಗುತ್ತಿಲ್ಲ ಎನ್ನುವುದು ಆಡಳಿತದಲ್ಲಿ ಕನ್ನಡ ಬಳಕೆ ಸಂದರ್ಭದಲ್ಲಿ ಕಂಡುಬರುತ್ತದೆ.

೪.೨. ವಾಕ್ಯ ದೋಷಗಳು;

ಆಡಳಿತ ಕನ್ನಡದ ಬಳಕೆಯ ಸಂದರ್ಭದಲ್ಲಿ ಯಥೇಚ್ಚವಾಗಿ ವಾಕ್ಯದೋಷಗಳು ಕಂಡುಬರುತ್ತವೆ. ಪ್ರತಿಯೊಂದು ಪತ್ರದಲ್ಲಿ ವಾಕ್ಯಗಳ ಜೋಡಣೆ, ವಾಕ್ಯದ ತಿರುವು–ಮುರುವು, ವಾಕ್ಯದ ಅರ್ಥವ್ಯತ್ಯಾಸ ಕೆಡುವಿಕೆ, ವಾಕ್ಯದ ರಚನೆ ಸರಿಯಾಗಿ ಆಗದಿರುವುದು ಕಂಡುಬರುತ್ತಿದ್ದು ವಾಕ್ಯದ ಅರ್ಥವು ಕೆಡುವ ಸಾಧ್ಯತೆಗಳಂತೆ ವಾಕ್ಯಗಳು ರಚನೆಯಾಗುತ್ತಿರುವುದು ಗಮನಕ್ಕೆ ಬರುತ್ತವೆ.

ಒಂದು ವಾಕ್ಯಕ್ಕೆ ಸಂಪೂರ್ಣವಾದ ಸರಿಯಾದ ಅರ್ಥಬರಬೇಕಾದರೆ ವಾಕ್ಯದ ರಚನೆ ಸರಿಯಾಗಿ ಹಾಗೂ ಅರ್ಥಪೂರ್ಣವಾಗಿ ಇರಬೇಕು. ವಾಕ್ಯದಲ್ಲಿ ಶಬ್ದಗಳ ಜೋಡಣೆ, ಚಿಹ್ನೆಗಳ ಬಳಕೆ ಮಹತ್ವಪೂರ್ಣವಾದ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಒಂದು ವಾಕ್ಯವು ಪರಿಪೂರ್ಣವಾದ

ವಾಕ್ಯವಾಗಿ ಪರಿಣಮಿಸಬೇಕಾದರೆ, ವಾಕ್ಯವು ದೋಷಮುಕ್ತವಾಗಿರಬೇಕು ಮತ್ತು ಸರಿಯಾದ ಅರ್ಥವನ್ನು ನೀಡುವಂತಿರಬೇಕು, ವಾಕ್ಯದ ಸರಿಯಾದ ಜೋಡಣೆ, ವಾಕ್ಯದ ಅರ್ಥದಲ್ಲಿ ಗೊಂದಲ, ಕರ್ಕಶ ವಾಕ್ಯಾಂಶ, ವಾಕ್ಯದ ಅರ್ಥ ಬೇರೆಯಾಗುವುದು, ವಾಕ್ಯ ಸಂದರ್ಭಕ್ಕೆ ತಕ್ಕಂತೆ ಬೇರೆಯಾಗುವುದು ಈ ತರಹದ ವಾಕ್ಯಗಳು ಆಡಳಿತ ಕನ್ನಡ ಬಳಕೆಯ ಸಂದರ್ಭದಲ್ಲಿ ಕಂಡುಬರುತ್ತಿದ್ದು ಅವು ಶುದ್ಧ ವಾಕ್ಯದ ರಚನೆಗೆ ಸಮಸ್ಯೆಯನ್ನುಂಟುಮಾಡುತ್ತವೆ. ಒಂದು ವಾಕ್ಯಕ್ಕೆ ತನ್ನದೇ ಆದ ಅರ್ಥ ಬರಬೇಕಾದರೆ ಅದಕ್ಕೆ ತನ್ನದ ಆದ ವಾಕ್ಯ ಜೋಡಣೆ ಮತ್ತು ಅರ್ಥಪೂರ್ಣವಾಕ್ಯವಾಗಿದ್ದು ದೋಷಗಳು ಇಲ್ಲದಂತಿರಬೇಕು.

ಉದಾಹರಣೆಗಾಗಿ ವಿವರಿಸುವುದಾದರೆ; ಸಹಜವಾಗಿ ಅಕ್ಷರ ಅಥವಾ ಪದಗಳ ಅಥವಾ ವಾಕ್ಯಗಳ ಬಳಕೆಯ ಸಂದರ್ಭದಲ್ಲಿ ಎಲ್ಲಾ ಕಡೆಗಳಲ್ಲೂ ಜನಜನಿತವಾದ ವಾಕ್ಯವಿದಾಗಿದೆ.

* ನಗರಧ ವರಮಾನ ಕಡಿಮೆ. ವಾಕ್ಯ ದೋಷಕ್ಕೆ ಅದರ ಬರವಣಿಗೆ ಬೇರೆ ರೀತಿಯಲ್ಲಿ ಬರೆದಾಗ
* ನಗರದವರ ಮಾನ ಕಡಿಮೆ. ಎಂದು ವಾಕ್ಯ ರಚನೆಯಾದಲ್ಲಿ ಆ ವಾಕ್ಯದ ಅರ್ಥ ತಪ್ಪಾಗಿ ತನ್ನದೇ ಅರ್ಥವನ್ನು ಕಲ್ಪಿಸಿಕೊಟ್ಟು ಅರ್ಥ ವ್ಯತ್ಯಾಸವಾಗಿ ಅನರ್ಥಕ್ಕೆ ಎಡೆಯುಂಟು ಮಾಡಿಕೊಡುತ್ತದೆ. ಈ ನಿಟ್ಟಿನಲ್ಲಿ ವಾಕ್ಯದ ಜೋಡಣೆ ಮತ್ತು ಬರಹದ ಸಂದರ್ಭದಲ್ಲೂ ಬಹು ಎಚ್ಚರಿಕೆಯನ್ನು ವಹಿಸಿ ತಪ್ಪು ವಾಕ್ಯಗಳು ರಚನೆ ಆಗದಂತೆ ನೋಡಿಕೊಳ್ಳಬೇಕು.

ಒಂದು ಅರ್ಥಪೂರ್ಣ ವಾಕ್ಯಕ್ಕೆ ಕರ್ತೃ–ಕರ್ಮ–ಕ್ರಿಯಾಪದಗಳು ಕ್ರಮವಾಗಿ ಬರಬೇಕು ವಾಕ್ಯಗಳು ಉದ್ದವಾದಷ್ಟು ತಪ್ಪುಗಳು ಹೆಚ್ಚು ಸಂಭವಿಸುವ ಕಲ್ಪನೆಯೂ ಇದೆ. ಆದರೆ ವಾಕ್ಯವು ಎಷ್ಟೇ ಉದ್ದವಾಗಿದ್ದರೂ ಅದು ಅರ್ಥಪೂರ್ಣವಾಗಿ ಸ್ಪಷ್ಟವಾಗಿ ರಚನೆಗೊಂಡಿದ್ದರೆ ಉತ್ತಮ ವಾಕ್ಯ ವಾಗುತ್ತದೆ. ರಚನೆಗೊಳ್ಳುವ ವಾಕ್ಯವು ಹೀಗೆ ಇರಬೇಕು, ಇದೇ ನಿಯಮದಲ್ಲಿರಬೇಕು, ಎನ್ನುವುದು ನನ್ನ ವಾದವಾಗಲೀ ಅಥವಾ ಚರ್ಚೆಯಾಗಲಿ ಅಲ್ಲ. ವಾಕ್ಯವು ಅರ್ಥಪೂರ್ಣವಾಗಿದ್ದು ಸರಿಯಾಗಿ ರಚನೆಗೊಂಡಿದ್ದರೆ ಸಾಕು ಎನ್ನುವುದು ಅಭಿಪ್ರಾಯ.

ಬಳಸುವ ವಾಕ್ಯದಲ್ಲಿ ತಪ್ಪು ಬಳಕೆ ತಿರುವು–ಮುರುವು ಬರೆಯುವಿಕೆ, ಗೊಂದಲ ವಾಕ್ಯದ ಸೃಷ್ಟಿ ಈ ರೀತಿಯ ದೋಷಗಳಿದ್ದು ಇವೆಲ್ಲವು ಸೇರಿ ವಾಕ್ಯದ ಅರ್ಥವನ್ನು ಕೆಡುವಂತಿರಬಾರದು. ಈ ರೀತಿಯಲ್ಲಿ ವಾಕ್ಯಗಳ ಬಳಕೆಯಲ್ಲಿ ದೋಷಗಳನ್ನು ನಾವು ಕಾಣುತ್ತೇವೆ ಮತ್ತು ಆ ದೋಷಗಳು ಆಗದಂತೆ ಸಂದರ್ಭಕ್ಕೆ ತಕ್ಕಂತೆ ಲೇಖನ ಚಿಹ್ನೆಗಳ ಬಳಕೆ ಔಚಿತ್ಯವಿರುವೆಡೆ ಸರಿಯಾದ ಪದಗಳ ಬಳಕೆಯ ಮೂಲಕ ವಾಕ್ಯರಚನೆ ಸಂಪೂರ್ಣಗೊಳ್ಳಬೇಕಿದೆ.

ಅಸ್ಪಷ್ಟ ವಾಕ್ಯ, ಅಸ್ಪಷ್ಟ ಟಿಪ್ಪಣಿಗಳ ವಾಕ್ಯಗಳು ಹಾಗೂ ಜಾರಿಕೊಳ್ಳುವ ಸ್ವಭಾವದಿಂದ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಬರೆಯುವ ಟಿಪ್ಪಣಿ ಅಥವಾ ವಾಕ್ಯಗಳು ಬರಹದ ಸಂದರ್ಭದಲ್ಲೇನೋ ಸರಿಯಾಗಿ ಕಂಡುಬಂದರೂ ಅದು ಆಡಳಿತದ ದೃಷ್ಟಿಕೋನದಲ್ಲಿ ಸರಿಯಲ್ಲ. ಹಾಗೂ ವಾಕ್ಯಗಳ ರಚನೆಯಲ್ಲಿ ಗೊಂದಲ ಉಂಟಾಗಬಾರದು ಹಾಗೂ ವಾಕ್ಯವೂ ಗೊಂದಲಮಯವೂ ಆಗಿರಬಾರದು.

ಉದಾಹರಣೆಗಾಗಿ :-

೧. ನೀಡಲಾದ ಪೂರ್ಣ ಕೆಲಸವನ್ನು ಮೂರು ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು.

ನೀಡಲಾದ ಕೆಲಸವನ್ನು ಮೂರು ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು.

೨. ಮೇಲಧಿಕಾರಿಗಳಿಂದ ಮೊದಲೇ ಪೂರ್ವಾನುಮತಿ ಪಡೆಯದೆ ರಜಯ ಮೇಲೆ ಹೋಗಿದ್ದೀರಿ.

ಮೇಲಧಿಕಾರಿಗಳಿಂದ ಪೂರ್ವಾನುಮತಿ ಪಡೆಯದೆ ರಜೆಯ ಮೇಲೆ ಹೋಗಿದ್ದೀರಿ.

೩. ನನಗೆ ಮೂರು ತಿಂಗಳು ರಜೆಯನ್ನು ಮಂಜೂರು ಮಾಡಲು ಕೋರಿದೆ.

ಮೂರು ತಿಂಗಳು ರಜೆಯನ್ನು ನನಗೆ ಮಂಜೂರು ಮಾಡಲು ಕೋರಿದೆ.

೪. ರಾಷ್ಟ್ರಗೀತೆಯನ್ನು ಬರೆದಾತ ರವೀಂದ್ರ ನಾಥ ಠಾಗೂರು.

ರಾಷ್ಟ್ರಗೀತೆಯನ್ನು ಬರೆದವರು ರವೀಂದ್ರ ನಾಥ ಠಾಗೂರರು.

೫. ನಮ್ಮ ಹೊಲಕ್ಕೆ ಹಾಕಲು ಹತ್ತು ಕೆ.ಜಿ. ವೀರ್ಯ ಕೊಡಿ.

ನಮ್ಮ ಹೊಲಕ್ಕೆ ಹಾಕಲು ಹತ್ತು ಕೆ.ಜಿ. ಯೂರಿಯಾ ಕೊಡಿ.

೬. ಸತ್ತ ಹೆಣವನ್ನು ಹುಗಿದ ನಂತರ ಶವ ಪರೀಕ್ಷೆಗೆ ಅರ್ಜಿ ಸಲ್ಲಿಸಿದರು.

ಹೆಣವನ್ನು ಹೂತ ನಂತರ ಶವ ಪರೀಕ್ಷೆಗೆ ಅರ್ಜಿ ಸಲ್ಲಿಸಿದರು.

೭. ಮಹಿಳಾ ಆಸಕ್ತ ಅಭ್ಯರ್ಥಿಗಳು ಕೆಲಸಕ್ಕೆ ಅರ್ಜಿ ಸಲ್ಲಿಸಬಹುದು.

ಆಸಕ್ತ ಮಹಿಳಾ ಅಭ್ಯರ್ಥಿಗಳು ಕೆಲಸಕ್ಕೆ ಅರ್ಜಿ ಸಲ್ಲಿಸಬಹುದು.

೮. ಮಹಿಳೆಯರ ಹೆರಿಗೆ ವಾರ್ಡಿನಲ್ಲಿ ನೀರಿನ ಸರಬರಾಜು ಸರಿಯಾಗಿ ಆಗುತ್ತಿಲ್ಲ.

ಹೆರಿಗೆ ವಾರ್ಡಿನಲ್ಲಿ ನೀರಿನ ಸರಬರಾಜು ಸರಿಯಾಗಿ ಆಗುತ್ತಿಲ್ಲ.

ಕೆಲವೊಂದು ಸಂದರ್ಭದಲ್ಲಿ ವಾಕ್ಯಗಳಲ್ಲಿ ವಿಶೇಷ್ಯ ಮತ್ತು ವಿಶೇಷ್ಯಣಗಳು ಬಹುಮುಖ್ಯವಾದ ಸ್ಥಾನವನ್ನು ಪಡೆದುಕೊಂಡಿದ್ದು ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ. ಇವುಗಳ ಬಳಕೆಯ ಬಗ್ಗೆ ಸರಿಯಾಗಿ ತಿಳಿದಿರಬೇಕು. ಆದರೆ ಪ್ರಸ್ತುತ ಸಂದರ್ಭದಲ್ಲಿ ಉನ್ನತಮಟ್ಟದಿಂದಲೂ ಇವುಗಳ ಬಳಕೆ ಸರಿಯಾಗಿ ಆಗದಿರುವುದು ಕಂಡುಬರುತ್ತದೆ ಮತ್ತು ಸರಿಯಾದ ಬಳಕೆ ಮಾಡಿ ತೋರಿಸಿದರೂ ಅದು ಸರಿಯಾದುದಲ್ಲವೆಂಬ ಅಪವಾದಗಳೂ ಕೇಳಿಬರುತ್ತವೆ ಹಾಗೂ ಬಂದದ್ದುಂಟು, ಹೀಗಾಗಿ ಇವುಗಳ ಬಳಕೆ ಇಂದಿಗೂ ಅದಲು-ಬದಲಾಗಿರುವುದನ್ನು ಕಾಣಬಹುದು. ವಿಶೇಷ್ಯ ಮತ್ತು ವಿಶೇಷ್ಯಣಗಳ ಬಳಕೆ ಸರಿಯಾಗಿ ಆಗಬೇಕಾಗಿದೆ. ಕೆಲವೊಂದು ಉದಾಹರಣೆಗಳನ್ನು ಈ ಕೆಳಗೆ ನೀಡಲಾಗಿದೆ.

೧. ಉಪ ಅರಣ್ಯ ಸಂರಕ್ಷಣಾಧಿಕಾರಿ.

ಉಪ-ಸಂರಕ್ಷಣಾಧಿಕಾರಿ, ಪ್ರಾದೇಶಿಕ ಅರಣ್ಯ ವಿಭಾಗ.

ಅಥವಾ ಅರಣ್ಯ ಉಪಸಂರಕ್ಷಣಾಧಿಕಾರಿ,

೨. ಸರ್ಕಾರಿ ಬಾಲಕರ ವಸತಿ ನಿಲಯ

ಬಾಲಕರ ಸರ್ಕಾರಿ ವಸತಿ ನಿಲಯ.

೩. ಪ್ರಧಾನ ಕಂದಾಯ ಇಲಾಖೆ ಕಾರ್ಯದರ್ಶಿ.

ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ.

೪ ಬಳ್ಳಾರಿಯ ಸಹಾಯಕ ಆಯುಕ್ತರು, ಬಳ್ಳಾರಿ.

ಸಹಾಯಕ ಆಯುಕ್ತರು, ಬಳ್ಳಾರಿ.

೫. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಸಾಮಾಜಿಕ ಅರಣ್ಯ ವಿಭಾಗ.

ಸಹಾಯಕ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ.

ಇಂತಹ ಹಲವಾರು ಉದಾಹರಣೆಗಳನ್ನು ಪರಿಶೀಲಿಸಲಾಗಿ, ಅಧಿಕಾರಿಗಳ ಹುದ್ದೆಯ ಜೊತೆಗೆ ಇಲಾಖೆಯ ಹೆಸರನ್ನು ಸೇರಿಸಿ ಹೇಳುವ ಪರಿಪಾಠ ಇನ್ನೂ ಹಾಗೆಯೇ ಉಳಿದುಕೊಂಡು ಬಂದಿದೆ. ಈ ವಿಚಾರವನ್ನು ಕೆಲವೊಂದು ಇಲಾಖೆಗಳಲ್ಲಿ ಮಾತ್ರ ಕಾಣುತ್ತೇವೆ. ಉಳಿದ ಇಲಾಖೆಗಳು ಸ್ಪಷ್ಟವಾಗಿ ಅಧಿಕಾರಿಯ ಹುದ್ದೆಯನ್ನು ಮೊದಲು ತಿಳಿಸಿ ಆನಂತರದಲ್ಲಿ ಇಲಾಖೆಯ ಹೆಸರನ್ನು ಸೂಚಿಸಿರುವುದು ಸರಿಯಾದ ಕ್ರಮವಾಗಿದೆ.

ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

ಉಪ–ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ.

ಉಪ–ನಿರ್ದೇಶಕರು, ತೋಟಗಾರಿಕೆ ಇಲಾಖೆ.

ಈ ಮೇಲಿನ ದೋಷಗಳಿಗೆ ಆಡಳಿತದಲ್ಲಿ ಅನುಸರಿಸುತ್ತಿರುವ ಹಳೆಯ ವಿಧಾನಗಳು ಅಥವಾ ಹಳೆಯ ಪದ್ಧತಿಗಳು ಮತ್ತು ಅದೇ ಪದ್ದತಿಗಳ ಮುಂದುವರಿಕೆಗೆ ಕಾರಣವಾಗಿದೆ. ಅವುಗಳಿಗೆ ಬದಲಾವಣೆ ತರದೇ ಇರುವುದು ಅಥವಾ ಅವುಗಳು ಸರಿಯೇ? ತಪ್ಪೇ? ಎಂದು ಪರಿಶೀಲಿಸುವ ಗೋಜಿಗೆ ಹೋಗದಿರುವುದೇ ಈ ದೋಷಗಳಿಗೆ ಮುಖ್ಯ ಕಾರಣಗಳು ಎನ್ನಬಹುದು. ಈ ಮೇಲೆ ವಿವರಿಸಿರುವ ವಾಕ್ಯ ದೋಷಗಳು ಆಗದಂತೆ ತಡೆಯಬೇಕಾದರೆ, ಪ್ರತಿಯೊಂದು ವಾಕ್ಯಗಳು ಸ್ಪಷ್ಟತೆಯನ್ನು ಒಳಗೊಂಡಿರಬೇಕು ಹಾಗೂ ವ್ಯಕ್ತಪಡಿಸುವ ವಿಷಯವನ್ನು ಗೊಂದಲಗಳಿಲ್ಲದೇ, ಉಚ್ಚಾರದ ದೋಷಗಳಿಲ್ಲದೇ, ಆಡುಮಾತಿನ, ಅಲಂಕಾರಿಕ ಪದಗಳ ಬಳಕೆ ಮಾಡದೇ ವಾಕ್ಯವನ್ನು ರಚನೆಮಾಡಬೇಕು.

ಕೆಲವೊಂದು ವಾಕ್ಯಗಳಲ್ಲಿ ಶಬ್ದಗಳನ್ನು ಬಳಸುವ ಸಂದರ್ಭದಲ್ಲಿ ಬೇರೆ ಭಾಷೆಯ ಪದಗಳು ಹಾಗೂ ಪಾರಿಭಾಷಿಕ ಪದಗಳು ಸೇರಿಕೊಳ್ಳುತ್ತವೆ. ಅಂತಹ ಪದಗಳು ವಾಕ್ಯದ ಮಧ್ಯದಲ್ಲಿ ಬರಬಾರದು ಒಂದುವೇಳೆ ವಾಕ್ಯಗಳ ಮಧ್ಯ–ಮಧ್ಯದಲ್ಲಿ ಬೇರೆ ಭಾಷೆಯ ಪದಗಳು ಬಂದಲ್ಲಿ ಆ ವಾಕ್ಯವು ಶುದ್ಧ ಬರಹದ ಅಥವಾ ಬರವಣಿಗೆ ರೂಪದ ಸ್ವಾರಸ್ಯವನ್ನು ಕಳೆದುಕೊಳ್ಳುತ್ತದೆ.

ಉದಾಹರಣೆಗಾಗಿ

೧. ಅತಿಥಿಗಳಿಗೆ ಸರ್ಕಾರಿ ವಸತಿ ನಿಲಯದಲ್ಲಿ ೨ ರೂಮ್ ರಿಸರ್ವ್‌ಮಾಡಲಾಗಿದೆ.

ಅತಿಥಿಗಳಿಗೆ ಸರ್ಕಾರಿ ವಸತಿ ನಿಲಯದಲ್ಲಿ ಎರಡು ಕೋಣೆಗಳನ್ನು ಕಾಯ್ದಿರಿಸಲಾಗಿದೆ.

೨. ಸ್ಟ್ರೈಕ್ ದಿನ ಕೆಲಸಕ್ಕೆ ಬಾರದ ನೌಕರರಿಗೆ ಸಂಬಳ ಕೊಡಲಾಗುವುದಿಲ್ಲ.
ಮುಷ್ಕರದ ದಿನ ಕೆಲಸಕ್ಕೆ ಗೈರುಹಾಜರಾದ ನೌಕರರಿಗೆ ವೇತನ ಕೊಡಲಾಗುವುದಿಲ್ಲ.

೩. ಕೇಸ್ ವರ್ಕರ್ ಅಧಿಕಾರಿಗೆ ಫೈಲ್ ಕೊಟ್ಟನು.
ವಿಷಯನಿವಾಹಕ ಅಧಿಕಾರಿಗೆ ಕಡತವನ್ನು ಕೊಟ್ಟನು.

೪. ನಿನ್ನೆ ನಮ್ಮ ಸ್ಕೂಲಿನಲ್ಲಿ ನಡೆದ ಡ್ರಾಮಾ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.
ನಿನ್ನೆ ನಮ್ಮ ಶಾಲೆಯಲ್ಲಿ ನಡೆದ ನಾಟಕ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

೫. ಕಾರ್ಪೋರೇಷನ್ ಆರು ವರ್ಷಗಳಲ್ಲಿ ಪಡೆದಿರುವ ಸಾಲವನ್ನು ಹಿಂತಿರುಗಿಸತಕ್ಕದ್ದು ಇಲ್ಲವಾದಲ್ಲಿ ಲೀಗಲ್ ಕ್ರಮ ಕೈಗೊಳ್ಳಲಾಗುವುದು.
ನಿಗಮವು ಆರು ವರ್ಷಗಳಲ್ಲಿ ಪಡೆದಿರುವ ಸಾಲವನ್ನು ಹಿಂತಿರುಗಿಸತಕ್ಕದ್ದು, ಇಲ್ಲವಾದಲ್ಲಿ ಕಾನೂನು/ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು.

೬. ನೀರಿನ ತೆರಿಗೆ ಶಂಬರ್ ರೂಪಾಯಿಗಳನ್ನು ಕಟ್ಟತ್ತಕ್ಕದ್ದು
ಒಂದು ನೂರು ರೂಪಾಯಿಗಳ ನೀರಿನ ತೆರಿಗೆಯನ್ನು ಕಟ್ಟತಕ್ಕದ್ದು.

ಈ ರೀತಿಯಾಗಿ ಅನ್ಯ ಭಾಷಾಪದಗಳು ಹಾಗೂ ಆಡುಮಾತಿನ ಪದಗಳು ವಾಕ್ಯದಲ್ಲಿ ಸೇರಿಕೊಂಡು ವಾಕ್ಯದ ಸೌಂದರ್ಯವನ್ನು ಹಾಳು ಮಾಡುವುದು ಮತ್ತು ಆಡಳಿತ ಕನ್ನಡದ ಬಳಕೆಯನ್ನು ನಿರ್ಲಕ್ಷಿಸುವುದು ಹಲವಾರು ವಾಕ್ಯಗಳಿಂದ ಕಂಡುಬರುತ್ತದೆ. ಮೇಲೆ ವಿವರಿಸಲಾದ ಉದಾಹರಣೆಗಳು ಈ ವಿಷಯದಲ್ಲಿ ವಿಷಯ ನಿರ್ವಾಹಕರ ಎರಡು ಸ್ವಭಾವಗಳು ಕೆಲವೊಂದು ದೋಷಗಳಿಗೆ ಕಾರಣವಾಗುತ್ತವೆ.

ಅ) ಕಡತ ಮೇಜಿನ ಮೇಲಿಂದ ತೊಲಗಿದರೆ ಸಾಕು ಎನ್ನುವ ಸ್ವಭಾವ ಒಂದೆಡೆಯಾದರೆ.

ಬ) ವಿಷಯ ನಿರ್ವಾಹಕರ ಏಕಮುಖೀಯ ವರ್ತನೆ ಹಾಗೂ ಅವರ ನೀರಸ ಮನೋಭಾವ. ಇನ್ನೊಂದೆಡೆಯದ್ದು ಹಾಗೂ ಹಿಂದಿನಿಂದಲೂ ಹಳೇಮಾದರಿಯಲ್ಲಿ ನಡೆದುಕೊಂಡುಬಂದ ಆಡಳಿತಕ್ಕೆ ಜೋತು ಬಿದ್ದಿರುವುದು ಸ್ಪಷ್ಟವಾಗಿರುವುದು ಕಂಡುಬರುತ್ತದೆ. ಆದರೆ ಅವುಗಳೆಲ್ಲವೂ ಹೊಸ ಮಾದರಿಯಲ್ಲಿ ಬದಲಾವಣೆಯಾಗಬೇಕಿದೆ ಹಾಗೂ ಆಡಳಿತದಲ್ಲಿ ಕನ್ನಡದ ಬಳಕೆ ದೋಷಗಳಿಲ್ಲದಂತೆ ಆಗಬೇಕಿದೆ.

೪.೩. ತಲೆಬರಹದಲ್ಲಿನ ದೋಷಗಳು/ಶಿರೋನಾಮದ ದೋಷಗಳು:

ಸಾಮಾನ್ಯವಾಗಿ ಒಂದು ಪತ್ರ ಅಥವಾ ಯಾವುದೇ ಬರಹಕ್ಕೆ ಸಂಬಂಧಿಸಿದಂತೆ ನಡೆಯುವ ಮುಖ್ಯ ವಿಚಾರಗಳ ಬಗ್ಗೆ ಹೇಳಲಾಗುವ ವಿಷಯಗಳ ಒಂದು ಸಂಕ್ಷಿಪ್ತ ರೂಪವೇ ಈ ತಲೆಬರಹ. ಉದಾಹರಣೆಗಾಗಿ ವರದಿ, ಜ್ಞಾಪನಾ ಪತ್ರ, ಅಧಿಸೂಚನೆ ಇತ್ಯಾದಿ ಪತ್ರದಲ್ಲಿ ನಮೂದಿಸಿಲಾದ ಇಂತಹ ಬರಹಗಳನ್ನು ತಲೆಬರಹಗಳೆಂದು ಕರೆಯಲಾಗುತ್ತಿದೆ. ಈ ತಲೆಬರಹಗಳಲ್ಲಿಯೂ ಅನೇಕ ರೀತಿಯಲ್ಲಿ ಸರಿಯಾದ ಬಳಕೆ ಆಗದಿರುವುದು ಕಂಡುಬರುತ್ತವೆ.

ಪಾರಿಭಾಷಿಯ ಪದಗಳಿಗೆ ಪರ್ಯಾಯವಾಗಿ ಕನ್ನಡದಲ್ಲಿ ಅರ್ಥಗಳನ್ನು ಕಂಡುಕೊಂಡಿದ್ದರೂ ಅವುಗಳ ಬಳಕೆ ಆಗುತ್ತಿಲ್ಲವೆಂಬುದು ಕೊರಗು ಹಾಗೂ ಅವುಗಳ ಬಳಕೆ ಆಗುತ್ತಿದ್ದರೂ ಸರಿಯಾಗಿ ಆಗುತ್ತಿಲ್ಲವೆಂಬುದು ಸಮಸ್ಯೆಯಾಗಿದೆ. ಟೆಂಡರ್, ನೋಟೀಸು, ನೋಟಿಫಿಕೇಶನ್, ಮೆಮೋ, ಆಫಿಸ್ ಮೆಮೋರೆಂಡಮ್, ಪ್ರೋಸಿಡಿಂಗ್ಸ್, ಕೊಟೇಶನ್, ಎಫ್.ಐ.ಆರ್. ಅಪ್ಲಿಕೇಶನ್ ಇತ್ಯಾದಿಗಳು. ಪಾರಿಭಾಷಿಕ ಪದಗಳಿಗೆ ತನ್ನದೇ ಆದ ಅರ್ಥವನ್ನು ಪಾರಿಭಾಷಿಕ ಪದಕೋಶಗಳಲ್ಲಿ ನೀಡಲಾಗಿದ್ದು ಅವು ಚಲಾವಣೆಗೆ ಬಂದಿದ್ದರೂ ಅವುಗಳನ್ನು ಬಳಸುವ ಗೋಜಿಗೆ ನೌಕರರು ಹಾಗೂ ಅಧಿಕಾರಿಗಳು ಹೋಗುತ್ತಿಲ್ಲ ಎಂಬುದೊಂದು ವಿಷಾದನೀಯ ಸಂಗಂತಿಯಾಗಿದೆ.

ಪತ್ರದ ತಲೆಬರಹವು ಕಚೇರಿಯ ಹೆಸರು, ಸ್ಥಳ, ದಿನಾಂಕ, ಕಡತದ ಸಂಖ್ಯೆ, ಮುಖ್ಯವಿಷಯ, ಹಾಗೂ ಉಲ್ಲೇಖಗಳನ್ನು ಒಳಗೊಂಡಿರುವವುಗಳನ್ನು ತಲೆಬರಹಗಳೆಂದು ಪರಿಗಣಿಸಿ ಪ್ರಸ್ತುತ ಅಧ್ಯಯದಲ್ಲಿ ಚರ್ಚಿಸಲಾಗಿದೆ. ಇವೆಲ್ಲವುಗಳು ಪತ್ರದ ತಲೆಬರಹದ ಭಾಗಗಳೇ ಆಗಿವೆ. ಇವುಗಳ ಬಳಕೆಯಲ್ಲಿ ಪ್ರತಿಯೊಂದು ಸಂದರ್ಭದಲ್ಲಿ ದೋಷಗಳನ್ನು ಕಾಣಬಹುದು. ಪತ್ರದ ಸಂಖ್ಯೆ ಬರೆಯುವಲ್ಲಿನ ದೋಷಗಳು, ಕಚೇರಿ ಹೆಸರುಗಳ ನಮೂದನೆಯಲ್ಲಿನ ದೋಷಗಳು, ವಿಷಯದ ಸಂಕ್ಷಿಪ್ತ ರೂಪದಲ್ಲಿನ ದೋಷ, ಉಲ್ಲೇಖದ ಮಂಡನೆಯಲ್ಲಿ ದೋಷಗಳು, ಈ ರೀತಿಯಲ್ಲಿ ದೋಷಗಳು ಕಂಡುಬರುತ್ತವೆ. ಆದರೆ ಅದು ಅಕ್ಷರ ದೋಷ, ವಾಕ್ಯದೋಷ, ಬರಹದ ದೋಷ ಅಥವಾ ಮುದ್ರಣದ ದೋಷ ಯಾವುದೇ ಇರಲಿ ದೋಷ ದೋಷಗಳೇ ಹೊರತು ದೋಷಗಳಲ್ಲ ಎಂದು ಹೇಳಲಾಗದು. ಉದಾಹರಣೆಗಾಗಿ:

೧. ಎಲೆಕ್ಷನ್ ನೋಟೀಸು:– ಬಳ್ಳಾರಿ ಟವನ್ ಮುನ್ಸಿಪಾಲಟಿ ಉಪಾಧ್ಯಕ್ಷರ ಸ್ಥಾನಕ್ಕೆ ನಡೆಸುವ ಚುನಾವಣೆ ಬಗ್ಗೆ.

೨. ನೋಟಿಫಿಕೇಶನ್:– ಕಲಂ–೧೭ರಡಿ ನೋಟಿಫಿಕೇಶನ್ ಹೊರಡಿಸುವ ಕುರಿತು.

೩. ನೋಟೀಸು:– ಕಾರಣ ಕೇಳುವ ನೋಟೀಸು.

೪. ಪರ್ಫಾಮಗಳು:–ಮಾಸಿಕ ವರದಿಗಳನ್ನು ನಿಗಧಿತ ಫಾರಂಗಳಲ್ಲಿ ತುಂಬಿ ಕಳುಹಿಸುವ ಕುರಿತು.

೫. ಕ್ಲೇಮ್ ಅಪ್ಲಿಕೇಶನ್:–ತಮ್ಮ ಕ್ಲೇಮ್ ಅಪ್ಲಿಕೇಶನ್ ಈ ಕಚೇರಿಗೆ ಸಲ್ಲಿಕೆಯಾಗದಿರುವ ಕುರಿತು.

೬. ಸೆಟ್ಲಮೆಂಟ್ ನೋಟೀಸು:–ರಾಮಘಡ ಸೆಟ್ಲಮೆಂಟ್ ಕಾರ್ಯ ತ್ವರಿತಗತಿಯಲ್ಲಿ ಮುಗಿಸುವ ಕುರಿತು.

೭. ಗೆಜಟ್‌ನೋಟಿಫಿಕೇಶನ್:– ಕಚೇರಿಯ ನೋಟಿಫಿಕೇಶನ್ ಗೆಜಟ್‌ನಲ್ಲಿ ಹಾಕುವ ಕುರಿತು.

೮. ಇನ್ಸಪೆಕ್ಷನ್ ರಿಪೋರ್ಟ:– ಇನ್ಸಪೆಕ್ಷನ್ ರಿಪೋರ್ಟ ಸಲ್ಲಿಸುವ ಕುರಿತು.

೯. ಪ್ರೋಸಿಡಿಂಗ್ಸ್:– ಪ್ರೋಸಿಡಿಂಗ್ಸ್ ಸಲ್ಲಿಕೆ ಕುರಿತು.

೧೦. ಸರ್ವೆರಿಪೋರ್ಟ: ಅಳತೆಮಾಡಲಾದ ಸರ್ವೆರಿಪೋರ್ಟ ಸಲ್ಲಿಕೆ ಕುರಿತು.

ಈ ರೀತಿಯಲ್ಲಿ ಹಲವಾರು ಉದಾಹರಣೆಗಳು ದಿನನಿತ್ಯದ ಆಡಳಿತದಲ್ಲಿ ದೊರಕುತ್ತವೆ. ಈ ಪ್ರಕಾರದ ದೋಷಗಳು ಪತ್ರದಲ್ಲಿ ಕಂಡುಬರುವ ತಲೆಬರಹದ ದೋಷಗಳಾಗಿವೆ. ಇಲ್ಲಿಯೂ ಸಹ

ಅನೇಕ ಸಮಸ್ಯೆಗಳನ್ನು ಕಾಣುತ್ತೇವೆ. ಪತ್ರದ ಮೇಲೆ ನಮೂದಾಗುವ ಪತ್ರಗಳ ಸಂಖ್ಯೆಯಲ್ಲಿ ದೋಷಗಳು. ಕಡತಗಳಿಗೆ ಸಂಖ್ಯೆಗಳ ನೀಡಿಕೆಯ ಮೂಲ ಉದ್ದೇಶವೇ ಬೇರೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಪತ್ರಗಳ ಸಂಖ್ಯೆಯು ಹೊಸ ಹೊಸ ತಿರುವುಗಳನ್ನು ಪಡೆದು ಶೇಕಡ ೭೫ ರಷ್ಟು ತನ್ನ ಉದ್ದೇಶದ ಸ್ವರೂಪವನ್ನೇ ಬದಲಾಯಿಸಿಕೊಂಡಿದೆ. ಎನ್ನಬಹುದು. ಇವುಗಳ ವಿಸ್ತೃತವಾದ ವಿವರಣೆಯನ್ನು ಕಡತ ಮತ್ತು ಟಿಪ್ಪಣಿಗಳ ಉಪ ಅಧ್ಯಾಯದಲ್ಲಿ ವಿವರಿಸಲಾಗಿದೆ ಇಲ್ಲಿ ಮತ್ತೊಮ್ಮೆ ವಿವರಿಸುವ ಅಗತ್ಯವಿಲ್ಲವೆಂಬುದು ನನ್ನ ಭಾವನೆ.

ಒಂದು ಪತ್ರದ ಅಥವಾ ವರದಿಯ ಅಥವಾ ಪಂಚನಾಮೆಯ ಇತ್ಯಾದಿಗಳ ಮುಖ್ಯವಾದ ಅಂಶವೇ ಆ ಪತ್ರದ ತಲೆಬರಹ ಅಥವಾ ಶೀರೊನಾಮವಾಗಿರುತ್ತದೆ. ಒಂದು ಪತ್ರದ ಶಿರೋನಾಮದಲ್ಲಿಯೇ ಇಡಿಯಾದ ಆ ಪತ್ರದ ಅರ್ಥವನ್ನು ನಾವು ಕಾಣಬಹುದಾಗಿದೆ. ಹೀಗಾಗಿ ಪತ್ರದ ಶಿರೋನಾಮವು ಆ ಪತ್ರಕ್ಕೆ ಮುಖ್ಯವಾದ ಅಂಶವಾಗಿರುವುದು ಸತ್ಯಸಂಗತಿ. ಪತ್ರದ ಶಿರೋನಾಮಗಳು ಇಂದು ಬದಲಾಗಬೇಕಾದ ವಾಸ್ತವಸಂಗತಿ ಎದುರಾಗಿದೆ ಎಂದರೆ ತಪ್ಪಾಗಲಾರದು. ಎಲ್ಲಾಭಾಗಗಲ್ಲಿಯೂ ಎಲ್ಲಾ ಇಲಾಖೆಗಳಲ್ಲಿಯೂ ಇವುಗಳ ಬಳಕೆಯನ್ನು ನಿರ್ಲಕ್ಷಿಸಲಾಗುತ್ತಿದೆ ಎನ್ನುವುದು ನನ್ನ ವಾದವಲ್ಲ, ಆದರೆ ಬಳಕೆಯು ಸಮರ್ಥವಾಗಿ ಆಗುತ್ತಿಲ್ಲ ಎನ್ನುವುದು ಪ್ರಸ್ತುತ ಸಂದರ್ಭದಲ್ಲಿಯ ಪ್ರಶ್ನೆ.

ಒಂದು ಪತ್ರದಲ್ಲಿನ ಶಿರೋನಾಮ ಆ ಪತ್ರದ ವಿಷಯವನ್ನು ಒಳಗೊಂಡಿರುವ ಹಿನ್ನೆಲೆಯಲ್ಲಿ ಪತ್ರದಲ್ಲಿನ ವಿಷಯದ ಅಂಕಣವನ್ನು ನಾವು ಪ್ರಸ್ತುತ ಸಂದರ್ಭದಲ್ಲಿ ಶಿರೋನಾಮದ ಉಪ ವಿಭಾಗ ಅಥವಾ ಮುಂದುವರೆದ ಭಾಗವೆಂದು ನನ್ನ ಅಧ್ಯಯನದಲ್ಲಿ ಸಮರ್ಥಿಸಿಕೊಂಡಿದ್ದೇನೆ. ಅದಲ್ಲದೇ ಪತ್ರದ ಮೇಲಿನ ಕಚೇರಿಯ ಹೆಸರು ಮತ್ತು ವಿಳಾಸವನ್ನು ಪತ್ರದ ಶಿರೋನಾಮದ ಹಿನ್ನೆಲೆಯಲ್ಲಿ ಹೊರಡಿಸಲಾದ ಕಚೇರಿಯ ಸಾಂಕೇತಿಕ ವಿಚಾರವೆಂದು ಸ್ವೀಕರಿಸಲಾಗಿದೆ.

ಇಂದಿಗೂ ತಲೆಬರಹಕ್ಕೆ ಸಂಬಂಧಿಸಿದಂತೆ, ಕಮ್ಯುಟೆಡ್ ಲೀವ್, ರಿಸ್ಟ್ರಿಕ್ಟೆಡ್ ಹಾಲಿಡೆ, ಸರೆಂಡರ್ ಲೀವ್ ಎನ್‌ಕ್ಯಾಶ್‌ಮೆಂಟ್, ಚಕ್ಕ್, ಕೊಟೇಶನ್, ಮುಂತಾದ ರೀತಿಯಲ್ಲಿ ಪತ್ರದ ಶಿರೋನಾಮಗಳನ್ನು ನಾವು ಕಾಣುತ್ತೇವೆ. ಹೀಗೆ ಪತ್ರಗಳ ಮೇಲೆ ಬರೆಯುತ್ತಿರುವುದು ಇಂದಿಗೂ ಕಾಣಸಿಗುತ್ತದೆ. ಈ ತರಹದ ಬರವಣಿಗೆಗಳು ಆಡಳಿತ ಕನ್ನಡಕ್ಕೆ ಸೂಕ್ತವಲ್ಲ.

೪.೪ ಅರ್ಥ ದೋಷಗಳು:

ಕೆಲವೊಂದು ಸಂದರ್ಭದಲ್ಲಿ ಸಂದರ್ಭಕ್ಕೆ ತಕ್ಕಂತೆ ಅಕ್ಷರಗಳನ್ನು ಅಥವಾ ಶಬ್ದಗಳನ್ನು ಬಳಸಲಾಗುತ್ತದೆ. ಬಳಸುವ ಶಬ್ಧಗಳನ್ನು ಅಥವಾ ಅಕ್ಷರಗಳನ್ನು ತಪ್ಪೆಂದು ನಾವು ಹೇಳಲಾಗದು ಆದರೆ ಅವುಗಳ ಪ್ರಯೋಗ ಪ್ರಸ್ತುತ ಸಂದರ್ಭಕ್ಕೆ ತಕ್ಕಂತೆ ಬಳಕೆಯ ಹಿನ್ನೆಲೆಯಲ್ಲಿ ಸರಿಯಾಗಿರುತ್ತವೆ. ಅವುಗಳು ವಾಕ್ಯಕ್ಕೆ ಸರಿಹೊಂದಿಕೊಂಡು ಕಾರ್ಯನಿವಾಹಣಾ ವಾಕ್ಯಗಳಾಗಿ ಅರ್ಥವನ್ನು ಕೊಡುತ್ತವೆ. ಅರ್ಥವ್ಯತ್ಯಾಸವಾಗದಂತೆ ಬರೆಯತಕ್ಕದ್ದಲ್ಲದೆ ಹೊರತಾಗಿ ವಾಕ್ಯಕ್ಕೆ ಸರಿಯಾಗಿ ಹೊಂದಿಕೊಳ್ಳುವಂತೆ ಸರಿಯಾಗಿ ಬಳಕೆ ಮಾಡತಕ್ಕದ್ದು.

ಉದಾಹರಣೆಗಾಗಿ.

ಅಗಲು–ಹಗಲು: ತಾಯಿಯಿಂದ ಮಗು **ಅಗಲಿತು.**

ಹಗಲಿನಲ್ಲಿ ಕಾರ್ಯರಂಭ ಮಾಡತಕ್ಕದ್ದು

ಸಂಗ–ಸಂಘ: ವೇಶ್ಯೆಯರ **ಸಂಗ** ಮಾಡಿದರೆ ಏಡ್ಸ್ ಬರುವ ಸಾಧ್ಯತೆಯುಂಟು.

ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಸಂಘಗಳನ್ನು ಹೆಚ್ಚಾಗಿ ಸ್ಥಾಪಿಸಬೇಕು.

ಎಮ್ಮೆ–ಹೆಮ್ಮೆ: **ಎಮ್ಮೆ**ಯ ಹಾಲಿನಲ್ಲಿ ಕೊಬ್ಬಿನ ಅಂಶ ಹೆಚ್ಚಿರುತ್ತದೆ.

ವಿಜಯನಗರ ಸಾಮ್ರಾಜ್ಯ ಈ ನಾಡಿನ **ಹೆಮ್ಮೆಯ** ಪ್ರತೀಕ.

ಆದರ–ಹಾದರ: ನಾಯಿ **ಆದರ**ದ ಪ್ರಾಣಿಯಾಗಿದೆ.

ಹಾದರ ಒಂದು ಸಾಮಾಜಿಕ ಪಿಡುಗು

ಅಗೆ–ಹಗೆ : ಭೂಮಿಯನ್ನು **ಅಗೆ**ದು ಒಳಚರಂಡಿ ವ್ಯವಸ್ಥೆಯನ್ನು ನಿರ್ಮಿಸಬೇಕು.

ಪರಸ್ಪರರಲ್ಲಿರುವ **ಹಗೆ**ತನದ ಕಾರಣ ಇಬ್ಬರೂ ಕೊನೆಯಲ್ಲಿ ಸಾವನ್ನಪ್ಪಿದರು.

ಇದೇ ರೀತಿಯಾಗಿ ಹಲವಾರು ಸಂದರ್ಭಕ್ಕೆ ತಕ್ಕಂತೆ ಅರ್ಥವ್ಯತ್ಯಾಸವಾಗುವ ಪದಗಳ ಬಳಕೆ ಆಡಳಿತ ಕನ್ನಡದಲ್ಲಿ ಕಂಡುಬರುತ್ತವೆ. ಆ ಬಳಕೆಯಾಗುವ ಅಕ್ಷರ ಅಥವಾ ಶಬ್ದಗಳ ಬಳಕೆಯ ಪ್ರಯೋಗ ಸರಿಯಾಗಿ ಆಗಬೇಕಿದೆ 'ಆಡಳಿತ ಕನ್ನಡ ಕಾರ್ಯಶಿಬಿರ ಕೈಪಿಡಿ'ಯ ಪುಸ್ತಕದ **೯೯**ನೇ ಪುಟ ಮತ್ತು 'ಆಡಳಿತ ಕನ್ನಡ' ಪುಸ್ತಕದ ಪುಟ ಸಂಖ್ಯೆ **೧೯೮–೧೭೭**ರಲ್ಲಿ ವಿವರಿಸಿದಂತೆ ಪದಗಳ ಬಳಕೆಯಾಗಬೇಕೆಂದು ತಿಳಿಯಪಡಿಸಿರುತ್ತಾರೆ. ಅದನ್ನು ನೇರವಾಗಿ ಪಡೆದು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಉದಾಹರಣೆಗಾಗಿ.

ಅಕ್ಕು = ಜೀರ್ಣವಾಗು	ಹಕ್ಕು = ಅಧಿಕಾರಯುತ
ಅಗೆ = ತೋಡುವುದು	ಹಗೆ = ಶತ್ರು
ಆದರ = ಪ್ರೀತಿ	ಹಾದರ = ವ್ಯಭಿಚಾರ
ಉಟ್ಟು = ಧರಿಸು	ಹುಟ್ಟು = ಜನನ
ಏರು = ಹತ್ತು	ಹೇರು = ರಾಶಿ, ಹೊರಸು
ಒಟ್ಟು = ಮೊತ್ತ, ಸಮೂಹ	ಹೊಟ್ಟು = ತೌಡು, ಸಿಪ್ಪೆ
ಒಂದು = ಸಂಖ್ಯೆ	ಹೊಂದು = ಪಡೆ, ಸೇರು
ಬರ = ಬರಗಾಲ	ಭರ = ವೇಗ
ಎಮ್ಮೆ = ಪ್ರಾಣಿ	ಹೆಮ್ಮೆ = ಪ್ರತಿಷ್ಠೆ, ಗೌರವ
ಸಂಗ = ಸೇರುವುದು	ಸಂಘ = ಸಂಘಟನೆ ಇತ್ಯಾದಿ

ವಾಕ್ಯಗಳಲ್ಲಿ ಅರ್ಥ ಅನರ್ಥಗಳಾಗದಂತೆ ಪದಗಳನ್ನು ಬಳಸಬೇಕಾಗಿದೆ ಹಾಗೂ ಬಳಕೆಯ ಸೂಕ್ಷ್ಮತೆಗಳನ್ನು ಗಮನದಲ್ಲಿಟ್ಟುಕೊಂಡು ವಿಷಯ ನಿರ್ವಾಹಕರು ಕಾರ್ಯ ನಿರ್ವಹಿಸಬೇಕಾಗುತ್ತದೆ.

೪.೫. ಅಕ್ಷರದ ಸ್ಥಾನ ಪಲ್ಲಟದಿಂದಾಗುವ ದೋಷಗಳು:

ಬರವಣಿಗೆಯಲ್ಲಿ ಅಕ್ಷರಗಳ ಸರಿಯಾದ ಕ್ರಮ ಬಹು ಮಹತ್ವದ ಸ್ಥಾನವನ್ನು ಹೊಂದಿರುತ್ತದೆ. ಅಕ್ಷರವು ತನ್ನ ಸ್ಥಾನ ಪಲ್ಲಟ ಅಥವಾ ಅದಲು ಬದಲಾಗುವುದನ್ನು ಅಕ್ಷರದ ಸ್ಥಾನಪಲ್ಲಟ ದೋಷವೆಂದು ಕರೆಯುತ್ತೇವೆ. ಅಕ್ಷರದ ಸ್ಥಾನ ಪಲ್ಲಟ ಮತ್ತು ಸ್ಥಾನದ ಬದಲಾವಣೆ, ಅಕ್ಷರಗಳಲ್ಲಿ ಆಗದ ಸರಿಯಾದ ಜೋಡಣೆ, ಅಥವಾ ಅಕ್ಷರಗಳಲ್ಲಿ ಸ್ಥಾನ ಬದಲಾವಣೆಯಾದ ಸಂದರ್ಭದಲ್ಲಿ ಬದಲಾವಣೆಯಾದ ಅಕ್ಷರದ ಸ್ಥಾನವು ಪರಿಪೂರ್ಣವಾದ ಶಬ್ದದ ಅರ್ಥವನ್ನು ಬದಲಾಯಿಸಿಬಿಡುತ್ತದೆ. ಹೀಗಾಗಿ ಅಕ್ಷರದ ಸ್ಥಾನ ಪಲ್ಲಟವೂ ಆಗದಂತೆ ಎಚ್ಚರವಹಿಸಬೇಕಾಗಿದೆ. ಅಕ್ಷರ ಬರವಣಿಗೆಯ ಸಂದರ್ಭದಲ್ಲಿ ತಪ್ಪಾಗದಂತೆ ನೋಡಿಕೊಳ್ಳಬೇಕಾಗಿದೆ. ಅಕ್ಷರದ ಬದಲಿಗೆ ಬೇರೊಂದು ಅಕ್ಷರವು ಬಂದು ಸೇರುವುದು ಅಥವಾ ಬರೆಯುವುದು ಅಕ್ಷರದ ದೋಷಗಳಿಗೆ ಹಾಗೂ ಭಾಷಾದೋಷಕ್ಕೆ ಕಾರಣವಾಗುತ್ತದೆ. ಒತ್ತಾಕ್ಷರಗಳನ್ನು ಬರೆಯದೇ ಹಾಗೇ ಬಳಸುವುದು ಇವೆಲ್ಲವೂ ಅಕ್ಷರ ದೋಷಕ್ಕೆ ಕಾರಣವಾಗುತ್ತದೆ. ಇವುಗಳು ಆಗದಂತೆ ಶುದ್ಧ ರೂಪದ ಬರವಣಿಗೆ ಅವಶ್ಯಕವಿದೆ.

ಉದಾಹರಣೆಗಾಗಿ

೧) ಅದೊಂದು ರಸಳ ಯೋಜನೆಯಾಗಿದೆ. (ಸರಳ)

೨) ನಾನು ಚಳಿ ರಜ್ವದಿಂದ ಬಳಲುತ್ತಿದ್ದು ರಜೆ ಬೇಕಾಗಿದೆ. (ಜ್ವರ)

೩) ಉನ್ನತ ರಸ್ತದಲ್ಲಿ ಮಾತ್ರ ಸಾಧ್ಯ (ಸ್ತರ)

೪) ನಿವೇನಶ ಮಾರಾಟಕ್ಕಿವೆ. (ನಿವೇಶನ)

೫) ದಾಖಲೆಗಳನ್ನು ಹಾಜರುಪಡಿಸಲು ವಿರಾಚಣೆಗೆ ಹಾಜರಾಗಲು ಸೂಚಿಸಿದೆ. (ವಿಚಾರಣೆ)

೬) ಸದರಿ ಪತ್ರ ತಮ್ಮ ಕ್ಷಮಸಮಕ್ಕೆ ಸಲ್ಲಿಸಲಾಗಿದೆ. (ಸಮಕ್ಷಮ)

ಈ ರೀತಿಯ ಉದಾಹರಣೆಗಳು ನಮಗೆ ಬಹಳಷ್ಟು ದೊರಕುತ್ತವೆ ಆದರೆ ಉದಾಹರಣೆಗಾಗಿ ಕೆಲವೊಂದನ್ನು ಮಾತ್ರ ವಿವರಿಸುವ ಪ್ರಯತ್ನ ಮಾಡಲಾಗಿದೆ.

೪.೬. ಪ್ರಕಟಣಾ ದೋಷಗಳು/ಮುದ್ರಣಾ ದೋಷ/ ಬೆರಳಚ್ಚು ದೋಷಗಳು :

ಆಡಳಿತ ಕನ್ನಡ ಬಳಕೆಯ ಸಂದರ್ಭದಲ್ಲಿ ಹಲವಾರು ದೋಷಗಳ ಬಗ್ಗೆ ನಾವು ಈಗಾಗಲೇ ಚರ್ಚಿಸಿದ್ದೇವೆ. ಆಡಳಿತ ಕನ್ನಡ ಬಳಕೆಯಲ್ಲಿ ಮೊದಲನೆಯದಾಗಿ ಕರಡು ಪತ್ರವನ್ನು ಕೈ ಬರಹದಲ್ಲಿ ರಚಿಸಿ ಅದನ್ನು ಮೂಲ ಕರಡು ಪ್ರತಿಯನ್ನಾಗಿಸಿ ಬೆರಳಚ್ಚಿಗೆ ಅಥವಾ ಗಣಕೀಕೃತ ಪ್ರತಿಯನ್ನಾಗಿ ಮಾಡಿಸಲು ಅಥವಾ ಸಾರ್ವಜನಿಕ ಪ್ರಕಟಣೆಗೋ ಅಥವಾ ಮುದ್ರಣಕ್ಕೆ ಕಳಿಸಿ ಕೊಡಲಾಗುತ್ತದೆ. ಬರಹದ ಸ್ವರೂಪವನ್ನು ಆಧರಿಸಿ ಪ್ರತಿಯನ್ನು ಬೆರಳಚ್ಚು ಅಥವಾ ಮುದ್ರಣವನ್ನು ಮಾಡಲಾಗುತ್ತದೆ. ಬೆರಳಚ್ಚು ಅಥವಾ ಮುದ್ರಣ ಮಾಡುವ ಸಂದರ್ಭದಲ್ಲಿ ಬರಹದ ರೂಪದಲ್ಲಿರುವ

ಅಕ್ಷರಗಳು ಅಥವಾ ಶಬ್ದ, ಬೆರಳಚ್ಚುಗಾರನಿಗೆ ಅಥವಾ ಮುದ್ರಣಕಾರನಿಗೆ ಅರ್ಥವಾಗದೆ ತಪ್ಪಾಗಿ ಗ್ರಹಿಕೆ ಮಾಡಿ ಅಥವಾ ಬರಹದ ಸ್ವರೂಪದಲ್ಲಿಯೇ ದೋಷವಿದ್ದಲ್ಲಿ ಮುದ್ರಣ ಅಥವಾ ಬೆರಳಚ್ಚು ದೋಷಗಳು ಕಂಡುಬರುತ್ತವೆ. ಮುದ್ರಣ ಮತ್ತು ಬೆರಳಚ್ಚು ದೋಷಗಳು ಸರ್ವೆಸಾಮಾನ್ಯವಾಗಿ ಕೆಳಕಂಡ ಕಾರಣಗಳಿಂದ ಆಗುತ್ತವೆ.

೧. ಬರಹದ ಸ್ವರೂಪ ತಪ್ಪಾಗಿರಬೇಕು.

೨. ಮುದ್ರಕನಿಗೆ/ ಬೆರಳಚ್ಚುಗಾರನಿಗೆ ಬರಹದ ಸ್ವರೂಪ ಸರಿಯಾಗಿ ಅರ್ಥವಾಗದೇ ತಪ್ಪು ಗ್ರಹಿಕೆ.

೩. ಬೆರಳಚ್ಚುಗಾರನ ಅಥವಾ ಮುದ್ರಕನ ಮಾನಸಿಕ ಸ್ಥಿತಿ.

೪. ವ್ಯಾಕರಣದ ಜ್ಞಾನ ಇಲ್ಲದಿರುವಿಕೆ.

೫. ತಪ್ಪಾಗಿದ್ದರೂ ತಿದ್ದುವ ಗೋಜಿಗೆ ಹೋಗದಿರುವುದು. ವಿಷಯ ನಿರ್ವಹಕರು ನಾನು ಹೇಗೆ ಬರೆದು ಕೊಟ್ಟಿರುವನೋ ಹಾಗೆಯೇ ಅದನ್ನು ಬೆರಳಚ್ಚು ಮಾಡಿ ಕೊಡು ತಪ್ಪುಗಳು ಆಗಬಾರದು ಎನ್ನುವ ವಿಷಯ ನಿರ್ವಾಹಕರ ಮನೋಭಾವ.

೬. ಬೇಗ ಮುಗಿಸಬೇಕೆಂಬ ಅವಸರ.

ಮುದ್ರಕನ ಅಥವಾ ಬೆರಳಚ್ಚುಗಾರನ ಅಲ್ಪ ಜ್ಞಾನ ಮತ್ತು ಮೇಲಿನ ಕಾರಣಗಳಿಂದಾಗಿ ಮುದ್ರಣ, ಪ್ರಕಟಣೆ ಅಥವಾ ಬೆರಳಚ್ಚು ಸಂದರ್ಭದಲ್ಲಿ ದೋಷಗಳು ಆಗುವುದನ್ನು ಕಾಣಬಹುದಾಗಿದೆ. ಪ್ರತಿಯೊಂದು ಶಬ್ದದ ಮತ್ತು ವಾಕ್ಯದ ಬಗ್ಗೆ ತಿಳುವಳಿಕೆ ಅಲ್ಪ ಪ್ರಮಾಣದಲ್ಲಿಯಾದರೂ ಬೆರಳಚ್ಚುಗಾರನಿಗೆ ಇರಬೇಕಾಗಿರುತ್ತದೆ. ಆದರೆ ಬೆರಳಚ್ಚುಗಾರರು ಇದಾವುದರ ಗೋಜಿಗೆ ಹೋಗದೆ ತುರ್ತು ಕಾರ್ಯ ನಿರ್ವಹಿಸಬೇಕೆಂಬ ಮನೋಭಾವ ಹೊಂದಿ ಬೆರಳಚ್ಚು ಮಾಡುವ ಸಂದರ್ಭದಲ್ಲಿ ಕನ್ನಡ ಬಳಕೆಯನ್ನು ತಪ್ಪಾಗಿ ನಮೂದಿಸುವುದು, ವಾಕ್ಯಗಳ ಅರ್ಥಕೆಡುವಂತೆ ರಚನೆ ಮಾಡುವುದು, ಕೆಲವೊಂದು ಪತ್ರಗಳಲ್ಲಿ ಕಂಡುಬರುತ್ತದೆ.

ಬೆರಳಚ್ಚು ಮತ್ತು ಮುದ್ರಣ ದೋಷಗಳು ಉದ್ದೇಶ ಪೂರ್ವಕವಾಗಿ ಮಾಡುವುದು ಎಲ್ಲಿಯೂ ಕಂಡುಬರುವುದಿಲ್ಲ. ಬೆರಳಚ್ಚುಗಾರನ ನಿರ್ಲಕ್ಷ್ಯತನ, ಕೆಲವೊಂದು ಸಂದರ್ಭದಲ್ಲಿ ವಿಷಯ ನಿರ್ವಾಹಕನ ತಪ್ಪು ಬರಹ, ಅಥವಾ ಹೇಳಿಕೆ, ಮತ್ತು ಬೆರಳಚ್ಚುಗಾರನ ತಿಳುವಳಿಕೆ ಈ ದೋಷಗಳಿಗೆ ಕಾರಣವಾಗಿರುತ್ತದೆ. ಎಲ್ಲಾ ಬೆರಳಚ್ಚುಗಾರರು ಹೀಗೆ ಇರುವರೆಂದು ಹೇಳಲಾಗದು, ಬದಲಾಗಿ ವಿಷಯ ನಿರ್ವಾಹಕರಿಗಿಂತಲೂ ಬೆರಳಚ್ಚುಗಾರರು ಪೂರ್ಣ ಪ್ರಮಾಣದ ಜ್ಞಾನ ಹೊಂದಿದ್ದಲ್ಲಿ, ವಿಷಯ ನಿರ್ವಾಹಕರು ಮಾಡುವ ತಪ್ಪುಗಳನ್ನು ಅಥವಾ ಬರಹದ ದೋಷಗಳನ್ನು ತಿದ್ದುವ ಮತ್ತು ಸರಿಯಾದ ಅಕ್ಷರ ಅಥವಾ ಶಬ್ದದ ಬಳಕೆಯನ್ನು ಮಾಡುವ ತಿಳುವಳಿಕೆಯುಳ್ಳ ಬೆರಳಚ್ಚುಗಾರರು ಸಹ ಆಡಳಿತದಲ್ಲಿ ಇದ್ದಾರೆ.

ಮುದ್ರಣ ಅಥವಾ ಪ್ರಕಟಣೆ ಅಥವಾ ಬೆರಳಚ್ಚು ಮಾಡುವ ಸಂದರ್ಭದಲ್ಲಿ ಆಗುವ ದೋಷಗಳು ದೋಷಗಳೇ ಹೊರತು ದೋಷಗಳಲ್ಲವೆಂದು ಅಲ್ಲಗೆಳೆಯುವಂತಿಲ್ಲ. ಆದರೆ ಕೆಲವೊಂದು

ಸಂದರ್ಭದಲ್ಲಿ ಪತ್ರದಲ್ಲಿ ಆದ ದೋಷಗಳನ್ನು ಕಂಪ್ಯೂಟರ್ ದೋಷ ಅಥವಾ ಪ್ರಿಂಟ್ ತಪ್ಪಾಗಿದೆ ಎಂದು ಹೇಳಿ ತಮ್ಮನ್ನ ತಾವು ತಪ್ಪಿನಿಂದ ಪಾರಾಗಲು ಅಥವಾ ಆದ ತಪ್ಪಿನಿಂದ ಜಾರಿಕೊಳ್ಳಲು ಕಂಪ್ಯೂಟರಿನ ತಪ್ಪು ಎಂದು ಕಂಪ್ಯೂಟರಿನ ಹೆಸರನ್ನು ಹೇಳುವ ಹೇಳಿಕೆಗಳನ್ನು ದಿನನಿತ್ಯ ಆಡಳಿತದಲ್ಲಿ ಹಲವಾರು ಉದಾಹರಣೆಗಳನ್ನು ಕಾಣುತ್ತೇವೆ.

ಇಲ್ಲಿ ಕಂಪ್ಯೂಟರಿನಿಂದ ದೋಷಗಳಾಗಲೀ ಅಥವಾ ತಪ್ಪುಗಳಾಗಲೀ ಆಗಲು ಸಾಧ್ಯವಿಲ್ಲ ಕಾರಣ ಅದೊಂದು ಯಂತ್ರ. ನಾವು ಹೇಳಿದಂತೆ ಮತ್ತು ಕೀಲಿಮಣಿಯಿಂದ ಬೆರಳಚ್ಚು ಮಾಡಿದಲ್ಲಿ ಮಾತ್ರ ಅದು ಮುದ್ರಣದ ರೂಪ ಪಡೆದುಕೊಳ್ಳುತ್ತದೆ. ಹೀಗಿರುವ ನಿಟ್ಟಿನಲ್ಲಿ ಕಂಪ್ಯೂಟರಿನ ತಪ್ಪು ಎಂದು ಹೇಳಿ ಜಾರಿಕೊಳ್ಳುವ ನಮ್ಮ ಜಾಯಮಾನಕ್ಕೆ ಏನೆನ್ನ ಬೇಕೋ ಅರ್ಥವಾಗದು.

ಒಬ್ಬ ವಿಷಯ ನಿರ್ವಾಹಕನು ಕೊಟ್ಟ ಕರಡು ಪ್ರತಿಯನ್ನು ಬೆರಳಚ್ಚು ಮಾಡಿ ಒಂದು ಪ್ರತಿಯನ್ನು ನೋಡಲು ಕೊಡುವ ಪರಿಪಾಠ ಪ್ರಸ್ತುತ ಈಗಿನ ಆಡಳಿತದ ವ್ಯವಸ್ಥೆಯಾಗಿದೆ. ಆದರೆ ಹಿಂದಿನ ದಿನಮಾನಗಳಲ್ಲಿ ಕಛೇರಿಯ ಎಲ್ಲಾ ಕೆಲಸಗಳು ಬೆರಳಚ್ಚುಗಳ ಮೂಲಕ ಅಥವಾ ಕೈ ಬರಹದ ಮೂಲಕ ನಡೆಯುತ್ತಿದ್ದವು ಇವುಗಳಲ್ಲಿ ತಪ್ಪುಗಳು ಆದರೆ ಪುನಃ ಬೆರಳಚ್ಚು ಮಾಡುವ ಸಾಧ್ಯತೆ ತುಂಬಾ ಕಡಿಮೆ ಅವುಗಳನ್ನೇ ತಿದ್ದಿ ಕಳಿಸುವ ಪದ್ಧತಿ ಇತ್ತು. ಆದರೆ ಪ್ರಸ್ತುತ ಸಂದರ್ಭದಲ್ಲಿ ಗಣಕ ಯಂತ್ರಗಳು ಆಡಳಿತಕ್ಕೆ ಕಾಲಿಟ್ಟ ಸಂದರ್ಭದಿಂದ ಬೆರಳಚ್ಚು ಯಂತ್ರಗಳು ಮೂಲಗುಂಪಾಗಿವೆ. ಈ ಮೇಲೆ ತಿಳಿಸಿದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಆದ ಪ್ರತಿಯ ಒಂದು ಮುದ್ರಣ ತೆಗೆದುಕೊಂಡು ವಿಷಯ ನಿರ್ವಾಹಕರು ಅದರಲ್ಲಿ ತಪ್ಪುಗಳು ಇದ್ದಲ್ಲಿ ತಿದ್ದಿ ಪುನಃ ಸರಿಪಡಿಸಲು ಬೆರಳಚ್ಚುಗಾರನಿಗೆ ಕೊಟ್ಟ ನಂತರ ಬೆರಳಚ್ಚುಗಾರ ಮೊದಲಾದ ತಪ್ಪುಗಳನ್ನು ತಿದ್ದಿ ಅನಂತರದಲ್ಲಿ ವಿಷಯ ನಿರ್ವಾಹಕರಿಗೆ ಪುನ: ಪ್ರತಿಯನ್ನು ನೀಡುತ್ತಾರೆ. ಅದನ್ನು ವಿಷಯ ನಿರ್ವಾಹಕರು ಪರಿಶೀಲಿಸಿ ಮೇಲಿನ ಹಂತದ ಅಧಿಕಾರಿಗಳ ಸಹಿಗಾಗಿ ಮಂಡಿಸಿಸಿರುತ್ತಾರೆ. ಅಧಿಕಾರಿಗಳಿಂದ ಸಹಿಯಾದ ನಂತರದಲ್ಲಿ ಸಂಬಂಧ ಪಟ್ಟವರಿಗೆ ರವಾನಿಸಲಾಗುತ್ತದೆ. ಈ ಹಂತದವರೆಗೂ ಬೆರಳಚ್ಚು ಸಂದರ್ಭದಲ್ಲಿ ಆದ ದೋಷಗಳನ್ನು ಕುಲಂಕುಶವಾಗಿ ಪರಿಶೀಲಿಸದೆ ಹಾಗೆಯೇ ಮುದ್ರಣದ ದೋಷಗಳನ್ನು ಹೊಂದಿದ ಪತ್ರಗಳು ದಿನನಿತ್ಯದ ಆಡಳಿತದಲ್ಲಿ ಕಂಡುಬರುತ್ತಿದ್ದು ಇದಕ್ಕೆ ಸಾಕಷ್ಟು ಉದಾಹರಣೆಗಳನ್ನು ಪತ್ರಗಳಲ್ಲಿ ಕಾಣುತ್ತೇವೆ.

ಉದಾಹರಣೆಗಾಗಿ :

೧. ಈ ಪತ್ರದ ಜೊತೆಗೆ ನಾಲ್ಕು ಬೆಕ್ಕುಗಳನ್ನು ಕಳಿಸಲಾಗಿದೆ.
   ಈ ಪತ್ರದ ಜೊತೆಗೆ ನಾಲ್ಕು ಚೆಕ್ಕುಗಳನ್ನು ಕಳಿಸಲಾಗಿದೆ.

೨. ಸಂಪಾದಕರ ಸಂಕ್ಷೇಮಕ್ಕೆ ಒಂದು ಕತ್ತೆಯನ್ನು ಕಳುಹಿಸಿದ್ದೇನೆ.
   ಸಂಪಾದಕರ ಸಂಕ್ಷೇಮಕ್ಕೆ ಒಂದು ಕಥೆಯನ್ನು ಕಳುಹಿಸಿದ್ದೇನೆ.

೩. ೧೫ ದಿನ ಸಜೆ ಮಂಜೂರು ಮಾಡಲು ಕೋರಿ.
   ೧೫ ದಿನ ರಜೆ ಮಂಜೂರು ಮಾಡಲು ಕೋರಿ.

೪. ನೀವು ಕ್ಷಾಮವಾಗಿದ್ದೀರಿ ಎಂದು ಭಾವಿಸಿರುವೆ.

ನೀವು ಕ್ಷೇಮವಾಗಿದ್ದೀರಿ ಎಂದು ಭಾವಿಸಿರುವೆ.

ಈ ರೀತಿ ಹಲವಾರು ಮುದ್ರಣದ ದೋಷಗಳು ಇರುವುದನ್ನು ಆಡಳಿತದ ದಿನನಿತ್ಯದ ವಹಿವಾಟಿನ ಪತ್ರಗಳಲ್ಲಿ ಕಾಣುತ್ತೇವೆ. ವಿಷಯ ನಿರ್ವಾಹಕರಿಂದ ಉನ್ನತವಾದ ಅಧಿಕಾರಿಗಳ ಮಟ್ಟದವರೆಗೂ ಪತ್ರಗಳು ರವಾನೆಯಾದ ಮೇಲೂ ಮುದ್ರಣದ ದೋಷಗಳು ವಾಕ್ಯ ದೋಷ ಅಕ್ಷರ ದೋಷಗಳಿದ್ದರೂ ಹಾಗೆ ಪತ್ರಗಳು ರವಾನೆಯಾಗುತ್ತಿರುವುದು ಆಡಳಿತ ಕನ್ನಡದ ಬಳಕೆಗಿರುವ ಒಂದು ಸಮಸ್ಯೆ.

ಒಂದು ಪತ್ರದಲ್ಲಿನ ಮುದ್ರಣದ ದೋಷ, ಬೆರಳಚ್ಚು ದೋಷ, ಶಬ್ದ ದೋಷ, ವಾಕ್ಯ ದೋಷ, ಅಕ್ಷರ ದೋಷ ಇವು ಎಲ್ಲವುಗಳನ್ನು ತಿದ್ದಿ ಉತ್ತಮ ದೋಷರಹಿತ ಪತ್ರಗಳನ್ನು ನೀಡಬೇಕಾದದ್ದು ವಿಷಯ ನಿರ್ವಾಹಕರ ಮುಖ್ಯ ಜವಾಬ್ದಾರಿ ಹಾಗೂ ಆದ್ಯ ಕರ್ತವ್ಯವಾಗಿದೆ. ಆದರೆ ತಿದ್ದುವ ಗೋಜಿಗೆ ಹೋಗದೆ ಮುದ್ರಣ ಸಂದರ್ಭದಲ್ಲಿ ಅಥವಾ ಬರಹದ ಸಂದರ್ಭದಲ್ಲಿ ಪತ್ರದಲ್ಲಿ ಆದ ದೋಷಗಳನ್ನು ನಿರ್ಲಕ್ಷ್ಯಿಸಿ ಬೇಜವಾಬ್ದಾರಿತನದಿಂದ ಕಾರ್ಯನಿರ್ವಹಿಸುವುದು ವಿಷಯ ನಿರ್ವಾಹಕನ ಲಕ್ಷಣವಾಗಿರುವುದಿಲ್ಲ. ಪ್ರತಿಯೊಂದುನ್ನು ನೋಡಿ ಪರಿಶೀಲಿಸಿ ತಪ್ಪುಗಳನ್ನು ತಿದ್ದಿ ಸರಿಯಾದ ಕ್ರಮದಲ್ಲಿ ಪತ್ರಗಳನ್ನು ರಚನೆ ಮಾಡಿ ಸಂಬಂಧಪಟ್ಟವರಿಗೆ ತಪ್ಪಿಲ್ಲದಂತೆ ವಿಷಯವನ್ನು ಮುಟ್ಟಿಸುವುದು ವಿಷಯ ನಿರ್ವಾಹಕನ ಮಹತ್ತರವಾದ ಜವಾಬ್ದಾರಿಯಾಗಿದೆ.

ಪತ್ರದಲ್ಲಿರುವ ದೋಷಗಳನ್ನು ಬೆರಳುಚ್ಚುಗಾರನ ಮೇಲೆ ಅಥವಾ ಕಂಪ್ಯೂಟರ್‌ನ ಮೇಲೆ ತಳ್ಳಿ ತನ್ನ ತಪ್ಪು ಇಲ್ಲವೆಂದು ಅಥವಾ ಇದು ಪ್ರಿಂಟಿನ(ಮುದ್ರಣ) ತಪ್ಪು ಎಂದು ಜಾರಿಕೊಳ್ಳುವುದು ಪ್ರಸ್ತುತ ಸಂದರ್ಭದಲ್ಲಿ ವಿಷಯ ನಿರ್ವಾಹಕರ ಜಾಯಮಾನವಾಗಿದೆ. ಹೀಗಾಗಿ ಪತ್ರದಲ್ಲಿ ತಪ್ಪುಗಳು ಏನೇ ಇರಲಿ ಅದಕ್ಕೆ ಪರಿಪೂರ್ಣ ಜವಾಬ್ದಾರಿ ವಿಷಯ ನಿರ್ವಾಹಕನ ಮತ್ತು ಆ ಪತ್ರಕ್ಕೆ ಸಹಿ ಹಾಕಿದ ಅಧಿಕಾರಿಯದ್ದೇ ಆಗಿರುತ್ತದೆ. ಕಾರಣ ಬೆರಳಚ್ಚು/ಮುದ್ರಣದ ಸಂದರ್ಭದಲ್ಲಿ ಆದ ತಪ್ಪುಗಳು ಇದ್ದರೂ ಅವುಗಳನ್ನು ತಿದ್ದಿ ಕಳುಹಿಸುವ ಮಹತ್ತರ ಜವಾಬ್ದಾರಿ ವಿಷಯ ನಿರ್ವಾಹಕನಿಗೆ ಇದೆ. ಬರವಣಿಗೆಯ ಸಂದರ್ಭದಲ್ಲಿಯೂ ಸಹಿತ ಸರಿಯಾದ ಚಿಹ್ನೆಗಳ ಬಳಕೆಯು ಮುಖ್ಯ ಸ್ಥಾನವನ್ನು ಪಡೆದುಕೊಳ್ಳುತ್ತದೆ ಕಾರಣ ಚಿಹ್ನೆಗಳನ್ನೂ ಸಹ ಸರಿಯಾದ ರೀತಿಯಲ್ಲಿ ತಪ್ಪಿಲ್ಲದಂತೆ. ಸಂದರ್ಭಕ್ಕನುಸಾರವಾಗಿ ಬಳಕೆ ಮಾಡುವುದು ಅವಶ್ಯವಿರುತ್ತದೆ.

ಪ್ರಕಟಣಾ ಅಥವಾ ಕೆಲವು ಮುದ್ರಣಾ ದೋಷಗಳ ಉದಾಹರಣೆಗಳು

೧. ಇಲಾಖೆಯಿಂದ ಇಲಾಖೆಗೆ ಭಿನ್ನ ಭಿನ್ನ ಸಮಸ್ಯೆಗಳು.

೨. ಇಂಗ್ಲೀಷ್ ಭಾಷೆ ಬಗೆಗಿನ ವ್ಯಾಮೋಹ.

೩. ಅಲ್ಪ ಸಮಖ್ಯಾತರ ಸಮಸ್ಯೆ

೪. ಪ್ರಾದೇಶಿಕ ನೆಲೆಗಳ ಹಿನೆನಲೆಯಲ್ಲಿ

೫. ಹಳೆಯ ಕಾರನ್ನೇ ಬಳಸುತ್ತಿರುವುಉ.

೬. ರಾಷ್ತ್ರ ಕವಿಗಳ ಹೆಸರುಗಲನ್ನು ಶಾಲೆಯ ಕಾಮ್‌ಪೌಂಡಿನ ಮೇಲೆ ಬರೆಯಿಸಿ.

೭. ಅಉುಗಳಿಂದ ನಾಶ ಸಾದ್ಯ.

೮. ಭಾರತ ಎಲ್ಲಾ ಮತ ಪಂಥದವರಿಗೆ ಆಶ್ರಯದಾಯಕವಾಗಿಎ.

೯. ಅಧಿಕ ಸಂಖ್ಯೆಯಲ್ಲಿ ಮಾತನಾಡುವ ಜನರಿದ್ದಾರೆ?

ಉದಾಹರಣೆಗಳಲ್ಲಿ ವಿವರಿಸಿದಂತೆ ಪ್ರತಿಯೊಂದು ವಾಕ್ಯದಲ್ಲಿ ಮುದ್ರಣದ ದೋಷಗಳಿರುವುದು ಕಾಣಸಿಗುತ್ತವೆ. ಇವು ಉದ್ದೇಶದಿಂದ ರಚನೆ ಗೊಂಡದ್ದಲ್ಲ. ಆದರೆ ವೇಗದ ಬೆರಳಚ್ಚು ಮತ್ತು ಅಜಾಗರೂಕತೆಯೇ ಇದಕ್ಕೆ ಕಾರಣ ಎನ್ನಬಹುದು. ಬೆರಳಚ್ಚು ಮಾಡುವ ಸಂದರ್ಭದಲ್ಲಿ ಕೀಲಿಮಣೆಯ ಕೀಲಿಗಳ ಉಪಯೋಗ ತುಂಬಾ ಮುಖ್ಯ ಇದರ ತಪ್ಪು ಬಳಕೆಯೇ, ಆಡಳಿತ ಕನ್ನಡ ಬಳಕೆಯಲ್ಲೂ. ತಪ್ಪಾಗುವ ಸಂದರ್ಭಗಳು ಹೆಚ್ಚು. ಹೀಗಾಗಿ ಸರಿಯಾದ ಬೆರಳಚ್ಚು/ಮುದ್ರಣ, ಪ್ರಕಟಣೆ ಆಡಳಿತದಲ್ಲಿ ಬಹು ಮುಖ್ಯವಾದ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಕಾರಣ ಈ ಮುದ್ರಣ ದೋಷಗಳನ್ನು ಸರಿಯಾಗಿ ಪರಿಶೀಲಿಸಿ ತಪ್ಪುಗಳಿಲ್ಲದಂತೆ ಬರಹ, ಮುದ್ರಣ, ಬೆರಳಚ್ಚು ಮಾಡಿಸಬೇಕಾದುದು ಆಡಳಿತ ನಿರ್ವಹಿಸುವವರ ಆದ್ಯ ಕರ್ತವ್ಯವೂ, ಜವಾಬ್ದಾರಿಯೂ ಆಗಿದೆ.

೪.೭. ಅನುವಾದ, ಭಾಷಾಂತರದ ಸಮಸ್ಯೆಗಳು

ಕರ್ನಾಟಕದ ಆಡಳಿತದಲ್ಲಿ ವಿವಿಧ ಭಾಷೆಯ ಜನರು ವಿವಿಧ ನೆಲೆಯಲ್ಲಿ ವಾಸಿಸುತ್ತಿದ್ದಾರೆ ಮತ್ತು ವಾಸಿಸಿರುತ್ತಾರೆ. ಆದರೆ ಕರ್ನಾಟಕದಲ್ಲಿ ಕನ್ನಡವನ್ನು ಬಲ್ಲ ಜನರು ಎಷ್ಟಿದ್ದಾರೆ ಎಂಬುದಿಕ್ಕಿಂತ ಬಹು ಭಾಷಿಗರು ನೆಲೆಸಿದ್ದಾರೆ ಎನ್ನುವುದು ಸೂಕ್ತ. ವಾಸಿಸುತ್ತಿರುವ ಬಹುಭಾಷಿಗರೆಲ್ಲರಿಗೂ ಕನ್ನಡ ಗೊತ್ತು ಎಂದು ಹೇಳಲಾಗದು. ಕನ್ನಡ ಗೊತ್ತಿಲ್ಲವೆಂತಲೂ ಹೇಳಲಾಗದು. ಆದರೆ ಅವರು ಸಹ ಆಡಳಿತದ ಒಂದು ಭಾಗವಾಗಿದ್ದಾರೆ. ಇವರು ಕನ್ನಡವನ್ನು ಮಾತನಾಡಬಲ್ಲರು, ಆದರೆ ಕನ್ನಡದಲ್ಲಿ ಆಡಳಿತ ನೆಡೆಸುವಷ್ಟು ಸಮರ್ಥರಾಗಿವುದಿಲ್ಲ ಹೀಗಾಗಿ ಆಡಳಿತದಲ್ಲಿ ರಚನೆಗೊಂಡ ಆದೇಶಗಳು, ಸುತ್ತೋಲೆಗಳು, ಬಹುಭಾಷಿಕರಿಗೆ ಮುಟ್ಟಬೇಕಾದರೆ ಅಥವಾ ಅರ್ಥವಾಗಬೇಕಾದರೆ ಅವುಗಳನ್ನು ಭಾಷಾಂತರಿಸಬೇಕು ಅಥವಾ ಅನುವಾದ ಮಾಡಬೇಕಾಗುತ್ತದೆ. ಹೀಗಾದಾಗ ಮಾತ್ರ ಸರ್ಕಾರದ ಆದೇಶಗಳು ಬಹುಭಾಷಿಗರಿಗೆ ಮುಟ್ಟಲು ಸಾಧ್ಯ.

ದೇಶದಲ್ಲಿ ಅನೇಕ ನಿಯಮಗಳು ಕಾಯಿದೆಗಳು ಮತ್ತು ಕಾನೂನುಗಳು ಮೂಲತಃವಾಗಿ ಇಂಗ್ಲೀಷ್ ಭಾಷೆಯಲ್ಲಿರುವುದು ಸ್ಪಷ್ಟ. ಪ್ರತಿಯೊಂದು ಕಾಯಿದೆ ಕಾನೂನುಗಳ ಪಾತ್ರ ಆಡಳಿತದಲ್ಲಿ ಬಹುಮುಖ್ಯವಾದ ಸ್ಥಾನವನ್ನು ಪಡೆದುಕೊಂಡಿರುತ್ತದೆ. ಆ ಕಾಯಿದೆ ಕಾನೂನು ಜನರಿಗೆ ಮುಟ್ಟಬೇಕಾದರೆ ಅಥವಾ ಅವುಗಳ ಬಗ್ಗೆ ಜನರಿಗೆ ಅರಿವು ಮೂಡಬೇಕಾದರೆ ಅವುಗಳು ಪ್ರಾದೇಶಿಕ ನೆಲೆಯಲ್ಲಿ ಜನ ಸಾಮಾನ್ಯರು ಆಡುವ ಭಾಷೆಗೆ ಪರಿವರ್ತನೆಗೊಂಡಾಗ ಮಾತ್ರ ಸಾಧ್ಯ ಆಗ ಜನರು ಅವುಗಳನ್ನು ಓದಿಕೊಂಡು, ಅರ್ಥಮಾಡಿಕೊಂಡು, ಆಡಳಿತಕ್ಕೆ ಸ್ಪಂದಿಸಿದಾಗ ಮಾತ್ರ ರಚನೆಗೊಂಡ ಕಾಯಿದೆ ಕಾನೂನುಗಳು ಸಾರ್ಥಕತೆಯನ್ನು ಪಡೆದುಕೊಳ್ಳುತ್ತವೆ. ಇಲ್ಲದೇ ಬಹು ಭಾಷೆಯನ್ನು ಬಲ್ಲ ಪ್ರಜ್ಞಾವಂತರಿಗೆ ಮಾತ್ರ ಸೀಮಿತವಾಗುತ್ತವೆ.

ಅನುವಾದದ ಅರ್ಥವನ್ನು ಸೂಚಿಸುವುದಾದರೆ, ಒಂದು ಭಾಷೆಯಲ್ಲಿರುವ ಅನುಭವಗಳನ್ನು ಮತ್ತೊಂದು ಭಾಷೆಗೆ ಕೊಂಡೊಯ್ಯುವುದು ಅಥವಾ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಬರೆಯುವುದು ಇದಕ್ಕೆ ಕನ್ನಡದಲ್ಲಿ ಭಾಷಾಂತರ, ಅನುವಾದ ,ತರ್ಜುಮೆ, ಕನ್ನಡಿಸು ಮುಂತಾದ ಹೆಸರಿನಿಂದ ಕರೆಯುತ್ತಾರೆ. ಭಾಷೆ ಜನಾಂಗಗಳ ನಡುವೆ ಅಡ್ಡಗೋಡೆಗಳನ್ನು ನಿರ್ಮಿಸಿದರೆ ಅನುವಾದವು ಅದನ್ನು ಹೊಡೆದು ಹಾಕುತ್ತದೆಂಬ ವಿಚಾರ ಬಹುಮುಖ್ಯ

ಭಾಷಾನುವಾದದ ತಂತ್ರಜ್ಞರಾದ ವಿಠಲರಾವ್ ಗಾಯಕವಾಡರು ತಿಳಿಸುವಂತೆ ಭಾಷಾತಂರದಲ್ಲಿ ೮ ವಿಧಗಳಿಗಳಿವೆ ಎಂದು ಹೇಳಿದ್ದಾರೆ.

೧. ಶಬ್ದಾನುವಾದ – ಶಬ್ದಕ್ಕೆ ಶಬ್ದದ ಆಯ್ಕೆ ಮಾಡಿ ಅನುವಾದ.

೨. ವಿಸ್ತಾರಾನುವಾದ – ಮೂಲಭಾಷೆಯ ವಿಚಾರವೊಂದನ್ನು ವಿವರಿಸುವುದು.

೩. ನಿಕಟನುವಾದ – ಮೂಲಭಾಷೆಗೆ ಹತ್ತಿರವಿರುವಂತೆ ಅನುವಾದ ಮೂಲಕ್ಕೆ ಸಂಬಂಧಿಸಿದಂತೆ

೪. ಭಾವಾನುವಾದ – ಮೂಲಭಾಷೆಯ ಕವಿ, ಕೃತಿಯ ಭಾವನೆಯನ್ನು ಅನುವಾದ ಮಾಡುವುದು.

೫. ಸಂಗ್ರಹಾನುವಾದ – ಮೂಲಭಾಷೆಯ ಸಂಗ್ರಹ ಮಾಡಿಕೊಂಡು ವಿಷಯದ ಅನುವಾದ (ಲೇಖಕರಿಗೆ)

೬. ಸರಳಾನುವಾದ –ಮೂಲಭಾಷೆಯಲ್ಲಿ ಇರುವಂತೆ ಸರಳವಾಗಿ ಇನ್ನೊಂದು ಭಾಷೆಗೆ ತರುವುದು

೭. ರೂಪಾಂತರ – ಮೂಲಭಾಷೆಯ ಕೃತಿಯನ್ನು ಆಯಾ ದೇಶಕಾಲಮಾನಕ್ಕೆ ತಕ್ಕಂತೆ ಅನುವಾದ ಮಾಡುವುದು.

೮. ಅರ್ಥನುವಾದ – ಮೂಲಭಾಷೆಯ ಮುಖ್ಯವಾದ ಅರ್ಥವನ್ನು ಅನುವಾದ ಮಾಡುವುದು.

ಮೇಲಿನ ಯಾವುದೇ ಅನುವಾದಗಳಲ್ಲಿ ಮೂಲ ಅರ್ಥ, ಭಾವವು ಕೆಡುವಂತಿರಬಾರದು ಎನ್ನುವುದು ನಮ್ಮ ಆಭಿಪ್ರಾಯ. ಆಡಳಿತ ಕನ್ನಡಕ್ಕೆ ಬೇರೆ ಭಾಷೆಯಿಂದ ಅನುವಾದಗೊಳ್ಳುವ ಸಂದರ್ಭದಲ್ಲಿ ಶಬ್ದಾರ್ಥಗಳ ಪರಿಜ್ಞಾನ, ಯಾವ ಶಬ್ದಕ್ಕೆ ಯಾವ ಶಬ್ದ ಬಳಸಬೇಕು, ಮತ್ತು ಭಾಷೆಯ ಅರ್ಥ, ಭಾವಗಳು ಕೆಡದಂತೆ ಅನುವಾದ ಮಾಡಬೇಕಾಗುತ್ತದೆ.

ಆಡಳಿತ ಕನ್ನಡದಲ್ಲಿ ಭಾಷಾಂತರದ ಗೋಜು ಇಲ್ಲವೆಂದು ಹೇಳಲಾಗದು. ಸ್ವತಂತ್ರ ನಂತರ ಕೆಲವೊಂದು ಪ್ರದೇಶದ ಆಡಳಿತದ ಸಂದರ್ಭದಲ್ಲಿ ಅಲ್ಲಿನ ಪ್ರಾದೇಶಿಕ ಭಾಷೆಯಲ್ಲಿ ನಡೆದಿರುವುದನ್ನು ಕಾಣುತ್ತೇವೆ ಆಡಳಿತದಲ್ಲಿ ಅಲ್ಲಲ್ಲಿ ಮರಾಠಿ, ತೆಲುಗು, ಉರ್ದು, ತಮಿಳು ಭಾಷೆಗಳ ಲಿಪಿಗಳು ಹಾಗೂ ಪತ್ರಗಳು ಸಿಗುತ್ತವೆ. ಆದರೆ ಸಂದರ್ಭಾನುಸಾರವಾಗಿ ಆಡಳಿತದಲ್ಲಿರುವ ಆ ಪತ್ರಗಳು ನಮಗೆ ಅರ್ಥವಾಗದಿರಬಹುದು ಆದರೆ ಆ ದಾಖಲೆಗಳಲ್ಲಿ ಏನಿದೆ ಎಂಬುದನ್ನು ತಿಳಿಯಲು ಭಾಷಾಂತರ ಗೊಳಿಸಬೇಕಾಗುತ್ತದೆ. ಇಲ್ಲವಾದಲ್ಲಿ ಅದರಲ್ಲಿ ಬರೆದ ವಿಷಯ ನಮಗೆ ತಿಳಿಯುವುದಿಲ್ಲ.

ಉದಾ: ೧೯೬೪ರಲ್ಲಿ ಸರ್ಕಾರ ಭೂ ಸ್ವಾಧೀನ ಪಡೆಸಿಕೊಂಡು ಪರಿಹಾರ ನೀಡಲಾದ ಬೀದರ್ ಜಿಲ್ಲೆಯ ಒಂದು ಪ್ರದೇಶದ ಮಾಹಿತಿ ನೀಡಲು ಕೊರಿ ಅರ್ಜಿ ಸಲ್ಲಿಸಲಾಗಿತ್ತು. ಆದರೆ

೧೯೬೪ರಲ್ಲಿ ಭೂ ಸ್ವಾಧೀನ ಪಡೆಸಿಕೊಂಡು ಪರಿಹಾರ ನೀಡಲಾದ ದಾಖಲೆಗಳು ಉರ್ದುವಿನಲ್ಲಿದ್ದರಿಂದ ಅದನ್ನು ಓದುವ ಗೋಜಿಗೆ ಹೊಗದೇ ಪರಿಹಾರ ನೀಡಲಾಗಿದೆ ಎಂದು ಉತ್ತರ ನೀಡಲಾಯಿತು. ಆದರೆ ಆಡಳಿತದಲ್ಲಿ ದಾಖಲೆಗಳನ್ನು ಸ್ಪಷ್ಟೀಕರಿಸುತ್ತದೆ ಹೊರತು ಬಾಯಿಮಾತಿನಿಂದಲ್ಲ. ಕಾರಣ ಸದರಿ ಕಡತವನ್ನು ಪುನಃ ವಿವರಣೆಗಾಗಿ ಪರಿಶೀಲಿಸಲು ಸೂಚಿಸಿದಾಗ ಕಡತದ ಅರ್ಧ ಭಾಗ ಬರಿ ಉರ್ದು ಭಾಷೆಯಲ್ಲಿ ಬರೆದಿರುವುದು ಕಂಡು ಬಂದ ಹಿನ್ನಲೆಯಲ್ಲಿ ಉರ್ದು ಮತ್ತು ಕನ್ನಡ ಬಲ್ಲ ವಿದ್ವಾಂಸರ ಹತ್ತಿರ ಅದನ್ನು ಅನುವಾದ ಮಾಡಿ ಓದಿಸಿದಾಗ ಪರಿಹಾರ ನೀಡಿದ ಬಗ್ಗೆ ಕಡತದಲ್ಲಿನ ಪತ್ರವೊಂದು ಸೂಚಿಸಿತು. **(ಅನುಬಂಧ-೧೨)**

ಕಾರಣ ಪರಿಹಾರಕ್ಕೆ ಸಂಬಂಧಪಟ್ಟಂತೆ ಬಂದ ಅರ್ಜಿಗೆ ಉತ್ತರದೊರೆತ ನಂತರ ಸದರಿಯವರು ಸುಮ್ಮನಾದರು. ಒಂದುವೇಳೆ 'ಅದೇನೋ ಪತ್ರ ಬಿಡಿ' ಎಂದು ಬಿಟ್ಟಿದ್ದರೆ ಪ್ರಕರಣ ಮುಂದುವರೆಯುತ್ತಿತ್ತು. ಕಾರಣ ಇಂತಹ ಹಲವಾರು ಪತ್ರಗಳು ಗಡಿ ಭಾಗಗಳಾದ ಮುಂಬೈ, ಮಹಾರಾಷ್ಟ್ರ, ಹೈದ್ರಬಾದ್ ಪ್ರಾಂತ್ಯದ ಭಾಗಗಳಲ್ಲಿ ಆ ಭಾಷೆಗಳಿಗೆ ಸಂಬಂಧಪಟ್ಟ ಕಚೇರಿಗಳಲ್ಲಿ ಇರುವುದು ಕಂಡು ಬರುತ್ತದೆ. ಆದರೆ ಆಗಿನ ಕಾಲದ ದಾಖಲೆಗಳು ಇಂತಹ ಮತ್ತು ಯಾವ ಸಂದರ್ಭದಲ್ಲಿಯೂ ಅಗತ್ಯವೂ ಅನಿವಾರ್ಯವೂ ಆಗಿ ಕಂಡುಬರುತ್ತವೆ.

ಒಂದು ಭಾಷೆಯ ಅನುವಾದ ಮಾಡುವುದು ಸುಲಭದ ಕೆಲಸವಲ್ಲ. ಅದರಲ್ಲಿ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳನ್ನು ಅನುವಾದ ಮಾಡುವುದು ತುಂಬಾ ಕಷ್ಟದ ಕೆಲಸ. ಭಾಷೆಗಳ ಬಗ್ಗೆ ಪ್ರಭುತ್ವ ಹೊಂದಿ, ಮೂಲಭಾಷೆಯ ಸಾಧ್ಯತೆಗಳನ್ನು ಹಾಗೆಯೇ ಬಳಕೆಗೆ ತರುವಂತೆ ಅನುವಾದವಾಗಬೇಕು.

ಆಡಳಿತದಲ್ಲಿ "A" ವೃಂದ ಅಧಿಕಾರಿಗಳು ಉನ್ನತ ಸ್ಥರಗಳಲ್ಲಿನ ಆಡಳಿತ ನಿರ್ವಹಣೆಯ ಸಂದರ್ಭದಲ್ಲಿ ತಾವು ಮೌಖಿಕವಾಗಿ ನೀಡಲಾದ ನಿರ್ದೇಶನಗಳು ಹಿಂದಿ ಅಥವಾ ಇಂಗ್ಲೀಷ್‌ನಲ್ಲಿ ಇರುತ್ತವೆ ಅನಿವಾರ್ಯವಾಗಿ ಕನ್ನಡಕ್ಕೆ ಅನುವಾದ ಮಾಡುವ ಸಂದರ್ಭದಲ್ಲಿ ಮೇಲಾಧಿಕಾರಿಗಳ ವಿಚಾರಗಳಿಗೆ ಧಕ್ಕೆ ಬರದಹಾಗೆ ಮತ್ತು ಹೇಳಲಾದ ವಿಷಯವನ್ನು ಬಿಡದಹಾಗೆ ಅನುವಾದವಾಗಬೇಕಿದೆ.

ಭಾಷಾಂತರದ ಸಂದರ್ಭದಲ್ಲಿ ಅನುವಾದಕಾರರು ಮೂಲ ಭಾಷೆಯನ್ನು ಗಮನದಲ್ಲಿಟ್ಟಿಕೊಂಡು ಮೂಲ ಭಾಷೆಯ ಪದಗಳ ಅನುವಾದ, ಲಿಪಿಗಳ ಅನುವಾದ, ಅರ್ಥಾನುವಾದ, ಭಾವಾನುವಾದ ಈ ನಿಟ್ಟಿನಲ್ಲಿ ಅನುವಾದಗೊಳ್ಳುವುದು ಸರ್ವೆಸಾಮಾನ್ಯವಾಗಿ ಕಂಡುಬರುತ್ತದೆ. ಆದರೆ ಈ ಮೇಲಿನವುಗಳಲ್ಲಿ ಯಾವ ಅನುವಾದವಾದರೂ ಮೂಲಭಾಷೆಯು ಹೇಳಲು ಹೊರಟಿರುವ ಅರ್ಥ ಕೆಡವಂತಿರಬಾರದು.

ಅನುವಾದ ಅಥವಾ ಭಾಷಾಂತರದ ಚರಿತ್ರೆ ವಿಸ್ತಾರವಾಗಿದೆ. ಅದರ ಗೋಜಿಗೆ ಹೊಗುವುದು ಮತ್ತು ಅದನ್ನು ವಿಸ್ತರಣೆ ಮಾಡುವುದು ಪ್ರಸ್ತುತ ಸಂದರ್ಭದಲ್ಲಿ ಸಮಂಜಸತೆ ಅನಿಸುವುದಿಲ್ಲ. ಆದರೆ ಆಡಳಿತಕ್ಕೆ ಸಂಬಂಧಿಸಿದಂತೆ ಅನುವಾದ ದೋಷಗಳು ಮತ್ತು ಸಮಸ್ಯೆಗಳನ್ನು ಗುರುತಿಸುವ ಕೆಲಸ ಮಾತ್ರ ಇಲ್ಲಿ ಅವಶ್ಯಕತೆಯನ್ನು ಪಡೆದುಕೊಳ್ಳುತ್ತದೆ. ಆಡಳಿತದಲ್ಲಿ ಕೆಲವೊಂದು ವಿಷಯಗಳು

ಇಂಗ್ಲೀಷಿನಲ್ಲಿರುವುದು ಮತ್ತು ಇಂಗ್ಲೀಷಿನ ಪ್ರಭಾವ ಹೆಚ್ಚಾಗಿರುವುದು ಕಾಣುತ್ತದೆ. ಬಹು ಭಾಷಿಗರಿರುವ ಕರ್ನಾಟಕದಲ್ಲಿ ಆಡಳಿತ ಎಲ್ಲವುದನ್ನೂ ಕನ್ನಡದಲ್ಲಿಯೇ ನಡೆಸುತ್ತೇವೆ ಎಂಬುದು ಪ್ರಸ್ತುತ ಸಂದರ್ಭದಲ್ಲಿ ಕಷ್ಟ.

ಆಡಳಿತ ಕನ್ನಡದಲ್ಲಿ ನಡೆಸುತ್ತಿದ್ದರೂ ಆಡಳಿತದ ಕೆಲವೊಂದು ಆದೇಶಗಳು, ಸುತ್ತೋಲೆಗಳು ಬಹುಭಾಷಿಗರು ವಾಸವಾಗಿರುವ ಕರ್ನಾಟಕದಲ್ಲಿ ಪ್ರತಿಯೊಬ್ಬರಿಗೂ ಮುಟ್ಟಬೇಕಾದರೂ ಎರಡು ಅಥವಾ ಮೂರು ಭಾಷೆಗೆ ಆದೇಶಗಳು, ಸುತ್ತೋಲೆಗಳು, ಅನುವಾದಗೊಂಡು ಪ್ರಚಾರವನ್ನು ಪಡೆಯಬೇಕಾಗುತ್ತದೆ. ಹೀಗಾಗಿ ಆಡಳಿತದಲ್ಲಿ ಅನುವಾದಗಳ ಅವಶ್ಯಕತೆ ಇದೆ ಹಾಗೂ ಅನುವಾದವು ಸರಳವಾಗಿ ಪ್ರಚಲಿತದಲ್ಲಿರುವ ಪದಗಳನ್ನು ಬಳಸಿ ಅರ್ಥಕ್ಕೆ ಧಕ್ಕೆ ಬಾರದಂತೆ ಯಾಂತ್ರಿಕವಾಗಿರದೇ ಹಾಗೆ ಆಡಂಬರ ಅಲಂಕಾರಿಕೆ ಭಾಷೆಯನ್ನು ಅಥವಾ ಪದಗಳನ್ನು ಬಳಸದೇ ಅನುವಾದವಾಗಬೇಕು.

ಒಬ್ಬ ಅನುವಾದಕಾರನಿಗೆ ಭಾಷೆ ಮತ್ತು ಭಾಷೆಯ ವಿವಿಧ ಆಯಾಮಗಳ ಬಗ್ಗೆ ಪರಿಚಯವಿರಬೇಕು. ವ್ಯಾಕರಣದ ಜ್ಞಾನ ಅವಶ್ಯವಿರಬೇಕು, ಭಾಷಾಂತರದ ಮೇಲೆ ಸರಿಯಾದ ಹಿಡಿತವನ್ನು ಸಾಧಿಸಿರಬೇಕು. ಒಂದು ಅನುವಾದದಲ್ಲಿ ನಿಖರತೆ, ನಿರ್ದಿಷ್ಟತೆ ಅಗತ್ಯವಾಗಿದ್ದು ಪಾರದರ್ಶಕ ಸ್ವಭಾವ ಹೊಂದಿದ್ದು ಮೂಲ ಭಾಷೆಗೆ ಧಕ್ಕೆಯಾಗುವಂತೆ ನಡೆದುಕೊಳ್ಳಬಾರದು. ಮೂಲ ಭಾಷೆಗೆ ಧಕ್ಕೆ ಆಗುವಂತೆ ನಡೆದುಕೊಂಡಲ್ಲಿ ಲೇಖಕರ ವಿಷಯದ ಕೊಲೆ ಹಾಗೂ ಅವರ ಭಾವನೆಗಳನ್ನು ಕೊಲೆ ಮಾಡಿದಂತಾಗುತ್ತದೆ. ಸ್ಪಷ್ಟ ಹಾಗೂ ಸರಳವಾಗಿ ಮೂಲ ಭಾವನೆಗಳಿಗೆ ಧಕ್ಕೆ ಬಾರದ ಹಾಗೆ ಅನುವಾದವಾಗಬೇಕು. ಭಾಷಾಂತರದಲ್ಲಿ ಈ ಮೇಲೆ ತಿಳಿಸಿದಂತೆ ಪದ ಪದಗಳ ಭಾಷಾಂತರ

ಉದಾ:- ಅವನು ಹುಡುಗ	He is A Boy
ಸಹೃದಯಿ	Heart Full Person
ಕೃಷಿಭೂಮಿ	Agricultural Land
ಮಾನ್ಯರೇ, ಸ್ವಾಮಿ ಮಹಾಶಯರೇ	Sir, Madam, Dear

ಎಂದೆಲ್ಲಾ ಪದಗಳ ಅನುವಾದವಾಗುತ್ತದೆ ಆದರೆ ಎಲ್ಲಾ ಸಂದರ್ಭದಲ್ಲೂ ಪದಪದಗಳ ಅನುವಾದಕ್ಕೆ ಅವಕಾಶವಿಲ್ಲ. ಹಾಗೂ ಪ್ರತಿಯೊಂದೂ ಸಂದರ್ಭಗಳಲ್ಲಿ ಪದಪದಗಳ ಅನುವಾದ ಇರುವುದೂ ಇಲ್ಲ. ಈ ಹಿನ್ನೆಲೆಯಲ್ಲಿ ಪದದ ಭಾಷಾಂತರ ಆಗುವುದು ತುಂಬಾ ಕಡಿಮೆ.

ಉದಾಹರಣೆಗೆ; ಶಂಬರ್ - ನೂರು.

ಡೌಡು - ಬೇಗ, ಓಡು

ಭಾಷೆಯ ಲಿಪ್ಯಾಂತರಕ್ಕೆ ಮೂಲ ಲಿಪಿಯನ್ನು ಇನ್ನೊಂದು ಭಾಷೆಗೆ ಅನುವಾದ ಮಾಡುವುದೇ ಲಿಪ್ಯಾಂತರ. ಲಿಪ್ಯಾಂತರದಲ್ಲಿ ಮೂಲ ಭಾಷೆಯು ಹಾಗೆ ಇದ್ದು ಆದರ ಬರವಣಿಗೆಯ ಲಿಪಿ ಮಾತ್ರ ಬದವಣೆಯಾಗಿ ಭಾಷಾಂತರಗೊಳ್ಳುತ್ತದೆ.

ಲಿಪ್ಯಾಂತರದ ಪದಗಳು

ಉದಾಹರಣೆಗಾಗಿ:- ಕೋರ್ಟ್, ಸಿಮೆಂಟ್, ಪೋಲೀಸ್, ಬಸ್ಸು, ಸ್ಕೋ, ಸ್ಕೂಟರ್, ಬೂಟ್, ಕಾರು, ಸಿವಿಲ್, ಬೆಂಚ್, ಪೆನ್ನು, ಪೆನ್ಸಿಲ್, ಮೊಬೈಲ್, ಬುಕ್, ರಿಜಿಸ್ಟಾರ್, ಡಯಾಗ್ಲಾಟ್. ಆಕಾರ ಬಂದ್, ಫ್ಯಾನ್, ಕ್ಯಾಲೆಂಡರ್, ಕ್ಷೇಮ್, ನಟ್ಟು, ಬೋಲ್ಟ, ವೈಂಡಿಂಗ್, ವಯರ್, ಬ್ಲಾಕ್, ಫೈಲ್, ನೋಟ್, ಪಿನ್, ಟ್ರೈ, ಪೋಕರ್, ಪೇಪರ್, ಕ್ಯಾಲುಕೆಲೇಟರ್, ಸ್ಟಾಂಪ್, ಸೀಲ್, ಟ್ಯಾಗ್, ಇಂಕ್, ರಬ್ಬರ್, ಕವರ್, ಟೆಂಡರ್, ಕ್ಯಾಶ್‌ಬುಕ್, ಚೆಕ್, ಇಂಜಿನಿಯರ್, ಕಮಿಷನರ್ ಇತ್ಯಾದಿ ಪದಗಳು

ಹಲವಾರು ಶಬ್ದಗಳನ್ನು ಮೂಲಭಾಷೆಯಿಂದಲೇ ನೇರವಾಗಿ ಅನುವಾದಗೊಂಡಿರದೆ ಹಾಗೆಯೇ ಲಿಪ್ಯಾಂತರವಾದ ಶಬ್ದಗಳಾಗಿವೆ. ಈ ಲಿಪ್ಯಾಂತರದ ಶಬ್ದಗಳು ನಮ್ಮ ಕನ್ನಡದ ಶಬ್ದಗಳೆ ಎನ್ನುವಷ್ಟರ ಮಟ್ಟಿಗೆ ತನ್ನ ಪ್ರಭಾವ ಮತ್ತು ಸ್ಥಾನವನ್ನು ಭದ್ರವಾಗಿರಿಸಿಕೊಂಡಿವೆ ಹಾಗೂ ಆಡಳಿತದಲ್ಲಿ ಕೂಡಿಹೋಗಿವೆ. ಈ ಮೇಲೆ ಆದ ಲಿಪ್ಯಂತರದಲ್ಲಿ ಕೆಲವೊಂದು ಶಬ್ದಗಳ ಅನುವಾದ ಮಾಡುವ ಸಂದರ್ಭದಲ್ಲಿ ಮೂಲಭಾಷೆಯಿಂದಲೇ ಲಿಪ್ಯಾಂತರ ಮಾಡಿಕೊಂಡು ಬಳಸಲಾಗುತ್ತದೆ. ಹೀಗೆ ಆದಲ್ಲಿ ಮೂಲ ಅರ್ಥಗಳು ಕೆಡುತ್ತವೆಂಬ ಭಾವನೆ.

ಉದಾ:- ಟೆಂಡರ್ ಎನ್ನುವ ಪದವನ್ನು ತರ್ಜುವೇ ಮಾಡಲು ಎಷ್ಟೆಲ್ಲಾ ಪ್ರಯತ್ನಗಳು ನಡೆದರೂ ಆಡಳಿತದಲ್ಲಿ ಮೂಲಭಾಷೆಯ ಪದವನ್ನೆ ಲಿಪ್ಯಾಂತರ ಮಾಡಿಕೊಂಡು ಬಳಸಲಾಗುತ್ತದೆ. ಇಲ್ಲಿ ಕನ್ನಡಕ್ಕೆ ಅದನ್ನು ಅನುವಾದ ಮಾಡಲು ಪದಗಳು ಇಲ್ಲಾ ಎಂದಲ್ಲಾ ಅನುವಾದ ಮಾಡಿದಾಗ ಮೂಲ ಅರ್ಥ ಕೆಡಬಾರದೆಂಬ ಭಾವನೆಯಿಂದ ಇಂಗ್ಲೀಷನ್ನು ಮೂಲ ಪದವನ್ನು ಹಾಗೆಯೇ ಲಿಪ್ಯಂತರವನ್ನಾಗಿ ಪರಿವರ್ತಿಸಿಕೊಂಡು ಬಳಸಲಾಗುತ್ತದೆ. ಲಿಪ್ಯಂತರವಾದ ನಂತರದಲ್ಲಿ ಕೆಲವೊಂದು ಪದಗಳಿಗೆ ಅರ್ಥವನ್ನು ಕಂಡುಕೊಂಡಿದ್ದರೂ ಹಾಗೆಯೇ ಇರಲಿ ಮೂಲಪದ ಎಂಬ ಭಾವನೆಗಳನ್ನು ತಾಳಿದ್ದುಂಟು.

ಉದಾ: ಕವರ್, ಬ್ಲಾಕ್, ರಿಜಿಸ್ಟರ್, ಡಯಾಗ್ಲಾಟ್, ಆಕಾರ್ ಬಂದ್, ಬಸ್ಸು, ಕಾರು, ಸ್ಕೂಟರ್, ಇತ್ಯಾದಿ. ಇವುಗಳು ಅನುವಾದವಾದಲ್ಲಿ ಇವುಗಳ ಮೂಲ ಭಾಷೆಯ ಪದದ ಅರ್ಥ ನಮ್ಮ ಬಳಕೆಯಲ್ಲಿ ಕೆಟ್ಟುಹೋಗುತ್ತವೆಂಬ ಭಾವನೆಯಿಂದ ಸದರಿ ಪದಗಳನ್ನು ಲಿಪ್ಯಂತರ ಮಾಡಲಾಗಿದೆ. ಹಾಗೂ ಅವುಗಳನ್ನು ಹಾಗೆಯೇ ಬಳಸಲಾಗುತ್ತಿದೆ.

ಸಾಮಾನ್ಯವಾಗಿ ಹಳ್ಳಿಯ ಜನರಲ್ಲಿಯೂ, ಅನಕ್ಷರಸ್ಥರಲ್ಲಿಯೂ ಸಹ ಈ ಲಿಪ್ಯಂತರದ ಪದಗಳು ಮನೆಮಾತಾಗಿರುವುದು ಯಥೇಚ್ಚವಾಗಿ ಕಂಡುಬರುತ್ತವೆ ಈ ನಿಟ್ಟಿನಲ್ಲಿ ಇಂಗ್ಲೀಷಿನ ಪದಗಳು ಲಿಪ್ಯಂತರವಾಗಿ ಬಂದ ಪದಗಳನ್ನು ಹಾಗೆಯೇ ಬಳಸಬೇಕು, ಒಂದು ವೇಳೆ ಹಾಗೆ ಬಳಸದಿದ್ದ ಪಕ್ಷದಲ್ಲಿ ಅನರ್ಥಕ್ಕೆ ಕಾರಣವಾಗುತ್ತವೆ. ಹೀಗಾಗಿ ಕಾಲಕಳೆದಂತೆ ಅವುಗಳ ಬಳಕೆಯು ನಿಧಾನಗತಿಯಲ್ಲಿ ಆದರೂ ಪರವಾಗಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಅವುಗಳನ್ನು ಹಾಗೆಯೇ ಮುಂದುವರೆಸಲು ಕೆಲವೊಂದು ಸಂದರ್ಭದಲ್ಲಿ ಸೂಕ್ತವೆಂದು ಭಾಷಾತಜ್ಞರು ಅಭಿಪ್ರಾಯಪಡುತ್ತಾರೆ.

ಭಾಷಾಂತರ ಗೋಜಿಗೆ ಹೋಗದೇ, ಭಾಷಾಂತರದ ಗೋಜು ಬೇಡವೆಂದು ರೂಢಿಯಲ್ಲಿರುವ ಇಂಗ್ಲೀಷ್ ಭಾಷೆಯಿಂದಲೇ ಆಡಳಿತ ಭಾಷೆ ಬೆಳೆಯಲೆಂಬ ಮನೋಭಾವವೋ ಅಥವಾ ಅವೇ ಪದಗಳೇ ಜನಜನಿತವಾಗಿವೆ ಅವುಗಳನ್ನೇ ಬಳಸಿದರಾಯಿತು ಎಂಬ ಭಾವನೆಯಿಂದಲೋ ಇಂಗ್ಲೀಷ್ ಪದಗಳಿಗೆ ಕೊನೆಯಲ್ಲಿ 'ಉ'ಕಾರವನ್ನು ಸೇರಿಸಿ ಬಳಕೆಗೆ ತರಲಾಗಿದೆ.

ಉದಾ;- ರೈಲ್-ರೈಲು, ಪೋಸ್ಟ್-ಪೋಸ್ಟು,
ಕೋರ್ಟ್-ಕೋರ್ಟು, ವಾರೆಂಟ್-ವಾರೆಂಟು,
ಹೀಯರಿಂಗ್-ಹಿಯರಿಂಗು, ಸಸ್ಪೆಂಡ್-ಸಸ್ಪೆಂಡು,
ಡಿಸ್ ಮಿಸ್-ಡಿಸ್ ಮಿಸ್ಸು, ಎಫಿಡೆವಿಟ್-ಎಫಿಡೆವಿಟ್ಟು,
ಸಿಮೆಂಟ್-ಸಿಮೆಂಟು.

ಎಲ್ಲರ ಮನೆಮಾತಾಗಿರುವ ಲಿಪ್ಯಂತರದ ಪದಗಳನ್ನು ಹೋಗಲಾಡಿಸಿ ಆ ಸ್ಥಳದಲ್ಲಿ ಅನುವಾದದ ಪದಗಳನ್ನು ತರುವುದು ಮತ್ತು ಆ ಪದಗಳು ಆಡಳಿತದಲ್ಲಿ ಹೊಂದಿಕೊಳ್ಳುವಂತೆ ಮಾಡುವುದು ಪ್ರಾರಂಭದಲ್ಲಿ ಕಷ್ಟವೆನಿಸಿದರೂ ಅದನ್ನು ಜಾರಿಗೆ ತರುವ ಕಾರ್ಯ ಆಗಬೇಕಿದೆ.

ಲಿಪ್ಯಂತರದ ಬಳಕೆ ಸಂದರ್ಭಕ್ಕೆ ತಕ್ಕಂತೆ ಆಗಬೇಕಾಗಿದೆ ಜನಸಾಮಾನ್ಯರಿಗೆ ಮತ್ತು ಆಡಳಿತ ನಡೆಸುವ ಅಧಿಕಾರಿಗಳಿಗೆ ಲಿಪ್ಯಂತರದ ಪದಗಳು ಜನಜನಿತವಾಗಿವೆ. ಅವುಗಳನ್ನು ಆಡಳಿತದ ಪದಗಳಾಗಿ ಕನ್ನಡದ ಪದಗಳೆಂದು ಭಾವಿಸಿ ಬಳಸುವುದು ಸೂಕ್ತವೆಂದು ಕೆಲವರ ಅಭಿಪ್ರಾಯ.

ಇನ್ನೊಂದು ದಿಕ್ಕಿನಲ್ಲಿ ಮೇಲಿನ ಉದಾಹರಣೆಗಳನ್ನು ಗಮನಿಸಿದ ಚಿಂತಕರು ಪೂರ್ಣ ಪ್ರಮಾಣದಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆಗೆ ಇನ್ನೂ ತನ್ನ ಸಾಮರ್ಥ್ಯವನ್ನು ಹೊಂದಿಲ್ಲ ಎಂಬ ಮಾತುಗಳು ಕೇಳಿಬಂದವು. ನಂತರದಲ್ಲಿ ವಾದ ಕೇಳಿದ ಇನ್ನೊಂದು ಬಣ ಆಡಳಿತದಲ್ಲಿ ಪೂರ್ಣ ಪ್ರಮಾಣದಲ್ಲಿ ಕನ್ನಡವನ್ನು ಬಳಸುವುದರ ಮಟ್ಟಿಗೆ ಕನ್ನಡ ಪ್ರಭುದ್ಧತೆಯನ್ನು ಪಡೆದಿಲ್ಲ. ಹೀಗಾಗಿ ಆಡಳಿತದಲ್ಲಿ ಕನ್ನಡ ಕಡ್ಡಾಯವಾಗಿ ಜಾರಿಗೊಳಿಸಲು ಸಾಧ್ಯವಿಲ್ಲ ಎನ್ನುತ್ತಾರೆ. ಅದೇನೇ ಇರಲಿ ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಇವೆಲ್ಲವುದಕ್ಕೆ ಕನ್ನಡ ಪದಗಳು ಸೃಷ್ಟಿಯಾಗಿದ್ದು, ಅಧಿಕಾರಿಗಳು ಮತ್ತು ನೌಕರರು ಆಡಳಿತದಲ್ಲಿ ಜಾರಿಗೆ ತಂದು ಅವುಗಳು ಜನರಿಗೆ ತಲುಪಿ ಪೂರ್ಣ ಪ್ರಮಾಣದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಶ್ರಮಿಸಿದಲ್ಲಿ ಮಾತ್ರ ಲಿಪ್ಯಂತರದ ಪದಗಳು ದೂರವಾಗಲು ಸಾಧ್ಯ.

ಅಲ್ಲದೇ ಈ ಬಳಕೆಯಿಂದ ಈಗಾಗಲೇ ಹಲವಾರು ಪದಗಳು ದೂರ ಸರಿಯುತ್ತಲಿರುವುದು ಆಡಳಿತದಲ್ಲಿ ಕನ್ನಡ ಪದಗಳ ಬಳಕೆಗೆ ಸಾಕ್ಷಿಯಾಗಿ ಕಂಡುಬರುತ್ತದೆ, ಉದಾ:- ಫೈಲ್-ಕಡತ, ಕ್ಯಾಶ್‌ಬುಕ್-ನಗದು ಪುಸ್ತಕ, ಕೋರ್ಟ-ನ್ಯಾಯಾಲಯ. ಆಡುಮಾತಿನಲ್ಲಿ ಲಿಪ್ಯಂತರದ ಪದಗಳಿದ್ದು ಆಡಳಿತದಲ್ಲಿ ಲಿಪ್ಯಂತರದ ಪದಗಳು ಅನುವಾದಗಳಾಗಿ ಕನ್ನಡ ಪದಗಳು ಬಳಕೆಯಾಗಿರುವುದನ್ನು ಇತ್ತೀಚಿನ ದಿನಗಳಲ್ಲಿ ಆದ ಬದಲಾವಣೆ ಎನ್ನಬಹುದು.

ಭಾವಾನುವಾದ, ಅರ್ಥಾನುವಾದದಲ್ಲಿ ಒಂದು ಪತ್ರದಲ್ಲಿನ ವ್ಯಕ್ತವಾಗಬಲ್ಲ ಭಾವನೆ ಹೇಗಿದೆ ಹಾಗೆಯೇ ಅದನ್ನು ಭಾಷಾಂತರಗೊಳಿಸಬೇಕು

ಉದಾಹರಣೆಗೆ:– ಕೇಂದ್ರದಲ್ಲಿ ಆಡಳಿತ ನಡೆಸುವ ಸರ್ಕಾರವು ಹಿಂದಿಯಲ್ಲಿ ದೇಶಕ್ಕೆ ಸಂಬಂಧಪಟ್ಟ ಒಂದು ಶೋಕದ ಸುತ್ತೋಲೆಯನ್ನು ಹೊರಡಿಸಿದರೆ ಅದರಲ್ಲಿನ ಭಾವನೆಗೆ ಧಕ್ಕೆಯಾಗದಂತೆ ಅನುವಾದಗೊಳ್ಳಬೇಕಿದೆ. ಒಂದುವೇಳೆ ಅದರಲ್ಲಿನ ಕೇವಲ ವಿಚಾರಗಳನ್ನು ಬಿಟ್ಟು ಅಥವಾ ಬೇರೊಂದು ಅಪ್ರಸ್ತುತ ವಿಷಯವನ್ನು ಸೇರಿಸಿ ಅನುವಾದ ಮಾಡಿದಲ್ಲಿ ಮೂಲ ಭಾಷೆಗೆ ಹಾಗೂ ಭಾಷೆಯ ಮೂಲ ಭಾವನೆಗೆ ಧಕ್ಕೆ ಬಂದಂತಾಗುತ್ತದೆ.

ಅರ್ಥಾನುವಾದದಲ್ಲಿ ಒಂದು ಪತ್ರದಲ್ಲಿನ ಸುತ್ತೋಲೆ, ತಿಳವಳಿಕೆ ಮುಂತಾದವುಗಳನ್ನು ಇನ್ನೊಂದು ಭಾಷೆಯಲ್ಲಿ ಅರ್ಥಾನುವಾದವಾಗುವ ರೀತಿಯಲ್ಲಿ ಅನುವಾದ ಮಾಡಿ ಅದನ್ನು ಸಾರ್ವಜನಿಕರಿಗೆ ಮುಟ್ಟಿಸುವುದು ಇಲ್ಲಿನ ಮುಖ್ಯವಾದ ಅಂಶ. ಅರ್ಥಾನುವಾದವು ಪತ್ರದಲ್ಲಿನ ಹಿಡಿಯಾದ ಅರ್ಥವನ್ನು ವಿವರಿಸಿ ಹೇಳುತ್ತದೆ. ಭಾವಾನುವಾಗಲಿ, ಅರ್ಥಾನುವಾಗಲಿ ಮೂಲಭಾಷೆಗೆ ಮತ್ತು ಅರ್ಥಕ್ಕೆ, ಭಾವನೆಗೆ, ಸ್ಪಷ್ಟತೆಗೆ ದಕ್ಕೆ ಉಂಟು ಮಾಡುವಂತಿರಬಾರದು. ಶಬ್ದಾನುವಾದ ಮತ್ತು ಲಿಪ್ಯಾಂತರಗಳ ಅನುವಾದಗಳು ಮುಖ್ಯವಾಗಿ ನಮ್ಮಲ್ಲಿ ಕೆಲವು ಆಡಳಿತದಲ್ಲಿ ಕೂಡಿ ಕೊಂಡಿರುವುದು ಕಂಡುಬರುತ್ತದೆ. ಲಿಪ್ಯಾಂತರಗಳು ಇಲ್ಲದೇನೇ ಅಥವಾ ಶಬ್ದನುವಾದ ಇಲ್ಲದೇನೆ ಕಾರ್ಯನಿರ್ವಸಲು ಸಾಧ್ಯವಿಲ್ಲ ಎಂಬ ಮಟ್ಟಿಗೆ ಆಡಳಿತದಲ್ಲಿ ಒಗ್ಗೂಡಿಕೊಂಡು ಹೋಗಿದೆ.

ಉದಾಹರಣೆಗಾಗಿ;–

೧. ಆಸ್ಪತ್ರೆಗಳಲ್ಲಿನ ಬಳಕೆಯ ಭಾಷೆ

೨. ಔಷದ ವಿತರಣಾ ಇಲಾಖೆ–ಹೋಮಿಯೋಪತಿ, ಹಲೋಪತಿ, ವಿವಿಧ ತಪಾಸಣೆಗಳ ಹೆಸರು.

೩. ಮೀನುಗಾರಿಕಾ ಇಲಾಖೆ – ಮೀನಿನ ಹೆಸರುಗಳು

೪. ಇಲಾಖೆಗಳ ಕೆಲವೊಂದು ಹುದ್ದೆಗಳ ಪದನಾಮಗಳು.

೫. ಚುನಾವಣಾ ಶಾಖೆಗಳು – ಬ್ಯಾಲೆಟ್ ಪೇಪರ್, ಐಡಬಲ್ ಇಂಕ್

೬. ಬ್ಯಾಂಕುಗಳ ವ್ಯವಹಾರಗಳು ಇತ್ಯಾದಿ,

ಹಲವಾರು ಭಾಗಗಳಲ್ಲಿ ಇನ್ನೂ ಆಡಳಿತದಲ್ಲಿ ಕನ್ನಡ ಪದಗಳು ಬಳಕೆಯಾಗುತ್ತಿಲ್ಲವೆಂಬುದು ಒಂದು ಕೊರಗಾಗಿ ಉಳಿದಿದೆ. ಈ ಸಂದರ್ಭದಲ್ಲಿ ಅದಕ್ಕೆಲ್ಲಾ ಪರ್ಯಾಯ ವಿಧಾನ ಮತ್ತು ಪಾರಿಭಾಷಿಕ ಪದಗಳ ಬಳಕೆಗಳು ಪ್ರಚಲಿತದಲ್ಲಿದ್ದರೂ ಅವುಗಳ ಬಳಕೆಯಾಗುತ್ತಿಲ್ಲವೆಂಬ ಅಳಲು ಆಡಳಿತ ಕನ್ನಡವನ್ನು ಕಾಡುತ್ತಿದೆ ಮತ್ತು ಅವುಗಳ ಬಳಕೆಯಾಗಬೇಕೆಂಬ ವಾದವು ನಮ್ಮದಾಗಿದೆ.

ಆಡಳಿತದಲ್ಲಿ ಕನ್ನಡವೆಂದಾಕ್ಷಣ ಆಸ್ಪತ್ರೆಗಳ ಕಡೆ ಅಥವಾ ಅಲ್ಲಿನ ಆಡಳಿತದಲ್ಲಿ ಕನ್ನಡದ ಬಗ್ಗೆ ಮಾತನಾಡಬಾರದೆಂಬ ಪರಿಸ್ಥಿತಿ ನಮಗೆ ಕ್ಷೇತ್ರಧ್ಯಾಯನ ಸಂದರ್ಭದಲ್ಲಿ ಆದ ಅನುಭವ. ಹೀಗಾಗಿ ಇನ್ನೂ ಕೆಲವೊಂದು ಇಲಾಖೆಗಳು ಪೂರ್ಣಪ್ರಮಾಣದಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆಯನ್ನು ಜಾರಿಗೆ ತರುವಲ್ಲಿ ವಿಫಲ ಹಾಗೂ ಇಂಗ್ಲೀಷ್‌ಗೆ ಕಟ್ಟಿ ಬಿದ್ದ ಜಾಯಮಾನ ಎದ್ದು

ಕಾಣುತ್ತಿದೆ. ಇಲ್ಲಿಯೂ ಸಹ ಪರಿಪೂರ್ಣ ಆಡಳಿತ ಕನ್ನಡ ಜಾರಿಯಾಗಬೇಕೆಂಬ ಉದ್ದೇಶವಿದ್ದರೂ ಅಲ್ಲಿನ ಪರಿಸ್ಥಿತಿ, ಎಡೆಮಾಡಿಕೊಡುತ್ತಿಲ್ಲವೆಂಬುದು ನಿತ್ಯದ ಸಂಗತಿ.

ಅನುವಾದ ಅಥವಾ ಭಾಷಾಂತರವಾಗುವ ಸಂದರ್ಭದಲ್ಲಿನ ಸಮಸ್ಯೆ ಅಥವಾ ದೋಷಗಳು.

೧. ಅನುವಾದವು ವ್ಯಾಕರಣ ಬದ್ಧವಾಗಿ ಆಗುತ್ತಿಲ್ಲ, ಹಾಗೂ ವ್ಯಾಕರಣದ ಪರಿಪೂರ್ಣ ಜ್ಞಾನ ಅನುವಾದಕರಿಗೆ ಇಲ್ಲವೆಂಬುದು ಅಪವಾದ. ಇದ್ದರೂ ಬೆರಳೆಣಿಕೆಯಷ್ಟು ಮಾತ್ರ.

ಉದಾ:- ಕ್ಕಿಂತ, ಗಿಂತ, ಇಂದ ಕತೃ, ಕರ್ಮ, ಕ್ರಿಯೆ ಲಿಂಗ ವಚನ, ವಿಭಕ್ತಿ ಪ್ರತ್ಯಯ, ಮೊದಲಾದವುಗಳ ವ್ಯಾಕರಣ ಜ್ಞಾನವಿರಬೇಕು. ದ್ವಿರುಕ್ತಿ ಅನುವಾದಕನಿಗೆ ವಿವಿಧ ಭಾಷೆಗಳ ವ್ಯಾಕರಣದ ಜ್ಞಾನ ಸ್ಪಷ್ಟವಾಗಿರಬೇಕು. ವ್ಯಾಕರಣದ ಜ್ಞಾನವಿಲ್ಲದೆ ಹಾಗೂ ಎರಡೂ ಭಾಷೆಗಳಲ್ಲಿನ ಪ್ರಭುತ್ವ ಇರದೇ ಅನುವಾದ, ಸರಿಯಾದ ಅನುವಾದವಾಗಲು ಸಾಧ್ಯವಿಲ್ಲ ಹೀಗಾಗಿ ಎರಡು ಭಾಷೆಗಳ ಅರಿವು ಅಗತ್ಯ.

೨. ಅನುವಾದಕರು ಮೂಲ ಲೇಖಕರ ಭಾವನೆ ಬರಹಗಳನ್ನು ಒಪ್ಪಿ ಅವುಗಳನ್ನು ಅನುವಾದಿಸಬೇಕಾಗುತ್ತದೆ. ಅದರೆ ಇಲ್ಲಿ ಅವುಗಳ ಅನುವಾದಲ್ಲಿ ಮೂಲ ಭಾವನೆಗಳನ್ನು ಅಥವಾ ಮೂಲರ್ಥಗಳು ಗೌಣವಾಗುವ ರೀತಿಯಲ್ಲಿ ಇಂದಿನ ಭಾಷಾಂತರಗಳಾಗುತ್ತಿವೆ.

೩. ಹಿಂದೆ ಯಾವ ಸಂದರ್ಭದಲ್ಲಿ ಪ್ರಸ್ತುತ ಲೇಖನ ಪ್ರಕಟಣೆ ವಸ್ತು ವಿಷಯ ಆಗಿರುತ್ತದೆಯೋ ಅನುವಾದವು ಅದನ್ನೆ ಪ್ರತಿಬಿಂಬಿಸುವಂತೆ ನಡೆಯಬೇಕು.

೪. ಅನುವಾದದಲ್ಲಿ ಮೂಲ ವಿಷಯವು ಕೆಡಬಾರದೆಂಬ ಕಾರಣಕ್ಕೆ, ಅನುವಾದಕರು ಗೊಂದಲಕ್ಕೆ ಸಿಲುಕಿ ಹಾಕಿಕೊಳ್ಳುವ ಸಂದರ್ಭದ ಹೆಚ್ಚಾಗಿ ಕಂಡುಬರುತ್ತದೆ. ಮೂಲಭಾಷೆ ರಚಿಸಲಾದ ವಾತಾವರಣ ಸಂಸ್ಕೃತಿ, ವ್ಯಕ್ತಿತ್ವ, ಭಾಷೆ ಇವುಗಳು ಒಂದಾಗಬೇಕಾಗಿದೆ. ಭಾಷಾಂತರಕರನಿಗೆ ಈ ಭಾಷೆಗಳ ನಡುವಣ ಅಸಮಂಜಸ್ಯತೆ ಇರಬಾರದು. ಭಿನ್ನ ಸಂಸ್ಕೃತಿ, ಭಿನ್ನ ವ್ಯಕ್ತಿತ್ವ, ಇಲ್ಲಿ ತೊಡಕುಗಳಾಗಿ ಪರಿಣಮಿಸುತ್ತವೆ ಇವುಗಳಿರಬಾರದೆಂಬುದು ಹಾಗೂ ಮೂಲರಚನೆ ಹಾಗೂ ನಂತರದ ಅನುವಾದ ಒಂದೇ ನೆಲೆಯಲ್ಲಿ ಭಾಷಾಂತರವಾಗಬೇಕು ಎಂಬುದು ಭಾಷಾಂತರದ ಹಿನ್ನೆಲೆಯಲ್ಲಿ ಕೇಳಿಬರುವ ವಾದವಾಗಿದೆ.

೫. ಅರ್ಥ ವ್ಯತ್ಯಾಸಗಳಾಗದಂತೆ ಅನುವಾದಕರು ಭಾಷಾಂತರ ಮಾಡಬೇಕಾಗುತ್ತದೆ ಇಲ್ಲಿಯೂ ಅನೇಕ ತೊಡಕುಗಳನ್ನು ಕಾಣುತ್ತೇವೆ ಹೀಗಾಗಿ ಅನುವಾದವು ಒಂದು ಕ್ಲಿಷ್ಟಕರವಾದ ಕಲೆ ಹಾಗೂ ದ್ವಿಭಾಷೆ ವ್ಯಾಕರಣ ಬಲ್ಲವರು ತಿಳಿದಿರುವವರು ಮಾತ್ರ ಮಾಡಲು ಸಾಧ್ಯವೆಂಬ ಪರಿಕಲ್ಪನೆ ಇದೆ.

ಅನುವಾದಗಳಿರುವ ತೊಡಕುಗಳು ಅಥವಾ ಸಮಸ್ಯೆಗಳು ಈ ಕೆಳಕಂಡಂತೆ ಕಾಣಬಹುದು .

೧. ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದ ಮಾಡುವವರ ಕೊರತೆ ಇದೆ.

೨. ಭಾಷಾಂತರದಲ್ಲಿ ವ್ಯಾಕರಣ ಬದ್ಧವಾಗಿರದ ಎಡರು ತೊಡರುಗಳು.

೩. ಒಂದೇ ರೀತಿಯ ಪತ್ರಗಳು ಇಬ್ಬರೂ ಭಾಷಾಂತರಕಾರರಿಗೆ ಕೊಟ್ಟಾಗ ವಿಭಿನ್ನ ರೀತಿಯಲ್ಲಿ ಭಾಷಾಂತರವಾಗುತ್ತದೆ. ಇದರಿಂದ ಭಾಷಾಂತರದಲ್ಲಿ ಸೌಮ್ಯತೆ ಇಲ್ಲದಿರುವ ಸಮಸ್ಯೆ ಕಂಡುಬರುತ್ತದೆ.

೪. ಭಾಷಾಂತರ ಹೇಗೆಯೇ ಆಗಲಿ ಮೂಲ ಭಾಷೆಯಲ್ಲಿನ ವಿವರ ಆಡಳಿತದಲ್ಲಿ ಅದರ ಅರ್ಥ ಪೂರ್ಣವಾಗುವಂತೆ ಅನುವಾದಗೊಳ್ಳಬೇಕಿದೆ.

೫. ಮೂಲ ಲೇಖನದ ಭಾಗವನ್ನು ಮೊದಲು ಇಡಿಯಾಗಿ ಗ್ರಹಿಸಬೇಕು. ಗ್ರಹಿಸದೇ ಇರುವುದು ಒಂದು ಸಮಸ್ಯೆಯಾಗಿದೆ ಹಾಗೂ ವ್ಯಾಕದಲ್ಲಿ ಬಿಡಿ ಬಿಡಿಯಾಗಿ ಭಾಷಾಂತರವಾಗಬಾರದು.

೬. ಮೂಲ ವ್ಯಾಕದ ರಚನೆ ಪದ ಪ್ರಯೋಗಗಳನ್ನು ಇದ್ದಕ್ಕಿದ್ದಂತೆ ಅನುವಾದಗಳನ್ನು ಮಾಡಲಾಗುತ್ತದೆ. ಇದರ ಅವಶ್ಯಕತೆ ಇಲ್ಲ. ಹೀಗೆ ಮಾಡಿದಾಗ ಅರ್ಥ ವ್ಯತ್ಯಾಸವಾಗುವ ಸಾಧ್ಯತೆಗಳು ಹೆಚ್ಚು ಮತ್ತು ಅರ್ಥವೂ ತಿಳಿಯದಂತಾಗುತ್ತದೆ.

೭. ಇಲ್ಲದಿದ್ದನ್ನು ಸೇರಿಸುವ, ಇದ್ದದ್ದನ್ನು ಬಿಡುವ ರೀತಿಯಲ್ಲಿ ಅನುವಾದ ನಡೆಯುತ್ತಿರುವ ಉದಾಹರಣೆಗಳೇ ಹೆಚ್ಚು, ಹೀಗಾಗಿ ಮೂಲದ ಭಾವವು ಬದಲಾವಣೆಯಾಗುವ ಸಾಧ್ಯತೆಗಳಿವೆ. ಇವು ಬದಲಾಗದಂತೆ ಇಲ್ಲದ್ದನ್ನು ಬಿಡುವ ಇದ್ದದ್ದನ್ನು ಸೇರಿಸುವ ಅನುವಾದ ಆಗಬೇಕಿದೆ.

೮. ಮೂಲದ ವಿಚಾರ, ವಿಷಯ, ಧ್ವನಿಗಳು ಅನುವಾದದಲ್ಲಿ ಬರುವಂತೆ ಅನುವಾದವಾಗುತ್ತಿಲ್ಲವೆಂಬ ವಾದವಿದೆ. ಇದಕ್ಕೆ ಬದಲಾಗಿ ಮೂಲದ ಭಾವ ಅರ್ಥ ವ್ಯತ್ಯಾಸವಾಗದಂತೆ ಅನುವಾದವಾಗಬೇಕಿದೆ.

೯. ಅನುವಾದಕನ ವಿಚಾರಶಕ್ತಿ, ದ್ವಿಭಾಷೆಗಳ ಜ್ಞಾನ ಪೂರ್ಣವಾಗಿದಲ್ಲಿ ಉತ್ತಮ ಅನುವಾದ ಹೊರಬರುತ್ತದೆ.

ಭಾಷಾಂತರ ಯಾವಾಗಲು ಅಸಮರ್ಪಕ ಎಂದು ಕೊಂಡರೂ ಕೆಲವೊಂದು ಸಂದರ್ಭದಲ್ಲಿ ಅನಿವಾರ್ಯವಾಗಿ ಪರಿಣಮಿಸುತ್ತದೆ. ಹಿರಿಯ ಅಧಿಕಾರಿಗಳು ತಮ್ಮಗೆ ಅನಿಸಿದ್ದನ್ನು ಇಂಗ್ಲೀಷಿನಲ್ಲೋ ಹಿಂದಿಯಲ್ಲೋ ರಚನೆಮಾಡಿ ನೀಡಿದಲ್ಲಿ ಅಥವಾ ವಿಚಾರಗಳನ್ನು ಬರೆದುಕೊಳ್ಳಲು ತಿಳಿಸಿದಲ್ಲಿ, ಅವುಗಳನ್ನು ಆಡಳಿತ ಕನ್ನಡಕ್ಕೆ ಅಥವಾ ಅವರು ಹೇಳಿದ ಭಾಷೆಯಲ್ಲಿಯೇ ಬರೆಯಬೇಕಾದ ಸಂದಿಗ್ಧತೆ ಬರುತ್ತದೆ. ಆದರೆ ಅವರು ಹೇಳುವ ವಿಚಾರಗಳು ಕೆಳಹಂತಕ್ಕೆ ತಲುಪಬೇಕಾದರೆ ಅದು ಪ್ರಾದೇಶಿಕ ಭಾಷೆಯಲ್ಲಿಯೇ ರಚನೆಗೊಳ್ಳಬೇಕಿದೆ ಆಗ ಭಾಷಾಂತರ ಅನಿವಾರ್ಯವಾಗಿರುತ್ತದೆ.

ಉಚ್ಚನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯಗಳಲ್ಲಿ ಪ್ರಾದೇಶಿಕ ಭಾಷೆಯಲ್ಲಿನ ದಾಖಲೆಗಳನ್ನು ಭಾಷಾಂತರಗೊಳಿಸಿ ಇಂಗ್ಲೀಷ್‌ಗೆ ಅನುವಾದ ಮಾಡಿ ಮೂಲದಾಖಲೆಗಳ ಜೊತೆಗೆ ಅವುಗಳ ಅನುವಾದದ ದಾಖಲೆಗಳನ್ನು ನೀಡಬೇಕಾದಅವಶ್ಯಕತೆ ಹಾಗೂ ಅನಿವಾರ್ಯತೆಯೂ ಪ್ರಸ್ತುತ ಆಡಳಿತದ ಸಂದರ್ಭದಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಹೀಗಾಗಿ ಭಾಷಾಂತರ ಬಹುಮುಖ್ಯವಾದ ಸ್ಥಾನ ಹೊಂದಿದ್ದು ಮೂಲಭಾಷೆಯಲ್ಲಿ ಇದ್ದದ್ದನ್ನು ಇದ್ದ ಹಾಗೆ ಅನುವಾದ ಮಾಡಬೇಕಾದದ್ದು ಸಹ ಅಗತ್ಯ ಮತ್ತು ಅನಿವಾರ್ಯ.

ಈ ನಿಟ್ಟಿನಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಭಾಷಾ ದೋಷಗಳಾಗುತ್ತಿವೆ. ಈ ಭಾಷಾ ದೋಷಗಳನ್ನು ಆಗದಂತೆ ತಡೆಯಬೇಕು. ಅದಷ್ಟು ಶುದ್ಧ ಹಾಗೂ ಸ್ಪಷ್ಟ ಬಳಕೆಯನ್ನು ಅಳವಡಿಸಿಕೊಂಡು ಕನ್ನಡ ಬಳಕೆಗೆ ಸಂಬಂಧಿಸಿದಂತೆ ಜಾರಿಗೆ ತರಬೇಕೆಂಬುದು ಆಶಯ.

ಪರಾಮರ್ಶನ ಗ್ರಂಥ

೧. ಅಬ್ದುಲ್ ಬಷೀರ್. ಈ., ೧೯೯೮, *ಕಡ್ಡಾಯ ಕನ್ನಡ,* ಸನಾ ಪ್ರಕಾಶನ. ಬೆಂಗಳೂರು

೨. ಕೃಷ್ಣರಾವ್ ಕೆ.ಎಮ್., ೧೯೬೮, *ಕನ್ನಡ ಭಾಷೆಯ ಸ್ವರೂಪ,* ಉಷಾ ಸಾಹಿತ್ಯ ಮಾಲೆ, ಮೈಸೂರು

೩. ನಾರಾಯಣ. ಕೆ.ವಿ., (ಸಂ) ಇತರರು, ೨೦೦೭, *ಕನ್ನಡ ಭಾಷೆ ವಿಷಯ ವಿಶ್ವಕೋಶ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಲೋಕೂರು ಎಚ್.ಜಿ., ೧೯೭೫, *ಕನ್ನಡ ನುಡಿಯ ಬೆಳವಣಿಗೆ,* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ವೀರೇಶ ಬಡಿಗೇರ, ೨೦೦೧, *ಹಲಗೆ ಬಳಪ,* ಅಕ್ಷರ ಗ್ರಂಥಾಲಯ, ಬೆಂಗಳೂರು

೬. ಶಂಕರ ಭಟ್.ಡಿ.ಎನ್., ೨೦೦೯, *ಕನ್ನಡ ವ್ಯಾಕರಣ ಯಾಕೆ ಬೇಕು?,* ಭಾಷಾ ಪ್ರಕಾಶನ, ಹೆಗ್ಗೋಡು, ಸಾಗರ

೭. ಶಂಕರ ಭಟ್.ಡಿ.ಎನ್., ೨೦೧೦, *ಕನ್ನಡ ಬರಹದ ಸೊಲ್ಲರಿಮೆ–೧,* ಭಾಷಾ ಪ್ರಕಾಶನ, ಹೆಗ್ಗೋಡು, ಸಾಗರ

೮. ಶ್ರೀಧರ್.ಎನ್.ಎಸ್., ೨೦೦೭, *ಇಂದಿನ ಕನ್ನಡ ರಚನೆ ಮತ್ತು ಬಳಕೆ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೯. ಸಂಗಮೇಶ ಸವದತ್ತಿಮಠ, ೧೯೯೯, *ಕನ್ನಡ ಭಾಷಾ ಪ್ರಭೇದಗಳು,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಧ್ಯಾಯ – ಐದು

ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಸಂದರ್ಭದಲ್ಲಿ ಆಡಳಿತ ಕನ್ನಡ : ಸಮಸ್ಯೆ ಮತ್ತು ಸವಾಲುಗಳು.

೫.೧. ಆಡಳಿತದಲ್ಲಿ ಗಣಕ ಯಂತ್ರಗಳು : ಕನ್ನಡದ ಬಳಕೆ

೫.೨. ಆಡಳಿತದಲ್ಲಿ ಅಂತರ್ಜಾಲ: ಕನ್ನಡದ ಬಳಕೆ

ಅಧ್ಯಾಯ – ಐದು

ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಸಂದರ್ಭದಲ್ಲಿ ಆಡಳಿತ ಕನ್ನಡ : ಸಮಸ್ಯೆ ಮತ್ತು ಸವಾಲುಗಳು.

ಇಂದಿನ ಆಧುನಿಕ ಜಗತ್ತಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಊಹೆಗೂ ಮೀರಿದ ರೀತಿಯಲ್ಲಿ ಬೆಳವಣಿಗೆ ಆಗುತ್ತಿರುವುದು ಗಮನಾರ್ಹ ಸಂಗತಿ. ಮಂಗನಿಂದ ಮಾನವ ಹೇಗೆ ರೂಪುತಾಳಿತೋ ಹಾಗೆಯೇ ಕಲ್ಲಿನಿಂದ ಬೆಂಕಿಯನ್ನು ಹತ್ತಿಸಿದ ಕಾಲದಿಂದ, ಮಂಗಳ ಗ್ರಹದಲ್ಲಿ ವಾಸಮಾಡುವ ಆವಿಷ್ಕಾರ ಹೊಂದಿರುವ ಇಂದಿನ ಸಂದರ್ಭದವರೆಗೂ, ವಿಜ್ಞಾನ ಮತ್ತು ತಂತ್ರಜ್ಞಾನ ಮಹತ್ತರವಾದ ತನ್ನದೇ ಆದ ಕೊಡುಗೆಗಳನ್ನು ಮಾನವನ ಜಗತ್ತಿಗೆ ನೀಡಿದ ಅಭೂತಪೂರ್ಣವಾದ ಘಟನೆಗಳು ನಮಗೆ ಇತಿಹಾಸದ ಪುಟಗಳಲ್ಲಿ ಸಿಗುತ್ತವೆ. ಈ ನಿಟ್ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನ ಅಭಿವೃದ್ಧಿಯ ಅನೇಕ ಹಂತಗಳಲ್ಲಿ ಬದಲಾವಣೆಗಳ ಮೂಲಕ ರೂಪವನ್ನು ತಾಳಿ ಆಧುನಿಕ ಜಗತ್ತನ್ನು ಸೃಷ್ಟಿಸಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ವಿಜ್ಞಾನ ಮತ್ತು ತಂತ್ರಜ್ಞಾವು ಜಗತ್ತಿನ ಬೆಳವಣಿಗೆಗೆ ಎರಡು ಮುಖಗಳಿದ್ದಂತೆ, ಒಂದನ್ನು ಬಿಟ್ಟು ಒಂದು ಇರಲಾರದು. ಎಲ್ಲಿ ತಂತ್ರಜ್ಞಾನ ತನ್ನ ಬೆಳವಣಿಗೆಯನ್ನು ಕಾಣುತ್ತಲಿದೆಯೋ ಅಲ್ಲಿ ವಿಜ್ಞಾನದ ಪಾತ್ರ ಇದ್ದೇ ಇರುತ್ತದೆ. ಎಲ್ಲಿ ವಿಜ್ಞಾನದ ಬೆಳವಣಿಗೆ ಇರುತ್ತದೆಯೋ ಅಲ್ಲಿ ಹೊಸ ತಂತ್ರಜ್ಞಾನಗಳು ಹುಟ್ಟಿಕೊಳ್ಳುತ್ತವೆ. ವಿಜ್ಞಾನ ಇಡಿಯಾದ ಭಾಗವಾದರೆ ತಂತ್ರಜ್ಞಾನ ಅದರ ಉಪ ಭಾಗ. ಒಂದೆಡೆ ವಿಜ್ಞಾನದ ಬೆಳವಣಿಗೆ ಇನ್ನೊಂದೆಡೆ ತಂತ್ರಜ್ಞಾನದ ಬೆಳವಣಿಗೆಯಾದಲ್ಲಿ ದೇಶವನ್ನು ಮುಂಚೂಣಿಯಲ್ಲಿ ಕೊಂಡೊಯ್ಯಬಹುದು ಎಂಬುದು ಹಲವರ ಅಭಿಮತ.

ಬೆಳೆಯುತ್ತಿರುವ ಇಂದಿನ ಆಧುನೀಕರಣದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅತ್ಯಂತ ವೇಗದಲ್ಲಿ ಸಾಗುತ್ತಿರುವುದಕ್ಕೆ ಬೆಂಗಳೂರಿನಂತಹ ಮಹಾನಗರಗಳೇ ಸಾಕ್ಷಿ. ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವುದು ಕರ್ನಾಟಕ, ಅದರಲ್ಲಿ ಬೆಂಗಳೂರು ಎನ್ನುವುದು ಹೆಮ್ಮೆಯ ವಿಷಯ. ವಿಶ್ವದಲ್ಲೇ ಮಾಹಿತಿ ತಂತ್ರಜ್ಞಾನದಲ್ಲಿ ತನ್ನನ್ನೇ ಗುರುತಿಸಿಕೊಂಡಿರುವ ಕರ್ನಾಟಕ, ಕನ್ನಡ ತಂತ್ರಜ್ಞಾನವನ್ನು ಸೃಷ್ಟಿಸುವಲ್ಲಿ ಎಡವಿದೆ ಅಥವಾ ಬೇರೆಯ ಭಾಷೆಗೆ ಹೋಲಿಸಿದರೆ ಹಿಂದೆ ಬಿದ್ದಿದೆ ಎನ್ನುಬಹುದು.

ಆಡಳಿತದಲ್ಲಿ ಇದರ ಬಳಕೆ ಅಲ್ಲಲ್ಲಿ ಕಾಣುತ್ತಿದೆ ಹೊರತು, ತಂತ್ರಜ್ಞಾನದಲ್ಲಿ ಪೂರ್ಣವಾಗಿ ಕನ್ನಡ ತಂತ್ರಜ್ಞಾನದ ಬಳಕೆ ಆಗುತ್ತಿಲ್ಲವೆಂಬುದೊಂದು ಕೊರಗು.

ಉದಾ: ವಿದ್ಯುತ್ತ ಬಿಲ್ಲು, ಬಸ್ಸಿನ ಟೀಕೆಟ್, ನೀರಿನ ಬಿಲ್ಲುಗಳು, ತೆರಿಗೆ ಪಾವತಿ ಬಿಲ್ಲುಗಳು, ಪೋಲಿಸ್ ಇಲಾಖೆಯ ಮೊದಲ ವರ್ತಮಾನ ವರದಿ, ಸಲ್ಲಿಕೆಯಾಗದ ಅರ್ಜಿಗಳು, ನೇಮಕಾತಿಗಳ ಜೇಷ್ಠ ಪಟ್ಟಿ, ಮಾನವ ಸಂಪನ್ಮಲದ ನಿರ್ವಹಣೆ (HRMS) ಹಾಗೂ ಕೆಲವೊಂದು ಯುನಿಕ್ ಕೋಡಗಳು, ಬಸ್ಸಿಗಾಗಿ ಕಾಯ್ದಿರಿಸುವಿಕೆಯ ಚೀಟಗಳು, ಕರ್ನಾಟಕದಲ್ಲಿನ ರೈಲ್ವೆ ಟೀಕೆಟುಗಳು.

ಇತ್ಯಾದಿಗಳು ಬದಲಾವಣೆಗೊಳ್ಳದೆ ಹಾಗೆಯೇ ಇಂಗ್ಲೀಷನಲ್ಲಿ ಮುಂದುವರೆಯುತ್ತಿರುವುದು ತಂತ್ರಾಂಶಗಳ ಬಳಕೆಯಲ್ಲಿ ಹಿನ್ನಡೆ ಎನ್ನುಬಹುದು.

ತಂತ್ರಜ್ಞಾನದ ಬಳಕೆ ಮತ್ತು ಅನ್ವಯಿಕೆಯನ್ನು ಗಮನಿಸಿದರೆ ಬೇರೆ ಭಾಷೆಯಲ್ಲಿ ಆಗುತ್ತಿರುವಷ್ಟು ಕನ್ನಡದಲ್ಲಿ ಆಗುತ್ತಿಲ್ಲ ಆಗದಿರುವುದು ದುರದೃಷ್ಟಕರ ಸಂಗತಿಯಾಗಿದೆ. ಬೇರೆ ಭಾಷೆಯ ತಂತ್ರಾಂಶಗಳು ಯಾವ ಮಟ್ಟದ್ದಾಗಿದೆ ಎಂದರೆ ಮೊಬೈಲ್‌ನ ವಿದ್ಯುನ್ಮಾನ ಸಂದೇಶಗಳು ಬೇರೆ ಭಾಷೆಯಲ್ಲಿ ಹರಿದಾಡುವಷ್ಟು ಕನ್ನಡ ಭಾಷೆಯಲ್ಲಿ ಹರಿದಾಡುತ್ತಿಲ್ಲ. ಹಾಗೂ ಅವುಗಳು ಸುಲಭವಾಗಿ ವಿನಿಮಯವಾಗುತ್ತಿರುವ ರೀತಿಯಲ್ಲಿ ಕನ್ನಡದಲ್ಲಿ ಆಗುತ್ತಿಲ್ಲ.

ಆಡಳಿತದಲ್ಲಿ ಪ್ರಸ್ತುತ ಸಂದರ್ಭದಲ್ಲಿ ಜಾತಿ ಮತ್ತು ಆದಾಯ ಪ್ರಮಾಣಪತ್ರ., ಆದಾಯ ತೆರಿಗೆ, ಬ್ಯಾಂಕ್ ಖಾತೆ, ಕಾರ್ಮಿಕರ ನೊಂದಣಿ, ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಆಡಳಿತಕ್ಕೆ ಅರ್ಜಿಹಾಕುವ ಸಂದರ್ಭದಲ್ಲಿ ದೂರವಾಣಿ ಸಂಖ್ಯೆಯನ್ನು ನಾವು ಅರ್ಜಿಯಲ್ಲಿ ಬರೆದಿರುತ್ತೇವೆ. ಆ ಬರೆದ ದೂರವಾಣಿಗೆ ಅರ್ಜಿತಲುಪಿದ ಮತ್ತು ಮುಂದಿನ ಕ್ರಮಗಳ ಬಗ್ಗೆ ಸಂದೇಶಗಳು ಸಹಜವಾಗಿ ಬರುತ್ತವೆ. ಆದರೆ ಬರುತ್ತಿರುವ ಸಂದೇಶಗಳು ಬೇರೆ ಭಾಷೆಯ ಮುಖಾಂತರವಾಗಿ ನಮಗೆ ತಲುಪುತ್ತಿರುವುದು ದೌರ್ಭಾಗ್ಯವೇ ಸರಿ,

ತಂತ್ರಜ್ಞಾನದ ಸೇವೆಗಳನ್ನು ಅಥವಾ ತಂತ್ರಾಂಶಗಳ ಸೇವೆಗಳನ್ನು ಒದಗಿಸುವವರಿಗೆ ಅಗತ್ಯವಿರುವಷ್ಟು ಭಾಷಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಪ್ರೋತ್ಸಾಹ ಕನ್ನಡಿಗರಿಂದ ದೊರೆಯುತ್ತಿಲ್ಲವೆಂಬುದು ಕಾರಣವಾಗಿರಬಹುದು ಅಥವಾ ಒಂದು ಅಪವಾದವಾಗಿರಬಹುದು.

ಒಂದು ತಂತ್ರಾಂಶವನ್ನು ತಯಾರಿಸಬೇಕೆಂದರೆ ಭಾಷಾ ವಿಜ್ಞಾನಿ ಮತ್ತು ತಂತ್ರಾಂಶಗಳ ವಿಜ್ಞಾನಿಗಳ ನಡುವೆ ಒಂದು ಸಾಮರಸ್ಯವಿರಬೇಕು. ಇದು ಆಗಿಲ್ಲವೆಂಬುದು ವಾದವಾಗಿದೆ. ಅದೇನೇ ಇರಲಿ ಇದಕ್ಕೆಲ್ಲಾ ಕನ್ನಡಿಗರ ಪ್ರೋತ್ಸಾಹವಿಲ್ಲವೆಂಬುದು ಒಂದು ಅಪವಾದವೇ ಸರಿ. ಆದರೆ ಇದನ್ನು ವಿಶ್ಲೇಷಿಸಿದಾಗ ಕನ್ನಡಿಗರು ಕನ್ನಡದ ತಂತ್ರಾಂಶಗಳನ್ನು ತಯಾರಿಸುವಲ್ಲಿ ಪ್ರೋತ್ಸಾಹ ನೀಡಿದರೂ ತಯಾರಕರೂ ಸಹ ತಂತ್ರಾಂಶಗಳ ತಯಾರಿಕೆಯಲ್ಲಿ ನೀರಸ ಮನೋಭಾವನೆ ತೋರುತ್ತಿರುವುದು ಇದಕ್ಕೆ ಕಾರಣವಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಆಸರೆಯಿಂದ ಬೇರೆ ಭಾಷೆಗಳು ಬೇಳೆಯುತ್ತಿರುವುದನ್ನು ಗಮನಿಸಿದರೆ ಕನ್ನಡ ಭಾಷೆಯು ತಂತ್ರಾಂಶಗಳ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿದೆ. ಹಲವಾರು

ದಶಕಗಳಿಂದ ವಿಜ್ಞಾನ ಮತ್ತು ತಂತ್ರಜ್ಞಾನಗಳ ಮಹಾನಗರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನಗಳ ತವರೂರಾಗಿರುವ ಬೆಂಗಳೂರಿನಲ್ಲೇ ಕನ್ನಡ ತಂತ್ರಾಂಶಗಳ ಸಿದ್ದಪಡಿಸುವಿಕೆ ಮತ್ತು ಕನ್ನಡದ ಬಗ್ಗೆ ತಾತ್ಸಾರ ಇದೆ.

ಬೆಂಗಳೂರನ್ನು ಒಮ್ಮೆ ನೆನೆಸಿಕೊಳ್ಳಬಹುದು ಅಥವಾ ಅಭಿವೃದ್ಧಿ ಪಥದತ್ತ ಸಾಗುತ್ತಿರುವ ಮಹಾನಗರಗಳನ್ನು ನೆನೆಸಿಕೊಳ್ಳಬಹುದು ಬಹು ಭಾಷೆಗಳನ್ನು ಪ್ರೋತ್ಸಾಹಿಸುತ್ತಿರುವ ಕರ್ನಾಟಕದಲ್ಲಿ ಕನ್ನಡ ಮೂಲ ಭಾಷೆಯಾಗಿದ್ದು ಆಡಳಿತ ಭಾಷೆಯಾಗಿದ್ದು, ಬೇರೆ ಭಾಷೆಗಳಿಗೆ ಮಾನ್ಯತೆ ಸಿಗುತ್ತಿರುವಷ್ಟು ಕನ್ನಡಕ್ಕೆ ಸಿಗುತ್ತಿಲ್ಲವೆಂಬುದು ವಿಪರ್ಯಾಸದ ಸಂಗತಿಯಾಗಿದೆ. ಕರ್ನಾಟಕದಲ್ಲಿ ಕೆಲವೊಂದು ದೊಡ್ಡನಗರಗಳಲ್ಲಿ ಕನ್ನಡಕ್ಕಿಂತ ಇತರ ಭಾಷೆಗಳಲ್ಲಿ ವ್ಯವಹಾರ ಮಾಡುವುದು ಯಥೇಚ್ಚವಾಗಿ ಕಂಡುಬರುತ್ತದೆ.

ಉದಾ: ಕಲಬುರ್ಗಿ–ಉರ್ದು, ಚಾಮರಾಜನಗರ–ತಮಿಳು, ಇತ್ಯಾದಿ. ಆದರೇ ಕನ್ನಡದ ಅಗತ್ಯಕ್ಕಿಂತ ಇತರೆ ಭಾಷೆಗಳ ಅಗತ್ಯತೆ ಬೆಂಗಳೂರಿನಂತಹ ಮಹಾನಗರಗಳಲ್ಲಿ ಪ್ರಸ್ತುತ ಸಂದರ್ಭದಲ್ಲಿ ಎದ್ದು ಕಾಣುತ್ತಿದೆ.

ಪ್ರಸ್ತುತ ರಾಜ್ಯದ ಪರಿಸ್ಥಿತಿಯು ಹೀಗಿರುವಾಗ, ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಬೆಳೆಯಲು ಮತ್ತು ವಿಜೃಂಬಿಸಲು ಹೇಗೆತಾನೇ ಸಾಧ್ಯವಾದಿತು? ಆಡಳಿತದಲ್ಲಿ ತತಕ್ಷಣಕ್ಕೆ ಬೇಕಾಗುವಷ್ಟರ ಮಟ್ಟಿಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳ ಅಳವಡಿಗೆ, ಹೊಸ ಹೊಸ ಯೋಜನೆಗಳು ಜಾರಿಗೆ ಬಂದು ಅವುಗಳನ್ನು ಆಡಳಿತದಲ್ಲಿ ಅನುಷ್ಠಾನಗೊಳಿಸುವ ಮತ್ತು ತರಬೇತಿಗಳಿಗಾಗಿ ರೂಪಗೊಳ್ಳುವ ತಂತ್ರಾಂಶಗಳನ್ನು ಬಿಟ್ಟರೆ ಬೇರೆ ಸಂದರ್ಭಗಳಲ್ಲಿ ಕನ್ನಡದ ತಂತ್ರಾಂಶಗಳನ್ನು ನೋಡುವುದು ಕಷ್ಟ.

ತರಬೇತಿಗಳಿಗಾಗಿ ರೂಪುಗೊಳ್ಳುವ ತಂತ್ರಾಂಶಗಳು ಎಷ್ಟರಮಟ್ಟಿಗೆ ಕನ್ನಡದಲ್ಲಿ ರೂಪುಗೊಳ್ಳುತ್ತವೆ. ಮತ್ತು ರೂಪಗೊಂಡ ತಂತ್ರಾಂಶಗಳೆಲ್ಲವೂ ಕನ್ನಡದಲ್ಲಿಯೇ ಇವೆಯಾ? ಎನ್ನುವ ಪ್ರಶ್ನೆ ಮೂಡುತ್ತದೆ. ಆದರೆ ಪ್ರಾರಂಭದಲ್ಲಿ ರೂಪಗೊಳ್ಳುವ ತಂತ್ರಾಂಶಗಳು ಬಹುತೇಕ ಇಂಗ್ಲೀಷ್‌ನಿಂದಲೇ ಪ್ರಾರಂಭವಾದದ್ದನ್ನು ಕಾಣಬಹುದು.

ಉದಾ: ಸಕಾಲ, ಭೂಮಿ, ಖಜಾನೆ–೧, ರೇಶನ್ ಕಾರ್ಡ ಅರ್ಜಿ ಸಲ್ಲಿಕೆ, ಆಧಾರ್ ಕಾರ್ಡ್, ಚುನಾವಣೆ ತರಬೇತಿ, ವಿಡಿಯೋ ಕಾನ್ಫರೆನ್ಸಿನ ತಂತ್ರಾಂಶ, ಇತ್ಯಾದಿಗಳು ಮೊದಲು ಇಂಗ್ಲೀಷಿನಿಂದ ಪ್ರಾರಂಭವಾಗಿ ಇತ್ತೀಚಿನ ದಿನಗಳಲ್ಲಿ ಬಲಾವಣೆಗಳನ್ನು ಕಂಡುಕೊಂಡಿದೆ.

ಮೂಲತಹವಾಗಿ ತಂತ್ರಾಂಶಗಳು ಬೇರೆ ಭಾಷೆಯಲ್ಲಿಯೇ ವಿಜೃಂಬಿಸಿದವು ಎಂಬುವುದಕ್ಕೆ ಹಲವಾರು ಸಾಕ್ಷಿಗಳಿವೆ. ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಯು ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಮತ್ತು ಸಾಗಿದ್ದಕ್ಕೆ ಕನ್ನಡಿಗರ ಸ್ವಾಭಾವವೇ ಕಾರಣವೇನೋ ಅನಿಸುತ್ತಿದೆ. ಬೇರೆ ದೇಶಕ್ಕೆ ಮತ್ತು ಬೇರೆ ಊರಗಳಿಗೆ ಹೋಗಿ ಉದ್ಯೋಗವನ್ನು ಹುಡುಕುವ ಮನೋಭಾವ. ಉನ್ನತ ಮಟ್ಟದಲ್ಲಿ ಬದುಕ ಬೇಕೆನ್ನುವ ಹಂಬಲ. ಇಂಗ್ಲೀಷನ್ನು ಕಲಿಯುವ ಹಳೆಯ ವ್ಯಾಮೋಹ. ಇಂದು ಬದುಕಲು ಬೇರೆ ಭಾಷೆಗಳು ಬೇಕೆಬೇಕು ಎನ್ನುವಷ್ಟರ ಮಟ್ಟಿಗೆ ಆಧುನೀಕರಣ ಬೆಳೆದು ನಿಂತಿದೆ.

ಅದಕ್ಕಾಗಿ ಶಿಕ್ಷಣ ಮಾಧ್ಯಮವನ್ನಾಗಿ ಕನ್ನಡ ಭಾಷೆಯನ್ನು ಕಲಿಯುವುದನ್ನು ಸಹ ತಡೆಗಟ್ಟುವ ಇಚ್ಛಾಶಕ್ತಿಗಳು ಬಲಗೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ ಮತ್ತು ದಿನಗಳಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವುದು ನಮಗೆ ಒದಗಿಬಂದ ದೌರ್ಭಾಗ್ಯವೇ ಸರಿ.

ವಿಶ್ವದ ಇತಿಹಾಸದ ಪುಟಗಳಲ್ಲಿ ತಂತ್ರಜ್ಞಾನಗಳು ದಿನದಿನ ಬೆಳವಣಿಗೆಯಾಗುತ್ತಿರುವುದನ್ನು ಕಾಣುತ್ತೇವೆ. ಅಲ್ಲದೆ ಕರ್ನಾಟಕದ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಬೇರೆ ಬೇರೆ ದೇಶಗಳಲ್ಲಿ ಉನ್ನತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ ಕನ್ನಡ ಭಾಷೆ ಬಳಕೆಗೆ ಬೆಳವಣಿಗೆಗೆ ಮತ್ತು ಏಳಿಗೆಗೆ ಅವರ ಸಹಕಾರ ಸಹಾಯ ಸಿಗದೇ ಇರುವುದು ಮತ್ತು ಅವರುಗಳು ಮುಂದೆ ಬರದೆ ಹಿಂಜರಿಯುತ್ತಿರುವುದು ನಮ್ಮ ಕನ್ನಡದ ಇನ್ನೊಂದು ದೌರ್ಭಾಗ್ಯವೇ ಸರಿ.

ಸಣ್ಣ ಮತ್ತು ದೊಡ್ಡ ದೊಡ್ಡ ವಿದ್ಯನ್ಮಾನಗಳ ಸಾಧನೆಗಳ ಮೂಲಕ ಸರಳ ಮತ್ತು ಆಡಳಿತಕ್ಕೆ ಹೊಂದಿಕೊಳ್ಳುವಂತಹ ತಂತ್ರಾಂಶಗಳ ಕೊರತೆ ಆಡಳಿತದಲ್ಲಿ ಕಾಣುತ್ತದೆ. ಆ ಕೊರತೆ ನೀಗುವಂತಾಗಬೇಕಿದೆ ಆಡಳಿತಕ್ಕೆ ಹೊಂದಿಕೊಳ್ಳುವಂತಹ ಕನ್ನಡದ ತಂತ್ರಾಂಶಗಳು ರೂಪುಗೊಳ್ಳಬೇಕಿದೆ. ಕನ್ನಡದಲ್ಲಿ ಇಗಾಗಲೇ ರೂಪುಗೊಂಡ ಭಾಷೆಗೆ ಸಂಬಂಧಪಟ್ಟ ನುಡಿತಂತ್ರಾಂಶ, ಬರಹ ತಂತ್ರಾಂಶಗಳ ಮೂಲಕ ಮಹತ್ತರವಾದ ಕೊಡುಗೆಯನ್ನು ಆಡಳಿತ ಕನ್ನಡಕ್ಕೆ ಕೊಟ್ಟಿದೆ. ಕನ್ನಡ ಗಣಕ ಸಾಹಿತ್ಯ ಪರಿಷತ್ತಿನ ಕೊಡುಗೆ ಇದಕ್ಕೆ ಅಪಾರವಾಗಿದೆ ಎನ್ನುವುದನ್ನು ಆಡಳಿತದಲ್ಲಿನ ಪ್ರತಿಯೊಂದು ಹಂತದಲ್ಲಿ ಮರೆಯುವಂತಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಆಡಳಿತದಲ್ಲಿ ಬಳಕೆಯಲ್ಲಿರುವ ನುಡಿಯ ಹೆಗ್ಗಳಿಕೆಯೂ ಅಪಾರವಾದದ್ದು.

ಕಚೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗಣಕಯಂತ್ರಗಳ ತಂತ್ರಾಂಶಗಳು ವ್ಯಾಕರಣ ಬದ್ಧವಾದ ವಾಕ್ಯಗಳನ್ನು ರಚಿಸುವ, ಪತ್ರ ರಚನೆ ಮತ್ತು ಇತರೆ ಕಾರ್ಯಗಳಿಗೆ ಸಂಬಂಧಿಸಿದಂತೆ ಯಾವ ತೊಂದರೆಯೂ ಇಲ್ಲದಂತೆ ಕಾರ್ಯನಿರ್ವಹಿಸುವ ತಂತ್ರಾಂಶಗಳ ರಚನೆ ಮಾಡಬೇಕು. ಆಡಳಿತ ಕನ್ನಡದಲ್ಲಿ ರಚನೆಗೊಂಡ ಅಥವಾ ಕನ್ನಡದಲ್ಲಿ ಮೂಡಿಬರುವ, ಅಧಿಸೂಚನೆ ಪತ್ರಗಳು, ಸಾರ್ವಜನಿಕ ಪ್ರಕಟಣೆಗಳು, ಮೂಲ ಚಿಂತನೆಗಳು, ಯೋಜನೆಗಳನ್ನು ಆಡಳಿತದಲ್ಲಿ ಇತರೆ ಭಾಷಿಕರ ಗಮನಕ್ಕೆ ತರುವಷ್ಟರ ಮಟ್ಟಿಗೆ ಮಾದರಿ ತಂತ್ರಾಂಶಗಳು ರೂಪಗೊಂಡದ್ದೇ ಆದರೆ ಇದಕ್ಕಿಂತ ದೊಡ್ಡ ಕೊಡುಗೆ ಇನ್ನೊಂದಿಲ್ಲ.

ಇಂಗ್ಲೀಷ್ ಭಾಷೆಯ ಮೂಲಕವೇ ಪಡೆಯಲಾಗುತ್ತಿರುವ ಉನ್ನತ ಶಿಕ್ಷಣ ಪ್ರಾಂತೀಯ ಭಾಷೆಗಳಿಗೆ ಅಳವಡಿಸಿಕೊಳ್ಳಬಹುದಾದ ಮಾದರಿಯನ್ನು ಸೃಷ್ಟಿಸುವ ಪ್ರಯತ್ನಗಳ ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಆಗಬೇಕಿದೆ. ಈ ಒಂದು ಕಾರ್ಯ ಆಗುವ ನಿಟ್ಟಿನಲ್ಲಿದೆ. ಇದೊಂದು ಆದಲ್ಲಿ ಇಂಗ್ಲೀಷ್ ಕಲಿತರೆ ಮಾತ್ರ ಜ್ಞಾನ ಪ್ರಖರತೆಯಾಗುವುದೆಂಬ ನಂಬಿಕೆಯು ಬದಲಾಗಿ ಇಂಗ್ಲೀಷ್ ಎರಡನೆಯ ಸ್ಥಾನವನ್ನು ಪಡೆಯುವಂತಹ ಸ್ಥಿತಿಯನ್ನು ಮಾಹಿತಿ ತಂತ್ರಜ್ಞಾನ ಒದಗಿಸಬೇಕಿದೆ ಹಾಗೂ ಒದಗಿಸುತ್ತದೆಂಬ ನಂಬಿಕೆ ಇಡಬೇಕಾಗಿದೆ.

ಕನ್ನಡ ಆಡಳಿತದಲ್ಲಿ ಅಲ್ಲದೇ ಹೊರಗಿನ ವಾತಾವರಣದಲ್ಲಿ ನಾವು ಮಾತನಾಡುವ ಮಾತನ್ನೇ ಬರವಣಿಗೆಗೆ ಪರಿವರ್ತಿಸುವ ಮತ್ತು ಬರವಣಿಗೆಯನ್ನು ಮಾತಿನತ್ತ ಪರಿವರ್ತಿಸುವ ತಂತ್ರಾಂಶಗಳು ಬರಬೇಕಾಗಿದೆ. ಆಗ ಮಾತ್ರ ತಂತ್ರಾಂಶಗಳು ತನ್ನ ಕಾರ್ಯವನ್ನು ನಿಭಾಯಿಸುತ್ತಿವೆ ಎನ್ನಬಹುದು. ಪದಗಳ ಅರ್ಥ ಮತ್ತು ಪರ್ಯಾಯ ಪದಗಳು, ವ್ಯಾಕರಣ ಬದ್ಧವಾಕ್ಯ ಮತ್ತು ಸಂಭಾಷಣೆಯನ್ನು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದ ಮಾಡುವ ಸೌಲಭ್ಯವನ್ನು ತಂತ್ರಾಂಶದ ಮೂಲಕ ಕೆಲವು ಅಂತರ್ಜಾಲದ ತಾಣಗಳು ಒದಗಿಸುತ್ತವೆ ಎನ್ನುವುದು ಅಲ್ಲಲ್ಲಿ ಕೇಳಿ ಬರುತ್ತಿರುವ ಮಾತು. ಆದರೆ ಆಡಳಿತದಲ್ಲಿ ಇದರ ಬಳಕೆ ತೀರಾ ಕಡಿಮೆಯಾಗಿಬಿಟ್ಟಿದೆ, ಭಾರತೀಯ ಭಾಷೆಗಳೊಂದಿಗೆ ಇತರೆ ಭಾಷೆಗಳನ್ನು ಹೋಲಿಸಿದರೆ ಅಂತರ್ಜಾಲದಲ್ಲಿ ಅಥವಾ ತಂತ್ರಾಂಶಗಳ ಬಳಕೆಯಲ್ಲಿ ಹಿಂದೆ ಬಿದ್ದಿದೆ. ತಂತ್ರಾಂಶ ಈ ನಿಲುವನ್ನು ಬದಲಾಯಿಸಿದೆ ಎಂದರೂ ತಪ್ಪಾಗಲಾರದು.

ಜಾಗತಿಕರಣದ ಪ್ರಭಾವಗಳು ಹೇಗಿದೆ ಎಂಬುದು ಗಣಕಯಂತ್ರ ಮತ್ತು ವಿದ್ಯುನ್ಮಾನ ತಂತ್ರಜ್ಞಾನದ ಹೊಸ ಹೊಸ ವಿಚಾರಗಳ ಅವಿಷ್ಕಾರವೇ ಸಾಕ್ಷಿ. ಪರಿಚಿತವಿಲ್ಲದ ದೇಶ ಮತ್ತು ಭಾಷೆಗಳೊಂದಿಗೆ ಸರಾಗವಾಗಿ ಸಂಪರ್ಕ ಇರಿಸಿಕೊಳ್ಳಲು ಸಾಧ್ಯವಾಗಬಹುದಾದ ಮಾಧ್ಯಮ ಅಂತರ್ಜಾಲ. ವಿಶೇಷವಾಗಿ ವೈದ್ಯಶಾಸ್ತ್ರ, ಸಸ್ಯಶಾಸ್ತ್ರ, ಜೀವಶಾಸ್ತ್ರ ಮತ್ತು ಔಷಧಿಗಳಿಗೆ ಸಂಬಂಧಪಟ್ಟ ಮಾಹಿತಿಗಳು ಇಂದು ಅನೇಕ ಭಾಷೆಗಳಲ್ಲಿ ದೊರಕುತ್ತಿವೆ. ಹೀಗಾಗಿ ಇಂಗ್ಲೀಷ್ ತಿಳಿದವರಿಗೆ ಮಾತ್ರ ವಿಜ್ಞಾನ ಮತ್ತು ತಂತ್ರಜ್ಞಾನಗಳು ಲಾಭದಾಯಕ ಎನ್ನುವುದು ಸಂಪೂರ್ಣವಾಗಿ ಹುಸಿಯಾಗುವ ದಿನಗಳು ಬಹುದೂರವಿಲ್ಲ ಎನ್ನುವುದು ಅಭಿಮತ. ಆದರೆ ಇದಕ್ಕೊಂದು ತೊಡಕಿದೆ. ಜಾಗತಿಕ ನೆಲೆಯಲ್ಲಿ ಕನ್ನಡ ಭಾಷೆಗೆ ಸ್ಥಾನಮಾನಗಳು ಸರಿಯಾಗಿ ಸಿಗುತ್ತಿಲ್ಲ ಮತ್ತು ಇದನ್ನು ಹತ್ತಿಕ್ಕುವ ಹುನ್ನಾರ ಪರೋಕ್ಷವಾಗಿ ಕಂಡುಬರುತ್ತಿದೆ. ಇಂದು ಬಳಕೆಯಾಗುತ್ತಿರುವ ಮತ್ತು ಬಳಕೆಯಲ್ಲಿ ಕಂಡುಬರುತ್ತಿರುವ ತಂತ್ರಾಂಶಗಳಲ್ಲಿನ ಕೊರತೆಯೇ ಸಾಕ್ಷಿ.

ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಮತ್ತು ತಂತ್ರಾಂಶಗಳ ರಚನೆ ಮಾಡುವಲ್ಲಿ ಅಥವಾ ರೂಪುಗೊಳ್ಳುವಲ್ಲಿಯೂ ಎಲ್ಲಾ ಭಾಷೆಯ ಬಗೆಗಿನ ನಿರಾಭಿಮಾನ, ನಿರುತ್ಸಾಹ ಮತ್ತು ನೀರಸ ಮನೋಭಾವನೆಗಳೂ ಎದ್ದು ಕಾಣುತ್ತವೆ. ಈ ಮೇಲೆ ಹೇಳಲಾದ ಬೇರೆ ಭಾಷೆಯಲ್ಲಿನ ಬೆಳವಣಿಗೆಯಲ್ಲಿನ ಬದಲಾವಣೆಗಳೇ ಸಾಕ್ಷಿಗಳಾಗಿವೆ. ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಮತ್ತು ಸಾಮರ್ಥ್ಯಗಳು ಹೊಸ ಹೊಸ ತಂತ್ರಾಂಶಗಳ ರಚನೆ ಮತ್ತು ರೂಪುಗೊಳ್ಳುವಿಕೆಯ ಹಿನ್ನೆಲೆಯಲ್ಲಿ ಆಡಳಿತದಲ್ಲಿ ಕನ್ನಡ ಬಳಕೆ ಸಂದರ್ಭದಲ್ಲಿ ಹೊಸ ಕ್ರಾಂತಿಯನ್ನು ಮೂಡಿಸಬೇಕಾದ ಸಂದರ್ಭಗಳು ಮೂಡಬೇಕಾಗಿದೆ, ಅಲ್ಲಲ್ಲಿ ಆಡಳಿತದಲ್ಲಿ ಈ ಸಂದರ್ಭಗಳು ಮೂಡಿ ಬಂದರೂ ಅವುಗಳು ಪೂರ್ಣ ಪ್ರಮಾಣದ ಫಲಪ್ರದಾಯಕತೆಯನ್ನು ನೀಡುತ್ತಿಲ್ಲವೆಂಬುದು ಅನಿಸಿಕೆ.

ಎಷ್ಟೆಲ್ಲಾ ತಂತ್ರಾಂಶಗಳು ಬಳಕೆಗೆ ತಂದರೂ ಅವುಗಳ ಪ್ರವೇಶ ಕನ್ನಡದಿಂದ ಆಗಬೇಕು. ಹಾಗೆ ಆದಾಗ ಮಾತ್ರ ಆಡಳಿತದಲ್ಲಿ ತಂತ್ರಾಂಶಗಳ ಮೂಲಕ ಕನ್ನಡದ ಬಳಕೆ ಸಾಧ್ಯವಾಗುತ್ತದೆ.

ಹೀಗಾದಾಗ ಮಾತ್ರ ಇಂಗ್ಲೀಷ್ ಭಾಷೆಯ ಬಲವನ್ನು ಕುಂದಿಸುವ ಪೈಪೋಟಿಗಳು ತಂತ್ರಜ್ಞಾನದ ವಿಸ್ತಾರ ಮತ್ತು ಅನ್ವಯಿಕೆ ಮೂಲಕ ತರಲಿದೆ. ಭಾಷಾ ಸಾರ್ವಭೌಮತ್ವದಿಂದ ಪರಭಾಷೆಗಳು ಆಡಳಿತದಲ್ಲಿ ದೂರ ಹೋಗಿ ಕನ್ನಡ ಬಳಕೆಯಾಗುವಂತೆ ಮಾಡುವ ತಂತ್ರಾಂಶಗಳು ಮತ್ತು ವಿದ್ಯುನ್ಮಾನ ಉಪಕರಣಗಳು ಆಡಳಿತ ಕ್ಷೇತ್ರದಲ್ಲಿ ಜಾರಿಗೆ ಬಂದು ಹೊಸ ಆಡಳಿತದಲ್ಲಿನ ಅಭಿವೃದ್ಧಿಗಳು ಹಾಗೂ ಆಡಳಿತ ಮಾಡುವ ರೀತಿಯಲ್ಲಿ ಮುಂದುವರೆಯಬೇಕಾದ ತಂತ್ರಾಂಶಗಳ ಸೃಷ್ಟಿಯಾಗಬೇಕಿದೆ. ವಿಶ್ವದ ಪ್ರಮುಖ ಭಾಷೆಗಳಲ್ಲಿರುವ ವಿಶೇಷ ಮಾಹಿತಿಗಳು ಕನ್ನಡ ಭಾಷೆಯಲ್ಲಿಯೇ ತಿಳಿಯುವುದಕ್ಕೆ ಬೇಕಾದ ತಂತ್ರಾಂಶಗಳ ರಚನೆಯಲ್ಲಿ ಮಾರ್ಗೋಪಾಯಗಳನ್ನು ಕಾಣಬೇಕಿದೆ.

ಆಡಳಿತದಲ್ಲಿ ತಂತ್ರಾಂಶಗಳು ಹೇಗೆ ರೂಪುಗೊಳ್ಳಬೇಕೆಂದರೆ ಮಾತೃಭಾಷೆಯ ಸಂಹಿತೆ ಮತ್ತು ಸ್ವರೂಪಗಳನ್ನು ಮನಬಂದಂತೆ ಬದಲಾಯಿಸುವುದು ಮತ್ತು ಪರಿವರ್ತಿಸುವುದನ್ನು ಮೂಲಭಾಷಿಗರು ಸಾಮಾನ್ಯವಾಗಿ ವಿರೋಧಿಸುವುದು ಸ್ವಾಭಾವಿಕವಾದದ್ದಾಗಿದೆ. ಇಂಗ್ಲೀಷ್ ಭಾಷೆಗೆ ಕೊಡಗೆಯಾದ ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯಗಳು ಮತ್ತು ಇತರೆ ಜ್ಞಾನಗಳನ್ನು ಉತ್ತೇಜಿಸುತ್ತಾ ಬಂದಿರುವ ಇದರ ಬಲವೇನು ಕುಂದುವ ಸಾಧ್ಯತೆಗಳು ತೀರಾ ಕಡಿಮೆ. ಆದರೆ ಜಾಗತೀಕರಣದ ತೀವ್ರ ಬೆಳವಣಿಗೆಗಳು ಅತಿ ಲಾಭ ಬರುವಂತಹ ವಿಚಾರಗಳನ್ನು ಹಾಗೂ ಕಾರ್ಯಾಚರಣೆಗಳನ್ನು ಕ್ಷಿಪ್ರವಾಗಿ ಅಳವಡಿಸಿಕೊಳ್ಳುವುದರಿಂದ ಪ್ರಾದೇಶಿಕ ಭಾಷೆಯನ್ನು ಅವಲಂಬಿಸಿದ ವ್ಯಾಪಾರ, ವ್ಯವಹಾರ ಇತರೆ ಆಡಳಿತಾತ್ಮಕ ವಿಚಾರಗಳಿಗೆ ತೊಂದರೆ ಉಂಟಾಗುತ್ತದೆ ಆದ್ದರಿಂದ ಆಡಳಿತದ ಭಾಷೆಗಳು ಚುರುಕುಗೊಳ್ಳುಲೇಬೇಕಾಗಿದೆ. ಆದರೆ ಕೆಲವೊಂದು ಸಂದರ್ಭಗಳಲ್ಲಿ ಭಾಷೆಯ ಮಿತಿಗಳನ್ನು ಮೀರಿ ಬೆಳೆದಿದೆ ಎನ್ನುವುದಕ್ಕೆ ಅಂತರ್ಜಾಲದ ಸಾಮರ್ಥ್ಯಗಳು ಸೂಚಿಸುತ್ತವೆ. ಆಡಳಿತ ಭಾಷೆಯಲ್ಲಿ ತಂತ್ರಾಂಶಗಳ ರೂಪವಾದರೆ ಹಾಗೂ ಪರಿಚಿತವಿರುವ ಭಾಷೆಯಲ್ಲಿ ಬಳಸುವಂತಾದರೆ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಗತಿಯೂ ಸರಾಗ ಹಾಗೂ ವ್ಯಾಪಕವಾಗಿ ಆಗಬಲ್ಲದೆಂಬ ನಂಬಿಕೆ.

ಆಡಳಿತಕ್ಕೆ ಸಂಬಂಧಪಟ್ಟ ಮತ್ತು ಆಡಳಿತವನ್ನು ಸರಾಗವಾಗಿ ಗೊಂದಲಗಳಿಲ್ಲದಂತೆ ಆಡಳಿತಕ್ಕೆ ಪೂರಕವಾದ ತಂತ್ರಾಂಶಗಳು ಜಾಗತಿಕ ಮಟ್ಟದಲ್ಲಿನ ತೀವ್ರತೆ ಮತ್ತು ಒತ್ತಡ ಹಾಗೂ ಪೈಪೋಟಿಗಳನ್ನು ಮೀರಿ ಹೊಸ ಹೊಸ ತಾಂತ್ರಂಶಗಳು ರಚನೆಗೊಳ್ಳಬೇಕಿದೆ. ಕೆಲವೊಂದು ಸಂದರ್ಭಗಳಲ್ಲಿ ಆಡಳಿತದಲ್ಲಿ ಕನ್ನಡ ಬಳಕೆ ತಾಂತ್ರಾಂಶಗಳ ಮೂಲಕವಾಗಿ ಸಾಧ್ಯವೆಂಬ ಪರಿಕಲ್ಪನೆಗೆ ಒಂದು ಅರ್ಥ ಬರುತ್ತದೆ. ಈ ನಿಟ್ಟಿನಲ್ಲಿ ಹೊಸ ಹೊಸ ವಿಚಾರಗಳ ಹಿನ್ನೆಲೆಯಲ್ಲಿ ತಾಂತ್ರಾಂಶಗಳು ರಚನೆಗೊಳ್ಳಬೇಕಿದೆ. ಒಂದು ಪರಿಣಾಮಕಾರಿ ಆಡಳಿತಕ್ಕಾಗಿ ಕನ್ನಡದಲ್ಲಿ ತಂತ್ರಜ್ಞಾನವನ್ನು ಅಳವಡಿಸುವ ಕಾರ್ಯವು ಮುಖ್ಯವಾದ ಸ್ಥಾನವನ್ನು ಪಡೆದುಕೊಳ್ಳುತ್ತದೆ.

ಒಂದು ಆಡಳಿತದಲ್ಲಿ ಜನರೇ ಕೇಂದ್ರ ಬಿಂದು, ಹಿಂದೆ ಒಂದು ಚಿಕ್ಕ ಕೆಲಸವಾಗಬೇಕಾದರೂ ಕಾಯಬೇಕಾದ ಪ್ರಸಂಗವಿತ್ತು. ಕಳಪೆ ಸೇವೆ, ಭ್ರಷ್ಟಾಚಾರ, ಸಾಲು ಸಾಲು ಸಮಸ್ಯೆಗಳ ಮಧ್ಯ ಆಡಳಿತ ಎನ್ನುವುದು ಜನರನ್ನು ಬಿಟ್ಟು ಕಟ್ಟಿಕೊಂಡ ಕೋಟೆಯಂತಿತ್ತು. ಈ ಕೋಟೆಯನ್ನು ಛೇಧಿಸಿ ಜನರಿಗೆ ಉತ್ತಮ ಆಡಳಿತವನ್ನು ಕೊಟ್ಟ ಕೀರ್ತಿ ತಾಂತ್ರಜ್ಞಾನಕ್ಕೆ ಸಲ್ಲುತ್ತದೆ. ವಿಜ್ಞಾನ

ಮತ್ತು ತಂತ್ರಜ್ಞಾನದಿಂದ ಹೊರಹೊಮ್ಮಿದ ತಾಂತ್ರಾಂಶವನ್ನು ಆಡಳಿತದಲ್ಲಿ ಅಳವಡಿಸಿ ಜಟಿಲವಾಗಿ ನಿರ್ಮಾಣಗೊಳ್ಳುವ ಆಡಳಿತ ವ್ಯವಸ್ಥೆಯನ್ನು ಸ್ವಲ್ಪ ಸರಳವಾಗಿ ರಚಿಸಿದ್ದು ತಾಂತ್ರಂಶ. ಆಡಳಿತದ ಕ್ರಮವನ್ನು ಸರಳವಾದ ರೀತಿಯಲ್ಲಿ ನೆಡೆಸುವುದಕ್ಕಾಗಿ ಬೇರೆ ಭಾಷೆಯ ಪ್ರಯೋಗದಿಂದ ತಂತ್ರಾಂಶಗಳ ಬಳಕೆಯನ್ನು ಮಾಡಿರುವುದು ಆಡಳಿತದಲ್ಲಿ ಕನ್ನಡದ ಬಳಕೆಯನ್ನು ನಿರ್ಲಕ್ಷ್ಯಸಿದ್ದರೂ ಸಹ ಬಳಕೆ ಮಾಡಿದ ಆಗಿನ ಸಂದರ್ಭವು ಪ್ರಸುತ್ತವೆನಿಸುತ್ತದೆ.

ಉತ್ತಮ ಆಡಳಿತಕ್ಕಾಗಿ ಕೈಗೊಂಡ ಭೂಮಿ ಯೋಜನೆ ಗಣಕೀಕರಣ ಮಾಡುವುದರೊಂದಿಗೆ ಪಹಣಿಯನ್ನು ರೈತ ಎರಡು ನಿಮೀಷಗಳಲ್ಲಿ ಪಡೆಯುವ ವಿನೂತನ ಯೋಜನೆ ಆಡಳಿತದಲ್ಲಿ ಬಂದಿದೆ. ರೇಶನ್ ಕಾರ್ಡ್, ಪಾಸ್ ಪೋಟೊ, ಗುರುತಿನ ಪತ್ರಕ್ಕೆ ಅರ್ಜಿ ಸಲ್ಲಿಸಲು ಕಚೇರಿಗಳಿಗೆ ಅಲೆಯಬೇಕಾದ ಪರಿಸ್ಥಿತಿ ಇನ್ನಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನದ ಮುಖಾಂತರ ಇವೆಲ್ಲವೂ ಬದಲಾವಣೆಗೊಂಡಿದೆ.

ಬ್ಯಾಂಕಿಂಗ್ ವ್ಯವಸ್ಥೆಗಳಲ್ಲಿ ಅಂತರ್ಜಾಲದ ಮೂಲಕ ನೇರ ಬ್ಯಾಂಕಿಂಗ್ ಎ.ಟಿ.ಎಂ. ಡೆಬಿಟ್, ಕ್ರೆಡಿಟ್ ಕಾರ್ಡುಗಳ ಮೂಲಕ ಹಾಗೂ ಮುಂದುವರೆದು ದೂರವಾಣಿಗಳಲ್ಲಿಯೂ ಬ್ಯಾಂಕಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಿದ ಹೆಗ್ಗಳಿಕೆ ತಂತ್ರಾಂಶದ್ದು. ಎಸ್.ಎಸ್.ಎಲ್.ಸಿ, ಪಿಯುಸಿ, ವಿಶ್ವವಿದ್ಯಾಲಯಗಳ ಫಲಿತಾಂಶಗಳ ಸಮಸ್ಯೆಗಳನ್ನು ತಪ್ಪಿಸಿ ಸರಾಗವಾಗಿ ಮಾಡಿದೆ. ರೈಲು ಮತ್ತು ಬಸ್ ಟೀಕೇಟುಗಳನ್ನು ಮುಂಗಡ ಕಾಯ್ದಿರಿಸುವಿಕೆ ಆಡಳಿತಕ್ಕೆ ನೀಡಿದ ಒಂದು ಉತ್ತಮ ಉದಾಹರಣೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಬಳಕೆಯಾಗುವ ಮತಯಂತ್ರಗಳು ಉತ್ತಮ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿವೆ.

ಇವುಗಳಲ್ಲದೇ ಅಂತರ್ಜಾಲದಿಂದ ಕಾರ್ಯನಿರ್ವಹಣೆಯಾಗುತ್ತಿರುವ ಎಲ್ಲಾ ಆಡಳಿತದಲ್ಲಿನ ಸುಧಾರಣೆಗಳು ವಿಜ್ಞಾನ ಮತ್ತು ತಂತ್ರಜ್ಞಾನ ನೀಡಿದ ಕೊಡುಗೆಗಳಾಗಿವೆ. ಬ್ಯಾಂಕುಗಳ ವಿವಿಧ ಕಚೇರಿಗಳಲ್ಲಿ ನಿರ್ವಹಿಸಲಾಗುತ್ತಿರುವ ದಿನಲೆಕ್ಕಾಚಾರ, ಹಣಕಾಸಿನ ವಹಿವಾಟು ಪ್ರತಿಯೊಂದು ಇಲಾಖೆಗೆ ಸಂಬಂಧಿಸಿದ ತನ್ನದೇ ಆದ ತಂತ್ರಾಂಶದ ಬಳಕೆ ಇವೆಲ್ಲವುಗಳು ತಂತ್ರಾಂಶಗಳ ಕೊಡುಗೆಗಳೇ ಆಗಿವೆ. ಈ ಮೇಲಿನ ಅಂಶಗಳು ಜನರಿಗೆ ತಲುಪಿ ಜನರ ಬೇಡಿಕೆಗಳು ಸಾಕಷ್ಟು ವೇಗವಾಗಿ ಪೊರೈಕೆಯಾಗುತ್ತಿವೆ. ಆಡಳಿತ ಎನ್ನುವುದು ಜನರಿಗಾಗಿಯೇ ಕಟ್ಟಿಕೊಳ್ಳಬೇಕಾದ ಮತ್ತು ಕಟ್ಟಿಕೊಡಬೇಕಾದ ವ್ಯವಸ್ಥೆಯಾಗಿದ್ದು ಮತ್ತು ತಂತ್ರಜ್ಞಾನದ ಸರಿಯಾದ ಬಳಕೆಯ ಮೂಲಕ ಗುರಿಯನ್ನು ಸಾಧಿಸಬಹುದು ಅನ್ನುವುದು ಇತ್ತಿಚಿನ ದಿನಗಳಲ್ಲಿ ತಕ್ಕಮಟ್ಟಿಗೆ ಸಾಬಿತಾಗಿರುವುದು ಸರಿಯಷ್ಟೆ

ಆಡಳಿತದಲ್ಲಿ ಪ್ರಗತಿಸಾಧಿಸಬೇಕೆಂಬ ಉದ್ದೇಶದಿಂದ ಆಡಳಿತ ಭಾಷೆಯನ್ನು ಕಡೆಗಣಿಸುವಂತಹದ್ದು ಆಡಳಿತ ಭಾಷೆಗೆ ಮಾಡಿದ ದ್ರೋಹವಾಗುತ್ತದೆ. ಆಡಳಿತದಲ್ಲಿ ಪ್ರಗತಿಸಾಧನೆ ಮಾಡಬೇಕು ನಿಜ. ಕ್ರಾಂತಿಕ್ರಾರಿ ಬದಲಾವಣೆಗಳನ್ನು ತರಬೇಕು ನಿಜ. ಉತ್ತಮ ಮತ್ತು ತೀವ್ರಗತಿಯಲ್ಲಿ ಆಡಳಿತದಲ್ಲಿ ಬದಲಾವಣೆಗಳನ್ನು ತರಬೇಕೆಂಬ ಉದ್ದೇಶ ಇರುವುದು ನಿಜ. ಈ ಕಾರಣಕ್ಕಾಗಿ ಆಡಳಿತ

ಭಾಷೆಯನ್ನು ನಿರ್ಲಕ್ಷಿಸುವಂತಿಲ್ಲ. ಎಲ್ಲಾ ಮಹತ್ವದ ಬದಲಾವಣೆಗಳಾಗಬೇಕೆಂಬುದು ಸಹಜ ಬದಲಾವಣೆ ತರುವ ನಿಟ್ಟಿನಲ್ಲಿ ಹೋಗುವುದಾದರೆ ಆಡಳಿತ ಭಾಷೆಯ ಮುಖಾಂತರವಾಗಿಯೇ ಬದಲಾವಣೆ ತರುವಲ್ಲಿ ಆಲೋಚಿಸಬೇಕು ಮತ್ತು ಆಡಳಿತಕ್ಕೆ ಉತ್ತಮವಾದ ತಂತ್ರಾಂಶಗಳನ್ನು ಅಳವಡಿಸಿ ಕೊಡುವಲ್ಲಿ ಶ್ರಮಪಡಬೇಕು.

ತ್ವರಿತಗತಿಯಲ್ಲಿ ಕಾರ್ಯ ಸಾಧನೆ ಮಾಡಬೇಕೆಂಬ ಆಧುನೀಕರಣದ ದೃಷ್ಟಿಕೋನ ಇಟ್ಟುಕೊಂಡು ಹೊರಟ ತಂತ್ರಜ್ಞಾನ ಆಡಳಿತ ಭಾಷೆಯತ್ತ ಗಮನ ಕೊಟ್ಟಿಲ್ಲವೆಂಬುದು ವಾದ. ಕಾರ್ಯಸಾಧನೆಗೆ ಪ್ರತಿಷ್ಠಿತ ಭಾಷೆ ಎಂದು ಕರೆಯಿಸಿಕೊಳ್ಳುವ ಇಂಗ್ಲೀಷಿನಲ್ಲಿ ಪ್ರಯೋಗ ನಡೆಸಿ ಅದು ಯಶಸ್ವಿಗೊಂಡ ನಂತರದಲ್ಲಿ ಆಡಳಿತ ಭಾಷೆಗೆ ಆ ತಂತ್ರಾಂಶಗಳನ್ನು ಪರಿವರ್ತಿಸುವ ಸಾಹಸಕ್ಕೆ ಕೈಹಾಕುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ ಹಾಗೂ ಇದೇ ವ್ಯವಸ್ಥೆ ಮುಂದುವರೆಯುತ್ತಿದೆ. ತಂತ್ರಜ್ಞಾನವನ್ನು ಆಡಳಿತದಲ್ಲಿ ಜಾರಿಗೆ ತಂದಿರುವುದು ಪಾರದರ್ಶಕತೆಯಲ್ಲಿ ಸೇವೆಯನ್ನು ನೀಡುತ್ತಿರುವುದು ಕಡಿಮೆ ಖರ್ಚಿನಲ್ಲಿ ಕಡಿಮೆ ಸಮಯದಲ್ಲಿ ಸಮಯ ಪೋಲಾಗದಂತೆ ಜನಬೇಕು ಬೇಡಿಕೆಗಳಿಗೆ ಸ್ಪಂದಿಸುತ್ತಿರುವುದು ಆಡಳಿತದಲ್ಲಿ ತಂತ್ರಜ್ಞಾನದ ಅಳವಡಿಕೆಯಿಂದ ಜಾರಿಗೊಂಡ ನಂತರದಲ್ಲಿಯೇ ಸಾಧ್ಯವಾಯಿತು. ಆದರೆ ಈ ತಂತ್ರಜ್ಞಾನಗಳು ಆಡಳಿತ ಭಾಷೆಗೆ ಹೆಚ್ಚು ಗಮನ ಕೊಟ್ಟು ಆಡಳಿತ ಭಾಷೆಯಲ್ಲಿ ತಂತ್ರಾಂಶಗಳನ್ನು ತಯಾರಿಸಿ ಕೊಡುಗೆಯಾಗಿ ಕೊಟ್ಟಲ್ಲಿ ಆಡಳಿತ ಇನ್ನು ಸುಲಭವಾಗುವಲ್ಲಿ ಸಂಶಯವೇ ಇಲ್ಲ.

ಆಡಳಿತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಯಂತೂ ತುಂಬಾ ದುರಾದೃಷ್ಟಕರ ಸಂಗತಿ. ತತಕ್ಷಣಕ್ಕೆ ಆಡಳಿತದಲ್ಲಿ ಬೇಕಾಗುವಷ್ಟರ ಮಟ್ಟಿಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳ ಅಳವಡಿಗೆ ಅಗತ್ಯವಿದೆ. ಹೊಸ ಹೊಸ ಯೋಜನೆಗಳು ಜಾರಿಗೆ ಬಂದ ಸಂದರ್ಭದಲ್ಲಿ ಅವುಗಳನ್ನು ಆಡಳಿತವು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸಲು ತಂತ್ರಜ್ಞಾನ ಹೇಗೆ ಮಹತ್ತರ ಪಾತ್ರವಹಿಸುತ್ತದೆ, ಎನ್ನುವ ಅಂಶಗಳನ್ನು ಕಂಡುಕೊಂಡು ಆಡಳಿತದಲ್ಲಿ ಹೊಸ ಹೊಸ ವಿನೂತನ ತಂತ್ರಾಂಶಗಳು ಅಳವಡಿಕೆಯಾದ ನಂತರವೂ ಪ್ರಭುತ್ವ ಪರಿಣಾಮಕಾರಿ ಆಡಳಿತವನ್ನು ಕೊಡದೇ ವಿಫಲವಾಗುತ್ತಿದೆ.

ಆಡಳಿತವು ಇಷ್ಟೆಲ್ಲಾ ಅನುಕೂಲತೆಗಳು ಹೊಂದಿದೆ ತಂತ್ರಜ್ಞಾನದ ಸಹಾಯ ದೊರೆತಿದ್ದರೂ ಅಥವಾ ದೊರಕುತ್ತಿದ್ದರೂ ಯಾಕೆ ಆಡಳಿತಯಂತ್ರ ಅಂದುಕೊಂಡ ಮಟ್ಟದ್ದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಅನ್ನುವ ಕೊರಗು ಆಡಳಿತ ಕ್ಷೇತ್ರದಲ್ಲಿ ಕಾಡುತ್ತಿರುವ ಸತ್ಯ. ಅಲ್ಲದೆ ಜನರು ವಿಜ್ಞಾನ ತಂತ್ರಜ್ಞಾನವು ನೀಡಿರುವ ಅನುಕೂಲಗಳನ್ನು ವ್ಯಾಪಾಕವಾಗಿ ಬಳಸುತ್ತಿಲ್ಲ ಎನ್ನುವುದು ಇನ್ನೊಂದು ಸಮಸ್ಯೆಯಾಗಿದೆ. ಈ ಸಮಸ್ಯೆಗಳಿಗೆ ಉತ್ತರ ಹೇಳುವುದಾದರೆ ಆಡಳಿತದಲ್ಲಿ ತಂತ್ರಜ್ಞಾನದಿಂದ ಉಂಟಾಗಿರುವ ಮಹತ್ತರ ಬದಲಾವಣೆಗಳು ಆಡಳಿತ ಭಾಷೆಯಾದ ಕನ್ನಡ ಮತ್ತು ಆಡಳಿತದಲ್ಲಿ ಜನರ ನುಡಿಯನ್ನು ಕಡೆಗಣಿಸಿದುದಾಗಿದೆ ಎಂದು ಹಲವಾರು ವಿಷಯಗಳಿಂದ ಮನದಟ್ಟಾಗಿದೆ.

ಆಡಳಿತದಲ್ಲಿ ಜನಾಡುವ ಭಾಷೆಯ ಮುಖಾಂತರ ತಂತ್ರಾಂಶಗಳು ವಿಜ್ಞಾನ ಮತ್ತು ತಂತ್ರಾಂಶಗಳ ಸಹಕಾರಗೊಳ್ಳದೇ ಅವುಗಳ ಅನುಷ್ಠಾನಗೊಳ್ಳದೇ ಹೋದಲ್ಲಿ ಎಂತಹ ಮಹತ್ತರವಾದ

ತಂತ್ರಜ್ಞಾನದ ಏಳಿಗೆ ಆಡಳಿತವನ್ನು ಜನರ ಬಳಿಗೆ ಪರಿಣಾಮಕಾರಿಯಾಗಿ ಕೊಂಡೊಯ್ಯಲಾರದು ಎನ್ನುವುದು ಹಲವಾರು ಕಡೆಗಳಲ್ಲಿ ಕೇಳಿಬರುವ ಮಾತಾಗಿದ್ದು ಇದಕ್ಕೆ ಪುಷ್ಟಿ ಕೊಡುವುದೇ ನಮ್ಮ ಸಮಾಜದಲ್ಲಿ ಆಗದೇ ಇರುವ ಬದಲಾವಣೆಗಳು. ಆಡಳಿತದಲ್ಲಿ ಬದಲಾವಣೆಗಳನ್ನು ತರಲು ರಚಿತವಾದ ತಂತ್ರಜ್ಞಾನದ ತಂತ್ರಾಂಶಗಳು ಬಹಳಷ್ಟು ಇಂಗ್ಲೀಷಿನಲ್ಲಿದ್ದು ಆಡಳಿತ ಭಾಷೆಯಿಂದ ಮತ್ತು ಜನರಾಡುವ ಭಾಷೆಯಿಂದ ದೂರವೇ ಉಳಿದಿದೆ. ಇಂಗ್ಲೀಷಿನ ಪ್ರಭಾವದಿಂದ ತಂತ್ರಾಜ್ಞಾನ ರೂಪುಗೊಂಡು ಅದರ ಪ್ರಯೋಜನವನ್ನು ಆಡಳಿತಕ್ಕೆ ನೀಡಿದ್ದರೂ, ಇಂಗ್ಲೀಷಿನ ತಡೆಗೊಡೆ ತಂತ್ರಜ್ಞಾನದ ಪೂರ್ಣ ಪ್ರಯೋಜನವನ್ನು ಜನರಿಗೆ ತಲುಪಲಾರದಂತೆ ಮಾಡಿದೆ.

ಕಾರಣ ಆಡಳಿತದಲ್ಲಿ ಇಂಗ್ಲೀಷನ್ನು ಬಲ್ಲವರ ಸಂಖ್ಯೆ ಬಹಳ ಕಡಿಮೆ, ಆದ್ದರಿಂದ ಹೊಸ ಹೊಸ ತಂತ್ರಜ್ಞಾನದ ಅಳವಡಿಕೆಯಿಂದ ಹೊಸ ವ್ಯವಸ್ಥೆಗಳ ಕಲ್ಪನೆಯಿಂದ ಜನರು ಇನ್ನೂ ಆಚೆಯೇ ಉಳಿದಿದ್ದಾರೆ. ಇದಕ್ಕೆಲ್ಲಾ ಮುಖ್ಯ ಕಾರಣವೇನೆಂದರೆ ಮೇಲೆ ವಿವರಿಸಿದಂತೆ ಆಡಳಿತ ವ್ಯವಸ್ಥೆಯು ತಂತ್ರಜ್ಞಾನದ ಹೊರತಾದ ಹೊಸ ವ್ಯವಸ್ಥೆಗಳು ಆಡಳಿತ ಭಾಷೆಯಾದ ಕನ್ನಡದಲ್ಲಿರುವುದು. ದಿನನಿತ್ಯದ ಕಾರ್ಯಕ್ರಮ ನಡೆಯುವ ಸರ್ಕಾರಿ ಕಚೇರಿಗಳಲ್ಲಿ ಬಳಕೆ ಮಾಡುವಂತಹ ಹೆಚ್ಚಿನ ತಂತ್ರಾಂಶಗಳೆಲ್ಲವೂ ಇಂಗ್ಲಿಷಿನಲ್ಲಿರುವಂತಹವು. ಇದರಿಂದ ಜನರಿಗೇನು ಸಂಬಂಧ ಜನರ ಕೆಲಸವನ್ನು ಕಚೇರಿಯವರೆ ಮಾಡುತ್ತಾರೆ ಒಟ್ಟಿನಲ್ಲಿ ಜನಗಳ ಕೆಲಸವಾದರೆ ಸಾಕು ಎಂಬ ಮಾತುಗಳು ಅಲ್ಲಲ್ಲಿ ಕೇಳಿಬರುತ್ತವೆ. ಆದರೆ ಆಡಳಿತದಲ್ಲಿ ಕನ್ನಡವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾದ ಕಚೇರಿಯಲ್ಲಿಯೇ ಈ ಪರಿಸ್ಥಿತಿ ಇರುವುದಾದರೆ ಹೊರಗಿನ ಪರಿಸ್ಥಿತಿ ಹೇಳುವಂತಿಲ್ಲ. ಅದರ ಬಗ್ಗೆ ಮಾತನಾಡುವ ಅಗತ್ಯತೆಯೂ ಪ್ರಸ್ತುತ ಸಂದರ್ಭದಲ್ಲಿ ಇಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ವಿಜ್ಞಾನ ಮತ್ತು ತಂತ್ರಜ್ಞಾನದ ಫಲ ಕನ್ನಡ ಅಥವಾ ಆಡಳಿತ ಭಾಷೆಯಲ್ಲಿ ಜನರಿಗೆ ದೊರಕದಿದ್ದರೆ ಹೊಸ ಹೊಸ ತಂತ್ರಜ್ಞಾನದ ಬಳಕೆಯಿಂದ ಆಗುವ ಪ್ರಯೋಜನ ನೀರಸವಾದದ್ದು. ಉದ್ದೇಶ ಸ್ಪಷ್ಟವಿದ್ದರೂ ತಲುಪುವ ವ್ಯವಸ್ಥೆ ಸರಿಯಿಲ್ಲದಿದ್ದರೆ ಹಾಗೂ ಜನಗಳಿಗೆ ಅವರ ಭಾಷೆಯಲ್ಲಿ ಆಡಳಿತದಲ್ಲಿನ ಬದಲಾವಣೆಗಳನ್ನು, ಯೋಜನೆಗಳನ್ನು, ವಿಚಾರಗಳನ್ನು ಪರಿಚಯಿಸಬೇಕಾದುದರಿಂದ ಇಂಗ್ಲೀಷಿನಲ್ಲಿ ಅದನ್ನು ಭಿತ್ತರಿಸುವುದಾದರೆ ಅಥವಾ ಪರಿಚಯಿಸುವುದಾದರೆ ಆಡಳಿತ ಭಾಷೆಯಲ್ಲಿ ಹೇಳಿದಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಾರದು ಎಂಬುದು ಅಭಿಪ್ರಾಯ.

ಆಡಳಿತದಲ್ಲಿ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಸರ್ಕಾರ ರೂಪಿತ ಕಾರ್ಯ ಯೋಜನೆಗಳಲ್ಲಿ ಸಮಗ್ರವಾದ ಬದಲಾವಣೆ ಮಾಡಬೇಕಾಗಿದೆ ಹಾಗೂ ಮಾಡಿಕೊಳ್ಳಬೇಕಿದೆ. ಜನಗಳಿಗೆ ಹೊಸ ಹೊಸ ತಂತ್ರಜ್ಞಾನಗಳ, ತಂತ್ರಾಂಶಗಳ ಅಳವಡಿಕೆಯಿಂದ ಸರ್ಕಾರದಲ್ಲಿ ಆಡಳಿತ ನಡೆಸುವವರು ಯೋಚಿಸಬೇಕಾಗಿದೆ ನಾವು ಜನಗಳಿಗೆ ಉಪಕಾರ ಮಾಡುತ್ತಿದ್ದೇವೆ ಎನ್ನುವ ಭಾವನೆಗಿಂತ ಯಾವರೀತಿ ಉಪಯೋಗ ಆಗುತ್ತಿದೆ ಎನ್ನುವುದು ಮುಖ್ಯ. ಯೋಜನೆಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೋ? ಅದರ ಪೂರ್ಣ ಪ್ರಯೋಜನೆ ಎಲ್ಲರಿಗೂ ಆಗಿದೆಯಾ? ಎಂಬ ನಿಟ್ಟಿನಿಲ್ಲಿ ಯೋಚಿಸುವ ಅಧಿಕಾರಿ ಹಾಗೂ ನೌಕರವರ್ಗ ಆಡಳಿತದಲ್ಲಿ ಹುಟ್ಟಿಕೊಳ್ಳಬೇಕಿದೆ. ಈಗಿರುವುದು ಕೆಟ್ಟದೆಂದು ಹೇಳುತ್ತಿಲ್ಲ ಆದರೆ ಅದಕ್ಕೆ ಬದಲಾವಣೆ ಆಗಬೇಕೆಂಬುದು ವಾದ.

೫.೨. ಆಡಳಿತದಲ್ಲಿ ಗಣಕಯಂತ್ರಗಳು : ಕನ್ನಡದ ಬಳಕೆ

'ಕಂಪ್ಯೂಟರ್' ಎಂದಾಕ್ಷಣ ಎಲ್ಲರಿಗೂ ನೆನಪಾಗುವುದು ಅದ್ಭುತ ಪಟ್ಟಿಗೆಯೊಂದರ ಮಾನಸಿಕ ಚಿತ್ರಣ. ಅದರ ಕನ್ನಡದ ರೂಪವೇ 'ಗಣಕಯಂತ್ರ'. ಹೌದು ನಿಜವಾಗಿಯೂ ಅದೊಂದು ಅದ್ಭುತ ಪೆಟ್ಟಿಗೆಯೇ ಸರಿ. ಆ ಅದ್ಭುತ ಪೆಟ್ಟಿಗೆಗೆ ಒಂದು ಇತಿಹಾಸವೇ ಇದೆ ಇದರ ಇತಿಹಾಸದ ಬಗ್ಗೆ ಇಲ್ಲಿ ಚರ್ಚಿಸಲಾಗಿಲ್ಲ. ಲಂಡನ್ನಿನ ಚಾರ್ಲ್ಸ್ ಬ್ಯಾಬೇಜ್ ಇವರಿಂದ ೧೮೩೪ರಲ್ಲಿ ಶೋಧನೆಗೊಂಡು ಪರಿಷ್ಕಾರಗೊಳ್ಳುತ್ತಾ ಅಥಾಭೈರನ್ ಪ್ರಪ್ರಥಮ ಪ್ರೋಗ್ರಾಮರ್‌ಗಳನ್ನು ಕಂಡುಹಿಡಿದು 'ಪ್ರಪ್ರಥಮ ಪ್ರೋಗ್ರಾಮರ್' ಆಗಿ ಮುಂದುವರೆದು ಇಂದಿನವರೆಗೂ ದಿನ ನಿತ್ಯ ಹೊಸ ಹೊಸ ರೀತಿಯಲ್ಲಿ ಅನೇಕ ಕ್ಷೇತ್ರಗಳಲ್ಲಿ ಗಣಕಯಂತ್ರ ಬಳಕೆಯಾಗುತ್ತಿರುವುದು ಒಂದು ವಿಸ್ಮಯವೇ ಸರಿ.

ಪ್ರಸ್ತುತ ಸಂದರ್ಭದಲ್ಲಿ ಗಣಕಯಂತ್ರಗಳಿಲ್ಲದ ಕ್ಷೇತ್ರವನ್ನು ಊಹಿಸಲೂ ಸಾಧ್ಯವಿಲ್ಲ. ಮನೆಯಲ್ಲಿ ಮಕ್ಕಳು ಗಣಕಯಂತ್ರದಲ್ಲಿ ಆಟವಾಡುವ ಆಟಗಳಿಂದ ಹಿಡಿದು ಅಂತರಿಕ್ಷಕ್ಕೆ ಉಡಾವಣೆಗೊಂಡು ಬೇರೆ ಗ್ರಹಗಳಲ್ಲಿನ ಮಾಹಿತಿಯನ್ನು ತಿಳಿಯುವಷ್ಟರ ಮಟ್ಟಿಗೆ ವಿವಿಧ ಕ್ಷೇತ್ರಗಳಲ್ಲಿ ಇಂದು ಗಣಕಯಂತ್ರಗಳ ಬಳಕೆಯನ್ನು ಮಾಡಲಾಗುತ್ತದೆ. ಮಾನವ ನಿರ್ಮಿತವಾದ ಗಣಕಯಂತ್ರ ಅವನ ಬುದ್ಧಿ ಶಕ್ತಿಯನ್ನೂ ಮೀರಿ ಬೆಳೆದುನಿಂತಿದೆ.

ಮೇಲೆ ಈಗಾಗಲೇ ತಿಳಿಸಿದಂತೆ ಗಣಕಯಂತ್ರ ಒಂದು ಪೆಟ್ಟಗೆ ಮಾತ್ರ ಅದಕ್ಕೆ ಸಿ.ಪಿ.ಯು, ಕಿಬೋರ್ಡ, ಮೌಸ್, ಇರಲೇಬೇಕು. ಇವೆಲ್ಲವುಗಳ ಸಹಾಯದಿಂದ ಗಣಕಯಂತ್ರ ತನ್ನ ಕಾರ್ಯವನ್ನು ಮಾಡುತ್ತದೆ. ಆದರೆ ಇವೆಲ್ಲವುಗಳು ಗಣಕಯಂತ್ರವನ್ನು ಚಾಲನೆ ಗೊಳಿಸಬಲ್ಲವು, ಆದರೆ ಗಣಕಯಂತ್ರದ ಮೆದುಳು ಎಂದು ಕರೆಯಲ್ಪಡುವ ಸಿ.ಪಿ.ಯು. (ಸೆಂಟ್ರಲ್ ಪ್ರೋಸಸಿಂಗ್ ಯುನಿಟ್) ನಲ್ಲಿ ಗಣಕಯಂತ್ರವನ್ನು ಯಾವ ಕ್ಷೇತ್ರಕ್ಕೆ ಬಳಸಿಕೊಳ್ಳುತ್ತೇವೆಯೋ ಆ ಕ್ಷೇತ್ರದ ಪೂರ್ವನಿರ್ಧರಿತವಾದ ಮಾಹಿತಿಯ ತಂತ್ರಾಶಂವನ್ನು ಅಳವಡಿಸಬೇಕಾದದ್ದು ಅನಿವಾರ್ಯ. ಇಲ್ಲವಾದಲ್ಲಿ, ಯಾವ ಕ್ಷೇತ್ರಕ್ಕೆ ಗಣಕಯಂತ್ರವನ್ನು ಅನ್ವಯಿಸಿ ಕಾರ್ಯ ಸಾಧನೆಗೆ ಮುಂದಾಗುತ್ತೇವೆಯೋ ಆ ಕಾರ್ಯ ಸಾಧನೆ ಫಲಿಸುವುದಿಲ್ಲ.

ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪ್ರಕಟಗೊಂಡ 'ಆಡಳಿತ ಕನ್ನಡ' ಕೃತಿಯಲ್ಲಿ 'ಭಾಷೆಯ ಬಳಕೆಯಲ್ಲಿ ಕಂಪ್ಯೂಟರ್ ನಿಜಕ್ಕೂ ದಡ್ಡ ಶಿಖಾಮಣಿ. ಅದಕ್ಕೆ ಯಾವುದೇ ಭಾಷೆ ಬರುವುದಿಲ್ಲ. ನೇರವಾಗಿ ಅರ್ಥವಾಗುವುದೂ ಇಲ್ಲ, ಅದಕ್ಕೆ ಎರಡೇ ಭಾಷೆ ತಿಳಿದಿರುವುದು. ಒಂದು ವಿದ್ಯುತ್‌ಚ್ಛಕ್ತಿ ಇರುವಿಕೆ, ಇನ್ನೊಂದು ವಿದ್ಯುತ್‌ಚ್ಛಕ್ತಿ ಇಲ್ಲದಿರುವಿಕೆ'. ಎಂದು ಗಣಕಯಂತ್ರದ ಬಗ್ಗೆ ವಿವರಿಸುತ್ತಾರೆ.

ಗಣಕಯಂತ್ರಕ್ಕೆ ಅನ್ವಯಿಕ ಕಾರ್ಯಗಳ ಪೂರ್ಣವಾದ ಸ್ಪಷ್ಟ ಮಾಹಿತಿ ತಂತ್ರಾಂಶಗಳನ್ನು ಅಳವಡಿಸಿದಾಗ ಮಾತ್ರ ಗಣಕಯಂತ್ರ ಅಪೇಕ್ಷಿತ ಕ್ಷೇತ್ರದ ಕಾರ್ಯವನ್ನು ನಿರ್ವಹಿಸುತ್ತದೆ. ಇಲ್ಲವಾದಲ್ಲಿ ಅದೊಂದು ಕೇವಲ ಪೆಟ್ಟಿಗೆ ಮಾತ್ರ, ಹೀಗಾಗಿ ಅವರವರ ಕಾರ್ಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ತಂತ್ರಾಂಶಗಳನ್ನು ಅಳವಡಿಸಿಕೊಂಡು ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಬಹುದಾಗಿದೆ.

ಆದರೆ ವಾಸ್ತವವಾಗಿ ಒಂದು ಹೊಸ ಗಣಕ ಯಂತ್ರವನ್ನು ತೆಗೆದುಕೊಂಡು ಬಂದಾಗ ಅದರಲ್ಲಿ ಏನೂ ಇರುವುದಿಲ್ಲ ಅದನ್ನು ತಂದಾದ ನಂತರದಲ್ಲಿ ಸಾಮಾನ್ಯ ತಂತ್ರಾಂಶಗಳನ್ನು ಮೊದಲು ಹಾಕಲಾಗುತ್ತದೆ

ಉದಾ; ಎಮ್.ಎಸ್.ವರ್ಡ್, ಎಮ್.ಎಸ್.ಆಫೀಸ್, ಎಮ್.ಎಸ್. ಪವರ್ ಪಾಯಿಂಟ್, ಎಮ್.ಎಸ್.ಎಕ್ಸಲ್

ಈ ಎಲ್ಲಾ ನಾಲ್ಕು ತಂತ್ರಾಂಶಗಳನ್ನು ಎಮ್.ಎಸ್. ಆಫೀಸ್ ಅಂದರೆ ಕಚೇರಿ ತಂತ್ರಾಂಶಗಳೆಂದು ಕರೆಯಲಾಗುತ್ತದೆ. ಸಹಜವಾಗಿ ಈ ನಾಲ್ಕು ತಂತ್ರಾಂಶಗಳು ಒಂದು ಗಣಕಯಂತ್ರದಲ್ಲಿ ಇರಲೇ ಬೇಕಾಗುತ್ತದೆ. ಈ ನಾಲ್ಕು ಮೂಲ ತಂತ್ರಾಂಶಗಳನ್ನು ಆಧಾರವಾಗಿಟ್ಟುಕೊಂಡು ಎಲ್ಲಾ ಕ್ಷೇತ್ರಗಳಲ್ಲಿ ಗಣಕಯಂತ್ರದ ಕಾರ್ಯನಿರ್ವಹಣೆ ಅತ್ಯಂತ ಮಹತ್ವದ್ದಾಗಿ ಪರಿಣಮಿಸಿದೆ. ಗಣಕಯಂತ್ರ ಕಾಲಿಡದ ಕ್ಷೇತ್ರವೆನ್ನೇ ಊಹಿಸಲು ಸಾದ್ಯವಿಲ್ಲವೆಂಬಂತೆ ತನ್ನ ಕಾರ್ಯದ ವ್ಯಾಪ್ತಿಯನ್ನು ಬೆಳೆಸಿಕೊಂಡಿದೆ.

ಆಡಳಿತ ಕಚೇರಿಯಲ್ಲಿನ ಲಿಪಿಕ ಕಾರ್ಯಗಳಲ್ಲಿ ವೇಗ, ಸರಾಗವಾಗಿ ಕಾರ್ಯನಿರ್ವಹಣೆ, ಸಮಯ ಉಳಿತಾಯ, ಕಡಿಮೆ ಸಮಯದಲ್ಲಿ ಹೆಚ್ಚು ಕಾರ್ಯನಿರ್ವಹಣೆ, ತಿದ್ದುಪಡಿ, ಸೇರಿಸುವಿಕೆ, ಸಂಸ್ಕರಣೆ ಮತ್ತು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಗೆಯಾಗುವಂತೆ ಮಾಡಿದ್ದು ಗಣಕಯಂತ್ರ ಬಂದಾಗಿನಿಂದ ಎಂದರೆ ತಪ್ಪಾಗಲಿಕ್ಕಿಲ್ಲ. ಇಂತಹ ಯಂತ್ರವನ್ನು ಆಡಳಿತದಲ್ಲಿ ಬಳಸುವುದಕ್ಕಾಗಿ ಮೊದಮೊದಲು ಸಮಸ್ಯೆಯಾಗಿದೆ ನಿಜ. ಆದರೆ ಅದಕ್ಕೆ ಹೊಂದಿಕೊಂಡ ನಂತರ ಕಾರ್ಯಸರಾಗವಾಗಿ ಹಾಗೂ ಸರಳವಾಗಿ ಸಾಗಿತು ಎನ್ನುವುದು ಅಭಿಮತ.

ಪ್ರಾರಂಭದಲ್ಲಿ ರಚನೆಗೊಂಡ ಗಣಕಯಂತ್ರ ಇಂಗ್ಲೀಷ್‌ನಲ್ಲೇ ಕಾರ್ಯನಿರ್ವಹಿಸುತ್ತಿದ್ದವು. ಗಣಕಯಂತ್ರಗಳ ಕೊಡ್ ಲಾಂಗ್ವೇಜ್ ಇಂಗ್ಲೀಷ್ ಅಲ್ಲವೇ, ಹಾಗಾಗಿ ನಂತರ ಆಡಳಿತದಲ್ಲಿ ಕನ್ನಡವನ್ನೂ ಬಳಸಲೇಬೇಕೆಂಬ ಸರ್ಕಾರದ ಆದೇಶವನ್ನು ಗಮನದಲ್ಲಿಟ್ಟುಕೊಂಡು ಆಡಳಿತದ ಅನುಕೂಲ ಮತ್ತು ಕನ್ನಡ ಬಳಕೆಯ ಹಿತ ದೃಷ್ಟಿಯಿಂದ ಕನ್ನಡದಲ್ಲೇ ಆಡಳಿತವನ್ನು ನಡೆಸುವ ಕಾರಣವನ್ನಿಟ್ಟುಕೊಂಡು ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮತ್ತು ಸಡಾಕ್ ಸಂಸ್ಥೆ ಮತ್ತು ಹಲವಾರು ಭಾಷಾ ಚಿಂತಕರು ಒಂದುಗೂಡಿ ಕನ್ನಡ ತತ್ರಾಂಶಗಳನ್ನು ರೂಪಿಸಿದರು.

ಗಣಕಯಂತ್ರದಲ್ಲಿ ಬಳಸಲಾಗುವ ಕನ್ನಡದ ತಂತ್ರಾಂಶಗಳು

ನುಡಿ, ಬರಹ, ಶ್ರೀಲಿಪಿ, ಐಲೀಪ್, ಆಕೃತಿ, ಕೈರಾಲಿ, ಪ್ರಕಾಶಕ್, ಬ್ರಾಹ್ಮಿ, ಕುವೆಂಪು ಕನ್ನಡ, ಕನ್ನಡ ಕಚೇರಿ, ಕನ್ನಡ ಸೌರಭ, ಕಲಿತ, ನುಡಿ ಬರಹ, ನುಡಿ ಅಕ್ಷರ, ಅಕ್ಷರ, ಕ ಮತ್ತು ಬ ಬರಹ, ಕೆಪಿ ರಾವ್, ಶಬ್ದರತ್ನ ಲಿಫ್ ಆಪೀಸ್ ಇವುಗಳಲ್ಲಿಯೇ ವಿವಿಧ ರೀತಿಯಲ್ಲಿ ಇನ್ನೂ ಹಲವಾರು ಬಗೆಯ ಕನ್ನಡ ಲಿಪಿಗಳನ್ನು ಬರೆಯಲು ಸಾಧ್ಯವಾಗುವ ತಂತ್ರಾಂಶಗಳನ್ನು ರೂಪಿಸಿದರು. ರೂಪಿತ ತಂತ್ರಾಶಗಳಿಂದ ಕನ್ನಡದ ಬಳಕೆಯೂ ಆಯಿತು. ಆದರೆ ಕನ್ನಡ ಲಿಪಿಗಳ ಪ್ರಯೋಗ

ಮಾಡುವ ಸಂದರ್ಭಗಳಲ್ಲಿ ಅಥವಾ ಬೆರಳಚ್ಚು ಸಂದರ್ಭದಲ್ಲಿ ಇಂದಿಗೂ ಅದೇ ಇಂಗ್ಲೀಷ್ ಕೀಲಿ ಮಣೆಯನ್ನು ಬಳಸಲಾಗುತ್ತಿದೆ ಎನ್ನುವುದು ನೋವಿನ ಸಂಗತಿ.

ಪ್ರಸ್ತುತ ಸಂದರ್ಭದಲ್ಲಿ ಈಗಾಗಲೇ ಆಡಳಿತದಲ್ಲಿ ಕನ್ನಡ ಬಳಕೆಯು ಹಲವಾರು ಕಾರ್ಯಕ್ರಮಗಳ ತಂತ್ರಾಂಶಗಳ ಅಳವಡಿಕೆಯ ಮುಖಾಂತರ ಗಣಕಯಂತ್ರಗಳು ವಿವಿಧ ಆಡಳಿತ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸಂತಸದ ವಿಷಯ.

ಉದಾಹರಣೆಗಾಗಿ: ನೋಂದಣಿ ತಂತ್ರಾಂಶ, ಗ್ರಂಥಾಲಯ ನಿರ್ವಹಣೆ ತಂತ್ರಾಂಶ, ಕಚೇರಿ ತಂತ್ರಾಂಶ, ಆಸ್ಪತ್ರೆಗಳಲ್ಲಿ ಹೊರ ರೋಗಿ ಮತ್ತು ಒಳ ರೋಗಿಗಳಿಗೆ ಚೀಟಿ ನೀಡುವ ತಂತ್ರಾಂಶ ಈ ರೀತಿಯಾಗಿ ಬೇರೆ ಬೇರೆ ಇಲಾಖೆಗಳು ತಮಗೆ ಸಂಬಂಧಪಟ್ಟಂತೆ ಕನ್ನಡ ತಂತ್ರಾಂಶಗಳನ್ನು ಬಳಸಿಕೊಂಡು ಆಡಳಿತದಲ್ಲಿ ಕಾರ್ಯನಿರ್ವಹಿಸುತ್ತಿವೆ. ಕೆಳಕಂಡಂತೆ ಗಣಕ ಯಂತ್ರವನ್ನು ಬಳಸಲಾಗುತ್ತದೆ. ಉದಾಹರಣೆಗಾಗಿ.

ಕ್ಷೇತ್ರ		**ಗಣಕಯಂತ್ರ ಕಾರ್ಯ ನಿರ್ವಹಿಸುತ್ತಿರುವ ವಿವರ**
ಬ್ಯಾಂಕ್	:	ಬ್ಯಾಂಕ್‌ಗಳಲ್ಲಿ ಗಣಕ ಯಂತ್ರವನ್ನು ಬಳಸುವುದಾದರೆ, ಬ್ಯಾಂಕ್‌ಗಳಿಗೆ ಸಂಬಂಧಿಪಟ್ಟ ಮತ್ತು ಅಲ್ಲಿನ ಕಾರ್ಯವಿನ್ಯಾಸಕ್ಕೆ ಹೊಂದಿಕೊಂಡಂತೆ ತಂತ್ರಾಂಶಗಳ ಮಾಹಿತಿ ಗಣಕ ಯಂತ್ರಕ್ಕೆ ಅಳವಡಿಸಬೇಕಾಗುತ್ತದೆ.
ಬ್ಯಾಂಕುಗಳಿಂದ ನಿರ್ವಹಿಸಲಾಗುತ್ತಿರುವ ಎ.ಟಿ.ಎಮ್	:	ಎ.ಟಿ.ಎಮ್.ಗೆ ಸಂಬಂಧಪಟ್ಟಂತೆ ಲೆಕ್ಕಾಚಾರಗಳ ಪೂರ್ಣ ಎ.ಟಿ.ಎಮ್ ಮಾಹಿತಿಯ ತಂತ್ರಾಂಶಗಳನ್ನು ಅದರಲ್ಲಿ ಅಳವಡಿಸಿರಬೇಕಾಗುತ್ತದೆ ಅಂದಾಗ ಮಾತ್ರ ಅದು ಪರಿಪೂರ್ಣವಾಗಿ ನಿರ್ವಹಣೆಯಾಗಲು ಸಾಧ್ಯ.
ಸಾರ್ವಜನಿಕ ಉದ್ಯಾನವನದಲ್ಲಿ ಸಂಗೀತ ಕಾರಂಜಿ ನಡೆಸಲು	:	ಸಂಗೀತ ಕಾರಂಜಿಯನ್ನು ನಡೆಸಲು ಅದಕ್ಕೆ ಸಂಬಂಧಪಟ್ಟ ಸಂಗೀತಕ್ಕೆ ಸಂಗೀತ ಕಾರಂಜಿ ನಡೆಸಲು ನೀರಿನ ಚಿಲುಮೆಯ ತರಂಗಗಳನ್ನು ಹೊಂದಾಣಿಕೆ ಮಾಬೇಕಾದ ಅವಶ್ಯಕತೆ ಇರುತ್ತದೆ ಅದಕ್ಕೆ ಹೊಂದಾಣಿಕೆಯಾಗುವ ತಂತ್ರಾಂಶಗಳನ್ನು ತಯಾರಿಸಿ ಸಂಗೀತ ಕಾರಂಜಿಗೆ ಗಣಕಯಂತ್ರಕ್ಕೆ ಅಳವಡಿಸಿದಾಗ ಮಾತ್ರ ಅದು ಕಾರ್ಯನಿರ್ವಹಿಸುತ್ತದೆ.
ವೈದ್ಯಕೀಯ ಕ್ಷೇತ್ರ	:	ಗಣಕಯಂತ್ರವಿಲ್ಲದ ವೈದ್ಯಕೀಯ ಕ್ಷೇತ್ರವನ್ನು ನಾವು ಊಹಿಸಲೂ ಸಾಧ್ಯವಿಲ್ಲ ಇಂದಿನ ದಿನಮಾನಗಳಲ್ಲಿ ಗಣಕ ಯಂತ್ರಗಳು ವೈದ್ಯಕೀಯ ಕ್ಷೇತ್ರವನ್ನೂ ಪೂರ್ಣವಾಗಿ ಆವರಿಸಿಕೊಂಡಿವೆ. ಅದಲ್ಲದೇ ವೈದ್ಯಕೀಯ ಕ್ಷೇತ್ರದಲ್ಲಿ ವಿಸ್ಮಯವನ್ನುಂಟು ಮಾಡಿವೆ. ಉದಾ: ಸ್ಕ್ಯಾನ್, ಲೇಸರ್, ಶಸ್ತ್ರ ಚಿಕಿತ್ಸೆ, ಗರ್ಭಸೂಚಕ,

ಪ್ರವೇಶ ದ್ವಾರದ ಬಳಿ ಅನುಮತಿಗಳ ನಿರ್ವಹಣೆ : ಉದ್ದೇಶಿತ ವಲಯದಲ್ಲಿ ಪ್ರತಿಯೊಂದಕ್ಕೂ ಪ್ರವೇಶ ಶುಲ್ಕ ಪಾವತಿಸಿ ಒಳಹೋಗಬೇಕಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಪ್ರವೇಶಕ್ಕೆ ಸಂಬಂಧಪಟ್ಟ ದತ್ತಾಂಶಗಳ ನಿರ್ವಹಣೆಯ ತಂತ್ರಾಂಶಗಳನ್ನು ಅಳವಡಿಸಿದಲ್ಲಿ ಮಾತ್ರ ಗಣಕಯಂತ್ರ ಸೀಮಿತ ಕ್ಷೇತ್ರಕ್ಕೆ ಕಾರ್ಯನಿರ್ವಹಿಸುತ್ತದೆ.

ಉದಾ: ವೈದ್ಯಕೀಯ ಪ್ರವೇಶ ಚೀಟಿ, ಅನುಮತಿ ಪತ್ರಗಳ ನಿರ್ವಹಣೆ ಇತ್ಯಾದಿ.

ಲೆಕ್ಕಾಚಾರಗಳ ನಿರ್ವಹಣೆ : ಆಡಳಿತ ವಿಭಾಗದಲ್ಲಿ, ಅಥವಾ ಇನ್ಯಾವುದೇ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಆಯಾ ವಲಯದಲ್ಲಿನ ಲೆಕ್ಕಾಚಾರ ನಿರ್ವಹಣೆಗೆ ಸಂಬಂಧಿಸಿದಂತೆ ತಂತ್ರಾಂಶಗಳನ್ನು ಅಳವಡಿಸಲೇ ಬೇಕಾಗುತ್ತದೆ.

ಉದಾ: ವಾರ್ಷಿಕ ವೇತನ ಲೆಕ್ಕಾಚಾರ, ದಿನವ್ಯವಹಾರ ನಿರ್ವಣೆ, ಕೂಡಿಕೆ ಮತ್ತು ವಿತರಣೆ ದತ್ತಾಂಶ.

ಸಾರ್ವಜನಿಕ ವಲಯದಲ್ಲಿನ ಶೇರು ಮಾರುಕಟ್ಟೆಯ ಸೂಚ್ಯಾಂಕಗಳು : ಈ ಕ್ಷೇತ್ರದಲ್ಲೂ ಸಹ ಶೇರು ಮಾರುಕಟ್ಟೆಯ ಸೂಚ್ಯಾಂಕಗಳ ಮಾಹಿತಿಯನ್ನು ತಿಳಿಯ ಪಡಿಸುವ ಮಾಹಿತಿಗಳ ತಂತ್ರಾಂಶಗಳನ್ನು ಗಣಕಯಂತ್ರಕ್ಕೆ ಅಳವಡಿಸಿಕೊಳ್ಳ ಬೇಕಾಗುತ್ತದೆ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರವೇಶ ದ್ವಾರ (ಟೋಲ್‌ಗೇಟ್) ನಿರ್ವಹಣೆ: : ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಗೇಟ್ ನಿರ್ವಹಣೆಗೆ **ಪಟ್ಟಣ** ಸಂಬಂಧಿಸಿದಂತೆ ದಿನನಿತ್ಯ ಲಕ್ಷಾನುಗಟ್ಟಲೇ ವಾಹನಗಳು ಹಾಗೂ ಹಣದ ಮೊತ್ತ ಜಮಾ ಆಗುತ್ತಿರುತ್ತದೆ. ಹೀಗಾಗಿ ಅದರ ಸಂಪೂರ್ಣ ನಿರ್ವಹೆಣೆಗಾಗಿ ಆ ಕ್ಷೇತ್ರಕ್ಕೆ ಸಂಬಂಧಪಟ್ಟ ತಂತ್ರಾಂಶಗಳನ್ನು ಅಳವಡಿಸಿ ಕಾರ್ಯನಿರ್ವಹಿಸಲಾಗುತ್ತದೆ.

ಉದಾ: ಹೆದ್ದಾರಿ ಶುಲ್ಕ ನೀಡುವಿಕೆಯ ರಸೀದಿ,

ಗಣಕೀಕೃತ ವಾಹನಗಳ ಗೇಟ್ ತೆಗೆಯುವಿಕೆ. : ಗಣಕಯಂತ್ರದಲ್ಲಿಯೇ ವಾಹನ ಸಂಖ್ಯೆ ನೋಂದಣಿ. ಇತ್ಯಾದಿ ರೀತಿಯಲ್ಲಿ ಗಣಕಯಂತ್ರವನ್ನು ಬಳಕೆ ಮಾಡಲಾಗುತ್ತದೆ.

ಆಡಳಿತ ವಲಯದಲ್ಲಿ ಗಣಕಯಂತ್ರದ ಬಳಕೆ

ರವಾನೆ ವಿಭಾಗ : ಕಚೇರಿಗೆ ಬರುವ ಮತ್ತು ಹೊರಗಡೆ ಹೋಗುವ ಪತ್ರಗಳನ್ನು ದಾಖಲಿಸಿಕೊಳ್ಳುವ ಒಂದು ವಿಭಾಗವಾಗಿದ್ದು ಇದರ ಬಳಕೆ ಇಂದು ಹೆಚ್ಚಾಗುತ್ತಿದ್ದು ರವಾನೆ ವಿಭಾಗಕ್ಕೆ ಹೊಂದಿಕೊಂಡಂತೆ ಇದಕ್ಕೆ ಬೇಕಾಗುವ ಸಂಬಂಧಪಟ್ಟ ತಂತ್ರಾಂಶಗಳನ್ನು ತಯಾರಿಸಿ ಆ ವಿಭಾಗಕ್ಕೆ ಅನ್ವಯಿಸಿ ಕಾರ್ಯನಿರ್ವಹಿಸಲಾಗುತ್ತದೆ

ಉದಾ;– ಕಚೇರಿಗೆ ಬಂದ ಪತ್ರಗಳ ದಾಖಲು.
ಕಚೇರಿಯಿಂದ ವಿಭಾಗಕ್ಕೆ ಕಳುಹಿಸಲಾಗುವ ಪತ್ರಗಳ ದಾಖಲು.
ಕಚೇರಿಯಿಂದ ರವಾನೆಯಾಗುವ ಪತ್ರಗಳ ದಾಖಲು

ಕಚೇರಿಯಲ್ಲಿನ ಮುಖ್ಯ ವಿಭಾಗಗಳಲ್ಲಿ ಗಣಕಯಂತ್ರದ ಪಾಲು	:	ಕಚೇರಿಯಲ್ಲಿ ನಿರ್ವಹಿಸ ಲಾಗುತ್ತಿರುವ ಮುಖ್ಯ ಶಾಖೆಗಳಾದ ಆರ್ಥಿಕ, ಆಡಳಿತ, ವಿಮಾ, ಲೆಕ್ಕಾಚಾರ, ಪತ್ರಗಳ ರಚನೆ, ತಿದ್ದುಪಡಿ, ಸಂಸ್ಕರಣೆಗೆ ಸಂಬಂಧಿಸಿದಂತೆ ಪ್ರತಿಯೊಂದು ಕಚೇರಿಯಲ್ಲಿ ಗಣಕಯಂತ್ರಗಳ ಮೂಲಕ ನಿರ್ವಹಿಸಲಾಗುತ್ತಿದ್ದು ಇದಕ್ಕೆ ಎಮ್.ಎಸ್. ಕಚೇರಿ ತಂತ್ರಾಂಶವನ್ನು ಬಳಸಲಾಗುತ್ತಿದೆ.
ಖಜಾನೆ–೨	:	ಖಜಾನೆ ಇಲಾಖೆಯಿಂದ ವಿಶೇಷವಾಗಿ ರಚಿತವಾದ ಒಂದು ತಂತ್ರಾಂಶವೇ ಖಜಾನೆ–೨. ಇದನ್ನು ಚಾಲನೆಗೆ ತರುವುದಕ್ಕೆ ಮುಂಚಿತವಾಗಿ ಜಾವಾ ತಂತ್ರಾಂಶವನ್ನು ಅಳವಡಿಕೆ ಮತ್ತು ಅನ್ವಯಿಕೆಯಾದ ನಂತರದಲ್ಲಿ ಗಣಕಯಂತ್ರದಲ್ಲಿ ಖಜಾನೆ ಇಲಾಖೆಯು ಆಡಳಿತ ಹಿತದೃಷ್ಟಿಯಿಂದ ರಚಿಸಲಾದ ಖಜಾನೆ–೨ರ ಉಪಯೋಗ ಸಾಧ್ಯ.
ತರಬೇತಿಗಳನ್ನು ನೀಡಲು ಪ್ರೋಜಕ್ಟರ್‌ಗಳಿಗೆ ಬಳಸಲಾಗುವ ಯೋಜನೆಗಳ ತಂತ್ರಾಂಶಗಳು ಮತ್ತು ಗಣಕಯಂತ್ರ:	:	ಪ್ರತಿಯೊಂದು ಇಲಾಖೆಯು ತನ್ನದೇ ಆದ ಒಂದು ಉದ್ದೇಶವನ್ನು ಹೊಂದಿರುತ್ತದೆ. ಆ ಉದ್ದೇಶಗಳನ್ನು ಜನರಿಗೆ ತಲುಪುವ ಸಲುವಾಗಿ ಯೋಜನೆಗಳನ್ನು ತಯಾರಿಸಿ ಆಯೋಜನೆಗಳನ್ನು ತಂತ್ರಾಂಶಗಳಿಗೆ ಪರಿವರ್ತಿಸಿ ಗಣಕಯಂತ್ರದ ಸಹಾಯದಿಂದ ಪ್ರೋಜಕ್ಟರ್‌ಗಳ ಮುಖಾಂತರ ಸಾರ್ವಜನಿಕ ವಲಯ ಅಥವಾ ತರಬೇತಿಗಳನ್ನು ನೀಡುವುದನ್ನು ಗಣಕಯಂತ್ರದ ಮುಖಾಂತರ ಮಾತ್ರ ಸಾಧ್ಯ. ಉದಾ: ಸಾಮಾಜಿಕ ಅರಿವು ಮೂಡಿಸುವ ಕಾರ್ಯಕ್ರಮ ಚುನಾವಣಾ ತರಬೇತಿ ನೀಡುವುದು. ಏಡ್ಸ ಕುರಿತು ಜನಜಾಗೃತಿ ಕಾರ್ಯಕ್ರಮದ ಬಿತ್ತರ

ಇದಲ್ಲದೇ ಹಲವಾರು ಇಲಾಖೆಗಳಲ್ಲಿ ತನ್ನದೇ ಆದ ರೀತಿಯಲ್ಲಿ ಗಣಕಯಂತ್ರಗಳು ಕಾರ್ಯನಿರ್ವಹಿಸುತ್ತವೆ.

ಇಲಾಖೆಗಳ ಟೆಂಡರ್ ತಯಾರಿಕೆ ಮತ್ತು ಪ್ರಕಟಣೆ

ಇಲಾಖೆಗಳಿಗೆ ಸಂಬಂಧಪಟ್ಟ ಇ–ಪ್ರೋಕ್ಯೂರ್ ಮೆಂಟ್

ಪೋಲೀಸ್ ಇಲಾಖೆಯ ಪ್ರಥಮ ವರ್ತಮಾನ ವರದಿ

೩೭೧ (ಜೆ) ಕಾರ್ಯನಿರ್ವಹಣೆ

ಸಕಾಲ ಅರ್ಜಿಸಲ್ಲಿಕೆ ಮತ್ತು ನೀಡಿಕೆ

ಆದಾಯ ಮತ್ತು ಜಾತಿ ಪ್ರಮಾಣ ಪತ್ರ ಅರ್ಜಿ ಸಲ್ಲಿಕೆ, ನೀಡಿಕೆ

ನೆಮ್ಮದಿ ಕೇಂದ್ರ ಕಚೇರಿಯಲ್ಲಿನ ಕಾರ್ಯನಿರ್ವಹಣೆ

ನೋಂದಣಿ ಕಾರ್ಯಗಳು (ವಿವಾಹ, ಆಸ್ತಿ, ಒಡಂಬಡಿಕೆ, ಸಂಘ-ಸಂಸ್ಥೆ)

ವಾಹನಗಳ ನೋಂದಣಿ

ಇಲಾಖೆಗಳಲ್ಲಿನ ಮಾಹಿತಿ ಸಂಗ್ರಹಣೆ, ತಿದ್ದುಪಡಿ ಮತ್ತು ಸೇರ್ಪಡೆ, ಸಂಸ್ಕರಣೆ ಕಾರ್ಯಗಳು

ಟಿಕೇಟುಗಳ ಮುಂಗಡ ಕಾಯ್ದಿರಿಸುವಿಕೆ

ಗಣಕಯಂತ್ರದಿಂದ ಸ್ವೀಕೃತಿ ರಸೀದಿಗಳ ವಿತರಣೆ

ಗುಪ್ತ ಕ್ಯಾಮರಾಗಳ ಅಳವಡಿಕೆ (ಸಿ.ಸಿ.ಕ್ಯಾಮರ)

ಚಿತ್ರಮಂದಿರದಲ್ಲಿ ಬೆಳಕು ಬಿಡಲಾಗುವ ಪ್ರೋಜಕ್ಟರ್ ನಿರ್ವಹಣೆ

ನಿಲ್ದಾಣಗಳಲ್ಲಿ ವಾಹನಗಳ ವೇಳಾಪಟ್ಟಿ ಬಿತ್ತರಣೆ

ನಿಲ್ದಾಣಗಳಲ್ಲಿ ರೈಲ್ವೇ, ಬಸ್, ಟಿಕೇಟುಗಳ ವಿತರಣೆ, ಮತ್ತು ಕಾಯ್ದಿರಿಸುವಿಕೆ.

ಅಭಿಲೇಖಾಲಯದ ದತ್ತಾಂಶಗಳ ಸಂಗ್ರಹಣೆ

ನ್ಯಾಯಾಲಯದ ಪ್ರಕರಣಗಳ ಮಾಹಿತಿ ಸಂಗ್ರಹಣೆ, ಬಿತ್ತರಣೆ

ವೈಮಾನಿಕ ಸಮೀಕ್ಷೆ

ಅಂತರಿಕ್ಷೆ ಉಡಾವಣಾ ಮಾಹಿತಿ ಮತ್ತು ಅದರ ಕಾರ್ಯನಿರ್ವಹಣೆ

ಶಿಕ್ಷಣ ಇಲಾಖೆಯ ಫಲಿತಾಂಶ, ದತ್ತಾಂಶಗಳ ಸಂಗ್ರಹಣೆ ಕಾರ್ಯ ಮತ್ತು ಬಿತ್ತರಣೆ

ವೃತ್ತಿಪರ ಮತ್ತು ತಾಂತ್ರಿಕ ಸೀಟುಗಳ ಹಂಚಿಕೆಯ ಕಾರ್ಯಗಳು.

ಇತ್ಯಾದಿ ಕಾರ್ಯಗಳು ಗಣಕಯಂತ್ರದ ಮೂಲಕವಾಗಿಯೇ ಕಾರ್ಯನಿರ್ವಹಿಸುತ್ತವೆ,

ಮೇಲಿನ ಎಲ್ಲಾ ಕಾರ್ಯಗಳು ಗಣಕಯಂತ್ರ ಮುಖಾಂತರವಾಗಿ ಮಾತ್ರವಲ್ಲದೆ ಕೆಲವೊಂದು ಸಂದರ್ಭಗಳಲ್ಲಿ ಗಣಕಯಂತ್ರಗಳು ಅಂತರ್ಜಾಲದ ಸಹಾಯವನ್ನು ಪಡೆಯುತ್ತವೆ. ಅಂತರ್ಜಾಲ ಒಂದಿದ್ದರೆ ಕೆಲಸ ನಿರ್ವಹಣೆಯಾಗಲು ಸಾಧ್ಯವಿಲ್ಲ. ಅದಕ್ಕಾಗಿಯೇ ಅಂತರ್ಜಾಲದ ಮುಖಾಂತರವಾಗಿಯೇ ಕಾರ್ಯನಡೆಯಬೇಕೆಂದರೆ ಗಣಕಯಂತ್ರದ ಸಹಾಯವೂ ಬೇಕೆ ಬೇಕು ಹೀಗಾಗಿ ಗಣಕಯಂತ್ರ ಮತ್ತು ಅಂತರ್ಜಾಲಕ್ಕೆ ಅವಿನಾಭಾವ ಸಂಬಂಧವಿರುವುದು ವಿಜ್ಞಾನ ಲೋಕದ ವಿಸ್ಮಯ.

ಆಡಳಿತದಲ್ಲಿ ಕನ್ನಡ ಬಳಕೆಯ ಸಂದರ್ಭದಲ್ಲಿ ಗಣಕಯಂತ್ರದ ಸಮಸ್ಯೆ ಮತ್ತು ಸವಾಲುಗಳು

ಗಣಕಯಂತ್ರದ ಸಮಸ್ಯೆಗಳು ಮತ್ತು ಸವಾಲುಗಳು ಹಲವಾರು ಇರಬಹುದು ಆದರೆ

ಅವುಗಳನ್ನು ಇಲ್ಲಿ ಒಟ್ಟಾರೆಯಾಗಿ ಚರ್ಚಿಸಲಾಗುತ್ತಿಲ್ಲ ಬದಲಾಗಿ ಆಡಳಿತದಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಮಾತ್ರ ಸಮಸ್ಯೆ ಮತ್ತು ಸವಾಲುಗಳನ್ನು ಗುರುತಿಸಲಾಗಿದೆ.

ಗಣಕಯಂತ್ರ ದಿನದಿಂದದಿನಕ್ಕೆ ಬದಲಾವಣೆ ಹೊಂದುತ್ತಾ ಮುಂದುವರೆದಿದೆ. ಮೊದಲಿಗೆ ನಿಧಾನಗತಿಯ ಗಣಕಯಂತ್ರಗಳಿಂದ ಪ್ರಾರಂಭವಾಗಿ ಈಗಿನ ವಿಸ್ಮಯವಾಗಿ ಬೆಳೆಯುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ಕಾಲದಲ್ಲಿ ಮುಂದೊಂದು ದಿನ ನಾವು ಮಾತನಾಡಿದ್ದನ್ನು ಕನ್ನಡದಲ್ಲಿ ಬೆರಳಚ್ಚು ಗೊಳಿಸುವ ಗಣಕಯಂತ್ರಗಳು ಆಧುನಿಕ ಜಗತ್ತಿಗೆ ಪಾದಾರ್ಪಣೆ ಮಾಡಿದರೆ ಅಚ್ಚರಿ ಪಡಬೇಕಾಗಿಲ್ಲ. ಕಾರಣವೇನೆಂದರೆ, ಗಣಕಯಂತ್ರ ಒಂದು ಪೆಟ್ಟಿಗೆ ಮಾತ್ರ ನಾವು ಅದಕ್ಕೆ ನಮ್ಮ ಕಾರ್ಯಸಾಧನೆಗಾಗಿ ನಮಗೆ ಬೇಕಾದ ಕ್ಷೇತ್ರದ ಮಾಹಿತಿಗಳನ್ನೊಳಗೊಂಡ ತಂತ್ರಾಂಶಗಳನ್ನು ಅಳವಡಿಸಿದಲ್ಲಿ ಮಾತ್ರ ನಮ್ಮ ಉದ್ದೇಶಿತ ಕಾರ್ಯದ ಸಫಲತೆ ಯುಂಟಾಗುತ್ತದೆ ಹೀಗಾಗಿ ಗಣಕಯಂತ್ರ ಪೂರ್ಣ ಪ್ರಮಾಣದಲ್ಲಿ ತಂತ್ರಾಂಶಗಳ ಅಳವಡಿಕೆಯ ಮೇಲೆಯೇ ನಿಂತಿದೆ.

ಸಾರ್ವತ್ರಿಕವಾಗಿ ಗಣಕಯಂತ್ರದಲ್ಲಿ ಕನ್ನಡವನ್ನು ಮತ್ತು ಆಡಳಿತದಲ್ಲಿ ಕನ್ನಡದ ಬಳಕೆಗಾಗಿ ರಚಿತವಾದ ಮುಖ್ಯ ತಂತ್ರಾಂಶಗಳಾದ ನುಡಿ, ಬರಹ, ಶ್ರೀಲಿಪಿ, ಐಲೀಪ್, ಆಕೃತಿ, ಕೈರಾಲಿ, ಪ್ರಕಾಶಕ್, ಬ್ರಾಹ್ಮಿ, ಕುವೆಂಪು ಕನ್ನಡ, ಕನ್ನಡ ಕಚೇರಿ, ಕನ್ನಡ ಸೌರಭ, ಕಲಿತ, ನುಡಿ ಬರಹ, ನುಡಿ ಅಕ್ಷರ, ಅಕ್ಷರ, ಕ ಮತ್ತು ಬ ಬರಹ, ಕೆಪಿ ರಾವ್, ಶಬ್ದರತ್ನ, ಲಿಫ್ ಆಪೀಸ್ ಇತ್ಯಾದಿ ಕನ್ನಡ ಬರಹದ ಅಕ್ಷರಗಳನ್ನು ಜಾರಿಗೆ ತಂದಿರುವುದು ಶ್ಲಾಘನೀಯ.

೧. ಗಣಕಯಂತ್ರದಲ್ಲಿ ಇಂಗ್ಲೀಷ್ ಬಳಕೆಯ ಕಲಿಕೆ ಬಹಳ ಸುಲಭ ಕನ್ನಡ ಕಲಿಕೆ ಮತ್ತು ಬಳಕೆ ಕಷ್ಟ ಎಂಬುದೂ ಸಹ ಸಾಮಾನ್ಯವಾಗಿ ಪ್ರಚಲಿತದಲ್ಲಿರುವ ಅಭಿಪ್ರಾಯಗಳು. ಈ ಅಭಿಪ್ರಾಯದಿಂದನೇ ಗಣಕಯಂತ್ರಗಳಲ್ಲಿ ಬೆರಳಚ್ಚು ಮಾಡಿಸುವುದು ಅಥವಾ ಮಾಡುವುದು ಒಂದು ದೊಡ್ಡ ಸಮಸ್ಯೆ ಎಂದೇ ಬಹಳ ಜನ ಭಾವಿಸಿದ್ದಾರೆ. ಅಲ್ಲದೇ ಕಂಪ್ಯೂಟರುಗಳಲ್ಲಿ ಇಂಗ್ಲೀಷಿನ ಸರಳ ಲಿಪಿಯನ್ನು ತಾಂತ್ರಿಕವಾಗಿ ಅಳವಡಿಸುವುದು ಮತ್ತು ಬೆರಳಚ್ಚಿಸುವುದು ಬಹಳ ಸುಲಭ. ಒತ್ತಕ್ಷರಗಳನ್ನು ಹೊಂದಿರುವ ಕನ್ನಡ ಲಿಪಿಯನ್ನು ತಾಂತ್ರಿಕವಾಗಿ ಅಳವಡಿಸಿ ಇರುವ ಇಂಗ್ಲೀಷ್ ಕೀಲಿಮಣಿಯನ್ನು ಬಳಸಿ ಕನ್ನಡ ಲಿಪಿಯನ್ನು ಬೆರಳಚ್ಚಿಸುವ ವ್ಯವಸ್ಥೆಯನ್ನು ಕಂಪ್ಯೂಟರಿನಲ್ಲಿ ರೂಪಿಸುವುದು ಸವಾಲಿನ ಕೆಲಸವೇ ಸರಿ. ಆಡಳಿಕ ಕನ್ನಡ ಕಚೇರಿ ಕಾರ್ಯಶಿಬಿರ ಕೈಪಿಡಿಯಲ್ಲಿ ತಿಳಿಸಿದಂತೆ ಸದರಿ ವಿಷಯವು ಪ್ರಾರಂಭದಲ್ಲಿ ಸಮಸ್ಯೆ ಮತ್ತು ಸವಾಲೇ ಆಗಿತ್ತು. ಆದರೆ ಈ ಸಮಸ್ಯೆ ಮತ್ತು ಸವಾಲು ಇಂದಿನ ವಿನೂತನ ತಂತ್ರಾಂಶಗಳ ಅಳವಡಿಕೆ ಮೂಲಕ ಬದಲಾವಣೆಗೊಂಡು ಕಾರ್ಯನಿರ್ವಹಿಸುತ್ತಿದೆ.

ಆದರೆ ಇಂಗ್ಲೀಷಿಗೆ ಅಳವಡಿಸಲಾದ ೨೬ ಅಕ್ಷರಗಳ ಕೀಲಿಮಣಿಗೆ ಒತ್ತಕ್ಷರ, ವ್ಯಂಜನ, ಸ್ವರಗಳು, ದೀರ್ಘಾಕ್ಷರಗಳನ್ನು ಅಳವಡಿಸಿ ಅದನ್ನು ಕಾರ್ಯಪ್ರವೃತ್ತವಾಗುವಂತೆ ಮಾಡಿರುವುದು ಮೆಚ್ಚುವಂತಹದ್ದು. ಆದರೆ ಇಂದಿಗೂ ಇಂಗ್ಲೀಷಿನ ಕೀಲಿಮಣಿ ಕನ್ನಡದ ಸಂಕೇತಾಕ್ಷರಗಳ ಸ್ವರೂಪವನ್ನು ನೊಟಕ್ಕೆ ಪಡೆದುಕೊಳ್ಳುವಲ್ಲಿ ವಿಫಲವಾಗಿದೆ ಎನ್ನಬಹುದು. ಇದೊಂದು ಸಮಸ್ಯೆಯೂ ಹೌದು ಹಾಗೂ ಸವಾಲೂ ಹೌದು.

ದೇಶವ್ಯಾಪಿ ವಿಶಾಲತೆಯನ್ನು ಹೊಂದಿ ಗಣಕಯಂತ್ರ ತನ್ನ ಕಾರ್ಯವನ್ನು ನಿರ್ವಹಿಸುತ್ತಿರುವ ಈಗಿನ ಸಂದರ್ಭದಲ್ಲಿ ಗಣಕಯಂತ್ರದಲ್ಲಿ ಆಯಾಭಾಷೆಗಳ ಲಿಪಿಗಳನ್ನು ನೋಟಕ್ಕೆ ಕೀಲಿಮಣಿಗಳಲ್ಲಿ ಪದವಿನ್ಯಾಸ ಮಾಡುವುದು ಮತ್ತು ಮಾಡುವಲ್ಲಿ ಹಿಂದೆ ಬಿದ್ದಿರುವುದು ಎಲ್ಲಾ ಭಾಷೆಯ ಸಮಸ್ಯೆ ಮತ್ತು ಜಾಗತಿಕ ನೆಲೆಯಲ್ಲಿ ಭಾಷೆಯ ಮೇಲೆ ನಡೆಯುತ್ತಿರುವ ಹುನ್ನಾರ ಎಂದರೆ ತಪ್ಪಾಗಲಾರದು.

೨. ಆಡಳಿತದಲ್ಲಿ ಕಚೇರಿ ಪತ್ರ, ಪುಟ ವಿನ್ಯಾಸ, ಮುದ್ರಣಕ್ಕೆ ಅಳವಡಿಸುವುದು, ಪತ್ರಗಳ ಇತರೆ ಬರಹದ ಕಾರ್ಯಗಳಿಗೆ ಎಮ್.ಎಸ್.ವರ್ಡನ್ನು ಬಳಸುವುದು. ಲೆಕ್ಕಶಾಖೆ, ದತ್ತಾಂಶಗಳ ಸಂಗ್ರಹ, ಹೆಚ್ಚು ದತ್ತಾಂಶಗಳ ಸೃಷ್ಟಿಯನ್ನು ಎಮ್.ಎಸ್.ಎಕ್ಸಲ್‌ನಲ್ಲಿ ವ್ಯತ್ಯಾಸವಾಗದಂತೆ ಮಾಡಬಹುದು. ಮಾಹಿತಿ ಸಂಗ್ರಹಣೆ, ಸಂಸ್ಕರಣೆ, ವಿತರಣೆಯನ್ನು ಎಮ್.ಎಸ್. ಎಕ್ಸಸ್‌ನಲ್ಲಿ ಮಾಡಬಹುದು, ಭಿತ್ತಿ ಚಿತ್ರಗಳು, ಯೋಜನೆಗಳು, ಆಕರ್ಷಕ ಆಮಂತ್ರಣ ಪತ್ರಗಳು, ವಿನ್ಯಾಸಗಳ ಜೋಡಣೆ, ತರಬೇತಿ ಯೋಜನೆಗಳ ಸ್ಲೈಡ್(ಜಾರಿಕೆಗಳು)ಗಳನ್ನು ವಿನ್ಯಾಸ, ಚುನಾವಣೆ, ಏಡ್ಸ ಕುರಿತಾದ ಜಾಗೃತಿ ಮೂಡಿಸುವ ಜಾರಿಕೆಗಳು, ಮತ್ತು ಇಲಾಖಾ ಯೋಜನೆಗಳನ್ನು ಎಮ್.ಎಸ್.ಪವರ್‌ಪಾಯಿಂಟ್‌ನಲ್ಲಿ ರೂಪಿಸುವುದು ಅಚ್ಚರಿಯೇ ಸರಿ.

ಆದರೆ ಇಲ್ಲಿ ವಿಶೇಷ ವಿಷಯವೇನೆಂದರೆ, ನಮ್ಮ ಭಾಷೆಯಲ್ಲಿನ ಯೋಜನೆಗಳು, ರೂಪುರೇಷಗಳನ್ನು, ಬೇರೆ ಭಾಷೆಯ ಮುಖಾಂತರ ಕಾರ್ಯನಿರ್ವಹಣೆ ನಡೆಸುವುದು ಕನ್ನಡಿಗರ ದುರ್ದೈವವೇ ಸರಿ. ಕನ್ನಡದ ನುಡಿ, ಶ್ರೀಲಿಪಿ, ಕುವೆಂಪು ತಂತ್ರಾಂಶ ಸಿದ್ಧವಿದೆ ಒಪ್ಪಿಕೊಳ್ಳೋಣ, ಬರಹ ತಂತ್ರಾಂಶ ಸಿದ್ಧವಿದೆ ಅದನ್ನೂ ಒಪ್ಪಿಕೊಳ್ಳೋಣ ಆದರೆ ಅವುಗಳನ್ನು ತೆರೆಯುವ ಮತ್ತು ಆ ಕಾರ್ಯಗಳನ್ನು ಕಾರ್ಯಗತ ಗೊಳಿಸುವ ವಿಧಾನ ಕನ್ನಡದ್ದಲ್ಲ ಎನ್ನುವುದು ಕನ್ನಡಿಗರು ಒಪ್ಪಲೇ ಬೇಕಾದ ವಿಷಯ. ಇಂದಿಗೂ ನಾವು ನಮ್ಮ ಭಾಷೆಯ ಬಳಕೆಯನ್ನು ಇಂಗ್ಲೀಷಿನಿಂದಲೇ ಆರಂಭಿಸುವುದು ಎಲ್ಲಾ ಕಡೆಗಳಲ್ಲಿ ಗಣಕಯಂತ್ರಗಳಲ್ಲಿ ಕಂಡುಬರುತ್ತದೆ.

ಉದಾ; Start-programe-MS word
MS excel
MS Powerpoint
MS Axcess – select language- Nudi 01e
Start-programe-documents-files - select language- Nudi 01e

ಈ ರೀತಿಯಲ್ಲಿ ನಮಗೆ ಬೇಕಾಗುವ ಪ್ರೋಗ್ರಾಂನ್ನು ತೆಗೆದುಕೊಂಡ ನಂತರದಲ್ಲಿಯೇ ಅವುಗಳಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ಮೂಲ ಇಂಗ್ಲೀಷ್ ಇದ್ದು ನಂತರದಲ್ಲಿ ನಮ್ಮ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಈ ಪದ್ದತಿ ಬೇಡವೆನ್ನುವುದು ಸ್ಪಷ್ಟ ಅಭಿಪ್ರಾಯ. ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾದ ಈಗಿನ ಸಂದರ್ಭದಲ್ಲಿ ಸರಕಾರಕ್ಕೆ ಪೂರ್ಣಪ್ರಮಾಣದ ಕನ್ನಡದ ಗಣಕಯಂತ್ರಗಳನ್ನು ರೂಪಿಸುವುದು ದೊಡ್ಡ ವಿಷಯವೇನಲ್ಲ. ಆದರೆ ಸರ್ಕಾರ ಈ ಬಗ್ಗೆ ಕ್ರಮವಹಿಸಬೇಕಾಗಿದೆ.

ಗಣಕಯಂತ್ರವನ್ನು ಆರಂಭಿಸಿದ ತಕ್ಷಣವೇ ಕನ್ನಡದಲ್ಲಿಯೇ ಮುಖ್ಯಪರದೆ ಪ್ರಾರಂಭವಾಗಬೇಕಾದ ಮತ್ತು ಪ್ರಾರಂಭಗೊಳ್ಳುವ ಮತ್ತು ಸಂಪೂರ್ಣವಾಗಿ ಕನ್ನಡದಲ್ಲೆ ವ್ಯವಹರಿಸುವ ಗಣಕಯಂತ್ರಗಳು ರೂಪುಗೊಳ್ಳಬೇಕಿದೆ. ಒಂದುವೇಳೆ ರೂಪುಗೊಂಡಿದ್ದ ಪಕ್ಷದಲ್ಲಿ ಅವು ಆಡಳಿತದ ಎಲ್ಲಾ ವಲಯದಲ್ಲಿ ಚಲಾವಣೆಗೆ ಬರಬೇಕಾಗಿದೆ.

೩. ಗಣಕಯಂತ್ರದಲ್ಲಿ ನುಡಿ ತಂತ್ರಾಂಶವನ್ನು ಅಳವಡಿಸಿಕೊಂಡಾಗ ನುಡಿ ತಂತ್ರಾಂಶದ ಮೂಲಕ ಕನ್ನಡ ನುಡಿಯ ಅಕ್ಷರಗಳನ್ನು ಬಳಕೆ ಮಾಡಲು ಸಾಧ್ಯ. ಅದಕ್ಕೆ ಎಮ್.ಎಸ್.ವರ್ಡನಲ್ಲಿ ಕನ್ನಡದಲ್ಲಿ ಬೆರಳಚ್ಚು ಮಾಡಬೇಕೆಂದರೆ ನುಡಿ ಡೈರೆಕ್ಟರಿ ತೆರೆದಿಡಬೇಕು ಅಂದಾಗ ಮಾತ್ರ ಕನ್ನಡ ಬೆರಳಚ್ಚು ಸಾಧ್ಯ. ಅಲ್ಲದೇ ಬೆರಳಚ್ಚು ಮಾಡುವ ಸಂದರ್ಭದಲ್ಲಿ ನುಡಿ ೦೧೩ ರಿಂದ ನುಡಿ ೧೮೩ ರವರೆಗೆ ಕನ್ನಡದ ವಿವಿಧ ರೀತಿಯ ಅಕ್ಷರ ಶೈಲಿಗಳನ್ನು ಬೇಕಾದಂತೆ ಬೆರಳಚ್ಚು ಮಾಡಬಹುದು. ಆದರೆ, ಇವುಗಳಲ್ಲಿ ಕನ್ನಡದ ಅಂಕಿಗಳು ಬರುವುದಿಲ್ಲ. ಮತ್ತೆ ಇದರಲ್ಲಿ ಕನ್ನಡದ ಅಂಕಿಗಳು ಬೇಕೆಂದರೆ ನುಡಿ ೦೧ಕೆ ಎಂದು ಇರುವುದನ್ನು ಭಾಷೆಯ ವಿಭಾಗದಲ್ಲಿ ಆಯ್ಕೆಮಾಡಿಕೊಂಡಾಗ ಮಾತ್ರ ಅಂಕಿಗಳು ಕನ್ನಡದಲ್ಲಿ ಬರುವವು. ನೋಡಿ ಕನ್ನಡ ಮತ್ತು ಕನ್ನಡ ಅಕ್ಷರಗಳನ್ನು ಬೆರಳಚ್ಚು ಮಾಡಿಕೊಳ್ಳಬೇಕೆಂದರೆ ಇಷ್ಟು ಹರ ಸಾಹಸ ಪಡಬೇಕು.

ಆದರೆ ಇಲ್ಲಿ ಬೆರಳಚ್ಚು ಮಾಡುವ ಸಂದರ್ಭದಲ್ಲಿ ನುಡಿ ೦೧೩ ರಿಂದ ನುಡಿ ೧೮೩ ಗಳ ತಂತ್ರಾಶಗಳಲ್ಲಿ ಕನ್ನಡ ಅಂಕಿಗಳನ್ನು ಕೆಲವೊಂದರಲ್ಲಿ ಕಡೆಗಾಣಿಸಿ ತಂತ್ರಾಂಶಗಳು ರಚನೆಯಾಗಿರುವುದು ಕಂಡುಬರುತ್ತದೆ. ಆದರೆ ಆಡಳಿತದಲ್ಲಿ ಕನ್ನಡ ಬಳಕೆಯ ಸಂದರ್ಭದಲ್ಲಿಯೂ ಕನ್ನಡದ ಅಂಕಿಗಳನ್ನು ಕಡೆಗಾಣಿಸುತ್ತಿರುವುದು, ಇಂಗ್ಲೀಷಿನ ಅಂಕಿಗಳನ್ನೇ ಪ್ರಧಾನವಾಗಿಟ್ಟುಕೊಂಡು ಅವುಗಳನ್ನೇ ಪ್ರಧಾನ ಸ್ಥಾನದಲ್ಲಿ ಕೂಡಿಸಿರುವುದು ವಿಷಾದನೀಯ ಸಂಗತಿ. ಗಣಕಯಂತ್ರದಲ್ಲಿ ಆಡಳಿತ ಕನ್ನಡದ ಕಾರ್ಯಗಳನ್ನು ನೆರವೇರಿಸಿಕೊಳ್ಳಬೇಕಾದರೆ ನೇರ, ಸರಳ, ವಿಧಾನಗಳು ರೂಪುಗೊಳ್ಳಬೇಕಾಗಿದ್ದು ಇದೊಂದು ಸಮಸ್ಯೆ ಹಾಗೂ ಸವಾಲೇ ಸರಿ. ಕಾರಣ ನೇರವಾಗಿ ಆಡಳಿತದಲ್ಲಿ ಒಂದೇ ನುಡಿ, ಒಂದೇ ಅಂಕಿಗಳ ಬಳಕೆಯಾಗಲು ಆದೇಶ ಹೊರಡಿಸಬೇಕಾಗಿದೆ.

೪. ಗಣಕಯಂತ್ರದಲ್ಲಿನ ಕನ್ನಡ ಬಳಕೆಯ ಕೀಲಿಮಣಿ ಕೆಲವೊಂದು ಸಂದರ್ಭದಲ್ಲಿ ಕಠಿಣವಾಗಿ ಪರಿಣಮಿಸಿದೆ.

ಒತ್ತಕ್ಷರಗಳನ್ನು ಬೆರಳಚ್ಚು ಮಾಡುವ ಸಂದರ್ಭದಲ್ಲಿ

ಸ್ತ್ರೀ– ಎಂಬ ಪದವನ್ನು ಬೆರಳಚ್ಚು ಮಾಡುವಾಗ – sftfrfi

ಸಂಸ್ಕೃತ– ಎಂಬ ಪದವನ್ನು ಬೆರಳಚ್ಚು ಮಾಡುವಾಗ –sMsfkfrt,

ಅದೇ ರೀತಿಯಾಗಿ ಇನ್ನೂ ಹಲವಾರು ಪದಗಳು ಕನ್ನಡದಲ್ಲಿ ಇದ್ದು ಅವುಗಳನ್ನು ಬೆರಳಚ್ಚು ಮಾಡಲು ತಿಳಿಯದೇ ಇರುವವರು ತುಂಬಾ ಹೆಣಗಾಡುವ ಪರಿಸ್ಥಿತಿ ಬಂದೊದಗುತ್ತದೆ. ಕ್ಲಿಷ್ಟವಾದ ಪದ ಮತ್ತು ಒತ್ತಕ್ಷರಗಳನ್ನು ಹೊಂದಿದ ಪದಗಳನ್ನು ಪದೇ ಪದೇ ಹಲವು ಬಾರಿ ಬೆರಳಚ್ಚು ಮಾಡಿ ಪ್ರಯತ್ನ ಪಡಬೇಕೆಂದು ಸ್ವತಃ ಉದಾಹರಣೆಯಲ್ಲಿ ಕೈಪಿಡಿಯಲ್ಲಿ ತಿಳಿಸಿದ್ದಾರೆ.

ಹಾಗಾದರೆ ಕನ್ನಡದ ಒತ್ತಕ್ಷರ ಪದಗಳ ಬಳಕೆ ಕೆಲವೊಮ್ಮೆ ಬೆರಳಚ್ಚು ಮಾಡಲು ಬೇಸರ ಮೂಡಿ ಇಂಗ್ಲೀಷಿನತ್ತವಾಲಿಕೆಗೂ ಇದೊಂದು ಆಂತರಿಕ ಕಾರಣವೂ ಆಗಿದೆ. ಕಾರಣ ಕೀಲಿಮಣೆಯ ವಿನ್ಯಾಸ ಮತ್ತು ಅದನ್ನು ಆಡಳಿತ ಕನ್ನಡದಲ್ಲಿ ಬಳಕೆಗೆ ಸಂಬಂಧಿಸಿದಂತೆ ಬದಲಾವಣೆಗೊಳ್ಳಬೇಕಿದೆ ಇದೊಂದು ಸಮಸ್ಯೆಯಾಗಿ ಕಾಡುತ್ತಲಿವೆ.

ಗಣಕಯಂತ್ರದಲ್ಲಿ ಕಾಣುವ ಸಹಜವಾದ ಇಂಗ್ಲೀಷ್ ಪದಗಳಿಗೆ ಕನ್ನಡ ಪರ್ಯಾಯ ಪದಗಳ ಪಟ್ಟಿ

ಇಂಗ್ಲೀಷ್ ಪದ	ಸಂವಾದಿಯಾಗಿ ಕನ್ನಡ ಪದ
Auto Correct	ಸ್ವಯಂ ತಿದ್ದುಪಡಿ
Tool Menu	ಉಪಕರಣ ಪರಿವಿಡಿ
Customize	ಗ್ರಾಹಕೀಯ ಗೊಳಿಸು
Options	ಆಯ್ಕೆಗಳು
Fonts	ಅಕ್ಷರ ಶೈಲಿ
Spell check	ಪದಪರೀಕ್ಷಕ
Operating System	ಕಾರ್ಯಚರಣ ವ್ಯವಸ್ಥೆ
Short cut	ಸಮೀಪ ಮಾರ್ಗ
Icons	ಲಾಂಛನಗಳು
My computer	ನನ್ನ ಗಣಕ
Recycle Bin	ಮರುಬಳಕೆ ಬುಟ್ಟಿ
Delete	ತೆಗೆದು ಹಾಕು, ಅಳಿಸಿ ಹಾಕು
Restore	ಹಿಂಪಡೆ
Desktop	ಗಣಕ ಪರದೆ
Properties	ಗುಣಗಳು
Brows	ವೀಕ್ಷಿಸು
Apply	ಅನ್ವಯಿಸು
Screen saver	ಪರದೆ ರಕ್ಷಕ, ತರೆ ರಕ್ಷಕ
Drag	ಎಳೆ, ಎಳೆತ
Preview	ಮುನ್ನೋಟ
Display	ಪ್ರದರ್ಶನ
Word Processor	ಪದ ಸಂರಕ್ಷಕ
Data	ದತ್ತ
Information	ಮಾಹಿತಿ

Document	ದಾಸ್ತಾವೇಜು
File	ಕಡತ
Folder	ಕಡತ ಕೋಶ
Directory	ನಿರ್ದೇಶಿಕೆ
Text editor	ಪಠ್ಯ ಸಂಪಾದಕ

ಕನ್ನಡದ ಕೀಲಿಮಣೆ ಮತ್ತು ಕನ್ನಡದ ತಂತ್ರಾಶಗಳಲ್ಲಿ ಪೂರ್ಣವಾಗಿ ಬದಲಾಗಬೇಕಿದೆ. ಕನ್ನಡದ ಬೆರಳಚ್ಚು ಇನ್ನೂ ಸುಲಭಗೊಳ್ಳಬೇಕಿದೆ. ಬೆರಳಚ್ಚುಮಾಡಲು ಕುಳಿತರೆ ಇದರಷ್ಟು ಸುಲಭ ಯಾವುದೂ ಇಲ್ಲವೆಂಬ ಭಾವನೆ ಬೆರಳಚ್ಚುಗಾರರಲ್ಲಿ ಮೂಡಬೇಕಾಗಿದೆ. ಈಗಾಗಲೇ ರೂಪಗೊಂಡ ಕನ್ನಡದ ನುಡಿ ಲಿಪಿಯ ಬರವಣಿಗೆಯ ಬೆರಳಚ್ಚು ತಂತ್ರಾಂಶ ಸುಲಭಗೊಳ್ಳಬೇಕಿದೆ. ಗಣಕಯಂತ್ರದಲ್ಲಿ ಬಳಕೆಯಾಗುವ ಸಾಮಾನ್ಯ ಪದಗಳಾದ ಉಳಿಸು, ಅಳಿಸು, ತರೆ, ತೋರಿಸು, ಇಂತಹ ಪದಗಳು ಕನ್ನಡಲ್ಲಿ ಕಡ್ಡಾಯವಾಗಿ ಜಾರಿಯಾಗುವಂತೆ ಹಾಗೂ ಕನ್ನಡ ಗಣಕಯಂತ್ರಗಳನ್ನು ತಯಾರಿಸುವಂತೆ ತಯಾರಕರಿಗೆ ಒತ್ತಾಯಿಸಬೇಕಾಗಿದೆ. ಹಾಗಾದಾಗ ಮಾತ್ರ ಕನ್ನಡದಲ್ಲಿ ಗಣಕಯಂತ್ರಗಳ ಬಳಕೆಯ ಮೂಲಕ ಆಡಳಿತದಲ್ಲಿ ಸ್ವಲ್ಪಮಟ್ಟಿಗೆಯಾದರೂ ಜಾರಿಗೆ ತರಲು ಸಹಾಯಕಾರಿಯಾಗುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ಎಲ್ಲಾ ಪ್ರತಿಯೊಬ್ಬ ವಿಷಯ ನಿರ್ವಹಕರಲ್ಲಿ, ಅಧಿಕಾರಿಗಳ ಟೇಬಲ್‌ಗಳ ಮುಂದೆ ಗಣಕಯಂತ್ರಗಳಿಲ್ಲದೇ ಇರಲು ಸಾಧ್ಯವಿಲ್ಲ. ಅಲ್ಲದೇ ಸರ್ಕಾರಿ ಕೆಲಸಕ್ಕೆ ನೇಮಕ ಹೊಂದುವವರಿಗೆ ಮತ್ತು ಕರ್ತವ್ಯ ನಿರ್ವಹಿಸುತ್ತಿರುವ 'ಡಿ' ಗ್ರೂಪ್ ನೌಕರರಲ್ಲಿ ಜವಾನರು ೧೦ ನೇ ತರಗತಿಯನ್ನು ಉತ್ತೀರ್ಣಹೊಂದಿ 'ಸಿ' ದರ್ಜೆಗೆ ಹೋಗಬೇಕಾದ ಸಂದರ್ಭಬಂದಲ್ಲಿ ಅವರು ಕಡ್ಡಾಯವಾಗಿ ಗಣಕಯಂತ್ರದ ಕೋರ್ಸ ಮುಗಿದಿರಲೇಬೇಕು ಎಂಬ ಆದೇಶ ಹೊರಡಿಸಿದ್ದನ್ನು ಪ್ರಸ್ತುತ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ. ಇದನ್ನು ಹೇಳುವ ಪ್ರಸ್ತಾವನೆ ಏನೆಂದರೆ ಇಷ್ಟೆಲ್ಲಾ ಗಣಕಯಂತ್ರದ ಬಗ್ಗೆ ಆದೇಶ ಹೊರಡಿಸಿದ ಸರ್ಕಾರ ಗಣಕಯಂತ್ರಗಳನ್ನೇ ಕನ್ನಡಕ್ಕೆ ಮಾರ್ಪಾಡು ಮಾಡಲು ಆದೇಶ ಹೊರಡಿಸಬಹುದಲ್ಲವೇ ಅಥವಾ ಅದನ್ನೂ ಕನ್ನಡದಲ್ಲಿ ಸಂಪೂರ್ಣವಾಗಿ ಬಳಸಲು ನಿರ್ದೇಶಿಸಬಹುದಲ್ಲವೇ.

೫.೨. ಆಡಳಿತದಲ್ಲಿ ಅಂತರ್ಜಾಲ : ಕನ್ನಡದ ಬಳಕೆ

'ಇಂಟರ್ ನೆಟ್' ಎನ್ನುವ ಇಂಗ್ಲಿಷಿನ ಮೂಲ ಪದವೇ ಕನ್ನಡದಲ್ಲಿ ಅಂತರ್ಜಾಲ ಎಂದು ರೂಪಗೊಂಡಿದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಬೇಕಾದ ಮಾಹಿತಿ ಬೆರಳತುದಿಯಲ್ಲಿಯೇ ಸಿಗುವ ಒಂದು ಸಮೂಹ ಸಂಪರ್ಕ ಮಾಧ್ಯಮವೆನ್ನಬಹುದು. ಅಂತರ್ಜಾಲದ ಮೂಲಕ ಬಹುಷ್ಯ ಎಲ್ಲಾ ವಿಷಯಗಳ ಬಗ್ಗೆ ಕ್ಷಣಾರ್ಧದಲ್ಲಿ ಮಾಹಿತಿ ಲಭ್ಯವಾಗುತ್ತದೆ. ಸರಿಯಾಗಿ ಹುಡುಕುವ ತಾಳ್ಮೆ ನಮಗಿರಬೇಕು ಅಷ್ಟೆ. ಅಂತರ್ಜಾಲ ಇಲ್ಲವಾದಲ್ಲಿ ಪ್ರಪಂಚವೇ ಶೂನ್ಯ ಎನ್ನುವಷ್ಟರ ಮಟ್ಟಿಗೆ ಕೆಲವೊಂದು ಸಂದರ್ಭಗಳಲ್ಲಿ ಭಾಸವಾಗುತ್ತದೆ. ಕಾರಣ ಪ್ರತಿಯೊಂದು ಮಾಹಿತಿಯನ್ನು ತಂತ್ರಜ್ಞಾನವು ಇಂದು ಅಂತರ್ಜಾಲದ ಮೂಲಕವಾಗಿ ಕೋಟಿ ಕೋಟಿ ಜನರನ್ನು

ಹಾಗೂ ದೇಶ–ವಿದೇಶಗಳನ್ನು ಕ್ಷಣಾರ್ಧದಲ್ಲೇ ತಲುಪುತ್ತದೆ ಮತ್ತು ಅದರಿಂದ ಪ್ರತಿಕ್ರಿಯೆಗಳು ಬರುತ್ತವೆ. ಪ್ರತಿಯೊಂದು ವಿಷಯಗಳ ಬಗ್ಗೆ ಮಾಹಿತಿ ನೀಡುವ ಖಣಜ ಎಂದೂ ಕರೆಯಬಹುದು.

ಇಂದಿನ ದಿನಗಳಲ್ಲಿ ಆಡಳಿತದಲ್ಲಿ ಅಂತರ್ಜಾಲವು ತನ್ನದೇ ಆದ ಪ್ರಭಾವ ಬೀರಿದೆ. ಪ್ರಸುತ ಸಂದರ್ಭದಲ್ಲಿ ಇಲಾಖೆಗಳು ತಮಗೆ ಸಂಬಂಧಪಟ್ಟ ಮಾಹಿತಿಯನ್ನು ತಮ್ಮ ಇಲಾಖೆಯ ಅಂತರ್ಜಾಲ ವಿಳಾಸದಲ್ಲಿ ಹಾಕಲಾಗುತ್ತದೆ. ಈ ಮಾಹಿತಿಯನ್ನು ದೇಶದಾದ್ಯಂತ ವೀಕ್ಷಿಸ ಬಹುದಾಗಿದ್ದು ಪ್ರತಿಯೊಂದು ವಿಷಯಗಳನ್ನು ಕ್ಷಣಾರ್ಧದಲ್ಲಿ ವೀಕ್ಷಿಸಲು ಸಾಧ್ಯವಾಗುತ್ತದೆ.

ಈಗಿನ ಸಂದರ್ಭದಲ್ಲಿ ಪ್ರತಿಯೊಂದು ಹಂತದಲ್ಲೂ ಇಲಾಖೆಗಳು ಅಂತರ್ಜಾಲವನ್ನು ಬಳಸುತ್ತಿವೆ. ಯಾವ ಇಲಾಖೆಯಲ್ಲೂ ಅಥವಾ ಇಲಾಖೆಗಳ ವಿವಿಧ ಕಾರ್ಯಾಲಯಗಳಲ್ಲಿ ಗಣಕಯಂತ್ರ ಅಥವಾ ಅಂತರ್ಜಾಲ ಸೌಲಭ್ಯವಿಲ್ಲವೆಂದು ಹೇಳಲಾಗದು. ಆದರೆ ಈ ಭಾವನೆ ಒಂದೆಡೆಯಾದರೆ ಗಣಕಯಂತ್ರ ಹಾಗೂ ಅಂತರ್ಜಾಲದ ಸೌಲಭ್ಯವನ್ನು ಹೊಂದಿರದ ಕೆಳ ಸ್ಥರದಲ್ಲಿ ಹಲವಾರು ಕಚೇರಿಗಳನ್ನು ಕಾಣಬಹುದು. ಆಡಳಿತದಲ್ಲಿ ಕ್ರಾಂತಿಯನ್ನು ಎಬ್ಬಿಸಿದ ಪರಿಣಾಮಕಾರಿ ಆಡಳಿತಕ್ಕೆ ಒಂದು ಸಾಕ್ಷಿಯೇ ಅಂತರ್ಜಾಲ. ಅಂತರ್ಜಾಲದ ಮುಖಾಂತರ ವಿವಿಧ ಇಲಾಖೆಗಳಲ್ಲಿ ಮಾಡಲಾಗುತ್ತಿರುವ ಕೆಲಸಗಳು, ಆದೇಶಗಳು, ಸುತ್ತೋಲೆಗಳು, ನೇಮಕಾತಿಗಳು, ಅಂತರ್ಜಾಲದಲ್ಲಿಯೇ ನೇರವಾಗಿ ಅರ್ಜಿಸಲ್ಲಿಕೆ, ಅಂತರ್ಜಾಲದಲ್ಲಿಯೇ ಬ್ಯಾಂಕ್ ಚಲನ್, ಇ–ವೇತನ ಪಾವತಿ ಇಂತಹ ಸೌಲಭ್ಯಗಳನ್ನು ಅಂತರ್ಜಾಲದಿಂದ ಸಾಧ್ಯ. ಅಂತರ್ಜಾಲ ಪ್ರಸುತ ಸಂದರ್ಭದಲ್ಲಿ ಮೊಬೈಲ್‌ಗಳಿಗೂ ಕಾಲಿಟ್ಟು ಅಂಗೈಯಲ್ಲೇ ಪ್ರಪಂಚವನ್ನು ಕಾಣುವ ಸ್ಥಿತಿ ಬಂದಿದೆ.

ಆಡಳಿತದಲ್ಲಿ ಅನೇಕ ರೀತಿಯ ಕ್ರಾಂತಿಕಾರಿ ಬದಲಾವಣೆಗಳನ್ನು ತಂದುಕೊಟ್ಟದ್ದು ಅಂತರ್ಜಾಲ, ಅಂತರ್ಜಾಲಕ್ಕೂ ಮತ್ತು ತಂತ್ರಜ್ಞಾನಕ್ಕೂ ಅವಿನಾಭಾವ ಸಂಬಂಧವಿದೆ ಅನೇಕ ಮುಖ್ಯ ತಂತ್ರಾಂಶಗಳ ಅಳವಡಿಕೆಯಿಂದ ವಿಶೇಷವಾದ ರೀತಿಯಲ್ಲಿ ಇಂದು ಅಂತರ್ಜಾಲದ ಮೂಲಕ ಆಡಳಿತದಲ್ಲಿ ಪಾರರ್ದಕತೆ ಗುಣಮಟ್ಟದ ಸೇವೆ ಹಾಗೂ ಕಾಯುವ ಪರಿಸ್ಥಿತಿ ಕೆಲವೊಂದು ಸಂದರ್ಭದಲ್ಲಿ ಇಲ್ಲದಂತಾಗಿದೆ. ಇಂತಹ ಹಲವಾರು ವಿಚಾರಗಳು ಹಲವಾರು ವಿಷಯಗಳು ಅಂತರ್ಜಾಲದಲ್ಲಿ ಏಕಕಾಲಕ್ಕೆ ದೊರೆತು ಜನಗಳು ಕಚೇರಿಗೆ ಅಲೆಯುವ ಸಂದರ್ಭಗಳು ಇಲ್ಲದಂತಾಗಿದೆ ಎಂದು ಆಡಳಿತ ನಡೆಸುವ ಇಲಾಖೆಗಳಲ್ಲಿನ ಕೆಲವೊಂದು ವಿಚಾರಕ್ಕೆ ಸಂಬಂಧಪಟ್ಟಂತೆ ಮಾತ್ರ ಹೇಳಬಹುದು. ಇನ್ನೂ ಕೆಲವು ವಿಚಾರಗಳು ಹಾಗೂ ಇಲಾಖೆಗಳು ಯಾವುದೇ ಪ್ರಗತಿ ಕಾಣದೇ ಇದ್ದು ಹಾಗೆಯೇ ಮುಂದುವರೆಯುತ್ತಿರುವುದು ಹಿಂದುಳಿದ ಆಡಳಿತಕ್ಕೆ ಇಟ್ಟ ಕನ್ನಡಿಯಂತೆ ಗೋಚರಿಸುತ್ತವೆ.

ತೀವ್ರಗತಿಯಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನ ಹಾಗೂ ಅದಕ್ಕೆ ಸಂಬಂಧಪಟ್ಟ ಅಂತರ್ಜಾಲ ತಾಣ ಈ ಆಧುನಿಕ ಜಗತ್ತಿನಲ್ಲಿ ಇನ್ನೂ ಆಡಳಿತದಲ್ಲಿ ಕೆಲವೊಂದು ಶಾಖೆ ಹಾಗೂ ಕೆಲವೊಂದು ವಿಚಾರಗಳಲ್ಲಿ ಬದಲಾವಣೆಯನ್ನು ಕಾಣದಿರುವುದು ಶೋಚನೀಯ ಸಂಗತಿ. ಆಡಳಿತದಲ್ಲಿ ಕೆಲವೊಂದು ವಿಚಾರಗಳಲ್ಲಿ ಬದಲಾವಣೆಗಳನ್ನು ಕಾಣುತ್ತೇವೆಂದರೆ ಅದು ಅಂತರ್ಜಾಲದ ಮುಖಾಂತರವಾಗಿ

ಮಾತ್ರ ಸಾಧ್ಯವಾಗಿದೆ. ಯಾವ ಯಾವ ಸಂದರ್ಭದಲ್ಲಿ ಆಡಳಿತದ ಯಂತ್ರ ತನ್ನ ಕಾರ್ಯವನ್ನು ಅಂತರ್ಜಾಲದ ಮೂಲಕ ನಡೆಸುತ್ತದೆ ಎಂಬ ವಿಷಯವನ್ನು ಗಮನಿಸುವುದಾದರೆ, ಕೆಳಕಂಡಂತೆ ಕಾಣಬಹುದು.

ವಿವಿಧ ಇಲಾಖೆಗಳು ನಿರ್ವಹಿಸುತ್ತಿರುವ ಅಂತರ್ಜಾಲದ ಮಾಹಿತಿ

ಕಂದಾಯ ಇಲಾಖೆಯ: 'ಭೂಮಿ' ಅಂತರ್ಜಾಲ ಸಂಪರ್ಕ.

ಸರ್ಕಾರಿ ಕಚೇರಿಗಳಲ್ಲಿ ಹಿಂದಿನ ದಿನಗಳಲ್ಲಿ ರೈತ ತನ್ನ ಭೂಮಿಯ ಪಹಣಿಯನ್ನು ಪಡೆಯಲು ದಿನಗಟ್ಟಲೇ ಅಲೆದರೂ ತನ್ನ ಭೂಮಿಯ ಪಹಣಿ ಸಿಗದೇ ಗೋಳಾಡಿದ ಸ್ಥಿತಿಗಳು ಇದ್ದವು. ಆದರೆ ಪ್ರಸ್ತುತ ಸಂದರ್ಭದಲ್ಲಿ ಕಂದಾಯ ಇಲಾಖೆ ಈ ಒಂದು ಸಮಸ್ಯೆಯನ್ನು ಸಮರ್ಥವಾಗಿ ನಿರ್ವಹಿಸಿದೆ ಎಂದಾದರೆ ಅದು ಅಂತರ್ಜಾಲದ ಮುಖಾಂತರವಾಗಿಯೇ. ಇದಕ್ಕೆ ತಂತ್ರಾಂಶದ ಸಹಕಾರವೂ ಇದೆ. ರೈತನೊಬ್ಬ ತನ್ನ ಭೂಮಿಯ ಪಹಣಿಯನ್ನು ಪಡೆಯಲು ಈಗ ಅಲೆಯಬೇಕಾಗಿಲ್ಲ. ತಾನಿರುವ ಸ್ಥಳದಲ್ಲಿಯೇ ಅಂತರ್ಜಾಲದ ಸಂಪರ್ಕ ಹೊಂದಿದ ಗಣಕಯಂತ್ರ ಅಥವಾ ತನ್ನ ಕೈಯಲ್ಲಿರುವ ಮೋಬೈಲಿನಲ್ಲಿಯೇ ತನ್ನ ಭೂಮಿಯ ಪಹಣಿಯನ್ನು ನೋಡಬಹುದು ಹಾಗೂ ಪಡೆಯಬಹುದಾದ ಸ್ಥಿತಿ ಇಂದಿದೆ. ಕಂದಾಯ ಇಲಾಖೆಯ ಆಡಳಿತದಲ್ಲಿ ನಡೆದ ಇದೊಂದು ಮೈಲಿಗಲ್ಲು ಎನ್ನಬಹುದು. ಇಂದು ಪಹಣಿಪಡೆಯುವ ಸಮಸ್ಯೆ ಎಲ್ಲಿಯೂ ಕಂಡುಬರುವುದಿಲ್ಲ ಮತ್ತು ರೈತರು ಅಲೆಯುವ ಪರಿಸ್ಥಿತಿಯೂ ಇಲ್ಲವೆಂದು ಹೇಳಬಹುದು.

ಸರ್ಕಾರದ ಈ ಭೂಮಿ ಯೋಜನೆ ರೈತರ ಮೊಗದಲ್ಲಿ ಮಂದಹಾಸವನ್ನು ನೀಡಿದೆ ಅಲ್ಲದೇ ಇದರ ಮುಖಾಂತರ ಆಡಳಿತದಲ್ಲಿ ಆಗುತ್ತಿದ್ದ ಕೊರತೆ, ಮತ್ತು ಬ್ರಷ್ಟಾಚಾರ ತಡೆಗಟ್ಟಿದಂತೆ ಹಾಗೂ ಪಾರದರ್ಶಕವಾಗಿ ಆಡಳಿತವನ್ನು ಜನರಿಗೆ ಕೊಟ್ಟ ಕೀರ್ತಿ ಕಂದಾಯ ಇಲಾಖೆಗೆ ಹಾಗೂ ಅಂತರ್ಜಾಲಕ್ಕೆ ಈ ಭೂಮಿ ತಂತ್ರಾಂಶವನ್ನು ಕೊಟ್ಟ ಮಹನೀಯರಿಗೆ ಸಲ್ಲುತ್ತದೆ.

ನೆಮ್ಮದಿ ಕೇಂದ್ರದಲ್ಲಿ ಸಲ್ಲಿಕೆಯಾಗುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಮಾಹಿತಿ ಇನ್ನಿತರ ಸೌಲಭ್ಯಗಳು ದೊರೆಯುತ್ತವೆ. ಚುನಾವಣಾ ಗುರುತಿನ ಚೀಟಿಗಾಗಿ ಅರ್ಜಿ ಸಲ್ಲಿಕೆ, ಆಧಾರ್ ಕಾರ್ಡ ಅರ್ಜಿಸಲ್ಲಿಕೆ, ಹಾಗೂ ಕಂದಾಯ ಇಲಾಖೆಯಲ್ಲಿನ ನೇಮಕಾತಿಗಳಿಗಾಗಿ. ಉದಾ;– ಗ್ರಾಮ ಲೆಕ್ಕಾಧಿಕಾರಿಗಳ, ಡಿ–ವೃಂದದ ನೇಮಕಾತಿಗಳಿಗಾಗಿ ಅಂತರ್ಜಾಲದ ಮುಖಾಂತರ ಅರ್ಜಿಸಲ್ಲಿಕೆ ಹಾಗೂ ಅವುಗಳ ಜ್ಯೇಷ್ಠತಾ ಪಟ್ಟಿ ಬಿಡಿಗಡೆ ಇನ್ನಿತರ ಎಲ್ಲಾ ಪ್ರಕ್ರಿಯೆಗಳು ತ್ವರಿತಗತಿಯಲ್ಲಿ ಕಾರ್ಯನಿರ್ವಹಣೇ ಆಗಲು ಸಾಧ್ಯವೆಂದರೆ, ಅಂತರ್ಜಾಲದ ಸಂಪರ್ಕ ಇಲಾಖೆಗೆ ಕಾಲಿಟ್ಟ ನಂತರದಲ್ಲಿಯೇ.

ನ್ಯಾಯಾಲಯ: ಪ್ರಕರಣಗಳ ವಿಚಾರಣಾ ಸಂಪರ್ಕ

ಕರ್ನಾಟಕದ ನ್ಯಾಯಾಲಯದ ಆಡಳಿತದಲ್ಲಿ ಅಂತರ್ಜಾಲ ಲಗ್ಗೆ ಇಟ್ಟಿರುವುದು ಬಹು ಮುಖ್ಯವಾಗಿ ಎದ್ದುಕಾಣುತ್ತದೆ. ಧಾರವಾಡ ಮತ್ತು ಬೆಂಗಳೂರಿನ ಉಚ್ಚನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳ ಮಾಹಿತಿಯನ್ನು ಮತ್ತು ಪ್ರಕರಣಗಳ ಪ್ರಸ್ತುತ ಸ್ಥಿತಿ, ಪ್ರಕರಣಗಳ

ದಾಖಲಾದ ಪ್ರತಿ ಮತ್ತು ಅವುಗಳ ವಿಚಾರಣಾ ದಿನಾಂಕ ಹಾಗೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಂತಿಮ ಆದೇಶಗಳನ್ನು ಕ್ಷಣಾರ್ಧದಲ್ಲೇ ದೊರಕುವಂತಾಗಿದೆ ಹಾಗೂ ಕರ್ನಾಟಕದ ಯಾವ ಮೂಲೆಯಲ್ಲಿ ವಾಸಿಸುತ್ತಿದ್ದರೂ ಅಂತರ್ಜಾಲ ಸಂಪರ್ಕ ಹೊಂದಿದ ಗಣಕಯಂತ್ರದಲ್ಲಿ ನೋಡಬಹುದಾಗಿದೆ.

ಈ ರೀತಿಯಾಗಿ ನ್ಯಾಯಾಲಯದ ಆಡಳಿತದಲ್ಲಿ ಗುಣಾತ್ಮಕ ಬದಲಾವಣೆಯನ್ನು ತರಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿ ಮತ್ತು ಅದು ನಡೆಯುತ್ತಿರುವ ಕ್ರಮವನ್ನು ಅಂತರ್ಜಾಲದಲ್ಲಿ ಲಭ್ಯವಾಗುತ್ತಿದ್ದು ಪ್ರಕರಣಕ್ಕೆ ಸಂಬಂಧಪಟ್ಟವರು ಗೊಂದಲಗೊಳ್ಳುವ ಸಾಧ್ಯತೆಗಳು ಕಡಿಮೆ. ಈ ನಿಟ್ಟಿನಲ್ಲಿ ಪ್ರಕರಣಗಳು ಪಾರದರ್ಶಕತೆಯನ್ನು ಪಡೆದು ತ್ವರಿತಗತಿಯಲ್ಲಿ ಇತ್ಯರ್ಥವಾಗುವ ಸಂದರ್ಭಗಳು ಹಾಗೂ ಸಾಧ್ಯತೆಗಳೂ ಹೆಚ್ಚು. ಇವುಗಳೆಲ್ಲವೂ ಅಂತರ್ಜಾಲದ ಮೂಲಕವಾಗಿಯೇ ಮಾತ್ರ ಸಾದ್ಯವಾಯಿತು. ಬೆಂಗಳೂರಿನಲ್ಲಿ ಅಥವಾ ಧಾರವಾಡದ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದ್ದರೆ ಪ್ರಕರಣದಾರ ಅದರ ವಿಚಾರವನ್ನು ತಾನಿರುವ ಸ್ಥಳದಲ್ಲಿಯೇ ಕುಳಿತು ಪ್ರಕರಣದ ಫಲಿತಾಂಶವನ್ನು ವೀಕ್ಷಿಸಬಹುದು.

ಅನೇಕ ಆದೇಶಗಳ, ಅನೇಕ ಪ್ರಕರಣಗಳ ಬಗ್ಗೆ ಸಂಪೂರ್ಣವಾದ ಮಾಹಿತಿ ನ್ಯಾಯಾಲಯವು ಅಂತರ್ಜಾಲಕ್ಕೆ ಕೊಟ್ಟ ಮಾಹಿತಿಯಿಂದ ಇವುಗಳೆಲ್ಲವೂ ಸಾಧ್ಯ. ಆದರೆ ಪ್ರಸ್ತುತ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಲಯಗಳಲ್ಲಿ ಈ ಒಂದು ಸಂಪರ್ಕವನ್ನು ಕಲ್ಪಿಸಲಾಗಿಲ್ಲವಾದರೂ ಉಚ್ಚನ್ಯಾಯಾಲಯದ ಆದೇಶಗಳನ್ನು ತತಕ್ಷಣಕ್ಕೆ ವೀಕ್ಷಿಸಬಹುದಾದ ಮತ್ತು ಅದರ ಒಂದು ಕರಡು ಪ್ರತಿಯನ್ನು ಪಡೆಯಬಹುದಾದ ರೀತಿಯಲ್ಲಿ ಅಂತರ್ಜಾಲ ತನ್ನ ಕಾರ್ಯವನ್ನು ಮಾಡುತ್ತಿದೆ. ನ್ಯಾಯಾಲದ ವಿಷಯಗಳಲ್ಲಿ ಇದೊಂದು ಮೈಲುಗಲ್ಲು ಎನ್ನಬಹುದು. ಆದರೆ ಪ್ರಸ್ತುತ ಈ ಒಂದು ವ್ಯವಸ್ಥೆಯನ್ನು ಕೆಳಸ್ಥರದ ನ್ಯಾಯಾಲಯಕ್ಕೆ ವಿಸ್ತರಿಸಬೇಕಾದ ಅಗತ್ಯತೆ ಹಾಗೂ ಅನಿವಾರ್ಯತೆಯೂ ಇದೆ. ಪ್ರತಿಯೊಂದು ಪ್ರಕರಣಗಳ ಮಾಹಿತಿ ಪ್ರತಿಯೊಂದು ನ್ಯಾಯಾಲಯದಲ್ಲಿ ಪ್ರಕರಣಗಳು ಯಾವ ಹಂತದಲ್ಲಿವೆ ಎಂಬುದನ್ನು ಆಡಳಿತ ಜನಸಾಮಾನ್ಯರಿಗೆ ಮುಟ್ಟುವ ರೀತಿಯಲ್ಲಿಯೂ ಕಾರ್ಯನಿರ್ವಹಿಸಬೇಕಾಗಿದೆ ಆ ರೀತಿಯಲ್ಲಿ ತಂತ್ರಾಂಶಗಳನ್ನು ಅಳವಡಿಸಬೇಕಾಗಿದೆ.

ಶಿಕ್ಷಣ ಇಲಾಖೆಯಲ್ಲಿ ಅಂತರ್ಜಾಲದ ಬಳಕೆ:

ಎಸ್.ಎಸ್.ಎಲ್.ಸಿ. ಪಿ.ಯು.ಸಿ ಮತ್ತು ವಿವಿಧ ಅಧ್ಯಯನ ವರ್ಗಗಳ ಫಲಿತಾಂಶದಲ್ಲಿ ಅಂತರ್ಜಾಲದ ಹೆಜ್ಜೆ ಅತ್ಯಂತ ವಿಶಾಲವಾದ ಹಾಗೂ ಯಶಸ್ವಿಪೂರ್ಣವಾದದ್ದಾಗಿದೆ. ಎಸ್.ಎಸ್.ಎಲ್.ಸಿ. ಪಿ.ಯು.ಸಿ ಮತ್ತು ವಿವಿಧ ಅಧ್ಯಯನ ವರ್ಗಗಳ ಫಲಿತಾಂಶದಲ್ಲಿ ಹಾಗೂ ಉನ್ನತ ಶಿಕ್ಷಣ, ತಾಂತ್ರಿಕ ಮತ್ತು ವೃತ್ತಿಶಿಕ್ಷಣಕ್ಕೆ ಪ್ರವೇಶ ಪಡೆಯುವ ಸಂದರ್ಭ ಶಿಕ್ಷಣ ಇಲಾಖೆಯ ಅಂತರ್ಜಾಲವು ಉನ್ನತವಾಗಿ ಕಾರ್ಯನಿರ್ವಹಿಸುತ್ತಿದೆ. ಲಕ್ಷ ಲಕ್ಷ ವಿದ್ಯಾರ್ಥಿಗಳ ಫಲಿತಾಂಶವನ್ನು ಕ್ಷಣಾರ್ಧದಲ್ಲಿ ತೋರಿಸುವ, ಫಲಿತಾಂಶದ ಜೊತೆಗೆ ಅಂಕಪಟ್ಟಿಯನ್ನೂ ಕಲ್ಪಿಸಿಕೊಡುತ್ತದೆ.

ಫಲಿತಾಂಶವನ್ನು ತಯಾರಿಸಿ ಫಲಿತಾಂಶವನ್ನು ವಿದ್ಯಾರ್ಥಿಗಳಿಗೆ ಮುಟ್ಟಿಸುವುದು ಶಿಕ್ಷಣ ಇಲಾಖೆ ಹೊತ್ತ ಬಹುದೊಡ್ಡ ಜವಾಬ್ದಾರಿ. ವಿದ್ಯಾರ್ಥಿಗಳು ಬರೆದ ಪರೀಕ್ಷೆಯ ಉತ್ತರ ಪತ್ರಕೆಗಳನ್ನು ಶಿಕ್ಷಕರಿಂದ ಮೌಲ್ಯಮಾಪನ ಮಾಡಿಸಿ ಫಲಿತಾಂಶವನ್ನು ತಯಾರಿಸುವುದು ಶಿಕ್ಷಣ ಇಲಾಖೆಯ ಪ್ರಾಯೋಗಿಕ ಕ್ರಿಯೆ. ತಯಾರಾದ ಫಲಿತಾಂಶವನ್ನು ಅಂತರ್ಜಾಲಕ್ಕೆ ಬಿಟ್ಟು ಅದನ್ನು ಪ್ರತಿಯೊಬ್ಬ ವಿಧ್ಯಾರ್ಥಿಗೆ ತಲುಪುವಂತೆ ಮಾಡುವುದು ತಾಂತ್ರಿಕ ಕ್ರಿಯೆ.

ಲಕ್ಷಾನುಗಟ್ಟಲೆ ವಿದ್ಯಾರ್ಥಿಗಳ ಫಲಿತಾಂಶದ ತಯಾರಿಕೆ ಸುಲಭದ ಮಾತಲ್ಲ, ನಿಗಧಿತ ಸಮಯದಲ್ಲಿ, ನಿಗಧಿತ ವಿದ್ಯಾರ್ಥಿಗಳ ನಿರ್ದಿಷ್ಟ ಫಲಿತಾಂಶ ತಪ್ಪಿಲ್ಲದಂತೆ, ಸ್ವಲ್ಪವೂ ಹೆಚ್ಚು ಕಡಿಮೆ ಯಾಗದಂತೆ ನೀಡುವುದು ಮಹತ್ತರ ಕಾರ್ಯ. ಕಾರಣ ಈ ವಿಷಯ ಆಡಳಿತದಲ್ಲಿ ಉತ್ತಮ ಗುಣಾತ್ಮಕ ಬದಲಾವಣೆ ತರುವ ಮೂಲಕ ಅಂತರ್ಜಾಲ ತನ್ನ ಮಹತ್ವವನ್ನು ಪಡೆದಿದೆ. ವರ್ಷ ಪೂರ್ತಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳ ಫಲಿತಾಂಶವನ್ನು ಹಿಂದೆ ಶಾಲೆಗೆ ಹೋಗಿ ಪಡೆಯಬೇಕಾದ ಸಂದರ್ಭವೂಂದಿತ್ತು. ಆದರೆ ಪ್ರಸ್ತುತ ಸಂದರ್ಭದಲ್ಲಿ ಅದರ ರೂಪ ಬದಲಾಗಿದೆ. ನಿಗಧಿಪಡಿಸಿದ ದಿನಾಂಕದಂದು ವಿದ್ಯಾರ್ಥಿಗಳ ಫಲಿತಾಂಶ ಪಾರದರ್ಶಕವಾಗಿ ಕೈಗೆ ತಲುಪಿಸುವ ಕಾರ್ಯ ಅಂತರ್ಜಾಲ ಒದಗಿಸಿಕೊಟ್ಟಿದೆ.

ಪ್ರಸ್ತುತ ಸಂದರ್ಭದಲ್ಲಿ ಇದೊಂದೇ ಫಲಿತಾಂಶವನ್ನು ಹೇಳುತ್ತಿಲ್ಲ ಪದವಿ ಪೂರ್ವ ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ವೃತ್ತಿ ಶಿಕ್ಷಣ ಇಲಾಖೆ, ವಿಶ್ವವಿದ್ಯಾಲಯಗಳ ಎಲ್ಲಾ ವಿದ್ಯಾರ್ಥಿ ಫಲಿತಾಂಶಗಳೂ ಇದರಲ್ಲಿ ಒಳಗೊಂಡಿವೆ. ಸಂಬಂಧಪಟ್ಟ ಎಲ್ಲಾ ಫಲಿತಾಂಶಗಳು ಪಾರದರ್ಶಕತೆಯಿಂದ ಕೂಡಿದೆ. ಫಲಿತಾಂಶ ಪ್ರಕಟಗೊಂಡ ಕ್ಷಣಾರ್ಧದಲ್ಲೇ ವಿಧ್ಯಾರ್ಥಿಗಳಿಗೆ ಫಲಿತಾಂಶ ದೊರಕುತ್ತವೆ. ಈ ಒಂದು ಹೆಮ್ಮೆ ಅಂತರ್ಜಾಲಕ್ಕೆ ಸಲ್ಲುತ್ತದೆ. ಇದಲ್ಲದೇ ವೃತ್ತಿ ಶಿಕ್ಷಣದ ಪ್ರವೇಶ ಅರ್ಜಿ, ಸ್ನಾತಕೋತ್ತರ ಪ್ರವೇಶಕ್ಕೆ ಸಂಬಂಧಿಸಿದಂತೆ ಅರ್ಜಿಸಲ್ಲಿಕೆ, ತಾಂತ್ರಿಕ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಅರ್ಜಿ ಹಾಗೂ ಜ್ಯೇಷ್ಠತಾ ಪಟ್ಟಿ ಪ್ರಕಟಣೆ ಅಂತರ್ಜಾಲದಲ್ಲಿ ಲಭ್ಯವಿದ್ದು, ಮೊತ್ತ ಕೊಟ್ಟು ಖರೀದಿಸುವ ಸಂದರ್ಭ ಮತ್ತು ಅವುಗಳನ್ನು ಪಡೆದುಕೊಳ್ಳುವ ಗೋಜಿಗೆ ಹೋಗುವ ಪರಿಸ್ಥಿತಿ ಹಿಂದೆ ಕಾಣುತ್ತೇವೆ.

ಆದರೆ ಪ್ರಸ್ತುತ ಸಂದರ್ಭದಲ್ಲಿ ಈ ರೂಪವು ಬೇರೆಯಾಗಿದೆ ಅಂತರ್ಜಾಲದಲ್ಲಿಯೇ ಪ್ರವೇಶ ಅರ್ಜಿಗಳು ದೊರೆತು, ಅಲ್ಲಿಯೇ ಅರ್ಜಿಸಲ್ಲಿಕೆಗೆ ಅವಕಾಶ ಕಲ್ಪಿಸಿ, ಪರೀಕ್ಷೆಯ ಪ್ರವೇಶಪತ್ರ ಅಂತರ್ಜಾಲದಲ್ಲಿಯೇ ದೊರೆತು, ಪರೀಕ್ಷೆಯನ್ನು ನಿಧಿಪಡಿಸಿದ ಪರೀಕ್ಷಾ ಕೇಂದ್ರಗಳಲ್ಲಿ ಬರೆದು, ತದನಂತರದಲ್ಲಿ ಅವುಗಳ ಫಲಿತಾಂಶ ಅಂತರ್ಜಾಲದಲ್ಲಿ ಪ್ರಕಟಗೊಂಡು, ಜೇಷ್ಠತಾ ಪಟ್ಟಿ ತಯಾರಿಸಿ ಆಯ್ಕೆಯಾದ ಸ್ಥಳ ಮತ್ತು ನೋಂದಣಿಗೆ ಕೊನೆಯ ದಿನಾಂಕವನ್ನು ಅಲ್ಲಿಯೇ ತೋರಿಸಿ ಬಿಡುವಷ್ಟರ ಮಟ್ಟಿಗೆ ಅಂತರ್ಜಾಲ ರೂಪುಗೊಂಡಿದೆ.

ಅರ್ಜಿಕೊಂಡು ಕೊಳ್ಳುವ, ಅಂಚೆ ಮೂಲಕ ಅರ್ಜಿ ಸಲ್ಲಿಸುವ, ಸ್ಟಾಂಪ್ ಬಳಸುವ ಮತ್ತು ಅರ್ಜಿಗಳನ್ನು ಸ್ವೀಕರಿಸಿ ಅವುಗಳನ್ನು ಒಂದೆಡೆ ಸೇರಿಸುವ ಮತ್ತು ಅಭ್ಯರ್ಥಿಗಳ ಪಟ್ಟಿ ತಯಾರಿಸುವ

ಗೋಜಿಗೆ ಹೋಗಬೇಕಾಗಿಲ್ಲ. ಕರ್ತವ್ಯನಿರ್ವಹಿಸುವ ಹೊಣೆ ಕಡಿಮೆ ಮಾಡಿ ಕೇವಲ ಕೊನೆಯದಾಗಿ ಪಟ್ಟಿಯನ್ನು ತಯಾರಿಸಿ ಕೈಗೆ ಕೊಡುವ ಅಂತರ್ಜಾಲದ ಕೊಡುಗೆ ಅಪಾರವಾದದ್ದಾಗಿದೆ. ತಾಂತ್ರಿಕ ಶಿಕ್ಷಣದ ಸಂದರ್ಭದಲ್ಲಿ ಪ್ರವೇಶಕ್ಕೆ ಸಂಬಂಧಿಸಿದಂತೆ ಉನ್ನತವಾಗಿ ಕಾರ್ಯಪ್ರವೃತ್ತವಾಗಿದೆ. ಇತ್ತೀಚಿಗೆ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದ ಪ್ರಕ್ರಿಯೆಗಳಾದ ವರ್ಗಾವಣೆಗೆ ಅರ್ಜಿಸಲ್ಲಿಕೆ, ಪಟ್ಟಿಬಿಡುಗಡೆ, ಎಲ್ಲವೂ ಸಹ ಅಂತರ್ಜಾಲದ ಮೂಲಕ ನಡೆಯುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಶಿಕ್ಷಣದ ಪ್ರಮುಖ ಅಂಶಗಳನ್ನು ನಾವು ಅಂತರ್ಜಾಲದದಲ್ಲಿ ಕಾಣಬಹುದಾಗಿದೆ.

ಕಾನೂನು ಇಲಾಖೆ: ವಿವಿಧ ಇಲಾಖೆಗಳ ಕಾಯ್ದೆ ಮತ್ತು ಕಾನೂನುಗಳು ಅಂತರ್ಜಾಲದಲ್ಲಿ ಲಭ್ಯ

ಪ್ರತಿಯೊಂದು ಇಲಾಖೆಗೆ ಸಂಬಂಧಪಟ್ಟ ಕಾನೂನಿನ ನಿಯಮಗಳು, ಕಾಯ್ದೆಗಳು ಅಂತರ್ಜಾಲದಲ್ಲಿ ಲಭ್ಯವಾಗುತ್ತವೆ. ಆಡಳಿತದ ಪ್ರತಿಹಂತವೂ ಕಾನೂನಿನ ನಿಯಮಗಳ ಮೇಲೆಯೇ ನಡೆಯುತ್ತದೆ. ಆಡಳಿತದಲ್ಲಿ ನಿಯಮ ಮತ್ತು ಕಾಯ್ದೆಗಳಿಗೆ ಮಹತ್ವದ ಸ್ಥಾನವಿದೆ ಪ್ರತಿಯೊಂದು ಕಾರ್ಯವು ಆಡಳಿತದಲ್ಲಿ ಸುಗಮವಾಗಿ ನಡೆಯಬೇಕಾದರೆ ಅದಕ್ಕೆ ಸಂಬಂಧಪಟ್ಟ ನೀತಿ ನೀಯಮಗಳ, ಕಾಯ್ದೆ, ಕಾನೂನಿನ ಚೌಕಟ್ಟಿನಲ್ಲಿಯೇ ಸಾಗುತ್ತದೆ ಕಾಯ್ದೆ ಕಾನೂನನ್ನು ಬಿಟ್ಟು ಯಾವ ಕಾರ್ಯವೂ ನಡೆಯಲಾರದು. ಒಂದು ವೇಳೆ ಹಾಗೆ ಕಾಯ್ದೆ ಕಾನೂನುಗಳನ್ನು ಮೀರಿ ನಡೆದಲ್ಲಿ ಅಂತಹವರ ವಿರುದ್ದ ವಿರುದ್ದ ಕ್ರಮಕೈಗೊಳಲು ಕಾಯ್ದೆ ಕಾನೂನುಗಳು ಸಹಾಯಕ್ಕೆ ಬರುತ್ತವೆ.

ಆಡಳಿತದಲ್ಲಿ ಪ್ರತಿಯೊಂದು ಇಲಾಖೆಗೆ ಸಂಬಧಪಟ್ಟ ಕಾಯ್ದೆ ಕಾನೂನುಗಳು, ನೀತಿ ನಿಬಂದನೆಗಳ ಪುಸ್ತಕಗಳನ್ನು ಕೂತಲ್ಲಿಯೇ ಗಣಕಯಂತ್ರದ ಸಹಾಯದಿಂದಾಗಲಿ ಅಥವಾ ಮೊಬೈಲ್‌ನಲ್ಲಿ ಅಂತರ್ಜಾಲದ ಸಂಪರ್ಕ ಕಲ್ಪಿಸಿ ಪ್ರತಿಯೊಂದು ಕಾಯ್ದೆಯ ಮಾಹಿತಿಯನ್ನು ಕ್ಷಣಾರ್ಧದಲ್ಲಿ ಪಡೆಯಬಹುದಾಗಿದೆ. ಕಾಯ್ದೆಕಾನೂನುಗಳ ಪುಸ್ತಕಗಳನ್ನು ಕೊಂಡುಕೊಳ್ಳುವ ಅವಶ್ಯಕತೆ ಇಲ್ಲದೇ ಅಂತರ್ಜಾಲದಲ್ಲಿ ಹುಡುಕಿ ಅದನ್ನೇ ಡೌನ್‌ಲೋಡ್ ಮಾಡಿಕೊಂಡು ಬಳಸಿದರೆ ಸಾಕು. ಎಂತಹ ಕಾನೂನಿನ, ಕಾಯ್ದೆಗಳ ಪುಸ್ತಕಗಳು ಪ್ರಚಲಿತ ವಿಷಯವನ್ನಾಧರಿಸಿ ಲಭ್ಯವಾಗುತ್ತವೆ.

ಹುಡುಕುವ ಗೋಜಿಗೆ ಹೋಗುವ ಮತ್ತು ಸಿಗದಿದ್ದ ಪಕ್ಷದಲ್ಲಿ ನಿರಾಸೆಯಾಗುವ ಅವಕಾಶಗಳೇ ಉದ್ಭವಿಸುವುದಿಲ್ಲ. ಎಲ್ಲಾ ರೀತಿಯಲ್ಲಿ ಕಾನೂನಿನ ಮತ್ತು ಇಲಾಖೆಗಳ ಕೈಪಿಡಿಗಳು ಇಲಾಖೆ ಕಾಯ್ದೆಗಳು ಅಂತರ್ಜಾಲದಲ್ಲಿ ಲಭ್ಯವಾಗುವುದರಿಂದ ಕಾನೂನುಗಳ ಗ್ರಂಥಾಲಯವನ್ನೇ ಹೊಂದಿದಂತೆ ಭಾಸವಾಗುತ್ತದೆ ಅಂತರ್ಜಾಲದಲ್ಲಿ ಪ್ರತಿಯೊಂದು ಕಾನೂನಿನ ಗ್ರಂಥಗಳೂ ಲಭ್ಯವಾಗುವುದರ ಹಿನ್ನೆಲೆಯಲ್ಲಿ ಜನಸಾಮಾನ್ಯರಿಗೂ ಸಹ ಇದರ ಸಂಪೂರ್ಣ ಮಾಹಿತಿ ದೊರೆತಂತಾಗುತ್ತದೆ. ಹೀಗಾಗಿ ಕಾನೂನು ಇಲಾಖೆಯು ಕಾಯ್ದೆ ಕಾನೂನುಗಳನ್ನು ಅಂತರ್ಜಾಲದಲ್ಲಿ ನೀಡುವ ಮೂಲಕ ಕಾನೂನು ತಜ್ಞರ ಹಾಗೂ ಕಾನೂನು ಹಿತೈಶಿಗಳ ಮನಸ್ಸನ್ನು ಗೆದ್ದಿದೆ.

ಪ್ರತಿಯೊಂದು ಇಲಾಖೆಯ ನಿಯಮಗಳನ್ನು ಹಾಗೂ ಪ್ರತಿಯೊಂದು ಇಲಾಖೆಯು ಒಳಗೊಂಡ ಆಡಳಿತ ನಡೆಸುವ ಇನ್ನಿತರ ಕಾನೂನುಗಳನ್ನು ಸಹ ಅಂತರ್ಜಾಲದಲ್ಲಿ ನೀಡಬಹುದಾಗಿದೆ. ಈ

ನಿಟ್ಟಿನಲ್ಲಿ ಉತ್ತಮವಾದ ಸಾರ್ವಜನಿಕ ಸೇವಾ ಸೌಲಭ್ಯವನ್ನು ಒದಗಿಸಿದಂತಾಗಿದ್ದು ಇದು ಅನೇಕ ರೀತಿಗಳಲ್ಲಿ ಉಪಯೋಗಕ್ಕೆ ಪರಿಣಾಮಕಾರಿಯಾಗಿದೆ.

ಸಾರಿಗೆ ಇಲಾಖೆ

ಸಾರಿಗೆ ಇಲಾಖೆಯಲ್ಲಿ ಮುಖ್ಯ ಅಂಶವಾದ ಟಿಕೇಟುಗಳನ್ನು ಕಾಯ್ದಿರಿಸುವ ಸಲುವಾಗಿ ಟಿಕೇಟುಗಳನ್ನು ಅಂತರ್ಜಾಲದ ಮೂಲಕವಾಗಿ ಇ-ಟಿಕೇಟ್ ಬುಕ್ಕಿಂಗ್ ಮಾಡಲಾಗುತ್ತದೆ. ಇದರಿಂದ ಆಡಳಿತದಲ್ಲಿ ತುಂಬಾ ಅನುಕೂಲವಾಗಲಿದೆ, ಕಾರಣವೇನೆಂದರೆ ರೈಲ್ವೆ ಮತ್ತು ಬಸ್ ಟಿಕೇಟುಗಳ ಕಾಯ್ದಿರಿಸುವಿಕೆಗಾಗಿ ನಿಲ್ದಾಣಗಳಿಗೆ ತೆರಳಬೇಕಾಗಿಲ್ಲ ಅಂತರ್ಜಾಲ ಸಂಪರ್ಕ ಹೊಂದಿದ ಬುಕ್ಕಿಂಗ್ ಏಜೆನ್ಸಿದಾರರಲ್ಲಿಗೆ ಹೋದರೆ ಸಾಕು ಟಿಕೇಟ್ ಬುಕ್ಕಿಂಗ್ ಸಾಧ್ಯವಾಗುತ್ತದೆ, ಇದೂ ಸಹ ಆಡಳಿತಕ್ಕೆ ಕೊಟ್ಟ ಒಂದು ಕೊಡುಗೆಯಾಗಿದೆ. ಇದರಿಂದ ಎಷ್ಟೋ ಸಾರ್ವಜನಿಕರು ಬಸ್ ನಿಲ್ದಾಣಗಳಿಗೆ ರೈಲ್ವೆ ನಿಲ್ದಾಣಗಳಿಗೆ ಅಲೆಯುವುದು ತಪ್ಪಿದಂತಾಗುತ್ತದೆ. ಇಲಾಖೆಗೆ ಸಂಬಂಧಿಸಿದಂತೆ ಬಸ್ ಚಲಿಸುವ ವೇಳಾಪಟ್ಟಿಯನ್ನು ಮತ್ತು ರೈಲುಗಳು ಚಲಿಸುವ ಕ್ಷಣಕ್ಷಣದ ಮಾಹಿತಿಯನ್ನು ಅಂತರ್ಜಾಲದ ಮೂಲಕ ಕೂತಲ್ಲಿಯೇ ಅಂತರ್ಜಾಲ ಸಂಪರ್ಕ ಹೊಂದಿದ ಗಣಕ ಯಂತ್ರ, ಮೊಬೈಲ್, ಲ್ಯಾಪ್ ಟ್ಯಾಪ್‌ಗಳಲ್ಲಿ ಪ್ರತಿ ಕ್ಷಣದ ಮಾಹಿತಿ ಲಭ್ಯವಾಗುತ್ತದೆ. ಸಾರಿಗೆ ಇಲಾಖೆಯ ಈ ಮಾಹಿತಿಯಿಂದ ಜನಸಾಮಾನ್ಯರು ತಮಗೆ ಅನುಕೂಲವಾಗುವ ರೀತಿಯಲ್ಲಿ ಪ್ರಯಾಣವನ್ನು ಬೆಳೆಸಬಹುದಾಗಿದೆ.

ಪೋಲೀಸ್ ಇಲಾಖೆ: 'ಪ್ರಕರಣ ದಾಖಲು', ಇನ್ನಿತರ ಕಾರ್ಯಗಳು

ಪೋಲೀಸ್ ಇಲಾಖೆಯಲ್ಲಿ ಬಹು ಮುಖ್ಯವಾದ ಕಾರ್ಯವೆಂದರೆ, ದಿನನಿತ್ಯ ಕಚೇರಿಗೆ ದಾಕಲಾಗುವ ಪ್ರಕರಣಗಳು ಸಹಜವಾಗಿ ಹಿಂದೆ ಅರ್ಜಿದಾರರ ಅರ್ಜಿಗಳನ್ನು ಸ್ವೀಕರಿಸಿದ ನಂತರ ಮೊದಲ ವರ್ತಮಾನ ವರದಿಯಲ್ಲಿ ದಾಖಲಿಸಲಾಗುತ್ತಿತ್ತು. ಪ್ರಸ್ತುತ ಸಂದರ್ಭದಲ್ಲಿ ಇದರ ರೂಪ ಬದಲಾಗಿದೆ. ಪ್ರಥಮ ವರ್ತಮಾನ ವರದಿಯನ್ನು ಪಡೆದುಕೊಂಡು ನಂತರದಲ್ಲಿ ಅದರ ಪ್ರತಿಯನ್ನು ಪಡೆದುಕೊಂಡು ಪ್ರಕರಣದಾರರಿಗೆ ನೀಡಲಾಗುತ್ತದೆ. ಇದರಿಂದ ಆಡಳಿತದಲ್ಲಿ ಎಲ್ಲಾ ಕಡೆ ದಾಖಲಾದ ಪ್ರತಿಯೊಂದು ಪ್ರಕರಣಗಳು ಅದಕ್ಕೆ ಸಂಬಂಧಪಟ್ಟ ಮಾಹಿತಿಗಳು ತಕ್ಷಣವೇ ದೊರಕುತ್ತವೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆ:-ನೋಂದಣಿ ಕಾರ್ಯ

ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಪ್ರತಿದಿನ ಹಲವಾರು ನೋಂದಣಿ ಕಾರ್ಯಗಳು ನಡೆಯುತ್ತವೆ. ಹೊಲ-ಮನೆ ಖರೀದಿ, ವಿವಾಹ ನೊಂದಣಿ ಇಲಾಖೆಗೆ ಸಂಬಂಧಿಸಿದ ಇನ್ನಿತರ ಕಾರ್ಯಗಳು ಹಾಗೂ ಇದಕ್ಕೆ ಸಂಬಂಧಿಸಿದ ವೇತನ ಪಾವತಿ ಇತ್ಯಾದಿಗಳು ಸಹ ಅಂತರ್ಜಾಲದಲ್ಲಿಯೇ ನಡೆಯುತ್ತಿವೆ.

ಈ ಕಚೇರಿಯಲ್ಲಿ ಕಾರ್ಯಗಳೆಲ್ಲವೂ ದಿನನಿತ್ಯದ ೨೪ ಗಂಟೆಗಳ ಕಾಲ ನಡೆಯುವುದಿಲ್ಲ. ಸರ್ಕಾರಿ ಕಚೇರಿಯ ಸಮಯದ ಸಾರುಣಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿ ತದನಂತರದಲ್ಲಿ ೫.೩೦ಕ್ಕೆ ಸರಿಯಾಗಿ ಮುಖ್ಯ ಕಚೇರಿಯಲ್ಲಿ ಅಂತರ್ಜಾಲದ ಸಂಪರ್ಕವನ್ನು ಕಡಿತಗೊಳಿಸಲಾಗುತ್ತದೆ.

ಕಾರಣ ಅಂದಿನ ಎಲ್ಲಾ ಕಾರ್ಯಗಳು ಅಲ್ಲಿಗೆ ಮುಕ್ತಾಯಗೊಂಡು ಎಲ್ಲಾ ಕಡೆಗಳಲ್ಲಿಯೂ ಏಕಕಾಲಕ್ಕೆ ನಿಲುಗಡೆಯಾಗಿ ಸಮಯ ಮುಕ್ತಾಯಗೊಳ್ಳುತ್ತದೆ. ಇದರಿಂದ ಕಚೇರಿಯ ಅವಧಿಯಲ್ಲಿ ಮಾತ್ರ ಕಾರ್ಯನಿರ್ವಹಿಸಲು ಸಾಧ್ಯ. ಕೆಲಸವಿದೆ ಎಂದು ರಾತ್ರಿಯೆಲ್ಲಾ ಕುಳಿತು ಕಾರ್ಯನಿರ್ವಹಿಸುವ ಮತ್ತು ಭ್ರಷ್ಟ ಅಧಿಕಾರಿಗಳು ಮತ್ತು ಭ್ರಷ್ಟ ನೌಕರಿಗೆ ಸ್ವಲ್ಪ ಮಟ್ಟಿಗೆಯಾದರೂ ಕಡಿವಾಣ ಹಾಕಿದಂತಾಗಿದೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮುಖ್ಯ ಕಾರ್ಯವಾದ ನೋಂದಣಿ ಕಾರ್ಯವು ಅಂತರ್ಜಾಲದ ಮುಖಾಂತರ ನಡೆಯುವುದು ಮತ್ತು ಹಿಂದಿನಂತೆ ದಾಖಲೆಗಳಲ್ಲಿ ಬರೆಯುವ ಗೋಜಿಗೆ ಹೋಗದಿರುವ ಹಾಗೆ ಕಡತಗಳ ನಿರ್ವಹಣೆ ಆಗುತ್ತಿರುವುದು ಆಡಳಿತದಲ್ಲಿನ ಬದಲಾವಣೆಗೆ ಅಂತರ್ಜಾಲವೇ ಕಾರಣವಾಗಿದೆ.

ಖಜಾನೆ ಇಲಾಖೆ

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದ ಮಾನವ ಸಂಪನ್ಮೂಲ ನಿರ್ವಹಣೆ ಪದ್ಧತಿ (ಹೆಚ್.ಆರ್.ಎಮ್.ಎಸ್) ಸಾಮಾನ್ಯವಾಗಿ ಎಲ್ಲಾ ಸರ್ಕಾರಿ ಇಲಾಖೆಗಳು ಮತ್ತು ಅನುದಾನಿತ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಖಜಾನೆಯ ಇಲಾಖೆಯ ಮುಖಾಂತರ ಹೆಚ್.ಆರ್.ಎಮ್.ಎಸ್.ನಲ್ಲಿ ಅಂತರ್ಜಾಲದ ಮೂಲಕವಾಗಿಯೇ ವೇತನವನ್ನು ಪಾವತಿಸುವ ವಿನೂತನವಾದ ಯೋಜನೆ ಅಂತರ್ಜಾಲದಲ್ಲಿ ಬಹುಮುಖ್ಯವಾಗಿ ಕಾರ್ಯನಿರ್ವಹಿಸುತ್ತಿದೆ. ಸಮಯಕ್ಕೆ ಸರಿಯಾಗಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ, ಮತ್ತು ಅನುದಾನಿತ ಸಂಸ್ಥೆಗಳ ಸುಮಾರು ಆರು ಲಕ್ಷಕ್ಕಿಂತ ಅಧಿಕ ಸರ್ಕಾರಿ ನೌಕರರು ಮತ್ತು ಕರ್ನಾಟಕದಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಕೇಂದ್ರ ಸರ್ಕಾರದ ಅಧಿಕಾರಿಗಳ (ಭಾರತೀಯ ಆಡಳಿತ ಸೇವೆ, ಅರಣ್ಯ ಸೇವೆ, ಪೊಲೀಸ್ ಸೇವೆ. ಇತ್ಯಾದಿ) ವೇತನವು ಏಕಕಾಲಕ್ಕೆ ಪಾವತಿಸುವ ಈ ಯೋಜನೆ ಸಿಬ್ಬಂದಿಗಳ ವೇತನ ನೀಡುವ ವರ್ಗದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ.

ಕಾಲಕಾಲಕ್ಕೆ ತಕ್ಕಂತೆ ಬದಲಾವಣೆ, ಗಳಿಕೆರಜೆ ನಗದೀಕರಣ, ತುಟ್ಟಿ ಭತ್ಯ, ಮನೆಬಾಡಿಗೆ, ಇತ್ಯಾದಿ ಭತ್ಯೆಗಳ ನಿರ್ವಹಣೆಯು ಅಂತರ್ಜಾಲದಲ್ಲಿಯೇ ಸಿಗುವುದಿದ್ದು, ಕೆಲವೊಂದು ಬದಲಾವಣೆಗೆ ಅಲ್ಲಿಯೇ ಅವಕಾಶವನ್ನು ನೀಡಲಾಗಿದೆ. ಇಂತಹ ಮಹತ್ವವಾದ ಯೋಜನೆಯನ್ನು ಅಂತರ್ಜಾಲದ ಮೂಲಕ ಆಡಳಿತ ವಲಯದಲ್ಲಿ ಜಾರಿಗೆ ತಂದಿರುವುದು ಶ್ಲಾಘನೀಯವಾಗಿದೆ. ಪ್ರಾರಂಭದಲ್ಲಿ ಈ ಯೋಜನೆ ತಲೆನೋವಾಗಿ ಪರಿಣಮಿಸಿದರೂ, ತದನಂತರದಲ್ಲಿ ಇದಿಲ್ಲದೇ ವೇತನ ಮಾಡುವ ಕಾರ್ಯವೇ ಇಲ್ಲವೆಂಬ ನಿರ್ಧಾರಕ್ಕೆ ಸಿಬ್ಬಂದಿವರ್ಗದವರು ಬಂದಿದ್ದಾರೆ.

ಸಿಬ್ಬಂದಿ ವರ್ಗದವರಿಗೆ ನೌಕರರ ಹಾಗೂ ಅಧಿಕಾರಿಗಳ ವರ್ಗದವರ ವೇತನ ಬಿಲ್ಲುಗಳನ್ನು ಮಾಡುವಲ್ಲಿ ಯಾವ ಕಷ್ಟಗಳು ಇಲ್ಲದಂತಾಗಿ ಪ್ರತಿ ಮಾಸಾಂತ್ಯಕ್ಕೆ ಬಿಲ್ಲುಗಳನ್ನು ಅಂತರ್ಜಾಲದ ಮೂಲಕ ಜನರೇಟ್ ಮಾಡಿದರೆ ಸಾಕು ಬಿಲ್ ಸಿದ್ಧವಾಗಿಬಿಡುತ್ತದೆ. ಇಂದರಿಂದ ವೇತನ ನಿರ್ವಹಣೆ ಮಾಡುವ ಶಾಖೆಯ ವಿಷಯ ನಿರ್ವಹಕರಿಗೆ ಯಾವ ರೀತಿಯ ಮಾನಸಿಕ ಒತ್ತಡಗಳು ಇರದೆ ಸರಾಗವಾಗಿ ವೇತನದ ಬಲ್ಲುಗಳನ್ನು ಮಾಡಬಹುದು.

ಇದರಿಂದ ಪ್ರಸ್ತುತ ಸಂದರ್ಭದಲ್ಲಿ ಒಂದು ಅಪವಾದ ಕೇಳಿಬರುತ್ತಿದ್ದು ಆ ಕೇಳಿಬರುತ್ತಿರುವ ಅಪವಾದ ಏನೆಂದರೆ, 'ವೇತನ ಬಿಲ್ಲುಗಳನ್ನು ತಯಾರಿಸುತ್ತಿರುವ ವಿಷಯನಿರ್ವಹಕರುಗಳಿಗೆ ಲೆಕ್ಕ ಮಾಡುವುದು ತಪ್ಪಿತೇನೋ ನಿಜ, ಆದರೆ ಅವರು ಲೆಕ್ಕಗಳನ್ನು ಮಾಡುವಲ್ಲಿನ ವೇತನ ಬಿಲ್ಲನ್ನು ಕ್ರಿಯಾತ್ಮಕವಾಗಿ ತಯಾರಿಸುವಲ್ಲಿ ಮಾನಸಿಕ ಸ್ಥೈರ್ಯ ಕಡಿಮೆಯಾಗಿದೆ ಮತ್ತು ಮೊಟಕುಗೊಳ್ಳುತ್ತಾ ಹೋಗುತ್ತಿದೆ' ಎನ್ನುವುದು ಅಪವಾದವಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಖಜಾನೆ-೨ ಎನ್ನುವ ವಿನೂತನ ತಂತ್ರಾಂಶವನ್ನು ಆಳವಡಿಸಲಾದೆ. ಇದು ಹೆಚ್.ಆರ್.ಎಂ.ಎಸ್. ಮುಂದುವರೆದ ಭಾಗವಾಗಿದೆ. ವಿನೂತನ ತಂತ್ರಾಂಶಗಳಿಂದ ಸಿದ್ದಪಡಿಸಲಾದ ಈ ವ್ಯವಸ್ಥೆಯು ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ನೀಡಲಾಗುವ ವೇತನದ ಬಿಲ್ಲುಗಳನ್ನು ಹಾಗೂ ಎಲ್ಲಾ ತರಹದ ಸಾದಿಲ್ವಾರು ಬಿಲ್ಲುಗಳನ್ನು ಇದರಲ್ಲಿ ನಿರ್ವಹಿಸಲಾಗುತ್ತಿದೆ. ಅಂತರ್ಜಾಲದ ಮುಖಾಂತರವಾಗಿಯೇ ವೇತನಕ್ಕೆ ಸಂಬಂಧಪಟ್ಟಂತೆ ನೇರವಾಗಿ ಬಳಕೆದಾರರ ಖಾತೆಗಳಿಗೆಮೊತ್ತ ಪಾವತಿಗಾಗಿ ವಿನೂತನ ಯೋಜನೆ ಈ ಖಜಾನೆ-೨ರ ಪ್ರಮುಖ ಅಂಶವಾಗಿದೆ.

ಭೂದಾಖಲೆಗಳ ಇಲಾಖೆ: ಭೂಮಾಪನಾ ಕಾರ್ಯ

ಭೂಮಾಪನಾ ಇಲಾಖೆಯಲ್ಲಿ ಅಂತರ್ಜಾಲ ತನ್ನ ಮಹತ್ವದ ಸಾಧನೆಯನ್ನು ಮಾಡಲಾಗಿದೆ, ಸರ್ವೆಗೊಂಡ ಅಧಿಕೃತ ನಕ್ಷೆಗಳನ್ನು ಅಂತರ್ಜಾಲದಲ್ಲಿ ವೀಕ್ಷಿಸಬಹುದು, ಮೊದಲನೆದಾಗಿ ಭೂಮಾಪನ ಮಾಡಿಸಬೇಕೆಂದರೆ ಅರ್ಜಿಯನ್ನು ನೀಡಿದ ನಂತರದಲ್ಲಿ ಭೂಮಾಪನಾ ಕಾರ್ಯಾನಿರ್ವಹಿಸಬೇಕಾಗಿತ್ತು ಆದರೆ ಆಡಳಿತದಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಅಂತರ್ಜಾಲದ ಮೂಲಕವೇ ತಮ್ಮ ಭೂಮಿಗೆ ಸಂಬಂಧಿಸಿದ ಭೂಮಾಪನದ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ತದನಂತರದಲ್ಲಿ ಜ್ಯೇಷ್ಠತೆಯ ಆಧಾರದ ಮೇಲೆ ಭೂಮಾಪನವನ್ನು ಮಾಡಲು ಅರ್ಜಿದಾರರಿಗೆ ತಿಳಿಸಲಾಗುತ್ತದೆ ಈ ರೀತಿಯ ವಿಶಿಷ್ಟವಾದ ಯೋಜನೆ ಜಾರಿಯಲ್ಲಿದ್ದು ಪ್ರತಿಯೊಂದು ಮಾಹಿತಿ ಅಂತರ್ಜಾಲದಲ್ಲಿ ಲಭ್ಯವಾಗುತ್ತದೆ.

ಅಧಿಕೃತಗೊಂಡ ಗ್ರಾಮದ ಸೀಮಾನಕ್ಷೆ, ಗ್ರಾಮ ನಕ್ಷೆ. ಬ್ಲಾಕ್ ನಕ್ಷೆಗಳು ಮಾಹಿತಿಗಾಗಿ ಅಂತರ್ಜಾಲದಲ್ಲಿ ಸಿಗುವಂತೆ ಮಾಡಿದ ಕೀರ್ತಿ ಭೂಮಾಪನ ಇಲಾಖೆಗೆ ಸಲ್ಲುತ್ತದೆ. ಇಂತಹ ಅಧಿಕೃತ ದಾಖಲೆಗಳು ಕಚೇರಿಯಿಂದ ಪಡೆಯಬೇಕಾದ ಗೋಜಿಗೆ ಹೋಗುವ ಸಾಧ್ಯತೆಗಳು ತುಂಬಾ ಕಡಿಮೆ ಇವೆ. ಆದರೆ ಇವೆಲ್ಲಾ ಕೆಲಸ ಕಾರ್ಯಗಳು ಅಂತರ್ಜಾಲದ ಮೂಲಕವಾಗಿಯೇ ನಡೆದರೂ ಅವುಗಳು ವೀಕ್ಷಣೆಗೆ ಮಾತ್ರ ಅಧಿಕೃತ ದಾಖಲೆಗಳನ್ನು ಪಡೆದುಕೊಳ್ಳಲು ಕಚೇರಿಗೆ ಭೇಟಿ ನೀಡಿ ದಾಖಲೆಗಳನ್ನು ಇಂದಿಗೂ ಪಡೆಯುತ್ತಿರುವುದು ಸತ್ಯ ಸಂಗತಿ.

ವಿವಿಧ ಇಲಾಖೆಗಳಿಗೆ ನೇಮಕಾತಿ ಅರ್ಜಿ ಸಲ್ಲಿಕೆ:

ಪ್ರಸ್ತುತ ಸಂದರ್ಭದಲ್ಲಿ ಅನೇಕ ಇಲಾಖೆಗಳು ತಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ವಿವಿಧ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವ ಅಭ್ಯರ್ಥಿಗಳನ್ನು ನೇರವಾಗಿ ಅಂತರ್ಜಾಲದ

ಮೂಲಕವಾಗಿಯೇ ಅರ್ಜಿಯನ್ನು ಸಲ್ಲಿಸಲು ಸೂಚಿಸುತ್ತಾರೆ. ಅರ್ಜಿಯನ್ನು ಸಲ್ಲಿಸುವ ಅಭ್ಯರ್ಥಿಗಳು ನೇರವಾಗಿ ಅಂತರ್ಜಾಲದ ಮೂಲಕವಾಗಿಯೇ ಮಾಹಿತಿಯನ್ನು ಪಡೆದುಕೊಂಡು ನಿಗಧಿತ ಸಮಯದೊಳಗಾಗಿ ಅರ್ಜಿಸಲ್ಲಿಸಬಹುದು ಪ್ರವೇಶ ಶೀಲ್ಕು ಪಾವತಿಸುವುದಿದ್ದರೆ ಪ್ರವೇಶ ಶುಲ್ಕದ ಚಲನನ್ನು ಅಂತರ್ಜಾಲದಲ್ಲಿಯೇ ಭರ್ತಿಮಾಡಿ ಚಲನನ್ನು ಪಡೆದು ಬ್ಯಾಂಕ್ ಅಥವಾ ಅಂಚೆ ಇಲಾಖೆಯಲ್ಲಿ ಶುಲ್ಕ ಪಾವತಿಸಿ, ಶುಲ್ಕ ಪಾವತಿಸಲಾದ ಚಲಾನನ್ನು ಪ್ರಸ್ತುತ ಪಡಿಸಿದರೆ ಪ್ರವೇಶ ಪತ್ರವನ್ನೂ ಸಹ ನೇರವಾಗಿ ಅಂತರ್ಜಾಲದ ಮೂಲಕವಾಗಿಯೇ ನೀಡಲಾಗುತ್ತದೆ. ಈ ರೀತಿಯಲ್ಲಿ ಪ್ರಮುಖ ಕಾರ್ಯಗಳು ನಡೆಯುತ್ತವೆ ಇಲ್ಲಿ ಅಭ್ಯರ್ಥಿಗಳು ಯಾವ ಗೊಂದಲಕ್ಕೂ ಸಿಲುಕದೇ ಕಚೇರಿಗಳಿಗೂ ಅಲೆಯದೇ ನೇರವಾಗಿ ಅಂತರ್ಜಾಲದ ಸಹಾಯದಿಂದ ಉದ್ಯೋಗಕ್ಕಾಗಿ ಅರ್ಜಿಯನ್ನು ಸಲ್ಲಿಸುವ ಮಹತ್ತರವಾದ ಬೆಳವಣಿಗೆಗೆ ಅಂತರ್ಜಾಲದ ಸಹಾಯದಿಂದ ಲಭ್ಯವಾಗಿದೆ.

ಸಾರಿಗೆ ಇಲಾಖೆಯಲ್ಲಿನ ಚಾಲನಾ ಪರವಾನಿಗೆ

ಸಾರಿಗೆ ಇಲಾಖೆಯಲ್ಲಿ ಬಹು ಮುಖ್ಯವಾಗಿ ಕಾರ್ಯನಿರ್ವಹಿಸುತ್ತಿರುವ ಅಂತರ್ಜಾಲದ ಕೆಲಸವೇನೆಂದರೆ, ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ವಾಹನಗಳಿಗೆ ಸಂಬಂಧಿಸಿದಂತೆ ಅವುಗಳಿಗೆ ನೀಡಲಾಗುವ ಸಂಖ್ಯೆಗಳ ನೋಂದಣಿಕಾರ್ಯ ಮತ್ತು ಅದಕ್ಕೆ ಸಂಬಂಧಿಸಿದಂತೆ ಆರ್.ಸಿ. ಕಾರ್ಡಗಳ ವಿತರಣೆ ಅಂತರ್ಜಾಲದ ಮೂಲಕವಾಗಿಯೇ ನಡೆಯುತ್ತದೆ. ಅಲ್ಲದೇ ಅದಕ್ಕಿಂತ ಬಹುಮುಖ್ಯವಾದ ಕಾರ್ಯವೇನೆಂದರೆ, ವಾಹನ ಚಾಲಕರಿಗೆ ಚಾಲನಾ ಪರವಾನಿಗೆ ನೀಡುವುದು.

ವಾಹನ ಚಾಲಕರು ವಾಹನಗಳನ್ನು ಚಲಾಯಿಸುವುದಕ್ಕಾಗಿ ಅನುಮತಿಗಾಗಿ ಅರ್ಜಿಸಲ್ಲಿಸಿರುತ್ತಾರೆ. ಅರ್ಜಿಗಳನ್ನು ಪರಿಶೀಲಿಸಿದ ನಂತರದಲ್ಲಿ, ಪ್ರಾಯೋಗಿಕವಾಗಿ ಪರೀಕ್ಷೆಗಳನ್ನು ಕೈಗೊಂಡು ಸದರಿ ಅರ್ಜಿದಾರರಿಗೆ ಅನುಮತಿಯನ್ನು ಚಾಲನಾ ಪರವಾನಿಗೆ ನೀಡುವ ಮುಖಾಂತರ ನೀಡಲಾಗುತ್ತದೆ. ಈ ಪೂರ್ಣ ಪ್ರಕ್ರಿಯೆಯು ಅಂತರ್ಜಾಲದಲ್ಲಿಯೇ ನಡೆಯುತ್ತದೆ.

ಬ್ಯಾಂಕ್‌ಗಳ ಹಣಕಾಸಿನ ವ್ಯವಹಾರಗಳು

ಆಡಳಿತಕ್ಕೂ ಮತ್ತು ಬ್ಯಾಂಕುಗಳಿಗೆ ಏನು ಸಂಬಂಧ ಎನ್ನುವ ಪ್ರಶ್ನೆ ಉದ್ಭವಿಸುವುದು ಸಹಜ. ಆದರೆ ಆಡಳಿತದ ಒಂದು ಭಾಗವೇ ಬ್ಯಾಂಕ್‌ಗಳಾಗಿವೆ ಎನ್ನುವಲ್ಲಿ ತಪ್ಪಿಲ್ಲ. ಆಡಳಿತದಲ್ಲಿನ ಹಣಕಾಸಿನ ವ್ಯವಹಾರಗಳೆಲ್ಲವೂ ಬ್ಯಾಂಕ್‌ನ ಮೂಲಕವಾಗಿಯೇ ನಡೆಯುತ್ತವೆ, ಸಿಬ್ಬಂದಿ ಹಾಗೂ ನೌಕರರವರ್ಗದವರ ವೇತನ ಪಿಂಚಣಿ, ಇತರೆ ವೇತನಗಳ ಪಾವತಿ, ಇಲಾಖೆಗಳಿಗೆ ಸಂದಾಯವಾಗಬೇಕಾದ ಹಣ, ದಿನನಿತ್ಯದ ವ್ಯವಹಾರಗಳು. ಹಣದ ವರ್ಗಾವಣೆ, ಡಿ.ಡಿ. ತೆಗೆಯುವಿಕೆ ಮುಂತಾದ ಹಣಕಾಸಿನ ಕಾರ್ಯಗಳೆಲ್ಲವೂ ಬ್ಯಾಂಕ್ ಮುಖಾಂತರವಾಗಿಯೇ ನಡೆಯುತ್ತವೆ.

ಬ್ಯಾಂಕ್‌ಗಳಲ್ಲಿನ ಆಡಳಿತಕ್ಕೆ ಸಂಬಂಧಪಟ್ಟ ಮತ್ತು ಇತರೆ ಹಣಕಾಸಿನ ವ್ಯವಹಾರಗಳು ಭಾಗಶಃ ಅಂತರ್ಜಾಲದಲ್ಲಿಯೇ ನಡೆಯುತ್ತವೆ. ಆಡಳಿತದಲ್ಲಿನ ಹಣಕಾಸಿನ ವ್ಯವಹಾರಗಳು ಸುಸೂತ್ರವಾಗಿ ನಡೆಯಬೇಕಾದರೆ ಬ್ಯಾಂಕಿನ ಸಹಕಾರ ಮತ್ತು ಅಂತರ್ಜಾಲದ ಉಪಯೋಗದಿಂದ

ಮಾತ್ರ ತ್ವರಿತ ಮತ್ತು ಸುಭವಾಗಿ ಕಾರ್ಯ ಸಾಧನೆಯಾಗುವುದನ್ನು ಗಮನಿಸಬಹುದಾಗಿದೆ. ಇಲ್ಲಿಯೂ ಅಂತರ್ಜಾಲ ಯಸಸ್ವೀಪೂರ್ಣವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಕಾಣಬಹುದಾಗಿದೆ.

ಮಾಧ್ಯಮ ಮತ್ತು ವೃತ್ತ ಪತ್ರಿಕೆಗಳು: (ವಾರ್ತಾ ಮತ್ತು ಪ್ರಚಾರ ಇಲಾಖೆ)

ಆಡಳಿತದ ಬಗ್ಗೆ ನಿಗಾ ಮತ್ತು ಎಚ್ಚರಿಕೆ, ದಾರಿತಪ್ಪಿದ ಸಂದರ್ಭದಲ್ಲಿ ಸರಿಯಾಗಿ ಕ್ರಮ ತೆಗೆದುಕೊಳ್ಳುವಂತೆ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವಲ್ಲಿ ಬಹು ಮುಖ್ಯವಾದ ಸ್ಥಾನವನ್ನು ಮಾಧ್ಯಮಗಳು ಮತ್ತು ಪತ್ರಿಕೆಗಳು ನಿರ್ವವಹಿಸುತ್ತವೆ. ಎಲ್ಲೋ ನಡೆಯುತ್ತಿರುವ ಆಡಳಿತದಲ್ಲಿನ ಅಕ್ರಮ ಭ್ರಷ್ಟಾಚಾರ ಅವ್ಯವಹಾರಗಳನ್ನು, ಹಾಗೂ ಆಡಳಿತವು ಕೈಗೊಂಡ ಒಳ್ಳೆಯ ಅಂಶಗಳನ್ನು ಕ್ಷಣಾರ್ಧದಲ್ಲಿ ನೇರವಾಗಿ ವೀಕ್ಷಿಸುವ ಮಟ್ಟಿಗೆ ಅಂತರ್ಜಾಲವು ತನ್ನ ಕಾರ್ಯವನ್ನು ನೆರವೇರಿಸುತ್ತಿದೆ.

ಜನಗಳಿಗೆ ಬೇಗನೇ ಮಾಹಿತಿಗಳ ರವಾನೆ ಮತ್ತು ಮುಟ್ಟಿಸುವ ಏಕೈಕ ಸಾಧನಗಳೆಂದರೆ ದೂರದರ್ಶನಗಳು ಮತ್ತು ವೃತ್ತಪತ್ರಿಕೆಗಳು. ಸದರಿ ವೃತ್ತಪತ್ರಿಕೆಗಳು ದಿನನಿತ್ಯದ ವಿಷಯಗಳನ್ನು ಜನಸಾಮಾನ್ಯರಿಗೆ ಮುಟ್ಟಿಸಿ ಜಾಗೃತಿ ಮತ್ತು ಅರಿವನ್ನು ಮೂಡಿಸುವ ಕಾರ್ಯವನ್ನು ನಿರ್ವಹಿಸುತ್ತಿವೆ. ಈ ನಿಟ್ಟಿನಲ್ಲೂ ಅದಕ್ಕೆ ಅನುಕೂಲವಾಗುವಂತೆ ಕಾರ್ಯನಿರ್ವಹಿಸುತ್ತಿರುವುದು ಅಂತರ್ಜಾಲ. ಅಂತರ್ಜಾಲದ ಮೂಖಾಂತರವಾಗಿ ಪ್ರಂಪಂಚದ ಯಾವುದೇ ಮೂಲೆಯಲ್ಲಿ ನಡೆದ ವಿಚಾರಗಳನ್ನು ಕೂತಲ್ಲಿಯೇ ವೀಕ್ಷಿಸಬಹುದಾದ ಬಹುದೊಡ್ಡ ಮಾಧ್ಯಮ ದೂರದರ್ಶನ. ಅದಕ್ಕೆ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಅಂತರ್ಜಾಲ.

ಕರ್ನಾಟಕ ರಾಜ್ಯಪತ್ರ

ಆಡಳಿತದಲ್ಲಿ ಪ್ರಮುಖವಾದ ಇಲಾಖೆ ಮತ್ತು ಆಧಿಕೃತವಾದ ಪತ್ರಿಕೆ ಎಂದರೆ ರಾಜ್ಯಪತ್ರ. ಇಲಾಖೆಗಳಲ್ಲಿನ ಪ್ರಮುಖ ಆದೇಶಗಳು, ಕಾಮಗಾರಿಗಳು, ನೇಮಕಾತಿಗಳು, ಅಧಿಸೂಚನೆಗಳು, ವಿಚಾರಣೆ, ಅಮಾನತ್ತು, ಇವೆಲ್ಲವುಗಳನ್ನು ಅಧಿಕೃತವಾಗಿ ಕಾರ್ಯಗತಗೊಳ್ಳಬೇಕಾದರೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ಇಲಾಖೆಗಳಿಂದ ರಾಜ್ಯಪತ್ರದಲ್ಲಿ ಅಧಿಕೃತವಾಗಿ ಪ್ರಕಟಣೆಗೊಂಡರೆ ಅದಕ್ಕೆ ತನ್ನದೇ ಆದ ಸ್ಥಾನ ದೊರಕುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಇಲಾಖೆಯ ಪ್ರಮುಖ ಹಾಗೂ ಮುಖ್ಯವಾದ ವಿಷಯಗಳನ್ನು ರಾಜ್ಯಪತ್ರದ ಸಂಕಲನಕಾರರಿಗೆ ಕಳುಹಿಸಿ ಅಧಿಕೃತವಾಗಿ ಪ್ರಕಟಪಡಿಸಿ ಅಥವಾ ಅಧಿಸೂಚನೆಗಳನ್ನು ಹೊರಡಿಸಲಾಗುತ್ತದೆ.

ಭೂಮಿಗೆ ಸಂಬಂಧಪಟ್ಟ ವಿಷಯ, ಭೂ-ಅಕ್ವೀಜೇಶನ್, ಅಕ್ರಮ-ಸಕ್ರಮ, ಹೊಸದಾದ ವಿಧೇಯಕ, ನೇಮಕಾತಿ, ಅಮಾನತ್ತು, ಟೆಂಡರ್, ಅರಣ್ಯ ಕಾಯ್ದೆಯ ಕಲಂ-೪ ಹಾಗೂ ಕಲಂ-೧೭ ರ ಅಧಿಸೂಚನೆ, ಮುಖ್ಯವಾದ ವಿಚಾರಗಳ ಆದೇಶಗಳು ಪ್ರತಿಯೊಂದು ಇಲಾಖೆಯ ಮುಖ್ಯ ವಿಷಯಗಳನ್ನು ಮಾತ್ರ ಅಧಿಕೃತವಾಗಿ ಪ್ರಕಟಿಸಲಾಗುತ್ತದೆ. ಸದರಿ ರಾಜ್ಯಪತ್ರವು ಸರ್ಕಾರಿ ಇಲಾಖೆಗಳಿಗೆ ಸಂಬಂಧಿಸಿದ ಪ್ರಕಟಣೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಆಡಳಿತದ ಹೊರಗಿನ ವಿಚಾರಗಳನ್ನು ಅಥವಾ ವಿಷಯಗಳನ್ನು ಈ ಪತ್ರದಲ್ಲಿ ಪ್ರಕಟಿಸಲಾಗದು. ಕೇವಲ ಆಡಳಿತದಲ್ಲಿನ ವಿಷಯಗಳನ್ನು ಮಾತ್ರ ರಾಜ್ಯಪತ್ರದಲ್ಲಿ ಪ್ರಕಟಿಸಲಾಗುತ್ತದೆ.

ಮಾಸದ ಪ್ರಾರಂಭದಿಂದ ಹಿಡಿದು ಮಾಸಾಂತ್ಯಕ್ಕೆ ಬರುವ ಎಲ್ಲಾ ಇಲಾಖೆಗಳ ವಿಷಯಗಳನ್ನು ಪ್ರತಿ ಗುರುವಾರ ತಿಂಗಳಲ್ಲಿ ನಾಲ್ಕ ಬಾರಿ ಸುಮಾರು ೫೦೦ ರಿಂದ ಸಾವಿರ ಪುಟಗಳಿಗಿಂತಲೂ ಹೆಚ್ಚು ಪುಟಗಳಲ್ಲಿ ಎಲ್ಲಾ ಇಲಾಖೆಯ ಅಧಿಕೃತ ಪ್ರಕಟಣೆಗಳನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗುತ್ತದೆ. ಸದರಿ ಅಧಿಕೃತವಾಗಿ ಪ್ರಕಟಗೊಂಡ ಪ್ರಕಟಣೆಯ ಪ್ರತಿಗಳನ್ನು ಶುಕ್ರವಾದ ದಿನದಂದೇ ಕರ್ನಾಟಕ ರಾಜ್ಯಾದ್ಯಂತ ಗುರುವಾರ ಪ್ರಕಟಣೆಗೊಂಡ ರಾಜ್ಯಪತ್ರವನ್ನು ವೀಕ್ಷಿಸಲು ಹಾಗೂ ಅಂತರ್ಜಾಲದಲ್ಲಿ ಸಿದ್ಧಪ್ರತಿ ಮತ್ತು ಅಧಿಕೃತ ಪ್ರಕಟಣೆ ಎಲ್ಲಾ ಇಲಾಖೆಗಳಿಗೂ ಮತ್ತು ಸಾರ್ವಜನಿಕರಿಗೂ ಅಂತರ್ಜಾಲದಲ್ಲಿ ವಿಕ್ಷಿಸಬಹುದುದಾಗಿದ್ದು ಇದೊಂದು ಮಹತ್ತರ ಕಾರ್ಯವಾಗಿದೆ.

ರಾಜ್ಯಪತ್ರವನ್ನು ಕೊಂಡುಕೊಳ್ಳುವುದು ಮತ್ತು ಅದನ್ನು ನೇರವಾಗಿ ನೋಡಬೇಕೆಂದರೆ ತುಂಬಾ ಕಷ್ಟಕರ ಮತ್ತು ಮಾರುಕಟ್ಟೆಯಲ್ಲಿ ಸಿಗುವುದು ತುಂಬಾ ದುಸ್ತರ ಹಾಗೂ ಅದನ್ನು ಕೊಂಡುಕೊಳ್ಳಬೇಕೆಂದರೆ, ಸರ್ಕಾರಿ ಮುದ್ರಣಾಲಯ, ಕಲಬುರ್ಗಿಯಲ್ಲಿ ಕಲಬುರ್ಗಿ ವಿಭಾಗಕ್ಕೆ ಸಂಬಂಧಪಟ್ಟ ಪ್ರಕಟಣೆ ಹಾಗೂ ಸರ್ಕಾರಿ ಮುದ್ರಣಾಲಯ, ಬೆಂಗಳೂರುನಲ್ಲಿ ಬೆಂಗಳೂರಿನ ಪ್ರಕಟಣೆ ಹಾಗೂ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಇಲಾಖೆಗಳ ಪ್ರಕಟಣೆಯನ್ನು ಹೊಂದಿರುತ್ತದೆ. ಆದರೆ ರಾಜ್ಯಪತ್ರದ ಪ್ರಕಟಣೆಯನ್ನು ಅಲ್ಲಿಗೆ ಹೋಗಿ ಕೊಂಡುಕೊಂಡು ಬರಬೇಕಾದ ಹಾಗೂ ಓದಬೇಕಾದ ಪರಿಸ್ಥಿತಿ ಇಂದಾಗಿದೆ.

ಸಾರ್ವಜನಿಕರಿಗೆಲ್ಲರಿಗೂ ಮತ್ತು ಆಡಳಿತದ ಎಲ್ಲಾ ಇಲಾಖೆಗಳಿಗೂ ಮುಖ್ಯವಾದ ಅಧಿಕೃತವಾದ ದಾಖಲೆಯೇ ರಾಜ್ಯಪತ್ರ. ಕೆಲವೊಂದು ಇಲಾಖೆಯಲ್ಲಿ ಇಲಾಖೆಗಳಲ್ಲಿನ ಮಹತ್ತರ ವಿಚಾರ ಹಾಗೂ ವಿಷಯಗಳು ರಾಜ್ಯಪತ್ರದಲ್ಲಿ ಪ್ರಕಟಗೊಂಡನಂತರವೇ ಅದನ್ನು ಅಧಿಕೃತವೆಂದು ಭಾವಿಸಲಾಗುತ್ತದೆ. ಕೆಲವೊಂದು ಕಾಯ್ದೆ ಮತ್ತು ಕಾನೂನೂಗಳಲ್ಲಿಯೂ ಸಹ ಈ ವಿಷಯವನ್ನು ವಿವರಿಸಲಾಗಿದೆ. ಹೀಗಾಗಿ ಅಧಿಕೃತ ರಾಜ್ಯಪತ್ರ ಅಂತರ್ಜಾಲದಲ್ಲಿ ದೊರಕುವುದು ಪಾರದರ್ಶಕ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಅನೇಕ ಕಾರಣಗಳಿಂದ ಸಾರ್ವಜನಿರಿಗೆಲ್ಲರಿಗೂ ರಾಜ್ಯಪತ್ರದ ಪ್ರತಿ ಕಾಣದೇ ಇರುವ ಪ್ರಸಂಗ ಬಂದಿತ್ತು. ಆದರೆ ಅಂತರ್ಜಾಲದ ತಾಣದಲ್ಲಿ ರಾಜ್ಯಪತ್ರವನ್ನು ನೋಡಲು ಕುಳಿತರೆ ಕ್ಷಣಾರ್ಧದಲ್ಲಿ ಪ್ರಸ್ತುತ ಸಂದರ್ಭದಲ್ಲಿನ ರಾಜ್ಯಪತ್ರದ ಪ್ರತಿ ನಮ್ಮ ಕೈಗೆ ಲಭ್ಯವಾಗುತ್ತದೆ. ರಾಜ್ಯಪತ್ರವನ್ನು ಹುಡುಕುವ ಗೋಜಿಗೆ ಹೋಗದೇ ನೇರವಾಗಿ ಅಂತರ್ಜಾಲದಲ್ಲಿ ಹುಡಿಕಿದರೆ ಸಾಕು ನಮಗೆ ಬೇಕಾದ ರಾಜ್ಯಪತ್ರದ ಪ್ರತಿ ಸಿಗುತ್ತದೆ. ಈ ಕಾರಣದಿಂದ ಅಂತರ್ಜಾಲ ಬಹುಮುಖ್ಯವಾಗಿ ಕಾರ್ಯನಿರ್ವಹಿಸಿ ಜನಸಾಮಾನ್ಯರಿಗೆ ಹಾಗೂ ಆಡಳಿತದಲ್ಲಿ ಪಾರದರ್ಶಕತೆ ಹಾಗೂ ತ್ವರಿತಗತಿಯಲ್ಲಿ ಕಾರ್ಯನಿರ್ವಹಣೆ ಹಾಗೂ ಅಧಿಕೃತವಾಗಿ ಇಲಾಖೆಗಳಿಂದ ಪ್ರಕಟಣೆಗೊಂಡ ರಾಜ್ಯಪತ್ರದ ಪ್ರತಿಗಳನ್ನು ಅಂತರ್ಜಾಲದಲ್ಲಿ ಲಭ್ಯವಾಗುವಂತೆ ಮಾಡುವ ಮಹತ್ಕಾರ್ಯಕ್ಕೆ ಅಲ್ಲಿನ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತದಲ್ಲಿನ ಸಿಬ್ಬಂದಿ ವರ್ಗಕ್ಕೆ ಮತ್ತು ಮಾಹಿತಿಯನ್ನು ಸಾರ್ವಜನಿಕರಿಗೆ ಮುಟ್ಟಿಸುವ ಮಹತ್ಕಾರ್ಯವನ್ನು ಅಂತರ್ಜಾಲ ಮಾಡುತ್ತದೆ.

ಹೀಗೆ ಹಲವಾರು ಇಲಾಖೆಗಳು ಇಂದು ತನ್ನದೇ ಆದ ನಿಟ್ಟಿನಲ್ಲಿ ಅಂತರ್ಜಾಲಕ್ಕೆ ಹೊಂದಿಕೊಂಡಿರುವುದನ್ನು ಪ್ರಸ್ತುತ ಸಂದರ್ಭದಲ್ಲಿ ಕಾಣುತ್ತೇವೆ.

* ವಾರ್ತಾ ಮತ್ತು ಪ್ರಚಾರ ಇಲಾಖೆ: ಸಮಾಚಾರಗಳ ರವಾನೆ ಮತ್ತು ಅವುಗಳ ಭಿತ್ತರ.
* ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ: ಆಟೋಟಗಳ ಬಗ್ಗೆ, ಇಲಾಖೆಗೆ ಸಂಬಂಧಿಸಿದ ಇತರೆ ವಿಷಯಗಳ ಭಿತ್ತರ

ಮಹತ್ವದ ವಿಚಾರಗಳು.

* ದಿನನಿತ್ಯದ ಷೇರು ಮಾರುಕಟ್ಟೆ ವಿವರಣೆ
* ಕೃಷಿ ಉತ್ಪನ್ನ ಮಾರುಕಟ್ಟೆ:- ದರಗಳ ಸೂಚ್ಯಾಂಕಗಳ ಪ್ರಕಟಣೆ.
* ವಾಣಿಜ್ಯ ಮತ್ತು ತೆರಿಗೆ ಇಲಾಖೆ:- ಇ-ವೇತನ ಪಾವತಿ, ಇತರೆ ಕಾರ್ಯಗಳು.
* ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ:- ಅಭಿವೃದ್ದಿ ಕಾರ್ಯಗಳ ಹಾಗೂ ಜಾಗೃತಿ ಮಾಹಿತಿಗಳು.
* ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ:- ರೇಷನ್ ಕಾರ್ಡ ನೋಂದಣಿ , ವಿತರಣೆ, ಇತ್ಯಾದಿ.
* ಗಣಿ ಮತ್ತು ಭೂವಿಜ್ಞಾನ ಇಲಾಖೆ:- ಅಂತರ್ಜಾಲದ ಮುಖಾಂತರ ಗಣಿಗಾರಿಕೆಗೆ - ಇ-ಟೆಂಡರ್, ಅರ್ಜಿಸಲ್ಲಿಕೆ, ಸ್ಟಾಕ್‌ಯಾರ್ಡಗಳ ಇ-ಟೆಂಡರ್ ಇತ್ಯಾದಿ.
* ಲೊಕೋಪಯೋಗಿ ಇಲಾಖೆ:- ಮರಳು ಇ-ಟೆಂಡರ್, ಅನೇಕ ಕಾಮಗಾರಿಗಳ ಟೆಂಡರ್‌ಗಳ ಸಲ್ಲಿಕೆ,
* ಅರಣ್ಯ ಇಲಾಖೆ:- ಅಕ್ರಮ ಗಣಿಗಾರಿಕೆ ಪ್ರದೇಶದ ಗುರುತಿಗಾಗಿ ಅಂತರ್ಜಾಲ ನಕ್ಷೆ ಟ್ರೈಸರ್ ಪದ್ದತಿ ಅಳವಡಿಕೆ. ಅರಣ್ಯ ಭೂಮಿಯಲ್ಲಿನ ಗಣಿಗಾರಿಕೆಗೆ (ಕಬ್ಬಿಣದ ಅದಿರು, ಮ್ಯಾಂಗನೀಸ್, ಕಲ್ಲುಗಣಿಗಾರಿಕೆ ಇತ್ಯಾದಿ) ಅರ್ಜಿಸಲ್ಲಿಕೆ.
* ಕಬ್ಬಿಣಗಣಿ ಸ್ಟಾಕ್‌ಯಾರ್ಡಗಳ ಇ-ಟೆಂಡರ್ ಇತ್ಯಾದಿ.
* ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ:- ಶಿಷ್ಯ ವೇತನಕ್ಕೆ ಅರ್ಜಿ, ವಿದ್ಯಾರ್ಥಿವೇತನಕ್ಕೆ ಅರ್ಜಿ
* ಕಾರ್ಮಿಕ ಇಲಾಖೆ:- ಕಾಮಿಕರ ಭವಿಷ್ಯ ನಿಧಿಗೆ ಕಾರ್ಮಿಕರ ಅರ್ಜಿಸಲ್ಲಿಕೆ, ವೇತನ ಕಟಾವು, ಇತ್ಯಾದಿ.

ಪ್ರತಿಯೊಂದು ಇಲಾಖೆಯ ಒಂದಲ್ಲಾ ಒಂದು ರೀತಿಯಲ್ಲಿ ಪ್ರತಿಯೊಂದು ಮಹತ್ವದ ವಿಷಯಗಳು ಅಂತರ್ಜಾಲದ ಮೂಲಕವಾಗಿಯೇ ನಡೆಯುತ್ತಿರುವುದು ಮತು ಆಡಳಿತದಲ್ಲಿ ಯಶಸ್ವಿಪೂರ್ಣವಾಗಿ ಕಾರ್ಯನಿರ್ವಹಿಸುತ್ತಿರುವುದು ಗಮನಾರ್ಹದ ಸಂಗತಿ. ಇವುಗಳಲ್ಲದೇ

ವಿವಿಧ ಇಲಾಖೆಗಳಲ್ಲಿ ಅಂತರ್ಜಾಲದ ಮೂಲಕ ಇಲಾಖೆಯ ಆಡಳಿತದೊಳಗಿನ ಸಿಬ್ಬಂದಿಗಳ ನೇಮಕ, ಜ್ಯೇಷ್ಠತಾ ಪಟ್ಟಿ ಪ್ರಕಟಣೆ, ಮಹತ್ವವಾದ ಯೋಜನೆಗಳ ವಿಶ್ಲೇಷಣೆ ಈಗಾಗಲೇ ತೆಗೆದುಕೊಂಡ ಮತ್ತು ತೆಗೆದುಕೊಳ್ಳಬೇಕಾದ ಕ್ರಮಗಳು. ಈ ರೀತಿಯಲ್ಲಿ ಹತ್ತು ಹಲವಾರು ಕಾರ್ಯಕ್ರಮಗಳನ್ನು ಪ್ರತಿಯೊಂದು ಇಲಾಖೆಗಳು ಅಂತರ್ಜಾಲದಲ್ಲಿ ವೀಕ್ಷಿಸಬಹುದಾಗಿದೆ.

ಮೇಲಿನವುಗಳಲ್ಲದೇ ಪ್ರತಿಯೊಂದು ಜಿಲ್ಲೆಯಲ್ಲಿನ ಪ್ರತಿಯೊಂದು ಇಲಾಕೆಗಳು ತಮ್ಮದೇ ಆದ ಅಂತರ್ಜಾಲ ಸಂಪರ್ಕ ಹೊಂದಿವೆ ಹಾಗೂ ಮಿಂಚೆಯನ್ನು ಬಳಸುತ್ತಿವೆ. ಅಂತರ್ಜಾಲದ ಮೂಲಕ ಮಿಂಚೆಯೂ ಸಹ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರತಿಯೊಂದು ಆಡಳಿತದಲ್ಲಿನ ಇಲಾಖೆಗಳ ಅಂತರ್ಜಾಲ ತಾಣ ಮತ್ತು ಬಳಸುತ್ತಿರುವ ಮಿಂಚೆಗಳನ್ನು ಪಟ್ಟಿಮಾಡಿದರೆ ಗಣನೆಗೆ ಬಾರದಷ್ಟು ರೀತಿಯಲ್ಲಿ ಅಂತರ್ಜಾಲ ಮತ್ತು ಮಿಂಚೆಯ ಬಳಕೆ ಆಗುತ್ತಿರುವುದು ಆಡಳಿತದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಇತ್ತೀಚಿನ ದಿನಗಳಲ್ಲಿ ಪತ್ರದ ರವಾನೆ ಆದಷ್ಟು ಕಡಿಮೆಯಾಗಿದ್ದು, ಅಂತರ್ಜಾಲದ ಮೂಲಕವಾಗಿಯೇ ಮಿಂಚೆಯ ಸಹಾಯದಿಂದ ತುರ್ತುಗತಿಯಲ್ಲಿ ಕಾರ್ಯನಿರ್ವಹಣೆಗಾಗಿ ಇಲಾಖೆಯಿಂದ ಇಲಾಖೆಗೆ ಪತ್ರಗಳ ರವಾನೆ, ಸ್ವೀಕೃತಿ ಮತ್ತು ಸದರಿ ಪತ್ರಗಳಿಗೆ ಸಂಬಂಧಿಸಿದಂತೆ ಉತ್ತರಗಳು ಮಿಂಚೆಯ ಮೂಲಕವಾಗಿಯೇ ನಡೆಯುತ್ತಿರುವುದಕ್ಕೆ ಸಾಕಷ್ಟು ಉದಾಹರಣೆಗಳು ಆಡಳಿತದಲ್ಲಿ ಕಾಣುತ್ತವೆ. ಉನ್ನತ ಅಧಿಕಾರಿಗಳ ವರ್ಗವಣೆ, ನೇಮಕಾತಿ, ಸ್ಥಳ ನಿಯುಕ್ತಿ, ಪ್ರಮುಖ ಸರ್ಕಾರದ ಆದೇಶಗಳು, ಸರ್ಕಾರದಲ್ಲಿ ಆದೇಶಗಳಾದ ಕ್ಷಣಾರ್ಧದಲ್ಲಿ ಅಂತರ್ಜಾಲದಲ್ಲಿ ಹಾಗೂ ಸಂಬಂಧಪಟ್ಟ ಇಲಾಖೆಗಳ ಮಿಂಚೆಗಳಲ್ಲಿ ಹರಿದಾಡುತ್ತಿರುವುದನ್ನು ಕಾಣಬಹುದು. ಅದಲ್ಲದೇ ಇತ್ತೀಚಿಗಷ್ಟೆ ಅಂತರ್ಜಾಲಕ್ಕೆ ಕಾಲಿಟ್ಟ ವ್ಯಾಟ್ಸಪ್‌ಗಳಲ್ಲಿಯೂ ಬಂದರೂ ಅಚ್ಚರಿಪಡಬೇಕಾಗಿಲ್ಲ. ಕಾರಣ ಅಷ್ಟು ವೇಗವಾಗಿ ಅಂತರ್ಜಾಲ ತನ್ನ ವಿಸ್ತಾರವನ್ನು ಪಡೆದುಕೊಂಡಿದೆ.

ಪ್ರಸ್ತುತ ಮೇಲಿನ ಎಲ್ಲಾ ಸಂಗತಿಗಳು ಆಡಳಿತದಲ್ಲಿ ಅಂತರ್ಜಾಲದ ಮೂಲಕ ಮಹತ್ತರವಾದ ಬದಲಾವಣೆಗಳನ್ನು ಕಂಡುಕೊಂಡಿರುವುದು ಮಹತ್ತರ ಹೆಜ್ಜೆಯೇ ಸರಿ. ಆದರೆ ಕರ್ನಾಟಕದಲ್ಲಿ ಸಂಪೂರ್ಣವಾಗಿ ಕನ್ನಡದಲ್ಲಿಯೇ ಆಗಬೇಕೆಂಬ ನಿರ್ಧಾರಕ್ಕೆ ಈ ಆಡಳಿತದಲ್ಲಿನ ಅಂತರ್ಜಾಲದ ಬಳಕೆ ಎಷ್ಟೊಂದು ಪೂರಕವಾಗಿವೆ. ಹಾಗೂ ಆಡಳಿತದಲ್ಲಿ ಕನ್ನಡವನ್ನು ಅಂತರ್ಜಾಲದ ಮೂಲಕ ಎಷ್ಟರ ಮಟ್ಟಿಗೆ ಬಳಕೆ ಮಾಡುತ್ತಿವೆ ಎಂಬುದರ ಬಗ್ಗೆ ಪರಿಶೀಲಿಸುವ ಮತ್ತು ಆಡಳಿತದಲ್ಲಿ ಅಂತರ್ಜಾಲದ ಬಳಕೆಯ ಸಂದರ್ಭದಲ್ಲಿನ ಸಮಸ್ಯೆ ಮತ್ತು ಸವಾಲುಗಳನ್ನು ವಿಶ್ಲೇಷಿಸುವ ಅಗತ್ಯತೆ ಇದೆ.

ಪ್ರಸ್ತುತ ಸಂದರ್ಭದಲ್ಲಿ ಆಡಳಿತದಲ್ಲಿ ಕೆಲವು ಸಲ ಬೇಗನೆ ಮತ್ತು ವೇಗವಾಗಿ ಕೆಲಸವಾಗಬೇಕೆಂಬ ಉದ್ದೇಶದಿಂದ ಮಿಂಚೆ (ಈಮೇಲ್)ಯ ಮೂಲಕ ಪತ್ರಗಳನ್ನು ರವಾನಿಸುವುದು, ಅದರ ಮೂಲಕವೇ ಉತ್ತರಗಳನ್ನು ಪಡೆಯುವ ಮಹತ್ವದ ಬದಲಾವಣೆಯನ್ನು ಕಾಣುತ್ತವೆ. ಆದರೆ ಇದು ಎಷ್ಟರಮಟ್ಟಿಗೆ ಸರಿ ಅಥವಾ ತಪ್ಪು ಎನ್ನುವುದು ಆಡಳಿತದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಆ ಒಂದು ವ್ಯವಸ್ಥೆಯನ್ನು ಪ್ರಶ್ನಿಸುವ ಅಗತ್ಯತೆ ಪ್ರಸ್ತುತ ಸಂದರ್ಭದಲ್ಲಿ ಇಲ್ಲ ಎಂಬುದನ್ನೆ ಮನಗಂಡಿದ್ದೇವೆ. ಅಂತರ್ಜಾಲದ ಮೂಲಕ ಆಡಳಿತದಲ್ಲಿ ಕನ್ನಡ ಬಳಕೆಯ ಸಂದರ್ಭದಲ್ಲಿ ಆಗುವ ಸಮಸ್ಯೆಗಳೇನು ಮತ್ತು ಅವು ಸವಾಲುಗಳಾಗಿವೆಯಾ ಎಂಬುದರ ಬಗ್ಗೆ ಮಾತ್ರ ನಮ್ಮ ವಿಷಯವು ಕೇಂದ್ರಿಕೃತವಾಗಿದೆ. ಹೀಗಾಗಿ ಅಂತರ್ಜಾಲದಲ್ಲಿ ಕನ್ನಡ ಬಳಕೆಯಲ್ಲಿನ ಸಮಸ್ಯೆಗಳ ಬಗ್ಗೆ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಮೂಲತಃವಾಗಿ ಕನ್ನಡದಲ್ಲಿಯೇ ಇರುವ ಅಂತರ್ಜಾಲದ ತಾಣಗಳು ಕಡಿಮೆ. ಬೆರಳೆಣಿಕೆಯಷ್ಟು ಮಾತ್ರ ನಮಗೆ ದೊರಕುತ್ತವೆ. ಈ ಕನ್ನಡ ಅಂತರ್ಜಾಲದ ತಾಣಗಳು ಸಂಪೂರ್ಣವಾಗಿ ಕನ್ನಡಮಯ ಎಂಬುದು ಪ್ರಶ್ನಾತೀತವಾಗಿದೆ ಸದರಿ ತಾಣಗಳಿಗೆ ತಲುಪಬೇಕಾದ ಸಂದರ್ಭದಲ್ಲಿ ಇಂಗ್ಲೀಷಿನಲ್ಲಿ ಕನ್ನಡದಲಿಪಿಯನ್ನು ಬಳಸಿಕೊಂಡು ಒಳಗಡೆ ಪ್ರವೇಶ ಪಡೆಯಬೇಕಾಗುತ್ತದೆ. ಅಲ್ಲಿನ ಮುಖ್ಯತಾಣಕ್ಕೆ ಪ್ರವೇಶ ಪಡೆದ ನಂತರ ಅಲ್ಲಿಯೂ ಸಹ ಇಂಗ್ಲೀಷಿನ ಪ್ರಭಾವ ಇರುವುದನ್ನು ಕಾಣುತ್ತೇವೆ.

ಉದಾ: ಕನ್ನಡ ಅಂತರ್ಜಾಲ ತಾಣಗಳಾದ

Sampada net, kannada- Wikipedia,
kannada sourabha, kannada kasturi.com,
vishvakannada.com, karnadaratna.com,
total-kannada.com, my-kannada.com,
hatskannada.com, ourkarnataka.com,
kannadasaahithya.com, hellokannadiga.com,
karnatakarakshnavedike.org. sify.com kannada, /articles.

ಈ ರೀತಿಯಾಗಿ ಬಗೆಬಗೆಯಲ್ಲಿ ಅಂತರ್ಜಾಲ ತಾಣಗಳನ್ನು ಕನ್ನಡದಲ್ಲಿ ನೋಡಬಹುದಾಗಿ. ಇವು ಕನ್ನಡದ ಅಂತರ್ಜಾಲ ತಾಣಗಳಾಗಿವೆ.

ಮೂಲತಃವಾಗಿ ಕನ್ನಡವೆಂದೇ ಪ್ರತಿವಾದಿಸುವ ಈ ಅಂತರ್ಜಾಲ ತಾಣಗಳು ಪ್ರಾರಂಭಗೊಳ್ಳುವುದೇ ಕನ್ನಡ ಭಾಷೆ ಇಂಗ್ಲೀಷ್ ಲಿಪಿಯಿಂದ. ಮುಂಬರುವ ದಿನಗಳಲ್ಲಿ ಕನ್ನಡ ಭಾಷೆ– ಇಂಗ್ಲೀಷ್ ಲಿಪಿಯಾಗಿ ಬದಲಾಗುವುದರಲ್ಲಿ ಯಾವ ಸಂದೇಹಗಳು ಇಲ್ಲವೆಂದು ಸ್ಪಷ್ಟವಾಗಿ ಮೇಲಿನ ಅಂಶಗಳು ಪುಷ್ಟಿಯನ್ನು ನೀಡುತ್ತವೆ. ಮುಂಬರುವ ದಿನಗಳಲ್ಲಿ ಒಂದು ವೇಳೆ ಮೇಲಿನ ಅಂಶಗಳು ಕನ್ನಡ ಭಾಷೆ–ಇಂಗ್ಲೀಷ್ ಲಿಪಿಗೆ ಪುಷ್ಟಿ ನೀಡುವುದಿಲ್ಲ ಎನ್ನುವುದಾದಲ್ಲಿ, ಇಂಗ್ಲೀಷ್ ಲಿಪಿಯ ಬಳಕೆಯಿಂದ ಕನ್ನಡ ಭಾಷೆಯ ಅಂತರ್ಜಾಲ ತಾಣಕ್ಕೆ ಕಾಲಿಡಬೇಕಾದ ಪರಿಸ್ಥಿತಿ ಇನ್ನೂ ನಮ್ಮಲ್ಲಿ ಇದ್ದು, ಬದಲಾವಣೆ ಕಾಣದೇ ಹಾಗೆ ಮುಂದುವರೆಯುತ್ತಿದೆ. ಇದಕ್ಕೆ ಕಾರಣ ತಂತ್ರಜ್ಞಾನದ ಕೊರೆತೆಯೇ? ಅಥವಾ ತಂತ್ರಜ್ಞಾನದ ತಯಾರಿಕೆಯಲ್ಲಿ ಕೊರತೆಯೇ? ಅಥವಾ

ಅದಕ್ಕೆ ಸಂಬಂಧ ಪಟ್ಟಂತೆ ತಂತ್ರಜ್ಞಾನದಕೊರತೆಯಾ? ಅಥವಾ ತಂತ್ರಜ್ಞರು ಅದನ್ನು ಬದಲಾಯಿಸುವ ಮನೋಭಾವ ತಾಳುತ್ತಿಲ್ಲವೋ? ಎಂಬ ಪ್ರಶ್ನೆಗಳು ಸಮಸ್ಯೆ ಮತ್ತು ಸವಾಲಾಗಿ ಕಾಣುತ್ತಿದೆ.

ಇದರಿಂದ ಇನ್ನೊಂದು ಪ್ರಶ್ನೆ ಉದ್ಭವಿಸುದೇನೆಂದರೆ ಜಾಗತಿಕ ನೆಲೆಯಲ್ಲಿ ಕನ್ನಡ ಭಾಷೆಯನ್ನು ಇಂಗ್ಲೀಷ್ ಭಾಷೆಯ ಪ್ರಯೋಗದ ಮುಖಾಂತರವಾಗಿ ಹತ್ತಿಕ್ಕಿದ ಹುನ್ನಾರ ನಡೆಯುತ್ತದೆಯೊ? ನಡೆಯುತ್ತಿದೇ ಎನ್ನುವುದಾಲ್ಲಿ ಮೇಲಿನ ಉದಾಹರಣೆಗಳೇ ಸಾಕ್ಷಿಗಳಾಗುತ್ತಿವೆ, ನಡೆಯುತ್ತಿಲ್ಲ ಎನ್ನುವುದಾದದಲ್ಲಿ, ತಂತ್ರಜ್ಞಾನದಲ್ಲಿ ಯಾಕೆ ಬದಲಾವಣೆ ಆಗುತ್ತಿಲ್ಲ ಎಂಬುದು ಪ್ರಶ್ನೆ. ಬದಲಾವಣೆಗಳು ಆಗುತ್ತಿಲ್ಲ ಎಂಬುವುದಕ್ಕೆ ತಂತ್ರಜ್ಞರು ಕೊಡುವ ಉತ್ತರಗಳು ಬೇರೆಯೇ ಆಗಿವೆ.

ಇನ್ನೂ ಅವಿಷ್ಕಾರ ನಡಿತಾ ಇವೆ.

ದಿನದಿಂದ ದಿನಕ್ಕೆ ಬದಲಾವಣೆಗಳ ಸಾಧ್ಯ.

ಇದಕ್ಕೆ ಸಂಬಂಧಪಟ್ಟಂತೆ ತಂತ್ರಜ್ಞಾನದ ಕೊರತೆ ಇದೆ.

ತಯಾರಿಸಲ್ಪಟ್ಟ ತಂತ್ರಜ್ಞಾನ ಅದಕ್ಕೆ ಸರಿಹೊಂದುತ್ತಿಲ್ಲ.

ಬದಲಾವಣೆಗೆ ಸಹಕಾರಿಯಾಗುತ್ತಿಲ್ಲ.

ಒಂದು ಪ್ರಯತ್ನಕ್ಕೆ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ.

ಒಂದನ್ನು ಮಾಡಲು ಹೋದಾಗ ಇನ್ನೊಂದು ರಚನೆಗೊಳ್ಳುತ್ತೆ.

ಎಂಬ ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ. ಆದರೆ ಅದೆಲ್ಲಾ ಏನೇ ಇರಲಿ ಅಂಗೈಯಲ್ಲೇ ಪ್ರಪಂಚವನ್ನು ಹೊತ್ತು ತಿರುಗುವ ಈಗಿನ ಸಂದರ್ಭದಲ್ಲಿ ಕನ್ನಡ ಭಾಷೆಯ ಮುಖಾಂತರ ಆಡಳಿತದಲ್ಲಿ ಉಪಯೋಗಿಸುವ ಅಂತರ್ಜಾಲ ತಾಣದಲ್ಲಿ ಬದಲಾವಣೆ ಆಗಬೇಕಿದೆ. ಈಗಾಗಲೇ ಕೆಲವೊಂದು ಕನ್ನಡದ ಅಂತರ್ಜಾಲ ಹಾಗೂ ಆಡಳಿತ ಇಲಾಖೆಗಳಲ್ಲಿ ಕನ್ನಡದ ಬಳಕೆಯು ನೇರವಾಗಿ ಅಂತರ್ಜಾಲದಲ್ಲಿ ಆಗಿದೆಯಲ್ಲಾ, ಹಾಗೂ ಇನ್ನುಳಿದದ್ದು ಕಾಲಾನಂತರದಲ್ಲಿ ಬದಲಾವಣೆಗೊಂಡು ಪೂರ್ಣವಾಗಿ ಆಗುತ್ತದೆ. ಎಂದು ಹೇಳುವ ಮನೋಭಾವ ಹೊಂದಿರುವ ತಂತ್ರಜ್ಞರ ಪ್ರಶ್ನೆಗೆ ಅಲ್ಲಿಯೂ ಸಹಿತ ಇಂಗ್ಲೀಷಿನ ವ್ಯಾಮೊಹ ತಂತ್ರಜ್ಞರಿಂದ ಬಿಟ್ಟಿಲ್ಲ ಎಂಬುದು ಉತ್ತರ.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಅಂತರ್ಜಾಲದ ಬೆಳವಣಿಗೆ ಆಡಳಿತದಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಸಂಪೂರ್ಣವಾಗಿ ವಿಭಿನ್ನವಾಗಿದೆ. ಅಂತರ್ಜಾಲದಲ್ಲಿ ಮುಖ್ಯವಾಗಿ ಗೂಗಲ್ ಎಲ್ಲಾ ವಿಷಯಗಳನ್ನು ಕ್ಷಣಾರ್ಧದಲ್ಲಿ ತೋರಿಸುವ ಅಂತರ್ಜಾಲ ತಾಣ, ಗೂಗಲ್‌ನಲ್ಲಿ ಇಲಾಖೆಯ ವಿಷಯ ಹಾಗೂ ವಿವರಗಳನ್ನು ಹುಡುಕಲು ಹೋದಾಗ ಸಿಗುವುದೇ ಪೂರ್ಣ ಇಂಗ್ಲೀಷಿನಲ್ಲಿ, ಕೆಲವೊಂದು ಸಂದರ್ಭದಲ್ಲಿ ಕನ್ನಡ ಸಿಕ್ಕರೂ ಸಿಗಬಹುದೆಂಬುದು ಒಂದು ಕಡೆಯಮಾತು. ಆದರೆ ಪೂರ್ಣವಾಗಿ ಇಂಗ್ಲೀಷಿನಲ್ಲಿರುವುದೇ ಆಡಳಿತಕ್ಕೊಂದು ಪ್ರಶ್ನಾತೀತವಾಗಿದೆ.

ಕನ್ನಡ ಸೌರಭ, ಸಂಪಿಗೆ, ಕಸ್ತೂರಿ, ಬನವಾಸಿ ಬಳಗ ಹಾಗೂ ಇತರೆ ಎಲ್ಲಾ ಇಲಾಖೆಗಳ ಮುಖ್ಯ ಅಂತರ್ಜಾಲ ತಾಣಗಳಲ್ಲಿ ಉದ್ದೇಶಿತ ಮಟ್ಟಿಗೆ ಇಲ್ಲದಿದ್ದರೂ ತಕ್ಕ ಮಟ್ಟಿಗೆಯಾದರೂ ಕನ್ನಡ ಬಳಕೆಯಾಗುತ್ತಿರುವುದು ಕಂಡು ಬರುತ್ತದೆ. ಇವುಗಳನ್ನು ಬಿಟ್ಟರೆ ಎಲ್ಲಾ ಇಂಗ್ಲೀಷ್‌ಮಯ.

ಆಡಳಿತದಲ್ಲಿ ಅಂತರ್ಜಾಲದ ಬಳಕೆಯ ಸಂದರ್ಭದಲ್ಲಿನ ಕನ್ನಡದ ಸಮಸ್ಯೆ ಮತ್ತು ಸ್ಥಿತಿ-ಗತಿಗಳು.

ಅ) ಉದ್ದೇಶಿತ ಪ್ರಮಾಣದಲ್ಲಿ ಕನ್ನಡದ ಬಳಕೆಯಾಗುತ್ತಿಲ್ಲ

ಆಡಳಿತದಲ್ಲಿ ಕನ್ನಡದ ಬಳಕೆ ಯಾವ ಪ್ರಮಾಣದಲ್ಲಿ ಆಗಬೇಕೆಂಬ ಉದ್ದೇಶವನ್ನು ಹೊಂದಲಾಗಿದೆಯೋ, ಆ ಪ್ರಮಾಣ ಪೂರ್ಣವಾಗಿಲ್ಲವೆಂಬುದೊಂದು ಕೊರಗು. ಹೀಗಾಗಿ ಅಂತರ್ಜಾಲದ ಮೂಲಕ ಆಡಳಿತದಲ್ಲಿ ಕನ್ನಡ ಬಳಕೆಯ ಪ್ರಮಾಣ ತೀರಾ ಕಡಿಮೆ ಎಂದರೂ ತಪ್ಪಾಗಲಾರದು.

ಆ) ಪ್ರಾರಂಭದಲ್ಲಿಯೇ ಸಮಸ್ಯೆ

ನಮ್ಮದೇ ಆದ ಆಡಳಿತದ ಕನ್ನಡ ವಿವಿಧ ಇಲಾಖೆಗಳ ಅಂತರ್ಜಾಲ ತಾಣಗಳಿಗೆ ಹೋಗಬೇಕಾದರೆ ಇಂಗ್ಲೀಷಿನ ಮುಖಾಂತರವೇ ಪ್ರವೇಶ ಪಡೆಯಬೇಕಾಗುತ್ತದೆ. ಪ್ರಾರಂಭದಲ್ಲಿ ಮುಖಪುಟ ಇಂಗ್ಲೀಷಿನಲ್ಲಿರುವುದು ಬಹುತೇಕ ಆಡಳಿತದಲ್ಲಿ ಇಂಗ್ಲೀಷ್‌ನ ಬಳಕೆಗೆ ಹಿಡಿದ ಕನ್ನಡಿಯಂತಿದೆ.

ಇ) ಎಲ್ಲರ ಬಳಕೆಗೆ ಅಸಾಧ್ಯ

ಆಡಳಿತದಲ್ಲಿ ಅಂತರ್ಜಾಲದ ಮುಖಾಂತರವಾಗಿ ಇಂದಿನ ಎಲ್ಲಾ ಇಲಾಖೆಗಳ ಪ್ರತಿಯೊಂದು ವಿಷಯಗಳು ಮೊದಲನೆಯದಾಗಿ ಅಂತರ್ಜಾಲದಲ್ಲಿ ಭಿತ್ತರವಾಗುತ್ತವೆ. ಅದನ್ನೆ ಮಹತ್ಕಾರ್ಯವೆಂದು ಭಾವಿಸಿದ ಸಿಬ್ಬಂದಿವರ್ಗ ಇಲ್ಲಿಗೆ ನಮ್ಮ ಕಾರ್ಯ ಮುಗಿಯಿತೆಂದು ಭಾವಿಸಿ ಸುಮ್ಮನಾಗುವ ಪರಿಸ್ಥಿತಿ ಬಂದೊದಗಿದೆ. ಆದರೆ ಹಿಂದಿನ ದಿನಗಳಲ್ಲಿ ಯಾವುದಾದರೂ ಇಲಾಖೆಗಳ ವಿಚಾರಗಳನ್ನು ಪ್ರಸಾರ ಅಥವಾ ಪತ್ರಿಕೆಗಳಲ್ಲಿ ಭಿತ್ತರಿಸುವ ಕಾರ್ಯಕ್ರಮಗಳ ನಡೆಯುತ್ತಿದ್ದವು. ಆದರೆ ಈ ಒಂದು ಪ್ರಕ್ರಿಯೆಯು ಪ್ರಸ್ತುತ ಸಂದರ್ಭದಲ್ಲಿ ತೀರಾ ವಿರಳವಾಗಿದೆ. ಅಂತರ್ಜಾಲದಲ್ಲಿ ಹಾಕದೇ ಇರುವ ಇಲಾಖೆಗಳು ಪತ್ರಿಕೆಗಳಲ್ಲಿ ಹಾಕುತ್ತಾರೆ. ಆದರೆ ಈ ಮಾರ್ಗದ ಮುಖಾಂತರವಾಗಿ ಅಂತರ್ಜಾಲದ ಬಳಕೆ ಜನಸಾಮಾನ್ಯರಿಗೆ ಅಸಾಧ್ಯವಾದುದಾಗಿದೆ. ಹಾಗೂ ಅನಕ್ಷರಸ್ಥರಿಗೆ, ಕೆಳವರ್ಗದವರಿಗೆ ಈ ಬಳಕೆ ದುರ್ಲಭವಾಗಿದೆ.

ಈ) ಪ್ರಜ್ಞಾವಂತರಿಗೆ ಮಾತ್ರ

ಅಂತರ್ಜಾಲದ ವಿಷಯಗಳನ್ನು ವಿಚಾರಗಳನ್ನು ತಿಳಿಯಬೇಕಾದರೆ ಅದಕ್ಕೆ ಸಂಬಂಧಪಟ್ಟ ಅಂತರ್ಜಾಲ ತಾಣಗಳ ವಿಳಾಸ ಮತ್ತು ಅವುಗಳಿಗೆ ಪ್ರವೇಶ ಪಡೆಯುವ ವ್ಯವಸ್ಥೆಯನ್ನು ಬಲ್ಲವರಾಗಿದ್ದರೆ ಮಾತ್ರ ನಿಗಧಿಪಡಿಸಿದ ಇಲಾಖೆಗಳ ಮಾಹಿತಿ, ವಿವರಣೆ, ವಿಷಯಗಳು, ತಿಳಿಯಪಡಿಸಿದ ಮಾಹಿತಿ

ಲಭ್ಯವಾಗುವುದು ಸಾಧ್ಯ. ಅಂತರ್ಜಾಲದಲ್ಲಿ ಲಕ್ಷೋಪಲಕ್ಷ ವಿಳಾಸಗಳಿರುತ್ತವೆ. ಅವುಗಳಿಗೆ ಸರಿಯಾಗಿ ತಲುಪಲು ಅದರದ್ದೆ ಆದ ವಿಳಾಸ ಹೊಂದಿರುತ್ತದೆ. ಆ ವಿಳಾಸ ಮತ್ತು ಪ್ರವೇಶ ಪಡೆಯಬಯಸುವ ಅಂತರ್ಜಾಲ ತಾಣದ ಮಾಹಿತಿ ಇದ್ದಲ್ಲಿ ಮಾತ್ರ ಇವುಗಳನ್ನು ಬಳಸಲು ಸಾಧ್ಯ. ಅಲ್ಲದೇ ಪ್ರತಿಯೊಂದು ಮಾಹಿತಿ ಪ್ರಾರಂಭದಲ್ಲಿ ಇಂಗ್ಲೀಷಿನಲ್ಲಿರುವುದರಿಂದ ಕನ್ನಡ ಬಲ್ಲವರು ಅಂತರ್ಜಾಲದಲ್ಲಿ ಕುಳಿತಾದ ಪ್ರಾರಂಭದಲ್ಲಿ ದಿಕ್ಕುತಪ್ಪಾದಂತಾಗುತ್ತದೆ. ಕಾರಣ ಇದು ಪ್ರಜ್ಞಾವಂತರಿಗೆ ಮಾತ್ರ ಸೀಮಿತವಾಗಿದ್ದುದಾಗಿದೆ ಎಂದು ಹೇಳಬಹುದು.

ಉ) ಇನ್ನೊಬರ ಮೇಲೆ ಅವಲಂಬನೆ

ಆಡಳಿತದಲ್ಲಿ ಯಾವುದೇ ಇಲಾಖೆಯು ತನ್ನ ಇಲಾಖೆಯಲ್ಲಿ ಕೈಗೊಂಡ ಕಾರ್ಯಗಳ ನೇಮಕಾತಿ, ಅರ್ಜಿ ಆಹ್ವಾನ ಇತ್ಯಾದಿಗಳು ನೇರ ಅಂತರ್ಜಾಲದ ಮೂಲಕ ನಡೆಸಿದಲ್ಲಿ ಎಲ್ಲರೂ ಗಣಕಯಂತ್ರವನ್ನು ಹೊಂದಿದವರು ಹಾಗೂ ಅಂತರ್ಜಾಲ ಕಲ್ಪಿಸಿಕೊಂಡವರಿರುವುದಿಲ್ಲ. ಅವುಗಳ ಪರಿಶೀಲನೆ ಅರ್ಜಿಸಲ್ಲಿಕೆಗೆ ಇತ್ಯಾದಿ ವಿಷಯಗಳಿಗಾಗಿ ಗಣಕಯಂತ್ರ, ಅಂತರ್ಜಾಲ ಕಲ್ಪಿಸಿಕೊಂಡ ತಾಣಗಳ ಅಂಗಡಿಗೆ ಹೋಗಿ ಅವರ ಮೇಲೆ ಅವಲಂಬನೆಗೊಂಡು ಕಾರ್ಯನಿರ್ವಹಿಸಿಕೊಳ್ಳ ಬೇಕಾಗುತ್ತದೆ.

ಊ) ಅಂತರ್ಜಾಲ ತಾಣಗಳಿಗೆ ಆದಾಯ

ಆಡಳಿತದಲ್ಲಿ ಮಹತ್ತರವಾದ ಬದಲಾವಣೆಗಳನ್ನು ತರಬೇಕೆನ್ನುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ವಿಷಯಗಳನ್ನು ಅಂತರ್ಜಾಲದಲ್ಲಿ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ಇಲಾಖೆಗಳು ಭಿತ್ತರಿಸುತ್ತವೆ. ಈ ಹಿನ್ನಲೆಯಲ್ಲಿ ಪರೀಕ್ಷೆ ಫಲಿತಾಂಶ, ನೇಮಾಕಾತಿಗಾಗಿ ಅರ್ಜಿ ಸಲ್ಲಿಕೆ ಇತ್ಯಾದಿಗಳು ಸಹ ಅಂತರ್ಜಾಲದಲ್ಲಿ ಸಿಗುವುದರಿಂದ ಅಂತರ್ಜಾಲ ತಾಣಗಳು ಎಲ್ಲೆಂದರಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿ, ಗ್ರಾಹಕರು ಬಳಸಿದಲ್ಲಿ ತಾಸಿಗೆ ಇಷ್ಟು ಎಂದು ನಿಗಧಿಪಡಿಸಿ ವ್ಯವಹಾರದ ತಾಣಗಳಾಗಿ ಅಭಿವೃದ್ಧಿ ಹೊಂದುತ್ತಿವೆ.

ಇದಲ್ಲದೇ ರೇಶನ್ ಕಾರ್ಡ ಅರ್ಜಿಸಲ್ಲಿಕೆ, ವಿವಿಧ ಇಲಾಖೆಗಳ ನೇಮಕಾತಿಗಳಿಗಾಗಿ ಅರ್ಜಿಸಲ್ಲಿಕೆ, ಆಧಾರ್ ಕಾರ್ಡ ಅರ್ಜಿಸಲ್ಲಿಕೆ, ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಸಲ್ಲಿಕೆ, ಇದೆಲ್ಲವುಗಳ ಮಧ್ಯೆ ಅರ್ಜಿವೊಂದಕ್ಕೆ ಪ್ರತ್ಯೇಕ ಮೊತ್ತ, ಅರ್ಜಿಪತ್ರ ಸ್ವೀಕರಿಸಲು ಪ್ರತ್ಯೇಕ ಮೊತ್ತ ಎಲ್ಲವೂ ವ್ಯವಹಾರವಾಗಿ ಪರಿಣಮಿಸಿದೆ.

ಪ್ರತಿಯೊಂದಕ್ಕೂ ಸರ್ಕಾರದ ಸೌಲಭ್ಯವನ್ನು ಪಡೆಯಬಯಸುವ ಜನಸಾಮಾನ್ಯರು ಅತಿ ಹೆಚ್ಚು ಬೆಲೆಯನ್ನು ತೆತ್ತು ತಮ್ಮ ಕೆಲಸಗಳನ್ನು ಮಾಡಿಕೊಳ್ಳಬೇಕಾದ ಸಂದರ್ಭ ಬಂದೋದಗಿದೆ. ಅಲ್ಲದೇ ಆಡಳಿತದಲ್ಲಿ ಕೆಲವೊಂದು ಕಾರ್ಯಗಳನ್ನು ಉದಾ:- ರೇಶನ್ ಕಾರ್ಡ. ನಿರ್ವಹಣೆಗಾಗಿ ಪ್ರತ್ಯೇಕ ಮಧ್ಯವರ್ತಿಗಳಿಗೆ ಈ ಒಂದು ಕಾರ್ಯಗಳನ್ನು ನಿರ್ವಹಣೆ ಮಾಡಲು ಗುತ್ತಿಗೆ ನೀಡಿರುತ್ತಾರೆ. ಸದರಿ ಗುತ್ತಿಗೆದಾರರು ತಮ್ಮ ಹಣದಾಸೆಗೆ ಮೀತಿಮೀರಿದ ಹಣವನ್ನು ಸಾಮಾನ್ಯರಿಂದ ಪಡೆಯುವುದು,

ಸರಿಯಾದ ರೀತಿಯಲ್ಲಿ ಸೇವೆಯನ್ನು ನೀಡದೇ ಇರುವುದು, ಬೋಗಸ್ ಕಾರ್ಡ್‌ಗಳ ಸೃಷ್ಟಿ ಅಲ್ಲಲ್ಲಿ ಕಂಡುಬರುತ್ತಿದೆ.

ಕಾರಣ ಆಡಳಿತದಲ್ಲಿ ತಂತ್ರಜ್ಞಾನದ ಮೂಲಕ ಉತ್ತಮ ಬದಲಾವಣೆಯನ್ನು ತರುವ ನಿಟ್ಟಿನಲ್ಲಿ ಪ್ರಯತ್ನ ಪಡುತ್ತಿರುವ ಹಿನ್ನೆಲೆಯಲ್ಲಿ ಅದು ಸಾರ್ಥಕತೆಯನ್ನು ಪಡೆದುಕೊಳ್ಳದೆ ಯೋಜನೆಗಳ ದುರುಪಯೊಗಗಳೂ ಕಂಡುಬರುತ್ತಿವೆ. ಕಾರಣ ಇವುಗಳ ಫಲಾಪಲಾಪೇಕ್ಷಗಳನ್ನು ಆಡಳಿತದಲ್ಲಿ ಭಾಗಿಯಾದ ಜನಸಾಮಾನ್ಯರು ಅನುಭವಿಸುವಂತಾಗಿದೆ.

ಖ) ಕನ್ನಡದ ನಿರ್ಲಕ್ಷ್ಯ

ಆಡಳಿತದಲ್ಲಿ ಇಲಾಖೆಗಳಿಂದ ಹೊರಡುವ ಆದೇಶಗಳು, ಇಲಾಖೆಗಳು ತಮ್ಮ ಇಲಾಖೆಯ ಅಂತರ್ಜಾಲ ತಾಣಗಳಲ್ಲಿ ಭಿತ್ತರಿರುತ್ತವೆ ನಿಜ. ಆದರೆ ಅರ್ಜಿಸಲ್ಲಿಕೆ ಮತ್ತು ಸಲ್ಲಿಕೆಯಾದ ಅರ್ಜಿಗಳ ಪಟ್ಟಿ ಪ್ರಕಟಣೆ ಪೂರ್ಣವಾಗಿ ಇಂಗ್ಲೀಷಿನಲ್ಲಿರುವುದು ವಿಪರ್ಯಾಸದ ಸಂಗತಿ. ಆಡಳಿತದಲ್ಲಿ ಕನ್ನಡ ಬಳಕೆ ಕಡ್ಡಾಯವಾಗಿ ಆಗಬೇಕೆಂಬ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಸಂದರ್ಭದಲ್ಲಿ ಅರ್ಜಿಸಲ್ಲಿಕೆ ಮತ್ತು ಜ್ಯೇಷ್ಠತಾ ಪಟ್ಟಿ, ಅಂತಿಮಪಟ್ಟಿ ಪ್ರಕಟಣೆಗಳೆಲ್ಲವೂ ಇಂಗ್ಲೀಷಿನಲ್ಲಿ ಹೊರಬರುತ್ತಿರುವುದು, ಅವು ಅಂತರ್ಜಾಲದಲ್ಲಿ ಹರಿದಾಡುತ್ತಿರುವುದು ಕನ್ನಡಕ್ಕಾಗಿ ಇಷ್ಟೇಲ್ಲಾ ಕಷ್ಟಪಡುತ್ತಿರುವ ಕನ್ನಡಿಗರ ದುರ್ಲಭ ಹಾಗೂ ದೌರ್ಭಾಗ್ಯ ಎನ್ನಬಹುದು. ಅಲ್ಲದೇ ಇದಕ್ಕೆ ಇಲಾಖೆಯವರು ಕೊಡುವ ಉತ್ತರಗಳೇನೆಂದರೆ,

೧. ಅರ್ಜಿಸಲ್ಲಿಕೆಯ ಸಂದರ್ಭದಲ್ಲಿ ತಪ್ಪಿಲ್ಲದಂತೆ ಸಲ್ಲಿಕೆಯಾಗುತ್ತದೆ.

೨. ಅರ್ಜಿಗಳ ಒಟ್ಟು ಪ್ರಕಟಣೆ ಸರಿಯಾಗಿ ಆಗುತ್ತದೆ ಹಾಗಾಗಿ ಅವುಗಳನ್ನು ಇಂಗ್ಲೀಷಿನಲ್ಲಿ ತುಂಬಲು ಅರ್ಜಿಗಳನ್ನು ನೀಡಲಾಗಿರುತ್ತದೆ.

೩. ಕನ್ನಡದಲ್ಲಿ ತಂತ್ರಾಂಶಗಳ ಬಳಕೆಗೆ ತುಂಬಾ ಸಮಯ ವ್ಯರ್ಥ, ಇಂಗ್ಲೀಷಿನಲ್ಲಿ ಬೇಗ ಸಾಧ್ಯವಾಗುತ್ತದೆ.

೪. ಕನ್ನಡ ಬಲ್ಲದೇ ಇರುವ ಇಂಗ್ಲೀಷ್ ಮಾಧ್ಯಮದ KVD, ICSC ಪಠ್ಯಕ್ರಮ ಅಧ್ಯಾಯನ ಮಾಡಿದ ವಿದ್ಯಾರ್ಥಿಗಳ ಅರ್ಜಿಸಲ್ಲಿಕೆಗೆ ಅನುಕೂಲಕ್ಕಾಗಿ.

ಆಡಳಿತದಲ್ಲಿನ ಎಲ್ಲಾ ಇಲಾಖೆಗಳಿಗೆ ಅರ್ಜಿಸಲ್ಲಿಸುವುದರಿಂದ ಎಲ್ಲರಿಗೂ ಸಮಾನವಾಗಿ ಅವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ಎಲ್ಲರ ಅನುಕೂಲಕ್ಕಾಗಿ ಇಂಗ್ಲೀಷಿನಲ್ಲಿ ಅರ್ಜಿಯನ್ನು ನೀಡಲಾಗಿರುತ್ತದೆ. ಕಾರಣ ಇಲ್ಲಿ ಕನ್ನಡದ ತಿರಸ್ಕಾರದ ಭಾವನೆ ಇಲ್ಲವೆಂಬುದು ಆಡಳಿತ ನಡೆಸುವವರ ಪ್ರತಿಪಾದನೆ.

ಈ ಒಂದು ಉತ್ತರವನ್ನು ಎಲ್ಲರೂ ನೀಡುತ್ತಾ ಹೋದರೆ, ಈಗಿರುವ ಕನ್ನಡ ಜಾಗತಿಕರಣದ ಮತ್ತು ಆಧುನೀಕರಣದ ಪ್ರಭಾವದ ಹಿನ್ನೆಲೆಯಲ್ಲಿ ಕಾಣದೇ ಹೋಗುವ ಸಾಧ್ಯತೆಗಳು ಹೆಚ್ಚು, ಕನ್ನಡ ಭಾಷೆಯ ಜೀವಂತಿಕೆ ಎನ್ನುವುದು ಭಾಷೆಯ ಬಳಕೆಯಿಂದ ಬರುವುದೇ ಹೊರತು ಕನ್ನಡ

ಭಾಷೆಯ ಬಳಕೆಗೆ ಅನ್ಯಕಾರಣಗಳನ್ನು ಕೊಡುವುದರಿಂದಲ್ಲ. ಅಂತರ್ಜಾಲದ ಬಳಕೆಯ ಸಂದರ್ಭದಲ್ಲಿ ಆಡಳಿತ ಕನ್ನಡದ ಸಮಸ್ಯೆಗಳನ್ನು ಈ ಕೆಳಕಂಡಂತೆ ವಿವರಿಸಬಹುದಾಗಿದೆ.

ಸಮಸ್ಯೆಗಳು

ಭಾಷಿಕ ಸಮಸ್ಯೆ	**ಸಾಮಾಜಿಕ ಸಮಸ್ಯೆ**	**ತಾಂತ್ರಿಕ ಸಮಸ್ಯೆ**
ಬಹು ಭಾಷಿಕರಿಗೆ ತಂತ್ರಜ್ಞರಲ್ಲಿ ಆಡಳಿತ ನಡೆಸುವ ಕೆಲವರಲ್ಲಿ ಅಂತರ್ಜಾಲದಲ್ಲಿ ಕನ್ನಡ ಎಷ್ಟರ ಮಟ್ಟಿಗೆ ಸೂಕ್ತ ಎನ್ನುವ ಭಾವನೆ ಇರುವುದು	ಜನಸಾಮಾನ್ಯರಲ್ಲಿ ಭಾಗಶಃ ಕನ್ನಡ ಬಗ್ಗೆ ಆಸಕ್ತಿ ಇರದೇ ಇರುವುದು	ತಾಂತ್ರಾಂಶಗಳ ಕೊರತೆ
ಇಂಗ್ಲೀಷ್‌ನ ಪ್ರಾಬಲ್ಯ	ಇಂಗ್ಲೀಷ್‌ನ ಬಗ್ಗೆ ಇರುವ ಅತಿ ಹೆಚ್ಚಿನ ಒಲವು	ತಂತ್ರಾಂಶಗಳ ತಯಾರಿಕೆಗೆ ಹಿಂಜರಿಕೆ
ಜಾಗತಿಕ ನೆಲೆಯಲ್ಲಿ ಕನ್ನಡ ಭಾಷೆಯ ಮೇಲೆ ನಡೆಯುತ್ತಿರುವ ಹುನ್ನಾರ ಆಲೋಚನೆ ಇಲ್ಲದಿರುವುದು	ಅನಕ್ಷರಸ್ಥರಿಗೆ ಅರಿವೇ ಇಲ್ಲದಿರುವುದು	ಸಿದ್ಧಗೊಂಡ ತಂತ್ರಾಂಶಗಳ ಬಳಕೆ ಆಗದಿರುವುದು ಮತ್ತು ಬಳಕೆಗೆ ತರುವಲ್ಲಿ ಹಿಂಜರಿಕೆ
ಅಂತರ್ಜಾಲ ಭಾಷಿಕ ನೆಲೆಯಲ್ಲಿ ನೋಡುವ ದೃಷ್ಟಿಕೋನ ಬೇರೆ ಇರುವುದು	ಪ್ರಜ್ಞಾವಂತರಿಗೆ ಮಾತ್ರ ಅನ್ವಯ	ತಂತ್ರಾಂಶಗಳಲ್ಲಿ ಜಾರಿಗೆ ತರದೇನೆ ತಪ್ಪು ನೆಲೆಗಳಲ್ಲಿ ಯೋಚಿಸುವುದು.
ಇಂಗ್ಲೀಷ್ ಲಿಪಿಯ ಮುಖಾಂತರ ಕನ್ನಡ ಭಾಷೆಯ ಬಳಕೆ ಹೆಚ್ಚಾಗಿ ಕಂಡುಬರುತ್ತದೆ.		

ಪ್ರಸ್ತುತ ಸಂದರ್ಭದಲ್ಲಿ ಮೇಲಿನ ಎಲ್ಲಾ ಸಮಸ್ಯೆಗಳಿಂದ ಅಂತರ್ಜಾಲದಲ್ಲಿ ಕನ್ನಡವನ್ನು ಬಳಸಲು ಸಾಧ್ಯವಾಗುತ್ತಿಲ್ಲವೆಂಬುದು ಜ್ವಲಂತ ಸತ್ಯ. ಅಧುನೀಕರಣದಲ್ಲಿ ಏನೆಲ್ಲಾ ಸಾಧ್ಯವಾಗುತ್ತಿರುವ ಹಿನ್ನೆಲೆಯಲ್ಲಿ ಸ್ಪಷ್ಟ ಮತ್ತು ಶುದ್ಧ ಕನ್ನಡದ ತಂತ್ರಾಂಶ ಒಳಗೊಂಡು ಅಂತರ್ಜಾಲದಲ್ಲಿ ಕನ್ನಡ ಬಳಕೆ ಸರಿಯಾಗಿ ಆಗುತ್ತಿಲ್ಲವೆಂಬುದೊಂದು ಸಮಸ್ಯೆಯಾಗಿದೆ. ಈ ನಿಟ್ಟಿನಲ್ಲಿ ಈಗಾಗಲೇ ನೀಡಿದ ಸಮಸ್ಯೆಗಳು ಅದಕ್ಕೆ ಸವಾಲುಗಳಾಗಿ ಕಾಣುತ್ತಿವೆ.

ಹುಟ್ಟಿದ ಮಗುವಿಗೆ ೨-೩ ವರ್ಷಕ್ಕೆ ಅಂತರ್ಜಾಲದ ಪರಿಚಯದ ಮೂಲಕ ಅದಕ್ಕೆ ಹೊಂದಿಕೊಳ್ಳುವ ಪರಿಸ್ಥಿತಿ ಇಂದಿನದು. ಆದರೆ ಅದಕ್ಕೆ ಪ್ರೇರಣೆಯಾಗಿ ತಂದೆ-ತಾಯಿಗಳು ಸಹ ನಮ್ಮ ಮಗು ಅಂತರ್ಜಾಲದಲ್ಲಿ ಆಡತಾ ಇದೆ ಎಂದು ಖುಷಿಪಡುವ ಸಂದರ್ಭ ಪ್ರಸ್ತುತ ಸಂದರ್ಭದ್ದಾಗಿದೆ. ಕನ್ನಡದ ಬಳಕೆಯ ಕೂಗು ಒಂದು ಕಡೆ ಪ್ರತಿಧ್ವನಿಸುತ್ತಿದೆ. ಇನ್ನೊಂದು ಕಡೆ ಜಾಗತಿಕ ಮತ್ತು ಆಧುನೀಕರಣದ ಪ್ರಭಾವದಿಂದ, ಯುನಿಕ್ ಕೋಡ್ ಲಾಂಗ್ವೇಜ್‌ಗಳ ಮಧ್ಯದಲ್ಲಿ ಕನ್ನಡ ಮರೆಯಾಗುತ್ತಿದೆ, ಎಂದರೆ ತಪ್ಪಾಗಲಾರದು.

ಅಂತರ್ಜಾಲವು ಸಾಮಾಜಿಕ ತಾಣವಾಗಿ ಇಂದು ಮನೆಮಾತಾಗಿದೆ. ಅದೇ ರೀತಿಯಲ್ಲಿ ಕನ್ನಡದಲ್ಲಿ ಈ ಒಂದು ಪ್ರಕ್ರಿಯೇ ನಿರಂತರವಾಗಿ ನಡೆದಾಗ ಕನ್ನಡದ ಉಳಿವು ಮತ್ತು ಆಡಳಿತ ಕನ್ನಡದ ಬೆಳವಣಿಗೆ ಸಾಧ್ಯವಾಗುತ್ತದೆ.

ಕಂಡುಕೊಂಡ ಸಮಸ್ಯೆಗಳನ್ನು ಒಟ್ಟಾರೆಯಾಗಿ ವಿಶ್ಲೇಷಿಸಿಸುವುದಾದರೆ, ಆಡಳಿತದಲ್ಲಿ ಅಂತರ್ಜಾಲದ ಮೂಲಕ ಅನೇಕ ಹೊಸ ಹೊಸ ವಿಚಾರಗಳನ್ನು ಜಾರಿಗೆ ತಂದರೂ, ಅವುಗಳೆಲ್ಲವೂ ಕೇಂದ್ರಿಕೃತ ನೆಲೆಯಲ್ಲಿ ಒಟ್ಟಾರೆಯಾಗಿ ಮುಟ್ಟುತ್ತವೆ ಹೊರತು, ವಿಕೇಂದ್ರಿಕರಣಗೊಂಡು ಹರಿದು ಹೋಗುತ್ತಿಲ್ಲ. ಪ್ರಯೋಜನೆ ಪಡೆಯುವವರೆ ಅವುಗಳ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ.

ಅಲ್ಲದೇ ಅಂತರ್ಜಾಲದ ಮೂಲ ತಿರುಳೇ ಇಂಗ್ಲೀಷ್ ಭಾಷೆ. ವಿನೂತನ ತಂತ್ರಾಂಶ ಬಳಕೆಗೊಂಡು ಪ್ರತಿಯೊಂದು ಕನ್ನಡದಲ್ಲೇ ಆಡಳಿತ ನಡೆಸಬೇಕು. ಈಗಿರುವ ಕನ್ನಡ ಬಳಕೆಯನ್ನು ಮಾಡುತ್ತಿರುವ ಅಂತರ್ಜಾಲದ ಸ್ವರೂಪ ಬದಲಾಗಬೇಕೆಂಬುದು ಹಾಗೂ ಬದಲಾಗಬೇಕಾದದ್ದು ಸೂಕ್ತವಾಗಿದೆ.

ಪರಾಮರ್ಶನ ಗ್ರಂಥ

೧. ಕೋಟೂರು. ಪಿ.ಬಿ., ೨೦೦೧, ***ಕಂಪ್ಯೂಟರ್ ಎಲ್ಲರಿಗಾಗಿ,*** ಸಪ್ನ ಬುಕ್ ಹೌಸ್, ಬೆಂಗಳೂರು

೨. ನರ್ಮದಾಂಬ, ೨೦೦೪, ***ಕನ್ನಡ ಮತ್ತು ಕಂಪ್ಯೂಟರ್,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ನರ್ಮದಾಂಬ, ೨೦೦೨, ***ಕನ್ನಡದಲ್ಲಿ ಇ-ಕಲಿಕೆ,*** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪. ನಾರಾಯಣ ಮೊಳ್ಕೋಡ್, ೨೦೦೫, ***ಕಂಪ್ಯೂಟರ್ ನಿವಗೆಷ್ಟು ಗೊತ್ತು,*** ಸುಮುಖ ಪ್ರಕಾಶನ, ಬೆಂಗಳೂರು

೫. ನಿರ್ಮಲ ಜಿ.ವಿ. ಮತ್ತು ಎಸ್ ಕ್ಷಮಾ, ೨೦೦೬, ***ಕ್ರಾಂತಿಕಾರಿ ಗಣಕಯಂತ್ರ,*** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬. ವೀರೇಶ ಬಡಿಗೇರ, ೨೦೦೦, ***ಕನ್ನಡ ಹಸ್ತಪ್ರತಿಗಳು ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನ,*** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ***ಶಾಲಾ ಮಕ್ಕಳಿಗಾಗಿ ಕಂಪ್ಯೂಟರ್,*** ೨೦೦೦, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು

೮. ಶಿವಕುಮಾರ್.ಎಮ್., ೨೦೦೬, ***ಕಂಪ್ಯೂಟರ್ ಕಲಿಯಿರಿ,*** ಪುಸ್ತಕ ಪ್ರಕಾಶನ, ಮೈಸೂರು

೯. ಶಿವರಾಂ ಹೆಚ್., ೨೦೦೬, ***ಏನ್ ಕಂಪ್ಯೂಟರ್,*** ಶ್ರೀ ಶೇಷಶೈಲ ಪ್ರಕಾಶನ, ಶಿವಮೊಗ್ಗ

ಅಧ್ಯಾಯ : ಆರು

ಆಡಳಿತದಲ್ಲಿ ಕನ್ನಡ ಬಳಕೆ : ಎದುರಾದ ಸಮಸ್ಯೆಗಳು ಮತ್ತು ಪರಿಹಾರಗಳು

೬.೧. ಆಡಳಿತದಲ್ಲಿ ಕನ್ನಡ ಬಳಕೆ : ಎದುರಾದ ಸಮಸ್ಯೆಗಳು ಮತ್ತು ಪರಿಹಾರಗಳು

೬.೧.೧. ಅಧಿಕಾರಗಳ ಹಂಚಿಕೆ

೬.೧.೨. ತಂತ್ರಜ್ಞಾನದ ಅಸಮರ್ಪಕ ಬಳಕೆ ಹಾಗೂ ಕನ್ನಡದ ನಿರ್ಲಕ್ಷೆ

೬.೧.೩. ಕನ್ನಡರಿಗೆ ಕನ್ನಡ ಬಳಸುವ ಮನೋಧರ್ಮ ಇಲ್ಲದಿರುವುದು

೬.೧.೪. ತಂತ್ರಾಂಶಗಳ ಕೊರತೆ

೬.೧.೫. ಅಂತರ್ಜಾಲದ ಆಧುನೀಕರಣ ಮತ್ತು ಪ್ರಭಾವ

೬.೧.೬. ಜಾಗತಿಕ ಮತ್ತು ಆಧುನೀಕರಣದ ನೆಲೆಯಲ್ಲಿ ಕನ್ನಡ ಭಾಷೆಯ ಮೇಲೆ ನೆಡೆಯುತ್ತಿರುವ ಹುನ್ನಾರ

೬.೧.೭. ಖಾಸಗಿ ಸಹಭಾಗಿತ್ವ

೬.೧.೮. ನೀತಿಗಳಲ್ಲಿನ ತೊಡಕುಗಳು

೬.೧.೯. ಇಂಗ್ಲೀಷಿನ ವ್ಯಾಮೋಹ

೬.೧.೧೦. ಪ್ರಾದೇಶಿಕ ಭಾಷೆಯಲ್ಲಿ ಭಿನ್ನತೆ

೬.೧.೧೧. ಗಡಿನಾಡ ಭಾಷೆಗಳ ಪ್ರಭಾವ

೬.೧.೧೨. ಭಾಷಾ ಅಲ್ಪಸಂಖ್ಯಾತರು

೬.೨. ಕಚೇರಿಗಳಲ್ಲಿ ಕನ್ನಡದ ಬಳಕೆ : ಸಮಸ್ಯೆಗಳು

೬.೨.೧. ಕಚೇರಿ ಪತ್ರ : ಸಮಸ್ಯೆಗಳು

೬.೨.೨. ಟಿಪ್ಪಣೆ : ಸಮಸ್ಯೆಗಳು

೬.೨.೩. ಕಡತ : ಸಮಸ್ಯೆಗಳು

ಅಧ್ಯಾಯ : ಆರು

ಆಡಳಿತದಲ್ಲಿ ಕನ್ನಡ ಬಳಕೆ : ಎದುರಾದ ಸಮಸ್ಯೆಗಳು ಮತ್ತು ಪರಿಹಾರಗಳು

ಆಡಳಿತ ವಲಯದಲ್ಲಿ ಸರ್ಕಾರದ ಕಚೇರಿಗಳು ಅನೇಕ ಬಗೆಯವುಗಳಿವೆ ಅರಣ್ಯ, ಕೃಷಿ, ಜಲಸಂವರ್ಧನೆ, ಪರಿಸರ, ಜೀವಶಾಸ್ತ್ರ, ಪಶುಸಂಗೋಪನೆ, ಸಮಾಜ ಕಲ್ಯಾಣ, ಸಾರಿಗೆ, ಶಿಕ್ಷಣ, ಭೂ–ಮಾಪನೆ, ಕಂದಾಯ, ಗಣಿ ಮತ್ತು ಭೂವಿಜ್ಞಾನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಹಿಂದುಳಿದ ವರ್ಗಗಳ ಅಭಿವೃದ್ದಿ ಮಂಡಳಿ, ಗ್ರಾಮೀಣಾಭಿವೃದ್ಧಿ, ಶಿಶು ಅಭಿವೃದ್ಧಿ, ಕನ್ನಡ ಮತ್ತು ಅಭಿವೃದ್ಧಿ ಇಲಾಖೆ, ಪೊಲೀಸ್, ಆಡಳಿತ ಉಪ ಸಮಿತಿಗಳು, ಕಾರ್ಮಿಕ ಇಲಾಖೆ, ವಾಣಿಜ್ಯ ಮತ್ತು ತೆರಿಗೆ, ಆಡಳಿತ ಉಪ ಸಮಿತಿಗಳು, ಪಂಚಾಯತ್‌ಗಳು, ಪರಿಷತ್ತುಗಳು, ಪ್ರಾಧಿಕಾರಗಳು, ನಿಗಮಗಳು, ಮಂಡಳಿಗಳು, ಪಾಲಿಕೆಗಳು, ಇತ್ಯಾದಿ.

೬.೧. ಆಡಳಿತದಲ್ಲಿ ಕನ್ನಡ ಬಳಕೆ : ಎದುರಾದ ಸಮಸ್ಯೆಗಳು ಮತ್ತು ಪರಿಹಾರಗಳು

ಆಡಳಿತದಲ್ಲಿ ಕನ್ನಡ ಬಳಕೆಗಾಗಿ ಎದುರಾದ ಸಮಸ್ಯೆಗಳು ಮತ್ತು ಸವಾಲುಗಳನ್ನು ಆಡಳಿತದಲ್ಲಿ ಕನ್ನಡ ಬಳಕೆಯ ಹಿನ್ನೆಲೆಯಲ್ಲಿ ಈ ಹಿಂದಿನ ಅಧ್ಯಾಯಗಳಲ್ಲಿ ಸಮಸ್ಯೆಗಳನ್ನು ವಿವರಿಸಲಾಗಿದೆ. ಅವುಗಳ ಜೊತೆಯಲ್ಲಿ ಇನ್ನೂ ಕೆಲವೊಂದು ಸಮಸ್ಯೆಗಳು ಬಾಹ್ಯವಾಗಿ ಮತ್ತು ಅಂತರಿಕವಾಗಿ ಕಾಡುತ್ತಿವೆ. ಈ ಸಮಸ್ಯೆಗಳ ಬಗ್ಗೆ ಒಂದು ಪಕ್ಷಿನೋಟ ಹಾಗೂ ಪರಿಹಾರ ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ.

೧. ಕೇಂದ್ರ ಮತ್ತು ರಾಜ್ಯಸರ್ಕಾರಗಳಲ್ಲಿ ಅಧಿಕಾರಿಗಳ ಹಂಚಿಕೆ

೨. ತಂತ್ರಜ್ಞಾನದ ಅಸಮರ್ಪಕ ಬಳಕೆ ಹಾಗೂ ಕನ್ನಡದ ನಿರ್ಲಕ್ಷೆ

೩. ಕನ್ನಡಗರಿಗೆ ಕನ್ನಡ ಬಳಸುವ ಮನೋಧರ್ಮ ಇಲ್ಲದಿರುವುದು

೪. ತಂತ್ರಾಂಶಗಳ ಕೊರತರ

೫. ಅಂತರ್ಜಾಲದ ಆಧುನೀಕರಣ ಮತ್ತು ಪ್ರಭಾವ

೬. ಜಾಗತಿಕ ಮತ್ತು ಆಧುನೀಕರಣದ ನೆಲೆಯಲ್ಲಿ ಕನ್ನಡ ಭಾಷೆಯ ಮೇಲೆ ನಡೆಯುತ್ತಿರುವ ಹುನ್ನಾರ
೭. ಯೋಜನೆಗಳನ್ನು ಖಾಸಗಿಯವರಿಗೆ ನೀಡಿರುವುದು
೮. ನೀತಿಗಳಲ್ಲಿನ ತೊಡಕುಗಳು
೯. ಇಂಗ್ಲೀಷಿನ ವ್ಯಾಮೋಹ
೧೦. ಪ್ರಾದೇಶಿಕ ವಲಯದಲ್ಲಿನ ಭಾಷೆಯಲ್ಲಿ ಭಿನ್ನತೆ
೧೧. ಗಡಿನಾಡ ಭಾಷೆಗಳ ಪ್ರಭಾವ
೧೨. ಭಾಷಾ ಅಲ್ಪಸಂಖ್ಯಾತರು

೬.೧.೧. ಅಧಿಕಾರಗಳ ಹಂಚಿಕೆ

ಕೇಂದ್ರದಲ್ಲಿ ಆಡಳಿತಯಂತ್ರದ ಚುಕ್ಕಾಣಿಯನ್ನು ಹಿಡಿದ ಮುಖ್ಯ ಸರ್ಕಾರವು ಕೇಂದ್ರದಲ್ಲಿ ರಾಜ್ಯಗಳಿಗೆ ಇಲಾಖೆಗಳನ್ನು ಹಂಚಿಕೊಟ್ಟಿದೆ. ಕೇಂದ್ರದ ಇಲಾಖೆಗಳ ಹಂಚಿಕೆ ಪಟ್ಟಿ ಪ್ರಕಾರ ರಾಜ್ಯದಲ್ಲಿರುವ ಕೇಂದ್ರದ ಇಲಾಖೆಗಳು ಅವುಗಳ ಆದಾಯ ವೆಚ್ಚ ಎಲ್ಲಾ ವಿಷಯಗಳು ಕೇಂದ್ರಕ್ಕೆ ಸಂಬಂಧಪಟ್ಟವುಗಳಾಗಿದ್ದು ರಾಜ್ಯಸರ್ಕಾರವು ಇವುಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ ಮತ್ತು ಅವುಗಳನ್ನು ಪ್ರಶ್ನಿಸುವಂತಿಲ್ಲ. ಕೇಂದ್ರವು ರಾಜ್ಯದಲ್ಲಿ ದೊಡ್ಡ ದೊಡ್ಡ ಇಲಾಖೆಗಳನ್ನು ಹೊಂದಿ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ. ಆದರೆ ಕರ್ನಾಟಕದಲ್ಲಿ ಆಡಳಿತ ನಿರ್ವಹಿಸುತ್ತಿರುವ ಕೇಂದ್ರದ ಇಲಾಖೆಗಳ ಭಾಷೆ ಹಿಂದಿ ಅಥವಾ ಇಂಗ್ಲೀಷ್. ಆದರೆ ಇಲ್ಲಿ ಆಡಳಿತ ನಿರ್ವಹಿಸುವ ಕೇಂದ್ರದ ಇಲಾಖೆಗಳು ಕನ್ನಡವು ಸಂಬಂಧವಿಲ್ಲ ಎನ್ನುವ ರೀತಿಯಲ್ಲಿ ವರ್ತಿಸುತ್ತಿವೆ. ಇದಕ್ಕೆ ಭಾಷಾನೀತಿಯೇ ಮುಖ್ಯ ಕಾರಣ.

ಈ ಒಂದು ಪರಿಸ್ಥಿತಿ ಆಡಳಿತದಲ್ಲಿ ಕನ್ನಡ ಬಳಕೆಗೆ ಕೇಂದ್ರದ ಇಲಾಖೆಗಳಲ್ಲಿನ ತೊಡಕು ಮತ್ತು ಇತರೆ ಇಲಾಖೆಗಳಲ್ಲಿ ಕನ್ನಡ ಬಳಕೆಗೆ ಹಿಂಜರಿಕೆಯಾಗಿದೆ. ಕೇಂದ್ರವು ಹೇಳುವಂತೆ ರಾಷ್ಟ್ರಭಾಷೆ ಹಿಂದಿ, ಅಂತರಾಷ್ಟ್ರೀಯ ಭಾಷೆ ಇಂಗ್ಲೀಷ್. ರಾಜ್ಯಭಾಷೆ ಅಲ್ಲಿನ ರಾಜ್ಯಗಳ ಪ್ರಾದೇಶಿಕಕ್ಕೆ ಸಂಬಂಧಪಟ್ಟದ್ದು. ಆ ಕಾರಣಕ್ಕೆ ಕೇಂದ್ರದ ಇಲಾಖೆಗಳು ಇಡೀ ದೇಶಕ್ಕೆ ಸಂಬಂಧಪಟ್ಟದಾದುದ್ದರಿಂದ ಕೇಂದ್ರದ ಇಲಾಖೆಗಳ ಆಡಳಿತ ಹಿಂದಿ ಮತ್ತು ಇಂಗ್ಲೀಷ್‌ನಲ್ಲಿ ನಡೆಯುತ್ತವೆ ಎಂಬುದು ಅವರವಾದ. ಆದರೆ ಕೆಲವೊಂದು ಕೇಂದ್ರದ ಇಲಾಖೆಗಳು ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಇಲ್ಲಿನ ವ್ಯವಸ್ಥೆಗಳಿಗೆ ಸಂಬಂಧಪಟ್ಟಂತೆ ಆಡಳಿತ ನೆಡೆಸುವುದು ಸೂಕ್ತವೆಂಬುದು ಭಾವನೆ.

ಪರಿಹಾರ: ಆಡಳಿತದಲ್ಲಿ ಕೇಂದ್ರ ಮತ್ತು ರಾಜ್ಯದ ಕಚೇರಿಗಳಲ್ಲಿ ಭಿನ್ನತೆ ಇರುವುದು ಕಂಡು ಬರುತ್ತದೆ. ಈ ಒಂದು ಭಿನ್ನತೆ ಏಕಸೌಮ್ಯವಾಗಿರಬೇಕು ಹೀಗಿದ್ದಾಗ ಏಕರೂಪ ಆಡಳಿತವನ್ನು ಜಾರಿಗೆತರಲು ಸಾಧ್ಯವಾಗುತ್ತದೆ. ಹಾಗೂ ಕೇಂದ್ರದ ನೀತಿಗಳು ಬದಲಾಗಬೇಕಿದೆ. ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರದ ಹಿಡಿತದಲ್ಲಿರುವ ಇಲಾಖೆಗಳಿಗೂ ಕನ್ನಡವನ್ನು ಬಳಸುವಲ್ಲಿ ಆದೇಶಗಳನ್ನು ಹೊರಡಿಸಬೇಕಾಗಿದೆ. ಹೀಗಾಗಿ ಕೇಂದ್ರವ ಇಲಾಖೆಗಳು ಸಹ ಕನ್ನಡದ ಬಳಕೆ ಮಾಡಲು ಸಾಧ್ಯವಾಗುತ್ತದೆ.

ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರದ ಇಲಾಖೆಗಳಾದ ರೈಲ್ವೆ, ಭಾರತ ಸಂಚಾರ ನಿಗಮ, ಅಂಚೆ, ಕೇಂದ್ರೀಯ ಅಬಕಾರಿ, ಆದಾಯ ತೆರಿಗೆ ಇಲಾಖೆ, ಹಾಗೂ ಇತರೆ ಇಲಾಖೆಗಳಲ್ಲಿ ಪ್ರಾಥಮಿಕ ಹಂತದಲ್ಲಾದರೂ ಕನ್ನಡ ಬಳಕೆ ಅಗತ್ಯವಾಗಿ ಮಾಡುವಂತೆ ಕೇಂದ್ರದಲ್ಲಿ ವಿಧೇಯಕಗಳು ರಚನೆಗೊಂಡು ಅನುಮೋದನೆಗೊಳ್ಳಬೇಕಾಗಿದೆ. ಹೀಗಾದಾಗ ಕರ್ನಾಟಕದಲ್ಲಿ ಆಡಳಿತನಡೆಸುವ ಕೇಂದ್ರದ ಇಲಾಖೆಗಳಲ್ಲಿಯೂ ಕೂಡ ಪಾರದರ್ಶಕತೆ ಕಂಡುಕೊಳ್ಳಲು ಸಾಧ್ಯ. ಮಲತಾಯಿಯ ಧೋರಣೆಯನ್ನು ತಡೆಗಟ್ಟಲು ತಕ್ಕಮಟ್ಟಿಗೆ ಸಾಧ್ಯವಾಗುತ್ತದೆ. ಆಡಳಿತದಲ್ಲಿ ಕನ್ನಡವನ್ನು ಕೇಂದ್ರದ ಇಲಾಖೆಗಳಿಗೂ ಜಾರಿಗೊಳಿಸಲು ಸಹಾಯಕಾರಿಯಾಗುತ್ತದೆ.

೬.೧.೨. ತಂತ್ರಜ್ಞಾನದ ಅಸಮರ್ಪಕ ಬಳಕೆ ಹಾಗೂ ಕನ್ನಡದ ನಿರ್ಲಕ್ಷ್ಯ

ಒಂದು ಆಡಳಿತ ಯಂತ್ರವು ತ್ವರಿತಗತಿಯಲ್ಲಿ ಸಾಗಲು ಜನಗಳಿಗೆ ಉತ್ತಮ ಮತ್ತು ಸಮರ್ಪಕವಾಗಿ ಆಡಳಿತವನ್ನು ನೀಡಲು ಆಡಳಿತದಲ್ಲಿ ತಂತ್ರಜ್ಞಾನದ ಬಳಕೆ ಅತಿಮುಖ್ಯ. ನಿಗಧಿತ ಸಮಯಕ್ಕೆ ಸರಿಯಾಗಿ ಕಾರ್ಯನಿರ್ವಹಣೆ ಮಾಡುವುದು ಆಡಳಿತದ ಬಹುಮುಖ್ಯ ಉದ್ದೇಶ. ಈ ಉದ್ದೇಶಗಳ ಹಿನ್ನಲೆಯಲ್ಲಿ ಅಂತರ್ಜಾಲ, ಮಿಂಚೆ, ಪ್ಯಾಕ್ಸ್ ಎಂತೆಲ್ಲಾ ತಂತ್ರಾಂಶಗಳನ್ನು ತಯಾರಿಸಿ ಆಡಳಿತವನ್ನು ಸುಲಭ ರೀತಿಯಲ್ಲಿ ಬಳಕೆ ಆಗುವಂತೆ ಸ್ವಲ್ಪ ಮಟ್ಟಿಗೆ ಮಾಡಲಾಯಿತು ಈ ಬದಲಾವಣೆಗಳನ್ನು ಒಪ್ಪಿಕೊಳ್ಳಬೇಕಿದೆ. ಬೆಳೆಯುತ್ತಿರುವ ಜನಸಂಖ್ಯೆ ಮತ್ತು ಅಧುನೀಕರಣಕ್ಕಾನುಗುಣವಾಗಿ ತಂತ್ರಜ್ಞಾನ ಮತ್ತು ತಂತ್ರಾಂಶಗಳು ಬೆಳಕಿಗೆ ಬರಬೇಕಿದೆ ಈ ನಿಟ್ಟಿನಲ್ಲಿ ಇವುಗಳ ಬೆಳವಣಿಗೆ ಮತ್ತು ಬಳಕೆಯಲ್ಲಿ ಮಾಡಲಾದ ದಿಟ್ಟ ಹೆಜ್ಜೆ ಎನ್ನಬಹುದು.

ಆದರೆ ತಂತ್ರಜ್ಞಾನದ ಅಸಮರ್ಪಕ ಬಳಕೆ ಹಾಗೂ ಕನ್ನಡವನ್ನು ಅಲ್ಲೆಗಳೆದಿರುವುದು ಒಳನೋಟಕ್ಕೆ ಕಂಡುಬರುತ್ತದೆ. ಉದಾ: ಪೊಲೀಸ್ ಇಲಾಖೆಯಲ್ಲಿನ ಪ್ರಥಮ ವರ್ತಮಾನ ವರದಿಯಲ್ಲಿ ಬಳಕೆಯಾದ ಭಾಷೆ ನೇಮಕಾತಿಗಳಿಗಾಗಿ ಸಲ್ಲಿಕೆಯಾಗುವ ಅರ್ಜಿಗಳನ್ನು ಸಲ್ಲಿಸುವಲ್ಲಿ ಬಳಕೆಯಾಗುವ ಭಾಷೆ, ದಿನನಿತ್ಯ ಬಸ್ಸಿನಲ್ಲಿ ಪ್ರಯಾಣಿಸುವ ಟಿಕೇಟಿನಲ್ಲಿ ಮುದ್ರಿತವಾದ ಭಾಷೆ. ನೆಮ್ಮದಿ ಕೇಂದ್ರದಲ್ಲಿ ಬಳಸುತ್ತಿರುವ ಭಾಷೆ ಹಾಗೂ ಇತರೆ ವಿಷಯಗಳನ್ನು ಗಮನಿಸಿದಾಗ ಅವುಗಳೆಲ್ಲವೂ ಇಂಗ್ಲೀಷ್‌ನಲ್ಲೇ ಇರುವುದು ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಆಡಳಿತವೆಲ್ಲವೂ ಕನ್ನಡದಲ್ಲಿ ನಡೆಯಬೇಕೆಂಬುದು ಕೇವಲ ದಾಖಲೆಗಳಲ್ಲಿ ಮಾತ್ರವೆಂದಾಗುತ್ತದೆ ಈ ಪರಿಕಲ್ಪನೆ ಬದಲಾವಣೆಯಾಗಬೇಕಿದೆ.

ಪರಿಹಾರ: ಬೆಳೆಯುತ್ತಿರುವ ಆಧುನಿಕರಣದಲ್ಲಿ ತಂತ್ರಾಂಶಗಳ ತಯಾರಿಕೆಯಲ್ಲಿ ಯಾವ ಕೊರತೆಯೂ ಕಾಣುವುದಿಲ್ಲ. ಆದರೆ ಪರಿಪೂರ್ಣವಾಗಿ ಕನ್ನಡದಲ್ಲಿ ತಂತ್ರಾಂಶಗಳನ್ನು ತಯಾರಿಸುವ ತಂತ್ರಜ್ಞರು ಮನಸು ಮಾಡಬೇಕು ಅಷ್ಟೆ. ಅವರಿಗೆ ಪ್ರೋತ್ಸಾಹ ನೀಡಿದಾಗ ಮಾತ್ರ ತಂತ್ರಜ್ಞರಿಂದ ಎಂತಹ ತಂತ್ರಾಂಶಗಳನ್ನಾದರೂ ರಚಿಸಲು ಸಾಧ್ಯ. ಅವುಗಳ ಸಮರ್ಪಕ ಬಳಕೆಯನ್ನು ಆಡಳಿತದಲ್ಲಿ ಮಾಡಲು ಸಾಧ್ಯ ಮೊದಮೊದಲಿಗೆ ಕಷ್ಟವೆನಿಸಿದರೂ ನಂತರದಲ್ಲಿ ಅವು ಪರಿಸ್ಥಿತಿ ಕಾಲಮಾನಕ್ಕೆ ತಕ್ಕಂತೆ ಒಗ್ಗಿಕೊಳ್ಳುತ್ತವೆ ಎಂಬುದು ಸತ್ಯ.

ಈ ರೀತಿಯಲ್ಲಿ ತಂತ್ರಜ್ಞರ ಮನೋಭಾವವು ಬದಲಾಗಿ ಕನ್ನಡ ತಂತ್ರಾಂಶಗಳನ್ನು ತಯಾರಿಸುವಲ್ಲಿ ಮತ್ತು ಅವುಗಳನ್ನು ಸಮರ್ಪಕವಾಗಿ ಬಳಸುವಲ್ಲಿ ಕ್ರಮಕೈಗೊಳ್ಳಬೇಕಾಗಿದೆ. ರಚಿತವಾದ ತಂತ್ರಾಂಶಗಳ ಬಳಕೆ ಆಡಳಿತದಲ್ಲಿ ಸಕ್ರಿಯವಾಗಿ ನಡೆಯಬೇಕಿದೆ ಖಜಾನೆ-೨, ಖಜಾನೆ-೧, ರೇಶನ್‌ಕಾರ್ಡ್, ಆಧಾರ ಕಾರ್ಡ್ ಹಾಗೂ ಅಂತರ್ಜಾಲದ ಪ್ರವೇಶ ಇವೆಲ್ಲವುಗಳ ಆಧಾರದ ಮೇಲೆ ಕನ್ನಡದಲ್ಲಿ ತಂತ್ರಾಂಶಗಳ ರಚನೆಗೊಳ್ಳಬೇಕಿದೆ.

೬.೧.೩. ಕನ್ನಡರಿಗೆ ಕನ್ನಡ ಬಳಸುವ ಮನೋಧರ್ಮ ಇಲ್ಲದಿರುವುದು

ಕನ್ನಡಿಗರಾಗಿರುವ ನಮಗೆ ಒಂದು ದುರದೃಷ್ಟಕರವಾದ ವಿಷಯವೇನೆಂದರೆ, ಕರ್ನಾಟಕದಲ್ಲಿ ವಾಸಿಸುವ ಹಲವಾರು ಕನ್ನಡಿಗರಿಗೆ ಕನ್ನಡ ಬಳಸುವ ಮನೋಧರ್ಮ ಇಲ್ಲವಾಗಿದೆ. ಗ್ರಾಮಾಂತರ ಪ್ರದೇಶದಿಂದ ಹಿಡಿದು ಪ್ರತಿಯೊಂದು ಜಿಲ್ಲೆಯನ್ನೊಳಗೊಂಡು ರಾಜ್ಯದ ರಾಜಧಾನಿಯವರಗೆ ನೋಡಿದರೆ ಕನ್ನಡಿಗರಿಗೆ ಕನ್ನಡವನ್ನು ಬಳಸುವ ಮನೋಧರ್ಮ ಇಲ್ಲವಾಗಿದೆ. ಇದಕ್ಕೆ ಸಾಕ್ಷಿ ನಾಯಿ ಕೊಡೆಗಳಂತೆ ತಲೆ ಎತ್ತುತ್ತಿರುವ ಇಂಗ್ಲೀಷ್ ಶಾಲೆಗಳು. ದಾಖಲೆ ಪ್ರಕಾರ ಅವುಗಳನ್ನು ಇಂಗ್ಲೀಷ್ ಶಾಲೆಗಳನ್ನೆವಂತಿಲ್ಲ ಅವೆಲ್ಲಾ ಕನ್ನಡ ಶಾಲೆಗಳೇ. ಆದರೆ ಅಲ್ಲಿನ ಬೋಧನೆ ಕಲಿಕೆ ಎಲ್ಲವೂ ಇಂಗ್ಲೀಷ್. ಪ್ರಥಮ ಶಿಕ್ಷಣವನ್ನು ಮಕ್ಕಳಿಗೆ ಕನ್ನಡದಲ್ಲೆ ನೀಡಬೇಕೆನ್ನುವ ಸರ್ಕಾರದ ಆದೇಶವಿದ್ದರೂ ಅವುಗಳನ್ನೆಲ್ಲಾ ಗಾಳಿಗೆತೂರಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಶಾಲೆಗಳು. ಅದಕ್ಕೆ ಕಾವಲೆಂಬಂತೆ ಶಿಕ್ಷಣ ಅಧಿಕಾರಿಗಳು ಜಾಣಕುರುಡನ್ನು ಪ್ರದರ್ಶಿಸಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಹೆಚ್ಚು ಜನ ಇಂಗ್ಲೀಷ್‌ಗೆ ಮುಗಿಬಿದ್ದು ಕನ್ನಡವನ್ನು ಬಳಸುವ ಮನೋಧರ್ಮವನ್ನು ಮರೆತಿದ್ದಾರೆ. ಎನ್ನುವುದು ಸಾಕಷ್ಟು ಉದಾಹರಣೆಗಳಿಂದ ಸ್ಪಷ್ಟ ಪಡಿಸಬಹುದಾಗಿದೆ.

ಕನ್ನಡಿಗರಿಗೆಲ್ಲಾ ಕನ್ನಡ ಉಳಿಸಿ, ಬೆಳೆಸಿ ಹಾಗೂ ಬಳಸುವ ಮನೋಧರ್ಮವೇ ಇಲ್ಲವೆಂದಾದಲ್ಲಿ ಹೇಗೆ ತಾನೆ ಕನ್ನಡದ ಬಳಕೆ ಸಾಧ್ಯವಾಗುತ್ತದೆ. ಅಲ್ಲಲ್ಲಿ ಕಾಣುವ ಭಾಷಾಭಿಮಾನದ ಜನಗಳಿಂದ, ಹಿತಚಿಂತಕರಿಂದ, ಕನ್ನಡಭಾಷೆಯನ್ನು ಉಳಿಸಲು ಸಾಧ್ಯವೇ? ಎನ್ನುವ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಆದರೆ ಇದು ಒಬ್ಬರಿಂದ ಮಾತ್ರ ಸಾಧ್ಯವಾಗುವುದಿಲ್ಲವೆಂಬ ಸತ್ಯವೂ ತಿಳಿದಿದೆ. ಹೀಗಾಗಿ ಕನ್ನಡಿಗರಿಗೆ ಮೊದಲು ನಾವು ಕನ್ನಡಿಗರೆಂಬ ಭಾವನೆ ಮತ್ತು ಕನ್ನಡ ಬಳಸುವ ಮನೋಧರ್ಮ ಬರಬೇಕಿದೆ.

ಪರಿಹಾರ: ಮೇಲಿನ ಅಂಶವನ್ನು ನೋಡಲಾಗಿ ಇದೊಂದು ಕನ್ನಡಕ್ಕೆ ಮತ್ತು ಕನ್ನಡ ಬಳಕೆಗೆ ಅಂಟಿದ ಪಿಡುಗು ಎನ್ನಬಹುದು. ಕನ್ನಡಿಗರಿಗೆ ಕನ್ನಡ ಬಳಸುವ ಮನೋಧರ್ಮವನ್ನು ಬದಲಾಯಿಸುವುದು ತುಸುಕಷ್ಟವೇ. ಅವರ ಮನೋಧರ್ಮವು ಈಗಾಗಲೇ ಇಂಗ್ಲೀಷಿನತ್ತ ವಾಲಿರುವುದು ಸ್ಪಷ್ಟವಾಗಿ ಕಾಣುತ್ತದೆ. ಇಂಗ್ಲೀಷನ್ನು ತಮ್ಮ ದಿನನಿತ್ಯದ ಒಡನಾಟದಲ್ಲಿ ಮನೆ ಮಾತಾಗಿಸಿಕೊಂಡಿದ್ದಾರೆ. ಮಕ್ಕಳಿಗೆ ಶಿಕ್ಷಣವನ್ನು ಇಂಗ್ಲೀಷಿನಲ್ಲೇ ನೀಡಬೇಕೆಂಬ ನಿರ್ಧಾರಕ್ಕೆ ಕಟ್ಟು ಬಿದ್ದಿದ್ದಾರೆ. ನಾವು ಓದದಿದ್ದರೂ ಪರವಾಗಿಲ್ಲ ನಮ್ಮ ಮಕ್ಕಳು ಇಂಗ್ಲೀಷನ್ನು ಓದಲಿ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಇಂಗ್ಲೀಷನ್ನು ಕಲಿತರೆ ಎಲ್ಲಾ ಕಲಿತಂತೆ ಎನ್ನುವ ಭಾವನೆ ಮನೆಮಾಡಿದೆ. ಇಂಗ್ಲೀಷನ್ನು ಅನ್ನ ನೀಡುವ ಭಾಷೆಯೆಂದು ನಂಬಿರುವಷ್ಟರ ಮಟ್ಟಿಗೆ ವ್ಯಾಮೋಹ ಹೆಚ್ಚಿದೆ.

ಈ ನಿಟ್ಟಿನಲ್ಲಿ ಪರಿಹಾರವನ್ನು ಹೇಳುವುದಾದರೆ, ಕನ್ನಡಿಗರಿಗೆ ಕನ್ನಡದ ಬಗ್ಗೆ ಜಾಗೃತಿ ಮೂಡಿಸುವ ಕೆಲಸವಾಗಬೇಕಿದೆ. ಇದರ ಮೂಲಕ ಅವರ ಮಾನಸಿಕವಾಗಿ ದೃಢವಾದ ಅವರ ಮನೋಧರ್ಮ ಬದಲಾಗಬೇಕಿದೆ. ಇದಕ್ಕೆ ಸಂಬಂಧಪಟ್ಟಂತೆ ಕಟ್ಟುನಿಟ್ಟಿನ ಯೋಜನೆಗಳು, ರೂಪರೇಷೆಗಳು ರೂಪಗೊಳ್ಳಬೇಕು ಹಾಗೂ ರೂಪಗೊಂಡ ಯೋಜನೆಗಳು, ರೂಪುರೇಶಗಳು ಸರಿಯಾಗಿ ಕಾರ್ಯರೂಪಕ್ಕೆ ಬರಬೇಕು ಹಾಗೂ ಅವು ಕಾರ್ಯರೂಪಕ್ಕೆ ಬಂದನಂತರ ಸರಿಯಾದ ರೀತಿಯಲ್ಲಿ ಫಲಪ್ರದಾಯಕತೆಯನ್ನು ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕೆಂಬುದು ಅಭಿಪ್ರಾಯ. ಮತ್ತೊಂದು ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ವಿಶಾಲವಾದ ಕನ್ನಡಿಗರಿಗೆ ಕನ್ನಡ ಬಳಕೆಯ ಮನೋಧರ್ಮ ಬರಲು ಎಂತಹ ಯೋಜನೆಗಳನ್ನು ರೂಪುರೇಷೆಗಳನ್ನು ರಚಿಸಬೇಕೆಂಬ ಪ್ರಶ್ನೆ ಮೂಡುತ್ತದೆ ಹೀಗಾಗಿ ಇದೊಂದು ಸವಾಲೇ ಸರಿ.

೬.೧.೪. ತಂತ್ರಾಂಶಗಳ ಕೊರತೆ

ಆಡಳಿತದಲ್ಲಿ ಕನ್ನಡ ಬಳಕೆಯನ್ನು ಮಾಡುತ್ತಿರುವುದು ಭಾಗಶಃ ಇಂದು ಗಣಕಯಂತ್ರಗಳ ಮುಖಾಂತರವಾಗಿಯೇ ಎಂಬುದು ಸತ್ಯ ಎಲ್ಲೋ ಅಲ್ಲೋಂದು ಇಲ್ಲೋಂದು ಕಚೇರಿಗಳನ್ನು ಬಿಟ್ಟರೆ ಉಳಿದೆಲ್ಲಾ ಕಚೇರಿಗಳು ಗಣಕಯಂತ್ರಗಳ ಮುಖಾಂತರವಾಗಿ ಆಡಳಿತದಲ್ಲಿ ಕಾರ್ಯನಿರ್ವಹಿಸುತ್ತವೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಸೂಕ್ತ ಆಡಳಿತ ನಿರ್ವಾಹಣೆಗಾಗಿ ಹಾಗೂ ಆಡಳಿತದಲ್ಲಿ ಕನ್ನಡ ಬಳಕೆಗಾಗಿ ಇನ್ನೂ ತಂತ್ರಾಂಶಗಳ ಕೊರತೆ ಎದ್ದುಕಾಣುತ್ತದೆ.

ಅಲ್ಲದೇ ಪ್ರಸ್ತುತ ಸಂದರ್ಭದಲ್ಲಿ ತಯಾರಿಸಿ ಆಡಳಿತ ನಿರ್ವಾಹಣೆಗಾಗಿ ನೀಡಲಾದ ತಂತ್ರಾಂಶಗಳಾದ ಖಜಾನೆ-೧, ಮತ್ತು ೨, ಪಡಿತರಚೀಟಿ, ಕಚೇರಿಗೆ ಬರುವ ದಾಖಲಾಗುವ ಪತ್ರಗಳ ತಂತ್ರಾಂಶ ಹಾಗೂ ಆವಕ-ಜಾವಕಗಳ ತಂತ್ರಾಂಶಗಳು ಇನ್ನೂ ಕನ್ನಡದಲ್ಲಿ ಸ್ಪಷ್ಟವಾಗಿ ರೂಪಗೊಳಬೇಕಿದೆ ಹಾಗೂ ಬದಲಾಗಬೇಕಿದೆ. ಕನ್ನಡದ ಬಳಕೆಗಾಗಿ ತಯಾರಿಸಲಾದ ನುಡಿ ತಂತ್ರಾಂಶವೊಂದನ್ನು ಬಿಟ್ಟರೆ ಉಳಿದೆಲ್ಲಾ ತಂತ್ರಾಂಶಗಳು ಪೂರ್ಣವಾಗಿ ರಚನೆಗೊಂಡರೂ ದೋಷಪೂರಿತವಾಗಿವೆ ಎಂದು ಹೇಳಬಹುದು.

೧. ಕಚೇರಿಗೆ ದಿನಾಲು ಬರುವ ಪತ್ರಗಳ ದಾಖಲೆ ನಿರ್ವಾಹಣೆಯ ತಂತ್ರಾಂಶ

೨. ೩೭೧(ಜೆ) ಪ್ರಮಾಣ ಪತ್ರ ನೀಡಲು ತಯಾರಾದ ತಂತ್ರಾಂಶ

೩. ಖಜಾನೆ-೨ರ ತಂತ್ರಾಂಶ

೪. ದೃಢೀಕೃತ ಸಹಿಗಾಗಿ ತಂತ್ರಾಂಶ (digital signature)

೫. ಸದಸ್ಯರ ನೋಂದಾಣಿ

೬. ಅನೇಕ ಅರ್ಜಿಗಳನ್ನು ಸಲ್ಲಿಸುವ ತಂತ್ರಾಂಶಗಳು ಒಂದಲ್ಲಾ ಒಂದು ರೀತಿಯಲ್ಲಿ ಕನ್ನಡದ ಬಳಕೆ ಇಲ್ಲದಿರುವುದು ಕಂಡುಬರುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ತಂತ್ರಾಂಶಗಳ ಕೊರತೆಯೊಂದನ್ನೇ ಹೇಳುತ್ತಿಲ್ಲ ಬದಲಾಗಿ ಅವುಗಳ ಸಮರ್ಪಕ ತಯಾರಿಕೆ ಮತ್ತು ಪೂರೈಕೆಯಾಗುತ್ತಿಲ್ಲ ಎಂಬುದು ಸತ್ಯ. ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ತಂತ್ರಾಂಶಗಳ ಕೊರತೆಗೆ ಕಾರಣಗಳೇನು ಮತ್ತು ಮಾರ್ಗೋಪಾಯಗಳನ್ನು ವಿವರಿಸಲಾಗಿದೆ ಅವುಗಳ ಸಹಿತ ಈ ಸಮಸ್ಯೆಗಳಿಗೆ ಕಾರಣವಾಗುತ್ತವೆ.

ಪರಿಹಾರ: ತಂತ್ರಾಂಶಗಳ ಕೊರತೆಗಳನ್ನು ನೀಗಿಸುವುದು ಮತ್ತು ಅವುಗಳನ್ನು ಕನ್ನಡದಲ್ಲಿ ಸಮರ್ಪಕವಾಗಿ ತಯಾರಾಗುವಂತೆ ಮಾಡುವುದು ಸರ್ಕಾರದ ಮಹತ್ತರ ಜವಾಬ್ದಾರಿಯಾಗಿದೆ. ಈಗಿರುವ ತಂತ್ರಾಂಶಗಳನ್ನು ಪರಿಶೀಲಿಸಿ ಅಗತ್ಯಕ್ಕೆ ತಕ್ಕಂತೆ ಮಾರ್ಪಾಟುಗಳನ್ನು ಮಾಡಿ ತದನಂತರದಲ್ಲಿ ತಂತ್ರಾಂಶಗಳು ರೂಪುಗೊಳ್ಳಬೇಕಿದೆ. ಇನ್ನೊಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸುವುದೇನೆಂದರೆ, ಕನ್ನಡದಲ್ಲಿ ಹಲವಾರು ತಂತ್ರಾಂಶಗಳು ರಚನೆಗೊಂಡಿದ್ದರೂ ಅವುಗಳನ್ನು ಬಳಸುವ ಮನೋಧರ್ಮ ಆಡಳಿತದಲ್ಲಿನ ಸಿಬ್ಬಂದಿ ವರ್ಗದವರಿಗೆ ಇಲ್ಲದ್ದಾಗಿದೆ ಹಾಗೂ ಬೇಸರ ವ್ಯಕ್ತವಾಗುತ್ತಿರುವುದು ಆಡಳಿತವಲಯದಲ್ಲಿ ಕಂಡುಬರುತ್ತಿದೆ.

ಇಂಗ್ಲೀಷಿನ ತಂತ್ರಜ್ಞಾನ ಸುಲಭ ಎಂದು ಅವುಗಳನ್ನು ಇಚ್ಚೆಪಟ್ಟು ಮುಂದುವರಿಸಿಕೊಂಡು ಹೋಗುವ ಜಾಯಮಾನ ಸಿಬ್ಬಂದಿವರ್ಗದವರಿಗೆ ಇದೆ. ಈ ಮನೋಧರ್ಮ ಬದಲಾವಣೆಯಾಗಬೇಕಿದೆ. ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಶ್ರಮವಹಿಸಿ ರೂಪಿಸಿದ ತಂತ್ರಾಂಶಗಳನ್ನು ಸರಿಯಾಗಿ ಬಳಸಬೇಕಿದೆ ಅವುಗಳಲ್ಲೇನಾದರೂ ತೊಂದರೆಗಳು ಕಂಡು ಬಂದರೆ ಸರಿಪಡಿಸಿಕೊಳ್ಳಲು ಸಲಹೆ ಮತ್ತು ಸಹಕಾರಗಳನ್ನು ನೀಡಿದಲ್ಲಿ ತಂತ್ರಾಂಶಗಳ ತಯಾರಕರು ಸಿಬ್ಬಂದಿವರ್ಗದವರ ಬೇಕು ಬೇಡಿಕೆಗಳನ್ನು ಈಡೇರಿಸುವಲ್ಲಿ ಅವರ ಸಲಹೆಗಳನ್ನು ಸ್ವೀಕರಿಸಿ ತಂತ್ರಾಂಶಗಳಲ್ಲಿ ಬದಲಾವಣೆಯನ್ನು ತರಲು ಸಾಧ್ಯವಾಗುತ್ತದೆ.

ಸಿಬ್ಬಂದಿವರ್ಗದವರೇ ಅದು ಸರಿಯಾಗಿಲ್ಲ ಬಿಟ್ಟುಬಿಡಿ ಇಂಗ್ಲೀಷಿನದ್ದೆ ಸರಿಯಾಗಿದೆ ಅದನ್ನೆ ಮುಂದುವರೆಸಿ ಎಂಬ ಭಾವನೆ ತಾಳಿದಾಗ ತಂತ್ರಾಂಶಗಳ ಸಮರ್ಪಕ ಬಳಕೆ ಆಗದೇ ಕೊರತೆಯುಂಟಾಗುತ್ತದೆ. ತಂತ್ರಾಂಶಗಳ ತಯಾರಿಕೆಗೆ ಕನ್ನಡಿಗರು ಪ್ರೋತ್ಸಾಹ, ಆರ್ಥಿಕ ಸಹಾಯವನ್ನು ನೀಡಬೇಕಾಗುತ್ತದೆ. ಆಡಳಿತದಲ್ಲಿ ಕನ್ನಡ ಬಳಕೆಯನ್ನು ಜಾರಿಗೆ ತರುವಲ್ಲಿ ತಂತ್ರಜ್ಞರ ಮನೋವೃತ್ತಿಯೂ ಬದಲಾಗಬೇಕಿದೆ ಇಂಗ್ಲೀಷಿಗೆ ಕಟ್ಟಿಬಿದ್ದ ಇವರ ಜಾಯಮಾನ ಕನ್ನಡದ ಕಡೆಗೆ ವಾಲಬೇಕಿದೆ ದೊಡ್ಡ ದೊಡ್ಡ ಕಾರ್ಖಾನೆ, ಉದ್ದಿಮೆ ವ್ಯಾಪಾರಿಗಳಿಗೆ ಉತ್ತಮ ತಂತ್ರಾಂಶಗಳನ್ನು ರೂಪಿಸುವ ಇವರು ಆಡಳಿತದಲ್ಲಿ ಕನ್ನಡ ಬಳಕೆಯ ಸಂದರ್ಭದಲ್ಲಿ ಕನ್ನಡದಲ್ಲಿಯೇ ತಂತ್ರಾಂಶಗಳನ್ನು ತಯಾರಿಸಿಕೊಡುವ ಸಾಧನೆ ಮಾಡಬೇಕಿದೆ. ಇದಕ್ಕೆ ಸರ್ಕಾರದ ಬೆಂಬಲ ಭಾಷಾ ವಿದ್ವಾಂಸರ ಬೆಂಬಲ ಅವಶ್ಯವಾಗಿ ಬೇಕಿದೆ. ಒಂದು ತಂತ್ರಾಂಶಗಳ ರಚನೆ ಎಂಬುದು ಸುಲಭದ ಮಾತಲ್ಲ. ಅದನ್ನು ರಚಿಸಿದ ಮೇಲೆ ಪ್ರಾಯೋಗಿಕವಾಗಿ ನಿರ್ವಹಣೆ ಆದ ಮೇಲೆ ಅದರಲ್ಲಿನ ಓರೆಕೋರೆಗಳನ್ನು ತಿದ್ದುವ ತಂತ್ರಾಂಶಗಳ ಕೊರತೆ ಇಲ್ಲಿ ಎರಡು ಅರ್ಥದಲ್ಲಿ ಕಾಣಬಹುದಾಗಿದ್ದು

೧. ತಂತ್ರಾಂಶಗಳನ್ನು ರೂಪಗೊಳ್ಳುವಲ್ಲಿನ ಕೊರತೆ

೨. ತಂತ್ರಾಂಶಗಳ ಸಮರ್ಪಕ ಬಳಕೆಯಲ್ಲಿನ ಕೊರತೆ

ಅವನ್ನು ಗಮನದಲ್ಲಿಟ್ಟುಕೊಂಡು ಆಡಳಿತಕ್ಕೆ ಬೇಕಾದಂತಹ ತಂತ್ರಾಂಶಗಳನ್ನು ಭಾಷಾತಜ್ಞರ ನೆರವಿನಿಂದ ರಚಿಸಬೇಕಾದ ಉತ್ತಮ ಕಾರ್ಯವಾಗಬೇಕಿದೆ ಹಾಗೂ ನಂತರದಲ್ಲಿ ಅದು ಕಾರ್ಯರೂಪಕ್ಕೂ ಬರಬೇಕಿದೆ.

೬.೧.೫. ಅಂತರ್ಜಾಲದ ಆಧುನೀಕರಣ ಮತ್ತು ಪ್ರಭಾವ

ತಂತ್ರಾಂಶಗಳ ಆಧುನೀಕರಣದಿಂದ ದಿನನಿತ್ಯ ಹೊಸಹೊಸ ಅವಿಷ್ಕಾರಗಳು ನಡೆಯುತ್ತಲಿದ್ದು ದಿನದಿಂದ ದಿನಕ್ಕೆ ಒಂದಲ್ಲ ಒಂದು ಬದಲಾವಣೆಗಳನ್ನು ಅಂತರ್ಜಾಲ ಹೊಂದುತ್ತಲಿದೆ. ಕೂತಲ್ಲಿಯೇ ಪ್ರತಿಯೊಂದು ವಿಷಯಗಳ ಮಾಹಿತಿ ಪುಸ್ತಕಗಳ ಸಹಾಯವಿಲ್ಲದೇನೆ, ಹುಡುಕುವ ಗೋಜಿಗೆ ಹೋಗದೇನೆ ಬೇಕಾದ ಮಾಹಿತಿಯನ್ನು ಪಡೆಯಬಹುದಾದ ಕಾಲ ಇಂದಿನದು. ಆಧುನೀಕರಣ ಹೊಂದುತ್ತಿರುವ ಸಂದರ್ಭದಲ್ಲಿ ಇದರ ಪ್ರಭಾವ ಆಡಳಿತದ ಮೇಲೆ ಇದೆ. ಹಾಗೂ ಆಡಳಿತದಲ್ಲಿ ಕೆಲವೊಂದು ವಿಷಯ ಹಾಗೂ ಇಲಾಖೆಗಳಲ್ಲಿ ಪರಿಪೂರ್ಣವಾಗಿ ಆಡಳಿತದ ರೂಪವನ್ನೆ ಅಂತರ್ಜಾಲ ಬದಲಿಸಿದೆ.

ಹೀಗಿರುವ ನಿಟ್ಟಿನಲ್ಲಿ ಇದರ ಪ್ರಭಾವ ಆಡಳಿತ ಕನ್ನಡದ ಮೇಲೆ ಇದ್ದೇ ಇದೆ. ಈ ಹಿಂದೆ ಚರ್ಚಿಸಿದಂತೆ ಆಡಳಿತದ ವಿಷಯಗಳನ್ನು ಪರಿಶೀಲಿಸುವ ಮತ್ತು ನೋಡುವ ಸಂದರ್ಭದಲ್ಲಿ ಇಂಗ್ಲೀಷ್ ಇದಕ್ಕೆ ಭದ್ರ ಬುನಾದಿಯಾಗಿದೆ. ಪ್ರತಿಯೊಂದು ವಿಷಯಗಳು ಇಂಗ್ಲೀಷಿನಲ್ಲಿ ಭಿತ್ತರವಾಗುತ್ತಿದ್ದು ಅಲ್ಲೊಂದು ಇಲ್ಲೊಂದು ಎಂಬಂತೆ ಕನ್ನಡ ಭಾಷೆಯ ಬಳಕೆ ಕಂಡುಬರುತ್ತದೆ. ಪೂರ್ಣಪ್ರಮಾಣದಲ್ಲಿ ನಿಖರವಾಗಿ ಕನ್ನಡ ಅಂತರ್ಜಾಲ ತಾಣವು ಬೇರೆ ಭಾಷೆಗಳಿಗೆ ಹೋಲಿಸಿದರೆ ಕನ್ನಡದ ಪಾಲು ಕಡಿಮೆ ಎನ್ನಬಹುದು.

ಪರಿಹಾರ: ಆಧುನೀಕರಣದ ದಿನಗಳಲ್ಲಿ ಅಂತರ್ಜಾಲದ ತಾಣಗಳಲ್ಲಿ ಇಲಾಖೆಗಳು ತಮ್ಮ ಕಾರ್ಯಕಲಾಪಗಳ ಪ್ರವೇಶ ಪಡೆಯುವುದರಿಂದ ಹಿಡಿದು ಮುಕ್ತಾಯದವರೆಗೊ ಸಂಪೂರ್ಣವಾಗಿ ಕನ್ನಡದಲ್ಲಿ ಅಂತರ್ಜಾಲಗಳು ತಯಾರಾಗುಬೇಕಿದೆ. ಇದನ್ನು ಆಡಳಿತ ವಿಷಯಕ್ಕೆ ಸಂಬಂಧಿಸಿಂತೆ ಮಾತ್ರ ಹೇಳಬಯಸುತ್ತೇನೆ. ಈಗಿರುವ ಅಂತರ್ಜಾಲದಲ್ಲಿನ ಕನ್ನಡ ತಾಣಗಳು ಸಂಪೂರ್ಣವಾಗಿ ಕನ್ನಡ ಪರವಾಗಬೇಕಿದೆ. ಈ ನಿಟ್ಟಿನಲ್ಲಿ ಹಲವಾರು ಬದಲಾವಣೆಗಳು ಆಗಬೇಕು. ಆದರೆ ಎಲ್ಲಾ ವಿಷಯವನ್ನು ಪರಿಶೀಲಿಸಲಾಗಿ ಖಾಸಗೀಕರಣ ಹಾಗೂ ಖಾಸಗೀಯವರ ಅಟ್ಟಹಾಸ ಅಂತರ್ಜಾಲದಲ್ಲಿ ಕಾಣುತ್ತಿದ್ದು ವ್ಯವಹಾರ, ವ್ಯಾಪಾರ, ಬ್ಯಾಕಿಂಗ್, ಮುಂತಾದವುಗಳ ಭರಾಟೆಯ ಮಧ್ಯದಲ್ಲಿ ಕನ್ನಡ ಬಳಕೆ ಗೌಣವಾಗಿದೆ. ಕನ್ನಡದಲ್ಲಿ ನಂತರ ಕಾಣುವ ಮತ್ತು ವ್ಯವಹಾರದ ಏನೇ ಪ್ರಕ್ರಿಯೆಗಳನ್ನು ಅಥವಾ ಕಾರ್ಯಗಳನ್ನು ನಡೆಸಿಕೊಳ್ಳಬೇಕಾದಲ್ಲಿ ಕನ್ನಡದಲ್ಲಿ ಸಾಧ್ಯವಿಲ್ಲ ಅವುಗಳನ್ನು ಮತ್ತೆ ಇಂಗ್ಲೀಷ್ ಕಿಟಕಿಗಳ ಮೂಲಕವೇ ಕಾರ್ಯನಿರ್ವಹಣೆ ಮಾಡಬೇಕಾಗುತ್ತದೆ.

Email, Fax, Message, Video Sending online. ಮುಂತಾದ ವಿಷಯಗಳನ್ನು ನಿರ್ವಹಿಸಿದ ಸಂದರ್ಭದಲ್ಲಿ ಕನ್ನಡದ ಕಿಟಕಿಗಳು ಇರದೇ ಇವೆಲ್ಲವೂ ಇಂಗ್ಲೀಷ್ ಕಿಟಕಿಯ ಮೂಲಕ ವ್ಯವಹರಿಸಬೇಕು. ಕನ್ನಡ ಕಿಟಕಿಗಳು ಇದ್ದರೂ ಅವುಗಳನ್ನು ಬಳಸುವ ಮನೋಭಾವ ನಮ್ಮ ಜನರಿಗೆ ಇಲ್ಲದಿರುವುದು ದುರಂತ. ಮತ್ತು ಪ್ರಾರಂಭದಲ್ಲಿ ಇಂಗ್ಲೀಷಿನ ಮುಖಾಂತರ ಪ್ರವೇಶಪಡೆದು ಆನಂತರದಲ್ಲಿ ಕನ್ನಡದ ಮೂಲಕ ಪ್ರಕ್ರಿಯೆಗಳನ್ನು ಪ್ರಾರಂಭಿಸುವ ಪರಿಪಾಠ ಅಂತರ್ಜಾಲದಲ್ಲಿದೆ. ಇವೆಲ್ಲವುಗಳ ಆಡಳಿತದ ದೃಷ್ಟಿಯಿಂದ ಕನ್ನಡದ ಬಳಕೆ ಆಗಬೇಕಿದೆ.

೬.೧.೬. ಜಾಗತಿಕ ಮತ್ತು ಆಧುನೀಕರಣದ ನೆಲೆಯಲ್ಲಿ ಕನ್ನಡ ಭಾಷೆಯ ಮೇಲೆ ನೆಡೆಯುತ್ತಿರುವ ಹುನ್ನಾರ.

ಅತಿಯಾದ ಆಧುನೀಕರಣದ ಹಿನ್ನೆಲೆಯಲ್ಲಿ ಜಾಗತಿಕ ಮಟ್ಟದಲ್ಲಿ ಇಂಗ್ಲೀಷಿಗೆ ಮಣೆಹಾಕಿದಷ್ಟು ಕನ್ನಡ ಭಾಷೆಗೆ ಮಣೆಹಾಕಲಾಗಿಲ್ಲ. ಜಾಗತಿಕ ನೆಲೆಯು ಕನ್ನಡ ಭಾಷೆಯನ್ನು ಹಿಂದಿಕ್ಕುವ ಮತ್ತು ಹತ್ತಿಕ್ಕುವ ಮಾತುಗಳು ಬರುತ್ತಿರುವುದು ಸತ್ಯ. ಜಾಗತಿಕ ಮಟ್ಟದಲ್ಲಿ ಇನ್ನೂ ಕನ್ನಡ ಭಾಷೆಗೆ ಬೇಕಾದ ಸ್ಥಾನಮಾನಗಳು ಸಿಕ್ಕಿಲ್ಲ. ಕನ್ನಡ ಶಾಸ್ತ್ರೀಯ ಭಾಷೆಯಾಗುವ ನಿಟ್ಟಿನಲ್ಲಿ ಎಷ್ಟು ಹೊರಾಟ ನಡೆಸಬೇಕಾಯಿತೋ, ಆ ಹೋರಾಟದ ಫಲವಾಗಿ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕರೂ ಅದು ಇನ್ನೂ ಪ್ರಾಯೋಗಿಕವಾಗಿ ಸರಿಯಾಗಿ ಜಾರಿಗೆ ಬಂದಿಲ್ಲ. ಈ ನಿಟ್ಟಿನಲ್ಲಿ ಜಾಗತಿಕ ನೆಲೆಯಲ್ಲಿ ಆಧುನೀಕರಣದ ಹಿನ್ನೆಲೆಯಲ್ಲಿ ನಮ್ಮ ಭಾಷೆ ಇನ್ನೂ ಜಾಗತಿಕ ನೆಲೆಯ ಮಟ್ಟಕ್ಕೆ ಆಧುನೀಕರಣಕ್ಕೆ ಹೊಂದಿಕೊಳ್ಳುವಂತೆ ಬೆಳೆದಿಲ್ಲ. ಜಾಗತಿಕ ನೆಲೆಯಲ್ಲಿ ನಿಂತುಕೊಳ್ಳುವಷ್ಟು ಸಮರ್ಥತೆಯನ್ನು ಹೊಂದಿಲ್ಲ ಎಂಬ ಮಾತುಗಳು ಜಾಗತಿಕ ನೆಲೆಯಲ್ಲಿ ಕೇಳಿಬರುತ್ತಿವೆ.

ಸುದೀರ್ಘ ಇತಿಹಾಸ ಹೊಂದಿರುವ ಕನ್ನಡಕ್ಕೆ ತನ್ನದೆ ಆದ ಸ್ಥಾನಮಾನಗಳಿದ್ದರೂ, ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆಯುವ ಮೂಲಕ ಈ ಮಾತುಗಳಿಗೆ ಎದುರೇಟುಗಳನ್ನು ನೀಡಬಲ್ಲ ಸಾಮರ್ಥ್ಯವನ್ನು ಕನ್ನಡ ಹೊಂದಿದೆ. ಜಾಗತಿಕ ನೆಲೆಯಲ್ಲಿ ಹರಿದಾಡುತ್ತಿರುವ ಮಾತುಗಳೇನೆ ಇದ್ದರೂ ಒಟ್ಟಾರೆಯಾಗಿ ಕನ್ನಡವನ್ನು ಹಾಗೂ ಆಡಳಿತ ಭಾಷೆಯಾಗಿ ಕನ್ನಡವನ್ನು ಹತ್ತಿಕ್ಕುವ ಹುನ್ನಾರವು ನಡೆಯುತ್ತಿದೆ. ಜಾಗತಿಕ ನೆಲೆಯಲ್ಲಿ ಕನ್ನಡವನ್ನೆ ಆಡಳಿತ ಭಾಷೆಯಾಗಿ ಏಕೆ ಬಳಸಬೇಕು? ವಿವಿಧ ಭಾಷೆಯ ಜನರು, ವಿವಿಧ ಪ್ರದೇಶಗಳಲ್ಲಿ ವಾಸಿಸುತ್ತಿರುವುದರಿಂದ ಎಲ್ಲರಿಗೂ ಅನುಕೂಲವಾಗುವ ಭಾಷೆಯ ಮುಖಾಂತರ ಆಡಳಿತ ನಡೆಸುವುದರಿಂದ ಆಡಳಿತಕ್ಕೆ ಒಳ್ಳೆಯ ಆಯಾಮ ನೀಡಿದಂತಾಗುತ್ತದೆ. ಆಡಳಿತ ಭಾಷೆ ಕನ್ನಡವೇ ಏಕಾಗಬೇಕೆನ್ನುವ ಪ್ರಶ್ನೆಗಳು ಆಡಳಿತ ವಲಯದಲ್ಲಿ ಕೇಳಿಬಂದಿದ್ದವು. ಆದರೆ ಕಾಲಕಳೆದಂತಲ್ಲಾ ಕನ್ನಡ ಭಾಷೆಯ ವಿಶಾಲತೆ ಹಾಗೂ ಅದರ ಬಳಕೆಯನ್ನು ಗಮನಿಸಿದ ನಂತರದಲ್ಲಿ ಆಡಳಿತ ಭಾಷೆಯ ಬಗ್ಗೆ ಆಡಿದ ಮಾತುಗಳು ಅಲ್ಲಲ್ಲಿ ಮಾಯವಾಗುತ್ತಿವೆ. ಜಾಗತಿಕ ನೆಲೆಯಲ್ಲಿ ಆಧುನೀಕರಣದ ಹೆಸರಿನಲ್ಲಿ ಕನ್ನಡ ಭಾಷೆಯನ್ನು ಹತ್ತಿಕ್ಕುವ ಹುನ್ನಾರ ನಡೆಯುತ್ತಿದೆ. ಇದಕ್ಕೆ ಸಾಕ್ಷಿ ಎಂಬಂತೆ ವೊಡೋಫೋನ್ ಸಂಸ್ಥೆಯ ಕಂಪನಿಯೊಂದು ಮೇಲ್ಮನವಿ ಸಲ್ಲಿಸಿ ಪ್ರಕರಣವು ತಮ್ಮ ಪರವಾಗಿ ಆದ ವಿಚಾರವನ್ನು ಮತ್ತೊಮ್ಮೆ ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ಪರಿಹಾರ: ಜಾಗತಿಕ ನೆಲೆಯಲ್ಲಿ ಹಾಗೂ ಆಧುನೀಕರಣದ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಮೇಲೆ ನಡೆಯುತ್ತಿರುವ ಹುನ್ನಾರ ನಿಲ್ಲಬೇಕಿದೆ ಹಾಗೂ ಜಾಗತಿಕ ನೆಲೆಯಲ್ಲಿ ಕನ್ನಡಕ್ಕೆ ಸ್ಥಾನಮಾನಗಳು ಸಿಗಬೇಕಿದೆ. ಜಾಗತಿಕ ನೆಲೆಯಲ್ಲಿ ಹರಿದಾಡುತ್ತಿರುವ ಇತರೆ ಭಾಷೆಗಳಿಗೆ ಯಾವ ಸ್ಥಾನಮಾನಗಳು ದೊರೆಯುತ್ತಿವೆಯೋ ಆ ಸ್ಥಾನಮಾನಗಳು ಕನ್ನಡ ಭಾಷೆಗೆ ಸಿಕ್ಕು ಕನ್ನಡ ಭಾಷೆಯಮೇಲಿರುವ ಧೋರಣೆಗಳು ನಿಲ್ಲಬೇಕಿದೆ. ಸರ್ಕಾರವು ಈ ನಿಟ್ಟಿನಲ್ಲಿ ಚಿಂತಿಸಿ ಹೊಸ ಹೊಸ ರೂಪರೇಶಗಳನ್ನು ರಚಿಸಬೇಕಿದೆ. ಹಾಗೂ ಜಾಗತಿಕ ಮಟ್ಟದಲ್ಲಿ ಕನ್ನಡ ಭದ್ರವಾಗಿ ನೆಲೆಯೂರಲು ಸುಭದ್ರವಾದ ಯೋಜನೆಗಳು ರಚನೆಗೊಳ್ಳಬೇಕು. ರಚನೆಗೊಂಡ ಯೋಜನೆಗಳು ಕಾರ್ಯರೂಪಕ್ಕೆ ಬರಬೇಕು. ಕಾರ್ಯ ರೂಪಕ್ಕೆ ಬಂದ ಯೋಜನೆಗಳು ಪ್ರತಿಫಲಗಳನ್ನು ನೀಡಬೇಕು. ಅಂತಹ ಯೋಜನೆಗಳು ಸಿದ್ದಗೊಳ್ಳಬೇಕಿದೆ. ಜಾಗತಿಕ ನೆಲೆಯಲ್ಲಿ ಕನ್ನಡಭಾಷೆಯೂ ಸುಲಭವಾಗಿ ನಿಲ್ಲಬಹುದೆಂಬುದನ್ನು ತೋರಿಸಬೇಕಾಗಿದೆ. ಆಧುನೀಕರಣದ ಹೆಸರಿನಲ್ಲಿ ಕನ್ನಡ ಭಾಷೆಯನ್ನು ಹತ್ತಿಕ್ಕುವ ಸಂದರ್ಭಗಳ ಪರಿಸ್ಥಿಗಳು ,ಬದಲಾಯಿಸಬೇಕಾಗಿದೆ.

೬.೧.೭. ಖಾಸಗಿ ಸಹಭಾಗಿತ್ವ.

ಸರ್ಕಾರವು ಆಡಳಿತವನ್ನು ನಡೆಸುತ್ತಿರುವ ಸಂದರ್ಭದಲ್ಲಿ ಮೂರನೇಯ ವ್ಯಕ್ತಿಗಳ ಹಿತಾಶಕ್ತಿಗಳನ್ನು ಕಾಪಾಡಲು ಆಡಳಿತ ನಿರ್ವಹಿಸವವರು ಬೇರೆಯವರಿಗೆ ಅಥವಾ ಯಾರಿಗೋ ಲಾಭವಾಗಲಿ ಎಂಬ ದೃಷ್ಟಿಕೋನವನ್ನು ಮನದಲ್ಲಿ ಇಟ್ಟುಕೊಂಡು ಪರೋಕ್ಷವಾಗಿ ಜನಗಳಿಗೆ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲವು ಯೋಜನೆಗಳ ನಿರ್ವಹಣೆಗಾಗಿ ಖಾಸಗಿಯವರಿಗೆ ಅನುಮತಿ ನೀಡುವುದು ಕಾಣುತ್ತೇವೆ. ಪರೋಕ್ಷವಾಗಿ ಅವರನ್ನು ಆಡಳಿತದ ಒಂದು ಭಾಗವಾಗಿ ಪರಿಗಣಿಸುತ್ತಿರುವುದು ಶೋಚನೀಯ ಸಂಗತಿಯೂ ಆಗಿದೆ. ಸರ್ಕಾರದ ಮಹತ್ತರ ಕಾರ್ಯನಿರ್ವಹಣೆಯ ಕೆಲವು ಯೋಜನೆಗಳನ್ನು ಅವುಗಳ ನಿರ್ವಹಣೆಗಾಗಿ ಖಾಸಗಿಯವರಿಗೆ ನೀಡಿರುವುದು ಹಾಗೂ ಅವುಗಳಲ್ಲಿ ಬ್ರಷ್ಟಾಚಾರ ನಡೆಯುತ್ತಿರುವುದು ಭ್ರಷ್ಟ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಸಾರ್ವಜನಿಕರಿಗೆಲ್ಲರಿಗೂ ಉಪಯೋಗವಾಗಲೆಂದು ಆಡಳಿತದಲ್ಲಿ ಪಾರದರ್ಶಕತೆಯನ್ನು ತರುವ ನಿಟ್ಟಿನಲ್ಲಿ ಸರ್ಕಾರವು ಒಂದುಕಡೆ ಯೋಚಿಸಿದರೆ ಅದರ ಉಪಯೋಗ ಖಾಸಗಿ ನೆಲೆಯಲ್ಲಿ ವಿರುದ್ದವಾಗಿ ಪರಿಣಮಿಸುತ್ತಿದೆ. ಸದರಿ ಯೋಜನೆಯನ್ನು ನಿರ್ವಹಿಸುವವರು ತಮ್ಮ ಕಾರ್ಯ ಸಾಧನೆಗಾಗಿ ತ್ವರಿತಗತಿಯ ವಿಲೇವಾರಿಗಾಗಿ ಭಾಷೆಯ ಬಳಕೆಯ ಬಗ್ಗೆ ಹಾಗೂ ಆಡಳಿತ ಕನ್ನಡದ ಬಗ್ಗೆ ಯೋಚಿಸಲಾರರು ಯೋಚಿಸಿದರೂ ಸಂಪೂರ್ಣವಾಗಿ ಕಾರ್ಯಗತಕ್ಕೆ ತರಲಾರರು. ಇರುವ ಕಾಳಜಿ ಆಡಳಿತದಲ್ಲಿ ಕನ್ನಡವನ್ನು ತರುವ ನಿಟ್ಟಿನಲ್ಲಿ ಇರುವುದಿಲ್ಲ ಬದಲಾಗಿ ಯೋಜನೆಗಳ ನಿರ್ವಹಣೆ ಮತ್ತು ಅದಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಮಾಡುವ ಮಾತ್ರಕ್ಕೆ ಮಾತ್ರ ಸಿಮಿತವಾಗಿರುತ್ತದೆ.

ಉದಾ: ಪಡಿತರ ಚೀಟಿಗಳಿಗೆ ಅನ್‌ಲೈನ್ ಮುಖಾಂತರ ಅರ್ಜಿಸಲ್ಲಿಸುವಿಕೆ ಮತ್ತು ಅದರ ನಿರ್ವಹಣೆ, ಆಧಾರ ಕಾರ್ಡ್‌ಗಳ ನೋಂದಾಣಿ, ಇರತೆ ತಂತ್ರಾಂಶಗಳ ತಯಾರಿಸುವ ನಿರ್ವಹಣೆ ಮತ್ತು ಕೆಲವೊಂದು ಆಡಳಿತದಲ್ಲಿ ಬಳಕೆಯಾಗುತ್ತಿರುವ ತಂತ್ರಾಂಶಗಳು, ರೂಪುರೇಷುಗಳ ಸಿದ್ದಪಡಿಸುವಿಕೆ.

ಪರಿಹಾರ; ಯಾವುದೇ ರೀತಿಯ ಯೋಜನೆಗಳನ್ನು ಸರ್ಕಾರದ ಹಂತಗಳಲ್ಲಿ ಕಾರ್ಯಗತಗೊಳಿಸಲು ಯೋಚಿಸುವುದಾದರೆ ಅವುಗಳನ್ನು ಸಂಬಂಧಪಟ್ಟ ಇಲಾಖೆಗಳ ಮುಖಾಂತರ ನಿರ್ವಹಿಸುವುದು ಸೂಕ್ತ. ಹಾಗೂ ಅದಕ್ಕೆ ಸಂಬಂಧಿಸಿದ ಪೂರ್ವ ತಯಾರಿ ಹಾಗೂ ಯೋಜನೆಗಳ ರೂಪುರೇಷಗಳು ಮತ್ತು ಯೋಜನೆಗೆ ಸಂಬಂಧಿಸದಂತೆ ಅನ್ವಯಿಸಬೇಕಾದ ತಂತ್ರಾಂಶಗಳ ಬಳಕೆ ಎಲ್ಲ ವಿಷಯಗಳನ್ನು ಅನುಷ್ಠಾನಕ್ಕೆ ತರುವ ಪೂರ್ವದಲ್ಲಿ ಕನ್ನಡದಲ್ಲಿ ಅದನ್ನು ಅನುಷ್ಠಾನಗೊಳಿಸಲು ಸಾಧ್ಯತೆಗಳನ್ನು ಗುರುತಿಸಿ ಕನ್ನಡದಲ್ಲಿಯೇ ಯೋಜನೆಗಳನ್ನು ಜಾರಿಗೆ ತರಲು ಶ್ರಮವಹಿಸಬೇಕು. ಹಾಗೂ ತರಲು ಪ್ರಯತ್ನಪಡಬೇಕು.

ಆಡಳಿತಕ್ಕೆ ಬೇಕಾದ ವಿವಿಧ ಯೋಜನೆಗಳನ್ನು ಸಿದ್ದಪಡಿಸುವ ಮತ್ತು ಅವುಗಳನ್ನು ತಂತ್ರಾಂಶಗಳಲ್ಲಿ ಅಳವಡಿಸುವ ಸಂದರ್ಭದಲ್ಲಿ ಕನ್ನಡದಲ್ಲಿಯೇ ಯೋಜನೆಗಳನ್ನು ಸಿದ್ದಪಡಿಸುವ ಸಂಕಲ್ಪ ತೊಡಬೇಕು. ಯಾವುದೊಂದು ವಿಚಾರಕ್ಕೆ ಪೂರ್ವಗ್ರಹ ಪಿಡಿತರಾಗಿ ಇಂಗ್ಲೀಷ್‌ಗೆ ಕಟ್ಟು ಬೀಳುವ ಪ್ರಸಂಗ ಉಂಟಾಗಬಾರದು. ಹಾಗೂ ಕಟ್ಟು ಬೀಳಲೂ ಬಾರದು. ಯೋಜನೆಗಳ ರೂಪುರೇಷಗಳು ಹಾಗೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ತಂತ್ರಾಂಶಗಳ ಅನ್ವಯಿಕೆಗಳು ಕನ್ನಡದಲ್ಲಿ ಸಿದ್ದಗೊಂಡು ಚಾಲನೆಗೆ ಬಂದಾಗ ಅದು ಆಡಳಿತದಲ್ಲಿ ಕನ್ನಡ ಬಳಕೆಗೆ ಹಿಡಿದ ಕೈಗನ್ನಡಿಯಾಗುತ್ತದೆ.

೬.೧.೮. ನೀತಿಗಳಲ್ಲಿನ ತೊಡಕುಗಳು

ಸರ್ಕಾರವು ಈಗಾಗಲೇ ದೇಶದಲ್ಲಿ ಹಾಗೂ ರಾಜ್ಯದಲ್ಲಿನ ಆಡಳಿತದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಹಲವಾರು ಭಾಷಾ ನೀತಿಗಳನ್ನು ಜಾರಿಗೆ ತಂದಿದೆ.

೧೯೬೩ರಲ್ಲಿ ಜಾರಿಗೆ ಬಂದ ಅಧಿಕೃತ ಭಾಷಾ ಕಾಯ್ದೆಯ ಪ್ರಕಾರ ಹಿಂದಿ ಅಧಿಕೃತ ಭಾಷೆ ಜೊತೆಗೆ ಇಂಗ್ಲೀಷ್ ಸಹಾಯಕ ಸ್ಥಾನದಲ್ಲಿ ಮುಂದುವರಿಕೆಯಾಗುವುದು ಉತ್ತಮವೆಂದು ಅಧಿಕೃತ ಭಾಷಾ ಕಾಯಿದೆ ಜಾರಿಮಾಡಿದ್ದನ್ನು ಮತ್ತೊಮ್ಮೆ ಇಲ್ಲಿ ನೆನಪಿಸಿಕೊಳ್ಳಬಹುದು. ಅದರಂತೆ ತ್ರಿಭಾಷೆ ಸೂತ್ರವನ್ನು ಜಾರಿಗೆ ತರಲಾಯಿತು. ತ್ರಿಭಾಷಾ ಸೂತ್ರವೆಂದರೆ ಒಂದು ರಾಜ್ಯದಲ್ಲಿ ಮೂರು ಭಾಷೆಗಳು ಕಡ್ಡಾಯವಾದ ಭಾಷೆಗಳಾಗಿರುತ್ತವೆ.

ಉದಾ:- ಕರ್ನಾಟಕದಲ್ಲಿ ಆಡಳಿತ ಭಾಷೆ ಕನ್ನಡ, ಹಿಂದಿ, ಇಂಗ್ಲೀಷ್.

ತಮಿಳುನಾಡಿನಲ್ಲಿ ಆಡಳಿತ ಭಾಷೆ ತಮಿಳು, ಹಿಂದಿ, ಇಂಗ್ಲೀಷ್.

ಈ ರೀತಿಯಾದ ಅಂಶ ಈ ತ್ರಿಭಾಷೆ ಸೂತ್ರದಲ್ಲಿರುತ್ತದೆ. ಆಡಳಿತದಲ್ಲಿ ನಂತರ ಜಾರಿಗೆ ಬಂದದ್ದು ದ್ವಿಭಾಷಾ ಸೂತ್ರ, ಇದರ ಪ್ರಕಾರ ಎರಡು ಭಾಷೆಗೆ ಪ್ರಮುಖ್ಯತೆ. ಮೇಲೆ ಹೇಳಿದಂತೆ ೧೯೬೩ರ ಭಾಷೆ ಅಧಿನಿಯಮದ ಪ್ರಕಾರ ಯಾವ ಭಾಷೆಯನ್ನು ಆಡಳಿತದಲ್ಲಿ ಯಾವ ಯಾವ ಸಂದರ್ಭದಲ್ಲಿ ಬಳಸಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ರಾಜ್ಯಸರ್ಕಾರ ಉದ್ದೇಶಗಳಿಗೆ ಉಪಯೋಗಿಸಬೇಕಾದ ಭಾಷೆ ಕನ್ನಡ ಎಂದು, ರಾಜ್ಯ ವಿಧಾನ ಮಂಡಲಗಳ ವ್ಯವಹರಣೆಗೆ ಇಂಗ್ಲೀಷ್‌ನ್ನು ಉಪಯೋಗಿಸಬಹುದೆಂದು ತಿಳಿಸುತ್ತದೆ. ಅದರೆ ೧೯೬೫ರಲ್ಲಿ ಇದಕ್ಕೆ ತಿದ್ದು ಪಡಿಯನ್ನು

ತಂದು ರಾಜ್ಯದ ವಿಧಾನ ಮಂಡಲಗಳ ಕಾರ್ಯನಿರ್ವಹಣೆಯನ್ನು ಕನ್ನಡ ಮತ್ತು ಹಿಂದಿ ಭಾಷೆಯ ಬಳಕೆಯ ಜೊತೆಗೆ ಇಂಗ್ಲೀಷ್ ಭಾಷೆಯ ಬಳಕೆ ಕಡ್ಡಾಯಗೊಳಿಸಿ ಮತ್ತಷ್ಟು ಗೊಂದಲಕ್ಕೆ ದಾರಿ ಮಾಡಿಕೊಟ್ಟಿತು. ೧೯೫೬ರಲ್ಲಿ ಇದಕ್ಕೆ ಇನ್ನೊಂದು ತಿದ್ದುಪಡಿಯನ್ನು ತಂದು ಸಚಿವಾಲಯ ಮತ್ತು ರಾಜ್ಯಸರ್ಕಾರದ ಅಂತರಿಕ ಕಚೇರಿಗಳಲ್ಲಿ ನಡೆಯುವ ಪತ್ರ ವ್ಯವಹಾರದಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸಲಾಯಿತು.

ಪರಿಹಾರ: ಸರ್ಕಾರ ರೂಪಿತ ಯೋಜನೆಗಳು ಆಡಳಿತದಲ್ಲಿ ಗೊಂದಲಗಳನ್ನು ಸೃಷ್ಟಿಸಿವೆ ಹೊರತು ಒಂದು ನಿರ್ದಿಷ್ಟ ಪರಿಮಿತಿಯನ್ನು ಹಾಕಿ ಕೊಟ್ಟಿಲ್ಲವೆನ್ನಬಹುದು. ಸರ್ಕಾರವು ಏನೆಲ್ಲಾ ಭಾಷಾ ನೀತಿ ಮತ್ತು ಯೋಜನೆಗಳನ್ನು ಜಾರಿಗೆ ತಂದರೂ ಇಂಗ್ಲೀಷ್‌ನ್ನು ಬಿಟ್ಟಿರದ ಮನೋಭಾವ, ಮತ್ತು ಉದ್ದೇಶ ಎದ್ದು ಕಾಡುತ್ತದೆ. ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಗೆ ಆಡಳಿತ ಕನ್ನಡವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ನಿಟ್ಟಿನಲ್ಲಿ ಯೋಚಿಸದ ಹಿನ್ನೆಲೆಯಲ್ಲಿ ಇಂಗ್ಲೀಷ್‌ನಿಂದ ಮುಕ್ತವಾಗಲು ಸಾಧ್ಯವಾಗುತ್ತಿಲ್ಲವೆಂಬ ಪ್ರಶ್ನೆ ಎದ್ದು ಕಾಡುತ್ತದೆ.

ಇದಕ್ಕೆ ಕಾರಣ ಭಾಷಾನೀತಿಗಳಲ್ಲಿನ ತೊಡಕುಗಳು ಹಾಗೂ ಜಾರಿಗೆಬಂದ ಕಾಯ್ದೆಗಳಲ್ಲಿನ ಗೊಂದಲಗಳು. ಪ್ರಾರಂಭದ ಸಂದರ್ಭದಲ್ಲಿ ಇಂಗ್ಲೀಷರು ನಮ್ಮನ್ನು ಆಳಿದರು ಅವರ ಭಾಷೆಯಲ್ಲಿಯೇ ಆಡಳಿತ ನಡೆಸಿದ್ದನ್ನು ಕಾಣಬಹುದು ಆದರೆ ಇದ್ದಕ್ಕಿದ್ದಂತೆಯೇ ಬದಲಾವಣೆಗಳಾಗಿ ಆಡಳಿತವೆಲ್ಲಾ ಕನ್ನಡಕ್ಕೆ ಆಗಬೇಕೆಂಬ ನಿಲುವು ಆಗಿನ ಸಂದರ್ಭಕ್ಕೆ ತುಸು ಕಷ್ಟವೇ ಸರಿ.

ಆದರೆ ಪ್ರಸುತ್ತ ಪರಿಸ್ಥಿತಿ ಬೇರೆಯಾಗಿದೆ ಸ್ವತಂತ್ರ ಪಡೆದು ೭೦ ದರ್ಶಗಳೇ ಕಳೆದಿವೆ ದಿನೆದಿನೆ ಆಧುನೀಕರಣ, ಜಾಗತಿಕರಣದ ಭರಾಟೆ ಹೆಚ್ಚಾಗಿದೆ. ಈ ಸಂದರ್ಭದಲ್ಲಾದರೂ ಕರ್ನಾಟಕದಲ್ಲಿ ಆಡಳಿತ ಕನ್ನಡವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಹೊಸ ಹೊಸ ಯೋಜನೆಗಳ ಸೃಷ್ಟಿಯಾದರೂ ಅನೇಕ ಆದೇಶಗಳಿದ್ದರೂ ಬದಲಾವಣೆ ತರಲು ಸಾಧ್ಯವಿಲ್ಲ. ಇಂಗ್ಲೀಷ್‌ಗೆ ಕಟ್ಟುಬಿದ್ದಿರುವ ನಮ್ಮ ಮನೋವೃತ್ತಿ ಬದಲಾಗಬೇಕಿದೆ. ಭಾಷಾನೀತಿಗಳ ತಿದ್ದುಪಡೆ ಅಥವಾ ಹೊಸ ಭಾಷಾನೀತಿಯು ರೂಪೂಗೊಳ್ಳಬೇಕಿದೆ. ಅಥವಾ ಇರುವ ಭಾಷಾನೀತಿಗಳಲ್ಲಿನ ಗೊಂದಲಗಳನ್ನು ಪರಿಹಾರ ಮಾಡಿಕೊಳ್ಳಬೇಕಿದೆ. ಹಾಗೂ ಆಡಳಿತದಲ್ಲಿ ಸಂಪೂರ್ಣವಾಗಿ ಕನ್ನಡ ಬಳಸುವುದನ್ನು ಜಾರಿಗೆ ತರಬೇಕಿದೆ.

೬.೧.೯. ಇಂಗ್ಲೀಷ್‌ನ ವ್ಯಾಮೋಹ

ಇಂಗ್ಲೀಷಿನ ವ್ಯಾಮೋಹಕ್ಕೆ ಬಿ. ಪಾರ್ಥಸಾರಥಿಯವರು ಹಾಗೂ ಹಾ.ಮಾ.ನಾಯಕವರು ಹೇಳಿರುವ ಒಂದು ಮಾತನ್ನು ಇಲ್ಲಿ ಸ್ಮರಿಸಬಹುದಾಗಿದೆ.

"ಈ ನಲವತ್ತು ವರ್ಷಗಳಲ್ಲಿ ಕಳೆದ ಎರಡು ನೂರು ವರ್ಷಗಳು ದಾಸ್ಯ ಪ್ರವೃತ್ತಿ ಕೆನೆಗಟ್ಟಿದೆ. ಒಂದೇ ಜಾಗದಲ್ಲಿ ನಾಯಿಯನ್ನು ಸತತವಾಗಿ ಕಟ್ಟಿಹಾಕಿ ಕೆಲ ಕಾಲದ ನಂತರ ಸರಪಳಿಗಳನ್ನು ಬಿಚ್ಚಿದರೂ ಅದು ಆ ಜಾಗವನ್ನು ಬಿಡುವುದಿಲ್ಲ ಆ ಜಾಗದಿಂದ ಸರಿಸಲು ಯಾರಾದರೂ ಅದಕ್ಕೆ ಜಾಡಿಸಿ ಒದೆಯಬೇಕೆಂದು ಕುವೆಂಪುರವರು ಒಂದೆಡೆ ಹೇಳಿದ್ದಾರೆ. ಭಾರತೀಯರು ಆ ಸರಪಳಿ

ನಾಯಿಯ ಮನೋಭಾವದಿಂದ ದೂರ ಸರಿದಿಲ್ಲ ಆ ಮನೋಭಾವವನ್ನು ಒದ್ದು ಓಡಿಸುವುವರೂ ಇಲ್ಲ. ಹೀಗಾಗಿ ದಾಸ್ಯಭಾವನೆಯ ಸೂರ ಹೊತ್ತು ನಮ್ಮತನದಿಂದ ವಂಚಿತರಾಗಿದ್ದೇವೆ." (ಬಿ.ಪಾರ್ಥಸಾರಥಿ 'ಆಡಳಿತದಲ್ಲಿ ಕನ್ನಡ' ಪುಟ ಸಂಖ್ಯೆ ೪೬) ಎಂದು ಹೇಳಿದ್ದಾರೆ. ಇದರಿಂದ ಗೋಚರಿಸುವುದೇನೆಂದರೆ ಇಂಗ್ಲೀಷ್ ಭಾಷೆಯಿಂದ ಹೊರಬರುವ ಮನಸ್ಸು ನಮಗೆ ಆಗುತ್ತಿಲ್ಲ ಹಾಗೂ ಇಂಗ್ಲೀಷ್ ಭಾಷೆಗೆ ನಮ್ಮ ಮನೋವೃತ್ತಿ ಕಟ್ಟಿಬಿದ್ದಿದೆ.

ಇಂಗ್ಲೀಷ್ ಒಂದು ಪ್ರತಿಷ್ಠಿತ ಭಾಷೆ ಅದನ್ನು ಕಲಿಯದಿದ್ದರೆ ಬದುಕು ಸಾರ್ಥಕ ವಲ್ಲವೆಂಬಂತೆ ಇಂದಿನ ವಿದ್ಯಾವಂತ ಸಮಾಜ ಚಿಂತಿಸುತ್ತಿದೆ. ಇಂಗ್ಲೀಷ್ ಎಂಬ ಸಂಕೋಲೆ ಪ್ರಜ್ಞಾವಂತ ಸಮಾಜವನ್ನು ಕಡ್ಡಾಯವಾಗಿ ಕನ್ನಡ ಬಳಸದೇ ಇರುವುಂತೆ ಮಾಡಿದೆ. ಇಂಗ್ಲೀಷ್ ಎಂಬ ಸಂಕೀರ್ಣತೆಗೆ ಮಾರು ಹೋಗಿದ್ದೇವೆ, ಇಂಗ್ಲೀಷಿನ ಜಾಯಮಾನಕ್ಕೆ ಜೋತು ಬಿದ್ದಿದ್ದೇವೆ. ಇಂಗ್ಲೀಷ್ ಭಾಷೆಯ ಪರಿಚಯ ಸ್ವಲ್ಪವಾದರೆ ಸಾಕು ಪ್ರಪಂಚವನ್ನು ಗೆದ್ದಂತಹ ಅನುಭವ ನಮಗಾಗುತ್ತದೆ. ಹೀಗಾಗಿ ಇಂಗ್ಲೀಷಿನ ವ್ಯಮೋಹವೇ ಆಡಳಿತದಲ್ಲಿ ಕನ್ನಡ ಬಳಕೆಯ ಸಂದರ್ಭದಲ್ಲಿ ತೊಡಕುಂಟಾಗುತ್ತಿರುವುದು, ತೊಡಕುಂಟಾಗಿದ್ದು, ತೊಟಕುಂಟಾಗುವುದು ಸತ್ಯ ಇದರಿಂದಾಗಿ ಇಂಗ್ಲೀಷಿನ ವ್ಯಾಮೋಹವನ್ನು ಬಿಡಬೇಕಿದೆ.

ಪರಿಹಾರ: ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕೆಂಬ ಹಂಬಲ ಮತ್ತು ಇಚ್ಛೆಯನ್ನು ಹೊಂದಿದ ಹಲವಾರು ಬ್ರಿಟೀಷ್ ಅಧಿಕಾರಿಗಳು ಕನ್ನಡ ಆಡಳಿತ ಭಾಷೆಯಾಗುವುದಕ್ಕೆ ಶ್ರಮಿಸಿದ್ದನ್ನು ನಾವು ಇತಿಹಾಸದ ಪುಟಗಳಿಂದ ತಿಳಿದುಕೊಳ್ಳುತ್ತೇವೆ. ಆದರೆ ದೃರದ್ದುಷ್ಟಕರ ಸಂಗತಿ ಎಂದರೆ ಕರ್ನಾಟಕದವರಾದ ನಾವುಗಳೇ ಕನ್ನಡ ಬಗ್ಗೆ ಸಂಕುಚಿತ ಭಾವನೆಯಲ್ಲಿ ಬದುಕುತ್ತಿದ್ದೇವೆ. ಮತ್ತು ಇಂಗ್ಲೀಷ್ ಭಾಷೆಯನ್ನು ಬಳಸುತ್ತಿದ್ದೇವೆ ಪ್ರಸ್ತುತ ಈ ಮನೊಭಾವನೆಯನ್ನು ಬಿಡಬೇಕಾಗಿದೆ.

೬.೧.೧೦. ಪ್ರಾದೇಶಿಕ ಭಾಷೆಯಲ್ಲಿ ಭಿನ್ನತೆ

ಪ್ರಾದೇಶಿಕ ಭಿನ್ನತೆಯಲ್ಲಿ ಕರ್ನಾಟಕವನ್ನು ಭಾಷೆಗಳ ಆಧಾರದ ಮೇಲೆ ಕೆಳಕಂಡಂತೆ ವಿಭಾಗಿಸಬಹುದಾಗಿದೆ.

ಕಲಬುರ್ಗಿ ಕನ್ನಡ–ಕಲಬುರ್ಗಿ, ಬೀದರ್, ರಾಯಚೂರು ಮತ್ತು ವಿಜಾಪುರ ಜಿಲ್ಲೆಗಳ ಉತ್ತರ ಮತ್ತು ಪಶ್ಚಿಮದ ಭಾಗಗಳು.

ಧಾರವಾಡ ಕನ್ನಡ–ಧಾರವಾಡ, ಗದಗ, ಬೆಳಗಾವಿ ಮತ್ತು ವಿಜಾಪುರ ಜಿಲ್ಲೆಯ ಕೆಲವು ಭಾಗಗಳು.

ಮಂಗಳೂರು ಕನ್ನಡ–ದಕ್ಷಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳು.

ಮೈಸೂರು ಕನ್ನಡ–ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು, ಹಾಸನ, ಕೋಲಾರ, ಚಿತ್ರದುರ್ಗ, ಶಿವಮೊಗ್ಗ, ಮತ್ತು ಚಿಕ್ಕಮಗಳೂರು.

ಇವುಗಳನ್ನು ಬಿಟ್ಟು ಇನ್ನುಳಿದ ಜಿಲ್ಲೆಗಳನ್ನು ಮಧ್ಯಡ ಕನ್ನಡ ಎಂತಲೂ ಕರೆಯಬಹುದಾಗಿದೆ. ಮೇಲಿನ ಪ್ರಾದೇಶಿಕ ಭಿನ್ನತೆಯಲ್ಲಿನ ಭಾಷೆಗಳನ್ನು ಈಗಾಗಲೇ ಮೂರನೆಯ ಅಧ್ಯಾಯದಲ್ಲಿ ಬಳಕೆ

ಮಾಡಿಕೊಳ್ಳಲಾಗಿದ್ದು ಪ್ರಸ್ತುತ ಪುನರಾವಲೋಕನದ ಕಾರಣಕ್ಕಾಗಿ ಇಲ್ಲಿ ಪುನಃ ಬಳಕೆ ಮಾಡಿಕೊಳ್ಳಲಾಗಿದೆ.

ಪ್ರಾದೇಶಿಕ ಭಿನ್ನತೆಯಿಂದ ಕೂಡಿದ ಕನ್ನಡವು ಮಾತಾಡುವುದರಲ್ಲಿ ಮತ್ತು ಸಾಮಾನ್ಯ ಬರಹದಲ್ಲಿ ಕಂಡುಬರುತ್ತಿದ್ದು, ಹಿಂದಿನಿಂದ ಬಂದ ಆಡಳಿತದಲ್ಲಿನ ಪದಗಳು ಅಂದರೆ ಉದಾ:– ಪೋರ್ಚುಗೀಸ್, ಉರ್ದು, ಇಂಗ್ಲೀಷ್ ಪದಗಳ ಬಳಕೆ ಹೆಚ್ಚಾಗಿ ಕಂಡುಬರುತ್ತವೆ. ಅಲ್ಲದೇ ಆಗಿನ ರಾಜರುಗಳು ಆಳ್ವಿಕೆ ನಡೆಸಿದ ಸಂದರ್ಭದಲ್ಲಿನ ಆಡಳಿತ ಪದಗಳ ಪ್ರಭಾವ ಇಂದಿಗೂ ಕಾಣಬಹುದು. ಆದ್ದರಿಂದ ಪ್ರಾದೇಶಿಕ ಭಿನ್ನತೆ ಹೊಂದಿದ ಭಾಗದ ಪ್ರದೇಶವನ್ನು ಹಿಂದಿನ ರಾಜರುಗಳಾಳಿದ ಕೇಂದ್ರಸ್ಥಾನದ ಹೆಸರನ್ನು ಕರೆಯುವುದು ಸೂಕ್ತ ಎನ್ನಬಹುದು.

ಕಲಬುರ್ಗಿ ಕನ್ನಡ– ಹೈದ್ರಾಬಾದ್ ಕರ್ನಾಟಕದ ಕನ್ನಡ – ಕಲ್ಯಾಣ ಕನ್ನಡ

ಧಾರವಾಡ ಕನ್ನಡ– ಮುಂಬಯಿ ಕರ್ನಾಟಕದ ಕನ್ನಡ – ಕಿತ್ತೂರು ಕನ್ನಡ

ಮಂಗಳೂರು ಕನ್ನಡ– ಘಟ್ಟಗಳಲ್ಲಿನ ಕರ್ನಾಟಕದ ಕನ್ನಡ– ಕರಾವಳಿ ಕನ್ನಡ

ಮೈಸೂರು ಕನ್ನಡ– ಮೈಸೂರು ಪ್ರಾಂತ್ಯದ ಕನ್ನಡ–ಮೈಸೂರು ಕನ್ನಡ.

ಎಂದು ನಾಮಕರಣ ಮಾಡಬಹುದೆಂದು ಅಲ್ಲಲ್ಲಿ ಸಾಮಾಜಿಕ ವಲಯದಲ್ಲಿ ಕೇಳಿಬರುತ್ತಿರುವ ಮಾತು.

ಪ್ರಾದೇಶಿಕ ಭಾಷೆಗಳಲ್ಲಿನ ವಿಶಿಷ್ಟತೆಗಳು:

ಕಲಬುರ್ಗಿ ಕನ್ನಡ ಭಾಷೆಗಳಲ್ಲಿನ ವಿಶಿಷ್ಟತೆಗಳು

೧. ಕಲಬುರ್ಗಿ ಕನ್ನಡದ ಕೆಲವು ವೈಶಿಷ್ಟ್ಯಗಳೆಂದರೆ, ಮೊದಲನೆಯದಾಗಿ ಹ್ರಸ್ವಸ್ವರದಿಂದ ಪ್ರಾರಂಭ

೧. ಪೂರ್ಣಕ್ರಿಯಾರೂಪಗಳು – ಹಾನ, ಹಾಳ, ಹಾರ (ಇದ್ದಾನೆ, ಇದ್ದಾಳೆ, ಇದ್ದಾರೆ)

೨. ನಾಮರೂಪಗಳ ಬಳಕೆ – ಕಂವ, ಕಿಂವ, ಕದು, ಕಿದು

೩. ಸ್ಥಾನ ನಿರ್ದೇಶಕ ಪದಗಳು – ಕಲ್ಲಿ, ಕಿಲ್ಲಿ, ಕಕಡೆ, ಕಿಕಡೆ

೨. ಅಲ್ಪಪ್ರಾಣ ಮಹಾ ಪ್ರಾಣಗಳಾಗುತ್ತವೆ.

ವೈರಿ – ಠೇಂ, ಕಬ್ಬು – ಖಬ್ಬು

೩. ಮೂರಕ್ಷರದ ಪದದ ಅಂತ್ಯಲೋಪ

ಮದುವೆ – ಮದಿ, ಹೊಂಟಿಯ – ಹೊಂಟೀ

೪. ಸಂಬಂಧವಾಚಿ – ಬಹುವಚನಗಳು – ಹ್ರಸ್ವಕ್ಕೆ ಬದುಲು ದೀರ್ಘ ಪ್ರಯೋಗ

ತಮ್ಮಂದಿರು – ತಮ್ಮದೇರು ಕುರಿಗಳು – ಕರಿಗೋಳು

೫. ಪಂಚಮಿ ವಿಭಕ್ತಿ ಮೇಲೆ – ಲಿಂದ ಪ್ರಯೋಗ

ಮನೆಯಿಂದ – ಮನೆಲಿಂದ ಬಜಾರ್‌ದಿಂದ – ಬಜಾರ್‌ಲಿಂದ

ಇದಲ್ಲದೆ –	ಮಾಡರಿ	ಮಾಡಾಮು	ಕೇಳಾಮಿ	ನೋಡಮಿ
	(ಮಾಡೋಣ)	(ಮಾಡೋಣ)	(ಕೇಳೋಣ)	(ನೋಡೋಣ)

ನೋಡಿದಪ್ಪಲೆ ಅದ - ನೋಡಿದಂತಿದೆ

ಕುಡಿಟ್ಗಿ ಬಂದ್ರ - ಕುಡಿಯುವಷ್ಟರಲ್ಲಿ ಬಂದರು

ತಿಂದ ಕೇಸಿ, ಹೇಳಕೇಸಿ, ಮಾಡಕೇರಿ, ನೊಡಿಕೇರಿ

ಧಾರವಾಡ ಕನ್ನಡ ಭಾಷೆಗಳಲ್ಲಿನ ವಿಶಿಷ್ಟತೆಗಳು

ಧಾರವಾಡ ಕನ್ನಡದ ಸೊಗಡೇ ಬೇರೆಯೇ ಇದ್ದು ಅದನ್ನು ಕೆಳಕಂಡಂತೆ ನೋಡಬಹುದಾಗಿದೆ.

೧. 'ಎ' ಕಾರ 'ಇ' ಕಾರವಾಗಿವುದು.

ಮನೆ-ಮನಿ, ಕೆರೆ-ಕೆರಿ, ಮಳೆ-ಮಳಿ, ಬೆಳೆ-ಬೆಳಿ.

೨. ಹತ್ಯಾನ-ಎಂಬುವ ಪದ "ಪ್ರಾರಂಭ" ಅರ್ಥದ ಪದವಾಗಿರುತ್ತದೆ.

ಅವ ಮರಹತ್ತಾಕತ್ಯಾನ, ಅವ ಇಳಿಲಿಕತ್ಯಾನ, ಅವ ಒಡ್ಲಿಕತ್ಯಾನ, ಅವ ಆಡ್ಲಿಕತ್ಯಾನ

೩. 'ಉ' ಕಾರಾಂತ ಶಬ್ದಗಳು 'ಅ' ಕಾರಾಂತವಾಗುವವು.

ಕಾಲು-ಕಾಲ, ನೀರು-ನೀರ

೪. ಕೇಸಿ ಕೇರಿ ಕಲಬುರ್ಗಿಯ ಕನ್ನಡ ಪದಗಳು ಕ್ಯಾಸ, ಕ್ಯಾರ ಗಳಾಗಿ ಪ್ರಯೋಗವಾಗುತ್ತವೆ.

ಮಾಡಿಕೇಸಿ, ಮಾಡಿಕ್ಯಾರ, ಅವ್ನು ನಿಂತಕ್ಯೇಸಿ ನೋಡ್ದ

೫. ಬನ್ನಿ ಮತ್ತು ಕುಂದರ್ರಿ/ಕುಂದ್ರಿ ಎಂಬ ಪದಗಳು ಇನ್ನೊಬ್ಬರೊಡನೆ ಸಂಭೋಧಿಸುವಾಗ ರೂಢಿ ಹಾಗೂ ಸರ್ವೆ ಸಾಮಾನ್ಯ ಪದಗಳಾಗಿವೆ.

೬. ಕನ್ನಡದ 'ವರೆಗೆ' ಎನ್ನುವ ಪ್ರತ್ಯೆಯ 'ಮಟ' ವಾಗಿ ಕರೆಯಲ್ಪಡುತ್ತದೆ.

ಅಲ್ಲಿಮಟ, ಇಲ್ಲಿಮಟ, ಹೊಗೋಮಟ, ಇರೋಮಟ, ಬರೋಮಟ

೭. 'ಕೋತ' ಎನ್ನುವ ಪ್ರತ್ಯಯ ನಿರಂತರಗಾಮಿಯಾಗಿದೆ.

ಆಡ್ಕೋತ ಕೂತಾನ, ಬಡ್ಕೋತ ಕುಂತಾನ, ನೊಡ್ಕೋತ ನಿಂತಾನ

೮. 'ಬೇ' ಎಂಬುವ ಪದಸ್ತ್ರಿಯರಿಗೆ ಕರೆಯಲಾಗುವ ಸಂಬೋಧಸೂಚಕ ಪದವಾಗಿರುವುದು ವಿಶೇಷವಾಗಿದೆ.

ಬೇ, ಯವ್ವ ಅಪ್ಪ ಬರಾಂಗಿಲ್ಲೆನು, ಬೇ, ಮುದುಕಿ ಕಾಲ ಬಿದ್ದಿಯೀ, ಇದಲ್ಲದೇ ಇತರೆ ವಿಶಿಷ್ಟ ಪದಗಳ ಬಳಕೆಯನ್ನು ಕಾಣಬಹುಗಿದೆ.

ಆಮೇಲೆ-ಹಿಂದಾಗಡೆ, ಬೇಗನೇ-ಲಗೂಟ, ತಡ್ಯಾಕ್ ಆಗವಲ್ತು-ತಡೆಯಲು ಆಗುತ್ತಿಲ್ಲ, ರಗಡ-ಬಹಳ, ದ್ವಾಸಿ-ದೋಸೆ, ಮಕ್ಕೋ-ಮಲಗು

ಮಂಗಳೂರು ಕನ್ನಡ ಭಾಷೆಗಳಲ್ಲಿನ ವಿಶಿಷ್ಟತೆಗಳು

೧. ಅನುನಾಸಿಕೀಕರಣ ಹೆಚ್ಚು, ಅಂದರೆ ಹೆಚ್ಚಾಗಿ ಮೂಗಿನಿಂದಲೇ ಮಾತನಾಡುವ ರೀತಿ ಕಂಡುಬರುತ್ತದೆ.

ನಾಯಿ-ನಾಯಿನ್, ಮಾಡಲಾಗಿರುತ್ತದೆ-ಮಡಿದ್ದುಂಟು,

೨. 'ಇ' ಕಾರ 'ಉ' ಕಾರ ಸ್ವರಗಳು– 'ಎ' ಕಾರ 'ಒ' ಕಾರ ವಾಗುತ್ತವೆ.

ಇಲಿ–ಎಲಿ, ಬಿಳಿ–ಬೆಳಿ, ತುಳಿ–ತೋಳೆ, ಕುಣಿ–ಕೋನೆ

೩. 'ಅ' ಕಾರ 'ಎ' ಕಾರ ವಾಗುತ್ತದೆ

ನಗು–ನೆಗು, ಗಂಟಲು–ಗೆಂಟಲು

೪. 'ಆ' ಕಾರ 'ಏ' ಕಾರ ವಾಗುತ್ತದೆ

ಆಡು–ಏಡು, ಆಮೆ–ಏಮೆ

೫. ಬಹುವಚನದ ಸಂದರ್ಭದಲ್ಲಿ– ಹವ್ಯಕ, ಅಕ್ಕೊಅಗೂ, ಪ್ರತ್ಯಯ ಸೇರಿರುತ್ತವೆ.

ಕಣ್ಣಿಗೊ, ಮರಂಗೊ, ತಂಗೆಕ್ಕೊ,

೬. ವಿಶಿಷ್ಟ ಪದಗಳ ಪ್ರಯೋಗ

ಕೊಡಲಿಲ್ಲ–ಕೊಟ್ಟುತುಲೆ, ಮಾಡಬೇಕು–ಮಾಡ್ಕೊ, ಇರಬೇಕು–ಇರೆಕ್ಕೊ ಉಂಟು ಎಂಬ ಪದವನ್ನು ಮಾತಿನ ಕೋನೆಯಲ್ಲಿ ಆಡುವುದು ಅಲ್ಲಿನ ವಿಷೇಶವಾಗಿದೆ.

ಮೈಸೂರು ಕನ್ನಡ ಭಾಷೆಗಳಲ್ಲಿನ ವಿಶಿಷ್ಟತೆಗಳು

ಮೈಸೂರು ಕನ್ನಡ ಶಿಷ್ಟ ಕನ್ನಡಕ್ಕೆ ಅತಿ ಹತ್ತಿರದ ಪ್ರಾದೇಶಿಕ ಭಾಷಾ ಪ್ರಬೇಧವಾಗಿದೆ.

೧. ಕನ್ನಡದಲ್ಲಿ 'ಹ'ಕಾರದಿಂದ ಪ್ರಾರಂಭವಾಗುವ ಕೆಲವು ಪದಗಳು 'ಹ'ಕಾರ ಕಳೆದುಕೊಂಡು 'ಹ'ಕಾರದ ಮುಂದಿನ ಸ್ವರದಿಂದ ಉಚ್ಚಾರಣೆಯಾಗುತ್ತವೆ.

ಮಗಾ ಅಸ ಬಂತು, ಆಲ್ ಕರಿ, ತುಸು ಉಲ್ಲೂ ಇಡು.

ಮಗು ಹಸು ಬಂತು, ಹಾಲು ಕರೆದುಕೊ, ಸ್ವಲ್ಪ ಹುಲ್ಲೂ ಹಾಕು.

೨. ಮಹಾ ಪ್ರಾಣಗಳು ಅಲ್ಪಪ್ರಾಣಗಳಾಗಿ ಉಚ್ಚಾರವಾಗುತ್ತವೆ.

ಭಾರತ–ಬಾರತ, ಭಾಗ್ಯವಿಧಾತ–ಬಾಗ್ಯವಿದಾತ, ಸಂದರ್ಭ–ಸಂದರ್ಬ, ಭಾಷೆ–ಬಾಸೆ

೩. 'ಶ' ಕಾರ 'ಸ' ಕಾರವಾಗುತ್ತದೆ

ಶಾಲೇಲಿ–ಸಾಲೇಲಿ, ಶಾರದಾ–ಸಾರದಾ, ಶಂಖ–ಸಂಕ

೪. ಸಜಾತಿಯ ಸಂಯುಕ್ತಾಕ್ಷರಗಳು ವಿಜಾತಿಯ ಸಂಯುಕ್ತಾಕ್ಷರಗಳಾಗುತ್ತವೆ.

ಹೆಂಡತಿ–ಹೆಂಡ್ತಿ, ಹೆಣ್ತಿ,

೫. ಒ ಮತ್ತು ಓ ಸ್ವರಗಳು– ಅ ಮತ್ತು ಆ ಸ್ವರಗಳಾಗುತ್ತವೆ

ಮೊಸರು–ಮಸರು, ಮೊಲ–ಮಲ, ಮೋಡ–ಮಾಡ

೬. 'ರ' ಕಾರವು 'ಳ' ಕಾರ ವಾಗುತ್ತದೆ

ಕರಡಿ–ಕಳ್ಡಿ, ಕುರುಡ–ಕುಳ್ಡ

ಇತರೆ ಸಾಮಾನ್ಯ ವ್ಯತ್ಯಾಸವಾಗುವ ಪದಗಳು–ಹುಡ್ಗ, ಹುಡ್ಗಿ, ಇತ್ಯಾದಿ.

ಆದರೆ ಮೇಲಿನ ಪ್ರಾದೇಶಿಕ ಭಾಷೆಗಳಲ್ಲಿನ ಭಿನ್ನತೆಗಳನ್ನು (ಸಾ.ಶಿ. ಮರುಳಯ್ಯ(ಸಂ) 'ಕನ್ನಡ ಭಾಷಾ ಪ್ರವೇಶ' ಪುಟ ಸಂಖ್ಯೆ – ದಿಂದ ಆಯ್ಕೆಮಾಡಿಕೊಳ್ಳಲಾಗಿದೆ) ಗಮನಿಸಿದಾಗ,

ಇವೆಲ್ಲಕ್ಕೂ ಭಿನ್ನವಾದ ರೀತಿಯಲ್ಲಿ ಕನ್ನಡವನ್ನು ಬಳಸುವ ಕನ್ನಡದ ಪ್ರದೇಶಗಳು ನಮ್ಮ ಕರ್ನಾಟಕದಲ್ಲಿ ಕಾಣಸಿಗುತ್ತವೆ.

ತುಳು ಮಿಶ್ರಿತ ಕನ್ನಡ, ಕೊಂಕಣಿ ಮಿಶ್ರಿತ ಕನ್ನಡ, ತೆಲುಗು ಮಿಶ್ರಿತ ಕನ್ನಡ, ಮರಾಠಿ ಮಿಶ್ರಿತ ಕನ್ನಡ, ಉರ್ದು ಮಿಶ್ರಿತ ಕನ್ನಡ, ಮಳೆಯಾಳಿ ಮಿಶ್ರಿತ ಕನ್ನಡ, ಇವುಗಳಲ್ಲದೇ ಪ್ರಾದೇಶಿಕ ನೆಲೆಯಲ್ಲಿ ಅವರವರ ಹಂತದಲ್ಲಿ ಕನ್ನಡದ ಹಲವಾರು ಉಪಭಾಷೆಗಳಿವೆ. ಉದಾ;- ಕೊಡಗಿನ ಗೌಡ ಕನ್ನಡ, ಕೆಂದೆಲುಗು ಇತ್ಯಾದಿ,

ಇವೆಲ್ಲವುದಕ್ಕೂ ಭಿನ್ನವಾದದ್ದು ಚಾಮರಾಜ ನಗರದ ಕನ್ನಡ. ಅಲ್ಲಿನ ಮಾತನಾಡುವ ಕನ್ನಡವನ್ನು ನೋಡಿದಾಗ ಇದು ಯಾವ ಕನ್ನಡ ಅನ್ನುವ ರೀತಿಯಲ್ಲಿ ಭಾಸವಾಗಬಹುದು. ಬೀದರಿನಲ್ಲಿ ಮಾತನಾಡುವ ಕನ್ನಡಕ್ಕೂ ಮತ್ತು ಚಾಮರಾಜ ನಗರದಲ್ಲಿ ಮಾತನಾಡುವ ಕನ್ನಡಕ್ಕೂ ಎರಡೂ ಜಿಲ್ಲೆಗಳಿಗೆ ಅಂತರದಲ್ಲಿ ಎಷ್ಟು ವ್ಯತ್ಯಾಸವಿದೆಯೋ ಅಷ್ಟೇ ಮಾತನಾಡುವ ಭಾಷೆಯಲ್ಲೊ ವ್ಯತ್ಯಾಸವಿದೆ. ಇವೆರಡು ಒಂದಕ್ಕೊಂದು ಭಿನ್ನವೇ ಆಗಿದೆ.

ಮೇಲಿನ ಪ್ರಾದೇಶಿಕ ಭಾಷೆಗಳ ಪರಿಚಯ ಪ್ರಸ್ತುತ ಏತಕ್ಕಾಗಿ ಎನ್ನುವ ಪ್ರಶ್ನೆ ಉದ್ಭವಿಸಬಹುದು. ಆದರೆ ಪ್ರಾದೇಶಿಕ ಭಿನ್ನತೆಯಲ್ಲಿ ಬಳಕೆಯಲ್ಲಿರುವ ಕನ್ನಡ ಆಡಳಿತ ಕನ್ನಡಕ್ಕೆ ಪ್ರಭಾವವನ್ನು ತರಬಲ್ಲದೇ? ಅಥವಾ ಯಾವ ರೀತಿಯಲ್ಲಿ ಅದು ತನ್ನ ಪ್ರಭಾವವನ್ನು ಆಡಳಿತ ಕನ್ನಡದ ಮೇಲೆ ಬೀರಬಲ್ಲದು? ಎಂಬ ವಿಷಯವನ್ನು ಗಮನಿಸುವ ನಿಟ್ಟಿನಲ್ಲಿ ಪ್ರಾದೇಶಿಕ ಭಾಷೆಗಳಲ್ಲಿನ ಕೆಲವಾದರೂ ವಿಶಿಷ್ಟತೆಗಳನ್ನು ನೋಡಬೇಕಲ್ಲವೇ ಅದಕ್ಕಾಗಿ ಮೇಲಿನ ಪ್ರಾದೇಶಿಕ ಭಾಷೆಗಳಲ್ಲಿನ ಭಿನ್ನತೆಗಳನ್ನು ಪ್ರಸ್ತುತ ಸಂದರ್ಭಕ್ಕೆ ಪರಿಚಯಿಸಲಾಗಿದೆ.

ಪ್ರಾದೇಶಿಕ ಭಾಷೆಯಲ್ಲಿನ ಪದಗಳನ್ನು ಮತ್ತು ಅಲ್ಲಿನ ಪ್ರಾದೇಶಿಕರು ಮಾತನಾಡುವ ಭಾಷೆಯನ್ನು ಗಮನಿಸಿದಾದ ಈ ಭಾಷೆಗಳಲ್ಲಿ ಹೇಗಪ್ಪಾ! ಆಡಳಿತ ನಡೆಸೋದು ಅನ್ನುವುದು ಸಹಜವೇ. ಆದರೆ ಒಂದು ಸೋಜಿಗದ ಸಂಗತಿ ಏನೆಂದರೆ, ಸಾರ್ವಜನಿಕರು ಪ್ರಾದೇಶಿಕ ಭಿನ್ನತೆಯಲ್ಲಿನ ಭಾಷೆಗಳನ್ನು ಪರಸ್ಪರರಲ್ಲಿಯೇ ಮಾತನಾಡಿಕೊಳ್ಳುತ್ತಾರೆ. ಆದರೆ ಕಚೇರಿಗೆ ಬರುವ ಪತ್ರಗಳನ್ನು ಪರಿಶೀಲಿಸಿದಾಗ ಅಲ್ಲಿನ ಪ್ರಾದೇಶಿಕ ಭಾಷೆಯ ಬಳಕೆ ಕಡಿಮೆ ಪ್ರಮಾಣದಲ್ಲಿ ಆಗಿರುವುದು ಕಚೇರಿಗೆ ಬರುವ ಪತ್ರಗಳಲ್ಲಿ ಮಾತ್ರ ಕಾಣಬಹುದು. ಆದರೆ ಕಚೇರಿಯಲ್ಲಿನ ಬಳಕೆಯ ಸಂದರ್ಭದಲ್ಲಿ ಪ್ರಾದೇಶಿಕ ನೆಲೆಯಲ್ಲಿ ಜನಜನಿತವಾಗಿರುವ ಕೆಲವೊಂದು ಪದಗಳು ದೊರಕುತ್ತವೆ. ಭಾಷೆಗಳಲ್ಲಿನ ಭಿನ್ನತೆಗಳ ಆಧಾರದ ಮೇಲಿನ ಬಳಕೆಯು ಆಡಳಿತ ಭಾಗದಲ್ಲಿ ಕಾಣಸಿಗುತ್ತವೆ.

ಪರಿಹಾರ: ಆಡಳಿತ ಕನ್ನಡದ ಬಳಕೆಯ ಸಂದರ್ಭದಲ್ಲಿ ಮೇಲಿನ ವಾಕ್ಯಗಳನ್ನೆಲ್ಲಾ ಉದಾಹರಣೆಯಾಗಿ ಮತ್ತು ವಾಸ್ತವಿಕವಾಗಿ ನೋಡಿದಾಗ ಆಡಳಿತದಲ್ಲಿನ ಪ್ರಾದೇಶಿಕ ಭಾಷೆಯ ಭಿನ್ನತೆಗಳಲ್ಲಿನ ವ್ಯತ್ಯಾಸಗಳು ಹೀಗಾಗಲೇ ಹೇಳಿದಂತೆ ಹೆಚ್ಚು ಬಳಕೆಯಲ್ಲಿರುವ ಅಲ್ಲಿನ ಪ್ರಾದೇಶಿಕ ಪದಗಳ ಬಳಕೆ ಆಗುತ್ತದೆ. ತಮ್ಮ ವಲಯದಲ್ಲಿನ ಮಾತನಾಡುವ ದೇಶಿಯ ಕನ್ನಡದ ಬಳಕೆ ಆಡಳಿತದಲ್ಲಿ ಅಲ್ಲಲ್ಲಿ ಕಾಣುತ್ತೇವೆ.

ಹೀಗಾಗಿ ಪ್ರಾದೇಶಿಕ ವಲಯದ ಭಾಷೆಗಳಲ್ಲಿನ ಭಿನ್ನತೆ ಆಡಳಿತಕ್ಕೆ ತೊಡಕಾಗುತ್ತದೆಂದು ಒಂದು ವೇಳೆ ಭಾಸವಾದಲ್ಲಿ ಪ್ರಾದೇಶಿಕ ಭಿನ್ನತೆಗಳಲ್ಲಿನ ಪದಗಳನ್ನು ಬಳಸುವ ಪರಿ ಬೇರೆಯಾಗಬೇಕಾದ್ದದು ಹಾಗೂ ಆಡಳಿತಕ್ಕೆ ಸರಿಹೊಂದುವ ಪದಗಳನ್ನು ಬಳಸಬೇಕೆಂಬುದೇ ಇದಕ್ಕೆ ಪರಿಹಾರವಾಗಿದೆ.

೬.೧.೧೧. ಗಡಿನಾಡ ಭಾಷೆಗಳ ಪ್ರಭಾವ

ಆಡಳಿತ ಕನ್ನಡಕ್ಕೆ ಗಡಿನಾಡ ಭಾಷೆಗಳು ಪ್ರಾದೇಶಿಕ ಭಾಷೆಗಳಿಗಿಂತ ಹೆಚ್ಚಿನ ರೀತಿಯಲ್ಲಿ ಪ್ರಭಾವವನ್ನು ಬೀರಿದವುಗಳಾಗಿವೆ. ಈ ಹಿಂದೆ ಚರ್ಚಿಸಿದಂತೆ ಆಡಳಿತ ಕನ್ನಡದ ಮೇಲೆ ಗಡಿನಾಡಭಾಷೆಗಳು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿವೆ ಎನ್ನುವ ಮತ್ತೊಂದು ಇಣುಕು ನೋಟ ಇಲ್ಲಿದೆ ಪ್ರಾದೇಶಿಕ ಭಾಷೆಯ ಹಿನ್ನೆಲೆಗಳಲ್ಲಿ ಗಡಿನಾಡ ಭಾಷೆಗಳ ಪ್ರಭಾವ ನೋಡಿದಾಗ,

ಮಂಗಳೂರು ಕನ್ನಡ – ತುಳು, ಕೊಂಕಣಿ, ಹವ್ಯಕ, ಮಳೆಯಾಳಂ,
ತುಳು ಪ್ರಾದೇಶಿಕ ಭಾಷೆ.

ಕಲಬುರ್ಗಿ ಕನ್ನಡ – ಉರ್ದು, ಮರಾಠಿ

ಮೈಸೂರು ಕನ್ನಡ – ಶಿಷ್ಟ ಕನ್ನಡ

ಧಾರವಾಡ ಕನ್ನಡ – ಪಾರಸಿ, ಹಿಂದಿ, ಮರಾಠಿ

ಈ ರೀತಿಯಾಗಿ ಪ್ರಾದೇಶಿಕ ಭಾಷೆಯಲ್ಲಿಯೇ ಬೇರೆ ಭಾಷೆಗಳ ಪ್ರಭಾವ ಹೆಚ್ಚಿರುವ ಹಿನ್ನೆಲೆಯಲ್ಲಿ ಗಡಿನಾಡ ಭಾಷೆಗಳ ಪ್ರಭಾವ ಯಾವ ಯಾವ ಜಿಲ್ಲೆಗಳ ಮೇಲೆ ಎಷ್ಟೆಷ್ಟಿವೆ ಎಂದು ಅವಲೋಕಿಸಿದಾಗ ಗಡಿಭಾಗದಲ್ಲಿನ ಹಿಡಿಯಾದ ಜಿಲ್ಲೆ ಗಡಿನಾಡ ಭಾಷೆಗಳ ಪ್ರಭಾವದಿಂದ ಮುಕ್ತವಾಗಿರುವುದಿಲ್ಲ. ನೆರೆರಾಜ್ಯಗಳ ಗಡಿಗಳಿಗೆ ಹೊಂದಿಕೊಂಡ ಕೆಲ ತಾಲೂಕಿಗಳಿಗೆ ಮಾತ್ರ ಗಡಿನಾಡ ಭಾಷೆಗಳ ಪ್ರಾಭಾವ ಇದ್ದೇ ಇದೆ. ಗಡಿಭಾಗಗಳಲ್ಲಿ ಬಳಕೆಯಾಗುತ್ತಿರುವ ಬೇರೆ ಬೇರೆ ಭಾಷೆಗಳ ಪದಗಳು ಆಡಳಿತದಲ್ಲಿ ಬಳಕೆಯಾಗಿರುವುದನ್ನು ಅಲ್ಲಲ್ಲಿ ಕಾಣುತ್ತೇವೆ. ಗಡಿ ಭಾಷೆಗಳ ಪ್ರಭಾವವು ಎರಡು ವಿಷಯಗಳ ಮೇಲೆ ನಿರ್ಧಾರವಾಗಿರುತ್ತದೆ

ಅ. ಗಡಿನಾಡ ಪ್ರಭಾವ

ಆ. ಚಾರಿತ್ರಿಕ ಹಿನ್ನಲೆ

ಈ ಮೇಲಿನ ಎರಡೂ ಅಂಶಗಳನ್ನು ಗಮನಿಸಿದಾಗ, ಗಡಿನಾಡ ಜಿಲ್ಲೆಗಳು ಹಿಂದಿನಿಂದ ಚಾರಿತ್ರಿಕವಾಗಿ ಹೊರರಾಜ್ಯದಲ್ಲಿದ್ದದ್ದೋ ಅಥವಾ ಬೇರೆ ರಾಜ್ಯಗಳ ಅಸ್ತಿತ್ವದಲ್ಲಿದ್ದದ್ದೊ ಇದಕ್ಕೆ ಕಾರಣವಾಗಿರಬಹುದು ಹೀಗಾಗಿ ಗಡಿನಾಡ ಭಾಷೆಗಳ ಪ್ರಭಾವ ಗಡಿನಾಡಲ್ಲಿ ಹೆಚ್ಚಾಗಿ ಕಾಣುತ್ತೇವೆ.

ಗಡಿಭಾಗಗಳಲ್ಲಿನ ಜನರು ಹೆಚ್ಚು ದ್ವಿಭಾಷಿಕರಾಗಿರುವುದು ಸರ್ವೆ ಸಾಮಾನ್ಯ ಹಾಗೂ ಅದು ರೂಢಿಗತವಾಗಿ ಬರುತ್ತದೆ. ಗಡಿನಾಡಿನಲ್ಲಿರುವ ಜನರು ಬೇರೆಭಾಷೆಯನ್ನು ಕಲಿಯದೇ ಇದ್ದರೂ ಒಡನಾಟದಲ್ಲಿ ರೂಢಿಗತವಾಗಿ ಬಂದು ಬಿಡುತ್ತದೆ. ಈ ಪ್ರದೇಶದಲ್ಲಿ ಪರಭಾಷೆಯನ್ನು ಕಲಿಯಬೇಕೆನ್ನುವ

ಸಾಹಸಕ್ಕೆ ಹೋಗುವ ಅವಶ್ಯಕತೆಯೇ ಇರುವುದಿಲ್ಲ, ಅಂತಹ ಪ್ರದೇಶದಲ್ಲಿ ಕನ್ನಡವನ್ನು ಮರೆಯುವ ಹಾಗೂ ಪರಭಾಷೆಗೆ ಮಾರು ಹೋಗುವ ಸಂದರ್ಭಗಳು ಹೆಚ್ಚಿವೆ. ಗಡಿನಾಡ ಭಾಗಗಳಲ್ಲಿ ಮಾತೃಭಾಷೆ ಕನ್ನಡ ಆಗಿದ್ದರೂ ಕನ್ನಡ ಮಾತನಾಡುವ ಜನ ಬಹಳ ಕಡಿಮೆ ಇದೊಂದು ದುರದೃಷ್ಟಕರ ಸಂಗತಿ ಎಂದರೆ ತಪ್ಪಾಗಲಾರದು. ಕಾರಣ ಬೇರೆಯದಕ್ಕೆ ಬಹುಬೇಗನೇ ಒಗ್ಗಿಕೊಳ್ಳುವ ಉದಾರಿಗಳು ಕನ್ನಡಿಗರು ಎಂಬ ಕೀರ್ತಿಗೆ ಪಾತ್ರರಾದವರಲ್ಲವೇ?.

ಚಾರಿತ್ರಿಕವಾಗಿ ಗಮನಿಸಿದ್ದಾಗ್ಗಿಯೂ ಕರ್ನಾಟಕ ಹಿಂದೆ ಮದ್ರಾಸ್, ಮುಂಬಯಿ, ಮಹರಾಷ್ಟ್ರದ ಕೆಲವು ಭಾಗಗಳವರೆಗೆ ತನ್ನ ವಿಸ್ತಾರ ಹೊಂದಿತ್ತು ಎಂಬುದು ಸತ್ಯ. ಆ ಭಾಗಗಳಲ್ಲಿ ವಾಣಿಜ್ಯ, ವ್ಯಾಪಾರ, ವಹಿವಾಟುಗಳು ನಡೆಯುತ್ತಿದ್ದವೆಂಬುದನ್ನು ಮನಗಂಡಿದ್ದೇವೆ. ಅದೇ ರೀತಿಯಲ್ಲಿ ಕರ್ನಾಟಕದ ವಿಸ್ತಾರ ಚಾರಿತ್ರಿಕವಾಗಿ ಬಹು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ ಹಿನ್ನೆಲೆಯಲ್ಲಿ ಆಗಿನ ಆಡಳಿತದ ರೂಪುರೇಷುಗಳು ಇನ್ನೂ ಮುಂದುವರೆಸಿ ಕೊಂಡುಬರುವುದು ಸಹಜ. ಆಗಿನ ಸಂದರ್ಭದಲ್ಲಿ ಪ್ರಚಲಿತದಲ್ಲಿದ್ದ ಆಡಳಿತದಲ್ಲಿನ ಪಾರಿಭಾಷಿಕ ಪದಗಳು ಪ್ರಸ್ತುತ ಸಂದರ್ಭದಲ್ಲಿ ಆಡಳಿತದ ಪದಗಳಾಗಿ ಮೆರೆದಿವೆ.

ಗಡಿನಾಡಲ್ಲಿ ಆಗಿನ ಕಾಲದಿಂದಲೂ ಬಳಕೆಯಲ್ಲಿದ್ದ ಚಾರಿತ್ರಿಕ ಹಿನ್ನಲೆ ಹೊಂದಿದ ಭಾಷೆಗಳ ರಾಜ್ಯ ನಡೆಯುತ್ತಿತ್ತೆಂದು ಹಲವಾರು ಇತಿಹಾಸಗಳು ಸಾರುತ್ತವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಗಡಿನಾಡಿನ ಭಾಗಗಳಲ್ಲಿ ಕನ್ನಡ ಮರೆತುಹೋಯಿತು ಎನ್ನುವ ಕಾಲವೊಂದಿತ್ತು ಆದರೆ ಪ್ರಸ್ತುತ ಸಂದರ್ಭದಲ್ಲಿ ಆ ಪರಿಕಲ್ಪನೆ ಸ್ವಲ್ಪ ಮಟ್ಟಿಗೆ ಬದಲಾಗಬೇಕಿದೆ ಎನ್ನುವುದು ಕನ್ನಡಿಗರ ಅಭಿಮಾನದ ಅಳಲಾಗಿದೆ. ಗಡಿನಾಡಲ್ಲಿ ಯಾವ ಯಾವ ಭಾಷೆಗಳು ತಮ್ಮ ಪ್ರಭುತ್ವವನ್ನು ಸಾಧಿಸಿವೆ ಹಾಗೂ ಸಾಧಿಸುತ್ತಲಿವೆ ಎಂಬುದಕ್ಕೆ ಕೆಳಕಂಡಂತೆ ವಿವರಿಸಲಾಗಿದೆ.

ಗಡಿಭಾಷೆಗಳ ಪ್ರಭಾವ

ಮರಾಠಿ – ಬೆಳಗಾವಿ, ಬಿಜಾಪುರ, ಕಲಬುರ್ಗಿ, ಬೀದರ

ತೆಲುಗು – ಬಳ್ಳಾರಿ, ಚಿತ್ರದುರ್ಗ, ಪಾವಗಡ, ಕೋಲಾರ

ತಮಿಳು – ಚಾಮರಾಜನಗರ, ಬೆಂಗಳೂರು, ಕೋಲಾರ

ಮಳೆಯಾಳಿ – ಮಂಗಳೂರು, ಕೊಡಗು, ಮೈಸೂರು

ಕೊಂಕಣಿ – ಉತ್ತರಕನ್ನಡ

ತುಳು– ಕೊಡಗು (ಅನುಬಂಧ–೧೦)

ಚಾರಿತ್ರಿಕ ಹಿನ್ನೆಲೆಯ ಪ್ರಭಾವ

ತೆಲುಗು – ಬಳ್ಳಾರಿ

ಉರ್ದು – ರಾಯಚೂರು, ಕಲಬುರ್ಗಿ

ಮರಾಠಿ – ಬೆಳಗಾವಿ

ಪಾರ್ಸಿ – ಬೀದರ, ಕಲಬುರ್ಗಿ

ಹಿಂದೆ ಕರ್ನಾಟಕದ ಉತ್ತರ ಭಾಗವು ಸಹಜವಾಗಿ ಮುಂಬೈ, ಮದ್ರಾಸ್, ಹೈದ್ರಾಬಾದ್, ಪ್ರಾಂತ್ಯಗಳಲ್ಲಿ ಆಡಳಿತವು ಹರಿದು ಹಂಚಿ ಹೋಗಿತ್ತು ಆ ಚಾರಿತ್ರಿಕತೆಯ ಹಿನ್ನಲೆಯಲ್ಲಿಯೇ ಇನ್ನೂ ಕೆಲವೊಂದು ಭಾಗಗಳಲ್ಲಿ ಆಡಳಿತ ನಡೆಯುತ್ತಿರುವುದು ಕಂಡು ಬರುತ್ತದೆ, ಹೀಗಾಗಿ ಚಾರಿತ್ರಿಕ ಹಿನ್ನಲೆಯಲ್ಲಿ ಗಡಿಭಾಗಗಳಲ್ಲಿ ಗಡಿನಾಡಿನ ಭಾಷೆಗಳು ತನ್ನ ಸ್ಥಾನವನ್ನು ಈಗಲೂ ಉಳಿಸಿಕೊಂಡಿವೆ. ಆ ಗಡಿನಾಡ ಭಾಷೆಗಳ ಪದಗಳನ್ನು ಕಿತ್ತಿಹಾಕಬೇಕೆನ್ನುವುದು ವಿಷಯವಲ್ಲ ಅವು ಇರಬೇಕೆನ್ನುವುದು ಮತ್ತು ತನ್ನ ಸ್ಥಾನವನ್ನು ಭದ್ರಪಡಿಸಿ ಕೊಂಡಿವೆ ಎನ್ನುವುದು ಮುಖ್ಯ ಪ್ರಶ್ನೆಯಾಗಿದೆ. ಗಡಿ ಭಾಗದ ಕಚೇರಿಗಳಲ್ಲಿನ ಆಡಳಿತದಲ್ಲಿ ಕೆಲವೊಂದು ಪದಗಳು ಕಾಣಸಿಗುತ್ತವೆ.

ಉದಾ:- ತೆಲುಗಿನ–ಅಡಂಗಲ್ಲು,......

ಉರ್ದುವಿನ– ಹಾಜರು, ಖಾಯಂ, ಬಂದೋಬಸ್ತು, ಅಠಾರ ಕಚೇರಿ, ಮೋಜಣಿ,...

ಇಂತಹ ಹಲವಾರು ಪದಗಳು ಆಡಳಿತ ಕನ್ನಡದಲ್ಲಿ ಈಗಲೂ ಬಳಕೆಯಾಗುತ್ತಿರುವುದನ್ನು ಕಾಣಬಹುದಾದ ಅನೇಕ ಉದಾಹರಣೆಗಳಿವೆ.

ಪರಿಹಾರ; ಗಡಿನಾಡ ಭಾಷೆಗಳ ಪ್ರಭಾವ ಕರ್ನಾಟಕದ ಮೇಲೆ ಎರಡು ರೀತಿಯಿಂದ ಆಗುತ್ತೇ ಎಂಬುದನ್ನು ವಿವರಿಸಲಾಗಿದೆ. ಚಾರಿತ್ರಿಕ ಹಿನ್ನಲೆ ಹೊಂದಿದ ಭಾಷೆಯ ಹಿಡಿತದಿಂದ ಹಾಗೂ ಪಾರಿಭಾಷಿಕ ಪದಗಳ ಬಳಕೆಯ ಸಂಕೋಲೆಯಿಂದ ಆಡಳಿತ ಕನ್ನಡವನ್ನು ಹೊರತರಲು ಪ್ರಯತ್ನಿಸಬೇಕಾಗಿದೆ. ಹಲವಾರು ಇಲಾಖಾ ಪಾರಿಭಾಷಿಕ ಪದಕೊಶಗಳು ಸಿದ್ಧವಾಗಿದ್ದರೂ ಅವುಗಳ ಬಳಕೆಗೆ ಯಾರೂ ಹೋಗುತ್ತಿಲ್ಲ, ಅನಿವಾರ್ಯ ಪರಿಸ್ಥಿತಿ ಹಾಗೂ ಹಲವಾರು ಕಾರಣಗಳು ಬಂದಾಗ ಮಾತ್ರ ಅವುಗಳ ಬಳಕೆಯಾಗುತ್ತಿದ್ದುದ್ದು ಕಂಡುಬರುತ್ತದೆ, ಈಗಾಗಲೇ ಗಡಿನಾಡ ಭಾಗಗಳಲ್ಲಿ ಭಾಷೆಯ ಬಗ್ಗೆ ಹಾಗೂ ನಾಡಿನ ಅಳಿವು–ಉಳಿವಿನ ಬಗ್ಗೆ ಹಲವಾರು ಧ್ವನಿಗಳು ಮೊಳಗುತ್ತಿವೆ. ಗಡಿನಾಡ ಜನತೆ ಕನ್ನಡ ಭಾಷೆಯನ್ನು ಸ್ವೀಕರಿಸಿ ಅದರ ಬಗ್ಗೆ ಅಭಿಮಾನ ಬಳಸಿಕೊಂಡು ಹಾಗೂ ಕನ್ನಡವನ್ನು ಉಳಿಸುವ ಕಾರ್ಯ ನಡೆಯಬೇಕಿದೆ. ಸರ್ಕಾರವು ಗಡಿ ಭಾಗಗಳಲ್ಲಿ ಗಡಿನಾಡ ಭಾಷೆಗಳಿಂದ ತಡೆಯನ್ನೊಡ್ಡುವ ಕಟ್ಟುನಿಟ್ಟಾದ ಆದೇಶಗಳ ರೂಪುರೇಷಗಳನ್ನು ಹಾಕಿಕೊಳ್ಳಬೇಕಾಗಿದೆ.

೬.೧.೧೨. ಭಾಷಾ ಅಲ್ಪಸಂಖ್ಯಾತರು

ಗಡಿನಾಡಿನಿಂದ ಉದ್ಯೋಗ ಅರಸಿ ಬಂದು ಕರ್ನಾಟಕದಲ್ಲಿಯೇ ಶಾಶ್ವತವಾಗಿ ನೆಲೆಯೂರಿರುವ ಅಸಂಖ್ಯಾತ ಜನರು ನಮ್ಮಲ್ಲಿದ್ದಾರೆ. ಗಡಿಭಾಗದ ಜನರು ಹಲವಾರು ಕಾರಣಗಳಿಗಾಗಿ ಕರ್ನಾಟಕದೊಳಕ್ಕೆ ಬಂದು ತಮ್ಮ ಅಸ್ತಿತ್ವವನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಅವರನ್ನು ನಾವು ಭಾಷಾ ಅಲ್ಪಸಂಖ್ಯಾತರೆಂದು ಗುರುತಿಸಿ ಪೋಷಣೆಯನ್ನು ಮಾಡುತ್ತಿದ್ದೇವೆ. ನಮ್ಮಲ್ಲಿನ ಸರ್ಕಾರದ ಸೌಲಭ್ಯಗಳನ್ನು ನೀಡುತ್ತಿದ್ದೇವೆ. ಕರ್ನಾಟಕ ಉದ್ಯೋಗವನ್ನರಸಿ ಬರುವ ಹಲವಾರು ರಾಜ್ಯದ ಜನತೆಗೆ ಆಶ್ರಯದಾಯಕವಾಗಿದೆ, ಇದು ಪ್ರಶಂಸನೀಯವಾದದ್ದೇ ಒಪ್ಪೋಣ. ಆದರೆ ಬೇರೆ ಬೇರೆ ನಾಡಿನಿಂದ ಬರುವವರ ವಲಸಿಗರ

ಸಂಖ್ಯೆ ದಿನೆ ದಿನೆ ಹೆಚ್ಚಾಗುತ್ತಿದೆ. ಅವರಿಗಾಗಿ ವಸತಿ, ಅವರ ಮಕ್ಕಳಿಗಾಗಿ ವಿದ್ಯಾಭ್ಯಾಸ, ಉದ್ಯೋಗ, ಜೀವನ ನಿರ್ವಹಣೆಗೆಬೇಕಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಬೇಕಲ್ಲವೇ ಅಥವಾ ಕಲ್ಪಿಸಿ ಕೊಡಬೇಕಲ್ಲವೆ. ಹೌದು ಇದು ಸತ್ಯ.

ಹಲವಾರು ವಲಸಿಗರಿಂದ ತುಂಬಿಹೋದ, ಬೇರೆ ರಾಜ್ಯದಿಂದ ವಲಸಿ ಬರುವ ಜನರನ್ನು ಕರ್ನಾಟಕ ಭಾಷಾ ಅಲ್ಪಸಂಖ್ಯಾತರೆಂದು ಗುರಿತಿಸಿರುವುದು ಇನ್ನೂಂದು ಸತ್ಯವೇ ಸರಿ. ಕರ್ನಾಟಕಕ್ಕೆ ಬರುವ ಹಲವಾರು ಜನರ ಜೀವನ ನಿರ್ವಹಣೆಗೆ ಹಲವಾರು ಅವಕಾಶಗಳನ್ನು ನೀಡಿ ಕರ್ನಾಟಕ ತನ್ನ ಉದಾರತ್ವವನ್ನು ಮೆರೆದಿದೆ. ಇದಕ್ಕೆ ಸಾಕ್ಷಿ ಬೆಂಗಳೂರು, ಮಂಗಳೂರು, ಚಾಮರಾಜನಗರ, ಬಳ್ಳಾರಿ, ಕೋಲಾರ, ಬೆಳಗಾವಿ, ಧಾರವಾಡ–ಹುಬ್ಬಳ್ಳಿ ಇತ್ಯಾದಿ ನಗರಗಳು.

ಆದರೆ ನಿಜವಾದ ಸತ್ಯವೇನೆಂದರೆ, ಹಲವಾರು ವಲಸಿಗರಿಂದ ಇಂದು ಕನ್ನಡ ನಾಡಿನ ಜನತೆಯೇ ಅಥವಾ ಕನ್ನಡಿಗರೇ ಅಲ್ಪಸಂಖ್ಯಾತರಾಗುವ ಪರಿಸ್ಥಿತಿ ಬಂದೊದಗಿದೆ. ಕರ್ನಾಟಕದಲ್ಲಿ ಕನ್ನಡಿಗರಿಗಾಗಿ ನಿರ್ಮಿಸಲಾದ ಹಲವಾರು ಯೋಜನೆಗಳು, ಅಭಿವೃದ್ಧಿಯ ಕಾರ್ಯಗಳು ಬೇರೆಯವರ ಪಾಲಾಗುತ್ತಿವೆ. ಕನ್ನಡಿಗರು ಹಲವಾರು ಯೋಜನೆಗಳಿಂದ ವಂಚಿತರಾಗುತ್ತಿದ್ದಾರೆ, ಅವರ ಮಕ್ಕಳಿಗೆ ಶಿಕ್ಷಣದಲ್ಲಿನ ಅವಕಾಶಗಳು ಕೈತಪ್ಪಿ ಹೊಗುತ್ತಿವೆ, ಹಾಗೂ ಹೋಗುತ್ತಲಿವೆ.

ಕರ್ನಾಟಕದಲ್ಲಿ ವಾಸಿರುವ ಕನ್ನಡಿಗರಿಗಾಗಿ ರೂಪಿಸಲಾದ ಹಲವಾರು ಯೋಜನೆಗಳು ಕರ್ನಾಟಕದ ನಿಜವಾದ ಕನ್ನಡಿಗರು ಈ ಸರ್ಕಾರ ರೂಪಿತ ಯೋಜನೆಗಳಿಂದ ವಂಚಿತರಾಗುತ್ತಿದ್ದಾರೆ, ಕೊನೆಗೆ ನಿಜವಾದ ಕನ್ನಡಿಗರೇ ಬೇರೆ ಭಾಷೆಗಳ ಪ್ರಭಾವದಿಂದ ಭಾಷಾ ಅಲ್ಪಸಂಖ್ಯಾತರಾಗುವ ಪರಿಸ್ಥಿತಿ ಬಂದೋದಗಿರುವುದು, ಹಾಗೂ ಭಾಷಾ ಅಲ್ಪ ಸಂಖ್ಯಾತರಾಗುತ್ತಲಿರುವುದು ಕನ್ನಡಿಗರ ದುರಂತ, ಹಾಗು ವಾಸ್ತವಿಕ ಸತ್ಯ.

ಪರಿಹಾರ: ಕರ್ನಾಟಕದಲ್ಲಿ ಹಲಾರು ಕಾರಣಗಳಿಗಾಗಿ ಬಂದು ನೆಲೆನಿಂತು ಕನ್ನಡಿಗರೆಂದು ಅವಕಾಶವನ್ನು ಕಲ್ಪಿಸಿಕೊಂಡ ಜನರನ್ನು ಇಲ್ಲಿ ದೂರುತ್ತಿಲ್ಲ. ಬದಲಾಗಿ ಅದರಿಂದ ನಿಜವಾದ ಕನ್ನಡಿಗರಿಗೆ ಭಾಷಿಕವಾಗಿ, ಮತ್ತು ಸಾಮಾಜಿಕವಾಗಿ, ಹಾಗೂ ಆರ್ಥಿಕವಾಗಿ ಅವಕಾಶಗಳು ಕೈ ತಪ್ಪಿ ವಂಚಿತರಾಗುತ್ತಾರೆ, ಹಾಗೂ ಆಗುತ್ತಲಿದ್ದಾರೆ ಎನ್ನುವುದು ವಿಚಾರ. ವಲಸಿಗರಾದ ಗಡಿನಾಡ ಜನಕ್ಕೆ ಅವಕಾಶಕೊಡಬೇಕಾದ್ದದ್ದು ನಿಜ ಆದರೆ ಅದರಿಂದ ಕನ್ನಡಿಗರಿಗೆ ಅನ್ಯಾಯವಾಗುವುದು ಯಾವ ಮಾತು.

ಸರ್ಕಾರವು ಈ ವಿಚಾರಗಳ ಬಗ್ಗೆ ಅತಿ ಸೂಕ್ಷ್ಮವಾಗಿ ಚಿಂತಿಸಬೇಕಾಗಿದೆ ಅದಕ್ಕೆ ಸಂಬಂಧಪಟ್ಟಂತೆ ನೀತಿನಿಯಮಗಳನ್ನು ರೂಪಿಸಬೇಕಾಗಿದೆ ಅಥವಾ ರೂಪಿತ ನೀತಿನಿಯಮಗಳಿಗೆ ತಿದ್ದುಪಡಿಗಳನ್ನು ತರುವ ವಾಸ್ತವಿಕ ಪ್ರಯತ್ನ ನಡೆಯಬೇಕಾದ ಅವಶ್ಯಕತೆ ಇದೆ. ಇದರಿಂದ ಭಾಷಾ ಅಲ್ಪಸಂಖ್ಯಾತರಿಂದ ಪ್ರಸ್ತುತ ಸಂದರ್ಭದಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಂದ ಮುಕ್ತಿ ಸಿಕ್ಕಂತಾಗುತ್ತದೆ ಹಾಗೂ ಕನ್ನಡ ಭಾಷಿಕವಾಗಿ ಎದಿರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವೂ ಸಿಕ್ಕಂತಾಗುತ್ತದೆ.

೬.೨. ಕಚೇರಿಗಳಲ್ಲಿ ಕನ್ನಡದ ಬಳಕೆ : ಸಮಸ್ಯೆಗಳು

ಆಡಳಿತ ಕನ್ನಡವನ್ನು ಜಾರಿಗೆ ತರಲು ಈವರೆಗೆ ನೋಡಲಾದ ಸಮಸ್ಯೆಗಳು ಕಚೇರಿಯಿಂದ ಬಾಹ್ಯವಾಗಿ ಸಾಮಾಜಿಕ, ರಾಜಕೀಯ, ಮತ್ತು ತಾಂತ್ರಿಕ ಸಮಸ್ಯೆಗಳಾಗಿವೆ. ಆದರೆ ಆಡಳಿತದಲ್ಲಿ ಕನ್ನಡ ಬಳಕೆಗೆ ಹೊರಗಿನ ಸಮಸ್ಯೆಗಳಲ್ಲದೇ ಇದಕ್ಕೆ ಭಿನ್ನವಾದ ಸಮಸ್ಯೆಗಳು ಆಂತರಿಕವಾಗಿ ಇವೆ. ಆಡಳಿತ ನಡೆಸುವ ಕೇಂದ್ರ ಬಿಂದುಗಳೆ ಕಚೇರಿಗಳು. ಇಲ್ಲಿ ಆಂತರಿಕವಾಗಿ ಕಚೇರಿಗಳಿಗೆ ಬರುವ ಪತ್ರ, ಅದರಿಂದ ಹೊಸದಾಗಿ ಹುಟ್ಟಿಕೊಳ್ಳುವ ಕಡತ, ಟಿಪ್ಪಣಿ ಇವೆಲ್ಲವುಗಳು ಆಡಳಿತದ ಆಂತರಿಕ ಭಾಗಗಳಾಗಿವೆ. ಇವುಗಳಲ್ಲಿಯೂ ಸಹಿತ ಕನ್ನಡ ಬಳಕೆ ಆಗುತ್ತಿಲ್ಲವೆನ್ನುವುದು ಒಂದು ಬಗೆಯ ಸಮಸ್ಯೆ ಮತ್ತು ಸವಾಲುಗಳಾಗಿವೆ. ಕಾರಣ ಸಮಸ್ಯೆಗಳನ್ನು ಈ ಅಧ್ಯಾಯದಲ್ಲಿ ಚರ್ಚೆಮಾಡಲಾಗಿದೆ.

೬.೨.೧. ಕಚೇರಿ ಪತ್ರ – ಕನ್ನಡ ಬಳಕೆ : ಸಮಸ್ಯೆ.

ಕಚೇರಿಗೆ ಬಂದ ಪತ್ರಗಳು ನೇರವಾಗಿ ರವಾನೆ ಗುಮಾಸ್ತರಿಗೆ ತಲುಪುವುದು ಆಡಳಿತದಲ್ಲಿನ ಸಹಜ ನಿಯಮ. ಬಂದ ಪತ್ರಗಳನ್ನು ರವಾನೆ ಗುಮಾಸ್ತರು ಕಚೇರಿಯಲ್ಲಿನ ಅಧೀಕ್ಷಕರು, ಕಚೇರಿಯ ಮುಖ್ಯಸ್ಥರು ಅಥವಾ ಅಧಿಕಾರಿಗಳಿಗೆ ಪತ್ರಗಳ ವಿಕ್ಷಣೆಗಾಗಿ ಹಾಗೂ ಅವುಗಳ ಪರಿಶೀಲನೆಗೆ ಮತ್ತು ವಿಭಾಗೀಕರಣಕ್ಕಾಗಿ ಸಲ್ಲಿಸುತ್ತಾರೆ. ಅಧಿಕಾರಿಗಳು ಅಥವಾ ಮುಖ್ಯಸ್ಥರು ಪತ್ರಗಳನ್ನು ವೀಕ್ಷಿಸಿ ಪತ್ರಗಳ ಮೇಲೆ ಯಾವ ವಿಭಾಗಕ್ಕೆ ಸದರಿ ಪತ್ರವು ಸೇರಿದ್ದು ಎಂದು ನಿರ್ಧರಿಸಿ ಪತ್ರಗಳ ಮೇಲೆ ಟಿಪ್ಪಣೆ ಬರೆದು ಚಿಕ್ಕ ರುಜುವನ್ನು ಹಾಕಿ, ಪುನಃ ಪತ್ರಗಳ ಮೇಲೆ ಬರೆದಿರುವ ಅಧಿಕಾರಿಗಳ ಟಿಪ್ಪಣೆಗಳ ಮೇರೆಗೆ ವಿಷಯವಾರು ವಿಭಾಗಿಸಿ, ಆಯತ ವಹಿಯಲ್ಲಿ (Inward register) ನಮೂದಿಸಿ, ಸಂಬಂಧಪಟ್ಟ ವಿಷಯ ನಿರ್ವಹಕರಿಗೆ ಸಲ್ಲಿಸಿ, ಅವರಿಂದ ಸ್ವೀಕೃತಿ ಸಹಿಯನ್ನು ಪಡೆದು, ತಮ್ಮ ಮೊದಲ ಹಂತದ ಕಾರ್ಯವನ್ನು ಪೂರ್ಣಗೊಳಿಸುತ್ತಾರೆ.

ಕಚೇರಿಗೆ ಬರುವ ಪತ್ರಗಳು ಸಾಮಾನ್ಯವಾಗಿ ಕನ್ನಡ, ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ಬರುತ್ತವೆ. ಬಂದ ಪತ್ರಗಳನ್ನು ರವಾನೆ ಗುಮಾಸ್ತರು ಅಧಿಕಾರಿಗಳಿಗೆ ಅಥವಾ ಕಚೇರಿ ಮುಖ್ಯಸ್ಥರಿಗೆ ಮೇಲು ರುಜುವಿಗಾಗಿ ಕಳುಹಿಸಿದಾಗ ಅವರು ಅ ಪತ್ರಗಳ ಮೇಲೆ ಬರೆಯುವ ಟಿಪ್ಪಣೆಯಿಂದಲೇ ಆಡಳಿತದಲ್ಲಿ ಕನ್ನಡದ ಬಳಕೆ ಪ್ರಾರಂಭವಾಗುತ್ತದೆ. ಅಧಿಕಾರಿಗಳು ಆ ಪತ್ರಗಳ ಮೇಲೆ ಟಿಪ್ಪಣೆಗಳನ್ನು ಬರೆಯುವ ಅಥವಾ ವರ್ಗೀಕರಣಮಾಡುವ ಸಂದರ್ಭದಲ್ಲಿ ಅಧಿಕಾರಿಗಳು ಆ ಪತ್ರವು ಯಾವ ವಿಭಾಗಕ್ಕೆ ಸಂಬಂಧಿಸಿದ್ದು ಎಂಬ ನಿರ್ಧಾರಕ್ಕೆ ಬಂದು ಪತ್ರದ ಮೇಲೆ ಟಿಪ್ಪಣೆ ಬರೆಯುತ್ತಾರೆ.

ಉದಾ:–ಭಾಗ–೧ Land, lRM, 79 A/B, missileneus,
Election, CAMP,
Tender, Tender buliten,
371 J, Calametary, Revenue,
Budget, Est., Adm., Loan,

ದೇವಾಲಯ, ಆಡಳಿತ,

ಸಿಬ್ಬಂದಿ ಎಂದು ಬರೆದು ಅದರ ಕೆಳಗಡೆ ಸಹಿಹಾಕಿ

(ಅನುಬಂಧ–೧೧. ಅ)

ಭಾಗ–೨ Putup, ok, agreed, Discusses, Sanction, Grant , Arrange, pls spek, above , information,

ಕಡತದಲ್ಲಿ ಮಂಡಿಸಿ, ಪರಿಶೀಲಿಸಿ, ವರದಿ ತಯಾರಿಸಿ, ಎಂದು ನಮೂದಿಸಿ, "ಮಾರ್ಗದರ್ಶನಾ ಸೂಚಿ" (ಪತ್ರಗಳ ಮೇಲೆ ಬರೆದ ಟಿಪ್ಪಣೆಗಳನ್ನು ನಮ್ಮ ಉಪಯೋಗಕ್ಕಾಗಿ ಮಾರ್ಗದರ್ಶನಾಸೂಚಿ ಎಂದು ಕರೆದುಕೊಂಡಿರುತ್ತೇವೆ) ಯನ್ನು ಬರೆಯುವುದು ವಾಡಿಕೆ.

ಮುಂದುವರೆದು, ರವಾನೆ ಗುಮಾಸ್ತರು ಭಾಗ–೧ರಲ್ಲಿ ಸೂಚಿಸಿದಂತೆ ಪ್ರತ್ಯೇಕ ಆಯತ ವಹಿಗಳಲ್ಲಿ ನಮೂದಿಸಿ ವಿಷಯನಿರ್ವಾಹಕರಿಗೆ ಮುಂದಿನ ಕ್ರಮಕೈಗೊಳ್ಳಲು ಕಳುಹಿಸಿರುತ್ತಾರೆ. ಭಾಗ–೨ ರಂತೆ ವಿಷಯ ನಿರ್ವಾಹಕರು ಅಧಿಕಾರಿಗಳ ಮಾರ್ಗದರ್ಶನಾ ಸೂಚಿಯಂತೆ ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆ.

ಪ್ರಥಮವಾಗಿ ಈ ಹಂತದಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಯನ್ನು ಗಮನಿಸಿದಾಗ.

ಭಾಗ–೧, ಮತ್ತು ಭಾಗ–೨ರಲ್ಲಿ ಒಬ್ಬ ಅಧಿಕಾರಿಯು ಬಳಸುವ ಮಾರ್ಗದರ್ಶನಾಸೂಚಿಯಲ್ಲಿ ಕನ್ನಡ ಬಳಕೆಯನ್ನು ಗಮನದಲ್ಲಿಟ್ಟುಕೊಂಡು ಪತ್ರದ ಮೇಲೆ ಬರೆಯುವ ಟಿಪ್ಪಣೆಯನ್ನು ಅಚ್ಚುಕಟ್ಟಾಗಿ ಪತ್ರದ ಮೇಲೆ ನಮೂದಿಸಬೇಕಾಗುತ್ತದೆ. ಆದರೆ ಸಾಮಾನ್ಯವಾಗಿ ಪತ್ರಗಳಮೇಲೆ ವಿಭಾಗ ಮತ್ತು ಟಿಪ್ಪಣೆಗಳಲ್ಲಿ ಕನ್ನಡದ ಬಳಕೆ ನಿರ್ಲಕ್ಷ್ಯಕ್ಕೆ ಒಳಗಾಗಿ ಬಳಕೆ ತೀರಾ ಕಡಿಮೆಯಾಗಿರುವುದು ಕಾಣಸಿಗುತ್ತದೆ.

ಪತ್ರದಲ್ಲಿ ಕನ್ನಡ ಬಳಕೆಯಾಗದಿರುವುದಕ್ಕೆ ಕಾರಣಗಳು (ಪತ್ರ, ಟಿಪ್ಪಣಿ, ಕಡೆತ ಕ್ಕೆ ಸಂಬಂಧಿಸಿದಂತೆ)

ಇದಕ್ಕೆ ಕಾರಣ ಒಂದೇ ಎಂದಾಗಲಿ ಅಥವಾ ಆಂಗ್ಲ ಭಾಷೆಯ ಪ್ರಭಾವವೆಂತಲೂ ನಾವು ಹೇಳಲಾಗದು. ಆದಕ್ಕೆ ಹಲವಾರು ಕಾರಣಗಳು ಇವೆ.

ಬಳಕೆಯ ಮನೋಭಾವ ಇಲ್ಲದಿರುವುದು.

ಕನ್ನಡದಲ್ಲಿ ಬರೆದರೆ ಪ್ರತಿಷ್ಠೆ ಕಡಿಮೆಯಾಗಬಹುದೆಂತಲೋ,

ಆಂಗ್ಲಭಾಷೆ ಪ್ರತಿಷ್ಠೆಯ ಭಾಷೆಯಂತಲೋ,

ಇಂಗ್ಲೀಷ್ ಸುಲಭ ಹಾಗೂ ಬೇಗನೇ ಅರ್ಥವಾಗುತ್ತದೆಂಬ ಭಾವನೆಯಿಂದಲೋ,

ಅಧಿಕಾರಿಗಳ ಮಾನಸಿಕ ಸ್ಥಿತಿ,

ಅವರ ಬರವಣಿಗೆ,

ಕಚೇರಿಯಲ್ಲಿನ ಪರಿಸ್ಥಿತಿ,

ಅವರ ಮಾತೃ ಭಾಷೆಯ ಒಲವು

ಮೇಲಿನ ಕಾರಣಗಳನ್ನು ಕನ್ನಡ ಬಳಕೆಯ ಸಂದರ್ಭದಲ್ಲಿ ಪ್ರತಿಯೊಂದನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ.

ಕಚೇರಿಯ ಮುಖ್ಯಸ್ಥರಿಗೆ ಅಥವಾ ಅಧಿಕಾರಿಗಳಿಗೆ ಕನ್ನಡ ಭಾಷೆಯ ಪೂರ್ಣ ಪರಿಚಯವಿಲ್ಲದಿರಬಹುದು. ಆದ್ದರಿಂದ ಬರೆದರೆ ತಪ್ಪಾಗಬಹುದೆಂಬ ಭಾವನೆಯಲ್ಲಿ ಆಂಗ್ಲಭಾಷೆಯ ಬಳಿಕೆಯನ್ನು ಮುಂದುವರಿಸಿರಬಹುದು. ಅಥವಾ ಮಾತೃ ಭಾಷೆ ಕನ್ನಡ ಇಲ್ಲದವರಾಗಿ ಬರವಣಿಗೆ ದೋಷವಾಗಬಹುದೆಂಬ ಭಾವನೆಯು ಅವರಲ್ಲಿ ಇರುವುದೆಂಬುದು. ಇನ್ನು ಕೆಲವು ಅಧಿಕಾರಿಗಳು ಕಚೇರಿಯ ಮುಖ್ಯಸ್ಥರು ಕಚೇರಿಗೆ ಕೆಲವೊಂದು ಪತ್ರಗಳು ಇಂಗ್ಲೀಷ್ ಭಾಷೆಯಲ್ಲಿ ಬಂದಿರುವುದರಿಂದ ನಾವು ಅದರ ಮೇಲೆ ಇಂಗ್ಲೀಷ್‌ನಲ್ಲಿ ಟಿಪ್ಪಣೆಗಳನ್ನು ಬರೆದು ಇಂಗೀಷ್‌ನಲ್ಲಿ ವಿಭಾಗಗಳನ್ನು ಸೂಚಿಸಿರುತ್ತೇವೆ. ಇದು ಬೇಗ ಅರ್ಥವಾಗಲೆಂದು ಹೀಗೆ ಮಾಡುವುದು ಸಹಜ ಎನ್ನುತ್ತಾರೆ. ಕಾರಣಗಳೇನೇ ಇರಬಹುದು ಒಟ್ಟಿನಲ್ಲಿ ಬಳಕೆ ಕಡಿಮೆಯಾಗಿದೆ.

ಸಂದರ್ಶನದ ಸಮಯದಲ್ಲಿ ಕಂಡುಕೊಂಡ ವಿಷಯಗಳು

ಆದರೆ ವಿಷಯವನ್ನು ಪರಿಶೀಲಿಸಿ ನೋಡಿದಾಗ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಹಲವಾರು ಕಚೇರಿ ಕೈಪಿಡಿಗಳು, ಮಾರ್ಗದರ್ಶನ ಪುಸ್ತಕಗಳು, ಬಂದದ್ದಾಗಿಯೂ ಕನ್ನಡ ಬಳಕೆಯ ಆದೇಶಗಳು ಕಟ್ಟುನಿಟ್ಟಾಗಿ ಜಾರಿಯಲ್ಲಿದ್ದರೂ ಬಳಕೆಯ ಬಗ್ಗೆ ನಿರ್ಲಕ್ಷ್ಯ ತೋರಲಾಗಿದೆ. ಇದಕ್ಕೆ ಪರಿಹಾರವಾಗಿ ಪ್ರಾರಂಭದ ಹಂತದಲ್ಲಿಯೇ, ಜಿಲ್ಲಾ ತರಬೇತಿ ಸಂಸ್ಥೆಗಳು ಕಾರ್ಯ ಯೋಜನೆ ರೂಪಿಸಿಕೊಂಡು ಸಂಪೂರ್ಣ ತರಬೇತಿ ಹಾಗೂ ಬಳಕೆಯ ಬಗ್ಗೆ ಅಧಿಕಾರಿಗಳಲ್ಲಿ ಮನೋಸಾಮರ್ಥ್ಯವನ್ನು ಹೆಚ್ಚಿಸಿದಲ್ಲಿ ಮಾತ್ರ ಆಡಳಿತ ಕನ್ನಡ ಬಳಕೆಯಲ್ಲಿ ಸುಧಾರಣೆ ತರಲು ಸಾಧ್ಯವಾಗಬಹುದು.

ಕೇವಲ ಇದೊಂದು ಸಮಸ್ಯೆ ಅಗಿರದೆ ಸವಾಲಾಗಿ ಪರಿಣಮಿಸಿದೆ. ಹೇಗೆಂದರೆ, ಸಮಸ್ಯೆಯನ್ನು ಪರಿಹರಿಸಬೇಕಾದರೆ ಬರೆಯಾವುದರಿಂದ ಆ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗಬಹುದೆಂಬ ನಿರ್ಧಾರಕ್ಕೆ ಬಂದು ಆ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಬಹುದು. ಅಥವಾ ಆ ಸಮಸ್ಯೆಗೆ ಇಂತಹದೇ ಪರಿಹಾರವೆಂದು ತಿಳಿದಲ್ಲಿ ಅದನ್ನು ಬಗೆಹರಿಸಬಹುದು. ಆಧಿಕಾರಿಗಳಿಗೆ ಆಡಳಿತದಲ್ಲಿ ಕನ್ನಡ ಬಳಕೆಯ ಬಗ್ಗೆ ಹಲವಾರು ಆದೇಶಗಳಿದ್ದರೂ ಅದನ್ನು ಜಾರಿಗೆ ತರುವಲ್ಲಿ ವಿಫಲರಾಗುತ್ತಿದ್ದೇವೆ ಎಂದರೆ ಅದು ಕನ್ನಡ ಬಳಕೆಯ ಬಗ್ಗೆ ಅಧಿಕಾರಿಗಳಲ್ಲಿ ಇರುವ ಮನೋಧರ್ಮವನ್ನು ಪ್ರಶ್ನಿಸುವಂತಹದ್ದಾಗಿದೆ. ಎಲ್ಲಾ ಅಧಿಕಾರಿಗಳು ಹಾಗೆಯೇ ಬಳಕೆ ಮಾಡುವರೆಂಬುದಾಗಿ ನಮ್ಮ ಪ್ರತಿಪಾದನೆಯಲ್ಲ. ಬಳಕೆ ಮಾಡಲು ತಿಳಿದದ್ದು ಬಳಕೆಮಾಡಲು ನಿರ್ಲಕ್ಷ್ಯ ತೋರುತ್ತಿರುವ ಅಧಿಕಾರಿಗಳ ಮನೋಧರ್ಮಕ್ಕೆ ಸಂಬಂಧಿಸಿದಂತೆ ಅವುಗಳನ್ನು ತಿದ್ದಿ ಆಡಳಿತದಲ್ಲಿ ಸಂಪೂರ್ಣವಾಗಿ ಮೊದಲ ಹಂತದಲ್ಲಿ ಕನ್ನಡವನ್ನು ಜಾರಿಗೆ ತರುವುದು ಒಂದು ಸವಾಲಾಗಿ ಪರಿಣಿಮಿಸಿದೆ.

ಸಮಸ್ಯೆಗೆ ಪರಿಹಾರ ಸೂಚಿಸಿ ಅದನ್ನು ಜಾರಿಗೆ ತರುವಲ್ಲಿ ಸತತಪ್ರಯತ್ನ ಪಟ್ಟು ಏನೆಲ್ಲಾ ಕಾರ್ಯಯೋಜನೆಗಳನ್ನು ರೂಪಿಸಿ ಅದರ ಸಾರ್ಥಕತೆಗೆ ಪ್ರಯತ್ನಪಟ್ಟರೆ, ಅದನ್ನು ಅಧಿಕಾರಿ

ಹಾಗೂ ಸಿಬ್ಬಂದಿವರ್ಗದವರಲ್ಲಿ ಜಾರಿಗೊಳಿಸಬೇಕು ಹಾಗೂ ಬಳಸಬೇಕು. ನಾವು ಆಡಳಿತದ ಒಂದು ಅಂಗವಾಗಿದ್ದು ಅದನ್ನು ಕಟ್ಟು ನಿಟ್ಟಾಗಿ ಪಾಲನೆ ಮಾಡಬೇಕೆಂಬ ಮನೋಧರ್ಮ ಅಧಿಕಾರಿಗಳಲ್ಲಿ ಅಥವಾ ಸಿಬ್ಬಂದಿವರ್ಗದವರಲ್ಲಿ ಇಲ್ಲವೆಂದರೆ ಇದು ನಿಜವಾಗಿಯೂ ಒಂದು ಸವಾಲಾಗಿ ಪರಿಣಿಮಿಸುತ್ತದೆ.

ಭಿನ್ನ ಭಿನ್ನ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುವಂತಹ ಅಧಿಕಾರಿಗಳು ಒಂದೇ ಮನೋಸಾಮರ್ಥ್ಯವನ್ನು ಹೊಂದಿ ಕಾರ್ಯನಿರ್ವಹಿಸುತ್ತಿರುವುದಿಲ್ಲ. ಸಂದರ್ಭ, ಪರಿಸ್ಥಿತಿಗಳಿಗನುಗುಣವಾಗಿ ಕರ್ತವ್ಯದ ಒತ್ತಡದ ಮಧ್ಯದಲ್ಲಿ ಆಡಳಿತವನ್ನು ನಡೆಸುವ ಸಮಸ್ಯೆಗಳೇ ಹೆಚ್ಚಿರುವ ಸಂಧರ್ಭದಲ್ಲಿ, ಆಡಳಿತದಲ್ಲಿ ಕನ್ನಡ ಬಳಕೆ ಮಾಡಬೇಕೆಂಬ ಕಟ್ಟುನಿಟ್ಟಿನ ಆದೇಶಗಳು ಯಾವ ಫಲಪ್ರಧಾಯವನ್ನು ನೀಡುತ್ತಿಲ್ಲವೆಂಬುದು ನಮ್ಮ ಅಭಿಪ್ರಾಯವಾಗಿದೆ.

ಹಾಗಾಗಿ ಆಧಿಕಾರಿಗಳಲ್ಲಿ ಕನ್ನಡ ಬಳಕೆಯ ಬಗ್ಗೆ ಮನೋಸಾಮಾರ್ಥ್ಯವನ್ನು ಹೆಚ್ಚಿಸುವ ಕಾರ್ಯವನ್ನು ಮಾಡಬೇಕಾಗಿದೆ ಹೊರತು, ಬೇರೆ ಯಾವ ಅದೇಶಗಳಿದಂಲೂ ಇದು ಸಧ್ಯವಾಗುವಂತಹದಲ್ಲದ್ದಾಗಿದೆ.

ಅಧಿಕಾರಿಗಳಿಂದ ಪತ್ರಗಳು ಹಿಂತಿರುಗಿ ಬಂದ ನಂತರ

ರವಾನೆ ಗುಮಾಸ್ತರು ಪತ್ರಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಮಾರ್ಗದರ್ಶನ ಸೂಚಿಗಳನ್ನು ಬರೆದು ಕಳುಹಿಸಿದಂತೆ ರವಾನೆ ಗುಮಾಸ್ತರು ಅವುಗಳನ್ನು ಸಂಬಂಧಪಟ್ಟ ಆಯತವಹಿಗಳಲ್ಲಿ ದಾಖಲಿಸುತ್ತಾರೆ ಹಾಗೂ ದಾಖಲಿಸುವುದು ಸಾಮಾನ್ಯವಾಗಿ ಆಡಳಿತದ ನಿಯಮ. ಹಾಗೆಯೇ ಬಂದ ಪತ್ರಗಳು ಇಂಗ್ಲೀಷ್‌ನಲ್ಲಿದ್ದರೆ ಇಂಗ್ಲೀಷ್‌ನಲ್ಲಿ ಕನ್ನಡದಲ್ಲಿದ್ದರೆ ಕನ್ನಡದಲ್ಲಿ ಯಥಾವತ್ತಾಗಿ ಇಂದ, ದಿನಾಂಕ, ಪತ್ರದ ಸಂಖ್ಯೆ ಮತ್ತು ವಿಷಯಗಳನ್ನು ದಾಖಲಿಸಿ ವಿಷಯನಿರ್ವಾಹಕರಿಗೆ ಕಳುಹಿಸಿಕೊಡುತ್ತಾರೆ.

ಇಲ್ಲಿ ಕನ್ನಡ ಬಳಕೆ ಸಂದರ್ಭ ಬಂದಾಗ ಇಂಗ್ಲೀಷ್‌ನಲ್ಲಿ ಬಂದ ಪತ್ರಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿ ದಾಖಲಿಸುವುದು ಹೇಗೆ? ಎಂಬ ಪ್ರಶ್ನೆ ಉದ್ಭವಿಸಿದರೂ, ಅಂತಹ ಸಂದರ್ಭದಲ್ಲಿ ಬಳಕೆಯ ಅನಿವಾರ್ಯತೆ ಉಂಟಾಗುತ್ತದೆ, ಹಾಗೆಯೇ ಬಳಸಬಹುದಾದ ಅಗತ್ಯತೆಯೂ ಅಲ್ಲಿ ಅವಶ್ಯವಾಗಿ ಪರಿಣಮಿಸುತ್ತದೆ. ಹೀಗಿರುವಾಗ ಆಯತ ಕಡತಗಳಲ್ಲಿ ದಾಖಲಿಸುವ ಸಂದರ್ಭದಲ್ಲಿ ಕನ್ನಡದ ಬಳಕೆಯ ಬಗ್ಗೆ ಯಾವ ಚಕಾರವು ಉದ್ಬವಿಸುವುದಿಲ್ಲವೆಂಬುದು ಅಭಿಪ್ರಾಯ.

ಕಚೇರಿಗೆ ಬಂದ ಕನ್ನಡ ಪತ್ರಗಳನ್ನು ಬೇಗ ದಾಖಲೆ ಪೂರ್ಣಗೊಳ್ಳಲೆಂಬ ಉದ್ದೇಶಕ್ಕಾಗಿ ವಿಳಾಸ ಹಾಗೂ ವಿಷಯಗಳನ್ನು ಇಂಗ್ಲೀಷ್‌ನಲ್ಲಿ ಬಳಸಿ ಬರೆದ ಎಷ್ಟೋ ಉದಾರಣೆಗಳನ್ನು ಆಯತ ವಹಿಯಲ್ಲಿ ಕಾಣುತ್ತೇವೆ. ಕನ್ನಡದಲ್ಲಿ ಬಂದ ಪತ್ರಗಳನ್ನು ಕನ್ನಡದಲ್ಲಿ ದಾಖಲಿಸದೇ ಇರುವುದು ಒಂದು ತಪ್ಪಾದರೆ, ಇಂಗ್ಲೀಷ್‌ನಲ್ಲಿ ದಾಖಲಿಸುವುದು ಎರಡನೆಯ ತಪ್ಪಾಗಿದೆ. ದಾಖಲಿಸುವ ಸಂದರ್ಭದಲ್ಲಿ ತಿರುಚು–ಮುರುಚು, ವಾಕ್ಯದೋಷ, ಶಬ್ದದೋಶಗಳು ಉಂಟಾಗಿ, ಮೂರು ತಪ್ಪುಗಳನ್ನು ಮಾಡಿದಂತಾಗುತ್ತದೆ. ಹಾಗಾಗಿ ಬಂದ ಪತ್ರ ಕನ್ನಡದಲ್ಲಿ ಇದ್ದು ಇಂಗ್ಲೀಷ್‌ನಲ್ಲಿ ಆಯತವಹಿಯಲ್ಲಿ

ದಾಖಲಿಸುವುದು ತಪ್ಪಾಗುತ್ತದೆ. ಇಲ್ಲಿಯೂ ಸಹ ಕನ್ನಡ ಬಳಕೆಯನ್ನು ಕಡೆಗಾಣಿಸಿದಂತಾಗುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಲು ಸಂಬಂಧಪಟ್ಟ ರವಾನೆ ಗುಮಾಸ್ತರಿಗೆ ಮನದಟ್ಟು ಮಾಡಿಕೊಡುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜನೆಯಾಗಬೇಕಾಗಿದೆ. ಇಲ್ಲಿಯೂ ಸಹಿತ ರವಾನೆ ಗುಮಾಸ್ತರ ಮಾನಸಿಕ ಸಾಮರ್ಥ್ಯದ ಮೇಲೆ ಕನ್ನಡದ ಬಳಕೆಯು ನಿರ್ಧಾರವಾಗಿರುತ್ತದೆ.

ಪತ್ರಗಳ ವಿಧಗಳು, ಅವುಗಳಲ್ಲಿ ಕನ್ನಡದ ಬಳಕೆ ಮತ್ತು ಸಮಸ್ಯೆ ಮತ್ತು ಸವಾಲುಗಳು

೧. ಕನ್ನಡ ಬಳಸುವುದೇ ಆಡಳಿತದಲ್ಲಿ ಒಂದು ಉದ್ದೇಶವಲ್ಲ.

೨. ಕನ್ನಡ ಬಳಸುವ ಸಂದರ್ಭದಲ್ಲಿ ಸರಿಯಾದ ರೀತಿಯಲ್ಲಿ ಬಳಸಬೇಕಾದ ಉದ್ದೇಶವೂ ಒಂದಾಗಿದೆ. ಎಂಬುದನ್ನು ತಿಳಿಯಬೇಕಾಗಿದೆ. ಸರಿಯಾಗಿ ಅದನ್ನು ಬಳಸಬೇಕಾಗಿದೆ. ಸರಿಯಾದ ಬಳಕೆಯೆಂಬುದು ಇಲ್ಲಿ ವ್ಯಾಕರಣ ದೋಷ, ವಾಕ್ಯದೋಷ, ವ್ಯಂಗ್ಯ, ಕುಚೇಷ್ಟೆ, ನಿಂದನೆಗಳು ಇಲ್ಲದಂತೆ ಔಚಿತ್ಯಕ್ಕೆ ತಕ್ಕಂತೆ ಬಳಸುವುದಾಗಿದೆ. ಪ್ರತಿಯೊಂದು ಕಚೇರಿಯ ಜೀವಾಳವೇ ಕಚೇರಿಗೆ ಬರುವ ಪತ್ರಗಳು. ಪ್ರತಿಯೊಂದು ಪತ್ರವು ತನ್ನದೇ ಆದ ವಿಷಯ, ಸಂದರ್ಭ ಮತ್ತು ಔಚಿತ್ಯವನ್ನು ಹೊಂದಿರುತ್ತದೆ.

ಆಡಳಿತ ವ್ಯವಹಾರಗಳಿಗೆ ಸಂಬಂಧಿಸಿದ ಇಲ್ಲಾ ರೀತಿಯ ಬರಹಗಳಿಗೆ ಕೆಲವು ರೀತಿಯ ವಿಚಾರವು ಅನ್ವಯವಾಗುತ್ತವೆ. ಒಟ್ಟಿನಲ್ಲಿ ಒಂದು ಆದರ್ಶ ಪತ್ರವು ವಿದ್ವಾಂಸರ ಅಭಿಪ್ರಾಯದಂತೆ ಈ ಕೆಳಕಂಡ ಎಂಟು ದೋಷಗಳಿಂದ ಮುಕ್ತವಾಗಿರಬೇಕು. ಎಂದು ತಿಳಿಸಿದ್ದಾರೆ. ಅವುಗಳೆಂದರೆ

೧. ಕೃತಕತೆ — ೨. ಅಸ್ಪಷ್ಟತೆ

೩. ಅಪಾರ್ಥ — ೪. ಅರ್ಥ ರಾಹಿತ್ಯತೆ

೫. ಗೊಂದಲಮಯತ — ೬. ಸುತ್ತುಬಳಸುವಿಕೆ

೭. ದಾಸ್ಯ ಮನೋಭಾವ — ೮. ವ್ಯಾಕರಣ ದೋಷ ಮತ್ತು ಕಾಗುಣಿತ ದೋಷ.

(ಟಿ.ಎಸ್.ಛಾಯಾಪತಿ, 'ಆಡಳಿತ ಭಾಷೆ ಕನ್ನಡ' ೨೦೦೮ ಪುಟ ಸಂಖ್ಯೆ: ೪೨.)

ಟಿ.ಎಸ್.ಛಾಯಾಪತಿ ಕಚೇರಿಯಲ್ಲಿ ಬಳಕೆಯಾಗುತ್ತಿರುವ ಪತ್ರಗಳನ್ನು ಕಂಡಾಗ ಆಡಳಿತ ವ್ಯವಸ್ಥೆಯಲ್ಲಿ ಕಚೇರಿಯಿಂದ ಕಚೇರಿಗೆ ಭಿನ್ನವಾಗಿ ಪತ್ರಗಳ ಬಳಕೆ ಕಾಣುತಿದ್ದು ಒಂದೇ ಮಾದರಿಯ ಪತ್ರಗಳು ಬಳಕೆಯಾಗುತ್ತಿಲ್ಲ ಅವುಗಳೆಂದರೆ, ಸಾಮ್ಯಾವಾಗಿ ಆಡಳಿತವನ್ನು ಬಿಟ್ಟು ಖಾಸಗಿ, ವಾಣಿಜ್ಯ, ಸರ್ಕಾರಿ ಹಾಗೂ ಇತರೆ ಪತ್ರಗಳೆಂದು ನಾಲ್ಕು ವಿಧಗಳನ್ನಾಗಿ ವಿಂಗಡಿಸಿರುತ್ತಾರೆ.

ಸಿ.ಎಮ್.ವೀರಭದ್ರಯ್ಯಅವರು ಪತ್ರಗಳನ್ನು ಸೂಚನೆ, ತಿಳುವಳಿಕೆ, ಅಧಿಸೂಚನೆ, ನಿರೂಪ, ಹಿಂಬರಹ, ಅಜ್ಞಾಪತ್ರ, ಕಚೇರಿಯ ಆಜ್ಞೆ, ಸುತ್ತೋಲೆ, ಅರೆ ಸರ್ಕಾರಿ ಪತ್ರ, ಪತ್ರಿಕಾ ಪ್ರಕಟಣೆ, ಸಭೆ ನಡವಳಿಗಳು, ಇತರೆ (ಸಿ.ಎಮ್.ವೀರಭದ್ರಯ್ಯ 'ಆಡಳಿತ ಕಚೇರಿ ಕನ್ನಡ ಕೈಪಿಡಿ, ಪುಟ ಸಂಖ್ಯೆ: ೪೨/೪೪) ಎಂದು ವಿಭಾಗಿಸಿದ್ದಾರೆ.

ಟಿ.ಎಸ್. ಛಾಯಾಪತಿಯವರು ಅಧಿಕೃತ ಪತ್ರ, ಅರೆ ಸರ್ಕಾರಿ ಪತ್ರ ಅಥವಾ ಅರ್ಧ ಅಧಿಕೃತ ಪತ್ರ, ಆದೇಶ ಅಥವಾ ನಡೆವಳಿಗಳು ಅಧಿಕೃತ ಜ್ಞಾಪನಾಪತ್ರ, ಸುತ್ತೋಲೆ, ಅಧಿಸೂಚನೆ, ಪತ್ರಿಕಾ ಪ್ರಕಟಣೆ, ಹಿಂಬರಹ, ಸೂಚನೆ, ತಿಳಿವಳಿಕೆ, ತಂತಿ, ತಂತಿ ಪತ್ರ, ಎಂದು (ಟಿ.ಎಸ್. ಛಾಯಾಪತಿ 'ಆಡಳಿತ ಭಾಷೆ ಕನ್ನಡ' ಪುಟ-೪೦)

ರಮೇಶ ಬೇವೂರು ಅವರು ಪತ್ರಗಳನ್ನು ಮೂರುವಿಭಾಗಗಳಾಗಿ ವಿಂಗಡಿಸಿದ್ದಾರೆ.

೧. ಸಾಮಾನ್ಯ ಪತ್ರಗಳು

೨. ಅರೆಸರ್ಕಾರಿ ಪತ್ರಗಳು

೩. ಇತರೆ – ನಡೆವಳಿಗಳು, ಅಧಿಕೃತ ಜ್ಞಾಪನಾಪತ್ರ, ಸುತ್ತೋಲೆ, ಸೂಚನೆ, ಅಧಿಸೂಚನೆ, ಪತ್ರಿಕಾ ಪ್ರಕಟಣೆ, ಹಿಂಬರಹ, ತಿಳಿವಳಿಕೆ. ಇವುಗಳಲ್ಲದೆ ಪುಟ-೧೧೯ರಲ್ಲಿ ವಿಧಿಜ್ಞಾಪನಾ, ಸುತ್ತೋಲೆ,ಪ್ರಮಾಣಪತ್ರ, ಕಚೇರಿ ಆದೇಶ, ಗೆಜೆಟ್ ಅಧಿಸೂಚನೆ, ಆಹ್ವಾನ ಪತ್ರಿಕೆ, ಪ್ರಕಟಣೆ ಜಾಹಿರಾತು, ವರದಿ, ಮತ್ತು ಇತರ ಸೂಚನೆ, ಗಳೆಂದು ವಿಭಾಗಿಸಿದ್ದಾರೆ. (ರಮೇಶ ಬೇವೂರು 'ಆಡಳಿತ ಕನ್ನಡ' ಪುಟ ೧೭ –ಅರ್ಜಿಗಳ, ಪುಟ-೯೧ರಲ್ಲಿ ಪತ್ರ)

ಎಚ್ಚೆಸ್ಕೆ ಅವರು ತಮ್ಮ 'ಆಡಳಿತ ಕನ್ನಡ' ಕೃತಿಯ ಪುಟ-೩೦ ರಲ್ಲಿ ಸರ್ಕಾರಿ ಪತ್ರ ವ್ಯವಹಾರದ ಬಗೆಗಳು ಯಾವುವೆಂಬುದನ್ನು ಪರಿಚಯಿಸಿದ್ದಾರೆ. ಅವು ಈರೀತಿಯಲ್ಲಿವೆ, ಅಧಿಕೃತ ಪತ್ರ, ಅರೆಸರ್ಕಾರಿ ಪತ್ರ ಅಥವಾ ಅರ್ಧ ಅಧಿಕೃತ ಪತ್ರ, ಆದೇಶ ಅಥವಾ ನಡಾವಳಿಗಳು, ಜ್ಞಾಪನಾ ಪತ್ರ, ಸುತ್ತೋಲೆ ಅಥವಾ ಪರಿಪತ್ರ, ಅಧಿಸೂಚನೆ, ಪ್ರಕಟಣೆ, ಮನವಿ ಪತ್ರಕ್ಕೆ ಉತ್ತರ–ಹಿಂಬರಹ–ಟಿಪ್ಪಣಿ–ನಮೂದು, ಸೂಚನೆ, ತಂತಿ, ತಂತಿಪತ್ರ ಎಂದು ವಿಭಾಗಿಸಿರುವುದನ್ನು ಕಾಣುತ್ತೇವೆ.

ಸಾಂಬಮೂರ್ತಿಅವರು 'ಆಡಳಿತ ಕನ್ನಡ' ಪುಸ್ತಕದ ೨೧೫ನೇ ಪುಟದಲ್ಲಿ ಪತ್ರದ ಬಗೆಗಳ ಬಗ್ಗೆ ತಿಳಿಸಿದ್ದಾರೆ ಹಾಗೂ ೨೩೧ ನೇ ಪುಟದಿಂದ ಪತ್ರದ ಬಗೆಗಳು ಮತ್ತು ಮಾದರಿ ಪತ್ರಗಳನ್ನು ವಿವರಿಸಿದ್ದಾರೆ ಅವುಗಳು ಕೆಳಕಂಡಂತಿವೆ.

೧. ಸಾಮಾನ್ಯ ಪತ್ರಗಳು – ೧. ಅರ್ಜಿ, ೨. ಸರ್ಕಾರಿ ಪತ್ರಗಳು, ೩.ಅರೆ ಸರ್ಕಾರಿ ಪತ್ರಗಳು.

೨. ಆದೇಶಾತ್ಮಕ ರೂಪಗಳು – ೧. ಸುತ್ತೋಲೆ, ೨. ಕಚೇರಿ ಆದೇಶ. ೩. ಜ್ಞಾಪನಾ. ೪. ಅಧಿಸೂಚನೆ, ೫. ನಡೆವಳಿಗಳು.

೩. ಪ್ರಕಟಣಾ ರೂಪಗಳು – ೧. ಟೆಂಡರು ೨. ಪ್ರಕಟಣೆ ೩. ಪತ್ರಿಕಾ ಪ್ರಕಟಣೆ ೪. ವಿಚಾರಣಾ ನೋಟೀಸು.

೪. ಇತರೆ – ೧. ಸಭೆ–ಸಮಾರಂಭಗಳ ವರದಿ, ೨. ದಿನಚರಿ. ೩. ತಪಾಸಣಾವರದಿ.

ಮೇಲಿನ ಪತ್ರಗಳ ವಿಧಗಳನ್ನು ನೋಡಿದಾದ, ಸಹಜವಾಗಿ ಪತ್ರಗಳ ವಿಭಾಗಗಳ ಸಂದರ್ಭದಲ್ಲಿ ವ್ಯತ್ಯಾಸಗಳನ್ನು ಕಾಣುತ್ತೇವೆ. ಪ್ರಸ್ತುತ ವಿಭಾಗಗಳಲ್ಲಿ ತಿದ್ದೋಲೆಗಳನ್ನು ಎಲ್ಲಿಯೂ ಪ್ರಸ್ತಾಪಿಸಿರುವುದನ್ನು ನಾವು ಕಾಣುವುದಿಲ್ಲ. ತಿದ್ದೋಲೆಗಳೂ ಸಹ ಆಡಳಿತದ ಮುಖ್ಯವಾದ ಪತ್ರಗಳೇ.

ಪತ್ರದ ಭಾಷೆ ಇರಬೇಕಾದದ್ದು: ೧. ಸರಳ, ೨. ಸುಲಭ, ೩. ಅರ್ಥಸ್ಪಷ್ಟತೆ, ೪.ಸುಲಭಗ್ರಹಿಕೆ. ಈ ರೀತಿಯಲ್ಲಿ ಪತ್ರ ಮಂಡನೆಯಾಗಿರಬೇಕು.

ಆಡಳಿತ ಕನ್ನಡ ಬಳಕೆಯಲ್ಲಿ ಟಿಪ್ಪಣಿ, ಪತ್ರ, ಕಡತಗಳ ಹಂತದಲ್ಲಿನ ಸಮಸ್ಯೆಗಳು:

೧. ಬಂದ ಪತ್ರಗಳು ಕನ್ನಡದಲ್ಲಿ ಇದ್ದರೂ ಅವುಗಳ ದಾಖಲೆ ಆಂಗ್ಲಭಾಷೆಯಲ್ಲಿ ಮಾಡಿ ಕನ್ನಡ ಬಳಕೆಯನ್ನು ಕಡೆಗಾಣಿಸುವುದು ಒಂದು ತೆರನಾದ ಸಮಸ್ಯೆಯಾದರೆ.

೨. ದಾಖಲಿಸುವ ಸಂದರ್ಭದಲ್ಲಿ ತಪ್ಪಾಗಿ (ಬಳಕೆಯಲ್ಲಿ ತಾಂತ್ರಿಕ ದೋಷ) ಕನ್ನಡ ಬಳಕೆಯನ್ನು ಮಾಡುವುದು ಅಥವಾ ಸರಿಯಾದ ರೀತಿಯಲ್ಲಿ ದಾಖಲಿಸದೇ ಇರುವುದು ಇನ್ನೊಂದು ಸಮಸ್ಯೆಯಾಗಿದೆ.

ಈ ಮೇಲಿನ ಎರಡು ಸಮಸ್ಯೆಗಳನ್ನು ಆಯತ ಕಡತದಲ್ಲಿ ನಾವು ಕನ್ನಡ ಬಳಕೆ ಬಗ್ಗೆ ಕಾಣುತ್ತೇವೆ. ಉದಾ:

ಬೇರೆ ಕಚೇರಿಯಿಂದ ಬಂದ ಪತ್ರದಲ್ಲಿ	**ಆಯತ ವಹಿಯಲ್ಲಿ ಇರುವ ವಿಳಾಸ ತರ್ಜುಮೆಗೊಂಡು ದಾಖಲಿಸಲಾದ ವಿಳಾಸ:**
ಜಿಲ್ಲಾಧಿಕಾರಿಗಳ ಕಾರ್ಯಾಲಯ.	D.C., Office. . . .. .
ಸಹಾಯಕ ಆಯುಕ್ತರ ಕಾರ್ಯಾಲಯ.	A.C. Office......
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ	D.C.F.Office......
ನಿರ್ದೇಶಕರು ಗಣಿ ಮತ್ತು ಭೂವಿಜ್ಞಾನ ಇಲಾಖೆ.	Director of Mines & Gologe
ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಬಹುಮಹಡಿ ಕಟ್ಟಡ, ಬೆಂಗಳೂರು.	Govt. Secretary R.D.., M.S., building, Bangalore....
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಭವನ, ಬೆಂಗಳೂರು.	P.C.C.F., Bangalore.....
ಮಹಾಲೇಖಪಾಲರು, ಬೆಂಗಳೂರು.	A.G., Bangalore
ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬೆಂಗಳೂರು.	K.A.T., Bangalore.

ಇಲ್ಲಿ ನಾವು ಕಂಡಂತೆ ಬಳಕೆ ನಿರ್ಲಕ್ಷ್ಯವೂ, ಅಥವಾ ಬಳಕೆಯ ಮನೋಭಾವ ಇಲ್ಲದೆ ಇರುವುದೋ, ಕಾರ್ಯದ ಒತ್ತಡವೂ ಬೇಗ ಮುಗಿಸಬಹುದೆಂಬ ಭಾವನೆಯೇ ಕಾಣದು. ಆದರೆ ಆಯತ ವಹಿಯಲ್ಲಿ ದಾಖಲಿಸುವುದು ಮಾತ್ರ ಹೀಗೆಯೇ ಎಂಬುದು ಕೆಲವೊಂದು ಅಂಶಗಳಿಂದ ಕಂಡುಬಂದಿದೆ ವಿಚಾರಿಸಿದರೆ "ಬಂದಿರುವ ಪತ್ರ ಅಲ್ಲಿಂದ ತಾನೆ ಬಂದಿರುವುದು, ನಾವೇನು

ಮಾಡಿದಿವಿ ಅದನ್ನೇ ಬರೆದಿರುವುದು" ಎಂದು ಹೇಳಿ ತಮ್ಮ ಜಾಣ್ಮೆಯ ತಪ್ಪನ್ನು ಮುಚ್ಚಿದ್ದನ್ನು ನಾವು ನಮ್ಮ ಕ್ಷೇತ್ರಾಧ್ಯಯನದಲ್ಲಿ ಕಂಡಿದ್ದೇನೆ.

"ಅದೆಲ್ಲ ಅಲ್ಲರಿ.... ಕನ್ನಡದ ಬಳಕೆ ಕಡ್ಡಾಯ, ಆದರೇ ತಾವು ಇಂಗ್ಲೀಷ್‌ನ್ನೇ ಬಳಸುತ್ತಾ ಇದ್ದಿರಲ್ಲವೇ ಇದು ತಪ್ಪಲ್ಲವೇ?" ಎಂಬ ನಮ್ಮ ಪ್ರಶ್ನೆಗೆ ಅವರು ನೀಡಿದ ಉತ್ತರ "ಸಾರ್ ಅದೆಲ್ಲಾ ಆದೇಶಗಳಲ್ಲಿ ಮಾತ್ರ ಅಲ್ಲಿ ಕೂತು ಆದೇಶ ಮಾಡೋರಿಗೆ ಇಲ್ಲಿನ ನಮ್ಮ ಪರಿಸ್ಥಿತಿ ಏನು ಗೊತ್ತಾಗಬೇಕು. ನಮಗೆ ಬಂದಹಾಗೆ ಮಾಡ್ತಾ ಇದ್ದೇವೆ ಸಾರ್, ಬೇಗ ಕೆಲ್ಸಾಗಬೇಕಲ್ವಾ ರಾಶಿರಾಸಿ ಟಪಾಲ್ ಬರುತ್ತವೆ ಅವನ್ನೆಲ್ಲಾ ಮಾಡ್ಕೋಂತ ಇತರ ಕೆಲಸ ಮುಗಿಯೋದು ಯಾವಾಗ ಸಾರ್, ಅದೆಲ್ಲಾ ಇಲ್ಲ ಸಾರ್ ಎನ್ನುತ್ತಾರೆ," ಆಡಳಿತದ ಪ್ರಾರಂಭದ ಹಂತದಲ್ಲಿಯೇ ಕನ್ನಡ ಬಳಕೆ ಈ ರೀತಿಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂದಾದಲ್ಲಿ ಮುಂದಿನ ಹಂತದಲ್ಲಿ ಗಹನವಾಗಿ ಪರಿಶೀಲಿಸುವ ಅಗತ್ಯ ಹಾಗೂ ಅನಿವಾರ್ಯತೆಯೂ ಇದೆ.

೬.೨.೨. ಟಿಪ್ಪಣಿಗಳು

ಟಿಪ್ಪಣಿ– ಕನ್ನಡ ಬಳಕೆ : ಸಮಸ್ಯೆ

ಸರ್ಕಾರಿ ಕಚೇರಿಗಳಿಗೆ ಬಂದ ಪತ್ರಗಳನ್ನು ವಿಷಯ ನಿರ್ವಾಹಕರು ಮೇಲಾಧಿಕಾರಿಗಳ ಗಮನಕ್ಕೆ ತರಲು ಹಾಗೂ ಅದನ್ನು ಇತ್ಯರ್ಥಗೊಳಿಸುವುದಕ್ಕಾಗಿ ವ್ಯವಸ್ಥಿತವಾಗಿ ವಿವರಣೆಯೊಂದಿಗೆ ಮೇಲಾಧಿಕಾರಿಗಳ ಗಮನಕ್ಕೆ ಹಾಗೂ ನಿರ್ದೇಶನಕ್ಕಾಗಿ ರಚಿಸಲ್ಪಡುವ ಕಡತದ ಮೊದಲ ಭಾಗವೇ ಟಿಪ್ಪಣಿ. ಟಿಪ್ಪಣಿಗಳು ಕಡತದ ಎಡಬದಿಯಲ್ಲಿದ್ದು ಬಲ ಬದಿಯಲ್ಲಿ ಕಡತ ಇದ್ದು ಟಿಪ್ಪಣಿ ಆಧಾರದ ಮೇಲೆ ಕಡೆತ ಮುಂದುವರಿದಿರುತ್ತದೆ. **(ಅನುಬಂಧ–೧೧.ಆ)** ಮಂಡಿಸಲಾಗುವ ವಿವರಣೆಯನ್ನೊಳಗೊಂಡ ಮಾಹಿತಿಯೇ ಟಿಪ್ಪಣಿ. ಹಾಗಾಗಿ 'ಟಿಪ್ಪಣಿಗಳು ಆಡಳಿತವನ್ನು ನಡೆಸುವ ನಾವಿಕ ನಿದ್ದಂತೆ'.

ಟಿಪ್ಪಣಿ ಅಥವಾ ಓಪ್ಪಣಿ ಇದೊಂದು ಕಚೇರಿಯ ಆತ್ಮಭಾಗ. ಇದರ ಚಟುವಟಿಕೆಗಳೆಲ್ಲಾ ಆಂತರಿಕವಾಗಿ ಕಚೇರಿಯ ಒಳಗೆ ನಡೆಯುತ್ತದೆ. ವಿಷಯ ನಿರ್ವಾಹಕರು ಮತ್ತು ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಮಾತ್ರ ಇದರ ಸಂಪೂರ್ಣ ವಿಷಯ ತಿಳಿದಿರುತ್ತದೆ. ಅಲ್ಲದೆ ಪತ್ರದ ಮೇಲಿನ ಜವಾಬ್ದಾರಿಯನ್ನು ನಿರ್ಧರಿಸುವುದು ಈ ಕಚೇರಿ ಟಿಪ್ಪಣಿ. ಯಾರೂ ಇದರಿಂದ 'ನಾನಲ್ಲ' ಮತ್ತು 'ನಾಮಾಡಿಲ್ಲ' ಎಂದು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಕಾರಣ ಪ್ರತಿಯೊಂದು ವಿಷಯವು ಅನುಕ್ರಮಣೀಯವಾಗಿ ಪತ್ರ ಬಂದಂದಿನಿಂದ ಪತ್ರದ ಇತ್ಯರ್ಥವಾಗುವವರೆಗೂ ಸೂಕ್ಷ್ಮ ವಿಷಯ, ಅಭಿಪ್ರಾಯ, ಆದೇಶಗಳೆಲ್ಲವೂ ಅನುಕ್ರಮವಾಗಿ ದಾಖಲಾಗಿರುತ್ತವೆ.

ಟಿಪ್ಪಣಿಗಳೇ ಕಚೇರಿಗಳ ಕ್ರಿಯಾಶಕ್ತಿ ಭಾಗವಾಗಿರುತ್ತದೆ. ಟಿಪ್ಪಣಿಗಳು ಒಪ್ಪಿಗೆಯಾದಲ್ಲಿ ಎಲ್ಲವೂ ಒಪ್ಪಿಗೆಯಾದಂತೆ. ಹಾಗಾಗಿ ಟಿಪ್ಪಣಿಗಳು ಕಚೇರಿಯ ಕಡತಗಳಲ್ಲಿ ಬಹುಮುಖ್ಯವಾದ ಸ್ಥಾನವನ್ನು ಪಡೆದಿರುತ್ತದೆ. ಪ್ರತಿಯೊಂದು ಕಡತವೂ ಬೆಳೆಯುವುದೇ ಟಿಪ್ಪಣಿಯ ಆಧಾರದಿಂದ ಟಿಪ್ಪಣಿಗಳಲ್ಲಿದೆ ಕಚೇರಿಯ ಯಾವ ಕೆಲಸಗಳೂ ನಡೆಯುವುದಿಲ್ಲ. ಟಿಪ್ಪಣಿಗಳು ಆಂತರಿಕವಾಗಿ ಕೈಗೊಂಡ ನಿರ್ಣಯದ

ಮಾಹಿತಿ ನೀಡುವ ಸ್ವರೂಪವಾಗಿದೆ. ಟಿಪ್ಪಣಿಗಳು ಅರ್ಜಿರೂಪದಲ್ಲಿ, ಮನವಿ ರೂಪದಲ್ಲಿ, ದೂರಿನ ರೂಪದಲ್ಲಿ, ಬೇಡಿಕೆ ರೂಪದಲ್ಲಿ, ಸಂಕ್ಷಿಪ್ತ ರೂಪವಾಗಿ, ವಿವರಣಾ ರೂಪವಾಗಿ ಇರಬಹುದು. ಟಿಪ್ಪಣಿಗಳು ಸಂಕ್ಷಿಪ್ತತೆಯಿಂದ ಸ್ಪಷ್ಟವಾಗಿ ಕೂಡಿರಬೇಕು ಎನ್ನುವುದು ಆಡಳಿತದ ಒಂದು ಚೌಕಟ್ಟು.

ಟಿಪ್ಪಣಿಗಳ ಲಕ್ಷಣಗಳು:

೧. ಖಚಿತತೆ: ಉದಾ: ಪತ್ರಬಂದಿದೆ/ಬಂದಿಲ್ಲ. ಬಂದಂತಿದೆ, ಬಂದಿರಬಹುದು
ಇದೆ/ಇಲ್ಲ. ಇರಬಹುದು, ಇರಲಿಕ್ಕಿಲ್ಲ.

೨. ಸಂಕ್ಷಿಪ್ತತೆ–ಒಪ್ಪಿಗೆಗಾಗಿ ಮಂಡಿಸಿದೆ.

೩. ವ್ಯವಹಾರಿಕತೆ

೪. ಅರ್ಥಪೂರ್ಣತೆ–ಅಸಂಬಂಧ ಅನಗತ್ಯವಾದ ಅಂಶಗಳು ಇರಬಾರದು

೫. ಸರಳತೆ–ಆಡಂಬರಹಿತ ನೇರಭಾಷೆ,

೬. ಸ್ಪಷ್ಟತೆ

ಟಿಪ್ಪಣಿಗಳ ವಿಧಗಳು

೧. ಸಾಮಾನ್ಯ ರೂಪದ ಟಿಪ್ಪಣಿ: ಆದೇಶ ಸೂಚಕ ಮತ್ತು ಆದೇಶಯಾಚಿಕ ಎಂಬ ಎರಡು ಟಿಪ್ಪಣಿಗಳಿವೆ ಎಂದು ವೀರಭದ್ರಯ್ಯ ಅವರು ತಿಳಿಸಿದರೆ ಅದಕ್ಕೆ ಇನ್ನೊಂದನ್ನು ಸೇರಿಸಿ ಸಾಂಬಮೂರ್ತಿ ಅವರು 'ಆಡಳಿತ ಕನ್ನಡ' ಕೃತಿಯ ಒಂದು ಲೇಖನದಲ್ಲಿ ವಿವರಿಸಿದ್ದಾರೆ. ಆದರೆ ಟಿ.ಎಸ್.ಛಾಯಾಪತಿಯವರು ಅನೇಕ ಪ್ರಕಾರಗಳಿವೆ ಅವುಗಳಲ್ಲಿ ಕೆಲವೊಂದು ಗುಂಪು ಮಾಡಿ ವಿಭಾಗಗಳನ್ನಾಗಿ ಮಾಡಿದ್ದಾರೆ.

೧. ಪರಿಶೀಲನೆ, ಮಾಹಿತಿ ಮತ್ತು ಸಾಮಾನ್ಯ ಟಿಪ್ಪಣೆಗಳು

ಉದಾ:– ೧. ಗಮನಿಸಿ ಹಿಂದಿರುಗಿಸಲಾಗಿದೆ, ಮಾಹಿತಿಗಾಗಿ ಮಾತ್ರ

೨. ರವಾನೆ, ಒಪ್ಪಿಗೆ, ಕಾಗದ, ಪತ್ರಗಳನ್ನು ತರಿಸುವುದಕ್ಕಾಗಿ, ಪರಿಸ್ಥಿತಿಗಳನ್ನು ಅರಿತು ಕೊಳ್ಳುವುದಕ್ಕಾಗಿ ಟಿಪ್ಪಣಿಗಳು.

ಉದಾ:– ಸೂಕ್ತ ಕ್ರಮಕ್ಕಾಗಿ ಕಾರ್ಯದರ್ಶಿಗಳಿಗೆ ಕಳುಹಿಸಲಾಗಿದೆ.

೨. ಸಲಹೆ ಸೂಚನೆಗಳನ್ನು ಕೊಡುವ ಟಿಪ್ಪಣೆಗಳು,

ಉದಾ:– ೧. ಮೇಲಾಧಿಕಾರಿಯ ಒಪ್ಪಿಗೆ ಪಡೆಯಬಹುದು

೨. ಈ ಸುತ್ತೋಲೆ ಸರಿಯಾಗಿದೆ.

೩. ಸಂಕ್ಷಿಪ್ತ ಆದೇಶದ ಟಿಪ್ಪಣೆಗಳು:

ಉದಾ:– ಚರ್ಚಿಸಿ, ಆದೇಶ ಕೊಡಬಹುದು, ವರದಿ ಸಲ್ಲಿಸು ಇತ್ಯಾದಿ

ರಮೇಶ್ ಬೇವೂರು ಅವರು ತಮ್ಮ ಆಡಳಿತ ಕನ್ನಡದಲ್ಲಿ ೪ ವಿವಿಧ ಟಿಪ್ಪಣಿಗಳನ್ನು ತಿಳಿಸಿದ್ದಾರೆ. ೧), ೨), ೩), ಮೇಲಿನದು.

೪) ಹಣಕಾಸು, ಆಡಳಿತ ಸಂಬಂಧಿತ ಆದೇಶದ ಟಿಪ್ಪಣಿಗಳು ಎಂದು ಬಿಂಬಿಸಿದ್ದಾರೆ.

ಟಿಪ್ಪಣಿಗಳನ್ನು ನೋಡಲಾಗಿ ಒಂದರಂತೆ ಮತ್ತೊಂದು ಕಂಡುಬಂದರೂ ಕೆಲವೊಂದು ಸಂದರ್ಭದಲ್ಲಿ ವಿಭಾಗಿಸುವುದು ಕಷ್ಟವಾಗುತ್ತದೆ. ಮೇಲಿನ ಎಲ್ಲಾ ಟಿಪ್ಪಣಿಗಳನ್ನು ಎರಡು ವಿಭಾಗಗಳನ್ನು ಮಾಡಲಾಗಿದೆ.

ಉದಾ:– ೨ ಭಾಗ ಮಾಡಲಾಗಿದೆ.

೧) ಸಾಮಾನ್ಯ ಟಿಪ್ಪಣಿಗಳು– ಉದಾ: ಮಾಹಿತಿಗಾಗಿ ಮಾತ್ರ, ಸುಕ್ತ ಕ್ರಮ ಕೈಕೊಳ್ಳಲಾಗಿದೆ.

೨) ಆದೇಶದ ಟಿಪ್ಪಣಿಗಳು

೧. ಆದೇಶ ಸೂಚಕ–ಅನುಮೋದನೆಗಾಗಿ ಮಂಡಿಸಿದೆ, ಆದೇಶ ಸಲ್ಲಿಸಿ.

೨. ಆದೇಶ ಯಾಚಕ:– ಚರ್ಚಿಸಿ, ವರದಿ ತಯಾರಿಸಿ,

ಪ್ರತಿಯೊಂದು ಟಿಪ್ಪಣಿಗಳು ರಚನೆಯಾಗುವುದು ಕಾರ್ಯಾಲಯಕ್ಕೆ ಸ್ವೀಕೃತಿಯಾದ ಪತ್ರದ ಸ್ವರೂಪದಿಂದಲೇ. ಸ್ವೀಕೃತಿಯಾದ ಪತ್ರವನ್ನು ನೋಡಿದ ಅಧಿಕಾರಿಯು ಆ ಪತ್ರವನ್ನು ಮುಂದೆ ಏನು ಮಾಡಬೇಕೆಂಬುದನ್ನು ಅಥವಾ ಅನುಸರಿಸಬೇಕಾದ ಕ್ರಮಗಳನ್ನು ತನ್ನ ಕಿರು ಸಹಿ ದಿನಾಂಕ, ಮತ್ತು ಶಾಖೆಯ ಹೆಸರಿನಲ್ಲಿ ನಮೂದಿಸಿ ಕಳುಹಿಸುತ್ತಾನೆ, ಆತನಿಂದಲೇ ಕಡತ ಮತ್ತು ಕಚೇರಿ ಟಿಪ್ಪಣಿಗಳು ಪ್ರಾರಂಭವಾಗುತ್ತವೆ.

ಉದಾ:– ಸ್ವೀಕೃತ ಪತ್ರದ ಮೇಲೆ ಅಧಿಕಾರಿಯು ಈ ಕೆಳಕಂಡಂತೆ ಬರೆಯುತ್ತಾನೆ

೧. ಚರ್ಚಿಸಿ,

೨. ವರದಿ ತಯಾರಿಸಿ,

೩. ಮಾಹಿತಿ ಸಿದ್ಧಪಡಿಸಿ

೪. ಮಾಹಿತಿ ನೀಡಿ

೫. ಮಂಡಿಸಿ

೬. ಹಿಂಬರ ನೀಡಿ

೭. ಕಡೆತಕ್ಕೆ ಜೋಡಿಸಿ

೮. ಮುಂದಿನ ಕ್ರಮ ಕೈಗೊಳ್ಳಿ.... ಇತ್ಯಾದಿ

ಈ ರೂಪದಲ್ಲಿ ಅಧಿಕಾರಿಯು ತನ್ನ ಅಭಿಪ್ರಾಯವನ್ನು ಸ್ವೀಕೃತಿ ಪತ್ರದ ಮೇಲೆಯೇ ಬರೆದು ಸಂಬಂಧಪಟ್ಟ ಕಾರ್ಯನಿರ್ವಾಕರಿಗೆ ಸಲ್ಲಿಸುತ್ತಾರೆ. ಆದರೆ ನೋಡಲಾಗಿ ಕೆಲವೊಂದು ಅಧಿಕಾರಿಗಳು ಬರೆಯುವುದರಲ್ಲಿ ಕೆಲವೊಂದು ದೋಷಗಳನ್ನು ಕಾಣುತ್ತೇವೆ. ಉದಾ;

ಬರೆದಿದ್ದು	ಬರೆಯಬೇಕಾದದ್ದು
Discuss ಈ ವಿಷಯ ಕುರಿತು ಚರ್ಚಿಸಬೇಕಾಗಿದೆ.	ಚರ್ಚಿಸಿ, ಕಡತದಲ್ಲಿ ಮಂಡಿಸಿ,
File Put up or Put up file	ಕಾರಣಕೇಳಿ ಹಿಂಬರ ನೀಡಿ,

ಅರ್ಜಿದಾರರಿಗೆ ಕಾರಣಕೇಳಿ ಮರುಪತ್ರ ಬರೆಯಿರಿ	ಸರಿಯಾದ ಕ್ರಮ ಕೈಗೊಳ್ಳಿ
Take necessary action, give memo.	ನೋಟೀಸು ನೀಡಿ,
ಅನುಮೋದನೆಗಾಗಿ ಪತ್ರದ ಕರಡನ್ನು ಕಳುಹಿಸಿದೆ,	ಕರಡು ಪ್ರತಿ ಅನುಮೋದನೆಗೆ?
ಆದೇಶಕ್ಕಾಗಿ ಒಪ್ಪಿಸಿದೆ.	ತಮ್ಮ ಆದೇಶಕ್ಕಾಗಿ,
ಅಗತ್ಯವಾದ ಮಾಹಿತಿ ಇಲ್ಲ, ಅದನ್ನು ಒದಗಿಸಬೇಕು.	ಮಾಹಿತಿ ಲಭ್ಯವಿಲ್ಲ, ಸಲ್ಲಿಸಲು ಕೋರಿದೆ/ಸೂಚಿಸಿದೆ.

೧. Discuss ಎಂದು ಆಂಗ್ಲ ಭಾಷೆಯಲ್ಲಿ ಬರೆಯುವುದು ಅಥವಾ ವಿಷಯ ನಿರ್ವಹಕರಿಗೆ ತಿಳಿಸಬೇಕಾದ ಮಾಹಿತಿಯನ್ನು ಆಂಗ್ಲಭಾಷೆಯಲ್ಲಿ ಬರಯುವುದು.

೨. ಕನ್ನಡದಲ್ಲಿ ಮಂಡಿಸಿ ಎನ್ನುವುದನ್ನು Put up file, file put up, ಎಂದು ಬರೆಯುವುದು ಸರ್ವೇಸಾಮಾನ್ಯವಾಗಿ ಕಾಣಸಿಗುತ್ತದೆ.

ಇದಕ್ಕೆ ಕಾರಣಗಳನ್ನು ಕಂಡುಕೊಂಡಾಗ ವ್ಯಕ್ತಿಗತ ನೆಲೆಯಲ್ಲಿ ಕಾರಣಗಳು ಕಂಡುಬರುತ್ತವೆ.

೧. ಅಭ್ಯಾಸ ಬಲ, ಇಂಗ್ಲೀಷಿನ ವ್ಯಾಮೋಹ, ಇಂಗ್ಲೀಷ್ ಪ್ರತಿಷ್ಠೆಯ ಭಾಷೆ ಎಂಬ ಮನೋಭಾವ

೨. ಕನ್ನಡ ಭಾಷೆಯ ಬಗ್ಗೆ ಇರುವ ಅಪೂರ್ಣಮಾಹಿತಿ

೩. ಬೆಳೆದುಬಂದ ವಾತಾವರಣಗಳು ಈ ಗೊಂದಲಕ್ಕೆ ಕಾರಣವೆಂದು ತಿಳಿಯಲಾಗುತ್ತದೆ. ಮೊದಲನೆಯದಾಗಿ ಟಿಪ್ಪಣೆಗಳಲ್ಲಿ ಕನ್ನಡದ ಬಳಕೆ ಸರಿಯಾಗಿ ಆಗಬೇಕಿದೆ. ಇಲ್ಲಿನಿಂದಲೇ ಆಡಳಿತ ಪ್ರಾರಂಭವಾಗುವುದರಿಂದ ಇಲ್ಲಿನ ಬಳಕೆ ಶುದ್ಧ ಹಾಗೂ ಸ್ಪಷ್ಟವಾಗಿ ಕನ್ನಡದ ಬಳಕೆ ಆಗಬೇಕಿದೆ. ಅದಕ್ಕಾಗಿ ಮಾಡಬೇಕಾಗಿರುವ ಕಾರ್ಯವೆಂದರೆ,

  ೧. ಅಧಿಕಾರಿಗಳಿಗೆ ಇದರ ಬಗ್ಗೆ ಮನವರಿಕೆ ಮಾಡಿಕೊಡುವುದು, ಬಳಕೆ ಕಡ್ಡಾಯವೆಂಬುದನ್ನು ತಿಳಿಸುವುದು.

  ೨. ಬಳಸಬೇಕಾದ ಕನ್ನಡ ಭಾಷೆ/ ಬಳಕೆಯ ಪರಿಚಯ ಹಾಗೂ ಅದರ ಸ್ಪಷ್ಟತೆಯನ್ನು ತಿಳಿಸುವುದು.

ಟಿಪ್ಪಣೆಯ ರಚನಾ ಕ್ರಮದಲ್ಲಿ ಕೆಲವೊಂದು ಮುಖ್ಯಾಂಶಗಳನ್ನು ಗಮನಿಸಬೇಕಾಗುತ್ತದೆ.

೧. ಪತ್ರದ ಪ್ರಸ್ತಾವನೆ, ಸ್ಪಷ್ಟ ವಿವರಣೆ

೨. ತೀರ್ಮಾನಿಸಬೇಕಾದ ಅಂಶ

೩. ಸಂದರ್ಭಕ್ಕೆ ತಕ್ಕಂತೆ ಸಂಬಂಧಿಸಿದ ನಿಯಮ, ಆದೇಶಗಳು, ವಿಧಾನಗಳು, ಅನ್ವಯಿಸುವಿಕೆ

೪. ಪ್ರಸ್ತಾಪದ ತಿರ್ಮಾನ ಸಲಹೆ/ ಸಾಧಕ ಭಾದಕದ ಚರ್ಚೆ.

೫. ಟಿಪ್ಪಣಿಗೆ ಕ್ರಮ ವಹಿಸುವಿಕೆ ಪ್ರಸ್ತಾಪದ ಅಂತಿಮ.

೬. ಪ್ರಸ್ತಾಪದ ಅಂತಿಮ ಕ್ರಮ/ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಸಲಹೆ ಅಭಿಪ್ರಾಯ

ಟಿಪ್ಪಣಿ ಅನುಕ್ರಮಣಿಕೆಯಲ್ಲಿ ಇರತಕ್ಕದ್ದು.

೧) ಟಿಪ್ಪಣಿಯು ಕಂಡಿಕೆಯ ಪ್ರಕಾರ ಅನುಕ್ರಮವನ್ನು ಸೂಚಿಸಬೇಕು.

೨) ಟಿಪ್ಪಣಿ ರಚನೆಯ ಹಂತ ಮುಗಿದನಂತರ ಸ್ಪಷ್ಟಾವಕಾಶಕಲ್ಪಿಸಿ, ಕೊಟ್ಟು ಅದನ್ನು ಮೇಲಾಧಿಕಾರಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಬೇಕಾಗುತ್ತದೆ.

೩) ಅಂದವಾದ ಬರವಣಿಗೆಯಿಂದ ಸ್ಪಷ್ಟವಾಗಿ ಬರೆದಿರಬೇಕು.

೪) ಟಿಪ್ಪಣಿಗಳ ಬರಹದಲ್ಲಿ ವೈಯಕ್ತಿಕ ವಿಚಾರ ದ್ವೇಷ ಅಸೂಯೆಗಳು ಸಾಲುಗಳ ಮಧ್ಯದಲ್ಲಿ ಬರಬಾರದು. ಉದಾ;

ಅಸ್ಪಷ್ಟ ಟಿಪ್ಪಣಿ	**ಸ್ಪಷ್ಟ ಬಳಕೆ.**
ಈ ಬಗ್ಗೆ ಈಗಾಗಲೇ ಉತ್ತರ ಬರೆದಂತಿದೆ.	ಈ ಬಗ್ಗೆ ಈಗಾಗಲೇ ಉತ್ತರ ಬರೆದಿದೆ/ಬರೆದಿಲ್ಲ.
ಸದರಿಯವನ ಮನವಿಯನ್ನು ಬೇಕಾದರೆ ಒಪ್ಪಿಸಬಹುದು.	ಸದರಿಯವರ ಮನವಿಯನ್ನು ಒಪ್ಪಬಹುದು/ಒಪ್ಪುವಂತಿಲ್ಲ.
ಸಂಬಂಧಪಟ್ಟ ದಾಖಲೆ ಈ ಕಚೇರಿಯಲ್ಲಿ ಲಭ್ಯವಿಲ್ಲ ಪ್ರಸ್ತಾಪವನ್ನು ಅರಣ್ಯ ಅಥವಾ ಗಣಿ ಇಲಾಖೆಗೆ ಕಳುಹಿಸಿ ಅಭಿಪ್ರಾಯ ತರಬಹುದು.	ಪ್ರಸ್ತಾವನೆಯನ್ನು ಅರಣ್ಯ ಇಲಾಖೆಗೆ, ಗಣಿ ಕಳುಹಿಸಿ ಅಭಿಪ್ರಾಯ ಪಡೆದುಕೊಳ್ಳಿ.
ನಾನು ಪತ್ರವನ್ನು ಬರೆದಿದ್ದೇನೆ.	ಪತ್ರವನ್ನು ಬರೆಯಲಾಗಿದೆ, ಕರಡನ್ನು ಅನುಮೋದಿಸಲಾಗಿದೆ.

ವೈಯಕ್ತಿಕ ವ್ಯಂಗ ಮಾಡಿದ ಟಿಪ್ಪಣಿಗಳಿರಬಾರದು.

ಉದಾ:- ೧. ಜಂಟಿ ನಿರ್ದೇಶಕರಿಗೆ ಇಷ್ಟುಗೊತ್ತಿಲ್ಲದಿರುವುದು ವಿಷಾದನೀಯ,

೨. ಏನೇ ಆಗಲಿ ಈ ಕೋರಿಕೆಯನ್ನು ಮನ್ನಿಸಲು ಸಾದ್ಯವಿಲ್ಲ.

೩. ತಮ್ಮ ಅಮೂಲ್ಯವಾದ ಮೇಲುರುಜುಹಾಕಿ ಕಳುಹಿಸಿ,

೪. ವಿಷಯ ನಿರ್ವಾಹಕರು ಕಣ್ಣುಮುಚ್ಚಿ ಕೆಲಸ ಮಾಡುವಂತಿದೆ,

೫. ಅವರು ಮತ್ತೊಮ್ಮೆ ಕೆ.ಸಿ.ಎಸ್.ಆರ್. ಓದಲಿ,

೬. ಪ್ರಸ್ತಾಪವನ್ನು ಅನುಮೋದಿಸಿದ್ದೇನೆ,

೭. ಶ್ರೀಯುತರಿಗೆ ತಿಳಿಸಿದ್ದೇನೆ,

ಅಸಹನೆ ಮಾಡಿದ ಟಿಪ್ಪಣಿಗಳಿರಬಾರದು

೧. ವಿಷಯಕ್ಕೆ ಸಂಬಂಧಿಸಿದಂತೆ ಯಾವ ಕ್ರಮಕೈಗೊಳ್ಳಬಹುದು ಎಂದು ಹೇಳುವುದು

೨. ಪುನರಾವರ್ತನೆ ಬೇಕಾಗಿಲ್ಲ. ಸೂಕ್ತ ವಾಕ್ಯಗಳಿದ್ದರೆ ಸಾಕು.

೩. ಭಾಷೆ ಸತ್ವವಾಗಿರಬೇಕು.


೪. ಕುಚೋದ್ಯ ಮತ್ತು ವ್ಯಂಗ ವಿರಬಾರದು.

೫. ಟಿಪ್ಪಣಿ ರಚಿಸುವವನು ಮಾಹಿತಿ ಬಲ್ಲವನಾಗಿರಬೇಕು.

ಶೀಘ್ರ ಪತ್ರಗಳ ಸಾಧಕ ಭಾದಕಗಳ ಪರಿಶೀಲನೆ ಹಾಗೂ ಅಧಿಕಾರಿಗಳಿಗೆ ಪ್ರಕರಣಗಳ ವಿಷಯದ ಮನವರಿಕೆ ಇತ್ಯಾದಿಗಳು ಸಹಾಯವಾಗುವುದೇ ಕಚೇರಿ ಟಿಪ್ಪಣೆ ಉದ್ದೇಶ. ಉತ್ತಮ ಟಿಪ್ಪಣಿಗಳಿಂದ ಪ್ರಕರಣಗಳ ವಿಲೇವಾರಿ ಶೀಘ್ರವಾಗಿ ಆಗುತ್ತದೆ ಅಸಮರ್ಪಕ ಟಿಪ್ಪಣಿಗಳಿಂದ ಪ್ರಕರಣವು ಬೇಗ ಇತ್ಯಾರ್ಥವಾಗುವಲ್ಲಿ ವಿಳಂಬವಾಗುತ್ತದೆ. ಕೆಲವೊಮ್ಮೆ ಅಧಿಕಾರಿಗಳ ಮನೋವೃತ್ತಿಯನ್ನು ಅವಲಂಬಿಸಿ ಟಿಪ್ಪಣಿ ಅಸಮರ್ಪಕವೆಂದು ಪ್ರಕರಣ ವಿಳಂಬವಾಗುವ ಸಾದ್ಯತೆಗಳುಂಟಾಗುತ್ತವೆ. ಟಿಪ್ಪಣಿಯ ಅಚ್ಚುಕಟ್ಟು ಈ ರೀತಿಯಿಂದ ಕಡತ ಟೇಬಲ್ಲಿನಿಂದ ಟೇಬಲ್ಲಿಗೆ ಸಾಗುತ್ತ ಕಾಲವಿಳಂಬಕ್ಕೆ ದಾರಿ ಮಾಡಿಕೊಡಬಹುದು. ಒಂದು ಕೆಟ್ಟ ಟಿಪ್ಪಣಿ ಹಲವಾರು ಕೆಟ್ಟ ಟಿಪ್ಪಣಿಗಳಿಗೆ ದಾರಿ ಮಾಡಿಕೊಡುತ್ತದೆ. ಆದ ಕಾರಣ ಉತ್ತಮ ವಾಕ್ಯಗಳಿಂದ ರಚಿಸಲ್ಪಟ್ಟ ಸ್ಪಷ್ಟವಾದ, ಸರಳವಾದ, ಟಿಪ್ಪಣಿಗಳನ್ನು ರಚಿಸತಕ್ಕದ್ದು ವಿಷಯ ನಿರ್ವಾಹಕರ ಕರ್ತವ್ಯವಾಗಿದೆ.

ಒಂದು ಪ್ರಕರಣದ ವಿಲೇವಾರಿ ಬಗ್ಗೆ ಕಚೇರಿಯ ಅಧಿಕಾರಿ ಹಾಗೂ ನೌಕರರ ಬಗ್ಗೆ ನಡೆಯುವ ಲಿಖಿತ ರೂಪದ ಚರ್ಚೆ. ಯಾವುದೇ ಸಮಸ್ಯೆಯನ್ನು ಬಗೆಹರಿಸಲು ಸಂಬಂಧಪಟ್ಟ ಅಧಿಕಾರಿಗಳ ಮೂಲಕ ತಮ್ಮ ಅಧೀನ ನೌಕರರ ಹತ್ತಿರ ಚರ್ಚಿಸಿ, ಒಂದು ನಿರ್ಣಯಕ್ಕೆ ಬಂದು ಚರ್ಚೆಯ ನಕಾರಾಂಶವನ್ನು, ನಿರ್ಣಯವನ್ನು ಟಿಪ್ಪಣಿ ರೂಪದಲ್ಲಿ ಬರಯಬೇಕು ಆದರಿಂದ ಪ್ರಕರಣದ ವಿಲೇವಾರಿಗೆ ಸಹಾಯವಾಗುವುದೇ ಟಿಪ್ಪಣಿಗಳು.

ಟಿಪ್ಪಣಿಗಳು ಯಾವಾಗಲೂ ಕೆಳಕಂಡಂತೆ ತ್ರಿಕೋನಾಕಾರದಲ್ಲಿ ಒಂದನ್ನೊಂದು ಬಿಡದಂತೆ ಸುತ್ತುತ್ತಿರುತ್ತವೆ.



ಟಿಪ್ಪಣಿಗಳ ರಚನಾ ಕ್ರಮದಲ್ಲಿ ಆಡಳಿತದ ಹಂತದಲ್ಲಿ ಕೆಳಕಂಡ ದೋಷಗಳು ಕಂಡುಬರುತ್ತವೆ.

೧. ಟಿಪ್ಪಣಿಯ ಮಂಡನೆ ಸಂದರ್ಭ

೨. ಮೇಲಾಧಿಕಾರಿಗಳಿಗೆ ರವಾನೆ ಸಂದರ್ಭ

೩. ಮೇಲಧಿಕಾರಿಗಳಿಂದ ಉತ್ತರ ಬಂದ ಸಂದರ್ಭ

೪. ವಿಷಯ ನಿರ್ವಹಕರ ವಿವರಣೆಯ ಸಂದರ್ಭ

೫. ಕರಡು ಪ್ರತಿ ಅನುಮೋದನೆಗೆ ಸಲ್ಲಿಕೆಯಾದ ಸಂದರ್ಭ

೬. ಸಿದ್ಧಪ್ರತಿ ತಯಾರಿಕೆ / ಸಹಿ.

೭. ಮುಂದಿನ ಕ್ರಮಕ್ಕಾಗಿ ಮಂಡನೆ ಮಾಡುವ ಸಂದರ್ಭ.

೮. ಸಂಬಂಧಪಟ್ಟವರಿಗೆ ರವಾನೆ ಮಾಡುವ ಸಂದರ್ಭ

ಮೇಲಿನ ಸಂದರ್ಭದಲ್ಲಿ ಬರವಣಿಗೆಯ ದೋಷಗಳು ಕಂಡುಬರುತ್ತವೆ. ಇಲ್ಲಿ ಶುದ್ಧ ಹಾಗೂ ಸ್ಪಷ್ಟ ಬರಹದ ಬಳಕೆ ಆಗದಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಆಡಳಿತದಲ್ಲಿ ಕನ್ನಡವನ್ನು ಬಳಸಬೇಕೆಂಬ ಆದೇಶ ಕೇವಲ ಆದೇಶವಾಗಿ ಉಳಿಯಿತೆಂಬ ಕೊರಗು ಎದ್ದು ಕಾಣುತ್ತದೆ.

೬.೨.೩. ಕಡತಗಳು

ಕಡತಗಳು – ಕನ್ನಡ ಬಳಕೆ : ಸಮಸ್ಯೆ

ಒಂದು ಆಡಳಿತದಲ್ಲಿ ಕಾರ್ಯನಿರ್ವಹಿಸುತ್ತಿರುವ, ಕಚೇರಿಯಲ್ಲಿನ ಕಡತಗಳೇ ಆ ಕಚೇರಿ ಆಡಳಿತದ ಜೀವಾಳ. ಕಡೆತಗಳು ಕಚೇರಿಯ ಆಡಳಿತ ವ್ಯವಹಾರದ ಸಂಗಮ ಸ್ಥಾನಗಳೆಂದು ಕರೆಸಿಕೊಂಡಿವೆ. ಕಚೇರಿಗಳಲ್ಲಿ ಕಾಗದ ಪತ್ರಗಳ ಸರಿಯಾಗಿ ಇಡುವಿಕೆಯೇ ಒಂದು ಮಹತ್ವದ ಕಾರ್ಯ. ಕಡತಗಳು ವಿಷಯದ ಸಮಗ್ರ ಮಾಹಿತಿಯನ್ನು ನೀಡುವ ಮುಖ್ಯವಾದ ಆಕಾರ.

ಸಾಂಬಮೂರ್ತಿ ಅವರು "ವ್ಯವಸ್ಥಿತವಾಗಿ ರೂಪುಗೊಂಡ ಕಡತಗಳು ಆ ಕಚೇರಿಯ ಆಡಳಿತವನ್ನು ಸುಗಮವಾಗಿ ನಡೆಸಲು ಅನುವುಮಾಡುತ್ತವೆ" ಎಂದಿದ್ದಾರೆ. ಹಾಗಾಗಿ ಸುವ್ಯವಸ್ಥೆಯೇ ಕಡತಗಳ ಪ್ರಮುಖ ಲಕ್ಷಣ.

ಕಚೇರಿಗೆ ಬಂದ ಸಾಮಾನ್ಯ ಪತ್ರಗಳು, ಅರ್ಜಿಗಳು, ಮನವಿಗಳು, ಆಡಳಿತಾತ್ಮಕ ಪತ್ರಗಳು, ಅನುದಾನ ಪತ್ರಗಳು, ಇತರೆ ಪತ್ರಗಳೇ, ಕಡತಗಳ ಉಗಮಕ್ಕೆ ಕಾರಣವಾಗುತ್ತದೆ. ಕಡತಗಳು ಪತ್ರಗಳಿಗೆ ಸಂಬಂಧಿಸಿದಂತೆ ಅವುಗಳ ತೀರ್ಮಾನ ಮತ್ತು ಬಗೆಹರಿಸುವ ನಿಟ್ಟಿನಲ್ಲಿ ಸಾಗುತ್ತಾ ಬಂದಂತೆ, ಟಿಪ್ಪಣೆ, ವಿವರಣೆ, ಆಕ್ಷೇಪ, ಅಭಿಪ್ರಾಯ ಮತ್ತು ಆದೇಶ ಇವುಗಳಿಗೆ ಸಂಬಂಧಿಸಿದ ಬರಹಗಳ ದಾಖಲೆಗಳಿಂದ ಅವು ಬೆಳವಣಗೆಯಾಗುತ್ತವೆ.

ಒಂದು ಕಡತವು ೨ ಮುಖಗಳನ್ನು ಹೊಂದಿರುತ್ತದೆ.

೧. ಟಿಪ್ಪಣಿ ಭಾಗ–ಎಡಭಾಗ–ಮೊದಲ ಟಿಪ್ಪಣಿ ಪ್ರಥಮವಾಗಿದ್ದು ಆನಂತರ ಅನುಕ್ರಮವಾಗಿರುತ್ತದೆ. ಕಡತ ತೆಗೆದಾಗ ಟಿಪ್ಪಣಿ ಭಾಗವು–ಪೂರ್ಣ ಮಾಹಿತಿ ಉಳ್ಳದ್ದಾಗಿದ್ದು ಇಡಿಯಾದ ಕಡತದ ಪೂರ್ಣ ಮಾಹಿತಿಯನ್ನು ಇಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲವನ್ನು ಗಮನಿಸಬಹುದಾಗಿದೆ.

೨. ಪತ್ರಗಳ ಭಾಗ – ಬಲಭಾಗ – ಮೊದಲ ಪತ್ರ ಕೆಳಗೆ ಆನಂತರ ಬಂದ ಪತ್ರಗಳು ಮೇಲೆ ಕ್ರಮವಾಗಿ ಇರುತ್ತವೆ. ಪತ್ರ ಭಾಗವು ಪತ್ರಗಳ ವ್ಯವಹಾರ ಯಾವ ಹಂತಕ್ಕೆ ಬಂದಿದೆ ಎಂದು ತಿಳಿಯುವುದಕ್ಕಾಗಿ ವಿಷಯಕ್ಕೆ ಸಂಬಂಧಿಸಿದ ಪ್ರಸ್ತುತ ಇತ್ತೀಚೆಗೆ ಬಂದ ಪತ್ರಗಳು ಮೇಲ್ಭಾಗದಲ್ಲಿರುತ್ತದೆ. ಕಡತದ ಮೊದಲ ಪತ್ರದಿಂದ ಪುಟಗಳ ಸಂಖ್ಯೆಯನ್ನು ನೀಡಲಾಗಿರುತ್ತದೆ.

ಹೊಸ ಕಡೆತದ ಆರಂಭ/ ಕಡತದ ಶೀರ್ಷಿಕೆ.

೧. ಮುಖ್ಯ ಶೀರ್ಷಿಕೆ

೨. ಉಪ ಶೀರ್ಷಿಕೆ

೩. ಶೀರ್ಷಿಕೆಯ ವಿಷಯ

ಉದಾ:- ಜಿಲ್ಲಾಧಿಕಾರಿಗಳ ವರ್ಗಾವಣೆ-ಹುದ್ದೆ-ಬಡ್ತಿ-ನೇಮಕ. ಒಂದು ವಿಷಯಕ್ಕೆ ಸಂಬಂಧಿಸಿದ ಆಡಳಿತದಲ್ಲಿ ಅನುಕ್ರಮವಾಗಿ ಕಡತಗಳು ಸೃಷ್ಟಿಯಾಗುತ್ತವೆ. ಹೀಗಾಗಿ ಕಡತಗಳ ಮೇಲ್ಭಾಗದಲ್ಲಿ ನಮೂದಿಸಿದ ವಿಷಯಗಳನ್ನು ೪ ಭಾಗಗಳಾಗಿ ಅವುಗಳನ್ನು ವಿಂಗಡಿಸಲಾಗಿದೆ,

೧. ಕಡೆತ ಇಲಾಖೆಯನ್ನು ಸೂಚಿಸುವ ಅಕ್ಷರಗಳು:

ಉದಾ:- ಸಾಮಾಜಿಕ ಅರಣ್ಯ ಹೊಸಪೇಟೆ- ಸಾ.ಅ.ಹೋ

ಸಹಾಯಕ ಆಯುಕ್ತರು, ಬೆಂಗಳೂರು -ಸ.ಆ.ಬೆ

೨. ವಿಷಯ ಸೂಚಕ ಅಕ್ಷರ:

ಉದಾ:- ತುಟ್ಟಿ ಭತ್ಯೆ - ತು.ಭ.

ಅಧಿಕಾರಿಗಳ ವರ್ಗಾವಣೆ- ಅ.ವ.

೩. ವಿಷಯ ಬಾಬ್ತಿನ ಫೈಲು ಕ್ರಮಾಂಕ:- ೫೬, ೫೭, ೫೮.

೪. ವರ್ಷದ ಕೊನೆಯ ಎರಡು ಅಕ್ಷರಗಳು:- ೯೩/೯೪

ಕಡತಗಳ ವಿಧಗಳು:

೧. ಸಾಧಾರಣ ಕಡತಗಳು

೨. ಅರೆ ಕಡೆತಗಳು ಅಥವಾ ಅಂಶಿಕ ಕಡತ. (ಅರೆಕಡತ .

೩. ರಹಸ್ಯ ಕಡತಗಳು

೪. ಜಂಟಿ ಕಡೆತಗಳು.

ಕಡತ ಪ್ರಾರಂಭಿಸುವ ಸಂದರ್ಭದಲ್ಲಿ ಕನ್ನಡ ಬಳಕೆಯಲ್ಲಿನ ದೋಷಗಳು ಹಾಗೂ ಸಮಸ್ಯೆಗಳು

ಒಂದು ಕಡತದ ಪ್ರಾರಂಭದ ದಿನದಿಂದಲೇ ಅಥವಾ ಒಂದು ಕಡತವು ಪ್ರಾರಂಭದ ಸಂದರ್ಭದಿಂದಲೇ, ಆಡಳಿತದಲ್ಲಿ ಕನ್ನಡದ ಬಳಕೆ ಪ್ರಾರಂಭವಾದಂತೆ. ಕಡತದ ಪ್ರಾರಂಭದಂದು ಕಡತಕ್ಕೆ.

೧. ಶೀರ್ಷಿಕೆ:- ಯನ್ನು ನೀಡಬೇಕಾಗುತ್ತದೆ/ಕಡತದ ಸಂಖ್ಯೆ.

೨. ವಿಭಾಗ:- ಭೂಮಾಪನ. ತರಬೇತಿ. ಸಿಬ್ಬಂದಿ. ಅನುದಾನ. ಇತ್ಯಾದಿ.

೩. ವಿಷಯ:- ಕಿರು ವಿಷಯವನ್ನು/ಕಡತದ ಸಂಬಂಧವನ್ನು ಸೂಚಿಸಬೇಕಾಗುತ್ತದೆ.

೪. ಕಡತ ಪ್ರಾರಂಭದ ದಿನಾಂಕ.

೫. ಕಡತ ಮುಕ್ತಾಯದ ದಿನಾಂಕ (ಕಡತ ಮುಕ್ತಾಯಗೊಂಡ ಸಂದರ್ಭದಲ್ಲಿ ಸೂಚಿಸಬೇಕಾಗುತ್ತದೆ..

ಆದರೆ ಗಮನಿಸಿ ನೋಡಲಾಗಿ ಇದಾವುದನ್ನು ಈಗಿನ ಸಂದರ್ಭದಲ್ಲಿ ಬಹಳಷ್ಟು ಕಚೇರಿಗಳಲ್ಲಿ ಬಳಸದೇ ಇರುವುದು ಕಂಡುಬರುತ್ತದೆ. ಒಂದು ವೇಳೆ ಶೀರ್ಷಿಕೆಯನ್ನು ಕೊಟ್ಟರೂ ಸಹ ಅದೊಂದು ಅಸಂಬದ್ಧ ಶೀರ್ಷಿಕೆಯಾಗಿ ಕಾಣಸಿಗುತ್ತದೆ.

ಮೊದಲು ಶೀರ್ಷಿಕೆಯನ್ನು ಯಾವತರಹ ನೀಡಬೇಕು ಎನ್ನುವುದನ್ನು ವಿಷಯ ನಿರ್ವಾಹಕರಿಗೆ ಪರಿಚಯಿಸುವ ಕಾರ್ಯಕ್ರಮದ ತರಬೇತಿ ನೀಡಬೇಕಾದ ಪರಿಸ್ಥಿತಿ ಬಂದಿದೆ. ಕಾರಣ ಅದರ ಬಗ್ಗೆ ನಿಖರ, ಖಚಿತ ಮಾಹಿತಿ ಇಲ್ಲದೇ ತಮ್ಮ ಮನಸ್ಸಿಗೆ ತೋಚಿದ ರೀತಿಯಲ್ಲಿ ಶೀರ್ಷಿಕೆಗಳನ್ನು ನೀಡಿ ಕಡತ ಪ್ರಾರಂಭಿಸಿದ ಉದಾಹರಣೆಗಳಿವೆ.

ಶೀರ್ಷಿಕೆಯನ್ನು ಹೇಳುವುದಾದರೆ

ಉದಾ:-**ಸಂಖ್ಯೆ:ಎ೧/ಬಿಯುಡಿ/ಆಡಳಿತಾತ್ಮಕ ವೆಚ್ಚ/ಸಿಆರ್-೬/೧೨-೧೩** ಎಂದು ಸಂಬೋಧಿಸುತ್ತಾರೆ ಅಥವಾ ಮುಖ್ಯ ಶೀರ್ಷಿಕೆಯನ್ನು ಬರೆದಿರುವುದು ಕಾಣಲಾಗುತ್ತದೆ.

ಆದರೆ ಇಲ್ಲಿ ----ಎ೧/ಬಿಯುಡಿ/ ---- ಯನ್ನು ವಿವರಿಸಿ ಕೇಳಿದಾಗ

* ಎ೧ --- ಎಂದರೆ --- ಶಾಖೆ

* ಬಿಯುಡಿ - ಎಂದರೆ - ಬಡ್‌ಜೆಟ್ ಎನ್ನುತ್ತಾರೆ.

ಆದರೆ ಅದನ್ನು - ಶಾ೧/ ಅನುದಾನ--- ಎಂದು ಬರೆದರೆ ತಪ್ಪಾಗಲಾರದು. ಆದರೆ ಅದನ್ನು ಪ್ರಶ್ನಿಸಿದಾಗ ಮೊದಲಿನಿಂದ ಹಾಗೆ ಬರೆದಿದ್ದರು, ಅದಕ್ಕೆ ಹಾಗೆಯೇ ಬರೆದೆವು ಎಂದು ಹೇಳಿದ ಪ್ರಸಂಗಗಳಿವೆ. ಕಡತಗಳ ಮೇಲೆ ಬರೆಯುವ ವಿಷಯಕ್ಕೆ ಬಂದಾಗ:-

Appointment file -2012

Budget file-2012

Allotment file-2012

ಎಂದು ಬರೆದಿರುವುದು ಕಾಣಸಿಗುತ್ತದೆ. ಅಥವಾ ಸಂಬೋಧಿಸಿರುತ್ತಾರೆ.

ಅದರ ಬದಲಿಗೆ-ಅನುದಾನ ಕಡತ-ಹಂಚಿಕೆ ಕಡತ-ನೇಮಕಾತಿ ಕಡತ-೨೦೧೨ ಎಂದು ಸಂಬೋಧಿಸಬಹುದಾಗಿತ್ತು. ಆದರೆ ಇಲ್ಲಿಯೂ ಸಹಾ ಅದೇ ಮೇಲಿನ ಸಮಸ್ಯೆಯನ್ನೇ ವಿವರಿಸುತ್ತಾರೆ. ಹೆಚ್ಚಾಗಿ ಕೇಳಿದರೆ "ಅದೇಲ್ಲಾ ಏನ್ ಬಿಡಿ ಸಾರ್, ನಮಗೆ ಬೇಗನೇ ಅರ್ಥವಾಗುವ ರೀತಿಯಲ್ಲಿ ಬರೆದಿದ್ದೇವೆ, ಅದನ್ನೆಲ್ಲಾ ನೋಡುಕೊಂತ ಕುಂತರೇ ಕೆಲಸಾ ಸಾಗಾಂಗಿಲ್ಲ, ಇರಲಿ ಬಿಡಿಸಾರ್ ಅದನ್ನೆಲ್ಲಾ ಯಾರು ನೋಡುತಾರೆ" ಎಂದು ಹೇಳಿದ ಉದಾಹರಣೆಗಳು ಇವೆ.

ಹೀಗಾಗಿ ಆಡಳಿತ ಕನ್ನಡ ಬಳಕೆಯು ಮೇಲ್ನೋಟಕ್ಕೆ ಸಮಸ್ಯೆ ಇಲ್ಲದೆ ಹಾಗೆ ಕಂಡರೂ ವಿಷಯವು ಗೌಣವಾಗುತ್ತಾ ಹೋಗುವುದು ಸ್ಪಷ್ಟ ಬಳಕೆಯ ಆದೇಶ, ಅವುಗಳನ್ನು ಜಾರಿಗೊಳಿಸುವಿಕೆಯ ಆದೇಶಗಳು, ಆದೇಶಗಳಾಗಿಯೇ ಉಳಿದಿವೆ ಅದಕ್ಕೆ ಕಾರಣ ಅನುಭವದ ಕೊರೆತೆಯೋ, ಸಿಬ್ಬಂದಿಗಳ ನಿರ್ಲಕ್ಷವೋ, ಅದರ ಬಗ್ಗೆ ಅರಿವಿಲ್ಲದಿರುವಿದೋ, ಎಂಬ ಹಲವಾರು ಸಮಸ್ಯೆಗಳು ಕಾಡುತ್ತವೆ. ಎಲ್ಲೊ ಒಂದು ಅಪರೂಪದ ಕನ್ನಡ ಶೀರ್ಷಿಕೆಗಳು ಕಾಣಸಿಗುತ್ತವೆ.

ಮುಖಪುಟ ಕಡತದ ಮಾದರಿ.
ಕ್ರಮ ಸಂಖ್ಯೆ : ಕಂ.ಇ, ೧೦೩ ಭೂದಾಸ. ೨೦೦೮-೦೯
ವಿಭಾಗ:- ಭೂದಾಖಲೆ ನೋಂದಣಿ ವಿಭಾಗ(ಅ೧)
ವಿಷಯ:- ನೋಂದಾಯಿತ ಭೂಮಿಯೆ ದಾಖಲೆಗಳನ್ನು ನೀಡುವ ಬಗ್ಗೆ.
ಆರಂಭ:- ೧೬/೦೮/೨೦೧೦ ಮುಕ್ತಾಯ:- ೧೫/೮/೨೦೧೬.
ಕಚೇರಿಯ ಹೆಸರು:
ವಿಳಾಸ:

ಸಂಖ್ಯೆ, ವಿಭಾಗ, ವಿಷಯ, ಸೇರಿದಂತೆ ಆಡಳಿತ ಕನ್ನಡ ಬಳಸುವ ಬಳಕೆಯಲ್ಲಿ ತಪ್ಪುವುದುಂಟು.

ಉದಾ:- ಸಂಖ್ಯೆ: ಎಹ್/ಬಿ೬/ಡಬ್ಲ್ಯೂ/ಸಿಅರ್-೧/೧೯೮೪-೮೫.

ಈ ರೀತಿಯಲ್ಲಿ ಬರೆದರೆ ವಿಷಯ ನಿರ್ವಾಹಕರು ಅರ್ಥಮಾಡಿಕೊಂಡು ಕಡತವನ್ನು ಬೇಗನೆ ತೆಗೆಯಲು ಸಹಜವಾಗಿ ಸಾಧ್ಯವಾಗುವುದಿಲ್ಲ. ಕಡತಗಳ ಸಂಖ್ಯೆ ನೀಡಿಕೆ ಮತ್ತು ಅದರಲ್ಲಿ ತಪ್ಪುಗಳು ಆಗದಂತೆ ನೋಡಿಕೊಳ್ಳಬೇಕು. ಮೇಲೆ ತಿಳಿಸಿದ ರೀತಿಯಲ್ಲಿ ಕಡತಗಳಿಗೆ ಸಂಖ್ಯೆಗಳನ್ನು ನೀಡಿದಾಗ ಸಹಜವಾಗಿ ಅರ್ಥವಾಗಿ, ಕಡತಗಳು ಬೇಗನೆ ದೊರೆಯುತ್ತವೆ. ಈ ನಿಟ್ಟಿನಲ್ಲಿ ಮೊದಲನೆಯದಾಗಿಯೇ ಕಡತಗಳಿಗೆ ಸಂಖ್ಯೆಗಳನ್ನು ನಿಡುವ ಸಮಸ್ಯೆ ಎದುರಾಗುತ್ತದೆ.

ಆಡಳಿತದ ಜೀವಾಳ ಕಡತ ಅದರ ಸಂಖ್ಯೆಯನ್ನು ನೀಡುವಲ್ಲಿಯೇ ಕನ್ನಡ ಬಳಕೆ ಕಾಣದಿರುವುದು ಒಂದು ಸಮಸ್ಯೆ ಹಾಗೂ ಇದನ್ನೆ ಬದಲಾಯಿಸಲು ತಿಳಿಸಿದರೂ ಅದು ಸವಾಲಾಗಿ ಪರಿಣಮಿಸಬಹುದು. ಇಂತಹ ಹಲವಾರು ಉದಾಹರಣೆಗಳನ್ನು ನಾವು ನೋಡಲಾಗಿ, ಕೆಲವೊಂದು ಸಂದರ್ಭದಲ್ಲಿ ಕನ್ನಡದ ಬಳಕೆ ಪೂರ್ಣ ಕಡೆಗಾಣಿಸಿರುವುದು ಕಾಣ ಸಿಗುತ್ತದೆ. ಇದಕ್ಕೆ, ಹಿಂದಿನಿಂದ ಬಂದ ಪದ್ಧತಿಯೋ, ವಿಷಯ ನಿರ್ವಾಹಕರಿಗಿರುವ ಅನುಭವದ ಕೊರೆತೆಯೋ ಅಥವಾ ಅವರ ಅರಿವಿಗೆ ಬಾರದಿರುವುದೋ ಎಂಬುದು ಗೊಂದಲಮಯವಾಗಿದೆ. **"ಹಿಂದೆ ಏನಿತ್ತೋ ನಾವು ಅದನ್ನೆ ಬರೆದು ಕೊಂಡು ಹೋಗುತ್ತಿದ್ದೇವೆ ಹೊರತು ನಮಗೆ ಅದರ ಪರಿಚಯವಿಲ್ಲ"** ಎನ್ನುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ತರಬೇತಿ ನೀಡಬೇಕಾಗಿರುವುದು ಅಗತ್ಯ. ಕಡತಗಳಿಗೆ ಶೀರ್ಷಿಕೆ ಕೊಡುವುದು, ಪತ್ರಗಳಿಗೆ ಶೀರ್ಷಿಕೆ ಕೊಡುವುದು ಅತ್ಯಂತ ಮುಖ್ಯವಾದುದಾಗಿದೆ. ಹೀಗಿದ್ದಾಗ ಇಲ್ಲಿನಿಂದಲೇ ಕನ್ನಡದ ಬಳಕೆ ಆಡಳಿತದಲ್ಲಿ ಆರಂಭವಾಗಬೇಕಿದೆ.

ಕಡತಗಳಲ್ಲಿನ ಸಮಸ್ಯೆಗಳು

೧. ಕಡತಳಿಗೆ ಸಂಖ್ಯೆಯನ್ನು ಕೊಡುವಲ್ಲಿಯೇ ಸಮಸ್ಯೆ ಹಾಗೂ **ಕನ್ನಡದ ಬಳಕೆ ತೀರಾ ಕಡಿಮೆಯಾಗಿರುವುದು.**

೨. ಕಡತಗಳಿಗೆ ಸಂಖ್ಯೆಗಳನ್ನು ನೀಡುವ ವಿಧಾನ **ಏಕರೂಪತೆಯಿಂದ ಕೂಡಿಲ್ಲ**. ಕಚೇರಿಯಿಂದ ಕಚೇರಿಗೆ ಭಿನ್ನವಾಗಿದೆ.

೩. ಕಡತದ ಸಂಖ್ಯೆ ನೀಡುವಲ್ಲಿ **ಯಾವುದು ಸರಿಯಾದ ವಿಧಾನ ಎಂಬುವಲ್ಲಿ ಗೊಂದಲ.**

೪. ಕಡತಕ್ಕೆ ಶೀರ್ಷಿಕೆಯನ್ನು ನೀಡಿದರೂ ಅದೊಂದು ಅಸಂಬದ್ಧ ಶೀರ್ಷಿಕೆಯಾಗಿ ಕಾಣಸಿಗುವ ಕಡತಗಳು ಇಲ್ಲಾ ಕಚೇರಿಗಳಲ್ಲಿ ಕಾಣಿಸುತ್ತವೆ. ಮನಸ್ಸಿಗೆ ಇಚ್ಚಿಸಿದಂತೆ ಕಡತದ ಸಂಖ್ಯೆಯನ್ನು ನೀಡುವುದು ಸರಿಯಾದ ಕ್ರಮವಲ್ಲವೆಂದು ನನ್ನ ಅಧ್ಯಯನದಿಂದ ಕಂಡುಕೊಂಡ ಸಮಸ್ಯೆಯಾಗಿದೆ. ಇದಕ್ಕೆ ಪರಿಹಾರವಾಗಿ ವಿಷಯ ನಿರ್ವಾಹಕರಿಗೆ ತರಬೇತಿ ನೀಡಿಕೆ ಅಗತ್ಯವಾಗಿದೆ.

೫. "ಹಿಂದೆ ಏನಿತ್ತೋ ನಾವು ಅದನ್ನೇ ಬರೆದುಕೊಂಡು ಹೋಗುತ್ತಿದ್ದೇವೆ ಹೊರತು ನಮಗೆ ಅದರ ಗೋಜುಯಾಕೆ ಬಿಡಿ" ಎನ್ನುವ ಮನೋಭಾವ ವಿಷಯನಿರ್ವಾಕರಿಂದ ಹೋಗಬೇಕಾಗಿದೆ. ಸರಿ ತಪ್ಪುಗಳ ಬಗ್ಗೆ ಪರಿಶೀಲಿಸಿ ಸರಿಯಾದ ಬಳಕೆಯ ಬಗ್ಗೆ ಗಮನ ಹರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಬೇಕಿದೆ ಅದಕ್ಕೆ ತರಬೇತಿ ಅಗತ್ಯ. ನೀಡಲಾದ/ ಪಡೆಯಲಾದ ತರಬೇತಿಯ ಅಳವಡಿಸುವಿಕೆಯು ಅಷ್ಟೆ ಅಗತ್ಯವಾದುದ್ದಾಗಿದೆ. "ಕನ್ನಡ ಬಳಸುವುದೇ ಆಡಳಿತದಲ್ಲಿ ಒಂದು ಉದ್ದೇಶವಲ್ಲ" ಬಳಸುವ ಸಂದರ್ಭದಲ್ಲಿ ಸರಿಯಾದ ರೀತಿಯಲ್ಲಿ ಬಳಸುವ ಉದ್ದೇಶವು ಒಂದಾಗಿದೆ" ಎಂಬುದನ್ನು ಅರಿಯಬೇಕಾಗಿದೆ.

ಪತ್ರದ ಮೇಲ್ಭಾಗದಲ್ಲಿ ಬರೆಯುವ ಕಿರುಬರಹ ಹೆಚ್ಚು ಆಂಗ್ಲಭಾಷೆಯಲ್ಲಿ ಇರುವುದು ಕಂಡುಬಂದಿದ್ದು ಅದಕ್ಕೆ ಅಧಿಕಾರಿಗಳ ಪ್ರತಿಕ್ರಿಗಳು ಕೆಳಕಂಡಂತಿವೆ.

೧. ಅಭ್ಯಾಸ ಬಲ

೨. ಇಂಗ್ಲೀಷ್ Easy

೩. ಕನ್ನಡ ನನಗೆ ಸರಿಯಾಗಿ ಬರಲ್ಲ

೪. ಮಾತೃಭಾಷೆ ನನ್ನದಾಗಿರದಿದ್ದರಿಂದ ತೊಂದರೆಯಾಗುತ್ತಿದೆ ಹೊರತು ಕನ್ನಡದ ಬಳಕೆ ತಿರಸ್ಕರಿಸುವ ಅಥವಾ ಬಳಕೆ ಮಾಡಬಾರದೆಂಬ ಮನೊಬಾವ ನನ್ನಲ್ಲಿಲ್ಲ–ಎಂಬ ಅನಿಸಿಕೆ

೫. ಅನ್ಯ ಭಾಷಿಕರಾಗಿರುವ ಅಧಿಕಾರಿಗಳಿಗೆ ಕನ್ನಡದ ಸಂಪೂರ್ಣವಾಗಿ ಪರಿಚಯವಾಗಲಿ, ವ್ಯಾಕರಣದ ಸಂಪೂರ್ಣ ಮಾಹಿತಿಯಾಗಲಿ ಇಲ್ಲದಿರುವುದು.

ಸವಾಲುಗಳು

೧. ಕನ್ನಡ ಭಾಷಿಕರಾಗಿದ್ದು ಕನ್ನಡವನ್ನೇ ಬಳಕೆ ಮಾಡದೇ ಇರುವ ಅಧಿಕಾರಿಗಳ ವಿರುದ್ದ ಏನುಮಾಡಬೇಕು? ಕಂಡು, ಕಂಡು ಬಳಕೆ ಮಾಡುತ್ತಿಲ್ಲ, ಅವರ ಮನೋಬಲ ಬದಲಾಗಬೇಕಾಗಿರುವುದೇ ಒಂದು ಸವಾಲಾಗಿದೆ.

೨. ಕನ್ನಡದ ಬಳಕೆ ಬಗ್ಗೆ ಏನೆಲ್ಲಾ ಆದೇಶಗಳಿದ್ದರೂ ಅವುಗಳ ಬಗ್ಗೆ ತಿರಸ್ಕಾರ ಮನೋಭಾವ ಹೊಂದಿರುವುದು ಕಾಣಸಿಗುತ್ತದೆ.

೩. ಟಿಪ್ಪಣಿಗಳಲ್ಲಿ ಕ್ರಮಬದ್ಧವಾಗಿ ಕನ್ನಡದ ಬಳಕೆ ಸರಿಯಾಗಿ ಆಗಬೇಕಿದೆ. ಒಂದು ಕಂಡಿಕೆ ಕನ್ನಡದಲ್ಲಿ ಇನ್ನೊಂದು ಆಂಗ್ಲಭಾಷೆಯಲ್ಲಿ ನಮೂದಾಗಿರುವುದು ಕಾಣಸಿಗುತ್ತದೆ. ವಿಚಾರಿಸಿದಾಗ ಅದು ಅಧಿಕಾರಿಗಳಿಗೆ ಬಿಟ್ಟಿದ್ದು ಎಂದು ಉತ್ತರಿಸುತ್ತಾರೆ ವಿಷಯನಿರ್ವಾಹಕರು.

೪. ಟಿಪ್ಪಣಿಗಳು ಕೆಳಹಂತದ ಕಚೇರಿಗಳಲ್ಲಿ ಎಲ್ಲಿಯೂ ಕಾಣಸಿಗುವುದಿಲ್ಲ, ಅವುಗಳ ಪರಿಚಯವು ಅವರಿಗಿರುವುದಿಲ್ಲ/ ಅವರಿಗೆ ಇಲ್ಲದಿರುವುದು ಕಾಣಸಿಗುತ್ತದೆ.

ಹೇಳುವ ಕಾರಣಗಳು:

೧. ಅವುಗಳೆಲ್ಲ ಏನು ಬಿಡಿಸಾರ್, ಟೈಮ್ ವೇಸ್ಟ್ ಅಂತಾರೆ.

೨. ಅವನ್ನೆಲ್ಲಾ ಬರಕಂತ ಕೂಡಕ ಆಗಲ್ಲ, ಸಾಕಷ್ಟು ಕೆಲಸ ಇದೆ ಬಿಡಿ. ಅಲ್ಲದೆ ಅವನ್ನ್ಯಾರು ನೋಡತಾರೆ.

೩. ಅವುಗಳ ರಚನೆಯ ಮನೋಭಾವನೆ ಅವರಿಗೆ ಇಲ್ಲ.

೪. ತರಬೇತಿಯ ಕೊರತೆಗಳು ಕಾಣಸಿಗುತ್ತವೆ.

ಮೇಲೆ ವಿವರಿಸಿದಂತೆ ಟಿಪ್ಪಣಿ, ಪತ್ರ ಮತ್ತು ಕಡತಗಳಲ್ಲಿ ಮೇಲಿನ ಸಮಸ್ಯೆಗಳು ಮತ್ತು ಸವಾಲುಗಳು ಕಂಡುಬರುತ್ತವೆ. ಕಡತ, ಟಿಪ್ಪಣಿ, ಮತ್ತು ಪತ್ರಗಳೇ ಕಚೇರಿಯ ಮುಖ್ಯವಾದ ಅಂಗಗಳು ಇವುಗಳಲ್ಲಿ ಕನ್ನಡದ ಬಳಕೆ ಸರಿಯಾದ ಕ್ರಮದಲ್ಲಿ ಆದಲ್ಲಿ ಮುಂದಿನ ಹಂತಗಳಲ್ಲಿ ಕನ್ನಡದ ಬಳಕೆ ತಾನಾಗಿಯೇ ಕಾರ್ಯರೂಪಕ್ಕೆ ಬರುತ್ತದೆಂಬುವಲ್ಲಿ ಸಂಶಯವಿಲ್ಲ. ಹಾಗಾಗಿ ಟಿಪ್ಪಣಿ, ಪತ್ರ, ಮತ್ತು ಕಡತಗಳಲ್ಲಿ ಶುದ್ಧ ಹಾಗೂ ಸ್ಪಷ್ಟ ಕನ್ನಡದ ಬಳಕೆ ಆಗಬೇಕಿದೆ. ಶುದ್ಧ ಹಾಗೂ ಸ್ಪಷ್ಟ ಕನ್ನಡದ ಬಳಕೆಯ ಬಗ್ಗೆ ಗೊಂದಲಗಳಿರುವಾಗ ಸಮಸ್ಯೆಗಳಾಗಿವೆ. ಈ ಸಮಸ್ಯೆ ಪರಿಹಾರ ಆಗದಿರುವುದೇ ಸವಾಲಾಗಿದೆ.

ಪರಾಮರ್ಶನ ಗ್ರಂಥ

೧. ಆದಿಶೇಷಮೂರ್ತಿ, ೨೦೧೧, ***ಕಚೇರಿ ಕೈಪಿಡಿ,*** ಸರ್ಕಾರಿ ನೌಕರರ ಮಿತ್ರ ಪ್ರಕಾಶನ, ಬೆಂಗಳೂರು

೨. ***ಆಡಳಿತ ಕನ್ನಡ ಕಾರ್ಯಶಿಬಿರ ಕೈಪಿಡಿ,*** ೨೦೦೯, ದೂರ ಶಿಕ್ಷಣ ಕೇಂದ್ರ , ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಎಚ್ಚೆಸ್ಕೆ, ೨೦೦೦, ***ಆಡಳಿತ ಕನ್ನಡ,*** ಚೇತನ್ ಬುಕ್ ಹೌಸ್, ಮೈಸೂರು.

೪. ಎಚ್ಚೆಸ್ಕೆ, ೨೦೦೫, ***ಕನ್ನಡದ ಬಳಕೆ,*** ಚೇತನ್ ಬುಕ್ ಹೌಸ್, ಮೈಸೂರು.

೫. ಎಚ್ಚೆಸ್ಕೆ, ೨೦೦೪, ***ಬಳಕೆಯ ಭಾಷೆ,*** ಚೇತನ್ ಬುಕ್ ಹೌಸ್, ಮೈಸೂರು.

೬. ಎಚ್ಚೆಸ್ಕೆ, ೨೦೦೫, ***ವಾಣಿಜ್ಯ ಕನ್ನಡ,*** ಚೇತನ್ ಬುಕ್ ಹೌಸ್, ಮೈಸೂರು.

೭. ಎಚ್ಚೆಸ್ಕೆ, ೧೯೬೦, ***ವ್ಯವಹಾರಿಕ ಕನ್ನಡ,*** ಚೇತನ್ ಬುಕ್ ಹೌಸ್, ಮೈಸೂರು.

೮. ಛಾಯಾಪತಿ. ಟಿ.ಎಸ್., ೨೦೦೮, ***ಆಡಳಿತ ಭಾಷೆ ಕನ್ನಡ,*** ತಳುಕಿನ ವೆಂಕಟಸುಬ್ಬಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

೯. ***ಮಾದರಿ ಕಚೇರಿ ಕೈಪಿಡಿ,*** ೧೯೯೦, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೦. ಮುರಿಗೆಪ್ಪ. ಎ.(ಪ್ರಸಂ) ೨೦೦೯. ***ಆಡಳಿತ ಕನ್ನಡ,*** ದೂರ ಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೧. ರಮೇಶ್ ಬೇವೂರ್, ೨೦೦೦, ***ಆಡಳಿತ ಕನ್ನಡ,*** ವಾಗ್ದೇವಿ ಬುಕ್ ಹೌಸ್, ಮೈಸೂರು.

೧೨. ವೀರಭದ್ರಯ್ಯ ಸಿ.ಎಂ., ೨೦೦೮, ***ಆಡಳಿತ ಕಛೇರಿ ಕನ್ನಡ ಕೈಪಿಡಿ,*** ಕರಾವಳಿ ಪ್ರಕಾಶನ, ಮಂಗಳೂರು.

೧೩. ವೇದಮೂರ್ತಿ.ಕೆ.ಸಿ., ೨೦೧೧, ***ಕಡತ ನಿರ್ವಹಣೆ ಕೈಪಿಡಿ,*** ಸರ್ಕಾರಿ ನೌಕರರ ಮಿತ್ರ ಪ್ರಕಾಶನ, ಬೆಂಗಳೂರು.

ಅಧ್ಯಾಯ – ಏಳು

ಸಮಾರೋಪ

* ಅಧ್ಯಯನದ ಫಲಿತಗಳು
* ಅನುಬಂಧಗಳು
* ಪರಾಮರ್ಶನ ಗ್ರಂಥಗಳು
* ಪ್ರಶ್ನಾವಳಿಗಳು

ಅಧ್ಯಾಯ : ಏಳು

ಸಮಾರೋಪ

ಒಂದು ಪ್ರದೇಶದ ಆಡಳಿತಕ್ಕಾಗಿ ಉಪಯೋಗಿಸಬೇಕಾದ ಭಾಷೆಯೇ ಆಡಳಿತ ಭಾಷೆ. ರಾಜ್ಯದ ಆಡಳಿತ ಭಾಷೆಯ ಮೂಲಕವಾಗಿ ಆಡಳಿತ ನಡೆಸುವುದು ಮತ್ತು ಶಿಕ್ಷಣ ನೀಡುವುದು ಸರಿಯಾದ ಮಾರ್ಗ. ಇದರಿಂದ ಅಲ್ಲಿನ ಆಡಳಿತವು ಪ್ರಬಲವೂ ಪರಿಣಾಮಕಾರಿಯೂ ಆಗಿರುತ್ತದೆ. ಕರ್ನಾಟಕದಲ್ಲಿ ಕನ್ನಡ ಸಂಪೂರ್ಣವಾಗಿ ಆಡಳಿತ ಭಾಷೆಯಾಗಬೇಕು ಎಂಬ ನಿಟ್ಟಿನಲ್ಲಿ ಸಕಾರವು ಈಗಾಗಲೇ ನೂರಾರು ಆದೇಶಗಳನ್ನು ಸುತ್ತೋಲೆಗಳನ್ನು ಹೊರಡಿಸಿದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದಲೋ, ಸಿಬ್ಬಂದಿವರ್ಗದವರ ಬೇಜವಾಬ್ದಾರಿಯಿಂದಲೋ, ಅಥವಾ ಸ್ವತಃ ಸರ್ಕಾರದ ಇಚ್ಛಾಶಕ್ತಿಯ ಕೊರತೆಯಿಂದಲೋ ಇದು ಸಂಪೂರ್ಣವಾಗಿ ಫಲಪ್ರದವಾಗುತ್ತಿಲ್ಲದಿರುವುದು ಶೋಚನೀಯ ಸಂಗತಿ.

ಆಧುನೀಕರಣ ಮತ್ತು ಜಾಗತೀಕರಣದ ಬೆಳವಣಿಗೆಯ ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಭಾಷೆಯ ಸ್ಥಿತಿಗತಿ ಕುರಿತಂತೆ ಚರ್ಚೆಗಳು ನಡೆಯುತ್ತಿರುವುದು ಸಂತಸದ ವಿಷಯ. ಬೇರೆ ಭಾಷೆಗಳಾದ ಸಂಸ್ಕೃತ, ಮರಾಠಿ, ಪಾರ್ಸಿ, ಉರ್ದು, ಪೋರ್ಚುಗೀಸ್, ಇಂಗ್ಲೀಷ್ ಮೊದಲಾದ ಭಾಷೆಗಳ ಸಂಪರ್ಕದಿಂದ ಕನ್ನಡದ ಆಡಳಿತ ಭಾಷೆ ಬೆಳೆಯುತ್ತಾ ಹೋಯಿತು. ಪರಭಾಷೆಗಳ ಸ್ವೀಕರಣದಿಂದಲೇ ಆಡಳಿತ ಭಾಷೆಗೆ ಸ್ವೀಕೃತಿ ಭಾಷೆ, ಅಥವಾ ಸ್ವೀಕರಣ ಭಾಷೆ ಸಮಿಶ್ರ ಭಾಷೆಯಂತಲೂ ಕರೆಯಲಾಯಿತು.

ಒಂದು ಕಾಲಘಟ್ಟದಲ್ಲಿ ಕನ್ನಡದಲ್ಲಿ ಕಚೇರಿ ವ್ಯವಹಾರಗಳನ್ನು ನಡೆಸಲು ವಿಶಿಷ್ಟ ಬಗೆಯ ಪಾರಿಭಾಷಿಕ ಪದಗಳಿಂದ ಕೂಡಿದ ಆಡಳಿತ ಬೇಕಿತ್ತು. ಅದಕ್ಕಾಗಿ ಕನ್ನಡಿಗರು ಸ್ವಾತಂತ್ರ್ಯ ನಂತರದ ಆರಂಭದ ಕಾಲದಲ್ಲಿ ಅಂದಿನ ಸಮಕಾಲೀನ ಭಾಷೆಗಳ ಮತ್ತು ಪ್ರಾದೇಶಿಕ ಭಾಷೆಗಳ ಪದಗಳನ್ನು ಬಳಸಿಕೊಂಡರು. ಕನ್ನಡಿಗರಿಗೆ ಅರಿಯದಂತೆ ಪರಭಾಷೆಯ ಪದಗಳು ಕನ್ನಡಕ್ಕೆ ಸೇರಿ ಕನ್ನಡ ಪದಗಳಾದವು. ಆದರೆ ಹಲವು ಆಡಳಿತಗಾರರು, ಸಾಹಿತ್ಯಗಾರರು, ಅವುಗಳನ್ನು ತಿರಸ್ಕರಿಸುವ

ಮಡಿವಂತಿಕೆ ನಮಗೆ ಬೇಡ ಎನ್ನುತ್ತಾರೆ. ಉದಾಹರಣೆಗೆ ಕುವೆಂಪುರವರು ಸಿಮೇಂಟಿನ ಬದಲಿಗೆ ಕನ್ನಡದ ಅರ್ಥ ವಿವರಣೆಗೆ ವಜ್ರಚೂರ್ಣ ಬೇಡವೆಂದು ಹೇಳಲಾಗಿ ವಿವರಣೆ ನಿಡಲಾದ ಪರಿಯನ್ನು ಸ್ಮರಿಸಬಹುದಾಗಿದೆ. ಅದೇನೆ ಇರಲಿ, ಪಾರಿಭಾಷಿಕ ಪದಗಳಿಗೆ ಸಂವಾದಿಯಾಗಿ ಆಡಳಿತ ಪದಗಳು ರಚನೆಯಾಗಿದ್ದಾಗ್ಗಿಯೂ ಅವುಗಳನ್ನು ತಿದ್ದಿ ಬರೆಯುವ ಅಥವಾ ಬಳಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎನ್ನುವುದು ಹಲವರ ಅಭಿಪ್ರಾಯ.

ಆಡಳಿತ ಭಾಷೆಯು ವಸ್ತು ನಿಷ್ಠ ಆಡಳಿತ ಭಾಷೆಯಲ್ಲಿ ಅಲಂಕಾರ, ವಿಡಂಭನೆ, ಅಪಹಾಸ್ಯಗಳಿಗೆ ಅವಕಾಶವಿಲ್ಲ ಅವುಗಳೇನಿದ್ದರೂ ಸಾಹಿತ್ಯಕ್ಕೆ ಮಾತ್ರ ಸೀಮಿತವಾದದ್ದು, ಆಡಳಿತ ಭಾಷೆಯ ಶೈಲಿ ವಿಭಿನ್ನತೆಯಿಂದ ಮುಕ್ತವಾದದ್ದು "ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟು ಅನ್ನುವ ಹಾಗೆ ಆಡಳಿತ ಭಾಷೆಯಲ್ಲಿ ಶಬ್ದ, ವಾಕ್ಯ, ಸ್ಪಷ್ಟವಾಗಿ ಮುತ್ತಿನಂತಿರಬೇಕು" ಎನ್ನುವುದು ಆಡಳಿತ ಭಾಷೆಯ ಲಕ್ಷಣವಾಗಿದೆ.

ಯಾರೇ ಒತ್ತಾಯ ತರಲಿ ತರದಿರಲಿ ಪ್ರತಿಯೊಬ್ಬರೂ ಕನ್ನಡ ಮಾತನಾಡುವುದು, ದಿನ ನಿತ್ಯದ ವ್ಯವಹಾರಗಳಲ್ಲಿ ಕನ್ನಡವನ್ನು ಬಳಸುವುದು ತಮ್ಮ ಕರ್ತವ್ಯವೆಂದು ತಿಳಿಯಬೇಕು. ಯಾವ ವಿದೇಶಿ ಭಾಷೆಯೂ ಮಾತೃಭಾಷೆಯ ಸ್ಥಾನವನ್ನು ಪಡೆಯಲಾರದು, "ಸ್ವತಂತ್ರ ಆಲೋಚನೆಗೆ ಖಚಿತ ಅಭಿವ್ಯಕ್ತಿಗೆ ಮಾತೃಭಾಷೆಯೇ ಒಂದು ವಲಂ" ಎಂದು ಎಂ.ವೀರಭದ್ರಯ್ಯ, ತಮ್ಮ 'ಆಡಳಿತ ಕಚೇರಿ ಕನ್ನಡ ಕೈಪಿಡಿ' ಕೃತಿಯಲ್ಲಿ ತಿಳಿಸಿದ್ದಾರೆ. ಹೀಗಾಗಿ ನಮ್ಮ ಕನ್ನಡ ಆಡಳಿತ ಭಾಷೆ ಸಮಸ್ಯೆಯಾಗಲು ನಾವಾಗಿ ರೂಪಿಸಿಕೊಂಡ ಇಂಗ್ಲೀಷ್ ಮೇಲಿನ ಅಪಾರವಾದ ವ್ಯಾಮೋಹ ಮತ್ತು ಸಾಮಾಜಿಕ ಪ್ರತಿಷ್ಠೆಯ ಸಂಬಂಧದಿಂದ ಕನ್ನಡ ಆಡಳಿತ ಭಾಷೆಯಾಗಿ ಅಲ್ಲದೇನೆ, ಸಾಮಾಜಿಕ ಭಾಷೆಯಾಗಿನೂ ಸಹಿತ ಹಲವಾರು ಸಮಸ್ಯೆಗಳನ್ನು ಇಂದು ಎದಿರಿಸಬೇಕಾಗಿದೆ.

ಬೇರೆ ಭಾಷೆಯ ಅನುಕರಣದಿಂದ ಕನ್ನಡದಲ್ಲಿ ಆಡಳಿತ ದೇಶಿಯತೆ ಪಡೆಯುವ ಸಮಸ್ಯೆ ಉಂಟಾಗಿದೆ ಈ ಭಾಷೆಯಲ್ಲಿ ನಾವು ಸುಲಭವಾಗಿ ವ್ಯವಹಾರ ನಡೆಸಬಲ್ಲೆವೇ? ಎಂಬ ಅಳುಕು ನಮ್ಮಲ್ಲಿದೆ ಅಧಿಕಾರಿಗಳ ಕೀಳರಿಮೆ ಕನ್ನಡದ ಬಗ್ಗೆ ಇರುವುದು ಇಂಗ್ಲೀಷ್ ಅಧಿಕಾರಿಗಳಿಗೆ ಗೌರವ ತರುವುದು ಹಾಗೂ ದಕ್ಷತೆ ಹೆಚ್ಚಿಸುವುದು, ಎಂದು ನಂಬಿರುವ ಪೂರ್ವಗ್ರಹ ಕಲ್ಪನೆ. ವೀರಭದ್ರಯ್ಯ.ಸಿ.ಎಮ್., ಅವರು ಹೇಳುವಂತೆ 'ಕನ್ನಡ ನಾವು ಹೊದ್ದುಕೊಂಡಿರುವ ಚರ್ಮ ಹುಲಿಯದಾಗಿರದೆ, ಹುಲಿಯ ಹಾಗೆ ನರನಾಡಿಗಲ್ಲಿ ಪ್ರವಹಿಸುತ್ತಿದೆ' ಎಂಬ ತಿಳುವಳಿಕೆಯ ಅಭಾವ ಇದೆ ಎಂಬ ವಾಸ್ತವಿಕ ಅಂಶವನ್ನು ಗಮನಕ್ಕೆ ತಂದು ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಮೇಲಿನ ಮಾತುಗಳಲ್ಲಿ ವ್ಯಕ್ತವಾಗುವ ವಿಷಯವೇನೆಂದರೆ ಮುಖ್ಯವಾಗಿ ನಮ್ಮ ಕನ್ನಡ ಆಡಳಿತ ಭಾಷೆ ಸಮಸ್ಯೆಯಾಗಲು ನಾವು ಇಂಗ್ಲೀಷ್ ಮೇಲಿಟ್ಟಿರುವ ವ್ಯಾಮೋಹ, ಕನ್ನಡದ ಬಗ್ಗೆ ಮೊದಲು ನಮಗೆ ಅಭಿಮಾನ ವಿರಬೇಕು, ಅದನ್ನು ಪೋಷಿಸುವ, ರಕ್ಷಿಸುವ ಮನೋಭಾವ ಪ್ರತಿಯೊಬ್ಬ ಕನ್ನಡಿಗನಲ್ಲಿ ಬರಬೇಕು ಹಾಗೆ ಬಂದಾಗ ಮಾತ್ರ ಒಂದು ಭಾಷೆ ಆಡಳಿತದಲ್ಲಿ ಯಶಸ್ವಿಯಾಗಲು ಸಾಧ್ಯ.

ಈ ದೃಷ್ಟಿಯಿಂದ "ಭಾಷೆ, ಬದುಕು, ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಯ ಬಗ್ಗೆ, ಅವುಗಳ ಅಸ್ಥಿತ್ವದ ಬಗ್ಗೆ ಎಚ್ಚರ ವಹಿಸಬೇಕು, ಇವು ನಶಿಸಿ ಹೋದರೆ ಇಡೀ ಜನಾಂಗವೇ ನಶಿಸಿ ಹೋದಂತಾಗುತ್ತದೆ" ಎಂಬ ಮಾತುಗಳು ಟಿ.ಎಸ್.ಛಾಯಾಪತಿ ಅವರು 'ಆಡಳಿತ ಭಾಷೆ ಕನ್ನಡ' ಕೃತಿಯಲ್ಲಿ ತಿಳಿಸಿದ್ದಾರೆ. ಇವುಗಳೆಲ್ಲವುಗಳ ಸಂರಕ್ಷಣೆಗೆ, ಸಂವರ್ಧನೆಗೆ ಎಚ್ಚರಿಕೆಯಿಂದ ಗಮನ ಹರಿಸಬೇಕು ಜನರ ಬದುಕಿನ ಸರ್ವತೋಮುಖವಾದ ಬೆಳವಣಿಗೆಯಲ್ಲಿ ಭಾಷೆ ಪ್ರಧಾನವಾದ ಪಾತ್ರವಹಿಸುತ್ತದೆ ಎಂಬ ವಿಷಯವನ್ನು ಮನದಟ್ಟು ಮಾಡಿರುತ್ತಾರೆ.

ರಾಜ್ಯದಲ್ಲಿ ಆಡಳಿತ ಭಾಷೆ ಸಂಪೂರ್ಣವಾಗಿ ಕನ್ನಡ ಭಾಷೆಯಲ್ಲಿದ್ದರೆ ಆಡಳಿತದಲ್ಲಿ ಸಮಸ್ಯೆಗಳು ಹುಟ್ಟುವುದಿಲ್ಲ. ಎನ್ನುವ ಮಾತು ಸತ್ಯವಾದರೂ ಕಾರ್ಯಾಚರಣೆಗೆ ತರುವುದು ತುಸು ಕಷ್ಟವೇ ಸರಿ. ದೇ.ಜವರೇಗೌಡ ಅವರು 'ಕನ್ನಡ ಚಿಂತನೆ' ಕೃತಿಯಲ್ಲಿ ತಿಳಿಸಿದಂತೆ 'ಭಾಷಾ ಸಂಬಂಧವಾದ ಸಕಲ ಸಮಸ್ಯೆಗಳ ಪರಿಹಾರಕ್ಕೆ ದೇಶಭಾಷಾ ಮಾಧ್ಯಮವೇ ಉತ್ಕೃಷ್ಟ ಮಾರ್ಗ. ದೇಶ ಭಾಷೆ ಅಂದರೆ ಕನ್ನಡ ಸಂಪೂರ್ಣವಾಗಿ ಆಡಳಿತಭಾಷೆಯಾಯಿತೆಂದರೆ ಅದಕ್ಕೆ ಉಚಿತ ಸ್ಥಾನಮಾನ ನೀಡಿದಂತಾಗುತ್ತದೆ. ಆಗ ಕನ್ನಡ ನಾಡಿನಲ್ಲಿರುವ ಮುಲ್ತಾನಿಗಳು, ಸಿಂಧಿಗಳು, ತೆಲುಗರು, ತಮಿಳರು ಎಲ್ಲರೂ ಕನ್ನಡ ಕಲಿಯಬೇಕಾಗುತ್ತದೆ. ಅವರು ಕನ್ನಡ ಸಂಸ್ಕೃತಿಯ ಒಂದು ಭಾಗವಾಗಿ, ಪ್ರತ್ಯೇಕತಾ ಮನೋಭಾವನೆ ಹಿಂಜರಿಯುತ್ತದೆ. ತಾವೂ ಕನ್ನಡಿಗರೆಂಬ ಹೆಮ್ಮೆ ಅವರ ಮನಸ್ಸಿನಲ್ಲಿ ಮೊಳೆಯುತ್ತದೆ. ಅದು ಹಾಗಾಗಲಿಲ್ಲ, ಕನ್ನಡ ನಾಡು ಹಾಗೂ ಬದುಕು ಛಿದ್ರ-ವಿಚ್ಛಿದ್ರವಾಗುತ್ತದೆ. ರಾಜ್ಯದ ಆಡಳಿತ ಭಾಷೆ ಸಂಪೂರ್ಣವಾಗಿ ಕನ್ನಡವಾಯಿತೆಂದರೆ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಕಚೇರಿ ಹಾಗೂ ಕಾರ್ಖಾನೆಗಳಲ್ಲಿ ಕನ್ನಡ ಪರಿಮಳಿಸಲು ಅನುಕೂಲವಾಗುತ್ತದೆ.

ಅವರೇ ತಿಳಿಸುವಂತೆ ಕನ್ನಡ ಸದ್ಯಕ್ಕೆ ಆಡಳಿತ ಭಾಷೆಯಾಗಬಾರದೆಂದು ಕೆಲವರು ಕಾರಣಗಳನ್ನು ಹೇಳುತ್ತಾರೆ ಅವರು ಕೊಡುವ ಕಾರಣಗಳೇನೆಂದರೆ,

೧. ಕನ್ನಡ ಆಡಳಿತ ಭಾಷೆ ಆಗುವುದರಿಂದ ಅಂತರರಾಜ್ಯಗಳ ಹಾಗೂ ಕೇಂದ್ರ ಮತ್ತು ರಾಜ್ಯಗಳ ನಡುವಣ ವ್ಯವಹಾರಗಳಿಗೆ ತೊಡಕಾಗುತ್ತದೆ.

೨. ಭಾಷಾ ಅಲ್ಪಸಂಖ್ಯಾತರಿಗೆ ತೊಂದರೆಯಾಗುತ್ತದೆ.

೩. ಇನ್ನೂ ಕನ್ನಡ ಆಡಳಿತ ಭಾಷೆಯಾಗುವ ಸಾಮರ್ಥ್ಯವನ್ನು ಪಡೆದಿಲ್ಲ.

ಎನ್ನುವ ಕಾರಣಗಳನ್ನು ತಿಳಿಸುತ್ತಾ ಕನ್ನಡ ಭಾಷೆಯಲ್ಲಿ ಸಾಕಷ್ಟು ಪದಗಳಿಲ್ಲ, ಅದು ಸಮರ್ಥ ಭಾಷೆಯಲ್ಲ ಎಂದು ಹೇಳುವವರು ಅಜ್ಞರು. ಕನ್ನಡಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಅನೇಕ ಭಾಷೆಗಳ ಸಂಪರ್ಕವಿದೆ. ಶತಮಾನಗಳ ಪರ್ಯಂತ ಅದು ಆಡಳಿತ ಮಾದ್ಯಮವಾಗಿತ್ತೆನ್ನುವುದಕ್ಕೆ ಶಾಸನಾಧಾರಗಳಿವೆ. ಭಾಷೆ ಬಳಕೆಯಿಂದ ಬೆಳೆಯುತ್ತದೆ. ಅದನ್ನು ವ್ಯಾಪಕವಾಗಿ ಬಳಸದೇ, ಅದು ಬೆಳೆಯಬೇಕೆನ್ನುವುದರಲ್ಲಿ ಅರ್ಥವಿಲ್ಲ. ಆಡಳಿತ ಭಾಷೆಯಾದ ಕ್ಷಣದಿಂದಲೇ ಕನ್ನಡ ಬೆಳೆಯುತ್ತದೆಯೇ ಎಂದು ಕೆಲವರು ಅಪ್ರಬುದ್ಧರು ಪ್ರಶ್ನಿಸುವುದುಂಟು. 'ಅಹುದು' ಎಂದೇ ಅದಕ್ಕೆ ಉತ್ತರ ದೇ.ಜವರೇಗೌಡ

ಅವರು 'ಕನ್ನಡ ಚಿಂತನೆ' ಕೃತಿ ಪುಟ ಸಂಖ್ಯೆ ೭೧ರಲ್ಲಿ ವಿವರಿಸಿದ್ದಾರೆ. ಇದರಿಂದ ಅವರು ಆಡಳಿತ ಕನ್ನಡಕ್ಕೆ ಇರುವ ಸಮಸ್ಯೆಗಳನ್ನು ತಿಳಿಸಿದ್ದಾರೆ.

ಆಡಳಿತ ಭಾಷೆಯ ಮುಖಾಂತರ ಆಡಳಿತ ನಡೆಸಿದಲ್ಲಿ ಸರ್ಕಾರ ಮತ್ತು ಜನತೆಯ ನಡುವೆ ಪತ್ರವ್ಯವಹಾರ ಸುಗಮವಾಗುತ್ತವೆ. ಕನ್ನಡದಲ್ಲಿ ಪದಗಳ ಸಂಪತ್ತು ಬೇಕಾದಷ್ಟಿದೆ. ಆ ಶಬ್ದಸಂಪತ್ತು ಕನ್ನಡದಲ್ಲಿ ಆಡಳಿತವನ್ನು ನಡೆಸಲು ಪೂರಕವಾಗಿದೆ. ಆದರೆ ಆಡಳಿತಗಾರರು, ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ನೀರಸ ಮನೋಭಾವನೆಯನ್ನು ತೋರುತ್ತಿರುವುದು ಕಂಡುಬರುತ್ತದೆ.

ಆಡಳಿತದಲ್ಲಿ ಕನ್ನಡ ಬಳಕೆಯ ಅನಿವಾರ್ಯತೆ ಮತ್ತು ಅವಶ್ಯಕತೆ ಪ್ರಸ್ತುತ ಸಂದರ್ಭದಲ್ಲಿ ಇದೆ. ಆದರೆ ಇಡಿ ಕರ್ನಾಟಕದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಗಣನೆಗೆ ತೆಗೆದುಕೊಂಡಾಗ ಸಮಸ್ಯೆಗಳು ಎದುರಾಗುತ್ತವೆ. ಸಮಸ್ಯೆಗಳೆಂದರೆ ಕನ್ನಡಿಗರಲ್ಲಿ ಇರುವ ಇಂಗ್ಲೀಷಿನ ವ್ಯಾಮೋಹ, ಆಡಳಿಗಾರರಲ್ಲಿನ ಸಮಸ್ಯೆ, ಅಲ್ಪಸಂಖ್ಯಾತರ ಸಮಸ್ಯೆ, ಬಹುಭಾಷಿಗರು ಕರ್ನಾಟಕದಲ್ಲಿರುವುದು, ಸಾಮಾಜಿಕ ಭಿನ್ನತೆಗಳು, ರಾಜಕೀಯ ಕಾರಣಗಳು, ಸಾಮಾಜಿಕ ಕಾರಣಗಳು ಮುಖ್ಯವಾಗಿ ಎದ್ದು ಕಾಣುತ್ತವೆ.

ಅಧ್ಯಯನಕ್ಕೆ ಸಂಬಂಧಪಟ್ಟಂತೆ ಆಡಳಿತದಲ್ಲಿ ಕನ್ನಡದ ಬಳಕೆ : ಸಮಸ್ಯೆ ಮತ್ತು ಸವಾಲುಗಳನ್ನು ಕುರಿತಾಗಿ ಈ ಗಾಗಲೇ ಹಲವು ವಿಷಯಗಳು ಪ್ರಸ್ತಾಪಗೊಂಡಿರುವುದನ್ನು ಕಂಡಿದ್ದೇವೆ ಅವುಗಳ ಬಗ್ಗೆ ಒಂದು ಸಮೀಕ್ಷೆಯನ್ನು ಕೈಗೊಂಡಾಗ ಆಡಳಿತದಲ್ಲಿ ಕನ್ನಡ ಬಳಕೆ ಮತ್ತು ಬಳಕೆಯಲ್ಲಿ ಉಂಟಾಗುವ ಸಮಸ್ಯೆಗಳೇನು? ಸಮಸ್ಯೆಗಳು ಸವಾಲುಗಳಾಗಿ ಪರಿಣಮಿಸಿವೆಯಾ? ಎನ್ನುವ ಪ್ರಶ್ನೆಗಳಿಗೆ ಉತ್ತರ ಕೆಲವೊಂದು ಭಾಷಾ ವಿದ್ವಾಂಸರ ಹೇಳಿಕೆ ಮತ್ತು ವಿಚಾರಗಳಿಂದ ಕೆಲವೊಂದು ವಿಚಾರಗಳಿಗೆ ಉತ್ತರ ದೊರೆತಂತಾಗುತ್ತದೆ. ಇದನ್ನು ಪ್ರಸ್ತುತ ಪ್ರಬಂಧದಲ್ಲಿ ಮಾಡಲಾಗಿದೆ.

ಈಗಾಗಲೇ ಆಡಳಿತದಲ್ಲಿ ಕನ್ನಡದ ಬಳಕೆ ಕಡ್ಡಾಯವಾಗಿ ಅನುಷ್ಠಾನಕ್ಕಾಗಿ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾಗಿಯೂ ಆಡಳಿತ ವ್ಯವಸ್ಥೆಗಳ ಹಲವಾರು ಇಲಾಖೆಗಳಲ್ಲಿ ಇನ್ನೂ ಕನ್ನಡವನ್ನು ಬಳಸದೆ ಇರುವುದು ಸತ್ಯ. ಅದಕ್ಕೆ ಹಲವಾರು ಕಾರಣಗಳೂ ಇವೆ. ಕಾರಣಗಳೇನೆಂಬುದನ್ನು ಈಗಾಗಲೇ ರಚಿತಗೊಂಡ ಕೃತಿಗಳ ಹಿನ್ನೆಲೆಯಲ್ಲಿ ಹಾಗೂ ಇಲ್ಲಿ ನಡೆದ ಅಧ್ಯಯನವನ್ನು ನೋಡಿ ವಿಷಯದ ಅವಲೋಕನ ಮಾಡಿದಾಗ ಸ್ವಲ್ಪ ಮಟ್ಟಿಗೆಯಾದರೂ ವಾಸ್ತವಿಕತೆ ಅರ್ಥವಾಗುತ್ತದೆ.

ಆಡಳಿತದಲ್ಲಿ ಕನ್ನಡ ಬಳಕೆ: ಸಮಸ್ಯೆ ಮತ್ತು ಸವಾಲು ಎಂಬ ವಿಷಯವು ಸಂಕ್ಷಿಪ್ತವಾದರೂ ಆಡಳಿತ ವಿಶಾಲ ಕ್ಷೇತ್ರವನ್ನೇ ಒಳಗೊಂಡಿದೆ. ವಾಸ್ತವಿಕವಾಗಿ ಒಂದು ಕ್ಷೇತ್ರವನ್ನು ಯಾವುದೇ ವಿಷಯವು ಒಳಗೊಂಡಿದ್ದರೆ ಆ ಕ್ಷೇತ್ರಕ್ಕೆ ಅದರದ್ದೇ ಆದ ಸಮಸ್ಯೆಗಳಿರುತ್ತವೆಂಬುದು ಹಲವಾರು ವಿಷಯಗಳಿಂದ ದೃಢಪಟ್ಟಿದೆ. ಆಡಳಿತದಲ್ಲಿ ಕನ್ನಡದ ಬಳಕೆ ಎಂಬುದು ಒಂದು ಕ್ಷೇತ್ರವಾಗಿರುವ

ಹಿನ್ನೆಲೆಯಲ್ಲಿ ಅದರದ್ದೇ ಆದ ಸಮಸ್ಯೆಗಳಿವೆ ಹಾಗೂ ಸಮಸ್ಯೆಗಳು ಸವಾಲುಗಳಾಗುವ ಹಲವಾರು ಸಾಧ್ಯತೆಗಳೂ ಇವೆ ಎಂಬುದು ಸತ್ಯ.

ಕೆ.ವಿ.ನಾರಾಯಣ ಅವರ ದೃಷ್ಟಿ ಕೋನದಲ್ಲಿ ನೋಡುವುದಾದರೆ, ಆಡಳಿತದ ಯಂತ್ರದಲ್ಲಿ ಜನರೇ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ. ಅವರೇ ಈ ಆಡಳಿತ ಭಾಷೆಯನ್ನು ಪೋಷಿಸಬೇಕು. ಪಾರದರ್ಶಕತೆಯ ಮುಖಾಂತರ ಬೆಳೆಸಬೇಕು. ಆದರೆ ಅದು ಆಗುತ್ತಿಲ್ಲ, ಮುಂದುವರೆದು ಬೆಳವಣಿಗೆ ಹೊಂದಿದಂತೆಲ್ಲಾ ದೃಢವಾಗದೇ ಸಡಿಲವಾಗುತ್ತಿದೆ. ಆಡಳಿತ ಭಾಷೆಯಾಗಿ ನೆಲೆಗೊಳ್ಳುವ ಅವಕಾಶಗಳು ಕಡಿಮೆಯಾಗುತ್ತಿದೆ, ಇದು ಸದೃಢವಾಗಬೇಕು ಎಂಬ ಅಳಲನ್ನು ಅವರು ತೋಡಿಕೊಂಡಿದ್ದಾರೆ. ಇದು ಸತ್ಯ ಸಂಗತಿಯೂ ಹೌದು. ಆದರೆ ಆಡಳಿತ ಭಾಷೆ ಮತ್ತು ಜನಭಾಷೆಯ ನಡುವೆ ಸಂಬಂಧ ಏರ್ಪಡಬೇಕಾದರೆ ಜನರ ಮತ್ತು ಆಡಳಿತಗಾರರ ಭಾಷೆಯಲ್ಲಿ ಒಮ್ಮತವೆಂಬುದು ಬರತಕ್ಕದ್ದು ಎಂದು ಬಿಂಬಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧದಲ್ಲಿ ಆಡಳಿತದಲ್ಲಿ ಕನ್ನಡ ಬಳಕೆ : ಸಮಸ್ಯೆ ಮತ್ತು ಸವಾಲುಗಳ ಕುರಿತಾದ ವಿವಿಧ ಸಮಸ್ಯೆಗಳನ್ನು ವಿವಿಧ ಆಯಾಮಗಳಲ್ಲಿ ವಿವರಿಸಿ ವಿಶ್ಲೇಷಿಸಲಾಗಿದೆ. ಪರಿವಿಡಿಯನ್ನು ಒಟ್ಟು ಏಳು ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ. ಆಡಳಿತದಲ್ಲಿ ಕನ್ನಡ ಬಳಕೆ ಸಮಸ್ಯೆ ಮತ್ತು ಸವಾಲುಗಳು ಕುರಿತಂತೆ ಎಲ್ಲಾ ಅಧ್ಯಾಯಗಳಲ್ಲಿ ಒಂದಲ್ಲಾ ಒಂದು ರಿತಿಯಲ್ಲಿ ಚರ್ಚೆ ಮಾಡಲಾಗಿದೆ. ಮುಖ್ಯವಾಗಿ ಪ್ರಸ್ತುತ ಸಂದರ್ಭದಲ್ಲಿ ಆಡಳಿತ ಕನ್ನಡ ಬಳಕೆಯಲ್ಲಿನ ಸಮಸ್ಯೆ ಕುರಿತಂತೆ ನಡೆಯುತ್ತಿರುವ ಚರ್ಚೆಗಳ ವಿಷಯವನ್ನು ಕೈಗೆತ್ತಿಕೊಂಡು ಭಾಷಾತಜ್ಞರು, ಭಾಷಾವಿಜ್ಞಾನಿಗಳು, ಚಿಂತಕರು, ಸಾಹಿತಿಗಳು, ಕೃತಿಕಾರರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಇಲ್ಲಿ ಬಳಸಿಕೊಂಡು ಆಡಳಿತದಲ್ಲಿ ಕನ್ನಡದ ಬಳಕೆ : ಸಮಸ್ಯೆ ಮತ್ತು ಸವಾಲುಗಳು ಕುರಿತಂತೆ ಅಧ್ಯಯನವು ಒಳಗೊಂಡು ಸಮಸ್ಯೆ ಮತ್ತು ಸವಾಲುಗಳನ್ನು ಗುರುತಿಸಿಕೊಂಡಿದೆ.

ಆಡಳಿತದಲ್ಲಿ ಕನ್ನಡ ಬಳಕೆಯಲ್ಲಿನ ಸಮಸ್ಯೆಗಳು ಮೇಲ್ನೋಟಕ್ಕೆ ಸಮಸ್ಯೆಗಳೆಂದು ಕಂಡುಬಂದರೂ ವಾಸ್ತವಿಕವಾಗಿ ಸಮಸ್ಯೆಗಳು ಬೇರೆ ಇವೆ. ಆಡಳಿತದಲ್ಲಿ ಕನ್ನಡ ಬಳಕೆಗೆ ಕನ್ನಡ ಭಾಷೆಯನ್ನು ತೊರೆದು ಇಂಗ್ಲೀಷ್ ಭಾಷೆಗೆ ಮೊರೆ ಇಡುತ್ತಿರುವುದು ವಿಪರ್ಯಾಸವೇ ಸರಿ. ಅಂದರೆ ರಾಜ್ಯದ ಅಧಿಕೃತ ಭಾಷೆಯಾದ ಕನ್ನಡವನ್ನು ಬಿಟ್ಟು ಅನ್ಯ ಭಾಷೆಯನ್ನು ಆಡಳಿತದಲ್ಲಿ ಬಳಸುತ್ತಿರುವುದು ಸಾಮಾನ್ಯವೆಂಬಂತೆ ತೋರಿಬರುತ್ತದೆ. ಪ್ರಸ್ತುತ ಆಡಳಿತದಲ್ಲಿ ಕನ್ನಡ ಬಳಕೆ ಸರಿಯಾಗಿ ಆಗಬೇಕೆನ್ನುವ ದೃಷ್ಟಿಯಿಂದ ಇಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ.

ರಾಜ್ಯದಲ್ಲಿ ಕನ್ನಡ ಭಾಷೆ ಚಲನ ಶೀಲವಾಗಿರುವಾಗ, ಆಡಳಿತದ ಭಾಷೆ ಕನ್ನಡವೇ ಆಗಿರುವಾಗ, ಪ್ರಜೆಗಳಿಗೆ ತಿಳಿಸುವ ಸುತ್ತೋಲೆ ಮತ್ತು ಆದೇಶಗಳನ್ನು ಕನ್ನಡದಲ್ಲೇ ತಿಳಿಸಿದಾಗ ಅದು ಸುಲಭವಾಗಿ ಎಲ್ಲರಿಗೂ ಅರ್ಥವಾಗುವುದು ಅಷ್ಟೇ ಅಲ್ಲದೇ ಸರಳವಾಗಿ ಆಡಳಿತ ಯಂತ್ರದ ಜೊತೆಗೆ ಪ್ರತಿಕ್ರಿಯಿಸಬಹುದು ಎನ್ನುವುದು ಆಡಳಿತದ ದೃಷ್ಟಿಯಿಂದ ಮಾನ್ಯವಾದುದಾಗಿದೆ. ಇನ್ನೊಂದು ವಿಚಾರದ ಸಂಗತಿ ಏನೆಂದರೆ, ಕರ್ನಾಟಕದ ಕನ್ನಡ ಪ್ರದೇಶದಲ್ಲಿ ಆಡಳಿತದಲ್ಲಿ ಕನ್ನಡ ಭಾಷೆಯ

ಬಳಕೆಗೆ ಇರುವ ಸಮಸ್ಯೆ ಮತ್ತು ಸವಾಲುಗಳ ಪರಿಹಾರಕ್ಕಾಗಿ ಮತ್ತು ಆಡಳಿತದಲ್ಲಿ ಕನ್ನಡದ ಬಳಕೆಗೆ ಹೋರಾಟ ನಡೆಸುತ್ತಿರುವುದು ನಿಜಕ್ಕೂ ಗಂಭೀರವಾಗಿ ಯೋಚಿಸುವ ಸಂಗತಿ.

ಆಡಳಿತದಲ್ಲಿ ಕನ್ನಡ ಬಳಕೆ ಮಾಡಬೇಕೆನ್ನುವ ವಿಚಾರವಾಗಿ ನಡೆಯುತ್ತಿರುವ ಚರ್ಚೆಗಳು ವಿಶ್ವಾಸನೀಯವಾಗಿದೆ. ಆದರೆ ಇನ್ನೂ ಈ ಚರ್ಚೆಗಳ ಕುರಿತಾಗಿ ಪರಿಹಾರಗಳನ್ನು ಕೈಗೊಳ್ಳದಿರುವುದು ಚಿಂತಿಸುವ ವಿಷಯವಾಗಿದೆ. ಇಂತಹ ಎಲ್ಲಾ ಸಮಸ್ಯೆಗಳ ಸ್ವರೂಪವನ್ನು ಹಾಗೂ ಅವರ ಹಿಂದಿರುವ ಸವಾಲುಗಳನ್ನು ತಿಳಿದುಕೊಳ್ಳುವ ಈ ಬಗೆಯ ಪ್ರಯತ್ನವೇ ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನವು ತನ್ನ ಸ್ವರೂಪವನ್ನು ಹೊಂದಿದೆ.

ಆರಂಭದಲ್ಲಿ ಪ್ರಸ್ತಾವನೆಯೊಂದಿಗೆ ಆಡಳಿತ ಭಾಷೆಯ ವಿವರಣೆ, ಕನ್ನಡ ಆಡಳಿತ ಭಾಷೆಯಾಗಿ ನಡೆದುಬಂದ ದಾರಿ, ಶಾಸನ ಮತ್ತು ರಾಜರ ಆಳ್ವಿಕೆಯ ಆಡಳಿತದಲ್ಲಿ ಕನ್ನಡದ ಇತಿಹಾಸ. ನಂತರದಲ್ಲಿ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಆಂಗ್ಲರ ಆಡಳಿತದಲ್ಲಿ ಸ್ವತಂತ್ರ ಪೂರ್ವದಲ್ಲಿ ಆಡಳಿತ ಭಾಷೆಯಾಗಿ ಕನ್ನಡ ನಡೆದುಬಂದ ಇತಿಹಾಸ. ಹಾಗೂ ಇಂದಿನವರೆಗೂ ಆಡಳಿತ ಭಾಷೆಯಾಗಿ ನಡೆದು ಬಂದ ಸ್ವಾತಂತ್ರ್ಯದ ನಂತರದ ಆಡಳಿತ ಕನ್ನಡದ ಇತಿಹಾಸವನ್ನು ನೋಡಲಾಗಿದೆ. ಅಲ್ಲದೇ ಆಡಳಿತ ಕನ್ನಡದ ಮೇಲೆ ಪ್ರಭಾವ ಬೀರಲಾದ ಪಾಕೃತ, ಸಂಸ್ಕೃತ, ಪಾರಸಿ, ಉರ್ದು, ತೆಲುಗು, ತಮಿಳು ಭಾಷೆಗಳ ಪ್ರಭಾವದ ಹಿನ್ನಲೆಯ ಪಕ್ಷಿನೋಟವನ್ನು ಮಹಾ ಪ್ರಬಂಧದ ಪ್ರಸ್ತಾವನೆಯಲ್ಲಿ ಮಾಡಲಾಗಿದೆ.

ಮಹಾಪ್ರಬಂಧದ ಅಧ್ಯಾಯ ಒಂದರಲ್ಲಿ ಅಧ್ಯಯನವು ಉದ್ದೇಶ, ಸ್ವರೂಪ, ಮಹತ್ವ ವ್ಯಾಪ್ತಿ ಮತ್ತು ವೈಧಾನಿಕತೆಯ ಭಾಗವಾಗಿದೆ. ಅಧ್ಯಾಯ ಎರಡರಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಇದುವರೆಗೂ ನಡೆಸಿದಂತಹ ಮತ್ತು ನಡೆದ ಅಧ್ಯಯನಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳುವ ನಿಟ್ಟಿನಿಂದ ಸಮೀಕ್ಷೆ ಮಾಡಲಾಗಿದೆ. ಅಂತಹ ಪೂರಕ ಅಧ್ಯಯನಗಳಾದ ಪಿಎಚ್.ಡಿ ಮಹಾಪ್ರಬಂಧಗಳು, ಎಂ.ಫಿಲ್ ಪ್ರಬಂಧಗಳು, ಎಂ.ಇಡಿ ಕಿರುಪ್ರಬಂಧಗಳು, ಕೃತಿಗಳು, ನಿಯತಕಾಲಿಕೆಗಳಲ್ಲಿನ ಲೇಖನಗಳನ್ನು ಕ್ರೂಢೀಕರಿಸಿ ಅವುಗಳ ಆಶಯಗಳನ್ನು ಇಲ್ಲಿ ಚರ್ಚಿಸಲಾಗಿದೆ. ಅಧ್ಯಾಯ ಮೂರರಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಯ ಸಮಸ್ಯೆ ಮತ್ತು ಸವಾಲುಗಳಿಗೆ ಸಂಬಂಧಿಸಿದಂತೆ ಆಡಳಿತದಲ್ಲಿ ಇಂದಿಗೂ ಸಂಪೂರ್ಣವಾಗಿ ಕನ್ನಡವನ್ನು ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣಗಳೇನು ಮತ್ತು ಅದಕ್ಕಿರುವ ಸವಾಲುಗಳಾವುವು ಎಂಬ ವಿಷಯವನ್ನು ಸಾಮಾಜಿಕ ಮತ್ತು ರಾಜಕೀಯ ಹಿನ್ನೆಲೆಯಲ್ಲಿ ಸಮಸ್ಯೆಗಳನ್ನು ನೋಡುವ ನಿಟ್ಟಿನಲ್ಲಿ ಉದ್ದೇಶವನ್ನು ಹೊಂದಿದೆ. ಈ ಅಧ್ಯಯನಗಳನ್ನು ಬಳಸಿಕೊಳ್ಳುವುದರ ಉದ್ದೇಶದೊಂದಿಗೆ ಪ್ರಸ್ತುತ ಅಧ್ಯಯನವು ಹೇಗೆ ಭಿನ್ನವಾಗಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಮಹಾಪ್ರಬಂಧದ ಅಧ್ಯಾಯ ನಾಲ್ಕರಲ್ಲಿ ಪ್ರಸ್ತುತ ಸಂದರ್ಭದಲ್ಲಿ ಆಡಳಿತದಲ್ಲಿ ಕನ್ನಡದ ಬರಹ ಶುದ್ಧರೂಪದಲ್ಲಿ ನಡೆಯುತ್ತಿಲ್ಲವೆಂಬುದು ಮತ್ತು ಆಡಳಿತ ಕನ್ನಡದ ಬಳಕೆಯಲ್ಲಲ್ಲದೇ ಬೇರೆ ಸಂದರ್ಭದಲ್ಲಿಯೂ ಕನ್ನಡದ ಬಳಕೆ ಶುದ್ಧವಾಗಿ ಆಗುತ್ತಿಲ್ಲ ಎಂಬ ಒಂದು ಅಪವಾದವಿದೆ.

ಆಡಳಿತ ಕನ್ನಡದಲ್ಲಿ ಬರಹದ ಅಥವಾ ಬಳಕೆಯ ಸಂದರ್ಭದಲ್ಲಿ ಕಂಡುಬಂದ ದೋಷಗಳನ್ನು ಈ ನಾಲ್ಕನೆಯ ಅಧ್ಯಾಯದಲ್ಲಿ ಗುರುತಿಸಲಾಗಿದ್ದು ಸಹಜವಾಗಿ ಬರವಣಿಗೆಯ ಸಂದರ್ಭದಲ್ಲಿ ದಿನನಿತ್ಯದ ಆಡಳಿತದಲ್ಲಿ ಆಗುವ ದೋಷಗಳಾದ ಅಕ್ಷರ/ಶಬ್ದದೋಷಗಳು, ವಾಕ್ಯದೋಷಗಳು, ತಲೆಬರಹದಲ್ಲಿನ ದೋಷಗಳು/ಶಿರೋನಾಮದ ದೋಷಗಳು, ಅರ್ಥದೋಷಗಳು, ಅಕ್ಷರದ ಸ್ಥಾನಪಲ್ಲಟದಿಂದುಂಟಾಗುವ ದೋಷಗಳು, ಪ್ರಕಟಣಾ ದೋಷಗಳು/ಮುದ್ರಣಾ ದೋಷಗಳು/ ಬೆರಳಚ್ಚು ದೋಷಗಳನ್ನು ವಿವರಣೆಯ ಮುಖಾಂತರ ಸಮಸ್ಯೆಗಳನ್ನು ಗುರುತಿಸಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಅಲ್ಲದೇ ಬೇರೆ ಭಾಷೆಯಿಂದ ಕನ್ನಡ ಭಾಷೆಗೆ ಆಡಳಿತದಲ್ಲಿ ಅನುವಾದ, ಭಾಷಾಂತರಗೊಳಿಸುವ ಸಂದರ್ಭದಲ್ಲಿ ಉಂಟಾಗುವ ಸಮಸ್ಯೆಗಳ ಬಗ್ಗೆ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಸಂದರ್ಭದಲ್ಲಿ ಆಡಳಿತದಲ್ಲಿ ಕನ್ನಡದ ಬಳಕೆ. ಎಂಬ ಶಿರ್ಷಿಕೆಯ ಅಡಿಯಲ್ಲಿ ಐದನೆಯ ಅಧ್ಯಾಯವನ್ನು ಸಂಶೋಧನೆಗೆ ಒಳಪಡಿಸಿಕೊಂಡಿರುತ್ತೇನೆ. ಮಂಗನಿಂದ ಮಾನವ ಹೇಗೆ ರೂಪುತಾಳಿತೋ ಹಾಗೆಯೇ ಕಲ್ಲಿನಿಂದ ಬೆಂಕಿಯನ್ನು ಹತ್ತಿಸಿದ ಕಾಲದಿಂದ, ಮಂಗಳ ಗ್ರಹದಲ್ಲಿ ವಾಸಮಾಡುವ ಆವಿಷ್ಕಾರ ಹೊಂದಿರುವ ಇಂದಿನ ಸಂದರ್ಭದವರೆಗೂ, ವಿಜ್ಞಾನ ಮತ್ತು ತಂತ್ರಜ್ಞಾನ ಮಹತ್ತರವಾದ ತನ್ನದೇ ಕೊಡುಗೆಗಳನ್ನು ಮಾನವನ ಜಗತ್ತಿಗೆ ನೀಡಿದ ಅಭೂತಪೂರ್ಣವಾದ ಘಟನೆಗಳು ನಮಗೆ ಇತಿಹಾಸದ ಪುಟಗಳಲ್ಲಿ ಸಿಗುತ್ತವೆ. ವಿಶ್ವದಲ್ಲೇ ಮಾಹಿತಿ ತಂತ್ರಜ್ಞಾನದಲ್ಲಿ ತನ್ನನ್ನೆ ಗುರುತಿಸಿಕೊಂಡಿರುವ ಕರ್ನಾಟಕ, ಕನ್ನಡ ತಂತ್ರಜ್ಞಾನವನ್ನು ಸೃಷ್ಟಿಸುವಲ್ಲಿ ಎಡವಿದೆ ಅಥವಾ ಬೆರೆಯ ಭಾಷೆಗೆ ಹೋಲಿಸಿದರೆ ಹಿಂದೆ ಬಿದ್ದಿದೆ ಎನ್ನುಬಹುದು.

ಆಡಳಿತದಲ್ಲಿ ಇದರ ಬಳಕೆ ಅಲ್ಲಲ್ಲಿ ಕಾಣುತ್ತಿದೆ ಹೊರತು. ಪೂರ್ಣವಾಗಿ ಕನ್ನಡ ತಂತ್ರಜ್ಞಾನದ ಬಳಕೆ ಆಡಳಿತದಲ್ಲಿ ಆಗಿಲ್ಲ ಮತ್ತು ಆಗುತ್ತಿಲ್ಲವೆಂಬುದೊಂದು ಕೊರಗು. ಈ ನಿಟ್ಟಿನಲ್ಲಿ ಅಧ್ಯಯನ ನಡೆಸಿ ಸಮಸ್ಯೆಗಳನ್ನು ಗುರುತಿಸುವ ಕಾರ್ಯವು ಈ ಅಧ್ಯಾಯದಲ್ಲಿ ನಡೆದಿದೆ. ಆಡಳಿತದಲ್ಲಿ ಬಳಕೆಯಾಗುತ್ತಿರುವ ಅಂತರ್ಜಾಲ, ಮಿಂಚೆಗಳಿಗೆ ಸಂಬಂದಿಸಿದಂತೆ ಅದರಲ್ಲಿರುವ ಸಮಸ್ಯೆ ಮತ್ತು ಸವಾಲುಗಳನ್ನೊಳಗೊಂಡಂತೆ ಆಡಳಿತದಲ್ಲಿ ಅಂತರ್ಜಾಲ: ಕನ್ನಡ ಬಳಕೆಯ ಸಂದರ್ಭದಲ್ಲಿನ ಸಮಸ್ಯೆ ಮತ್ತು ಸವಾಲುಗಳು ಎಂಬ ಉಪ ಶೀರ್ಷಿಕೆಯಡಿಯಲ್ಲಿ ಸಮಸ್ಯೆಗಳನ್ನು ಗುರತಿಸಿಕೊಂಡಿದೆ. ಗಣಕಯಂತ್ರದ ಸಮಸ್ಯೆಗಳು ಮತ್ತು ಸವಾಲುಗಳು ಹಲವಾರು ಇರಬಹುದು ಆದರೆ ಅವುಗಳನ್ನು ಇಲ್ಲಿ ಒಟ್ಟಾರೆಯಾಗಿ ಚರ್ಚಿಸಲಾಗುತ್ತಿಲ್ಲ ಬದಲಾಗಿ ಆಡಳಿತದಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಮಾತ್ರ ಸಮಸ್ಯೆ ಮತ್ತು ಸವಾಲುಗಳನ್ನು ಗುರುತಿಸಿಸಲಾಗಿದೆ. ಆಡಳಿತದಲ್ಲಿ ಗಣಕಯಂತ್ರದ ಬಳಕೆಯ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳನ್ನು ಗುರುತಿಸಲಾಗಿದೆ. ಅವುಗಳನ್ನು ಈ ಅಧ್ಯಾಯದಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಹಾಗೂ ಬದಲಾವಣೆಗೆ ಸಲಹೆಗಳನ್ನೂ ಸೂಚಿಸಲಾಗಿದೆ. ತೀವ್ರಗತಿಯಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನ ಹಾಗೂ ಅದಕ್ಕೆ ಸಂಬಂಧಪಟ್ಟ

ಅಂತರ್ಜಾಲ ತಾಣ ಈ ಆಧುನಿಕ ಜಗತ್ತಿನಲ್ಲಿ ಇನ್ನೂ ಆಡಳಿತದಲ್ಲಿ ಕೆಲವೊಂದು ಶಾಖೆ ಹಾಗೂ ಕೆಲವೊಂದು ವಿಚಾರಗಳಲ್ಲಿ ಬದಲಾವಣೆಯನ್ನು ಕಾಣದಿರುವುದು ಶೋಚನೀಯ ಸಂಗತಿ. ಕಾರಣ ಪ್ರಸ್ತುತ ಅಧ್ಯಾಯದಲ್ಲಿ ಆಡಳಿತದಲ್ಲಿ ಅಂತರ್ಜಾಲ ಕನ್ನಡ ಬಳಕೆಯ ಸಂದರ್ಭದಲ್ಲಿನ ಸಮಸ್ಯೆ ಮತ್ತು ಸವಾಲುಗಳನ್ನು ಹುಡುಕುವ ಪ್ರಯತ್ನವನ್ನು ಮಾಡಲಾಗಿದೆ.

ಪ್ರಸ್ತುತ ಮಹಪ್ರಬಂಧದಲ್ಲಿ ಆರನೆಯ ಅಧ್ಯಾಯವು ಆಡಳಿತದಲ್ಲಿ ಕನ್ನಡ ಎದುರಾದ ಸಮಸ್ಯೆಗಳು ಮತ್ತು ಸವಾಲುಗಳನ್ನು ಈ ಹಿಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಅವುಗಳ ಜೊತೆಯಲ್ಲಿ ಇನ್ನೂ ಕೆಲವೊಂದು ಸಮಸ್ಯೆಗಳು ಬಾಹ್ಯವಾಗಿ ಮತ್ತು ಅಂತರಿಕವಾಗಿ ಕಾಡುತ್ತಿವೆ. ಈ ಸಮಸ್ಯೆಗಳ ಬಗ್ಗೆ ಒಂದು ಪಕ್ಷಿನೋಟ ಹಾಗೂ ಪರಿಹಾರ ಈ ಅಧ್ಯಾಯದಲ್ಲಿದೆ.

ಕೇಂದ್ರ ಮತ್ತು ರಾಜ್ಯಸರ್ಕಾರಗಳಲ್ಲಿ ಅಧಿಕಾರಿಗಳ ಹಂಚಿಕೆ ತಂತ್ರಜ್ಞಾನದ ಅಸಮರ್ಪಕ ಬಳಕೆ ಹಾಗೂ ಕನ್ನಡದ ನಿರ್ಲಕ್ಷೆ. ಕನ್ನಡರಿಗೆ ಕನ್ನಡ ಬಳಸುವ ಮನೋಧರ್ಮ ಇಲ್ಲದಿರುವುದು. ತಂತ್ರಾಂಶಗಳ ಕೊರತೆ ಅಂತರ್ಜಾಲದ ಆಧುನೀಕರಣ ಮತ್ತು ಪ್ರಭಾವ. ಜಾಗತಿಕ ಮತ್ತು ಆಧುನೀಕರಣದ ನೆಲೆಯಲ್ಲಿ ಕನ್ನಡ ಭಾಷೆಯ ಮೇಲೆ ನಡೆಯುತ್ತಿರುವ ಹುನ್ನಾರ, ಯೋಜನೆಗಳ ನಿರ್ವಹಣೆಯನ್ನು ಖಾಸಗೀಯವರಿಗೆ ನೀಡಿರುವುದುಮ ಭಾಷಾ ನೀತಿಗಳಲ್ಲಿನ ತೊಡಕುಗಳು ಹಾಗೂ ಸರ್ಕಾರ ರೂಪಿತ ಯೋಜನೆಗಳಲ್ಲಿನ ತೊಡಕುಗಳು, ಇಂಗ್ಲೀಷಿನ ವ್ಯಾಮೋಹ, ಪ್ರಾದೇಶಿಕ ವಲಯದಲ್ಲಿ ಭಾಷೆಯ ಭಿನ್ನತೆ, ಗಡಿನಾಡ ಭಾಷೆಗಳ ಪ್ರಭಾವ ಮತ್ತು ಭಾಷಾ ಅಲ್ಪಸಂಖ್ಯಾತರಲ್ಲಿ ಆಡಳಿತದಲ್ಲಿ ಕನ್ನಡ ಬಳಕೆಗಾಗಿ ಎದುರಾದ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಸೂಚಿಸುವ ನಿಟ್ಟನಲ್ಲಿ ಈ ಅಧ್ಯಾಯವು ಮುಂದುವರೆಯುತ್ತದೆ.

ಕಚೇರಿಗಳಿಗೆ ಸಂಬಂಧಿಸಿದಂತೆ ಟಿಪ್ಪಣಿ ಕಡತ ಮತ್ತು ಪತ್ರ ಇವುಗಳಲ್ಲಿ ಆಗುವ ಮತ್ತು ಆಗುತ್ತಿರುವ ದೋಷಗಳು ಮತ್ತು ಸಮಸ್ಯೆಗಳನ್ನು ಗುರುತಿಸುವುದರೊಂದಿಗೆ ಸಮಸ್ಯೆಗಳ ವಿವರಣೆಯನ್ನು ನೀಡುತ್ತವೆ.

ಪ್ರಸ್ತುತ ಅಧ್ಯಾಯವು ಈ ಸಂಶೋಧನಾ ಪ್ರಬಂಧದ ಕೊನೆಯ ಅಧ್ಯಾಯವಾಗಿದ್ದು ಈ ಅಧ್ಯಾಯದಲ್ಲಿ ಸಂಶೋಧನಾ ಪ್ರಬಂಧದ ಸಮಾರೋಪ, ಹಾಗೂ ಅಧ್ಯಾಯದ ಫಲಿತಗಳನ್ನು ವಿವರಿಸಲಾಗಿದೆ. ಆನಂತರದಲ್ಲಿ ಈ ಸಂಶೋಧನೆಗೆ ಬಳಸಿಕೊಳ್ಳಲಾದ ಪರಾಮರ್ಶನ ಗ್ರಂಥಗಳ ವಿವರಣೆಗಳನ್ನು ಹಾಗೂ ಕ್ಷೇತ್ರಧ್ಯಾಯನದ ಸಂದರ್ಭದಲ್ಲಿ ಬಳಸಿಕೊಳ್ಳಲಾದ ಮಾದರಿ ಪ್ರಶ್ನಾವಳಿಗಳನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

ಒಂದು ಕಾಲಘಟ್ಟದಲ್ಲಿ ಕನ್ನಡದಲ್ಲಿ ಕಚೇರಿ ವ್ಯವಹಾರಗಳನ್ನು ನಡೆಸಲು ವಿಶಿಷ್ಟ ಬಗೆಯ ಪಾರಿಭಾಷಿಕ ಪದಗಳಿಂದ ಕೂಡಿದ ಆಡಳಿತ ಬೇಕಿತ್ತು ಅದಕ್ಕಾಗಿ ಕನ್ನಡಿಗರು ಸ್ವಾತಂತ್ರಾ ನಂತರದ ಆರಂಭವ ಕಾಲದಲ್ಲಿ ಅಂದಿನ ಸಮಕಾಲೀನ ಭಾಷೆಗಳ ಮತ್ತು ಪ್ರಾದೇಶಿಕ ಭಾಷೆಗಳ ಪದಗಳನ್ನು ಬಳಸಿಕೊಂಡರು, ಕನ್ನಡಿಗರಿಗೆ ಅರಿಯದಂತೆ ಪರಭಾಷೆಯ ಪದಗಳು ಕನ್ನಡಕ್ಕೆ ಸೇರಿ ಕನ್ನಡ ಪದಗಳಾದವು. ಆದರೆ ಹಲವು ಆಡಳಿತಗಾರರು, ಸಾಹಿತ್ಯಗಾರರು, ಅವುಗಳನ್ನು ತಿರಸ್ಕರಿಸುವ ಮಡಿವಂತಿಕೆ ನಮಗೆ ಬೇಡ ಎನ್ನುತ್ತಾರೆ.

ಆಡಳಿತದ ಕ್ಷೇತ್ರ ಪ್ರತಿದಿನವೂ ಹೊಸ ಹೊಸ ಆಯಾಮಗಳೊಂದಿಗೆ ನಿರಂತರ ಚಲನಶೀಲವಾದುದು. ಅಂದಿನ ಆಡಳಿತದಲ್ಲಿ ಕನ್ನಡ ಬಳಕೆಗೂ, ಪ್ರಸ್ತುತ ಆಡಳಿತದಲ್ಲಿ ಕನ್ನಡ ಬಳಕೆಗೂ ಸಾಕಷ್ಟು ಬದಲಾವಣೆಗಳನ್ನು ನಾವು ಗುರುತಿಸಬಹುದು. ಆಡಳಿತದಲ್ಲಿ ಕನ್ನಡ ಬಳಕೆ ಮಾಡಬೇಕೆನ್ನುವ ಕುರಿತಾದ ಚರ್ಚೆಗಳು ಹಿಂದಿನಿಂದಲೂ ನಡೆಯುತ್ತಲೇ ಬಂದಿವೆ. ಅಂದಿನಿಂದ ಇಂದಿನವರೆಗೆ ಬೆಳೆದುಬಂದ ಚರ್ಚೆಯ ವಿಷಯ ಒಂದೇ ಆಗಿದ್ದರೂ ಆಡಳಿತದಲ್ಲಿ ಕನ್ನಡದ ಬಳಕೆಯ ಸ್ವರೂಪವು ಬದಲಾವಣೆಯಾಗುತ್ತಾ ಬಂದಿದೆ.

ಕರ್ನಾಟಕದಲ್ಲಿ ಮೊದಲು ಮೌರ್ಯ, ಕದಂಬ, ರಾಷ್ಟ್ರಕೂಟ, ಚಾಲುಕ್ಯರು, ಹೊಯ್ಸಳ ರಾಜರುಗಳ ಆಳ್ವಿಕೆಯಲ್ಲಿ ಆಡಳಿತ ನಡೆದುಬಂದು, ವಿಜಯನಗರ ಸಾಮ್ರಾಜ್ಯ ಬಹುಮನಿ ಸುಲ್ತಾನರ ಆಡಳಿತದ ಕಾಲದಲ್ಲಿ ತಿರುವುಳನ್ನು ಪಡೆದು ಆನಂತರದಲ್ಲಿ ಬ್ರಿಟಿಷರ ಆಡಳಿತಕ್ಕೊಳಪಟ್ಟು ನಂತರ ಆಡಳಿತದಲ್ಲಿ ಕನ್ನಡ, ಇಂಗ್ಲೀಷ್, ಉರ್ದು, ಪಾರ್ಸಿ ಪದಗಳೆಲ್ಲವೂ ಸೇರಿಕೊಂಡು ಆಡಳಿತ ಕನ್ನಡ ಸ್ವೀಕರಣ ಭಾಷೆಯಾಗಿ ಬೆಳೆದುಬಂದ ಆಡಳಿತ ಕನ್ನಡದ ಸ್ವರೂಪವನ್ನು ವಿಶ್ಲೇಷಿಸಲಾಗಿದೆ.

ಆಡಳಿತ ಕನ್ನಡ ಸಮಸ್ಯೆಗಳನ್ನು ಎದುರಿಸುತ್ತಿರುವುದು ಸತ್ಯ. ಆಡಳಿತ ಕನ್ನಡವನ್ನು ಆಡಳಿತದಲ್ಲಿ ಸಂಪೂರ್ಣವಾಗಿ ಬಳಕೆಯಾಗುವಂತೆ ಮಾಡುವಲ್ಲಿ ಪ್ರತಿಯೊಬ್ಬ ಕನ್ನಡಿಗನು ಶ್ರಮವಹಿಸಬೇಕು, ಅಲ್ಲದೇ ಆಡಳಿತದ ಮುಖ್ಯಭಾವಾಗಿರುವ ಕಚೇರಿ ಸಿಬ್ಬಂದಿವರ್ಗದವರು ಮತ್ತು ಅಧಿಕಾರಿ ವರ್ಗದವರು ಆಡಳಿತ ಕನ್ನಡವನ್ನು ಜಾರಿಗೆ ತರುವಲ್ಲಿ ವಿಫಲಾಗುತ್ತಿದ್ದಾರೆ ಎನ್ನುವ ವಿಷಯವು ಚರ್ಚೆಗೆ ಗ್ರಾಸವಾಗುತ್ತಿರುವ ಹಿನ್ನೆಲೆಯಲ್ಲಿ ಈ ಅಪವಾದದಿಂದ ಹೊರಬರುವ ನಿಟ್ಟಿನಲ್ಲಿ ಆಡಳಿತದಲ್ಲಿ ದಿನ ನಿತ್ಯ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಯವರು ಆಡಳಿತದಲ್ಲಿ ಕನ್ನಡವನ್ನು ಬಳಸುವ ಮುಂಖಾಂತರ ಮಾದರಿಯಾಗಬೇಕು.

ಈ ಹಿನ್ನೆಲೆಯಲ್ಲಿ ಆಡಳಿತದಲ್ಲಿ ಸಂಪೂರ್ಣವಾಗಿ ಕನ್ನಡ ಬಳಕೆಯ ಆಶಯ ಈಡೇರಿದಂತಾಗುತ್ತದೆ ಎನ್ನುವುದು ನನ್ನ ಆಶಯ.

ಅಧ್ಯಯನದ ಫಲಿತಗಳು

* ಸರ್ಕಾರವು ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಅನೇಕ ಸುತ್ತೋಲೆ, ಆದೇಶಗಳನ್ನು ಜಾರಿಗೆ ತಂದರೂ ಆಡಳಿತದಲ್ಲಿ ಸಂಪೂರ್ಣವಾಗಿ ಕನ್ನಡವನ್ನು ಜಾರಿಗೆ ತರಲು ಸಾಧ್ಯವಾಗಿಲ್ಲ ಎಂಬ ಅಂಶವನ್ನು ಕಂಡುಕೊಂಡಿದೆ.
* ಆಡಳಿತದಲ್ಲಿ ಕನ್ನಡವನ್ನು ಜಾರಿಗೊಳಿಸುವಲ್ಲಿ ಸರ್ಕಾರವು ರಚಿಸಿದ ರೂಪುರೇಷಗಳಲ್ಲಿನ ದ್ವಂದ್ವಗಳೇ ಆಡಳಿತದಲ್ಲಿ ಕನ್ನಡವನ್ನು ಸಮರ್ಥವಾಗಿ ಬಳಸಲು ತೊಡಕಾಗಿದೆ ಎನ್ನುವುದು ಅಧ್ಯಯನದಿಂದ ಕಂಡುಬಂದಿದೆ.
* ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಸರ್ಕಾರದ ಇಚ್ಛಾಶಕ್ತಿಯ ಕೊರತೆ ಇರುವುದು ಅಧ್ಯಯನದಿಂದ ಕಂಡುಬರುತ್ತದೆ.

* ದ್ವಿಭಾಷಿಕ ಮತ್ತು ಬಹುಭಾಷಿಕ ಪರಿಸರವಾಗಿರುವ ಕರ್ನಾಟಕದಲ್ಲಿ ಹಲವು ಭಾಷೆಗಳ ಜೊತೆಗೆ ಹಲವು ಕನ್ನಡಗಳು ಬಳಕೆಯಾಗುತ್ತಿವೆ. ಇಂಥ ಸಂಕೀರ್ಣ ಸಂದರ್ಭದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಅನುಷ್ಠಾನಕ್ಕೆ ತರುವುದು ಅತ್ಯಂತ ಕಷ್ಟದ ಕೆಲಸ. ಸಂವಿಧಾನದಲ್ಲಿನ ಸೂಚನೆಗಳು, ಸ್ಥಳೀಯ ಭಾಷೆಗಳ ಬಳಕೆ ಮತ್ತು ಕನ್ನಡದ್ದೇ ಹಲವು ರೂಪುಗಳು ಬಳಕೆಯಲ್ಲಿರುವಾಗ ಯಾವ ಕನ್ನಡ ಆಡಳಿತ ಭಾಷೆಯಾಗಬೇಕು? ಹೇಗಾಗಬೇಕು? ಎನ್ನುವಲ್ಲಿನ ಗೊಂದಲಗಳು ಆಡಳಿತದಲ್ಲಿ ಸಮರ್ಥವಾಗಿ ಕನ್ನಡವನ್ನು ಬಳಕೆಗೆ ತರುವಲ್ಲಿ ವಿಫಲವಾದಂತೆ ಕಂಡುಬಂದಿದೆ.

* ಭಾಷೆಯ ಮೇಲೆ ನಡೆಯುತ್ತಿರುವ ಜಾಗತಿಕ ಮಟ್ಟದ ರಾಜಕೀಯ ಹುನ್ನಾರಗಳೂ ಕೂಡ ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೆ ತರಲು ಪೂರ್ಣಪ್ರಮಾಣದಲ್ಲಿ ಸಾಧ್ಯವಾಗುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

* ಆಡಳಿತದಲ್ಲಿ ಕನ್ನಡ ಭಾಷೆಯನ್ನು ಬಳಸಬೇಕು ಎನ್ನುವ ಸುತ್ತೋಲೆಗಳು, ಪರಿಭಾಷೆಗಳ ಬಳಕೆ ಮತ್ತು ಶುದ್ಧ ಅಶುದ್ಧತೆಯ ಪರಿಮಿತಿಯೊಳಗೆ ಸೀಮಿತಗೊಂಡದ್ದೂ ಕೂಡ ಆಡಳಿತದಲ್ಲಿ ಕನ್ನಡದ ಸಮರ್ಥ ಬಳಕೆಗೆ ತೊಡಕುಂಟಾದಂತೆ ಕಂಡುಬರುತ್ತದೆ.

* ಆಡಳಿತದಲ್ಲಿ ಕನ್ನಡ ಬಳಸುವಲ್ಲಿ ಈಗಿರುವ ಆಡಳಿತದಲ್ಲಿನ ಪಾರಿಭಾಷಿಕ ಪದಗಳಿಗೆ ಸಂವಾದಿಯಾಗಿ ಕನ್ನಡದ್ದೆಂದು ಬಿಂಬಿಸಿದ ಪಾರಿಭಾಷಿಕ ಪದಗಳು ಸಂಸ್ಕೃತ ಭಾಷೆಯಿಂದ ರೂಪುಗೊಂಡಿದ್ದು ಮತ್ತು ಅವುಗಳು ಕನ್ನಡದ ಸಹಜ ಜಾಯಮಾನಕ್ಕೆ ಒಗ್ಗವಂಥವುಗಳಾಗದ ಕಾರಣ ಕೂಡ ಆಡಳಿತದಲ್ಲಿ ಕನ್ನಡವನ್ನು ಯಶಸ್ವಿಯಾಗಿ ಬಳಸಲು ಹಿನ್ನಡೆಯಾದಂತೆ ಕಂಡು ಬರುತ್ತದೆ.

* ಕನ್ನಡ ಇನ್ನೂ ಆಡಳಿತ ಭಾಷೆಯಾಗಿ ಬಳಸುವಷ್ಟು ಸಾಮರ್ಥ್ಯ ಪಡೆದಿಲ್ಲ, ಕನ್ನಡ ಭಾಷೆಯಲ್ಲಿ ಸಾಕಷ್ಟು ಸಮರ್ಥ ಪಾರಿಭಾಷಿಕ ಪದಗಳಿಲ್ಲ ಎನ್ನುವ ಮನೋಭಾವ ಕೂಡ ಆಡಳಿತದಲ್ಲಿ ಕನ್ನಡದ ಬಳಕೆಗೆ ತೊಡಕಾದಂತೆ ಕಂಡುಬರುತ್ತದೆ

* ಕರ್ನಾಟಕದಲ್ಲಿ ಬಹುಭಾಷಿಕತೆ ಜೊತೆಗೆ ಹಲವು ಕನ್ನಡಗಳ ಬಳಕೆಯಿದೆ. ಚಾಮರಾಜನಗರ ಜಿಲ್ಲೆಯ ಕನ್ನಡ, ಬೀದರ್ ಜಿಲ್ಲೆಯ ಕನ್ನಡ ಮತ್ತು ಮಂಗಳೂರು ಪ್ರದೇಶದ ಕನ್ನಡ ಒಂದೇ ತೆರನಾಗಿಲ್ಲ. ಈ ಪ್ರಾದೇಶಿಕ ಕನ್ನಡಗಳಲ್ಲೇ ಸಾಕಷ್ಟು ವೈವಿಧ್ಯತೆ ಇರುವುದರಿಂದ ಯಾವುದು ಸಾದು ರೂಪ, ಯಾವುದು ಸರಿಯಾದ ರೂಪ ಎನ್ನುವಲ್ಲಿ ಗೊಂದಲಗಳು ಇವೆ. ಇದೂ ಕೂಡ ಆಡಳಿತ ಭಾಷೆಯಾಗಿ ಕನ್ನಡ ಬಳಸುವಲ್ಲಿ ತೊಡಕಾಗಿರುವಂತೆ ಕಾಣುತ್ತದೆ.

ಅನುಬಂಧಗಳು

ಅನುಬಂಧ–೧	:	ಭಾಷಿಕ ಗಡಿಗಳನ್ನು ತೋರಿಸುವ ನಕ್ಷೆ
ಅನುಬಂಧ–೨	:	ಸ್ವಾತಂತ್ರ್ಯ ಪೂರ್ವದ ಆಡಳಿತದ ನಕ್ಷೆ
ಅನುಬಂಧ–೩ (ಅ)	:	ಪ್ರಾದೇಶಿಕ ವಿಭಾಗಗಳ ನಕ್ಷೆ
(ಆ)	:	ಪ್ರಾಂತ್ಯ ವಿಭಾಗಗಳ ನಕ್ಷೆ
ಅನುಬಂಧ–೪	:	ಆಡಳಿತದಲ್ಲಿ ಕನ್ನಡ ಬಳಕೆ ಕುರಿತಂತೆ ಸರ್ಕಾರದ ಸುತ್ತೋಲೆ. ದಿನಾಂಕ: ೧೦.೦೨.೧೯೮೨.
ಅನುಬಂಧ–೫	:	ಆಡಳಿತ ಭಾಷೆ ಜಾರಿಗೆ ಕುರಿತಂತೆ ಸರ್ಕಾರದ ಆದೇಶ. ದಿನಾಂಕ : ೧೬.೦೭.೧೯೮೪.
ಅನುಬಂಧ–೬	:	ಆಡಳಿತದಲ್ಲಿ ಕನ್ನಡ ಬಳಕೆ ಮಾಡದೇ ಇರುವ ನೌಕರರ ವಿರುದ್ಧ ಶಿಸ್ತಿಕ್ರಮ ಜರುಗಿಸುವ ಸರ್ಕಾರದ ಸುತ್ತೋಲೆ ದಿನಾಂಕ: ೧೩.೦೬.೨೦೦೨.
ಅನುಬಂಧ–೭	:	ಭಾಷಿಕ ಹಿನ್ನೆಲೆಯಲ್ಲಿ ತಪ್ಪು ಬಳಕೆ ಮಾಡಲಾದ ಪತ್ರದ ಮಾದರಿ.
ಅನುಬಂಧ–೮	:	ಭಾಷಿಕ ಹಿನ್ನೆಲೆಯಲ್ಲಿ ತಪ್ಪು ಬಳಕೆ ಮಾಡಲಾದ ಪತ್ರದ ಮಾದರಿ.
ಅನುಬಂಧ–೯	:	ಕನ್ನಡ ಅಂಕಿಗಳ ಬಳಕೆಯ ಬಗ್ಗೆ ಸರ್ಕಾರಿ ಆದೇಶ. ದಿನಾಂಕ: ೦೧.೦೧.೨೦೦೯
ಅನುಬಂಧ–೧೦	:	ಆಡಳಿತಾತ್ಮಕವಾದ ಗಡಿ ನಕ್ಷೆ.
ಅನುಬಂಧ–೧೧ (ಅ)	:	ಪತ್ರದ ಮೆಲಿನ ಟಿಪ್ಪಣಿ ಮಾದರಿ
(ಆ)	:	ಕಡೆತದಲ್ಲಿನ ಟಿಪ್ಪಣಿಯ ಬರವಣಿಗೆಯ ಮಾದರಿ.
ಅನುಬಂಧ–೧೨	:	ಆಡಳಿತದಲ್ಲಿ ಬಳಕೆಯಾದ ಉರ್ದುವಿನ ಮಾದರಿ ಪತ್ರ (ಪಂಚನಾಮೆ, ಪಹಣಿ, ಕಚೇರಿ ಪತ್ರ)
ಅನುಬಂಧ–೧೩	:	ಕನ್ನಡ ಇಂಗ್ಲೀಷ್ ಮಿಶ್ರಣದ ಮಾದರಿ ಪತ್ರಗಳು.
ಅನುಬಂಧ–೧೪	:	ಕನ್ನಡ ಅಂಕಿಗಳ ಬದಲಿಗೆ ಇಂಗ್ಲೀಷ್ ಅಂಕಿಗಳ ಬಳಕೆಯ ಮಾದರಿ ಪತ್ರ
ಅನುಬಂಧ–೧೫	:	ಕಚೇರಿ ಟಿಪ್ಪಣಿಯ ಪೂರ್ಣ ಮಾದರಿ ಪತ್ರ.

ಅನುಬಂಧ-೧


ಭಾಷಿಕ ಗಡಿಗಳನ್ನು ತೋರಿಸುವ ನಕ್ಷೆ



ಸ್ವಾತಂತ್ರ್ಯ ಪೂರ್ವದ ಆಡಳಿತದ ನಕ್ಷೆ



ಪ್ರಾದೇಶಿಕ ವಿಭಾಗಗಳ ನಕ್ಷೆ



ಪ್ರಾಂತ್ಯ ವಿಭಾಗಗಳ ನಕ್ಷೆ



ಆಡಳಿತದಲ್ಲಿ ಕನ್ನಡ ಬಳಕೆ ಕುರಿತಂತೆ ಸರ್ಕಾರದ ಸುತ್ತೋಲೆ. ದಿನಾಂಕ: ೧೦.೦೨.೧೯೮೨.

ಕರ್ನಾಟಕ ಸರ್ಕಾರ

ಕ್ರಮಾಂಕ : ಡಿಪಿಎಆರ್ 8 ಪಿಒಎಲ್ 83

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 10ನೇ ಫೆಬ್ರವರಿ 1982.

ಸುತ್ತೋಲೆ

ವಿಷಯ :- ದಿನಾಂಕ 15ನೇ ಫೆಬ್ರವರಿ 1983ರಿಂದ ಕನ್ನಡವನ್ನು ರಾಜ್ಯದಾದ್ಯಂತ ಆಡಳಿತ ಭಾಷೆಯಾಗಿ ಕಡ್ಡಾಯವಾಗಿ ಎಲ್ಲಹಂತದಲ್ಲೂ ತರುವ ಬಗ್ಗೆ.

ಉಲ್ಲೇಖ :- 1. ಸರ್ಕಾರದ ಅಧಿಸೂಚನೆ ಕ್ರಮಾಂಕ ಡಿಪಿಎಆರ್ 1 ಪಿಒಎಲ್ 79 ದಿನಾಂಕ 6ನೇ ಸೆಪ್ಟಂಬರ್ 1979.

2. ಸರ್ಕಾರದ ಅಧಿಕೃತ ಜ್ಞಾಪನ ಕ್ರಮಾಂಕ ಡಿಪಿಎಆರ್ 1 ಪಿಒಎಲ್ 79 ದಿನಾಂಕ 6ನೇ ಸೆಪ್ಟಂಬರ್ 1979

ಕನ್ನಡವನ್ನು ದಿನಾಂಕ 1ನೇ ನವೆಂಬರ್ 1979ರಿಂದ ರಾಜ್ಯದ ಎಲ್ಲ ಆಡಳಿತ ಮಟ್ಟದಲ್ಲೂ ವ್ಯವಹಾರಿಕ ಬಾಷೆಯಾಗಿ ಬಳಸಬೇಕೆಂದು ಅಧಿಕೃತ ಜ್ಞಾಪನ ಕ್ರಮಾಂಕ ಡಿ.ಪಿ.ಎ.ಆರ್1 ಪಿ.ಒ.ಎಲ್ 79, ದಿನಾಂಕ 6ನೇ ಸೆಪ್ಟಂಬರ್ 1979ರಲ್ಲಿ ಆದೇಶಿಸಲಾಗಿದೆ. ರಾಜ್ಯದ ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೆ ತರುವ ರಾಜ್ಯ ಸರ್ಕಾರದ ನೀತಿಗನುಗುಣವಾಗಿ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ, ಕನ್ನಡದ ಪ್ರಗತಿಪರ ಬಳಕೆ ಕುರಿತು ಕಾಲ ಕಾಲಕ್ಕೆ ಹಲವಾರು ಸೂಚನೆಗಳನ್ನು ನೀಡಲಾಗಿದೆ.

1. ರಾಜ್ಯಪಾಲರ ಭಾಷಣದಲ್ಲಿ 'ಆಡಳಿತದ ಎಲ್ಲಹಂತಗಳಲ್ಲೂ ಕನ್ನಡಕ್ಕೆ ಅಗ್ರಸ್ಥಾನ ನೀಡಲಾಗುವುದು' ಎಂದು ಘೋಷಿಸಲಾಗಿದೆ. ಈ ಬಗ್ಗೆ ದಿನಾಂಕ 15ನೇ ಫೆಬ್ರವರಿ 1983ರಿಂದ ಗ್ರಾಮಾಂತರ ಪ್ರದೇಶಗಳಿಂದ ಹಿಡಿದು ಸಚಿವಾಲಯದವರೆಗೆ ರಾಜ್ಯ ಸರ್ಕಾರದ ಎಲ್ಲ ಕಛೇರಿಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ

೨೮

ಕಟ್ಟುನಿಟ್ಟಾಗಿ ಅತ್ಯಂತ ಯಶಸ್ವಿ ಹಾಗೂ ಔಚಿತ್ಯಪೂರ್ಣವಾಗಿ ಜಾರಿಗೆ ತರಬೇಕೆಂದು ರಾಜ್ಯ ಸರ್ಕಾರವು ಈ ಮೂಲಕ ಆದೇಶ ನೀಡುತ್ತದೆ. ಈ ಬಗ್ಗೆ ಈ ಕೆಳಕಂಡ ಅಂಶಗಳನ್ನು ಗಮನಿಸಬೇಕು ಹಾಗೂ ಅವುಗಳೂ ಕೂಡ ಕನ್ನಡದಲ್ಲಿಯೇ ಇರಬೇಕು.

(ಅ) ಕಡತಗಳ ಮೇಲೆ ಬರೆಯುವ ಟಿಪ್ಪಣಿಗಳು

(ಆ) ಪತ್ರ ವ್ಯವಹಾರ

(ಇ) ಸಭೆಯ ನಡವಳಿಕೆಗಳು

(ಈ) ಪ್ರಕಟಣೆಗಳು, ಫಾರಂಗಳು, ಜಾಹಿರಾತುಗಳು, ನೋಟೀಸುಗಳು, ಲೈಸೆನ್ಸ್‌ಗಳು, ಬಿಲ್ಲುಗಳು, ಸರ್ಟಿಫಿಕೇಟ್‌ಗಳು, ಎಲ್ಲ ಕಾಗದದ ತಲೆಬರಹಗಳು (ಲೆಟರ್‌ಹೆಡ್ಸ್) ಕಛೇರಿ ಹಾಗೂ ಬೀದಿ ಫಲಕಗಳು ಇತ್ಯಾದಿ.

(ಉ) ಲೆಕ್ಕಪತ್ರಗಳು, ರಿಜಿಸ್ಟರ್‌ಗಳು.

(ಊ) ಭಾಷಣಗಳು, ಅವಶ್ಯಕತೆ ಇದ್ದಲ್ಲಿ ಕನ್ನಡದ ಜೊತೆಗೆ (ಆದರೆ ಕನ್ನಡವನ್ನು ಬಿಡದೆ) ಇಂಗ್ಲೀಷನ್ನು ಉಪಯೋಗಿಸಬಹುದು.

2. ಈ ನೀತಿಯನ್ನು ಜಾರಿಗೆ ತರುವಾಗ ಮೊದಲ ಹಂತದಲ್ಲಿ ಕೆಲವು ತೊಂದರೆಗಳು ಉಂಟಾಗುವುದು ಅನಿವಾರ್ಯ. ಉದಾಹರಣೆಗೆ ಕನ್ನಡ ಬೆರಳಚ್ಚು ಯಂತ್ರಗಳು ಹಾಗೂ ಬೆರಳಚ್ಚುಗಾರರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದೆ ಇರಬಹುದು. ಇಂತಹ ಸಂಧರ್ಭದಲ್ಲಿ ಬಾಲ್ ಪಾಯಿಂಟ್ ಪೆನ್ ಹಾಗೂ ಕಾರ್ಬನ್ ಕಾಗದವನ್ನು ಉಪಯೋಗಿಸಿ ಪತ್ರ ವ್ಯವಹಾರ ಮಾಡಬಹುದು. ತಲೆಬರಹ (ಲೆಟರ್ ಹೆಡ್ಸ್) ನಮೂನೆಗಳು (ಫಾರಮ್ಸ್) ಇನ್ನು ಮುಂದೆ ಕನ್ನಡದಲ್ಲೇ ಅಚ್ಚಾಗುವಂತ ನೋಡಿಕೊಳ್ಳಲಾಗುವುದು. ಅಲ್ಲಿಯವರೆಗೆ ಈಗಿರುವ ಕಾಗದದ ತಲೆಬರಹ ಮತ್ತು ನಮೂನೆಗಳ ಮೇಲೆ ಕನ್ನಡದಲ್ಲಿ ತಲೆಬರಹಗಳನ್ನು ಬರೆದು ಉಪಯೋಗಿಸಬಹುದು. ಅನೇಕ ಸಂದರ್ಭಗಳಲ್ಲಿ ಸರಿಯಾದ ಕನ್ನಡ ಪದಗಳು ತೋಚದೇ ಹೋಗಬಹುದು. ಆಗ ಸಾಮಾನ್ಯವಾಗಿ ಬಳಕೆಯಲ್ಲಿರುವ ಇಂಗ್ಲೀಷ್ ಪದಗಳನ್ನು ಕನ್ನಡ ಲಿಪಿಯಲ್ಲಿ ನಿಸ್ಸಂದೇಹವಾಗಿ ಬಳಸಬಹುದು.

3. ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಆಡಳಿತ ಭಾಷೆಯಾಗಿ ಎಲ್ಲ ಸರ್ಕಾರಿ ಪತ್ರ ವ್ಯವಹಾರದಲ್ಲಿ ಕಡ್ಡಾಯವಾಗಿ ಬಳಸಲು ಸರ್ಕಾರದ ಎಲ್ಲ ಇಲಾಖೆಗಳು, ಸರ್ಕಾರದಿಂದ ರಚಿತವಾಗಿ ಹಾಗೂ ಸರ್ಕಾರದ ಅನುದಾನ, ಧನ ಸಹಾಯ ಪಡೆಯುತ್ತಿರುವ ಎಲ್ಲ ಸ್ವಾಯತ್ತ ಸಂಸ್ಥೆಗಳು, ಎಲ್ಲ ಕಾರ್ಪೊರೇಷನ್ನುಗಳು ಸಹ ಮಹತ್ತರವಾದ ಪ್ರಯತ್ನವನ್ನು ನಡೆಸುವುದರಲ್ಲಿ ಸಕ್ರಿಯ ಪಾತ್ರ ವಹಿಸಬೇಕು. ಆಡಳಿತದ ಎಲ್ಲ ಹಂತದಲ್ಲೂ ಕಡ್ಡಾಯವಾಗಿ ಕನ್ನಡವನ್ನು ಜಾರಿಗೆ ತರಬೇಕೆಂದಿರುವ ಸರ್ಕಾರದ ಘನೋದ್ದೇಶವನ್ನು ಯಶಸ್ವಿಗೊಳಿಸುವಲ್ಲಿ ಎಲ್ಲರೂ ಸರ್ವ

ಪ್ರಯತ್ನಮಾಡಬೇಕೆಂದು ಆಶಿಸಲಾಗಿದೆ.

4. ಸರ್ಕಾರದ ಎಲ್ಲ ಕಾರ್ಯದರ್ಶಿಗಳು ತಮ್ಮ ಆಡಳಿತಕ್ಕೊಳಪಡುವ ಇಲಾಖಾ ಮುಖ್ಯಸ್ಥರಿಗೆ, ಸ್ವಾಯತ್ತ ಸಂಸ್ಥೆಗಳ, ಬೋರ್ಡುಗಳ, ಕಾರ್ಪೊರೇಷನ್, ಸ್ಥಳೀಯ ಸಂಸ್ಥೆಗಳ, ಪುರಸಭೆಗಳ, ಸರ್ಕಾರಿ ಕಾರ್ಖಾನೆಗಳ ಮತ್ತು ನಿಗಮಗಳ ಆಡಳಿತ ವರ್ಗದವರಿಗೆ ಈ ಬಗೆಯಲ್ಲಿ ಸೂಕ್ತ ಆದೇಶಗಳನ್ನು ನೀಡಬೇಕೆಂದು ಈ ಮೂಲಕ ಕೋರಲಾಗಿದೆ.

5. ಸರ್ಕಾರದ ಅಧಿಸೂಚನೆ ಕ್ರಮಾಂಕ ಡಿಪಿ.ಎ.ಆರ್ । ಪಿ.ಒ.ಎಲ್ 79 ದಿನಾಂಕ 6ನೇ ಸೆಪ್ಟೆಂಬರ್ 1979ರಲ್ಲಿ ಆದೇಶ ನೀಡಿರುವಂತೆ ಕೇಂದ್ರ ಸರ್ಕಾರ ಹಾಗೂ ನೆರೆ ರಾಜ್ಯಗಳೊಡನೆ ಪತ್ರ ವ್ಯವಹಾರ ನಡೆಸುವಾಗ ರಾಜ್ಯದ ಗಡಿ ಪ್ರದೇಶಗಳಲ್ಲಿನ ಭಾಷಾ ಅಲ್ಪಸಂಖ್ಯಾತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಕನ್ನಡವನ್ನು ಆಡಳಿತ ಭಾಷೆಯಾಗಿ ಕಡ್ಡಾಯವಾಗಿ ಎಲ್ಲ ಹಂತಗಳಲ್ಲೂ ಬಳಸಲು ಆದೇಶ ನೀಡಲಾಗಿದೆ.

6. ಕೇಂದ್ರ ಸರ್ಕಾರ ಹಾಗೂ ನೆರೆ ರಾಜ್ಯಗಳೊಡನೆ ವ್ಯವಹರಿಸುವಾಗ ರಾಜ್ಯದ ಗಡಿ ಪ್ರದೇಶಗಳಲ್ಲಿ, ಟೆಲಿಗ್ರಾಂ, ಟೆಲೆಕ್ಸ್ ಕಳುಹಿಸಬೇಕಾದಲ್ಲಿ, ರಾಷ್ಟ್ರೀಯ ಸಭೆಗಳಲ್ಲಿ ಹಾಗೂ ಕ್ಲಿಷ್ಟ ತಾಂತ್ರಿಕ ವಿಷಯಗಳಲ್ಲಿ ಇಂಗ್ಲೀಷನನ್ನು ಬಳಸಬಹುದು.

7. ಈ ಆಜ್ಞೆಯನ್ನು ಜಾರಿಗೆ ತರುವಲ್ಲಿ ಕಂಡುಬರಬಹುದಾದ ನ್ಯೂನತೆಗಳಿಗೆ, ಸಂಬಂಧಪಟ್ಟ ಕಛೇರಿಯ ಹಿರಿಯ ಅಧಿಕಾರಿಯನ್ನು ವೈಯಕ್ತಿಕವಾಗಿ ಜವಾಬ್ದಾರನನ್ನಾಗಿ ಮಾಡಲಾಗುವುದು.

8. ಈ ಯೋಜನೆಯನ್ನು ಕಾಲಮಿತಿಯಲ್ಲಿ ಜಾರಿಗೊಳಿಸಲು ಅವಶ್ಯಕವಾದ ಎಲ್ಲ ಕ್ರಮಗಳನ್ನು ತಕ್ಷಣದಿಂದಲೇ ಕೈಗೊಳ್ಳಲು ಎಲ್ಲ ಮಟ್ಟದ ಕಛೇರಿಗಳಲ್ಲಿನ ಮುಖ್ಯಸ್ಥರು ಅತ್ಯಂತ ಶ್ರಮ ವಹಿಸತಕ್ಕದ್ದು.

ಸಹಿ/-

(ರಾ. ಅ. ನಾಯಕ್),

ಮುಖ್ಯ ಕಾರ್ಯದರ್ಶಿ.

ಆಡಳಿತದಲ್ಲಿ ಭಾಷೆ ಕುರಿತಂತೆ ಕುರಿತಂತೆ ಸರ್ಕಾರದ ಆದೇಶ ದಿನಾಂಕ: ೧೦.೦೨.೧೯೮೨.

ಕರ್ನಾಟಕ ಸರ್ಕಾರದ ನಡೆವಳಿಗಳು

ವಿಷಯ: ಆಡಳಿತ ಕನ್ನಡ ಭಾಷೆ - ರಾಜ್ಯ ಸರ್ಕಾರದ ಅಂತರ ಕಛೇರಿ ಪತ್ರ ವ್ಯವಹಾರ - ಕೆಲವು ತಾಂತ್ರಿಕ ಕಛೇರಿಗಳ ತಾಂತ್ರಿಕ ವಿಷಯಗಳನ್ನುಳಿದು ಇತರೆ ಕಛೇರಿ ಪತ್ರ ವ್ಯವಹಾರವನ್ನು ಕಡ್ಡಾಯವಾಗಿ ಕನ್ನಡ ಭಾಷೆಯಲ್ಲೇ ವ್ಯವಹರಿಸಲು ಆದೇಶ.

ಉಲ್ಲೇಖ: ೧) ಸುತ್ತೋಲೆ ಕ್ರಮಾಂಕ: ಡಿಪಿಎಆರ್ ३. ಜಿಎಫ್‌ಎಸ್ ೮೦, ದಿನಾಂಕ ೧.೪.೭೦.

ಪ್ರಸ್ತಾವನೆ

ರಾಜ್ಯ ಸರ್ಕಾರದ ಅಂತರ ಕಛೇರಿ ವ್ಯವಹಾರ - ಈ ವಿಷಯಕ್ಕೆ ಸಂಬಂಧಿಸಿದ ಅನುಸರಣೆ ವರದಿಯನ್ನು ಕನ್ನಡ ಆಡಳಿತ ಭಾಷಾ ಕಾವಲು ಸಮಿತಿಯು ತನ್ನ ನಾಲ್ಕನೇ ಸಭೆಯಲ್ಲಿ ಗಮನಿಸಿ - ಈಗಾಗಲೇ ಸಾಕಷ್ಟು ಸಿದ್ಧತೆಗಳಾಗಿರುವುದರಿಂದ ತನ್ನ ನಿಲುವನ್ನು ಸರ್ಕಾರ ಪುನಃ ಪರಿಶೀಲಿಸಬೇಕೆಂದು ಶಿಫಾರಸ್ಸು ಮಾಡಲು ನಿರ್ಣಯಿಸಿತು.

ಸರ್ಕಾರ ಈ ವಿಷಯವನ್ನು ಪುನಃ ಪರಿಶೀಲಿಸಿ "ಕೆಲವು ತಾಂತ್ರಿಕ ಕಛೇರಿಗಳನ್ನು ಉಳಿದು ಇತರೇ ಕಛೇರಿಗಳಲ್ಲಿ ಕನ್ನಡದ ಬಳಕೆಯಲ್ಲಿ ವಿಳಂಬವಾಗಬಾರದೆಂಬ ತತ್ವವನ್ನು ಒಪ್ಪಿದೆ; ಮತ್ತು ಇದಕ್ಕನುಸಾರವಾಗಿ ಪತ್ರ ವ್ಯವಹಾರ ಸಂಪೂರ್ಣವಾಗಿ ಕನ್ನಡದಲ್ಲೇ ನಡೆಯಬೇಕೆಂದು ಒತ್ತಾಯಿಸಲು ನಿರ್ಧರಿಸಿದೆ."

ಸರ್ಕಾರಿ ಆದೇಶದ ಸಂಖ್ಯೆ ಡಿಪಿಎಆರ್ ೩೩ ಕೆಒಎಲ್ ೭೪

ಬೆಂಗಳೂರು, ದಿನಾಂಕ ೧೬ನೇ ಜುಲೈ, ೧೯೮೪

ಆದರಂತೆ ಸರ್ಕಾರದ ಕಛೇರಿಗಳಲ್ಲಿ ತಾಂತ್ರಿಕ ವಿಷಯಗಳನ್ನು ವ್ಯವಹರಿಸುವ ಶಾಖೆಗಳನ್ನು ಉಳಿದು ಕಛೇರಿಗಳ ಇತರೆ ಎಲ್ಲ ಶಾಖೆಗಳಲ್ಲಿನ ದೈನಂದಿನ ಪತ್ರ ವ್ಯವಹಾರಗಳು ಸಂಪೂರ್ಣವಾಗಿ ಆಡಳಿತ ಕನ್ನಡ ಭಾಷೆಯಲ್ಲಿ ನಡೆಯಬೇಕೆಂದು ಸರ್ಕಾರ ಈ ಮೂಲಕ ಆದೇಶಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಮೈಕ್ಕ ವೆಂಕಟೇಶನ್)

ಅಪರ ಮುಖ್ಯ ಕಾರ್ಯದರ್ಶಿ

ಆಡಳಿತದಲ್ಲಿ ಕನ್ನಡ ಬಳಕೆ ಮಾಡದೇ ಇರುವ ನೌಕರರ ವಿರುದ್ಧ ಶಿಸ್ತಿನಕ್ರಮ ಜರುಗಿಸುವ ಸರ್ಕಾರದ ಸುತ್ತೋಲೆ ದಿನಾಂಕ : ೧೩.೦೬.೨೦೦೨

ಕರ್ನಾಟಕ ಸರ್ಕಾರ

ಸಂಖ್ಯೆ : ಸಂಕಇ೩೯ಕೆಬಿಎಲ್ ೨೦೦೨

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ : ೧೩-೦೬-೨೦೦೨

ಸುತ್ತೋಲೆ

ವಿಷಯ : ಆಡಳಿತದಲ್ಲಿ ಕನ್ನಡ ಬಳಕೆ ಮಾಡದೇ ಇರುವ ನೌಕರರ ವಿರುದ್ಧ ಶಿಸ್ತು ಕ್ರಮವನ್ನು ಜಾರಿಗೊಳಿಸುವ ಬಗ್ಗೆ.

ಉಲ್ಲೇಖ : (೧) ದಿನಾಂಕ ೧೧-೪-೨೦೦೦ರ ಸುತ್ತೋಲೆ ಸಂಖ್ಯೆ : ಸಂಕಇ ೩೯ ಕೆಬಿಎಲ್ ೨೦೦೦

(೨) ಪ್ರೊ. ಬರಗೂರು ರಾಮಚಂದ್ರಪ್ಪ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾದಿಕಾರ, ಇವರು ಮುಖ್ಯ ಕಾರ್ಯದರ್ಶಿಯವರಿಗೆ ಉದ್ದೇಶಿಸಿ ಬರೆದ ದಿನಾಂಕ ೧೭-೪-೨೦೦೨ರ ಅ.ಸ. ಪತ್ರ ಸಂಖ್ಯೆ : ಕ.ಅ.ಪ್ರಾ: ಅ: ೧೪೪:೨೦೦೨

೧. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, ೧೯೪ರ ಅಡಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ಇದೊಂದು ಶಾಸನಬದ್ಧ ಪ್ರಾಧಿಕಾರವಾಗಿದೆ. ಸದರಿ ಅಧಿನಿಯಮದ ಕಲಂ ೧೯ ರನ್ವಯ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಪ್ರಕಾರ್ಯ ಒಂದನ್ನು ವಹಿಸಲಾಗಿದ್ದು ಅದನ್ನು ಈ ಕೆಳಗೆ ಉದ್ಧರಿಸಿದೆ.

"೧೯. ಕರ್ತವ್ಯ ಲೋಪವನ್ನು ದಾಖಲಿಸುವ ಮತ್ತು ನೇಮಕಾತಿ ಪ್ರಾಧಿಕಾರಕ್ಕೆ ತಿಳಿಸುವ ಅಧಿಕಾರ : ಪ್ರಾಧಿಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಅಥವಾ ಈಗಾಗಲೇ ಜಾರಿಯಲ್ಲಿರುವ ಯಾವುದೇ ಆದೇಶವನ್ನು ರಾಜ್ಯ ಸರ್ಕಾರ ಮತ್ತು ಸ್ಥಳೀಯ ನಿಕಾಯಗಳ ಅಧಿಕಾರಿಗಳು ಮತ್ತು ನೌಕರರು ಉಲ್ಲಂಘಿಸಿದರೆ, ಅಂತಹ ಉಲ್ಲಂಘನೆಯನ್ನು ಕರ್ತವ್ಯ ಲೋಪವೆಂದು ದಾಖಲಿಸತಕ್ಕದ್ದು ಮತ್ತು ಅಂತಹ ವ್ಯಕ್ತಿಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವಂತೆ ನೇಮಕಾತಿ ಪ್ರಾಧಿಕಾರಕ್ಕೆ ಸಲಹೆಗಳನ್ನು

ನೀಡತಕ್ಕದ್ದು"

೨. ಮೇಲೆ (೧)ರಲ್ಲಿ ಉಲ್ಲೇಖಿಸಲಾದ ದಿನಾಂಕ ೧೧-೪-೨೦೦೦ರ ಸುತ್ತೋಲೆಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿವೆ:

೧) ಆಡಳಿತದಲ್ಲಿ ಕನ್ನಡ ಬಳಕೆ ಮಾಡುವುದಕ್ಕೆ ಸಂಬಂಧಿಸಿದ ಒಂದು ಅಧಿನಿಯಮ ಹಾಗೂ ೧೨ ಸುತ್ತೋಲೆ, ಅಧಿಕೃತ ಜ್ಞಾಪನ ಮತ್ತು ಆದೇಶಗಳನ್ನು ಅದರಲ್ಲಿ ಉಲ್ಲೇಖಿಸಲಾಗಿದೆ: ಮತ್ತು

೨) ಅದರಲ್ಲಿ ಉಲ್ಲೇಖಿಸಲಾದ ಸೂಚನೆಗಳನ್ನು ಉಲ್ಲಂಘಿಸಿದವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ಸಹ ಅದರಲ್ಲಿ ಸೂಚಿಸಲಾಗಿದೆ.

೩. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಮೇಲೆ (೨) ರಲ್ಲಿ ಉಲ್ಲೇಖಿಸಿದ ದಿನಾಂಕ ೧೬-೪-೨೦೦೩ರ ಅ.ಸ. ಪತ್ರದಲ್ಲಿ ಇತರೆ ವಿಷಯಗಳ ಜೊತೆಗೆ, ಆಡಳಿತದಲ್ಲಿ ಕನ್ನಡವನ್ನು ಬಳಕೆ ಮಾಡದೇ ಇರುವ ಸರ್ಕಾರಿ ನೌಕರರ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪಿಸಲಾಗಿದೆ.

೪. ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, ೧೯೫೭ರ ನಿಯಮ ೨(ಗ)ರಲ್ಲಿ 'ಶಿಸ್ತಿನ ಪ್ರಾಧಿಕಾರ' ಎನ್ನುವ ಪದವನ್ನು ವ್ಯಾಖ್ಯಾನಿಸಲಾಗಿದೆ. ಅದರನ್ವಯ, ಶಿಸ್ತಿನ ಪ್ರಾಧಿಕಾರ ಅಂದರೆ, ಸಂಬಂಧಿಸಿದ ಸರ್ಕಾರಿ ನೌಕರನ ಮೇಲೆ, ಸದರಿ ನಿಯಮಗಳ ಅಡಿಯಲ್ಲಿ ದಂಡನೆಯನ್ನು ವಿಧಿಸಲು ಸಕ್ಷಮವಾಗಿರುವ ಪ್ರಾಧಿಕಾರ. ಅದೇ ನಿಯಮಗಳ ನಿಯಮ ೨(ಕ)ದಲ್ಲಿ 'ನೇಮಕಾತಿ ಪ್ರಾಧಿಕಾರ' ಎನ್ನುವ ಪದವನ್ನು ವ್ಯಾಖ್ಯಾನಿಸಲಾಗಿದೆ. ಆ ನಿಯಮಗಳಲ್ಲಿ ಒಳಗೊಂಡ ಅನುಸೂಚಿಗಳಲ್ಲಿ ಪ್ರತಿಯೊಂದು ಇಲಾಖೆಯ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ಶಿಸ್ತಿನ ಪ್ರಾಧಿಕಾರ ಯಾರು? ಹಾಗೂ ನೇಮಕಾತಿ ಪ್ರಾಧಿಕಾರ ಯಾರು? ಎನ್ನುವುದನ್ನು ನಿರ್ದಿಷ್ಟಪಡಿಸಲಾಗಿದೆ.

೫. ಕಂಡಿಕೆ-೧ರಲ್ಲಿ ಉದ್ಧರಿಸಿದ ಉಪಬಂಧದ ಅನ್ವಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸಂಬಂಧಿಸಿದ ಸರ್ಕಾರಿ ನೌಕರರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವಂತೆ ನೇಮಕಾತಿ ಪ್ರಾಧಿಕಾರಕ್ಕೆ ಸಲಹೆಯನ್ನು ನೀಡಿದ ಸಂದರ್ಭದಲ್ಲಿ, ಅಂತಹ ಸರ್ಕಾರಿ ನೌಕರನ ವಿರುದ್ಧ ಶಿಸ್ತಿನ ಕ್ರಮವನ್ನು ಸಕ್ಷಮ ಪ್ರಾಧಿಕಾರ ಆರಂಭಿಸಬೇಕೆಂದು ಈ ಮೂಲಕ ಸೂಚಿಸಿದೆ. ಅಂತಹ ಕ್ರಮವನ್ನು, ಕಂಡಿಕೆ-೪ರಲ್ಲಿ ಉಲ್ಲೇಖಿಸಿದ ನಿಯಮಗಳ ನಿಯಮ ೧೨ರ ಅಡಿಯಲ್ಲಿ ಆರಂಭಿಸತಕ್ಕದ್ದು. ಅದರಂತೆ, ಆ ನಿಯಮದ ಅಡಿಯಲ್ಲಿ ಜರುಗಿಸಿದ ಶಿಸ್ತಿನ ನಡವಳಿಗಳಲ್ಲಿ ಈ ಕೆಳಕಂಡ ದಂಡನೆಗಳ ಪೈಕಿ ದಂಡನೆಯೊಂದನ್ನು ವಿಧಿಸಬಹುದು :-

೧..

i) ವಾಗ್ದಂಡನೆ; ಅಥವಾ

ii) ವಾರ್ಷಿಕ ವೇತನ ಬಡ್ತಿಯನ್ನು ತಡೆ ಹಿಡಿಯುವುದು; ಅಥವಾ

iii) ಪದೋನ್ನತಿಯನ್ನು ತಡೆ ಹಿಡಿಯುವುದು; ಅಥವಾ

iv) ಕಾಲವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವುದು

೬. ಕಂಡಿಕೆ-೧ರಲ್ಲಿ ಉಲ್ಲೇಖಿಸಿದ ಕಲಂ ೧೯ರಡಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಾಡಿದ ಸಲಹೆಗಳ ಆಧಾರದ ಮೇಲೆ, ಕಂಡಿಕೆ-೫ರಲ್ಲಿ ಸೂಚಿಸಿದ ಕಾರ್ಯವಿಧಾನವನ್ನು ಅನುಸರಿಸಿ, ಮೂರು ತಿಂಗಳೊಳಗಾಗಿ ಶಿಸ್ತಿನ ಕ್ರಮವನ್ನು ಪೂರ್ಣಗೊಳಿಸತಕ್ಕದ್ದು. ಆ ರೀತಿ ತೆಗೆದುಕೊಂಡ ಕ್ರಮದ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

೭. ಕಂಡಿಕೆ-೧ರಲ್ಲಿ ಉದ್ಧರಿಸಿದ ಕಲಂ ೧೯ರಡಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ನೀಡಿದ ಸಲಹೆಗಳ ಮೇಲೆ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರ ಮೇಲೆ ಸೂಚಿಸಿದಂತೆ ಕ್ರಮ ತೆಗೆದುಕೊಳ್ಳದೇ ಇದ್ದಲ್ಲಿ, ಅಂತಹ ನೇಮಕಾತಿ ಪ್ರಾಧಿಕಾರವನ್ನು ಸಕ್ಷಮ ಪ್ರಾಧಿಕಾರ, ಕರ್ತವ್ಯಲೋಪದ ಆರೋಪದ ಮೇಲೆ, ಶಿಸ್ತಿನ ಕ್ರಮಕ್ಕೆ ಒಳಪಡಿಸತಕ್ಕದ್ದು.

೮. ಈ ಸೂಚನೆಗಳು, ಸರ್ಕಾರದ ಅಧೀನದಲ್ಲಿ ಬರುವ ನಿಗಮ, ಮಂಡಳಿ, ಕಂಪನಿ, ಸಾರ್ವಜನಿಕ ಉದ್ದಿಮೆಗಳು ಇವುಗಳಿಗೆ ಮತ್ತು ವಿಶ್ವವಿದ್ಯಾಲಯಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳಿಗೂ ಸಹ ಅನ್ವಯಿಸುತ್ತವೆ.

೯. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಈ ಸುತ್ತೋಲೆಯಲ್ಲಿ ಒಳಗೊಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಅವರವರ ವ್ಯಾಪ್ತಿಯಲ್ಲಿ ಬರುವ ಇಲಾಖೆ ಮುಖ್ಯಸ್ಥರು ಹಾಗೂ ಕಂಡಿಕೆ - ೮ರಲ್ಲಿ ಉಲ್ಲೇಖಿಸಿದ ಸ್ವಾಯತ್ತ ಸಂಸ್ಥೆಗಳು ಅದನ್ನು ಪಾಲಿಸುವಂತೆ ನೋಡಿಕೊಳ್ಳತಕ್ಕದ್ದು.

(ಎ. ರವೀಂದ್ರ)

ಸರ್ಕಾರದ ಮುಖ್ಯ ಕಾರ್ಯದರ್ಶಿ

ಗೆ,

೧. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು (ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಗಾಗಿ)

೨. ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ, ಬೆಂಗಳೂರು

ಪ್ರತಿ:

೧. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು

೨. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು

೩. ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಮತ್ತು ವಸತಿ ಇಲಾಖೆ

೪. ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆ.

೫. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು

೬. ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳು

೭. ಎಲ್ಲಾ ವಿಭಾಗಾಧಿಕಾರಿಗಳು

೮. ಎಲ್ಲಾ ಇಲಾಖಾ ಮುಖ್ಯಸ್ಥರುಗಳು

೯. ಎಲ್ಲಾ ಜಿಲ್ಲಾಧಿಕಾರಿಗಳು

೧೦. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

೧೧. ಸರ್ಕಾರದ ಎಲ್ಲಾ ಹೆಚ್ಚುವರಿ/ ಜಂಟಿ/ ಉಪ/ ಅಧೀನ ಕಾರ್ಯದರ್ಶಿಗಳು

೧೨. ಎಲ್ಲಾ ವಿಶ್ವವಿದ್ಯಾಲಯಗಳ ಉಪಕುಲಸಚಿವರು

೧೩. ರಾಜ್ಯದ ಎಲ್ಲಾ ಪುರ/ನಗರಸಭೆಗಳ ಮುಖ್ಯಾಧಿಕಾರಿಗಳು/ ಆಡಳಿತಾಧಿಕಾರಿಗಳು

೧೪. ರಾಜ್ಯದ ಎಲ್ಲಾ ನಿಗಮಗಳ ಮುಖ್ಯ ವ್ಯವಸ್ಥಾಪಕರುಗಳು/ವ್ಯವಸ್ಥಾಪಕ ನಿರ್ದೇಶಕರು

೧೫. ರಾಜ್ಯದ ಎಲ್ಲಾ ಮಂಡಳಿಗಳ ಕಾರ್ಯದರ್ಶಿಗಳು/ವ್ಯವಸ್ಥಾಪಕ ನಿರ್ದೇಶಕರು

೧೬. ಎಲ್ಲಾ ಸಚಿವರ ಮತ್ತು ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು

೧೭. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು

೧೮. ಉಪ ಕಾರ್ಯದರ್ಶಿಗಳು, ಸಚಿವ ಸಂಪುಟ ವ್ಯವಹಾರಗಳ ಇಲಾಖೆ

೧೯. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖಾಧಿಕಾರಿಗಳು

೨೦. ಶಾಖಾ ರಕ್ಷಾ ಕಡತ

ಅನುಬಂಧ-೭

ಭಾಷಿಕ ಹಿನ್ನೆಲೆಯಲ್ಲಿ ತಪ್ಪು ಬಳಕೆ ಮಾಡಲಾದ ಪತ್ರದ ಮಾದರಿ.

ಅನುಬಂಧ - 7.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ-583101

OFFICE OF THE DEPUTY COMMISSIONER, BALLARI DISTRICT, BALLARI-583101

Telephone : 08392-277100. Fax : 08392-272538 Email: dcbellary@gmail.com

ಸಂ.ಕಂ/ಗಣಿ/91/2015-16 ದಿನಾಂಕ- -07-2016

ಇವರಿಗೆ,
ಅರಣ್ಯ ನಿರ್ಧರಣಾಧಿಕಾರಿಗಳು,
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಹತ್ತಿರ,
ಬಳ್ಳಾರಿ.

ಮಾನ್ಯರೇ,

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬಳ್ಳಾರಿ ವಿಭಾಗ, ಬಳ್ಳಾರಿ. ಟಪಾಲು 05 AUG 2016 ರಾಜಿ: ಪ್ರ: ಉ.ಕ.ಸಂ.

ವಿಷಯ:- ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕು ರಾಮಗಡ ಗ್ರಾಮದ ಸಂ:-19 ರಲ್ಲಿ ಶ್ರೀ ವೃಷಬೇಂದ್ರಯ್ಯ ಇವರ ಗಣಿ ಗುತ್ತಿಗೆ ಸಂಖ್ಯೆ:2173 ಗೆ ಸಂಭಂದಿಸಿದಂತೆ ಧಾಖಲೆಗಳನ್ನು ಒದಗಿಸುವ ಬಗ್ಗೆ.

ಉಲ್ಲೇಖ:- 1)ಪೋಲೀಸ್ ಇನ್ಸ್ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ವಿಶೇಷ ತನಿಖಾ ತಂಡ, ಬೆಂಗಳೂರು, ಇವರ ಪತ್ರ ಸಂಖ್ಯೆ:ಮೊ.ಸಂ/23/2015/ಎಸ್ಐಟಿ/ಕೆಎಲ್ಎ/ ದಿನಾಂಕ:9-2-16.
2)ಈ ಕಚೇರಿಯ ಸಮ ಸಂಖ್ಯೆ ಪತ್ರ ದಿನಾಂಕ:-16-03-2016

****

ಉಲ್ಲೇಖಿತ(1) ಪತ್ರದಲ್ಲಿ ಪೋಲೀಸ್ ಇನ್ಸ್ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ವಿಶೇಷ ತನಿಖಾ ತಂಡ, ಬೆಂಗಳೂರು, ಇವರು ಸಂಡೂರು ತಾಲೂಕು ರಾಮಗಡ ಗ್ರಾಮದ ಸ.ನಂ:19 ರಲ್ಲಿ ಜೆ.ಎಂ.ವೃಷಬೇಂದ್ರಯ್ಯ ಇವರ ಗಣಿ ಗುತ್ತಿಗೆ ಸಂಖ್ಯೆ:2173 ರಲ್ಲಿ ನಡೆಸುತ್ತಿದ್ದ ಅಕ್ರಮ ಗಣಿಗಾರಿಕೆಯ ತನಿಖೆಯ ಸಲುವಾಗಿ ಈ ಕಾರ್ಯಾಲಯಕ್ಕೆ ಮಾಹಿತಿ ಹಾಗೂ ಧಾಖಲೆಗಳನ್ನು ಕೋರಿದ್ದು, ಇದಕ್ಕೆ ಸಂಭಂದಿಸಿದಂತೆ ಉಲ್ಲೇಖ(2)ರ ದಿನಾಂಕ:- 16-03-2016 ರ ಪತ್ರದಲ್ಲಿ ಮೇಲಿನ ಜಮೀನು ಕಂದಾಯ ಇಲಾಖೆಗೆ ಸೇರದ್ದಲ್ಲವೆಂದೂ ಅರಣ್ಯ ಪ್ರದೇಶವೆಂದು ಪರಿಗಣಿಸಲು ಕಾರಣವಾದ ಧಾಖಲೆಗಳನ್ನು ಹಾಗೂ ಜಮೀನು ಪ್ರಸ್ತುತ ಸ್ವಾಧೀನದ ಬಗ್ಗೆ ಧಾಖಲೆಗಳನ್ನು ಧೃಡೀಕೃರಿಸಿ ಕೂಡಲೇ ಸಲ್ಲಿಸಲು ಕೋರಲಾಗಿತ್ತು.(ಸದರಿ ಪತ್ರಗಳನ್ನು ಲಗತ್ತಿಸಿದೆ)

ಸದರಿ ಕಾರ್ಯವು ಸರ್ಕಾರದಿಂದ ನೇಮಕವಾದ ವಿಶೇಷ ತನಿಖಾ ತಂಡದಿಂದ ನಡೆಸುತ್ತಿದ್ದು, ಈ ಕಾರ್ಯವು ಅತ್ಯಂತ ಮಹತ್ವಪೂರ್ಣವಾಗಿರುವುದರಿಂದ ತಕ್ಷಣವೇ ಮಾಹಿತಿಯನ್ನು ಸಲ್ಲಿಸಲು ಕೋರಿಲಾಗಿತ್ತು. ಆದರೆ ಇಲ್ಲಿಯವರೆವಿಗೂ ಮೇಲೆ ಕೋರಿದ ಧೃಡೀಕೃತ ಮಾಹಿತಿಯನ್ನು ಇದುವರೆವಿಗೂ ಸಲ್ಲಿಸಿರುವುದಿಲ್ಲ. ಕಾರಣ ತಕ್ಷಣವೇ ಈ ಪತ್ರ ಮುಟ್ಟಿದ ತಕ್ಷಣವೇ ~~ಖುದ್ದಾಗಿ~~ ಈ ಕಾರ್ಯಾಲಯಕ್ಕೆ ಮಾಹಿತಿಯನ್ನು ಸಲ್ಲಿಸಲು ಕೋರಿದೆ.

ತಮ್ಮ ವಿಶ್ವಾಸಿ,

ಇನ್‌ವರ್ಡ್ ಸಂಖ್ಯೆ:......716......
ದಿನಾಂಕ:....21.08.16....
ವಿ.ದಿ. ಸಹಿ:......

ಜಿಲ್ಲಾಧಿಕಾರಿಗಳು, ಬಳ್ಳಾರಿ.
ಇವರ ಪರವಾಗಿ.

ಪ್ರತಿ:- ಪೋಲೀಸ್ ಇನ್ಸ್ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ವಿಶೇಷ ತನಿಖಾ ತಂಡ, ಪಶು ವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು560024. ಇವರಿಗೆ ಮಾಹಿತಿಗಾಗಿ.

ಅನುಬಂಧ–ಲ

ಭಾಷಿಕ ಹಿನ್ನೆಲೆಯಲ್ಲಿ ತಪ್ಪು ಬಳಕೆ ಮಾಡಲಾದ ಪತ್ರದ ಮಾದರಿ.

ನಮೂನೆ ೨೮.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ–583101
OFFICE OF THE DEPUTY COMMISSIONER, BELLARY DISTRICT, BELLARY-583101
Telephone : 08392-277100. Fax : 08392-272538 Email: dcbellary@gmail.com

ಸಂ:ಕಂ:ಎಂಎಜಿ:ಪರೀಕ್ಷೆ: 13 :2013-14 ದಿನಾಂಕ: 22 :09:2013

1.ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ.
2.ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸಪೇಟೆ.

ಮಾನ್ಯರೇ,

ವಿಷಯ:- ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಶುಶ್ರೂಷ ಶಾಲೆಯ ವಿದ್ಯಾರ್ಥಿಗಳಿಗೆ ಸಾಮಾನ್ಯ ಶುಶ್ರೂಷ ಮಿಡ್ವೈಫರಿ ಪರೀಕ್ಷೆಯನ್ನು ದಿನಾಂಕ 23-09-2012 ರಿಂದ 27-09-2013 ವರೆಗೆ ನಡೆಸುವ ಬಗ್ಗೆ.

ಉಲ್ಲೇಖ:-1.ಸರ್ಕಾರದ ಕಾರ್ಯದರ್ಶಿಗಳು ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ),ಬೆಂಗಳೂರು ರವರ ಅರೆ ಸರ್ಕಾರಿ ಪತ್ರ ಸಂಖ್ಯೆ ಆಕುಕ/ 334/ಎಂಎಂಇ 2013 ದಿನಾಂಕ:18-09-2013.
2.ಈ ಕಾರ್ಯಾಲಯದ ಪತ್ರ ಸಮ ಸಂಖ್ಯೆ ದಿನಾಂಕ: 22-09-2013.
3.ತಮ್ಮ ಕಾರ್ಯಾಲಯದ ಪತ್ರ ದಿನಾಂಕ: 22-09-2013.

****

ಮೇಲ್ಕಾಣಿಸಿದ ವಿಷಯಕ್ಕೆ ಸಂಭಂದಿಸಿದಂತೆ , ಉಲ್ಲೇಖಿತ(2) ಈ ಕಾರ್ಯಾಲಯದ ಆದೇಶದಂತೆ ಬಳ್ಳಾರಿ ಜಿಲ್ಲೆಯ ಬಳ್ಳಾರಿ ನಗರ ಮತ್ತು ಹೊಸಪೇಟೆ ನಗರದಲ್ಲಿ ಶುಶ್ರೂಷ ಶಾಲೆಯ ವಿದ್ಯಾರ್ಥಿಗಳಿಗೆ ಸಾಮಾನ್ಯ ಶುಶ್ರೂಷ ಮಿಡ್ವೈಫರಿ ಪರೀಕ್ಷೆಯನ್ನು ದಿನಾಂಕ 23-09-2012 ರಿಂದ 27-09-2013 ರವರೆಗೆ ನಡೆಯಲಿದ್ದು, ಸದರಿ ಪರೀಕ್ಷೆಗಳು ಪಾರದರ್ಶಕ ಮತ್ತು ನ್ಯಾಯಸಮ್ಮತವಾಗಿ ನಡೆಸಲು ಪ್ರತಿ ಪರೀಕ್ಷಾ ಕೇಂದ್ರಗಳಲ್ಲಿ ಈ ಕೆಳಕಂಡಂತೆ ಕೊಠಡಿ ಮೇಲ್ವಿಚಾರಕರನ್ನಾಗಿ ನೇಮಿಸಲು ಅನುಮತಿ ನೀಡಲಾಗಿದೆ

ಕ್ರ.ಸಂ	ಶಿಕ್ಷಕರ ಹೆಸರು	ಶಾಲೆಯ ಹೆಸರು	ಪರೀಕ್ಷಾ ಕೇಂದ್ರದ ಹೆಸರು
1	2	3	4
1.	ಭರತೇಶ್	G.H.P.S ವಡ್ಡರಬಂಡೆ, ಬಳ್ಳಾರಿ	ವಿಮ್ಸ್ ಆಡಿಟೋರಿಯಮ್, ವಿಮ್ಸ್ ಆವರಣ, ಬಳ್ಳಾರಿ.
2.	ವೀರಭದ್ರಚಾರಿ	G.H.P.S ಅಮರಾಪುರ ಗ್ರಾಮ.	-do-
3.	ಮುರಳೀಧರ	G.H.P.S ಬಿಸಲಹಳ್ಳಿ	-do-
4.	ಪಾಂಚಾತ	G.H.P.S ಪಟೇಲ್ ನಗರ ಬಳ್ಳಾರಿ	-do-
5.	ತಬಸುಮ್ ಫಾತೀಮ	G.H.P.S ಪಟೇಲ್ ನಗರ ಬಳ್ಳಾರಿ	-do-
6.	ಎಂ.ಮಂಜುಳ	G.H.P.S ಎಸ್.ಎನ್.ಪೇಟೆ, ಬಳ್ಳಾರಿ	-do-
7.	ಚಂದ್ರಕಲಾ	G.H.P.S ಎಸ್.ಎನ್.ಪೇಟೆ, ಬಳ್ಳಾರಿ	-do-
8.	ಬಾಬು	G.H.P.S 3ನೇ ವಾರ್ಡ್, ಬಳ್ಳಾರಿ	-do-

9.	ರಘೋತ್ತಮ	G.H.P.S (ಹಿಂದಿ) ಜೈನ್ ಮಾರ್ಕೇಟ್ ಬಳ್ಳಾರಿ.	-do-
10.	ಕೊಟ್ರೇಶ್ ಕೊತ್ಲಲ್	G.H.P.S ಬಿಸಲಹಳ್ಳಿ	-do-
11.	ಸರಸ್ವತಿ	G.H.P.S ಸಂಗನಕಲ್ಲು	-do-
12.	ಸಾವಿತ್ರಿ ಗುಡಿ	G.H.P.S ಸಂಗನಕಲ್ಲು	-do-
13.	ಈರಣ್ಣ	G.H.P.S ಹೊಸಪೇಟೆ	ತುಂಗಾಭದ್ರ ಸ್ಕೂಲ್ ಆಫ್ ನರ್ಸಿಂಗ್, ಡ್ಯಾಮ್ ರಸ್ತೆ, ಹೊಸಪೇಟೆ.
14.	ಬಿ.ಹನುಮಂತಪ್ಪ	G.H.P.S ಕಾರಿಗನೂರು	-do-
15.	ಪ್ರಕಾಶ	G.H.P.S ಬಿ.ಟಿ.ಆರ್ ನಗರ, ಹೊಸಪೇಟೆ	-do-
16.	ಅವಿನಾಶ	G.H.P.S ನಾಗೇನಹಳ್ಳಿ	-do-
17.	ಓಮಪ್ಪ	G.H.P.S ಎಂ.ಪಿ.ಪ್ರಕಾಶ ನಗರ	-do-
18.	ರಾಜಶೇಖರ	ವಿವೇಕನಂದ ಶಾಲೆ, ಹಸಪೇಟೆ	-do-
19.	ಟಿ.ವಿಶ್ವನಾಥ	G.H.P.S ಮಲಪನಗುಡಿ	-do-
20.	ವಿ.ಮಂಜುನಾಥ	G.H.P.S 15ನೇ ವಾರ್ಡ್ ಹೊಸಪೇಟೆ	-do-
21.	ಮೌನೇಶಾಚಾರಿ	ಜಿಲ್ಲಾ ಪಂಚಾಯತಿ, ಹೊಸಪೇಟೆ	-do-
22.	ಶರಣಪ್ಪ ಆಚಾರಿ	G.H.P.S ಎಲ್.ಬಿ.ಎಸ್.ಹೊಸಪೇಟೆ	-do-
2.3	ಮಂಜುನಾಥ	G.H.P.S ಕೊಂಡನಾಯಕನಹಳ್ಳಿ	-do-
24.	ಶಿವಕುಮಾರಸ್ವಾಮಿ	G.H.P.S ಟಿ.ಸಿ. ಕಮಲಾಪುರ	-do-
25.	ಶಿವನಂದಾ ಗೌಡ	G.H.P.S ಬಾಪೂಜಿ ಹೊಸಪೇಟೆ	-do-
26.	ತಿಪ್ಪೇಸ್ವಾಮಿ	ವಿವೇಕನಂದ ಶಾಲೆ, ಹಸಪೇಟೆ	-do-

ನೇಮಕಗೊಂಡ ಕೊಠಡಿ ಮೇಲ್ವಿಚಾರಕರುಗಳು ನಿಗದಿಪಡಿಸಿದ ಪರೀಕ್ಷಾ ಕೇಂದ್ರಗಳಲ್ಲಿಯೇ ಉಪಸ್ಥಿತರಿದ್ದು ಆರಂಭದಿಂದ ಮುಕ್ತಾಯವಾಗುವವರೆಗೂ ಪಾರದರ್ಶಕ ಮತ್ತು ನ್ಯಾಯಸಮ್ಮತವಾಗಿ ನಡೆಸಲು ಎಲ್ಲಾ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಅಪರ ಜಿಲ್ಲಾಧಿಕಾರಿಗಳು
ಬಳ್ಳಾರಿ

ಪ್ರತಿಯನ್ನು:- 1.ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ.
2.ಉಪ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣ ಇಲಾಖೆ,ಬಳ್ಳಾರಿ .

ಕನ್ನಡ ಅಂಕಿಗಳ ಬಳಕೆಯ ಬಗ್ಗೆ ಸರ್ಕಾರಿ ಆದೇಶ. ದಿನಾಂಕ: ೦೧.೦೧.೨೦೦೯

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ ೭೮ ಬಿತ್ರಮ ೨೦೦೮

ಕರ್ನಾಟಕ ಸರ್ಕಾರದ ಸಚಿವಾಲಯ
೬ನೇ ಮಹಡಿ, ೬ನೇ ಹಂತ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ : ೦೧.೦೧.೨೦೦೯

ಅತಿ ಜರೂರು

ಸುತ್ತೋಲೆ

ವಿಷಯ: ಸರ್ಕಾರದ ವಾಹನಗಳ ನೋಂದಣಿ ಸಂಖ್ಯೆಯನ್ನು ಆಂಗ್ಲ ಭಾಷೆಯೊಂದಿಗೆ ಕನ್ನಡ ಭಾಷೆಯಲ್ಲಿಯೂ ಕಡ್ಡಾಯವಾಗಿ ಬರೆಯಿಸುವ ಬಗ್ಗೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾನ್ಯ ಅಧ್ಯಕ್ಷರು ತಮ್ಮ ಪತ್ರ ಸಂ: ಕಅಪ್ರಾ:ಅ:೨೩೯:೨೦೦೮-೦೯, ದಿನಾಂಕ: ೧೦.೧೨.೨೦೦೮ರಲ್ಲಿ ಕನ್ನಡವನ್ನು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಕರ್ನಾಟಕ ಸರ್ಕಾರವು ಸರ್ಕಾರಿ ವಾಹನಗಳ ಮೇಲೆ ಕನ್ನಡ ಅಕ್ಷರ ಮತ್ತು ಅಂಕಿಗಳನ್ನು ಕಡ್ಡಾಯವಾಗಿ ಬಳಸಬೇಕೆಂದು ಸುತ್ತೋಲೆ ಸಂಖ್ಯೆ: ಡಿಪಿಎಆರ್ ೧೭೪ ಕೆಓಎಲ್ ೨೦೦೦, ದಿನಾಂಕ: ೧೫.೮.೨೦೦೦ರಲ್ಲಿ ಸೂಚಿಸಲಾಗಿದ್ದು, ಇದುವರೆವಿಗೂ ಬಹುತೇಕ ಇಲಾಖೆಗಳಲ್ಲಿನ ಸರ್ಕಾರಿ ವಾಹನಗಳಲ್ಲಿ ಕನ್ನಡ ಅಕ್ಷರ ಮತ್ತು ಅಂಕಿಗಳನ್ನು ಬಳಸದೇ ಆಂಗ್ಲ ಭಾಷೆಯ ಅಕ್ಷರಗಳನ್ನು ಮತ್ತು ಅಂಕಿಗಳನ್ನು ಮಾತ್ರ ಬಳಸುತ್ತಿರುವುದು ಕಂಡುಬರುತ್ತಿದೆ. ಇದರಿಂದ ಮೇಲ್ನೋಟಕ್ಕೆ ಅನುಷ್ಠಾನ ಮಾಡುವ ಅಧಿಕಾರಿಗಳೇ ಮೇಲಿನ ಸುತ್ತೋಲೆಯನ್ನು ಉಲ್ಲಂಘಿಸುತ್ತಿರುವುದು ಕಂಡುಬರುತ್ತದೆ. ಈ ವಿಷಯವಾಗಿ ಸುತ್ತೋಲೆಯನ್ನು ಹೊರಡಿಸಿ ಸುಮಾರು ೮ ವರ್ಷಗಳಾದರೂ ಸದ್ರಿ ಸುತ್ತೋಲೆಯನ್ನು


ಉಲ್ಲಂಘನೆ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದ್ದಾರೆ.

ಮೇಲಿನ ಹಿನ್ನೆಲೆಯಲ್ಲಿ ತಮ್ಮ ಇಲಾಖೆಯಲ್ಲಿ ಬಳಸುತ್ತಿರುವ ಎಲ್ಲಾ ಸರ್ಕಾರಿ ವಾಹನಗಳ ನೋಂದಣಿ ಸಂಖ್ಯೆಯನ್ನು ಆಂಗ್ಲ ಭಾಷೆಯೊಂದಿಗೆ ಕನ್ನಡ ಭಾಷೆಯಲ್ಲಿಯೂ ಕನ್ನಡ ಅಕ್ಷರ ಮತ್ತು ಅಂಕಿಗಳನ್ನು ಕಡ್ಡಾಯವಾಗಿ ಬಳಸತಕ್ಕದ್ದು.

ಮೇಲಿನ ಹಿನ್ನಲೆಯಲ್ಲಿ ಕೂಡಲೇ ಕ್ರಮ ಕೈಗೊಂಡು ಅನುಸರಣಾ ಮಾಹಿತಿಯನ್ನು ಈ ಇಲಾಖೆಗೂ ಪ್ರತಿಯನ್ನು ಮಾನ್ಯ ಅಧ್ಯಕ್ಷರು ಕನ್ನಡ ಅಭಿವೃದ್ಧಿ ಪ್ರಾಧಿಕಾರ ೧ನೇ ಮಹಡಿ, ವಿಧಾನಸೌಧ ಇವರಿಗೆ ಕೂಡಲೇ ವರದಿ ಸಲ್ಲಿಸಬೇಕೆಂದು ಕೋರುತ್ತೇನೆ.

ಸಹಿ/-
(ಕೆ. ಬೋರಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಆಡಳಿತಾತ್ಮಕವಾದ ಗಡಿ ನಕ್ಷೆ



ಪತ್ರದ ಮೇಲಿನ ಟಿಪ್ಪಣಿ ಮಾದರಿ

ನಮೂನೆ–16

ಅನುಬಂಧ-೧೧ ಅ

ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ,
ಅಂಚೆಚೀಲ–5313, ಬಹುಮಹಡಿಗಳ ಕಟ್ಟಡ,
1ನೇ ಹಂತ, 2ನೇ ಮಹಡಿ, ಬೆಂಗಳೂರು–560 001.
ದಿನಾಂಕ ೨೭.01–2016.

ಕ್ರಮಾಂಕ: ಅಪೀಲು–915/14(ನ್ಯಾ.ಪೀ–1)ವಿ.ದಿ:11.02.2016

ಶ್ರೀ The Forest Settlement Officer,
And The Deputy Commissioner,
Ballary Division,
Ballary.

ಮಾನ್ಯರೇ,

ವಿಷಯ: **Reminder for Records.**

ರವರ **THE FSO & THE Deputy Commissioner BALLARY NO.FSO/RMB-342/13-14 ದಿನಾಂಕ 03.06.2014** ನೇ ಕ್ರಮಾಂಕದ ಆದೇಶದ ವಿರುದ್ಧವಾಗಿ **The church of South India Karnataka Northern Dioces of Dharwad.,** ರವರು ಸಲ್ಲಿಸಿದ ಅಪೀಲು ಸಂಬಂಧಪಟ್ಟ ರೆಕಾರ್ಡುಗಳ ರವಾನೆಗೆ ಮರುವಿನಂತಿ.

- Number the pages.
- Identify the detail.
- Keep copy on file.

ಪತ್ರ ಸೂಚನೆ:
31.08.2015 ನೇ ದಿನಾಂಕದ ಅಪೀಲು ಸಂಖ್ಯೆ 915/14 ಇದೇ ಕ್ರಮಾಂಕದ ಈ ಕಛೇರಿ ಪತ್ರ.

ಮೇಲ್ಕಂಡ ಪತ್ರಕ್ಕೆ ತಮ್ಮ ಗಮನವನ್ನು, ತಮ್ಮ ಕಛೇರಿಯ ರೆಕಾರ್ಡುಗಳು ಇದುವರೆವಿಗೂ ಇಲ್ಲಿಗೆ ಬಂದಿಲ್ಲವೆಂದು ಸೂಚಿಸಬಯಸುತ್ತೇವೆ. ಆದ್ದರಿಂದ, ತಾವು ಈ ವಿಚಾರವನ್ನು ಸ್ವತಃ ಪರಿಶೀಲಿಸಿ ______ ದಿನಾಂಕ ______ ಕ್ರಮಾಂಕದ ರೆಕಾರ್ಡುಗಳು 11.02.2016 ದಿನಾಂಕದೊಳಗಾಗಿ ಖಂಡಿತ ರವಾನೆಯಾಗುವಂತೆ ನೋಡಿಕೊಳ್ಳಬೇಕಾಗಿ ವಿನಂತಿಸುತ್ತೇವೆ.

Record Regarding:
No. 225, Yeshwanth Nagar Village.

ತಮ್ಮ ವಿಶ್ವಾಸಿ,
ಸಹಾಯಕ ನಿಬಂಧಕರು
ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ,
ಬೆಂಗಳೂರು

ಇದರ ಪ್ರತಿಯನ್ನು ___ ಉಪ ವಿಭಾಗಾಧಿಕಾರಿಯವರಿಗೆ, ತಮ್ಮ ರೆಕಾರ್ಡುಗಳ ರವಾನೆಯನ್ನು ತ್ವರೆಗೊಳಿಸುವ ಸಲುವಾಗಿ ಕಳುಹಿಸಿದೆ.
ಇದರ ಪ್ರತಿಯನ್ನು ______ ತಹಶೀಲದಾರರವರಿಗೆ ತಮ್ಮ ರೆಕಾರ್ಡುಗಳನ್ನು ನೇರವಾಗಿ ರವಾನಿಸುವ ಸಲುವಾಗಿ ಕಳುಹಿಸಿದೆ.
ಇದರ ಪ್ರತಿಯನ್ನು

ಸಹಾಯಕ ನಿಬಂಧಕರು
ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ,
ಬೆಂಗಳೂರು

1413
4/2/16

ಕಡತದಲ್ಲಿನ ಟಿಪ್ಪಣಿಯ ಬರವಣಿಗೆಯ ಮಾದರಿ.

— 18 — ಅನುಬಂಧ ೧೧ (ಆ)

52) ಓದಿರಿ [illegible]

ಕಂಡಿಕೆ 50 ರಂತೆ ಸಂಬಂಧಿಸಿದ ಕಡತಗಳ [illegible] ಮಾಡುವುದರ ಸಮಯವನ್ನು [illegible] ಪತ್ರ ಸ್ವೀಕರಿಸಿದೆ.

ಇದೇ DDLR ರವರ ಪತ್ರ ಜೊತೆ [illegible] ಸಂಬಂಧಿಸಿ 1+5 [illegible] 3 ತಿಂಗಳು ಕಾಲಾವಕಾಶ ಹೆಚ್ಚಿಗೆ ನೀಡಲು ಮನವಿ ಮಾಡಿರುತ್ತಾರೆ. ಆದ್ದರಿಂದ ಸಂಬಂಧಿಸಿದ ಕಡತಗಳಿಗೆ ಕಾಲಾವಕಾಶ ನೀಡಲು ಆದೇಶಿಸಬಹುದು.

29/11

53) FSO/DC

Agreed.
Inform them
& submit w/o
fail

3/11


CM/Shri]


54) ಕಂಡಿಕೆ (53) ರಲ್ಲಿನ ಮಾನ್ಯ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಕಡತ DDLR ರವರಿಗೆ 3 ತಿಂಗಳು ಕಾಲಾವಕಾಶ ನೀಡಿ ಬರೆಯಲಾದ ಕರಡು ಪ್ರತಿ ತಮ್ಮ ಅನುಮೋದನೆಗೆ ಸಲ್ಲಿಸಲಾಗಿದೆ

01/12

ಆಡಳಿತದಲ್ಲಿ ಬಳಕೆಯಾದ ಉರ್ದುವಿನ ಮಾದರಿ ಪತ್ರ

(ಪಂಚನಾಮೆ, ಪಹಣಿ, ಕಚೇರಿ ಪತ್ರ)




TAHSIL OFFICE BIDAR
GOVT. OF MYSORE

-17-

Copy of Pahani Patrak

Village आलवाक

Sl. No.	Entry according Settlement Survey: Sy.No.poteHissa Name of the field patta or Inam	Extent: Total extent	Extent: uncultivable	Extent: Balance	Assessment according to Saitwar	Details of the sources per saitwar: Nature of the Saurce	Abi, Tabi, Dufasla or Bagath	Area under irrigation	Khata No.	Details of the land owned: Name of the occupant with fathers name & his residence	Nature of the occupancy	other claims and hypothecatiom	No of trees and Their varity	Details of Cultivation: year & season	Name of the actual Cultivator with father's name and his residence	Merits of the cultivation	Nature: Acres given on rent
1	2	3	4	5	6	7	8	9	10	11	12	13	14	15	16	17	18
50	29 खरब पट्टा	19-24	-	19-24	15-44	-	-	-	-	गुरपा वा. भीमणा	पट्टेदार	×	×	×	गुरपा वा. भीमणा	1	19-2[illegible]

950

ಕನ್ನಡ ಇಂಗ್ಲೀಷ್ ಮಿಶ್ರಣದ ಮಾದರಿ ಪತ್ರಗಳು

ನಮೂನೆ - 16 BY RPAD

CH - 2

ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ,
ಅಂಚೆ ಚೀಲ ಸಂ: 5313, ಬಹುಮಹಡಿ ಕಟ್ಟಡ,
2ನೇ ಹಂತ, 2ನೇ ಮಹಡಿ, ಬೆಂಗಳೂರು - 560 001
ಬೆಂಗಳೂರು ದಿನಾಂಕ : ../09/16...

ಸಂಖ್ಯೆ : Apl. 980/2015

The Forest Settlement officer,
Ramghad Block and the Deputy Commissioner
ಮಾನ್ಯರ, Bellary District. 583-102.

ವಿಷಯ :- Reminder for Record.

Forest Settlement officer
D.C. ⇒ ರವರ No. F-50/RMB-335/2013-14 ನೇ ಕ್ರಮಾಂಕದ ಆದೇಶದ ವಿರುದ್ಧ Syed Ahmed ರವರು ಸಲ್ಲಿಸಿದ ಅಪೀಲು : ಸಂಬಂಧಪಟ್ಟ ರಿಕಾರ್ಡುಗಳ ರವಾನೆಗೆ ಮರುವಿನಂತಿ.

ಪತ್ರ ಸೂಚನೆ 03/2/16 ನೇ ದಿನಾಂಕದ Apl - 980/2015 ಇದೇ ಕ್ರಮಾಂಕದ ಈ ಕಛೇರಿ ಪತ್ರ.

ಮೇಲ್ಕಂಡ ಪತ್ರಕ್ಕೆ ತಮ್ಮ ಗಮನಸೆಳೆದು, ತಮ್ಮ ಕಛೇರಿಯ ರಿಕಾರ್ಡುಗಳು ಇದುವರೆಗೆ ಇಲ್ಲಿಗೆ ಬಂದಿಲ್ಲವೆಂದು ಸೂಚಿಸಲಾಗುತ್ತಿದೆ. ಆದ್ದರಿಂದ ತಾವು ಈ ವಿಚಾರವನ್ನು ಸ್ವತಃ ಪರಿಶೀಲಿಸಿ As above ದಿನಾಂಕ As above ಕ್ರಮಾಂಕದ ರಿಕಾರ್ಡುಗಳು 28/9/16 ದಿನಾಂಕದೊಳಗಾಗಿ ಖಂಡಿತ ರವಾನೆಯಾಗುವಂತೆ ನೋಡಿಕೊಳ್ಳಬೇಕಾಗಿ ವಿನಂತಿಸುತ್ತೇನೆ.

(Sy No. 1, 2, 3 and 32 & 39,
Benakal House, Old Bazaar,)
Related documents

ತಮ್ಮ ವಿಶ್ವಾಸಿ,

(signature) 7.9
ಸಹಾಯಕ ನಿಬಂಧಕರು
ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ,
ಬೆಂಗಳೂರು.

ಪ್ರತಿಯನ್ನು .... ಉಪ ವಿಭಾಗಾಧಿಕಾರಿಯವರಿಗೆ, ತಮ್ಮ ರಿಕಾರ್ಡುಗಳ ರವಾನೆಯನ್ನು ತ್ವರಿಗೊಳಿಸುವ ಸಲುವಾಗಿ

ಪ್ರತಿಯನ್ನು .... ತಹಶೀಲದಾರರವರಿಗೆ ತಮ್ಮ ರಿಕಾರ್ಡುಗಳನ್ನು ನೇರವಾಗಿ ರವಾನಿಸುವ ಸಲುವಾಗಿ ಕಳುಹಿಸಿದೆ.

ದರ ಪ್ರತಿಯನ್ನು
The State Representative
KAT, Bangalore. 01.

ಸಹಾಯಕ ನಿಬಂಧಕರು,
ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ,
ಬೆಂಗಳೂರು.

ಮುದ್ರಕರು : ನಿರ್ದೇಶಕರು, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು-1

ಕರ್ನಾಟಕ ರಾಜ್ಯ ಪೊಲೀಸು

ನಮೂನೆ ಸಂ.159

ಆದೇಶ ಸಂ.1540 ಮತ್ತು 1556

ಮೂಲ ಪ್ರತಿ

ಫಿರ್ಯಾದಿಗೆ ಕೊಡುವ ನೋಟೀಸು

ಸಂಖ್ಯೆ : 09/2016

Surendra Swamy, Forest Quarters No. 18, Belgal Cross,, Cowl Bazar, Ballari, Karnataka ಇವರಿಗೆ, ಈ ಮೂಲಕ ತಿಳಿಯಪಡಿಸುವುದೇನೆಂದರೆ, Cr.No: 0071/2015, IPC 1860 U/s: 380,457 ಪ್ರಕರಣದ ಮೇರೆಗೆ ತಾವು ಸಲ್ಲಿಸಿದ ದೂರಿನ ಮೇಲೆ (1) Prl. Civil Judge(Jr.Dn) & JMFC Court ದರ್ಜೆ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದ್ದು (2) Prl. Civil Judge(Jr.Dn) & JMFC Court ನೇ ದರ್ಜೆ ಮ್ಯಾಜಿಸ್ಟ್ರೇಟರಿಗೆ ~~(i) ಸುಳ್ಳೆಂದು,~~ (ii) ತನಿಖೆ ನಡೆಸಲು ತಕ್ಕುದಲ್ಲವೆಂದು, ~~(iii) ಸಂಗತಿ ಅಥವಾ ಕಾನೂನಿನ ತಪ್ಪು ತಿಳುವಳಿಕೆಯೆಂದು,~~ ~~(iv) ಕ್ರಮ ಜರುಗಿಸತಕ್ಕುದಲ್ಲವೆಂದು~~ (ಇದರಡಿಯಲ್ಲಿ ತನಿಖೆ ನಡೆಸದೆ ವಜಾ ಮಾಡಿದ ಮೊಕದ್ದಮೆಗಳು ಬರುತ್ತವೆ) ಕಂಡು ಬಂದಿದ್ದು, ~~(v) ನಿಜ~~. ಈ ವರದಿಯನ್ನು ವಿರೋಧಿಸುವುದಿದ್ದಲ್ಲಿ, ತಾವು ಈ ನೋಟೀಸು ತಲುಪಿದ ಒಂದು ವಾರದೊಳಗಾಗಿ ಮೇಲೆ ನಮೂದಿಸಿದ ಮ್ಯಾಜಿಸ್ಟ್ರೇಟರ ಎದುರು ಆ ಬಗ್ಗೆ ವಿರೋಧಿಸಬಹುದಾಗಿ.

B-Report

ಸ್ಥಳ : Gandhinagar PS

ದಿನಾಂಕ : 11-06-2016

S. [signature]
ಪೊಲೀಸ್ ಸಬ್ ಇನ್ಸ್‌ಪೆಕ್ಟರ್,
ಅಪರಾಧ ವಿಭಾಗ,
ಗಾಂಧಿನಗರ ಪೊಲೀಸ್ ಠಾಣೆ,
ಬಳ್ಳಾರಿ.

Received on
16-06-2016
[signature]

ಕನ್ನಡ ಅಂಕಿಗಳ ಬದಲಿಗೆ ಇಂಗ್ಲೀಷ್ ಅಂಕಿಗಳ ಬಳಕೆಯ ಮಾದರಿ ಪತ್ರ

ಸಂಖ್ಯೆ:ಅಪ್ರಮುಅಸಂ(ಸಂಬ):ಎ1.ಕೆಎಫ್‌ಡಿಎಫ್.ವಿವ.10.2015–16

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ಸಂಶೋಧನೆ ಮತ್ತು ಬಳಕೆ ರವರ ಕಛೇರಿ,
ದೊರೆಸಾನಿಪಾಳ್ಯ ಅರಣ್ಯ ಆವರಣ, ಅರಕೆರೆ ಮೈಕೋ
ಬಡಾವಣೆ, ಬಿ.ಜಿ.ರಸ್ತೆ, ಬೆಂಗಳೂರು–560076.
ದಿನಾಂಕ:19.12.2015.

ಅಧಿಕೃತ ಜ್ಞಾಪನ ಪತ್ರ

ವಿಷಯ:– 2015–16 ನೇ ಸಾಲಿನ ಯೋಜನೇತರ ಲೆಕ್ಕ ಶೀರ್ಷಿಕೆ 2406-01-102-1 KFDF 03 Other plantation 139 Major works ಇದರಡಿ ಮುಂಗಡ ಕಾಮಗಾರಿಗಳಿಗಾಗಿ ಅನುದಾನ ಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ:– ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:PCCF(HOFF)CR.9.D1.BUD.2015-16 ದಿನಾಂಕ.05.12.2015.

1210 25/12/15

******

2016 ನೇ ಮಳೆಗಾಲದಲ್ಲಿ ನೆಡುತೋಪು ಬೆಳೆಸಲು ಅಗತ್ಯವಿರುವ ಮುಂಗಡ ಕೆಲಸಗಳನ್ನು ಕೈಗೊಂಡು ಅಲ್ಲಿ ನೆಡಲು ಅಗತ್ಯವಿರುವ ಸಸಿ ಬೆಳೆಸುವ ಕೆಲಸಗಳಿಗಾಗಿ 2015–16 ನೇ ಸಾಲಿನ ಯೋಜನೇತರ ಲೆಕ್ಕ ಶೀರ್ಷಿಕೆ 2406-01-102-1 KFDF 03 Other plantation 139 Major works ಇದರಡಿ ಸಂಶೋಧನೆ ಮತ್ತು ಬಳಕೆ ವ್ಯಾಪ್ತಿಗೆ ರೂ.90.200 ಲಕ್ಷ ಅನುದಾನವನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರು ಉಲ್ಲೇಖಿತ ಅಧಿಕೃತ ಜ್ಞಾಪನ ಪತ್ರದಲ್ಲಿ ಹಂಚಿಕೆ ಮಾಡಿರುತ್ತಾರೆ. ಸದರಿ ಅನುದಾನವನ್ನು ಕೆಳಕಂಡಂತೆ ಅಧೀನಾಧಿಕಾರಿಗಳಿಗೆ ಮರುಹಂಚಿಕೆ ಮಾಡಲಾಗಿದೆ.

Sl. No	Name of the Research circle	CSO (in Ha.)		STP/PT (in Ha.)		RET (in Ha)		Total (Rs. in Lakhs)
		Phy.	Fin.	Phy.	Fin.	Phy.	Fin.	
1	Bangalore	20.00	10.00	-	-			10.000
2	Dharwad	10.00	5.00	30.00	12.90	50.00	21.50	39.400
3	Madikeri	30.00	15.00	-	-	-	-	15.000
4	Bellary	-	-	60.00	25.80			25.800
	Total	60.00		90.00		50.00		90.200

ನಿಬಂಧನೆಗಳು:

1. **ಈಗ ಹಂಚಿಕೆ ಮಾಡಿರುವ ಅನುದಾನಕ್ಕೆ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ, ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ ನಿಯಮ 34 ರನ್ವಯ ಸಕ್ಷಮ ಪ್ರಾಧಿಕಾರಿಯಿಂದ ಅನುಮೋದನೆ ಪಡೆಯುವುದು.**
2. ಗಿಡ ನೆಡುವ ತಾಂತ್ರಿಕ ಮಾದರಿಗಳನುಸಾರ ಈಗ ಮೇಲಿನಂತೆ ನಿಗದಿಪಡಿಸಿರುವ ವಿವಿಧ ಮಾದರಿಯ ಮುಂಗಡ ಕೆಲಸಗಳನ್ನು ಮಾತ್ರವೇ ಕೈಗೊಳ್ಳುವುದು.
3. ಯಾವುದೇ ಕಾರಣಕ್ಕೂ ಮುಂಗಡ ಕಾಮಗಾರಿಗಳ ಪ್ರಮಾಣದಲ್ಲಿ ಕಡಿಮೆ ಮಾಡಬಾರದು ಹಾಗೂ ಅಲ್ಲಿ ನೆಡಲು ಅಗತ್ಯವಿರುವಷ್ಟು ಉತ್ತಮವಾದ ಮತ್ತು ಗುಣಮಟ್ಟದ ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳತಕ್ಕದ್ದು. ಮುಂಗಡ ಕೆಲಸ ನಿರ್ವಹಿಸುವ ಪ್ರತಿ ಪ್ರದೇಶವು ಕನಿಷ್ಠ 25–30 ಹೆ. ವಿಸ್ತೀರ್ಣವಿರುವ ಅರಣ್ಯ ಪ್ರದೇಶ/ಬ್ಲಾಕ್ ಆಗಿರಬೇಕು.
4. ಪ್ರಸಕ್ತ ಸಾಲಿಗೆ ಈ ಲೆಕ್ಕ ಶೀರ್ಷಿಕೆಯಡಿ ಇನ್ನು ಮುಂದೆ ಯಾವುದೆ ಹೆಚ್ಚುವರಿ ಅನುದಾನ ದೊರೆಯುವುದಿಲ್ಲ. ಈ ಅಂಶವನ್ನು ಗಮನದಲ್ಲಿಟ್ಟುಕೊಳ್ಳುವುದು. ಈ ಹಿನ್ನೆಲೆಯಲ್ಲಿ ಹೆಚ್ಚಿನ ಅನುದಾನ ದೊರೆಯಬಹುದೇಂಬ ನಿರೀಕ್ಷೆಯ ಮೇಲೆ ಅಧಿಕ/ಹೆಚ್ಚಿನ ಕಾಮಗಾರಿ ಕೈಗೊಳ್ಳಬಾರದು. ಈಗ ನಿಗದಿಪಡಿಸಿರುವಷ್ಟು ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದ ಮುಂಗಡ ಕೆಲಸ/ಸಸಿಗಳನ್ನು ಬೆಳೆಸಿದಲ್ಲಿ ಅದಕ್ಕೆ ಸಂಬಂಧಿಸಿದ ಅಧಿಕಾರಿಗಳೇ ಹೊಣೆಗಾರರು.

C:\Users\admin\Desktop\2015-16\KFDF allotment.doc

5. ನಿಗಧಿಪಡಿಸಿರುವ ಗುರಿಯ ಮಿತಿಯಲ್ಲಿ ಮುಂಗಡ ಕಾಮಗಾರಿಗಳನ್ನು ಕೈಗೊಳ್ಳುವ ವಿವರ [illegible] [illegible] ಪರಿಶೀಲನೆ ಮಾಡಿ ಸರ್ಟಿಫಿಕೇಟ್ [illegible] ಜೊತೆಗೆ [illegible] [illegible] ಮಾಹಿತಿಯನ್ನು ಮಾರ್ಪಿಕ [illegible] [illegible] ಕಡ್ಡಾಯವಾಗಿ ಸಲ್ಲಿಸುವುದು. (ಮುಂಗಡ ಕೆಲಸ ಕೈಗೊಳ್ಳಲು ಉದ್ದೇಶಿಸಿರುವ ಪ್ರದೇಶಗಳ [illegible] [illegible] [illegible] ಮಾಹಿತಿಯನ್ನು ಪುಸ್ತಕ ರೂಪದಲ್ಲಿ ತಯಾರಿಸಿ ಸಲ್ಲಿಸುವುದು)
6. ಮಾಸಿಕ ಪ್ರಗತಿ ವರದಿಯನ್ನು ಪ್ರತಿ ತಿಂಗಳ 10ನೇ ತಾರೀಖಿನೊಳಗೆ ತಪ್ಪದೆ ಈ ಕಛೇರಿಗೆ ಸಲ್ಲಿಸುವುದು.

19/12/15

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಸಂಶೋಧನೆ ಮತ್ತು ಬಳಕೆ
ಬೆಂಗಳೂರು

1. ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಂಶೋಧನೆ) ಬೆಂಗಳೂರು, ಧಾರವಾಡ, ಅರಣ್ಯ ಸಂರಕ್ಷಣಾಧಿಕಾರಿಗಳು (ಸಂಶೋಧನೆ) ಮಡಿಕೇರಿ ಮತ್ತು [illegible] ಇವರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. ಪ್ರತಿಯನ್ನು ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಪ್ರತಿಯನ್ನು ಈ ಕಛೇರಿಯ ಎ4 ಶಾಖೆಗೆ ಮಾಹಿತಿಗಾಗಿ ಕಳುಹಿಸಿದೆ.

C:\Users\admin\Desktop\2015-16\KFDF allotment.doc

ಕಚೇರಿ ಟಿಪ್ಪಣಿಯ ಪೂರ್ಣ ಮಾದರಿ ಪತ್ರ

— 17 —

48) ಕಂಡಿಕೆ (47) ರಂತೆ ಮಾನ್ಯ ಅಕ್ಷೇಪ/ಪ್ರಾಧಿಕಾರಗಳ ನಿರ್ದೇಶನದಂತೆ ಈ ಕಚೇರಿಯಿಂದ ನಡವಳಿಯನ್ನು ತಯಾರಿಸಿ ಅನುಮೋದನೆಗಾಗಿ ಕರಡು ಪ್ರತಿ ಮಂಡಿಸಿದೆ

[signature] 21/8/14

49) ~~ಅಪರ ಪ್ರಾಧಿಕಾರಗಳು~~

Form 47 ರ ಪ್ರಕಾರ RM Block ನ [illegible] [illegible] (ನಮೂನೆ [illegible]) ಪ್ರಸ್ತಾವನೆಯನ್ನು ಅನುಮೋದಿಸಬಹುದು

[illegible]

[signature] 26/8/14

50) ~~F50/OC~~

[signature] 28/8

51) ಕಂಡಿಕೆ (50) ರಲ್ಲಿನ ಅನುಮೋದನೆಯಂತೆ ಶ್ರೀ. ರಾಮಪ್ಪನ ಬ್ಯಾಂಕಿನ ಸಾಲ ಹಾಗೂ ದಂಡವನ್ನು ಕಟ್ಟಲು 3 ತಿಂಗಳು ಕಾಲಾವಕಾಶ ನೀಡಿ ಆದೇಶ ನೀಡಲಾಗಿತ್ತು. ಆದರೆ ಭೂ ದಾಖಲೆಗಳ ಉಪನಿರ್ದೇಶಕರು ದಿನಾಂಕ 26/11/2014 ರಂದು ಪತ್ರ ಬರೆದು ಈ ಕಚೇರಿಗೆ ದಿನಾಂಕ ನಿಗದಿಪಡಿಸಿದ ದಿನಾಂಕದೊಳಗಾಗಿ ಪ್ಲಾಟ್ ಕಾರ್ಯವು ಆಗದೇ ಇರುವ ಕಾರಣ ಇನ್ನು 3 ತಿಂಗಳು ಕಾಲಾವಕಾಶ ಕೊಡಲು ಸಾಧ್ಯವಾಗಿಲ್ಲ ಕಾರಣ ಇನ್ನು ಅದೇ ರೀತಿ ಕೇಳಿರುತ್ತಾರೆ ಕಾರಣ ಕಡತವನ್ನು ಆದೇಶಕ್ಕಾಗಿ ನಿರ್ದೇಶನಕ್ಕಾಗಿ ಮಂಡಿಸಿದೆ.

[signature] 26/11/2014.

52) ಮಾನ್ಯ ~~ಜಿಲ್ಲಾಧಿಕಾರಿಗಳು~~

ಕಂಡಿಕೆ 50 ರಂತೆ ಸಂಬಂಧಿಸಿದ ಕಡತಗಳ ಪರಿಶೀಲನೆ ಮಾಡಲು ಸಮಯವನ್ನು ನಿಗದಿಪಡಿಸಲು ಪತ್ರ ಬರೆಯಲಾಗಿತ್ತು.

ಈಗ DDLR ರವರು ಪತ್ರ ಬರೆದು ತಿಳಿಸಿದಂತೆ ಸಂಬಂಧಿಸಿದ 1105 ದಸ್ತಾವೇಜು ... ಕಾರ್ಯಕ್ರಮದಿಂದ 3 ದಿನಗಳ ಕಾಲಾವಕಾಶವನ್ನು ಹೆಚ್ಚಿಗೆ ನೀಡಲು ಮನವಿ ಮಾಡಿದ್ದಾರೆ. ಆದ್ದರಿಂದ ಸಂಬಂಧಿಸಿದ ಕಡತಗಳ ಕಾಲಾವಕಾಶ ನೀಡಲು ಆದೇಶಿಸಬಹುದು.

29/11

53) ~~FSO~~/DL

Agreed.
Inform them
& submit upto
fail.

30/11

CW/Shri]

54) ಕಂಡಿಕೆ (53) ರಲ್ಲಿನ ಮಾನ್ಯ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಶ್ರೀ DDLR ರವರಿಗೆ 3 ದಿನಗಳ ಕಾಲಾವಕಾಶ ನೀಡಿ ಬರೆಯಲಾದ ಕರಡು ಪ್ರತಿ ಮಾನ್ಯ ಅನುಮೋದನೆಗೆ ಸಲ್ಲಿಸಲಾಗಿದೆ

01/12

55) ~~ಸದರಿ ಪ್ರಕರಣವು~~

ಕಂಡಿಕೆ 54 ರಲ್ಲಿನ ಟಿಪ್ಪಣಿಯಂತೆ DDLR ರವರಿಗೆ ಸಲ್ಲಿಸಲಾಗಿದೆ ಪತ್ರ ಟಿಪ್ಪಣಿಸಲಾಗಿದೆ

4/12

55) ~~PSO/DC~~

ಸಂಬಂಧಪಟ್ಟವರಿಗೆ ರವಾನಿಸಿ

5/12

56) ಪಿ.ಸಿ

ಪ್ರಕರಣವು ಸಂಬಂಧಪಟ್ಟವರಿಗೆ ರವಾನಿಸಿ ಕಡತ [illegible]

5/12/14

57) ಸರ್ವೆ ಶಾಖೆಯಿಂದ ದಿನಾಂಕ:26/11/2014ರ ಪತ್ರದಲ್ಲಿ [illegible] [illegible] [illegible] ಅರ್ಜಿ ಪ್ರದೇಶಕ್ಕೆ ಸಂಬಂಧಿಸಿದಂತೆ [illegible] [illegible] [illegible] [illegible] [illegible] [illegible] ಅರ್ಜಿ ಧಾರರಿಗೆ [illegible] ನಕ್ಷೆಯನ್ನು [illegible] [illegible] [illegible] [illegible] [illegible] [illegible] [illegible] [illegible] [illegible]. [illegible]. [illegible] [illegible] [illegible] GTPS [illegible] [illegible] ಮಾಡಿ ನಕ್ಷೆ [illegible] [illegible] [illegible]. [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible].

[illegible]

(ಹಿಂದಿನಿಂದ - ಪುಟ-19)

ಭೂದಾಖಲೆಗಳ ಉಪನಿರ್ದೇಶಕರಿಗೆ ರಾಮನಗರ ಪ್ರದೇಶ-
-ವನ್ನು G.P.S ನಲ್ಲಿ ಸರ್ವೆ ಮಾಡಿ ಕೊಡಲು ನಕ್ಷೆಯೊಂದಿಗೆ
ವರದಿಯನ್ನು ಕಳುಹಿಸಲು ಪತ್ರ ಬರೆದಿದೆ. ಕರಡು
ಪ್ರತಿ ತಮ್ಮ ಅನುಮೋದನೆಗಾಗಿ ಸಲ್ಲಿಸಿದೆ

5/1/?

58) ಮಾನ್ಯ ~~ಜಿಲ್ಲಾಧಿಕಾರಿಗಳಿಗೆ~~)

(W)

59) ರಾಮನಗರ ಪ್ರದೇಶದ ಜಂಟಿ ಸರ್ವೆ ಕಾರ್ಯವು ಮುಕ್ತಾಯ-
-ಗೊಂಡು ಸರ್ವೆಯ ನಕ್ಷೆಯನ್ನು ಸಂಂದರ್

(1) ರಾಮನಗರದ ಗ್ರಾಮನಕ್ಷೆ - 2 ಪ್ರತಿ - (ಪ್ರದೇಶದ...)
(2) ರಾಮನಗರ ಬ್ಲಾಕ್‌ನ ಜಿಗ್ರಾನಕ್ಷೆ - 3 ಪ್ರತಿ ಯನ್ನು
ಕಡತದೊಂದಿಗೆ ಸಲ್ಲಿಸಿರುತ್ತಾರೆ ಕಾರಣ ಸದರಿ ನಕ್ಷೆಗಳನ್ನು K.F.A 1963
ಕಲಂ-17 ರಡಿ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದ್ದು ಕಾರಣ
ರಾಮನಗರ ಪ್ರದೇಶದ ಪ್ರಸ್ತಾವನೆ 17 ರಡಿ ಹೊರಡಿಸಲು
ಮುಂದಿನ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಕಾರಣ
ತಮ್ಮ ಸೂಕ್ತ ಮುಂದಿನ ನಿರ್ದೇಶನಕ್ಕಾಗಿ ಸಲ್ಲಿಸಿದೆ.

11/3/16.

60) ಮಾನ್ಯ ~~ಜಿಲ್ಲಾಧಿಕಾರಿಗಳು~~ F.S.O)

put up draft Sec. A notification
and discuss.

(W)

61) ಕಂಡಿಕೆ (60) ರಲ್ಲಿ ಅರಣ್ಯಕ್ಷೇತ್ರ ನಿರ್ವಾಹಣಾಧಿಕಾರಿಗಳು ನಿರ್ದೇಶಿಸಿದಂತೆ
ಕಲಂ-17ರ ಪ್ರಸ್ತಾವನೆಯ ಕರಡು ಅಧಿಸೂಚನೆ ತಮ್ಮ -
- ಅನುಮೋದನೆಗಾಗಿ ಮಂಡಿಸಿದೆ. 07/07/2016

net page

(୬୨) [illegible]

put up as corrected

[signature] 5/7

FSO

The [redacted] Settlement proceedings

Approved

[signature] 15/7

ಕರ್ನಾಟಕ ಆಡಳಿತದ ಜಿಲ್ಲೆಗಳ ಸಂಪೂರ್ಣ ನಕ್ಷೆ



ಪರಾಮರ್ಶನ ಗ್ರಂಥಗಳು

* ಕೃತಿಗಳು

* ಪ್ರಸ್ತುತ ಅಧ್ಯಯನಕ್ಕಾಗಿ ಪರಾಮರ್ಶಿಸಲಾದ ಪಿಎಚ್.ಡಿ ಮಹಾಪ್ರಬಂಧಗಳು

* ಎಂ.ಫಿಲ್.ಕಿರು ಪ್ರಬಂಧಗಳು

* ಲೇಖನಗಳು

* ಅಂತರ್ಜಾಲದ ಭಾಗಗಳು

* ವಿವಿಧ ಇಲಾಖೆಗಳ ಪಾರಿಭಾಷಿಕ ಪದಕೋಶಗಳು

* ಆಡಳಿತ ಪದಕೋಶಗಳು.

* ನಿಘಂಟುಗಳು

ಕೃತಿಗಳು

೧. ಅನಂತಮೂರ್ತಿ ಯು. ಆರ್., ೨೦೦೨, ***ಕನ್ನಡ ಕರ್ನಾಟಕ,*** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨. ಅನಂತರಾಮಯ್ಯ ಆರ್.ಎಲ್., ೧೯೮೯, ***ಮುದ್ದು ಕನ್ನಡ,*** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೩. ಅಬ್ದುಲ್ ಬಷೀರ್. ಜಿ., ೧೯೯೮, ***ಕಡ್ಡಾಯ ಕನ್ನಡ,*** ಜೈಗೌರಿ ಮುದ್ರಣಾಲಯ, ಬೆಂಗಳೂರು.

೪. ಅರವಿಂದ್ ಚೊಕ್ಕಾಡಿ, ೨೦೦೭, ***ಬದುಕಿಗಾಗಿ ಶಿಕ್ಷಣ,*** ಲೋಹಿಯಾ ಪ್ರಕಾಶನ, ಬಳ್ಳಾರಿ.

೫. ಅಶೋಕ ಕುಮಾರ ರಂಜೇರೆ, ೨೦೧೧, ***ಭಾಷೆ ಶಿಕ್ಷಣ ಮತ್ತು ಸಮಾಜ,*** ಪಲ್ಲವ ಪ್ರಕಾಶನ, ಚನ್ನಪಟ್ಟಣ.

೬. ಆದಿಶೇಷಮೂರ್ತಿ, ೨೦೧೧, ***ಕಚೇರಿ ಕೈಪಿಡಿ,*** ಸರ್ಕಾರಿ ಮಿತ್ರ ಪ್ರಕಾಶನ, ಬೆಂಗಳೂರು.

೭. ಆನಂದ್.ಜಿ, (ಸಂ) ೨೦೧೦, ***ಏನ್ ಗುರು ಕಾಫೀ ಆಯ್ತ!,*** ಬನವಾಸಿ ಬಳಗ, ಬೆಂಗಳೂರು.

೮. ***ಆಡಳಿತ ಕನ್ನಡ ಕಾರ್ಯಶಿಬಿರ ಕೈಪಿಡಿ,*** ೨೦೦೯, ದೂರ ಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಎಚ್ಚೆಸ್ಕೆ, ೨೦೧೦, ***ಆಡಳಿತ ಕನ್ನಡ,*** ಚೇತನ್ ಬುಕ್ ಹೌಸ್, ಮೈಸೂರು.

೧೦. ಎಚ್ಚೆಸ್ಕೆ, ೨೦೦೦, ***ಆಡಳಿತದಲ್ಲಿ ಕನ್ನಡ,*** ಚೇತನ್ ಬುಕ್ ಹೌಸ್, ಮೈಸೂರು.

೧೧. ಎಚ್ಚೆಸ್ಕೆ, ೨೦೧೦, ***ಕನ್ನಡದ ಬಳಕೆ,*** ಚೇತನ್ ಬುಕ್ ಹೌಸ್, ಮೈಸೂರು.

೧೨. ಎಚ್ಚೆಸ್ಕೆ, ೨೦೧೪, ***ಕಾನೂನು ಕನ್ನಡ,*** ಚೇತನ್ ಬುಕ್ ಹೌಸ್, ಮೈಸೂರು.

೧೩. ಎಚ್ಚೆಸ್ಕೆ, ೨೦೦೪, ***ಬಳಕೆಯ ಭಾಷೆ,*** ಚೇತನ್ ಬುಕ್ ಹೌಸ್, ಮೈಸೂರು.

೧೪. ಎಚ್ಚೆಸ್ಕೆ, ೧೯೮೭, ***ವ್ಯವಹಾರಿಕ ಕನ್ನಡ,*** ಗೀತಾ ಬುಕ್ ಹೌಸ್, ಮೈಸೂರು.

೧೫. ಎಚ್ಚೆಸ್ಕೆ, ೨೦೧೧, ***ವಾಣಿಜ್ಯ ಕನ್ನಡ,*** ಚೇತನ್ ಬುಕ್ ಹೌಸ್, ಮೈಸೂರು.

೧೬. ಕನ್ನಡ ಅಧ್ಯಯನ ಸಂಸ್ಥೆ. ೧೯೮೪, ***ಆಡಳಿತ ಭಾಷೆ ಕೆಲವು ವಿಚಾರಗಳು,*** ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೭. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ***ಕನ್ನಡ ಆಡಳಿತ ಭಾಷೆ –ಸಾಧನೆ, ಸಹಯೋಗ,*** ಬೆಂಗಳೂರು.

೧೮. ಕನ್ನಡ ಸಾಹಿತ್ಯ ಪರಿಷತ್ತು, ೨೦೦೬, *ಮಾತನಾಡುವ ಕನ್ನಡ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯. ಕರ್ನಾಟಕ ಸರ್ಕಾರ, ೧೯೭೮, *ಆಡಳಿತ ಭಾಷೆ*, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೨೦. ಕರ್ನಾಟಕ ಸರ್ಕಾರ, ೧೯೯೦, *ಮಾದರಿ ಕಚೇರಿ ಕೈಪಿಡಿ*, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೧. ಕೃಷ್ಣ ಪರಮೇಶ್ವರ ಭಟ್, ೧೯೯೫, *ಕನ್ನಡ ತೆಲುಗು ದ್ವಿಭಾಷಿಕತೆಯ ಅಧ್ಯಯನ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೨. ಕೃಷ್ಣಯ್ಯ ಎಂ.ಎಚ್., ೨೦೧೧, *ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ*, ಅಂಕಿತ ಪುಸ್ತಕ, ಬೆಂಗಳೂರು

೨೩. ಕೃಷ್ಣರಾವ್ ಕೆ.ಎಂ., ೧೯೬೮, *ಕನ್ನಡ ಭಾಷಾ ಸ್ವರೂಪ*, ಉಷಾ ಸಾಹಿತ್ಯಮಾಲೆ, ಮೈಸೂರು.

೨೪. ಕೆಂಪೇಗೌಡ. ಕೆ. *ಕನ್ನಡ ಭಾಷಾ ಸ್ವರೂಪ*, ೧೯೯೭. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೨೫. ಕೈಪಿಡಿ ರಚನಾ ಸಮಿತಿ, ೨೦೦೯, *ಆಡಳಿತ ಕನ್ನಡ ಕಾರ್ಯಶಿಬಿರ ಕೈಪಿಡಿ*, ದೂರ ಶಿಕ್ಷಣ ಕೇಂದ್ರ, ಹಂಪಿ

೨೬. ಕೋಟೂರು ಪಿ.ಬಿ., ೨೦೦೧, *ಕಂಪ್ಯೂಟರ್ ಎಲ್ಲರಿಗಾಗಿ*, ಸಪ್ನ ಬುಕ್ ಹೌಸ್, ಬೆಂಗಳೂರು

೨೭. ಗೋಕಾಕ. ವಿ.ಕೃ. (ಸಂ), ೧೯೯೫, *ಕನ್ನಡದ ಕಾಲು ಶತಮಾನ*, ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ.

೨೮. ಗೋಪಾಲಕೃಷ್ಣಯ್ಯ ಕೆ.ಎಲ್., ೨೦೦೩, *ಭಾಷೆಯ ಬೆಳಕು*, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೨೯. ಗೋವಿಂದರಾಜು ಸಿ.ಆರ್., ೧೯೯೯, *ಕನ್ನಡ ಚಳುವಳಿಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೦. ಗೋವಿಂದರಾಜು ಸಿ.ಆರ್., ೨೦೦೫, *ಕನ್ನಡಮ್ಮ*, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ

೩೧. ಗೋವಿಂದರಾಜು ಸಿ.ಆರ್., ೨೦೦೬, *ಗೋಕಾಕ ವರದಿ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೩೨. ಚಂದ್ರಪೂಜಾರಿ ಎಂ., ೨೦೦೯, *ಸಂಶೋಧನೆ ಏನು? ಏಕೆ? ಹೇಗೆ*, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೩೩. ಚಿದಾನಂದಮೂರ್ತಿ ಎಂ., ೧೯೯೮, *ಭಾಷಾವಿಜ್ಞಾನದ ಮೂಲ ತತ್ವಗಳು*, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.

೩೪. ಛಾಯಾಪತಿ ಟಿ.ಎಸ್., ೨೦೦೮, *ಆಡಳಿತ ಭಾಷೆ ಕನ್ನಡ*, ತಳುಕಿನ ವೆಂಕಟಸುಬ್ಬಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

೩೫. ಜಯತೀರ್ಥರಾಜಪುರೋಹಿತ (ಸಂ), ೧೯೭೮, *ಆಡಳಿತ ಭಾಷೆ ಸಮಸ್ಯೆಗಳ ವಿಶ್ಲೇಷಣೆ*, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೩೬. ಜವರೇಗೌಡ ದೇ. ೨೦೦೭, *ಕನ್ನಡ ಚಿಂತನೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೭. ಜವರೇಗೌಡ. ದೇ. ೨೦೦೬, *ಶಿಕ್ಷಣ ಮತ್ತು ಕನ್ನಡ*, ಪ್ರಸಾರಾಂಗ, ತೆಲುಗು ಪ್ರಕಾಶನ, ಮೈಸೂರು.

೩೮. ಜೋಶಿ. ಶಂ.ಭಾ., ೧೯೮೮, *ಕಣ್ಮರೆಯಾದ ಕನ್ನಡ*, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

೩೯. ತಿರುಮಲೇಶ್. ಕೆ.ವಿ., ೨೦೦೬, *ನಮ್ಮ ಕನ್ನಡ*, ಅಭಿನವ ಪ್ರಕಾಶನ, ಬೆಂಗಳೂರು.

೪೦. ಧಾರವಾಡಕರ. ರಾಯ. ೨೦೦೯, *ಕನ್ನಡ ಭಾಷಾ ಶಾಸ್ತ್ರ*, ಗೀತಾ ಬುಕ್ ಹೌಸ್, ಮೈಸೂರು.

೪೧. ದೇವರ ಕೊಂಡಾರೆಡ್ಡಿ, ೨೦೦೨, *ಲಿಪಿಯ ಹುಟ್ಟು ಮತ್ತು ಬೆಳವಣಿಗೆ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೪೨. ನರ್ಮದಾಂಬ, ೨೦೦೪, *ಕನ್ನಡ ಮತ್ತು ಕಂಪ್ಯೂಟರ್*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೩. ನರ್ಮದಾಂಬ, ೨೦೦೨, *ಕನ್ನಡದಲ್ಲಿ ಇ-ಕಲಿಕೆ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೪. ನರಸಿಂಹಮೂರ್ತಿ ಎ.ವಿ., ೧೯೯೯, *ಕನ್ನಡ ಲಿಪಿಯ ಉಗಮ ಮತ್ತು ವಿಕಾಸ*, ವಿವೇಕ ಹಂಸ ಪ್ರಕಾಶನ, ಬೆಂಗಳೂರು.

೪೫. ನಾರಾಯಣ ಮೊಳ್ಳೋಡ್, ೨೦೦೫, *ಕಂಪ್ಯೂಟರ್ ನಿಮಗೆಷ್ಟು ಗೊತ್ತು*, ಸುಮುಖಪ್ರಕಾಶನ, ಬೆಂಗಳೂರು.

೪೬. ನಾರಾಯಣ. ಕೆ.ವಿ., ೨೦೦೯, *ಕನ್ನಡ ಜಗತ್ತು ಅರ್ಧಶತಮಾನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೭. ನಾರಾಯಣ. ಕೆ.ವಿ., ೨೦೧೦, *ತೊಂಡುಮೇವು*, ಸಂಪುಟ- ೫,೬,೭,೮, ಬರಹ ಪಬ್ಲಿಕೇಶನ್. ಬೆಂಗಳೂರು

೪೮. ನಿರ್ಮಲ ಜಿ.ವಿ. ಮತ್ತು ಎಸ್. ಕ್ಷಮಾ, ೨೦೦೬. *ಕ್ರಾಂತಿಕಾರಿ ಗಣಕ ಯಂತ್ರ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,

೪೯. ಪಾಂಡುರಂಗಬಾಬು ಡಿ., ೨೦೦೬, *ನುಡಿ ನೋಟ*, ಆಕಾಶ ಪ್ರಕಾಶನ, ಹೊಸಪೇಟೆ.

೫೦. ಪಾಟೀಲ ಪುಟ್ಟಪ್ಪ, ೨೦೦೭, *ನಾಡು-ನುಡಿ*, ಪ್ರಸಾರಂಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೧. ಪುಟ್ಟಪ್ಪ ಕೆ.ವಿ, ೧೯೨೭, *ಕನ್ನಡ ಕೈಪಿಡಿ ಸಂಪುಟ-೧*, ಪ್ರಸಾರಾಂಗ, ಮಾನಸ ಗಂಗೋಂತ್ರಿ ಮೈಸೂರು.

೫೨. ಪೂಜಾರ.ಎಂ.ಎಸ್., *ಶುದ್ಧ ಬರಹ–ಸ್ಪಷ್ಟ ಓದು,* ಶಿಕ್ಷಣ ಸಂಗಾತಿ, ಅಣ್ಣಿಗೇರಿ.

೫೩. ಪ್ರಕಾಶ್‌ರಾವ್ ಪೈಯರ್, ೨೦೦೫, *ಕನ್ನಡ ನಾಡು ನುಡಿರಕ್ಷಣೆಯಾಕೆ? ಹೇಗೇ?,* ಧ್ವನಿ ಪ್ರತಿಷ್ಠಾನ, ಯು.ಎ.ಇ.

೫೪. ಪ್ರಧಾನ ಗುರುದತ್ತ, ೧೯೭೬, *ಆಡಳಿತ ಭಾಷೆ ಕೆಲವು ವಿಚಾರಗಳು,* ಡಿ.ವಿ.ಕೆ. ಪ್ರಕಾಶನ, ಮೈಸೂರು

೫೫. ಬಣಕಾರ. ಬಿ.ಜಿ., ೨೦೦೬, *ಕನ್ನಡ ಕರ್ನಾಟಕ ಚಿಂತನೆಗಳು,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫೬. ಬರಗೂರು ರಾಮಚಂದ್ರಪ್ಪ.ಟಿ., ೨೦೦೭, *ಕನ್ನಡ ಪ್ರಜ್ಞೆ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೭. ಮರುಳಯ್ಯ ಸಾ.ಸಿ. ಮತ್ತು ಇತರರು, ೨೦೧೧, *ಕನ್ನಡ ಭಾಷಾ ಪ್ರವೇಶ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೫೮. ಮರುಳಯ್ಯ ಸಾ.ಸಿ., ೧೯೯೨, *ಕನ್ನಡ ಭಾಷೆಯ ಚರಿತ್ರೆ,* ರಾಗಿಣಿ ಪ್ರಕಾಶನ, ಬೆಂಗಳೂರು.

೫೯. ಮರುಳಯ್ಯ ಸಾ.ಸಿ., ೨೦೦೭, *ಕನ್ನಡ ಭಾಷಾಲೋಕ ಮತ್ತು ಪೂರಕ ಸಾಹಿತ್ಯ,* ಸಪ್ನ ಬುಕ್ ಹೌಸ್, ಬೆಂಗಳೂರು.

೬೦. ಮಹದೇವ ಬಣಕಾರ, ೧೯೮೬, *ಆಂಗ್ಲರ ಆಡಳಿತದಲ್ಲಿ ಕನ್ನಡ,* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು,

೬೧. ಮಹದೇವಯ್ಯ. ಪಿ., ೨೦೦೯, *ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು,* ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ. ಹಂಪಿ.

೬೨. ಮಹದೇವಯ್ಯ. ಪಿ., ೨೦೧೦, *ಕನ್ನಡ ಓದಿ ಬರೆ,* ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೩. ಮಹದೇವಯ್ಯ. ಪಿ., ೨೦೧೪, *ಕನ್ನಡ ನುಡಿ ಬಳಕೆಯ ನೆಲೆಗಳು,* ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೪. ಮಾಧವರಾವ್ ಮುಧೋಳ್, *ಆಡಳಿತ ಭಾಷೆ ಕನ್ನಡ,* ಚೇತನ್ ಬುಕ್ ಹೌಸ್, ಮೈಸೂರು.

೬೫. ಮುಗಳಿ. ರಂ.ಶ್ರೀ., ೨೦೦೮, *ಕನ್ನಡ ಸಾಹಿತ್ಯ ಚರಿತ್ರೆ,* ಗೀತಾ ಬುಕ್ ಹೌಸ್, ಮೈಸೂರು

೬೬. ಮುರಿಗೆಪ್ಪ. ಎ. (ಪ್ರ.ಸಂ), ೨೦೦೯, *ಆಡಳಿತ ಕನ್ನಡ,* ದೂರ ಶಿಕ್ಷಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೬೭. ರಮಣ. ಬಿ.ವಿ. ೧೯೫೩, *ಕನ್ನಡ ನುಡಿ ಬೋಧನೆ,* ಸರ್ವೋದಯ ಪ್ರಕಾಶನ, ವಿರಾಜಪೇಟೆ, ಕೊಡಗು.

೬೮. ರಮೇಶ್ ಬೇವೂರ್, ೨೦೦೦, *ಆಡಳಿತ ಕನ್ನಡ,* ವಾಗ್ದೇವಿ ಬುಕ್ ಹೌಸ್, ಮೈಸೂರು,

೬೯. ರಂಗನಾಥ ಶರ್ಮ.ಎನ್., ೨೦೧೦, *ಹೊಸಗನ್ನಡ ವ್ಯಾಕರಣ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭೦. ರಾಜೇಶ್ವರಿ ಮಹೇಶ್ವರಯ್ಯ, ೧೯೯೭, *ಕನ್ನಡ ಭಾಷಾ ಸ್ವರೂಪ,* ಸಹಿತಾ ಪ್ರಕಾಶನ ಧಾರವಾಡ

೭೧. ರಾಜೇಶ್ವರಿ ಮಹೇಶ್ವರಯ್ಯ, ೧೯೯೪, *ಆಧುನಿಕ ವರ್ಣನಾತ್ಮಕ ಭಾಷಾ ವಿಜ್ಞಾನ,* ಸಮಾಜ ಪುಸ್ತಕಾಲಯ, ಧಾರವಾದ.

೭೨. ರಾಮಚಂದ್ರ ರಾವ್.ಬಿ., ೧೯೯೮, *ಕನ್ನಡ ಭಾಷೆಯ ಇತಿಹಾಸ,* ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.

೭೩. ಲಕ್ಷ್ಮಣರಾವ್.ಕೆ (ಸಂ), ೨೦೦೭, *ಕನ್ನಡ-ಇಂಗ್ಲೀಷ್ ಭಾಷೆ ಮತ್ತು ಮಾಧ್ಯಮ,* ಸೂರ್ಯ ಪ್ರಕಾಶನ ಭದ್ರಾವತಿ.

೭೪. ಲಿಂಗದೇವರು ಹಳೆಮನೆ, ೨೦೦೨, *ಕನ್ನಡ ಕಲಿ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೫. ವೀರಭದ್ರಯ್ಯ .ಸಿ.ಎಂ., ೨೦೦೮, *ಆಡಳಿತ ಕಛೇರಿ ಕನ್ನಡ ಕೈಪಿಡಿ,* ಕರಾವಳಿ ಪ್ರಕಾಶನ, ಮಂಗಳೂರು.

೭೬. ವೀರೇಶ ಬಡಿಗೇರ, ೨೦೦೦, *ಕನ್ನಡ ಹಸ್ತ ಪ್ರತಿಗಳು ಮತ್ತು ಸಾಪ್ಟ್‌ವೇರ್ ತಂತ್ರಜ್ಞಾನ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೭. ವೆಂಕಟಸುಬ್ಬಯ್ಯ ಜಿ., ೨೦೦೧, *ಇಗೋ ಕನ್ನಡ,* ನವಕರ್ನಾಟಕ ಪ್ರಕಾಶನ, ಬೆಂಗಳೂರು.

೭೮. ವೆಂಕಟಸುಬ್ಬಯ್ಯ ಜಿ., ೧೯೯೮, *ಎರವಲು ಪದಕೋಶ,* ನವಕರ್ನಾಟಕ ಪ್ರಕಾಶನ, ಬೆಂಗಳೂರು.

೭೯. ವೇದಮೂರ್ತಿ.ಕೆ.ಸಿ., ೨೦೧೧, *ಕಡತ ನಿರ್ವಹಣೆ ಕೈಪಿಡಿ,* ಸರ್ಕಾರಿ ಮಿತ್ರ ಪ್ರಕಾಶನ, ಬೆಂಗಳೂರು.

೮೦. ಶಂಕರಭಟ್.ಡಿ.ಎನ್., ೨೦೧೧, *ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಕರಣ,* ಭಾಷಾ ಪ್ರಕಾಶನ, ಅರಗ, ತಿರ್ಥಹಳ್ಳಿ.

೮೧. ಶಂಕರಭಟ್.ಡಿ.ಎನ್., ೨೦೧೦, *ಕನ್ನಡ ಪದಗಳ ಒಳರಚನೆ,* ಭಾಷಾ ಪ್ರಕಾಶನ, ಕೊಡಿಕಲ್ಲು, ಕೊಪ್ಪ.

೮೨. ಶಂಕರಭಟ್.ಡಿ.ಎನ್., ೨೦೦೯, *ಕನ್ನಡ ವ್ಯಾಕರಣ ಯಾಕೆ ಬೇಕು?,* ಭಾಷಾ ಪ್ರಕಾಶನ, ಹೆಗ್ಗೋಡು, ಸಾಗರ.

೮೩. ಶಂಕರಭಟ್.ಡಿ.ಎನ್., ೨೦೧೦, *ಕನ್ನಡ ಬರಹದ ಸೊಲ್ಲರಿಮೆ-೧,* ಭಾಷಾ ಪ್ರಕಾಶನ, ಹೆಗ್ಗೋಡು, ಸಾಗರ.

೮೪. ಶಂಕರಭಟ್.ಡಿ.ಎನ್., ೨೦೧೧, *ಕನ್ನಡ ಬರಹದ ಸೊಲ್ಲರಿಮೆ-೨,* ಭಾಷಾ ಪ್ರಕಾಶನ, ಬಿಲ್ಲೇಶ್ವರ, ಹುಂಚ.

೮೫. ಶಂಕರಭಟ್.ಡಿ.ಎನ್., ೨೦೦೯, *ಕನ್ನಡ ಬರಹವನ್ನು ಸರಿಪಡಿಸೋಣ,* ಭಾಷಾ ಪ್ರಕಾಶನ, ಹೆಗ್ಗೋಡು, ಸಾಗರ.

೮೬. ಶಂಕರಭಟ್.ಡಿ.ಎನ್., ೨೦೦೨, *ಭಾಷೆಯ ಬಗೆಗೆ ನೀವೇನು ಬಲ್ಲಿರಿ ?,* ಭಾಷಾ ಪ್ರಕಾಶನ, ಮೈಸೂರು.

೮೭. ಶಂಕರಭಟ್.ಡಿ.ಎನ್., ೧೯೯೦, *ಕನ್ನಡ ಶಬ್ದ ರಚನೆ,* ಕ್ರೈಸ್ಟ್ ಕಾಲೇಜ್, ಬೆಂಗಳೂರು.

೮೮. ಶಾಲಾ ಮಕ್ಕಳಿಗಾಗಿ ಕಂಪ್ಯೂಟರ್, ೨೦೦೦, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು.

೮೯. ಶಿವಕುಮಾರ್ ಎಮ್., ೨೦೦೬, *ಕಂಪ್ಯೂಟರ್ ಕಲಿಯಿರಿ,* ಪುಸ್ತಕ ಪ್ರಕಾಶನ, ಮೈಸೂರು.

೯೦. ಶಿವರಾಂ ಹೆಚ್., ೨೦೦೬, *ಏನ್ ಕಂಪ್ಯೂಟರ್,* ಶ್ರೀ ಶೇಷಶೈಲ ಪ್ರಕಾಶನ, ಶಿವಮೊಗ್ಗ.

೯೧. ಶ್ರೀಧರ್.ಎಸ್.ಎನ್., ೧೯೯೫, *ಇಂದಿನ ಕನ್ನಡ ರಚನೆ ಮತ್ತು ಬಳಕೆ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೯೨. ಶ್ರೀನಿವಾಸ ಮೂರ್ತಿ.ಕಾ.ವೆಂ., ೨೦೦೯, *ಹೊಸಗನ್ನಡ ಚಳುವಳಿ ಮತ್ತು ಚಿಂತನೆ,* ಸಪ್ನ ಬುಕ್ ಹೌಸ್, ಬೆಂಗಳೂರು.

೯೩. ಶೇಷಗಿರಿರಾವ್.ಎಲ್.ಎಸ್.,(ಸಂ) ೧೯೯೦, *ಕನ್ನಡ– ಕನ್ನಡಿಗ– ಕರ್ನಾಟಕ,* ಕನ್ನಡ ಶಕ್ತಿ ಕೇಂದ್ರ, ಬೆಂಗಳೂರು.

೯೪. ಶೇಷಗಿರಿರಾವ್.ಎಲ್.ಎಸ್.,(ಸಂ),೨೦೧೫, *ಕನ್ನಡ ತಾಯಿಗೆ ನುಡಿ ನಮನ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೫. ಸಂಗಮೇಶ ಸವದತ್ತಿ ಮಠ, ೨೦೧೦, *ಕನ್ನಡ ಭಾಷಾ ವ್ಯಾಸಾಂಗ,* ರೂಪ ರಶ್ಮಿ ಪ್ರಕಾಶನ, ಧಾರವಾಡ

೯೬. ಸಾಂಬಮೂರ್ತಿ, ೨೦೦೦, *ಭಾಷೆ ಮತ್ತು ಅಶಾಬ್ದಿಕ ಸಂವಹನ,* ಎಲ್.ವಿ.ಜಿ. ಪಬ್ಲಿಕೇಶನ್, ಬೆಂಗಳೂರು.

೯೭. ಸೀತಾರಾಮಯ್ಯ. ಎಮ್.ವಿ., *ಕನ್ನಡಮ್ಮನ ಕೋರಗು,* ರಾಘವ ಪ್ರಕಾಶನ, ಬೆಂಗಳೂರು

೯೮. ಸೋಮಶೇಖರ ಗೌಡ, ೧೯೮೧, *ಇಂದಿನ ಕನ್ನಡ ಭಾಷಾ ಬಳಕೆ,* ವೆಂಕಟಸುಬ್ಬಯ್ಯ ಪ್ರತಿಷ್ಠಾನ, ಮೈಸೂರು.

English

1. Block and tiger, 1942, **An outline of linguistic analysis**, Balfimare Linguistics Society, America.

2. Irach Jehangir sorabji taraporewala, 1962, **Elements of the Science of language**, Calcutta University, Calcutta.

3. Kittle.F, A Grammar of Kannada Language, 1903, **Kannada- English dictionary**, Madras University, Madras.

4. Lakshmi Narayana Bhatta N.S, 1975, **Reading in Kannada**, Bangalore University, Bangalore.

5. Lingadevaru Halemane, 1989, **Kannada A Self Instractional course**, Arpita publication, Mysore.

6. Mario Pie, 1966, **The Story of Language**, George allen and unwin limited, Londan.

7. Upadhyaya. U.P, 1972, **Conversational Kannada**, Bavathiya Sayithya Mandira, Dharwad.

ಪ್ರಸ್ತುತ ಅಧ್ಯಯನಕ್ಕಾಗಿ ಪರಾಮರ್ಶಿಸಲಾದ ಪಿಎಚ್.ಡಿ. ಮಹಾಪ್ರಬಂಧಗಳು

೧. ನಾಗರಾಜ ಚಿತ್ರಂಪಳ್ಳಿ, ೨೦೧೦, ***ಕನ್ನಡ ಕಲಿಕೆಯ ಸಮಸ್ಯೆಗಳು- ಒಂದು ಅಧ್ಯಯನ,*** ಮಾರ್ಗದರ್ಶಕರು ಡಾ ಡಿ.ಪಾಂಡುರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಮಂಜುನಾಥ ಜೋಗಿನ ಕಟ್ಟಿ, ೨೦೧೧-೧೨, ***ಮಸ್ಕಿ ಕನ್ನಡ: ಒಂದು ಭಾಷಿಕ ಅಧ್ಯಯನ,*** ಮಾರ್ಗದರ್ಶಕರು ಪಿ.ಮಹದೇವಯ್ಯ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಶಿವಪ್ರಕಾಶ ನಾಯಕ, ೨೦೧೨, ***ಆದೋನಿ ಕನ್ನಡ,*** ಮಾರ್ಗದರ್ಶಕರು ಪಿ. ಮಹದೇವಯ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಶ್ರೀನಿವಾಸ ಬೇಂದ್ರೇ, ಬೀದರ ಕನ್ನಡ: ಸಾಮಾಜಿಕ ಹಾಗೂ ಪ್ರಾದೇಶಿ ಪ್ರಭೇದಗಳು, ೨೦೦೨, ಮಾರ್ಗದರ್ಶಕರು ಡಾ.ಕೆ.ವಿ.ನಾರಾಯಣ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ರಂಗನಾಥ ಕೆ.ಆರ್., ೨೦೦೭, ***ಜನಭಾಷೆ ಮತ್ತು ಪ್ರಭುತ್ವದ ಭಾಷೆಗಳ ಸಂಘರ್ಷದ ನೆಲೆಗಳು ಒಂದು ಅಧ್ಯಯನ,*** ಮಾರ್ಗದರ್ಶಕರು ಕಿ.ರಂ. ನಾಗರಾಜ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ವೀರಾಕ್ಷಿ ಎಲ್. ವಿವೇಕಿ, ೨೦೧೦, ***ಕರ್ನಾಟಕದಲ್ಲಿ ಭಾಷಾ ಶಿಕ್ಷಣ ಮತ್ತು ಮಾಧ್ಯಮದ ವಾಗ್ವಾದಗಳು*** ಮಾರ್ಗದರ್ಶಕರು ಅಶೋಕ ಕುಮಾರ ರಂಜೇರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಸ್ತುತ ಅಧ್ಯಯನಕ್ಕಾಗಿ ಪರಾಮರ್ಶಿಸಲಾದ ಎಂ.ಫಿಲ್. ಕಿರುಪ್ರಬಂಧಗಳು

೧. ಓಂ ಪ್ರಕಾಶ ಬಿ, ೨೦೦೨, *ಬಳ್ಳಾರಿ ವ್ಯಾವಹಾರಿಕ ಕನ್ನಡ ಉಚ್ಚರಣೆ ಮತ್ತು ಧ್ವನಿ ನಿಯಮಗಳು,* ಕನ್ನಡ ವಿಶ್ವವಿದ್ಯಾಲಯ, ಹಂಪಿ,

೨. ತಿಪ್ಪಾನಾಯಕ ಎಸ್.ಪಿ., ೨೦೦೮, ಕನ್ನಡ ಸಂಧಿ ಸಮಸ್ಯೆಯ ಸ್ವರೂಪ, ಮಾ: ಪಿ.ಮಹದೇವಯ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೩. ನಾರಾಯಣ ಡಿ.ಎನ್., *ಇಂಗ್ಲೀಷ್ ಕನ್ನಡ ಸಂಬಂಧ ಕುರಿತ ಚಿಂತನೆಗಳು,* ಮಾ: ಡಾ. ಓ.ಎಲ್. ನಾಗಭೂಷಣ ಸ್ವಾಮಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಲೇಖನಗಳು

೧. ಕನ್ನಡ ಅಭಿವೃದ್ಧಿ ಪ್ರಾಧಿಕಾರ, **ದಾರಿ ದೀವಿಗೆ**, ೨೦೧೨, ಬೆಂಗಳೂರು.

೨. ಪ್ರಕಾಶ್ ರಾಮ್ ಪಯ್ಯರ್, (ಸಂ), ೨೦೦೫, ಕನ್ನಡ ನಾಡು ನುಡಿ ರಕ್ಷಣೆ ಯಾಕೆ ಮತ್ತು ಹೇಗೆ? ಮಂಜುನಾಥಸ್ವಾಮಿ ಪ., ಕರ್ನಾಟಕದಲ್ಲಿ ಕನ್ನಡ ಸ್ಥಿತಿಗತಿ, ಧ್ವನಿ ಪ್ರತಿಷ್ಠಾನ ಯು.ಎ.ಇ.,

೩. ಪ್ರಕಾಶ್ ರಾಮ್ ಪಯ್ಯರ್, (ಸಂ), ೨೦೦೫, ಕನ್ನಡ ನಾಡು ನುಡಿ ರಕ್ಷಣೆ ಯಾಕೆ ಮತ್ತು ಹೇಗೆ? ಶಂಕರಪ್ಪ ಎಸ್.ವಿ., **ಕನ್ನಡಿಗರು ಅಭಿಮಾನ ಶೂನ್ಯರೇ?**, ಧ್ವನಿ ಪ್ರತಿಷ್ಠಾನ, ಯು.ಎ.ಇ

೪. ಪ್ರಕಾಶ್ ರಾಮ್ ಪಯ್ಯರ್, (ಸಂ), ೨೦೦೫, ಕನ್ನಡ ನಾಡು ನುಡಿ ರಕ್ಷಣೆ ಯಾಕೆ ಮತ್ತು ಹೇಗೆ? ಶಾಸ್ತ್ರಿ, ಎ.ಪಿ.,**ವ್ಯವಹಾರದಲ್ಲಿ ಕನ್ನಡದ ಸ್ಥಿತಿ ಗತಿ**, ಧ್ವನಿ ಪ್ರತಿಷ್ಠಾನ, ಯು.ಎ.ಇ,

೫. ಸೋಮಶೇಖರ ಗೌಡ, ೧೯೮೦, ಆಡು ಮಾತಿನ ಕನ್ನಡ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬. ಹೇಮಲತಾ ಮಹಿಷಿ, ಕರ್ನಾಟಕದ ಭಾಷಾನೀತಿ, ಕನ್ನಡದ ಭಾಷಾಭಿವೃದ್ಧಿ–ಸಾಧನೆ ಮತ್ತು ಮುನ್ನೋಟ,

ಸಂಶೋಧನಾ ಲೇಖನಗಳು

೧. ಅಣ್ಣರಾಯ ಮಿರ್ಜಿ, ೧೯೯೭, *ಮಹಾರಾಷ್ಟ್ರ ಗಡಿನಾಡ ಕನ್ನಡ*, ಸುವರ್ಣ ಸಂಚಯ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು.

೨. *ಮೈಸೂರು ಕನ್ನಡ ಒಂದು ಭಾಷಾ ಪ್ರಭೇಧ*, ೧೯೭೬, ಪ್ರಬುದ್ಧ ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೩. ನರಸಿಂಹರಾವ್ ಮಾನ್ವಿ, ೧೯೬೫, *ರಾಯಚೂರು ಕನ್ನಡ*, ಪ್ರಬುದ್ಧ ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯ, ಮೈಸೂರು,.

ಪತ್ರಿಕೆಗಳಲ್ಲಿನ ಲೇಖನಗಳು

* ಅಧಿಕಾರಿಗಳಿಗೆ ಕನ್ನಡ ಕಲಿಕೆ ಕಡ್ಡಾಯ, ವಿಜಯ ಕರ್ನಾಟಕ, ೨೪.೦೧.೨೦೧೧
* ಅಧಿಕಾರಿಗಳು ಕಲಿಯದೆ ಕನ್ನಡ ಅಸಾಧ್ಯ, ಶ್ರೀ ನಾಥ.ಎಸ್.ವಿ. ವಿಜಯ ಕರ್ನಾಟಕ, ಕನ್ನಡ ಪರಿಶೆ, ೦೭.೦೨.೨೦೧೧
* ಆತಂಕ ತಂದ ಕಲಿಕಾ ಮಟ್ಟ, ಸುಭಾಷ್.ಎಸ್. ಪ್ರಜಾವಾಣಿ, ೧೪.೦೨.೨೦೧೧
* ಆಡಳಿತದಲ್ಲಿ ಕನ್ನಡ ಬಳಸಬೇಕು ನಿಜ, ಶ್ರೀನಾಥ್ ಎಸ್.ವಿ, ವಿಜಯ ಕರ್ನಾಟಕ, ೦೬.೦೨.೨೦೧೩
* ಇಂಗ್ಲೀಷ್ ಎಂಬ ಕನ್ನಡದ ಸಂಕೀರ್ಣತೆ, ಕೆ ಸತ್ಯನಾರಾಯಣ, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ೦೮.೦೧.೨೦೧೨
* ಇತಿಹಾಸ ಬರೆಯಿತು ಬೆಂಗಳೂರು ಸಮ್ಮೇಳನ, ಪದ್ಮರಾಜ್ ದಂಡಾವತಿ, ವಿಜಯ ಕರ್ನಾಟಕ, ೧೩.೧೧.೨೦೧೨
* ಐಟಿ ಜಗದಲ್ಲಿ ಕನ್ನಡ ಬಾವುಟ, ವಿಜಯವಾಣಿ, ೨೯.೧೧.೨೦೧೪
* ಕನ್ನಡದ್ದೇ ಕಂಪಿಗೆ ಒಲಿದ ಕಂದ, ದೀಪಿಕಾ ಸಾಗರ್, ವಿಜಯವಾಣಿ, ೨೨.೧೨.೨೦೧೩.
* ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಯಾವುದೇ ನಿರ್ಣಯ ಇಲ್ಲ, ವಿರೂಪಾಕ್ಷ ಹೊಕ್ರಾಣಿ, ವಿಜಯ ಕರ್ನಾಟಕ, ೨೪.೦೧.೨೦೧೧
* ಕನ್ನಡ ಸಾಹಿತ್ಯ ಸಮ್ಮೇಳನಗಳು ಒಂದಿಷ್ಟು ಆಶಯಗಳು, ಎನ್ ಸಂಗನಾಳ ಮಠ, ವಿಜಯಕರ್ನಾಟಕ, ೧೨.೦೧.೨೦೧೧
* ಕನ್ನಡತನವೆಲ್ಲ ಕೇವಲ ಬೊಗಳೆ, ಉಪ್ಪಂಗಳ ರಾಮಭಟ್ಟ, ವಿಜಯ ಕರ್ನಾಟಕ, ೨೩.೨.೨೦೦೧
* ಕನ್ನಡದ ತೇರಿಗೆ ಸಾವಿರಾರು ಕೈಗಳು, ವಿಜಯ ಕರ್ನಾಟಕ, ೦೫.೦೨.೨೦೧೧
* ಕನ್ನಡಕ್ಕೆ ಪಾಶ್ಚಾತ್ಯ ಸಂಸ್ಕೃತಿ ಮಾರಕ, ವಿಜಯ ಕರ್ನಾಟಕ ೦೭.೦೨.೨೦೧೧
* ಕನ್ನಡ ಸಂಘಟನೆಗಳ ಒಗ್ಗಟ್ಟಿಗೆ ಸಮ್ಮೇಳನ ನಾಂದಿಯಾಗಲಿ, ರಾ.ನಂ. ಚಂದ್ರಶೇಖರ, ವಿಜಯ ಕರ್ನಾಟಕ, ೨೬.೦೧.೨೦೧೧
* ಕನ್ನಡವೆನೆ ಕಿವಿ ನಿಮಿರುವುದು, ಬಿ.ಎಸ್. ಜಯಪ್ರಕಾಶ ನಾರಾಯಣ, ವಿಜಯ ಕರ್ನಾಟಕ, ೩೧.೦೧.೨೦೧೧
* ಕನ್ನಡ ಕೇಳಿದರೆ ಕಿವಿ ನಿಮಿರುವ ಎತ್ತು, ಎಂ.ಬಿ. ಚಿಂಚಣಿ, ವಿಜಯ ಕರ್ನಾಟಕ, ೨೬.೦೧.೨೦೧೧

* ಕನ್ನಡವೇ ಸತ್ಯ:ವ್ಯಾಪ್ತಿ ವಿಸ್ತರಿಸಲಿ, ಕೆ.ವಿ.ತಿರುಮಲೇಶ. ವಿಜಯ ವಿಹಾರ,೨೭.೧೦.೨೦೧೩
* ಕನ್ನಡ, ಕನ್ನಡ ಹಾ!, ನಟರಾಜ ಹುಳಿಯಾರ್, ವಿಜಯ ಕರ್ನಾಟಕ, ೨೭.೧೦.೨೦೧೩
* ಕನ್ನಡ ಕಾಳಜಿ ಪಕ್ಷಗಳ ಅಜೆಂಡಾವಾಗಲಿ, ವಿಜಯವಾಣಿ, ೦೧.೦೨.೨೦೧೫
* ಕನ್ನಡ ಭಾಷೆ ಕಡ್ಡಾಯಕ್ಕೆ ಗಡವು ; ಪ್ರಸ್ತುತ ಕನ್ನಡಕ್ಕಿರುವ ಆತಂಕಗಳೇನು? ಶಿವಾನಂದ ತಗಡೂರು, ವಿಜಯವಾಣಿ, ೦೧.೦೨.೨೦೧೫
* ಕನ್ನಡ ನಾಮಫಲಕಕ್ಕೆ ಕಂಟಕ, ವಿಜಯವಾಣಿ,೦೨.೦೪.೨೦೧೪
* ಕಂಪ್ಯೂಟರ್ ನಾಡಲ್ಲಿ ಕನ್ನಡದ ಭರ್ಜರಿ ಕೂಗು, ವಿಜಯ ಕರ್ನಾಟಕ. ೦೪.೦೨.೨೦೧೧
* ಗಡಿ ಜಿಲ್ಲೆಗಳಲ್ಲಿ ಕನ್ನಡ ಕಾಪಾಡಿ, ವಿಜಯ ಕರ್ನಾಟಕ, ಕನ್ನಡ ಪರಿಶೆ, ೦೭.೦೨.೨೦೧೧
* ಗಣಕ ಲೋಕಕ್ಕೆ ತೆರೆದುಕೊಳ್ಳಬೇಕಾಗಿರುವ ಕನ್ನಡ, ಕೆಎಸ್.ನವೀನ್, ವಿಜಯ ಕರ್ನಾಟಕ, ೧೨.೦೩.೨೦೧೧
* ನಾಡಿನ ಮಾನ ಉಳಿಸಿ, ಕನ್ನಡ ಬೆಳೆಸಿ, ಅರವಿಂದ ನಾವಡ, ವಿಜಯ ಕರ್ನಾಟಕ, ೦೫.೦೨.೨೦೧೧
* ಪರಿಣಾಮಕಾರಿ ಭಾಷಾ ಕಲಿಕೆ, ಎಲ್.ಆರ್. ಪ್ರೇಮಾ, ಪ್ರಜಾವಾಣಿ, ೨೦.೦೧.೧೪
* ಪ್ರಾದೇಶಿಕ ಭಾಷೆಗಳ ಉಳಿವಿಗೆ ಸಂಸತ್ತಿನಲ್ಲಿ ಮಸೂದೆ ಮಂಡನೆ, ವಿಜಯ ಕರ್ನಾಟಕ, ೦೫.೧೨.೨೦೧೪
* ಬೆಂಗಳೂರಿನಲ್ಲಿ ಕನ್ನಡಕ್ಕೇನು ಸ್ಥಾನ, ಎಲ್.ಎಸ್, ಶೇಷಗಿರಿ ರಾವ್, ವಿಜಯ ಕರ್ನಾಟಕ, ೧೫.೧೦.೨೦೧೦
* ಬೆಂಗಳೂರು ಕೇಂದ್ರಾಡಳಿತ ಪ್ರದೇಶವಾಗುವ ಅಪಾಯ; ಪರಭಾಷಿಗರಿಗೆ ಕನ್ನಡ ಕಲಿಸಲೇಬೇಕು, ವಿಜಯ ಕರ್ನಾಟಕ, ೦೬.೦೨.೨೦೧೧
* ಭಾಷೆ: ಕನ್ನಡಿ ಮತ್ತು ಬೆಲೆ, ಓ.ಎಲ್. ನಾಗಭೂಷಣ ಸ್ವಾಮಿ, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ೦೮.೦೩.೨೦೧೨
* ರಾಷ್ಟ್ರಭಾಷೆ ಒಂದು ಮಿಥ್ಯೆ..., ಕೆ.ಟಿ ಗಟಗಟಿ, ಪ್ರಜಾವಾಣಿ, ೨೬.೦೯.೨೦೧೪
* ಮಕ್ಕಳ ಕಲಿಕೆಯ ವಸ್ತು ಪಾಠಗಳು, ಕೆ.ಎಸ್.ಮಧುಸೂಧನ್, ಪ್ರಜಾವಣಿ, ಸಾಪ್ತಾಹಿಕ ಪುರವಣಿ,
* ಮಹಿಷಿ ವರದಿ ಬೇಕು, ಮರು ಚಿಂತನೆ, ರಾ.ನಂ ಚಂದ್ರಶೇಖರ, ವಿಜಯವಾಣಿ, ೨೭.೧೦.೨೦೧೩
* ವಿಶ್ವ ಕನ್ನಡ ಸಮ್ಮೇಳನ ಇಂದು ಜಿಜ್ಞಾಸೆ, ಕೆ.ಎಸ್. ನವೀನ್, ವಿಜಯ ಕರ್ನಾಟಕ,೦೯.೦೧.೨೦೧೨
* ವೈಜ್ಞಾನಿಕ ಕನ್ನಡ ಭಾಷೆಗೆ ಸಾವಿಲ್ಲ ಡಿ,ಹೆಚ್.ಶಂಕರ ಮೂರ್ತಿ. ವಿಜಯ ಕರ್ನಾಟಕ, ೦೫.೧೨.೨೦೧೪
* ಶುದ್ಧ ಕನ್ನಡ ಬಳಕೆ, ವಿಜಯ ಕರ್ನಾಟಕ, ೦೪.೦೨.೨೦೧೧
* ಸರ್ಕಾರಿ ಇಂಗ್ಲೀಷ್ ಬೇಡ, ಕನ್ನಡ ಪ್ರಭ, ೦೫.೦೬.೨೦೧೨
* ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿಲಿ ಕನ್ನಡವೇ ಆಡಳಿತ ಭಾಷೆ, ವಿಜಯವಾಣಿ, ೨೪.೦೬.೨೦೧೪.

ತ್ರೈಮಾಸಿಕ ಪತ್ರಿಕೆಗಳು

* ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಸೆಪ್ಟಂಬರ್, ೨೦೧೩
* ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಡಿಸೆಂಬರ್, ೨೦೧೩
* ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಜೂನ್, ೨೦೧೪
* ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಸೆಪ್ಟಂಬರ, ೨೦೧೪
* ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಜೂನ್, ೨೦೧೫
* ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಸೆಪ್ಟಂಬರ್, ೨೦೧೫
* ನಮ್ಮ ಕನ್ನಡ, (ಸಂ) ಕೆ.ವಿ.ನಾರಾಯಣ, ಕನ್ನಡ ವಿಶ್ವ ವಿದ್ಯಾಲಯ ಹಂಪಿ, ಸಂಚಿಕೆ–೩೪

ಪಾರಿಭಾಷಿಕ ಪದಕೋಶಗಳು.

೧. ಅಗ್ನಿಶಾಮಕ ಸೇವೆಗಳ ಇಲಾಖೆ. ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨. ಅಬಕಾರಿ ಇಲಾಖೆ, ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೩. ಅರಣ್ಯ ಇಲಾಖೆ. ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೪. ಆಡಳಿತ ಕನ್ನಡ ಪಾರಿಭಾಷಿಕ ಪದಕೋಶ, ಎನ್. ಪ್ರಕಾಶ್, ಗುರುಕುಲ ಪ್ರಕಾಶನ, ಬೆಂಗಳೂರು

೫. ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,

೬. ಬೆಂಗಳೂರು.

೭. ಉದ್ಯೋಗ ಮತ್ತು ತರಬೇತಿ ಇಲಾಖೆ ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೮. ಔಷಧ ನಿಯಂತ್ರಣ ಇಲಾಖೆ, ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೯. ಕಾರಾಗೃಹ ಇಲಾಖೆ. ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೦. ಕಾರ್ಮಿಕ ಇಲಾಖೆ. ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೧. ಕೃಷಿ ಮಾರಾಟ ಇಲಾಖೆ, ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೨. ಕೃಷಿ ಇಲಾಖೆ, ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೩. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ. ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೪. ಧಾರ್ಮಿಕ ಮತ್ತು ದತ್ತಿ ಇಲಾಖೆ, ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೫. ನೋಂದಣಿ ಮತ್ತು ಮುದ್ರಾಂಕಗಳ ಇಲಾಖೆ, ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೬. ಪೊಲೀಸ್ ಇಲಾಖೆ, ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೭. ಯುವಜನ ಮತ್ತು ಕ್ರಿಡಾ ಇಲಾಖೆ, ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೮. ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆ. ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೯. ಸಮಾಜ ಕಲ್ಯಾಣ ಇಲಾಖೆ, ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೦. ಸಾರ್ವಜನಿಕ ಶಿಕ್ಷಣ ಇಲಾಖೆ, ಪಾರಿಭಾಷಿಕ ಪದಕೋಶ, ೧೯೯೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಅಂತರ್ಜಾಲದ ಮಾಹಿತಿ

೧. ಆಚಾರ್ಯ, ದಿನಾಂಕ: ೨೪/೧೧/೨೦೧೧, ಕೈಕಟ್ಟಿ ಕುಳಿತರೆ ಕನ್ನಡ ಆಡಳಿತ ಭಾಷೆ ಆಗುವುದಿಲ್ಲ,

೨. ವಸಂತ ಶೆಟ್ಟಿ, ದಿನಾಂಕ :೧೯/೦೪/೨೦೧೧, **ಕನ್ನಡ ಆಡಳಿತ ಭಾಷೆಯಾಕಾಗಿಲ್ಲ ಗೊತ್ತೆ** !? ಕೆ.ವಿ.ನಾರಾಯಣಅವರು ಬರೆದ **ಕನ್ನಡ ಜಗತ್ತು ಅರ್ಧಶತಮಾನ**, ಎಂಬ ಕೃತಿಯ ಕೆಲವೊಂದು ಭಾಗದ ವಿವರಣೆ ಅಂತರ್ಜಾಲದ ನಿಲುಮೆಯ ಭಾಗ.

೩. ಅನುಬಂಧದಲ್ಲಿ ಬಳಸಲಾದ ನಕ್ಷೆಗಳು, ಸರ್ಕಾರಿ ಆದೇಶಗಳು

ಆಡಳಿತ ಪದಕೋಶಗಳು

೧. ಸಂಕ್ಷಿಪ್ತ ಆಡಳಿತ ಪದಕೋಶ– English to Kannada, ೨೦೧೦, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨. ಕನ್ನಡ ಪಡೆನುಡಿಗಳ ಕೋಶ, ಕೆ. ಗಣಪತಿ ಭಟ್ಟ (ಸಂ) ೧೯೯೮, ನಾಗಾರ್ಜುನ ಎಂಟರ್ ಪ್ರೈಸಸ್, ದಾವಣಗರೆ.

೩. ಕನ್ನಡದಲ್ಲಿ ಅನ್ಯ ಭಾಷಾ ಪದನಿಷ್ಪತ್ತಿ ಕೋಶ ಸಂಪುಟ– ೧, ೨, ೨೦೧೨, ಗಂಗಾನಾಯಕ್ ಕೆ.ಎಸ್ (ಸಂ) ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ನಿಘಂಟುಗಳು

೧. ಕನ್ನಡ ರತ್ನಕೋಶ, ೨೦೧೬, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨. ಕನ್ನಡ ಸಾಹಿತ್ಯ ಪರಿಷತ್ತು ,೨೦೧೪, 'ಸಂಕ್ಷಿಪ್ತ ಕನ್ನಡ ನಿಘಂಟು' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩. ಕೃಷ್ಣ, ಬಿ, ೨೦೧೫, ಕನ್ನಡ ಇಂಗ್ಲೀಷ್ ನಿಘಂಟು, ಸಂಪುಟ–೧, (ಅ–ಖ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪. ಕೃಷ್ಣ, ಬಿ, ೨೦೧೫, ಕನ್ನಡ ಇಂಗ್ಲೀಷ್ ನಿಘಂಟು, ಸಂಪುಟ–೨, (ಗ–ಪ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫. ಕೃಷ್ಣ, ಬಿ, ೨೦೧೫, ಕನ್ನಡ ಇಂಗ್ಲೀಷ್ ನಿಘಂಟು, ಸಂಪುಟ–೩, (ಫ–ಳ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬. ನಾರಾಯಣ ಕೆ.ವಿ., (ಸಂ) ೨೦೦೫, ಭಾಷೆ ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಭಾರದ್ವಜ ಡಿ.ಕೆ., ೨೦೦೫, ಇಂಗ್ಲೀಷ್–ಇಂಗ್ಲೀಷ್ ಕನ್ನಡ ನಿಘಂಟು, ಸಂಕೇಶ್ವರ ಪ್ರಿಂಟರ್ಸ್ ಪ್ರೈ.ಲಿ. ಗದಗ.

೮. ಶಂಕರಭಟ್.ಡಿ.ಎನ್., ೨೦೧೧, ಇಂಗ್ಲೀಷ್ ಪದಗಳಿಗೆ ಕನ್ನದ್ದೇ ಪದಗಳು, ಭಾಷಾ ಪ್ರಕಾಶನ, ಹುಂಚ.

ಪ್ರಶ್ನಾವಳಿಗಳು

ಮಾದರಿ:– ೧. ಅಧಿಕಾರಿಗಳಿಗೆ ಸಂಬಂಧಿಸಿದ ಪ್ರಶ್ನಾವಳಿ

ಮಾದರಿ:– ೨. ವಿಷಯ ನಿರ್ವಾಹಕರಿಗೆ ಸಂಬಂಧಿಸಿದ ಪ್ರಶ್ನಾವಳಿ

ಮಾದರಿ:– ೩. ರವಾನೆ ಗುಮಾಸ್ತರಿಗೆ ಸಂಬಂಧಪಟ್ಟ ಪ್ರಶ್ನಾವಳಿ

ಮಾದರಿ:– ೪. ಬೆರಳಚ್ಚು ಮತ್ತು ಗಣಕಯಂತ್ರ ನಿರ್ವಹಣಾ ಸಿಬ್ಬಂದಿ ವರ್ಗದವರಿಗೆ ಸಂಬಂಧಪಟ್ಟ ಪ್ರಶ್ನಾವಳಿ

ಮಾದರಿ:– ೫. ಆಡಳಿತ ಕನ್ನಡದ ತರಬೇತಿಗೆ ಸಂಬಂಧಿಸಿದ ಪ್ರಶ್ನಾವಳಿ

ಮಾದರಿ:– ೧.

ಅಧಿಕಾರಿಗಳಿಗೆ ಸಂಬಂಧಿಸಿದ ಪ್ರಶ್ನಾವಳಿ

ಹೆಸರು:– ವಯಸ್ಸು:–

ವಿದ್ಯಾಭ್ಯಾಸ: – ಉದ್ಯೋಗ:–

ಇಲಾಖೆ:– ಕಚೇರಿ:–

ಸೇವಾವಧಿ:– ಮಾತೃಭಾಷೆ:–

ಅಧ್ಯಯನದ ಮಾಧ್ಯಮ:–

೧. ಆಡಳಿತದಲ್ಲಿ ಕಡ್ಡಾಯ ಕನ್ನಡ ಬಳಕೆ ಮಾಡಬೇಕೆಂದು ಆದೇಶವಿದ್ದರೂ ಸಂಪೂರ್ಣವಾಗಿ ಕಚೇರಿಗಳಲ್ಲಿ ಕನ್ನಡದ ಬಳಕೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗಿಲ್ಲ ಇದಕ್ಕೆ ತಮ್ಮ ಅಭಿಪ್ರಾಯವೇನು.

ಉತ್ತರ:–

೨. ತಮ್ಮ ಕಚೇರಿಯಲ್ಲಿ ಬಳಕೆಯ ಕನ್ನಡದ ಸರಾಸರಿ ಎಷ್ಟು ? ಪ್ರತಿಶತ:

೧. ಕಡಿಮೆಗೆ ಕಾರಣವೇನಿರಬಹುದು ೨) ಹೆಚ್ಚಿಗೆ ಕಾರಣವೇನಿರಬಹುದು.

ಉತ್ತರ:–

೩. ಭಾಷಾನೀತಿ ತಮಗೆ ಸಹಕಾರಿಯಾಗಿದೆಯೇ?

ಉತ್ತರ:–

೪. ಅಖಿಲ ಭಾರತ ಸೇವೆಯ (I.A.S., I.F.S., I.P.S., Etc.) ಅಧಿಕಾರಿಗಳು ಕರ್ನಾಟಕದಲ್ಲಿ ಆಡಳಿತ ನಡೆಸುವಾಗ ಆಡಳಿತ ಕನ್ನಡದ ಬಳಕೆ ಮಾಡಲು ಸಾಧ್ಯವೇ?

ಪ್ರತಿಶತ: ೧) ಸಾದ್ಯಕ್ಕೆ ಕಾರಣ ೨) ಸಾಧ್ಯವಾಗದಿದ್ದಕ್ಕೆ ಕಾರಣ.

ಉತ್ತರ:–

೫. ತಮ್ಮ ಹಂತದಲ್ಲಿ ಇಂಗ್ಲೀಷ್‌ಗೆ ಹೆಚ್ಚು ಮೊರೆಹೋಗಲಾಗುತ್ತದೆ ಎನ್ನುವ ಅಭಿಪ್ರಾಯ ಆಡಳಿತ ವಲಯದಲ್ಲಿದೆ ಅದಕ್ಕೆ ತಮ್ಮ ಅಭಿಪ್ರಾಯವೇನು ? ೧) ಕಾರಣ ೨) ಏಕೆ. :–

ಉತ್ತರ:–

೬. ಸರ್ಕಾರವು ರೂಪಿಸಿರುವ ಭಾಷಾನೀತಿಯಲ್ಲಿ ನಿಮ್ಮ ಒಪ್ಪಿಗೆ ಕೆಳಗಿನವುಗಳಲ್ಲಿ ಯಾವುದಕ್ಕೆ.

ಉತ್ತರ:– ೧. ರೂಪಿತ ನೀತಿಗಳಲ್ಲಿ ತೊಂದರೆ ಇದೆ.

೨. ರೂಪಿತಗಳಿಲ್ಲದ ಅಥವಾ ಜಾರಿಗೆ ತರುವಲ್ಲಿತೊಂದರೆ ಇದೆ.

೩. ಅನ್ವಯಿಕೆಗಳಲ್ಲಿ ತೊಂದರೆ ಇದೆ.

೭. ಆಡಳಿತದಲ್ಲಿ ಕನ್ನಡ ಬಳಕೆಗೆ ಅಧಿಕಾರಿಗಳಲ್ಲಿ ಕೀಳರಿಮೆ ಇದೆ ಎನ್ನುತ್ತಾರೆ? ತಮ್ಮ ಅಭಿಪ್ರಾಯವೇನು.

ಉತ್ತರ;

೮. ಇಲಾಖೆ ಪಾರಿಭಾಷಿಕ ಪದ ಕೋಶ ತಮಗೆ ಸಹಕಾರಿಯಾಗಿದೆಯೇ?

ಉತ್ತರ;

೯. ಆಡಳಿತ ಪದಕೋಶದ ಬಳಕೆ ಮಾಡುವಿರಾ ?

ಉತ್ತರ;

೧೦. ಕಚೇರಿಯಲ್ಲಿ ತಾಂತ್ರಿಕ ಪದಗಳನ್ನು ಕನ್ನಡ ಭಾಷೆಯಲ್ಲಿ ಬಳಕೆ ಮಾಡುವರೆ?
ಉದಾ:- ಸರ್ವೆ, ಸೆಟ್ಲಮೆಂಟ್

ಉತ್ತರ: ಇಲ್ಲ / ಹೌದು

೧೧. ಅಖಿಲ ಭಾರತೀಯ ಸೇವೆಯ ಅಧಿಕಾರಿಗಳಾದ ತಾವುಗಳು ಆಡಳಿತ ಕನ್ನಡವನ್ನು ಜಾರಿಗೆ ತರುವಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳೇನಾದರೂ ಇವೆಯೇ ? ತಿಳಿಸಿ

ಉತ್ತರ;

೧೨. ಆಡಳಿತ ಕನ್ನಡ ತರಬೇತಿ ಶಿಬಿರಗಳಲ್ಲಿ ತಾವು ಭಾಗವಹಿಸಿ ತರಬೇತಿ ಪಡೆದಿರುವಿರೇ

ಉತ್ತರ:-

೧೩. ಇಂಗ್ಲೀಷ್ ಬಳಕೆಯನ್ನು ಮಾಡುವ ಸಂದರ್ಭ ಯಾವುದು?

ಉತ್ತರ : ೧. ಆಯವ್ಯಯ   ೨. ನ್ಯಾಯಾಲಯ   ೩. ಪತ್ರವ್ಯವಹಾರ

೧೪. ಕೆಳಹಂತದಲ್ಲಿ ಹೆಚ್ಚಾಗಿ ಬಳಕೆಯಾಗುವ ಕನ್ನಡ ತಮ್ಮ ಅಂದರೆ ಮೇಲಿನ ಹಂತಕ್ಕೆ ಬರುವಷ್ಟರಲ್ಲಿ ಕಡಿಮೆಯಾಗುತ್ತದೆ ಎನ್ನುತ್ತಾರೆ ಇದಕ್ಕೆ ತಮ್ಮ ಅಭಿಪ್ರಾಯವೇನು?

ಉತ್ತರ:

೧೫. ಒಟ್ಟಾರೆಯಾಗಿ ಆಡಳಿತದಲ್ಲಿ ಕನ್ನಡ ಬಳಕೆಯ ಬಗ್ಗೆ ನಿಮ್ಮ ಅಭಿಪ್ರಾಯ ವೇನು?

ಉತ್ತರ;

ಮಾದರಿ:-೨

ವಿಷಯ ನಿರ್ವಾಹಕರಿಗೆ ಸಂಬಂಧಿಸಿದ ಪ್ರಶ್ನಾವಳಿ

೧. ಹೆಸರು:

೧.೧. ವಯಸ್ಸು :

೧.೨. ವಿಳಾಸ:

೨. ವಿದ್ಯಾಭ್ಯಾಸ:

೩. ಕಾರ್ಯನಿರ್ವಹಿಸುತ್ತಿರುವ ಇಲಾಖೆ:

೩.೧ ಕಚೇರಿ:

೩.೨ ಪದನಾಮ:

೪. ಸೇವಾ ಅವಧಿ:

೫. ಮಾತೃಭಾಷೆ:

೬. ಶಾಲೆಯಲ್ಲಿ ಕಲಿತ ಮಾಧ್ಯಮ:

೭. ಶಾಲೆಯಲ್ಲಿ ಕಲಿತ ಭಾಷೆಗಳು:

೮. ಗ್ರಾಮಾಂತರ ಪ್ರದೇಶದಿಂದ ಬಂದವರೇ

೧. ಗ್ರಾಮ ೨. ತಾಲೂಕು: ೩. ಜಿಲ್ಲೆ:

೯. ನಗರ ಪ್ರದೇಶದಿಂದ ಬಂದವರೇ

೧. ನಗರ: ೨. ಜಿಲ್ಲೆ.

೧೦. ಕಾರ್ಯನಿರ್ವಹಿಸುತ್ತಿರುವ ಶಾಖೆ:

೧೧. ಮೇಲಾಧಿಕಾರಿಗಳ ಜೊತೆಯಲ್ಲಿ ಯಾವ ಭಾಷೆಯಲ್ಲಿ ಮಾತನಾಡುತ್ತೀರಿ?:

೧೨. ಕನ್ನಡ ಬಿಟ್ಟು ಬೇರೆ ಭಾಷೆಯ ಮಾತೃಭಾಷೆಯವರೇ? ಹಾಗಾದರೆ ಕನ್ನಡವನ್ನು ಯಾವಾಗಿನಿಂದ ಬಲ್ಲಿರಿ.

೧. ಓದಲು ೨. ಬರೆಯಲು ೩. ಮಾತನಾಡಲು.

೧೩. ಟಿಪ್ಪಣಿ ಮಂಡನೆಯನ್ನು ಮಾಡುವ ಭಾಷೆ:

ಉತ್ತರ:-

೧೪. ಅಧಿಕಾರಿಗಳು ಟಿಪ್ಪಣೆಯನ್ನು ತಮಗೆ ಮರಳಿ ಯಾವ ಭಾಷೆಯಲ್ಲಿ ಬರೆದು ಹಿಂದಿರುಗಿಸುತ್ತಾರೆ?

ಉತ್ತರ:-

೧೫. ಪತ್ರ ಬರಹದ ಸಂದರ್ಭದಲ್ಲಿ ಪಾರಿಭಾಷಿಕ ಪದಕೋಶ ತಮಗೆ ಉಪಯೋಗವೇ. ಅಥವಾ ಇಲ್ಲವೋ? ಉಪಯೋಗಿಸುವುದಾದರೆ ಯಾವ ಸಂದರ್ಭದಲ್ಲಿ ಉಪಯೋಗಿಸುತ್ತೀರಾ?

ಉತ್ತರ:-

೧೬. ಅಧಿಕಾರಿಗಳು ಇಂಗ್ಲೀಷಿನಲ್ಲಿ ಟಿಪ್ಪಣೆಗಳನ್ನು ರಚಿಸಲು ಸೂಚಿಸುತ್ತಾರೆಯೇ ಹೇಳಿದರೆ ತಮ್ಮ ಅಭಿಪ್ರಾಯವೇನು?

ಉತ್ತರ:–

೧೭. ತಮ್ಮ ಸಹೋದ್ಯೋಗಿಗಳೊಂದಿಗೆ ಯಾವ ಭಾಷೆಯಲ್ಲಿ ಮಾತನಾಡುತ್ತೀರಿ

ಉತ್ತರ:

೧೮. ಆಡಳಿತದಲ್ಲಿ ಕನ್ನಡ ಭಾಷೆ ಸಂಪೂರ್ಣವಾಗಿ ಬಳಕೆಯಾಗುತ್ತಿದೆಯೇ

ಉತ್ತರ:– ೧. ಆಗುತ್ತಿಲ್ಲ ೨. ಆಗುತ್ತಿದೆ.

೨.೧. ತಟಸ್ಥ ೨.೨. ಭಾಗಶಃ

೧೯. ತಮ್ಮ ಕಚೇರಿ ಕಡತ ನಿರ್ವಹಣೆಯಲ್ಲಿ ವಿಶೇಷವಾಗಿ ಗಮನಿಸದ ಕೆಲವು ಪಾರಿಭಾಷಿಕ ಪದಗಳನ್ನು ತಿಳಿಸಿ ಉದಾ:– ಕಾಂಟ್ರ್ಯಾಕ್ಟ್, Time bond

ಉತ್ತರ:–

೨೧. ಕೆಲವೊಂದು ವಾಕ್ಯಗಳನ್ನು ರಚಿಸುವ ಸಂದರ್ಭದಲ್ಲಿ ಕನ್ನಡದ ಪದಗಳು ಸಿಗದಿದ್ದ ಪಕ್ಷದಲ್ಲಿ ಯಾವ ಭಾಷೆಯ ಪದಗಳನ್ನು ಬಳಸುವಿರಿ.

ಉತ್ತರ: ೧. ಸಂವಾದಿ ಪದಬಳಕೆ

೨. ಅದೇಪದ ಬಳಕೆ

೩. ಪಾರಿಭಾಷಿಕ ಪದಕೋಶವನ್ನು ಬಳಸಿ ಪದ ಬರೆಯುತ್ತೀರೋ.

೪. ಇಂಗ್ಲೀಷ್

೨೨. ಬೇರೆ ಭಾಷೆಯಲ್ಲಿ ಬಂದ ಪತ್ರಗಳಿಗೆ ಉತ್ತರಗಳನ್ನು ಯಾವ ಭಾಷೆಯಲ್ಲಿ ನೀಡುತ್ತೀರಿ?

ಉತ್ತರ:– ೧. ಇಂಗ್ಲೀಷ್ ೨. ಕನ್ನಡ ೩. ಬಂದಭಾಷೆಯಲ್ಲಿಯೇ ಉತ್ತರ ನೀಡಿಕೆ

೨೩. ತಮಗೆ ಸಂಪೂರ್ಣವಾಗಿ ಆಡಳಿತದಲ್ಲಿ ಕನ್ನಡ ಬಳಕೆ ಸಾಧ್ಯವೇ?

ಉತ್ತರ:– ೧. ಸಾಧ್ಯ ೨. ಇಲ್ಲ ೩. ಪ್ರಯತ್ನ ಪಡಬಹುದು.

೨೪. ಆಡಳಿತದಲ್ಲಿ ಕನ್ನಡ ಅಥವಾ ಕನ್ನಡ ಬಳಕೆಗೆ ತಮಗೆ ತಿಳಿದಿರುವ ಸಮಸ್ಯೆಗಳೇನು ತಿಳಿಸಿ

ಉತ್ತರ:–

ಮಾದರಿ;–೩

ರವಾನೆ ಗುಮಾಸ್ತರಿಗೆ ಸಂಭಂಧಪಟ್ಟ ಪ್ರಶ್ನಾವಳಿ

ಹೆಸರು:– ವಯಸ್ಸು; ಲಿಂಗ: ಗಂ/ಹೆ

ವಿದ್ಯಾಭ್ಯಾಸ: ಸೇವಾವಧಿ; ಉದ್ಯೋಗ:

ಇಲಾಖೆ: ಕಚೇರಿ: ವಿಳಾಸ:

೧. ಕಚೇರಿಗೆ ಬಂದ ಪತ್ರಗಳನ್ನು ಹಂತ ಹಂತವಾಗಿ ಏನು ಮಾಡುವಿರಿ? (ಕ್ರಮವಾಗಿ ಆಯ್ಕೆ ಮಾಡಿರಿ.

ಉತ್ತರ; ೧, ಬಂದ ಪತ್ರಗಳ ನೋಂದಣಿ, .

೨. ವಿಷಯನಿರ್ವಾಹಕರಿಗೆ ಸಲ್ಲಿಕೆ,..

೩.ಕಚೇರಿ ಮುಖ್ಯಸ್ಥರಿಗೆ ಸಲ್ಲಿಕೆ,....

೪. ಅಧಿಕಾರಿಗಳಿಗೆ ಸಲ್ಲಿಕೆ .....

೫. ಅಧಿಕಾರಿಗಳ ಗಮನಕ್ಕೆ .....

೬. ವಿಷಯ ನಿರ್ವಾಹಕರಿಂದ ಸ್ವೀಕೃತಿ ಪಡೆಯುವಿಕೆ..

2 . PÀÃj UÉS Az À¥ ÀÀÀÀÃßAiÀÁª À¨ ÁµÉiÀ° è¹ ÃPÀ /D UÀ Ã£ Àª À (in-ward,register.ಯಲ್ಲಿ ದಾಖಲಿಸುವಿರಿ.

ಉತ್ತರ;– ೧. ಕನ್ನಡ ೨. ಬಂದ ಭಾಷೆಯಲ್ಲಿ ೩. ಹಿಂದಿ ೪. ಇಂಗ್ಲೀಷ್

೩. ತಮ್ಮ ೧. ಮಾತೃಭಾಷೆ, ಉತ್ತರ:___________

೨. ಆಡುಭಾಷೆ,– ಉತ್ತರ:___________

೪. ಪತ್ರಗಳನ್ನು ರವಾನಿಸುವ ಸಂದರ್ಭದಲ್ಲಿ ಕವರ್‌ಗಳ ಮೇಲೆ ಯಾವ ಭಾಷೆಯಲ್ಲಿ ವಿಳಾಸವನ್ನು ಬರೆಯುವಿರಿ.

ಉತ್ತರ;–೧. ಕನ್ನಡ ೨.ಇತರೆ ________ ೩. ಹಿಂದಿ ೪. ಇಂಗ್ಲೀಷ್

೫. ಪತ್ರಗಳನ್ನು ರವಾನಿಸುವಾಗ ರವಾನೆ /ನಿರ್ಗಮನ ವಹಿ (dispatch -register.ಯಲ್ಲಿ ಯಾವ ಭಾಷೆಯಲ್ಲಿ ವಿಳಾಸವನ್ನು ಬರೆಯುವಿರಿ.

ಉತ್ತರ;– ೧. ಕನ್ನಡ ೨. ಇತರೆ ________ ೩. ಹಿಂದಿ ೪. ಇಂಗ್ಲೀಷ್

೬. ಮಹಾಲೇಖಪಾಲರಿಂದ ಬಂದ ಮತ್ತು ರವಾನಿಸಲಾಗುವ ಪತ್ರಗಳನ್ನು ಯಾವ ಭಾಷೆಯಲ್ಲಿ ನಮೂದಿಸುವಿರಿ.

ಉತ್ತರ;–೧.ಕನ್ನಡ ೨.ಇತರೆ ________ ೩. ಹಿಂದಿ ೪. ಇಂಗ್ಲೀಷ್

೭. ಒಂದು ವೇಳೆ ಬೇರೆ ಭಾಷೆಯಲ್ಲಿ ದಾಖಲಿಸಿದಲ್ಲಿ ಕಾರಣ ತಿಳಿಸಿ.

೧. ಪತ್ರಗಳು ಇಂಗ್ಲೀಷ್‌ನಲ್ಲಿ ಅಥವಾ ಇತರೆ ಭಾಷೆಯಲ್ಲಿ ಬಂದಿದ್ದವು.

೨. ಇಂಗ್ಲೀಶ್‌ನಲ್ಲಿ ಆದರೆ ಬೇಗ ಬರೆಯಬಹುದು.

೩. ವಿಷಯ ನಿರ್ವಾಹಕರಿಗೆ ಅರ್ಥವಾಗುವ ರೀತಿಯಲ್ಲಿ ದಾಖಲಿಸುತ್ತೇವೆ.

೮. ರವಾನಿಸುವ ಪತ್ರಗಳ ಮೇಲೆ ಕಡ್ಡಾಯವಾಗಿ ಯಾವ ಮುದ್ರೆಗಳನ್ನು ಹಾಕುವಿರಿ.

ಕ್ರ.ಸಂ	ಕನ್ನಡ	ಇಂಗ್ಲೀಷ್
೦೧		
೦೨		

೧. ರವಾನಿಸುವ ಪತ್ರಗಳ ಕವರ್‌ಗಳ ಮೇಲೆ, ಅಂಚೆ ಇಲಾಖೆಗೆ ರವಾನಿಸುವ ಸಂದರ್ಭದಲ್ಲಿ ಬಳಸುವ ಭಾಷೆ.

ಉತ್ತರ;– ೧. ಕನ್ನಡ ೨.ಇತರೆ ________ ೩. ಹಿಂದಿ ೪. ಇಂಗ್ಲೀಷ್

೯. ರವಾನಿಸುವ ಪತ್ರಗಳ ಕವರ್‌ಗಳ ಮೇಲೆ, ನಿರ್ದಿಷ್ಟವಾಗಿ ರವಾನಿಸಲು ಬಳಸುವ ಸೂಚಿಗಳನ್ನು ತಿಳಿಸಿ. ಉದಾ;– ಸಾಮಾನ್ಯ, ರಿಜಿಸ್ಟರ್ ಪೋಸ್ಟ್

೧೦. ಕ್ರಮಾಂಕ ೧೦ ರಲ್ಲಿ ತಿಳಿಸಲಾದ ಕೆಲವೊಂದು ಪದಗಳಿಗೆ, ಕನ್ನಡ ಪದಗಳನ್ನು ಬಳಸಲು, ಉತ್ತರಕ್ಕೆ ಗೆರೆ ಎಳೆಯಿರಿ.

೧. ಸಾದ್ಯವಿಲ್ಲವೇ?

೨. ಆಗುತ್ತಿಲ್ಲವೇ?

೩. ಪರ್ಯಾಯ ಪದವಿಲ್ಲವೇ?

೪. ಪರ್ಯಾಯ ಪದವಿದ್ದರೂ ಬಳಸಲು ಸಾದ್ಯವಾಗುತ್ತಿಲ್ಲವೆ?

೫. ತರ್ಜುಮೆ ಮಾಡುವ ಗೋಜಿಗೆ ಹೊಗಿಲ್ಲವೇ?

ಅಥವಾ ತಮ್ಮ ಕಾರಣ ತಿಳಿಸಿ:–________________________________

೧೧. ಇಲಾಖೆಯ ವಿಳಾಸಗಳನ್ನು ಪತ್ರಗಳ ರವಾನಿಸುವ ಸಂದಂರ್ಭದಲ್ಲಿ,

೧. ವಿಷಯ ನಿರ್ವಾಹಕರು ತಿಳಿಸಿದಂತೆ ರವಾನಿಸುವರೋ,

೧.೧. ಹೌದು. ೧.೨. ಇಲ್ಲ

೨. ಇಂಗ್ಲೀಷ್‌ನಲ್ಲಿದ್ದರೆ ಕನ್ನಡಕ್ಕೆ ತರ್ಜುಮೆ ಮಾಡಿಕಳುಹಿಸುತ್ತೇವೆ.

೩. ಸರಳವಾಗುವಂತೆ ಇಂಗ್ಲೀಷ್ ಭಾಷೆಯಲ್ಲಿರುವುದನ್ನು ಕನ್ನಡದಲ್ಲೇ ಇಂಗ್ಲೀಷ್ ಭಾಷೆಯನ್ನು ಬರೆದು ಕಳುಹಿಸುತ್ತೇವೆ.

೧೨. ಇಲಾಖಾ ಪಾರಿಭಾಷಿಕ ಪದಕೋಶವನ್ನು ಬಳಸುವಿರಾ, ಯಾವ ಸಂದರ್ಭದಲ್ಲಿ ಬಳಸುವಿರಿ.

ಉತ್ತರ;–

೧೩. ತಮಗೆ ಸಂಪೂರ್ಣವಾಗಿ ಆಡಳಿತದಲ್ಲಿ ಕನ್ನಡ ಬಳಕೆ ಸಾಧ್ಯವೇ?

ಉತ್ತರ; ೧. ಸಾಧ್ಯ ೨. ಇಲ್ಲ ೩. ಪ್ರಯತ್ನ ಪಡಬಹುದು.

೧೫. ಆಡಳಿತದಲ್ಲಿ ಕನ್ನಡ ಪದಗಳು ಅಥವಾ ಕನ್ನಡ ಬಳಕೆಗ ತಮಗೆ ಇರುವ ಸಮಸ್ಯೆಗಳೇನು ತಿಳಿಸಿ

ಉತ್ತರ;– ೧.

೨.

೩.

೪

೫.

ಮಾದರಿ:– ೪

ಬೆರಳಚ್ಚು ಮತ್ತು ಗಣಕ ಯಂತ್ರ ನಿರ್ವಹಣಾ ಸಿಬ್ಬಂದಿ ವರ್ಗದವರಿಗೆ ಸಂಬಂಧಪಟ್ಟ ಪ್ರಶ್ನಾವಳಿ

ಹೆಸರು:	ವಯಸ್ಸು:–	ಲಿಂಗ:– ಗ/ಹೆ
ವಿದ್ಯಾಭ್ಯಾಸ:–	ಸೇವಾವಧಿ:–	ಉದ್ಯೋಗ:–
ಇಲಾಖೆ:–	ಕಚೇರಿ:–	ವಿಳಾಸ:–

೧. ಯಾವ ಭಾಷೆಯಲ್ಲಿ ತಾವು ಬೆರಳಚ್ಚು ಮಾಡಲು ಇಷ್ಟಪಡುತ್ತೀರಿ. ?

ಉತ್ತರ:– ೧. ಕನ್ನಡ ೨. ಇತರೆ ________ ೩. ಹಿಂದಿ ೪. ಇಂಗ್ಲೀಷ್

೨. ತಮಗೆ ಬೆರಳಚ್ಚಿಗೆ ಬಂದ ಪತ್ರಗಳನ್ನು ಓದಿ ಬೆರಳಚ್ಚು ಮಾಡುವಿರೋ, ಅಥವಾ ನೋಡುತ್ತಲೇ ಬೆರಳಚ್ಚು ಮಾಡುವಿರೋ.

ಉತ್ತರ:– ೧. ನೋಡಿ ೨. ಓದುತ್ತಲೇ ೩. ಮೊದಲು ಓದಿ ಆನಂತರ ಬೆರಳಚ್ಚು

೩. ಬೆರಳಚ್ಚಿಗೆ ಬಂದ ಪತ್ರದಲ್ಲಿ ಲೋಪದೋಷಗಳಿದ್ದರೆ ಏನು ಮಾಡುವಿರಿ?

ಉತ್ತರ:– ೧. ತಿದ್ದುವೆವು.

೨. ಹಾಗೆ ಬಿಡುವೆವು

೩. ವಿಷಯ ನಿರ್ವಾಹಕರಿಗೆ ತಿಳಿಸುವೆವು

೪. ಅವರು ಪತ್ರ ಬರೆದು ಕೊಟ್ಟಂತೆ ಹೇಗೆ ಇದೆಯೋ ಹಾಗೆ ಬೆರಳಚ್ಚು ಮಾಡುವೆವು.

೪. ದಿನವೊಂದಕ್ಕೆ ಅಂದಾಜು ಎಷ್ಟು ಕನ್ನಡ ಪತ್ರಗಳನ್ನು ಬೆರಳಚ್ಚುಮಾಡುವಿರಿ?

ಉತ್ತರ:– ೧. ಹತ್ತರ ಕೆಳಗೆ. ೨. ಹತ್ತರಿಂದ ಇಪ್ಪತ್ತು

೩. ಮೂವತ್ತರಿಂದ ನಲವತ್ತು. ೪. ನಿಖರತೆ ಇದ್ದಲ್ಲಿ ಸಂಖ್ಯೆ ತಿಳಿಸಿ________

೫. ದಿನವೊಂದಕ್ಕೆ ಎಷ್ಟು ಇಂಗ್ಲೀಷ್ ಪತ್ರಗಳನ್ನು ಬೆರಳಚ್ಚುಮಾಡುವಿರಿ?

ಉತ್ತರ:– ೧. ಹತ್ತರ ಕೆಳಗೆ. ೨. ಹತ್ತರಿಂದ ಇಪ್ಪತ್ತು

೩. ಮೂವತ್ತರಿಂದ ನಲವತ್ತು. ೪. ನಿಖರತೆ ಇದ್ದಲ್ಲಿ ಸಂಖ್ಯೆ ತಿಳಿಸಿ__________

೬. ಬೆರಳಚ್ಚು ಮಾಡಲು ಯಾವ ಭಾಷೆ ಸರಳವಾಗಿ ತಮಗೆ ಕಂಡುಬರುತ್ತದೆ.

ಉತ್ತರ:– ೧. ಕನ್ನಡ ೨. ಇಂಗ್ಲೀಷ್ ೩. ಹಿಂದಿ ೪. ಇತರೆ.

೭. ತಮಗೆ ಬೆರಳಚ್ಚಿಗೆ ಯಾವ ಭಾಷೆಯ ಪತ್ರಗಳು ಹೆಚ್ಚಿಗೆ ಬರುವವು?

ಉತ್ತರ:– ೧. ಕನ್ನಡ ೨. ಇಂಗ್ಲೀಷ್ ೩. ಹಿಂದಿ ೪. ಇತರೆ.

೮. ಯಾವ ಪತ್ರಗಳನ್ನು ಬೆರಳಚ್ಚು ಮಾಡಲು ಕಷ್ಟವಾಗುತ್ತದೆ.

ಉತ್ತರ:– ೧. ಬಜೆಟ್ ೨. ಹಣಕಾಸು ೩. ನ್ಯಾಯಾಂಗ ೪. ಅಂಕಿ–ಅಂಶಗಳಪಟ್ಟಿ.

೯. ತಮ್ಮ ಬೆರಳಚ್ಚಿನ ಸಂದರ್ಭದಲ್ಲಿ ಯಾವ ತಂತ್ರಾಂಶಗಳನ್ನು ಬಳಸುವಿರಿ.

ಉತ್ತರ:– ೧. ನುಡಿ ೨. ಬರಹ ೩. ಅಕ್ಷರ ೪. ಸಂದರ್ಭಕ್ಕೆ ತಕ್ಕಂತೆ.

೧೦. ಬೆರಳಚ್ಚು ಮಾಡುವ ಸಂದರ್ಭದಲ್ಲಿ ಕನ್ನಡ ಅಂಕಿಗಳನ್ನು.

ಉತ್ತರ:–೧. ಬಳಸುತ್ತೇವೆ. ೨. ಬಳಸುವುದಿಲ್ಲ ೩. ಬಳಸಲು ಆಗುವುದಿಲ್ಲ

೪. ಬಳಸಿದರೆ, ಬಳಕೆ ಸರಿಯಾಗಿ ಆಗುವುದಿಲ್ಲ, ಗೊಂದಲಕ್ಕೆ ಕಾರಣವಾಗುತ್ತದೆ.

೧೧. ಬೆರಳಚ್ಚಿಗೆ ಬರುವ ಪತ್ರಗಳ ಮೇಲೆ ತಮಗೆ ವಿಶೇಷ ಸೂಚನೆಗಾಗಿ ಏನನ್ನು ನಮೂದಿಸಿರುತ್ತಾರೆ.

ಉದಾ:– URGENT

ಉತ್ತರ:– ೧.____________ ೨. ____________

೩. ____________ ೪.______________

೧೨. ಬೆರಳಚ್ಚಿಗೆ ಬರುವ ಪತ್ರಗಳ ಮೇಲೆ ವಿಶೇಷ ಸೂಚನೆಗಳನ್ನು ಯಾವ ಭಾಷೆಯಲ್ಲಿ ನಮೂದಿಸಿರುತ್ತಾರೆ?

ಉತ್ತರ:– ೧. ಕನ್ನಡ ೨. ಇಂಗ್ಲೀಷ್ ೩. ಹಿಂದಿ ೪. ಇತರೆ.

೧೩. ಬೆರಳಚ್ಚಿಗೆ ಬರುವ ಪತ್ರಗಳ ಮೇಲೆ ತಾವು ವಿಶೇಷವಾಗಿ ಗಮನಿಸುವುದು ಯಾವ ವಿಷಯ?

ಉತ್ತರ:– ೧. ಪ್ರತಿಗಳೆಷ್ಟು ೨. ಪತ್ರ ಯಾವುದು ೩. ಪತ್ರ ಯಾವ ಭಾಷೆಯಲ್ಲಿದೆ

೪. ಪತ್ರ ಯಾವ ವಿಭಾಗಕ್ಕೆ ಸಂಬಂಧಪಟ್ಟಿದ್ದು

೧೪. ಅರೆಸರ್ಕಾರಿ ಪತ್ರದಲ್ಲಿ ತಲೆಬರಹ ಯಾವ ಭಾಷೆಯಲ್ಲಿ ರಚನೆಗೊಂಡು ತಮ್ಮಲ್ಲಿಗೆ ಬೆರಳಚ್ಚಿಗೆ ಬಂದಿರುತ್ತವೆ?

ಉತ್ತರ:– ೧. ಕನ್ನಡ ೨. ಇಂಗ್ಲೀಷ್ ೩. ಹಿಂದಿ ೪. ಇತರೆ.

೧೫. ಯಾವ ಪತ್ರಗಳು ಹೆಚ್ಚಿಗೆ ತಮ್ಮಲ್ಲಿಗೆ ಆಂಗ್ಲಭಾಷೆಯಲ್ಲಿ ಬೆರಳಚ್ಚು ಮಾಡಲು ಬರುತ್ತವೆ.

ಉತ್ತರ:– ೧. ಅರೆ ಸರ್ಕಾರಿ ೨. ಮೆಮೋ ೩. ನೋಟೀಸು

೪. ಸಾಮಾನ್ಯ ಪತ್ರಗಳು ೫. ಕಚೇರಿ ನಡಾವಳಿಗಳು ೬. ಸಭಾ ನಡಾವಳಿಗಳು

೭. ಇತರೆ ಇದ್ದಲ್ಲಿ ಸೂಚಿಸಿ____

೧೬. ಬೆರಳಚ್ಚು ತಂತ್ರಾಂಶ ತಮಗೆ ಸರಿ ಕಂಡಿದೆಯೇ ?

ಉತ್ತರ:– ೧. ಸರಿ ೨. ಇಲ್ಲ ೩. ಸುಧಾರಣೆ ಆಗಬೇಕು ೪. ಇರುವಂತೆ ಇರಲಿ

೧೭. ಬೆರಳಚ್ಚು ಮಾಡುವ ಸಂದರ್ಭದಲ್ಲಿ ತಮಗೆ ಯಾವುದು ಕಷ್ಟವೆನಿಸುತ್ತದೆ ? ಸೂಚಿಸಿ

ಉತ್ತರ:– ೧.______________ ೨.____________

೩. ____________________ ೪. ______________________________

೧೮. ಕನ್ನಡ ಬಳಕೆಗೆ, ಯಾವ ತಂತ್ರಾಂಶವನ್ನು ಬಳಸುತ್ತೀರಿ?

ಉತ್ತರ:–೧. ನುಡಿ ೨. ಬರಹ ೩. ಅಕ್ಷರ ೪.ಸಂದರ್ಭಕ್ಕೆ ತಕ್ಕಂತೆ

೧೯. ಬೆರಳಚ್ಚಿನ ಸಂದಂರ್ಭದಲ್ಲಿ ಕನ್ನಡ ಬಳಕೆ ಸಮಸ್ಯೆಯೇ ?

ಉತ್ತರ:– ೧. ಹೌದು ೨. ಇಲ್ಲ ೩. ಸಹಜ

೨೦. ಬೆರಳಚ್ಚಿನ ಸಂದರ್ಭದಲ್ಲಿ ಕನ್ನಡದ ಬಳಕೆ ಸಮಸ್ಯೆಯಾದಲ್ಲಿ, ಕೆಳಗಿನ ಯಾವ ಸಮಸ್ಯೆ ಇದೆ,

ಉತ್ತರ:– ೧. ಬೆರಳಚ್ಚಿನ ಸಮಸ್ಯೆ ೨. ಕೀಲಿಮಣಿ ವಿನ್ಯಾಸದಲ್ಲಿ ಸಮಸ್ಯೆ

೩. ತಂತ್ರಾಂಶದಲ್ಲಿ ಸಮಸ್ಯೆ ೪. ಒತ್ತಕ್ಷರ ಬರೆಯುವಲ್ಲಿ ಸಮಸ್ಯೆ

೫. ಬೇರೆ ಸಮಸ್ಯೆ ಇದ್ದಲ್ಲಿ ಇತರ ಇದ್ದಲ್ಲಿ ಸೂಚಿಸಿ______________

೨೧. ಬೆರಳಚ್ಚಿನ ಸಂದರ್ಭದಲ್ಲಿ ಕನ್ನಡ ಬಳಕೆಯಲ್ಲಿ ಅನುಮಾನಬಂದಲ್ಲಿ ಇಲಾಖಾ ಪಾರಿಭಾಷಿಕ ಪದಕೋಶವನ್ನು ಬಳಸುವಿರಾ?

ಉತ್ತರ:– ೧. ಹೌದು ೨. ಇಲ್ಲಾ

೨೨. ಪತ್ರಗಳ ರಚನಾ ಸಂದರ್ಭದಲ್ಲಿ ಪತ್ರಗಳ ರಚನಾ ಮಾದರಿಗಳ ಕಚೇರಿ ಕೈಪಿಡಿಗಳನ್ನು ಬಳಸುವಿರಾ?

ಉತ್ತರ:– ೧. ಹೌದು ೨. ಇಲ್ಲ

೩. ವಿಷಯ ನಿರ್ವಾಹಕರು ಸೂಚಿಸಿದಂತೆ ರಚನೆ

೪. ವಿಷಯ ನಿರ್ವಾಹಕರು ಸೂಚಿಸಿದಂತೆ ರಚನೆ.

೨೩. ಪತ್ರಗಳ ಬೆರಳಚ್ಚು ಮುಗಿದ ನಂತರ.

ಉತ್ತರ:–೧. ಕೇಸ್ ರಿಜಿಸ್ಟರಿನಲ್ಲಿ ದಾಖಲಿಸುತ್ತೇವೆ

೨. ಟಿಪ್ಪಣಿಗಳಲ್ಲಿ ದಾಖಲಿಸುತ್ತೇವೆ

೩. ವಿಷಯ ನಿರ್ವಾಹಕರಿಗೆ ಹಿಂತಿರುಗಿಸಿ ಸಹಿ ಪಡೆಯುತ್ತೇವೆ.

೪. ಕರಡು ಪ್ರತಿ ತಿದ್ದಲು ಕೊಟ್ಟು ಆನಂತರ ಅದನ್ನು ಸರಿಪಡಿಸಿ ವಿಷಯ ನಿರ್ವಾಹಕರಿಗೆ ಹಿಂತಿರುಗಿಸುತ್ತೇವೆ.

೨೪. ಬೆರಳಚ್ಚಿಗೆ ಬಂದ ಕಡೆತಗಳನ್ನು ತಮ್ಮ ವಿಷಯ ನಿರ್ವಹಕ ವಹಿಯಲ್ಲಿ ದಾಖಲಿಸುವಿರೇ?

ಉತ್ತರ:– ೧. ಹೌದು ೨. ಇಲ್ಲ ೩. ಅಗತ್ಯತೆ ಇಲ್ಲಾ

೨೫. ಬೆರಳಚ್ಚಿನ ತರಬೇತಿ ಪಡೆದಿರುವಿರಾ ?

ಉತ್ತರ:– ೧. ಪಡೆದಿದೆ. ೨. ಇಲ್ಲಾ ೩. ಪಡೆಯಬೇಕಿದೆ. ೪. ಅವಶ್ಯಕತೆ ಇಲ್ಲ

೨೬. ತಾವು ಪಡೆದ ತರಬೇತಿಯ ಸಂಕ್ಷಿಪ್ತ ಮಾಹಿತಿ

ಕ್ರಸಂ. ವಿಷಯ	ತರಬೇತಿ ಪಡೆದ	ತ.ಪ ದಿನಗಳು	ತರಬೇತಿ ಯಾವ ರೀತಿಯಲ್ಲಿ ಸಹಾಯಕಾರಿಯಾಗಿದೆ.

೨೭ ಶೀಘ್ರ ಲಿಪಿಗಾಗರು ತಮ್ಮಲ್ಲಿಗೆ ಹೆಚ್ಚಾಗಿ ಯಾವ ಭಾಷೆಯಲ್ಲಿ ಪತ್ರಗಳನನ್ನು ಬೆರಳಚ್ಚಿಗೆ ಕಳುಹಿಸುತ್ತಾರೆ.?

ಉತ್ತರ:– ೧. ಕನ್ನಡ ೨. ಇಂಗ್ಲೀಷ್

೩. ಹಿಂದಿ ೪. ನಮ್ಮ ಕಚೇರಿಯಲ್ಲಿ ಶೀಘ್ರ ಲಿಪಿಗಾಗರು ಇಲ್ಲ.

೨೮. ಅಧಿಕಾರಿಗಳು ಹೆಚ್ಚಾಗಿ ಬೆರಳಚ್ಚು ಮಾಡಿಸುವಲ್ಲಿ ಯಾವ ಭಾಷೆಯನ್ನು ಇಷ್ಟಪಡುತ್ತಾರೆ?

ಉತ್ತರ:– ೧. ಕನ್ನಡ ೨. ಇಂಗ್ಲೀಷ್ ೩. ಹಿಂದಿ

೨೯. ಬೆರಳಚ್ಚಿಗೆ ಬಂದ ಪತ್ರಗಳನ್ನು ಗಣಕ ಯಂತ್ರದ ಸ್ಮರಣ ಪಟಲದಲ್ಲಿ ಖಾಯಂ ಆಗಿ ಉಳಿಸಲು (save. ಯಾವ ಭಾಷೆಯ ಸಂಕೇತಗಳನ್ನು ಬಳಸುವಿರಿ.?

ಉತ್ತರ:– ೧. ಕನ್ನಡ ೨. ಇಂಗ್ಲೀಷ್ ೩. ಹಿಂದಿ ೪. ಅಂಕಿಗಳನ್ನು

೩೦. ಬೆರಳಚ್ಚಿಗೆ ಬಂದ ಪತ್ರಗಳನ್ನು ಗಣಕ ಯಂತ್ರದ ಸ್ಮರಣ ಪಟಲದಲ್ಲಿ ಖಾಯಂ ಆಗಿ ಉಳಿಸಲು (save. ಕನ್ನಡ ಸಂಕೇತ ಅಳವಡಿಸಲು.

ಉತ್ತರ:– ೧. ಸಾಧ್ಯವಿಲ್ಲ/ಆಗುವುದಿಲ್ಲ

೨. ಇನ್ನೂ ತಂತ್ರಾಂಶ ಅಭಿವೃದ್ಧಿಗೊಳ್ಳಬೇಕಿದೆ.

೩. ಇಂಗ್ಲೀಷಿನಲ್ಲಿದ್ದರೆ ಬೇಗ ದೊರೆಯುತ್ತದೆ.

೪. ಅದರ ಗೋಜಿಗೆ ಹೋಗಿಲ್ಲ.

೫. ಯಾವುದು ಸರಳ ಅದನ್ನೇ ಅನುಸರಿಸುತ್ತೇವೆ.

೩೧. ಕನ್ನಡ ಅಂಕಿಗಳನ್ನು ಬಳಸುತ್ತೀರಾ?

ಉತ್ತರ:–೧. ಹೌದು ೨. ಇಲ್ಲ

೩೨. ಕನ್ನಡ ಅಂಕಿಗಳನ್ನು ಬಳಸುವಲ್ಲಿ ಏನು ತೊಂದರೆಯನ್ನು ತಾವು ಕಾಣುವಿರಿ?

ಉತ್ತರ:–೧. ಬೇಗನೆ ಅರ್ಥವಾಗಲ್ಲ ೨. ಸರಾಗವಾಗಿ ಓದಲು ಸಾಧ್ಯವಿಲ್ಲ.

೩. ಅಧಿಕಾರಿಗಳು ಒಪ್ಪಲ್ಲ ೪. ಇಂಗ್ಲೀಷ್ ಅಂಕಿಗಳೇ ಹೆಚ್ಚು ಉಪಯುಕ್ತ

೩೩.ಆಡಳಿತದಲ್ಲಿ ಕನ್ನಡ ಬಳಕೆಗೆ ತಮ್ಮ ಅಭಿಪ್ರಾಯವೇನು ಅದದಕ್ಕೆ ಯಾವುವಾದರೂ ಸಮಸ್ಯೆಗಳಿವೆಯೇ?

ಉತ್ತರ:–೧

೨

೩

೪

* * * * *

ಮಾದರಿ:–೫

ಆಡಳಿತ ಕನ್ನಡದ ತರಬೇತಿ ಪ್ರಶ್ನಾವಳಿ

ಹೆಸರು:– ವಯಸ್ಸು:– ಲಿಂಗ:– ಗ/ಹೆ

ವಿದ್ಯಾಭ್ಯಾಸ:– ಸೇವಾವಧಿ:– ಉದ್ಯೋಗ:–

ಇಲಾಖೆ:– ಕಚೇರಿ:– ವಿಳಾಸ:–

೧. ಆಡಳಿಯ ನಿರ್ವಹಣೆಯ ಬಗ್ಗೆ ತರಬೇತಿ ಪಡೆದಿರುವಿರಾ? ಪಡೆದಿದ್ದರೆ

ಉತ್ತರ:– ೧. ಯಾವ ತರಬೇತಿ:– ೨. ಎಷ್ಟು ದಿನ:–

೨. ಆಡಳಿತದಲ್ಲಿ ಕನ್ನಡ ಬಳಕೆಯ ಬಗ್ಗೆ ತರಬೇತಿ ಪಡೆಯಲಾಗಿದೆಯೇ, ಪಡೆದಿದ್ದರೆ

ಉತ್ತರ:– ೧. ತರಬೇತಿಯಲ್ಲಿ ತಿಳಿಸಿದಂತೆ ಕನ್ನಡದ ಬಳಕೆ ಮಾಡುತ್ತುರುವಿರಾ

ಹೌದು:–

ಇಲ್ಲವಾದಲ್ಲಿ:– ೧. ಯಾಕೆ:– ೨. ಕಾರಣವೇನು:–

೩. ಜವಾನರು ಆಡಳಿತದಲ್ಲಿ ಬಳಸುವ ಕನ್ನಡದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ:–೧. ಬಳಕೆ ತಪ್ಪಾಗಿರುತ್ತದೆ.

೨. ವ್ಯಾಕರಣ ಹಾಗೂ ವಾಕ್ಯ ಸರಿಯಾಗಿ ಇರುವುದಿಲ್ಲ

೩. ಶುದ್ದ ಬರಹ ವಿರುವುದಿಲ್ಲ

೪. ಕನ್ನಡದ ಜ್ಞಾನ ವಿರುವುದಿಲ್ಲ (ವ್ಯಾಕರಣ ಭಾಷೆ..

೪. ವಿಷಯ ನಿರ್ವಾಹಕರು ಬಳಸುವ ಆಡಳಿತದಲ್ಲಿ ಕನ್ನಡದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ:–

೫. ಅಧಿಕಾರಿಗಳು ಬಳಸುವ ಆಡಳಿತದಲ್ಲಿ ಕನ್ನಡದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ:–

೬. ಅಖಿಲ ಭಾರತ ಸೇವೆಯ ಅಧಿಕಾರಿಗಳು ಆಡಳಿತದಲ್ಲಿ ಬಳಸುವ ಕನ್ನಡದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ:–

೭.. ಸಂಪೂರ್ಣವಾಗಿ ಆಡಳಿತದಲ್ಲಿ ಕನ್ನಡದ ಬಳಕೆ ಸಾಧ್ಯವೇ? ಹೌದು ಮತ್ತು ಇಲ್ಲ ಎನ್ನುವುದಕ್ಕೆ ತಮ್ಮ ಅಭಿಪ್ರಾಯ ತಿಳಿಸಿ.

ಉತ್ತರ:–

೮. ಆಡಳಿತ ಕನ್ನಡದ ತರಬೇತಿ ಅವಶ್ಯಕವೇ?

ಉತ್ತರ:–

೯. ಆಡಳಿತ ಕನ್ನಡದ ತರಬೇತಿ ಎಲ್ಲರಿಗೂ ಬೇಕೆ?

ಉತ್ತರ:–

೧೦. ಆಡಳಿತ ಕನ್ನಡದ ತರಬೇತಿ ಆಯೋಜನೆಗೆ ತಮ್ಮ ಅಭಿಪ್ರಾಯವೇನು?



ಕನ್ನಡ ಭಾಷಾಧ್ಯಯನ ವಿಭಾಗ